ಸಮುದ್ರ ಜಾನಪದ

ಸಂಶೋಧಕರು

ಡಾ. ಸೈಯದ್ ಜಮೀರುಲ್ಲಾ ಷರೀಫ್

ಧನ ಸಹಾಯ :

ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸಮುದ್ರ ಜಾನಪದ

ಸಂಶೋಧಕರು

ಡಾ. ಸೈಯದ್ ಜಮೀರುಲ್ಲಾ ಷರೀಫ್

ಧನ ಸಹಾಯ :

ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸಮುದ್ರ ಜಾನಪದ

ಪರಿವಿಡಿ

3 : 2 ಆರ್ಥಿಕ :

(ಅ) ವ್ಯಾಪಾರ - ವಿಧ-ವಿಧಾನಗಳು

(ಆ) ಜಲಚರ ಪ್ರಾಣಿಗಳ ರಕ್ಷಣಾ ವಿಧಾನ

3 : 3 ಧಾರ್ಮಿಕ :

(ಅ) ಹಬ್ಬಗಳು

(ಆ) ಸಮುದ್ರ ಸಂಬಂಧಿ ದೇವತೆಗಳು

(ಇ) ಸಮುದ್ರ ಸಂಬಂಧಿ ದೆವ್ವ-ಭೂತಗಳು

(ಈ) ಮಾಟ-ಮಂತ್ರ-ಭವಿಷ್ಯ

4. <u>ನಂಬಿಕೆ ಮತ್ತು ಆಚರಣೆಗಳು :</u>

5. <u>ಸಮುದ್ರ ಕ್ರೀಡೆಗಳು :</u>

6. <u>ಕಲೆ :</u>

7. <u>ಸಮಾರೋಪ :</u>

ಅನುಬಂಧ

(ಅ) ಆಧಾರ ಗ್ರಂಥಗಳು

ನನ್ನುಡಿ

ತುಮಕೂರು ಜಿಲ್ಲೆಯ ಕೊರಟಗೆರೆ ತಾಲ್ಲೂಕಿನ ಬೆಟ್ಟ-ಗುಡ್ಡಗಳ ಬಂಡೆಯ ಪರಿಸರದಲ್ಲಿ ಬೆಳೆದ ನನಗೆ ಕರಾವಳಿಯ ಪ್ರಕೃತಿ ಸೌಂದರ್ಯ ಕಂಡಾಗ ಪುರಾಣಗಳು ಪರಿಚಯಿಸುವ ಸ್ವರ್ಗವು ಭೂಲೋಕಕ್ಕಿಳಿದ ಅನುಭವವಾಯಿತು. ಇಲ್ಲಿನ ಕಡಲ ತೀರದ ಸಂಜೆಯು ಚೈತನ್ಯಶೀಲವಾದ ಸುಂದರ ದೃಶ್ಯಗಳನ್ನು ಸೃಷ್ಟಿಸುತ್ತಾ ಪ್ರಕೃತಿ ಪ್ರೇಮಿಗಳನ್ನು ಆಕರ್ಷಿಸುವಂತಹದು. ಸೂರ್ಯಾಸ್ತದ ವರ್ಣಮಯ ದೃಶ್ಯವು ವೀಕ್ಷಕರನ್ನು ಒಂದೆಡೆ ಸೆಳೆದರೆ ಹಗಲಿಡೀ ಬಿಸಿಲಲ್ಲಿ ಬೆಂದು, ಮಳೆಯಲ್ಲಿ ನೆಂದು, ನೀರಿನ ಮೇಲೆ ತೇಲುತ್ತಾ ಬೇಟೆಯಾಡಿ ಸಂಪಾದಿಸಿದ ಸಮುದ್ರ ಸಂಪತ್ತನ್ನು ಹೊತ್ತು ಕುಣಿಯುತ್ತಾ ಬರುವ ದೋಣಿಗಳು ಮತ್ತೊಂದೆಡೆ ಸೆರೆ ಹಿಡಿಯುತ್ತವೆ. ಈ ದೃಶ್ಯಗಳ ನಡುವೆ ಮೀನುಗಾರರ ದುಡಿಮೆ, ಬದುಕು, ವ್ಯಾಪಾರ, ಸಂಗೀತ, ಸಾಹಿತ್ಯ ಮೊದಲಾದವುಗಳಲ್ಲಿ ವಿಶೇಷತೆ ಎದ್ದು ಕಾಣುತ್ತಿತ್ತು. ಹೀಗಿದ್ದರೂ ಇವರ ಬದುಕು ಸಾಹಿತ್ಯದ ಬಗ್ಗೆ ವಿದ್ವಾಂಸರು ಆಸಕ್ತಿ ತೋರದೆ ಇದ್ದುದು ಆಶ್ಚರ್ಯವೆನಿಸುತ್ತದೆ. ಕಡಲಿಗರ ಬದುಕು ಹಾಗೂ ಸಾಹಿತ್ಯದ ಅಧ್ಯಯನ ನಡೆಸಬೇಕೆಂದು ನಾನು ಯೋಚಿಸುತ್ತಿರುವ ಸಂದರ್ಭಕ್ಕೆ ಸರಿಯಾಗಿ ಕನ್ನಡ ವಿಶ್ವವಿದ್ಯಾಲಯದಿಂದ ಬಾಹ್ಯ ಸಂಶೋಧನಾ ಯೋಜನೆಯಿಂದ, ತಮಗಿಷ್ಟವಾದ ವಿಷಯವನ್ನು ಆಯ್ಕೆ ಮಾಡಿಕೊಂಡು ಸಂಶೋಧನೆ ಮಾಡುವ ಬಗ್ಗೆ ಕರೆನೀಡಲಾಯಿತು. ಅದರಂತೆ ನಾನು ಸಮುದ್ರ ಜಾನಪದ ವಿಷಯದ ಪರಿವಿಡಿ ಮತ್ತು ಅದರ ಸಂಕ್ಷಿಪ್ತ ವಿವರವನ್ನು ವಿಶ್ವವಿದ್ಯಾಲಯದ ಅಧ್ಯಯನಾಂಗ ನಿರ್ದೇಶಕರಿಗೆ ಕಳುಹಿಸಿದೆ. ವಿದ್ವಾಂಸರ ಪರಿಶೀಲನೆಯ ನಂತರ ನನ್ನ ವಿಷಯ ಆಯ್ಕೆಯಾಗಿರುವ ಬಗ್ಗೆ ಪತ್ರ ಬಂದಿತು. ತಕ್ಷಣ ನಾನು ವಿಶ್ವವಿದ್ಯಾಲಯಕ್ಕೆ ಹೋದಾಗ ಅಲ್ಲಿ ನನಗೆ ಕೇವಲ ಒಂದು ವರ್ಷದಲ್ಲಿ ಯೋಜನೆ ಮುಗಿಸುವ ಲಕ್ಷ್ಮಣ ರೇಖೆಯನ್ನು ಹಾಕಲಾಯಿತು. ವಿದ್ವಾಂಸರ ಒಪ್ಪಂದ ಪತ್ರಿಕೆ ಸಹಿ ಹಾಕಿ ಊರಿಗೆ ಸಂತೋಷವಾಗಿ ಮರಳಿದೆ. ಮಾರ್ಚ್ 1993 ರಲ್ಲಿ ವಿಶ್ವವಿದ್ಯಾಲಯದ ಆದೇಶ ಪಡೆದು ಪ್ರಶ್ನಾವಳಿಗಳನ್ನು ಸಿದ್ಧಪಡಿಸಿಕೊಂಡು ಏಪ್ರಿಲ್ ಮಾಹೆಯಲ್ಲಿ ನನ್ನ ಕಾಲೇಜಿಗೆ ಬೇಸಿಗೆ ರಜಾ ಪ್ರಾರಂಭವಾಗಿರುವುದರಿಂದ ವಿಷಯ ಸಂಗ್ರಹಣೆಗೆ ಒಳ್ಳೆಯ ಅವಕಾಶ ಸಿಕ್ಕಿತೆಂದು ಯೋಚಿಸುತ್ತಿರುವಾಗ ನನ್ನ ದುರಾದೃಷ್ಟಕ್ಕೆ ಕೋಮು ಗಲಭೆಯ ದಳ್ಳುರಿ ಭಟ್ಕಳದಲ್ಲಿ ಹತ್ತಿಕೊಂಡಿತು. ಸುಮಾರು ಆರು ಮಾಹೆಗಳವರೆಗೆ ಜನರನ್ನೆಲ್ಲಾ ಬಂಧಿಮಾಡುವ ಕರ್ಫ್ಯೂ ಜಾರಿಗೊಳಿಸಲಾಯಿತು. ಹೊರ ಹೊರಡಲು ಬಯಸುವವರನ್ನು "ಕಂಡಲ್ಲಿ ಗುಂಡು" ಎಂಬ ಪೋಲೀಸ್ ಆದೇಶದಿಂದ ಹೆದರಿಸಲಾಯಿತು. ಇದು ನನ್ನ ವಿಷಯ ಸಂಗ್ರಹಣ ಕಾರ್ಯದ ಆಸಕ್ತಿಗೆ ಪರದೆ ಎಳೆಯಿತು. ನಾನು ವಿಶ್ವವಿದ್ಯಾಲಯಕ್ಕೆ ಕೊಟ್ಟ ಮಾತಿನಂತೆ ಯೋಜನೆ ಸಿದ್ಧಪಡಿಸಿ ಕೊಡಲು ಸಾಧ್ಯವಾಗಲಿಲ್ಲ.

1994 ರಲ್ಲಿ ಕೋಮು ಗಲಭೆಯ ಪ್ರಭಾವ ಇನ್ನೂ ಜನರ ಮನದಲ್ಲಿ ಹಸಿ ಹಸಿಯಾಗಿದ್ದರಿಂದ ನಾನು ವಿಷಯ ಸಂಗ್ರಹಣೆಗೆ ಹೋದೆಡೆಯಲ್ಲೆಲ್ಲಾ ನನ್ನನ್ನು ಭಟ್ಕಳದ ಮುಸ್ಲಿಮನೆನ್ನುವ ಸಂಶಯದ ದೃಷ್ಟಿಯಿಂದ ಕಡಲಿಗರು ನೋಡಲಾರಂಭಿಸಿದರು. ಅವರ ಮನ ಒಲಿಸಿಕೊಂಡು ವಿಷಯ ಸಂಗ್ರಹಣೆ ಮಾಡುವ ಹೊತ್ತಿಗೆ ಸಾಕಾಗಿ ಹೋದೆ. ಇದರೊಡನೆ ವಿಶ್ವವಿದ್ಯಾಲಯದಿಂದ ನಾನು ರೂ. 25,000/- ಹಣ ಪಡೆದಿದ್ದರಿಂದ ಬೇಗ ಯೋಜನೆ ಒಪ್ಪಿಸದಿದ್ದರೆ ಕ್ರಮ ಕೈಗೊಳ್ಳುವ ಬೆದರಿಕೆ ಪತ್ರಗಳು ಬಾಣಗಳಾಗಿ ಬರಲಾರಂಭಿಸಿದವು. ಕೊನೆಗೆ ಅವರ ಒತ್ತಾಯಕ್ಕೆ ಒಳಗಾಗಿ ಸಂಗ್ರಹಿಸಿದ ವಿಷಯವನ್ನೆಲ್ಲಾ ಪರಿವಿಡಿಗೆ ತಕ್ಕಂತೆ ಸರಿಹೊಂದಿಸಿ ವಿಶ್ವವಿದ್ಯಾಲಯಕ್ಕೆ ಒಪ್ಪಿಸಿದೆ. ಆದರೆ ಅದು ಗಾಂಧಾರಿ ಗರ್ಭವೇ ಆಗಿತ್ತು. ಆದ್ದರಿಂದ ವಿಶ್ವವಿದ್ಯಾಲಯಕ್ಕೆ ಪತ್ರ ಬರೆದು ಅದನ್ನು ಮತ್ತೊಮ್ಮೆ ಪರಿಶೀಲಿಸಿ ಕಳುಹಿಸಲು ಹಸ್ತಪ್ರತಿಯನ್ನು ಹಿಂತಿರುಗಿಸುವಂತೆ ಮನವಿ ಮಾಡಿಕೊಂಡೆ. ಆದರೆ ಒಂದು ವರ್ಷದ ಯೋಜನೆಯನ್ನು ನಾನು ಮೂವತ್ತು ಮಾಹೆಗಳು ತೆಗೆದುಕೊಂಡದ್ದರಿಂದ ಅಲ್ಲಿಂದಲೂ ನನಗೆ ವಿರುದ್ಧ

ಉತ್ತರವೇ ಬಂದಿತು. ಡಾ॥ ಎಂ.ಎಂ. ಕಲ್ಬುರ್ಗಿಯವರು ಕುಲಪತಿಗಳಾಗಿ ನೇಮಕಗೊಂಡಾಗ ಅವರಿಗೆ ಪತ್ರ ಬರೆದು ನನ್ನ ನಿಬಂಧವನ್ನು ಮರು ಪರಿಶೀಲಿಸಿ, ಒಪ್ಪಿಸುವ ಬಗ್ಗೆ ಕೇಳಿಕೊಂಡಾಗ ಅದಕ್ಕೆ ಪರವಾದ ಉತ್ತರ ಬಂದಿತು.

ನನ್ನ ಹಸ್ತಪ್ರತಿ ಕೈಸೇರಿತು. ಆದರೆ ಸುಮಾರು 325 ಪುಟಗಳನ್ನು ಪರಿಶೀಲಿಸಿ ಮತ್ತೊಮ್ಮೆ ಬರೆದು ಡಿ.ಟಿ.ಪಿ. ಮಾಡಿಸಲು ನನಗೆ ಒಂದು ವರ್ಷವೇ ಬೇಕಾಯಿತು. ಹೀಗೆ ಹಲವು ಅಡೆ-ತಡೆಗಳನ್ನು ದಾಟಿ ರಚಿಸಲ್ಪಟ್ಟ ಈ "ಸಮುದ್ರ ಜಾನಪದ" ಕೃತಿಯ ಹಿಂದೆ ಅಂದಿನ ಅಧ್ಯಯನಾಂಗ ನಿರ್ದೇಶಕರಾಗಿದ್ದ ಡಾ॥ ಪುರುಷೋತ್ತಮ ಬಿಳಿಮಲೆ, ಕುಲಪತಿಗಳಾಗಿದ್ದ ಡಾ॥ ಚಂದ್ರಶೇಖರ ಕಂಬಾರ ಹಾಗೂ ಡಾ॥ ಎಂ. ಎಂ. ಕಲ್ಬುರ್ಗಿ, ಕುಲ ಸಚಿವರಾಗಿದ್ದ ಡಾ॥ ಕೆ.ವಿ. ನಾರಾಯಣ ಮಿತ್ರರಾದ ಹಿ.ಚಿ. ಬೋರಲಿಂಗಯ್ಯ, ಇಂದಿನ ಕುಲಪತಿಗಳೂ ಹಾಗೂ ನನ್ನ ಗುರುಗಳೂ ಆದ ಡಾ॥ ಎಚ್. ಲಕ್ಕಪ್ಪ ಗೌಡ ಮತ್ತು ನಿರೂಪಕರಾದ ಕಡಲಿಗರ ಮನಃಸ್ಪೂರ್ವಕವಾದ ಸಹಕಾರವಿದೆ. ಅವರಿಗೆಲ್ಲಾ ನನ್ನ ಕೃತಜ್ಞತೆಗಳು. ನನ್ನ ಹಸ್ತ ಪ್ರತಿಯನ್ನು ಡಿ.ಟಿ.ಪಿ. ಮಾಡಿಕೊಟ್ಟ ಹನುಮಾನ್ ಡಿ.ಟಿ.ಪಿ. ಸೆಂಟರ್‌ನ ಮಾಲೀಕರಾದ ಶ್ರೀ ಸಂತೋಷಕುಮಾರ್ ಶೇಟ್‌ರವರನ್ನು ನಾನೆಂದೂ ಮರೆಯುವಂತಿಲ್ಲ.

ನನ್ನ ಪರಿಶ್ರಮಪೂರ್ವಕವಾದ ಈ ಕೃತಿಯು ಜಾನಪದ ಕ್ಷೇತ್ರದಲ್ಲಿ ತನ್ನದೇ ಆದ ಸ್ಥಾನ ಪಡೆಯಬಹುದೆಂಬ ಭರವಸೆ ಇದೆ. ಹಲವು ಜಾನಪದ ವಿದ್ವಾಂಸರ ಚಿಂತನೆಗೆ ಇದು ಆಹಾರ ಒದಗಿಸಬಲ್ಲದು. ಈ ಕಾರಣದಿಂದ ಇದು ಕೇವಲ ವಿಶ್ವವಿದ್ಯಾಲಯದ ಗ್ರಂಥಾಲಯದ ಮೂಲೆದೇವರಾಗಿ ಕುಳಿತುಕೊಳ್ಳುವುದಕ್ಕಿಂತ ಪುಸ್ತಕ ರೂಪ ಪಡೆದು ಕನ್ನಡಿಗರ ಕೈಸೇರುವ ಭಾಗ್ಯ ಅದಕ್ಕೆ ಲಭಿಸಿದರೆ ನನ್ನ ಶ್ರಮ ಫಲಕಾರಿಯಾದೀತು ಎಂದು ನಂಬಿದ್ದೇನೆ.

ನನ್ನ ಸಂಶೋಧನೆಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಹಿರಿ-ಕಿರಿಯ ಜಾನಪದ ಪ್ರೇಮಿಗಳಿಗೆಲ್ಲ ನಾನು ಋಣಿಯಾಗಿದ್ದೇನೆ.

ಡಾ॥ ಸೈಯದ್ ಜಮೀರುಲ್ಲಾ ಷರೀಫ್,
ಕನ್ನಡ ಪ್ರಾಧ್ಯಾಪಕರು,
ಅಂಜುಮನ್ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾ ವಿದ್ಯಾಲಯ,
ಭಟ್ಕಳ - 581 320. (ಉತ್ತರ ಕನ್ನಡ ಜಿಲ್ಲೆ)

1 ಪೀಠಿಕೆ

1:1 ಪುರಾಣ, ಐತಿಹ್ಯಗಳಲ್ಲಿ ಭೂಮಿ ಮತ್ತು ಸಮುದ್ರದ ಹುಟ್ಟು

ಮಾನವ, ಪ್ರಾಣಿ, ಗಿಡ ಮರ ಬಳ್ಳಿಗಳ ಸೃಷ್ಟಿಗೆ ಮೂಲವಾದುದು ಭೂಮಿ. ಇಂತಹ ಭೂಮಿಯನ್ನು ಜನಪದರು ತಾಯಿ ಎಂದು ಕರೆದರು. ಉತ್ತರ ಅಮೇರಿಕಾದ ''ಇಂಡಿಯನ್ ಎಪಿಕ್ಸ್'' ನಲ್ಲೂ ಸಹ ''ಭೂಮಿ ಇಡೀ ಮಾನವತೆಯ ತಾಯಿ ರೂಪ''ಎಂದು ತಿಳಿಸಲಾಗಿದೆ. ಪ್ರಾಚೀನ ಪೆರುವಿಯನ್ನರು ಭೂಮಿಯನ್ನು ''ತಾಯಿ ಭೂಮಿ'' ಎಂದು ಕರೆಯುತ್ತಿದ್ದರೆಂದು ಹೇಳಲಾಗುವುದು. ಭೂಮಿಯನ್ನು 'ದೇವಿ' ಎಂದು ಪುರಾಣಗಳು ತಿಳಿಸುತ್ತವೆ. ಈ ಹೇಳಿಕೆಗಳನ್ನೆಲ್ಲ ಗಮನಿಸಿದರೆ ಭೂಮಿಯನ್ನು ತಾಯಿ - ಎಂದು ಭಾವಿಸುವ ನಂಬಿಕೆ ವಿಶ್ವವ್ಯಾಪ್ತಿಯಾಗಿದೆ. ಎಲ್ಲಕ್ಕೂ ಜನ್ಮದಾತೆಯಾದ ತಾಯಿಯ ಹುಟ್ಟು ಹೇಗಾಯಿತೆಂಬುದರ ಬಗ್ಗೆ ಸಿಗುವ ಮಾಹಿತಿಯು ವೈವಿಧ್ಯಮಯವಾದುದು.

ಸಮುದ್ರ ಮತ್ತು ಭೂಮಿಯ ಹುಟ್ಟಿನ ಬಗ್ಗೆ ಜನಪದರಲ್ಲಿ ಸಿಗುವ ಮಾದೇವರಾಯನ ಐತಿಹ್ಯವು ಗಮನಸೆಳೆಯುವಂತಹದ್ದು. ಆದರಲ್ಲಿ ಶಿವನ ಆಸಕ್ತಿ ಭೂಮಿಯ ಹುಟ್ಟಿಗೆ ಕಾರಣವಾಯಿತೆಂದು ತಿಳಿಸಲಾಗಿದೆ. ಅದು ನೀಡುವ ಮಾಹಿತಿಯೆಂದರೆ :

ಮಾದೇವರಾಯ

ಸೋಮಿ ಹುಟ್ಟಾನೆಲ್ಲವೊ ಭೂಮಿ ಹುಟ್ಟಾನೆಲ್ಲವೊ
ಏಳು ತಳನಲ್ಲೇ ಒರಗೀ ಹರೀನೆಲ್ಲವೊ ಕೋಲೆ
ಗಂಗೆ ಹೊಕ್ಕದೊಳಗೇ ಹುಟ್ಟನಲ್ಲೋ ಮಾದೇವರಾಯ
ಕುಳ್ವೆ ನಿಲ್ವೆನಂದ್ರೆ ಹೊಲನಿಲ್ವಲೋ ಕೋಲೆ
ಕುಳ್ವೆ ನಿಲ್ವೆನಂದ್ರೆ ಹೊಲನಿಲ್ಲ ಮಾದೇವರಾಯಾಗೆ
ತನ್ನ ಒಂದು ರೋಮ ಕೀಲ್ವನಲ್ಲೋ ಕೋಲೆ
ತನ್ನ ಒಂದು ರೋಮ ಕೀಲ್ವನಲ್ಲೋ ಮಾದೇವರಾಯ
ರೋಮಕೆ ಗೆಣ್ಣನುದರುಸಿದನು ಕೋಲೆ
ರೋಮಕೆ ಗೆಣ್ಣನುದರುಸಿದನು ಮಾದೇವರಾಯ
ಆ ತಾಳಕ್ಕೆ ಪಾತಾಳಕ್ಕೆ ನಿಲೂಸಿದನೋ ಕೋಲೆ
ಅಂಗಯ್ಯ ಮೈನೇ ಒಳದ್ದನಲ್ಲೋ ಮಾದೇವರಾಯ
ಶಂಗಡಕೇ ಇನ್ಯಾರ ಪಡೂದಾನಲೋ ಕೋಲೆ
ಶಂಗಡಕೇ ಇನ್ಯಾರ ಪಡೂದಾನಲೋ ಮಾದೇವರಾಯ
ಅಂಗುಜನ ಹಕ್ಕೀಯ ಪಡಿದಾನಲೋ ಕೋಲೆ
ಅಂಗುಜನ ಹಕ್ಕೀಯ ಪಡಿದಾನೋ ಮಾದೇವರಾಯ
ಏನಂದೆ ಹೇಳೂತ್ತೈದಾನೋ ಕೋಲೆ
ಕೇಳು ಕೇಳು ಅಂಗುಜನಕ್ಕೀ ನೀನೇ ಕೇಳೇ
ಏಳೇಳು ಲೋಕವ ತಿರಗೇ ಬಾರೇ ಕೋಲೆ
ಎಲ್ಲಾದರೂ ಭೂಮಿಯ ನೋಡೆ ಬಾರೇ ಅಂಗುಜನಕ್ಕಿ
ಎಲ್ಲಾದರೂ ಮನಸಾರ ನೋಡೆ ಬಾರೇ ಕೋಲೆ
ಎಲ್ಲಾದರೂ ಶಮದೂರ ನೋಡೆ ಬಾರೇ ಅಂಗುಜನಕ್ಕಿ

ಹಕ್ಕೀಗ್ ಬೋದನೆಯ ಹೇಳುವನಾರೋ ಕೋಲೆ
ರೆಕ್ಕೆಯ ಬಡದೇ ಹಾರಿವಲೋ ಅಂಗುಜನಕ್ಕೀ
ಏಳೇಳು ಲೋಕವ ತಿರುಗಿದವೋ ಕೋಲೆ
ಎಲ್ಲೂ ಭೂಮಿ ಕಾಣನೆಲ್ಲ ಅಂಗುಜನಕ್ಕೀಗೆ
ಎಲ್ಲೆಲ್ಲೂ ಮನಸಾರು ಕಾಣಸೆಲ್ಲ ಕೋಲೆ
ಎಲ್ಲೆಲ್ಲೂ ಶಮುದರ ಕಾಣಸೆಲ್ಲ ಕೋಲೆ
ಎಲ್ಲೆಲ್ಲೂ ಶಮುದರ ಕಾಣನೆಲ್ಲ ಅಂಗುಜನಕ್ಕೀ
ಹಾರೇ ಹಾರೇ ರಟ್ಟೆ ಸೋತೇ ಬರುವಾದೋ ಕೋಲೆ
ಕೇಳಿರಿ ಕೇಳಿರಿ ಸೋಮ್ಯೋರೆ ನೀವಾದರೆ ಕೇಳಿ
ಯಾರೂ ನಮ್ ಕಣ್ಣಿಗೆ ದೊರ್ಕನೆಲ್ವೊ ಕೋಲೆ
ಎಲ್ಲೂ ಭೂಮಿ ಹೊಲನೆಲ್ಲ ಮಾದೇವರಾಯ
ಎಲ್ಲೆಲ್ಲೂ ಶಮುದರ ನೋಡುನೆಲ್ಲ ಕೋಲೆ
ಎಲ್ಲೆಲ್ಲೂ ಮನುಶರ ನೋಡುನೆಲ್ಲ ಕೋಲೆ
ಅಟ್ಟಲೆ ಹೊತ್ತಿನ ಒಳಗೆಲ್ಲೋ ಅಂಗುಜನಕ್ಕೀ
ಮೊಟ್ಟೆ ಹಾಕುವ ದಿನ ಬಂದ್ವೋ ಕೋಲೆ
ಸೋಮಿಯಂಗಯ್ ಮೇಳಿನೇ ಮೊಟ್ಟೆ ದರಶೂ ಹೊತ್ತಿನಲ್ಲೇ
ಮೊಟ್ಟೆ ಹೊರಳಾರೂ ಬೀಳ್ವವಲೋ ಕೋಲೆ
ಮೊಟ್ಟೆ ಹೊರಳಾರೂ ಬೀಳ್ವಟ್ಟ ಹೊತ್ತೀಗೆ
ಮಾದೇವರಾಯ ಸರದಾ ಹೂಡುವನಲ್ಲೋ ಕೋಲೆ
ಕೆಂಪೀ ಪಲವೇ ಭೂಮ್ಯಾಗೋ ಬೆಳಿಯೂ ಪಲವೇ ಶಮುದ್ರಾದೋ
ಮೈನೀನ ಹುರುಬಲು ಗುಡ ಮಂಚಾದೊ ಕೋಲೆ
ಮಾದೇವರಾಯ ಸರಪ ಹೂಡುವಟ್ಟೆರೊತ್ತೀಗೇ
ಕೆಂಪೀ ಪಲವೇ ಭೂಮ್ಯಾದೋ ಕೋಲೆ
ಕೆಂಪೀ ಪಲವೇ ಭೂಮ್ಯಾದೋ ಬೆಳಿಯೂ ಪಲವೇ ಶಮುದರಾಗ್ಲೇ
ಮೈನೀನ ಹುರುಬಲು ಗುಡ ಮಂಚಾಗ್ಲೋ ಕೋಲೆ
ಹಶೀಮಕ್ಕೇ ನೆತ್ತಿ ಅಳದಾಂಗ್ ಅಳದವಲೋ ಈವಾಗಲೇ ಭೂಮಿ
ಈ ಭೂಮಿಯಾಕೇ ಬಲಿಯಾ ನೆಲ್ವೋ ಕೋಲೆ
ಶಂಗಡಕೆ ಮತ್ಯಾರಾ ಪಡದಾನೋ ಮಾದೇವರಾಯ
ಬಸವೇಸೂರಾಯನ ಪಡುವಾನೋ ಕೋಲೆ
ಕೇಳಲೋ ಕೇಳಲೋ ಬಸವೇಸುರಾಯ ನೀ ಕೇಳು
ಈ ಭೂಮಿಯಾಕೇ ಬಲನೆಲ್ವೋ ಕೋಲೆ
ಯಾರಾರು ಮನುಸಾರು ಒಳುವರಲೋ ಬಸವೇಸುರಾಯ
ಈ ಮೂರು ಲೋಕದ ಕೇಳೇ ಬಾರೋ ಕೋಲೆ
ಉತ್ರವೊಂದು ದಿಕ್ಕಿಗೆ ಹೋದನಲ್ಲೋ ಬಸವೇಸುರಾಯ
ಅದ್ರ ಕಣ್ಣೀಗ್ ಯಾರು ಕಾಣಲೆಲ್ಲೋ ಕೋಲೆ
ದಷ್ಣಿವೊಂದು ದಿಕ್ಕಾನೆ ತಿರುಗಾನೋ ಬಸವೇಸುರಾಯ

ಯಾರೇನು ಕಣ್ಣಿಗೆ ದುರ್ಕನೆಲ್ಲೋ ಕೋಲೆ
ಏಳುಯೇಳು ಲೋಕವ ತಿರುಗಿದೋ ಬಸವೇಸುರಾಯ
ಯಾರು ಕಣ್ಣಿಗೆ ಕಾಣನೆಲ್ವೋ ಕೋಲೆ
ಎಂಟಾವೊಂದು ದಿಕ್ಕಿನ ತುದಿಗೇ ಬಸವೇಸುರಾಯ
ಕಡಲೇಳು ಶಮುದಾರ ಬ್ಯಾಲೀ ಮೇನೇ ಬಸವೇಸುರಾಯ
ಶೂಂಜಿ ಮ್ಯೇನೆ ಶೂಂಜಿಯ ನಿಲ್ಸ್ಯಾಸ್ಯಾಳ ಕೋಲೆ
ಶೂಂಜಿ ಮ್ಯೇನೆ ಶೂಂಜಿ ನಿಲುಸಿ ಹೊಲೆಯ ಮಗಳು
ತಲೆ ಊರಿ ತಪವ ಮಾಡುವಳೋ ಕೋಲೆ
ತಲೆ ಊರಿ ತಪವ ಮಾಡುವಳೋ ಅಂದಕಂದೇ
ಅದರಿಂದೇ ಬೂಮಿ ಬಲಿಯಾನೆಲ್ವೋ ಕೋಲೆ
ಅದರಿನ್ನೇ ನೋಡಿಕಂಡೆ ಬಂದನಲೋ ಬಸವೇಸುರಾಯ
ಮಾದವರಾಯನ ಕರದೇ ಹೇಳೂತಯ್ದಾನೋ ಕೋಲೆ
ಕೇಳೋ ಕೇಳೋ ಬಸವೇಸುರಾಯಾ ನೀನೇ ಕೇಳು
ಅದುರಾ ಕೊಂದೇ ಹೊತ್ತೆಲೇ ತರುಬೇಕು ಕೋಲೆ
ಅದರ ಕೊಂದ ಪಾಪ ನನಗಲ್ಲ ನಿನಗಲ್ಲ
ನಿನ್ನವೊಂದು ಕೋಡ ತುರಿಮ್ಯೆನೆ ಕೋಲೆ
ಅಟ್ಸಂಬು ಮಾತಾ ಕೇಳಿದ ಬಸವೇಸುರಾಯ
ಮೂರಂಬು ಇಟ್ಲನು ಹೊಡೆದನು ಕೋಲೆ
ಮೂರಂಬು ಇಟ್ಲನು ಹೊಡೆದನು ಬಸವೇಸುರಾಯ
ಮೂರಂಬು ಮೆಟ್ಟನು ಕೆದುರೆನಲೋ ಕೋಲೆ
ಮೂರಾಂಬ ಮೆಟ್ಟನು ಕೆದುರಿ ಬಸವೇಸುರಾಯ
ತುರ್ತಾದಲ್ ತಾನೇ ಹೋದನಲ್ಲೋ ಕೋಲೆ
ತುರ್ತಾದಲ್ ತಾನೇ ಹೋದನಲ್ಲೋ ಬಸವೇಸುರಾಯ
ಹೊಲತೀಯ ಹೊಡದೇ ತರುವನಲೋ ಕೋಲೆ
ಹೊಲತೀಯ ಹೊಡದೇ ತಂದನಲೋ ಬಸವೇಸುರಾಯ
ಮಾದೇವರಾಯನ ಕೂಡ್ಲೇ ಕೊಡುವನಲೋ ಕೋಲೆ
ಆಗಾ ಮಾದೇವರಾಯ ನಂಬೋನೇ ಏನಾಮಾಡ್ಯಾನೋ
ಹೊಲತೀಯ ಸೆಣ್ಣಿಂದೆ ಕೊಚ್ಚುತಯ್ದಾನೊ ಕೋಲೆ
ಹೊಲತೀಯ ಸೆಣ್ಣಸೆಣ್ಣಿಂದೆ ಕೊಚ್ಚುತ ಮಾದೇವರಾಯ
ಅದ್ರೊಂದೊಂದು ಪಾಲೂ ತಗದಿಟ್ಟ ಕೋಲೆ
ಅದ್ರೊಂದೊಂದು ಪಾಲೂ ತಗದಿಟ್ಟ ಮಾದೇವರಾಯ
ಪಾಲಿಗ್ ಬಂದ್ ಜಾತಿಯಂತೆ ಪಡೂದಾನೋ ಕೋಲೆ
ಜಾತಿಜಾತಿಯೆಲ್ಲ ಪಡೆದಾನೋ ಮಾದೇವರಾಯ
ಹಾಲಂಬು ಊಟಕೆ ಕುಳವನೋ ಕೋಲೆ
ಹಾಲುಂಬ ಊಟಕೆ ಕುಳವಟ್ಟ ಹೊತ್ತಿನ ಒಳಗೆ
ಒಕ್ಕಲರಯ್ತರ್ ಪಡಿನೆಲ್ವೋ ಕೋಲೆ
ಒಕ್ಕಲರಯ್ತರ್ ಪಡಿನೆಲ್ಲಂದಾ ಮಾದೇವರಾಯ

ಹಾಲುಂಬ ತುತ್ತಾನೂ ಬದಿಗಿಟ್ನೊ ಕೋಲೆ
ಹಾಲುಂಬ ತುತ್ತಾನು ಬದಿಗಿಟ್ಟ ಮಾದೇವರಾಯ
ಹಾಲಲ್ ಹುಟ್ಟಿದ್ರೊ ಹಾಲಕ್ಕಿ ಮಕ್ಳು ಕೋಲೆ
ಹಾಲಲ್ ಹುಟ್ಟಿದ್ರೊ ಹಾಲಕ್ಕಿ ಮಕ್ಳು ನೀವು
ಮಯ್ಯೊಳ್ಗಿ ಮಡಿಯೂ ನಿಮಗಿಲ್ಲ ಕೋಲೆ
ಹೇಳು ತೇವೋ ಗುಮ್ಮೆಪದನಾವಾ *

ಈ ಕಥನ ಗೀತೆಯಲ್ಲಿ ಮಾದೇವರಾಯ ಸಂಗಡಕ್ಕಾಗಿ ಅಂಗುಜನ ಹಕ್ಕಿಯನ್ನು ಪಡೆದು ಮನುಷ್ಯರನ್ನು , ಭೂಮಿಯನ್ನು ಹುಡುಕಿಕೊಂಡು ಬರುವಂತೆ ಆಜ್ಞೆ ಮಾಡುತ್ತಾನೆ. ಅದು ಆಕಾಶದಲ್ಲಿ ಹಾರಾಡುತ್ತಾ ಭೂಮಿ ಹುಡುಕಲು ಹೋಗಿ ನಿರಾಸೆಗೊಂಡು ಹಿಂದಿರುಗುತ್ತದೆ . ಕೊನೆಗೆ ಮಾದೇವರಾಯನ ಕೈಯಲ್ಲಿ ಅದು ಮೊಟ್ಟೆ ಇಟ್ಟಾಗ ಒಡೆಯುತ್ತದೆ. ಅದರೊಳಗಿನ ಹಳದಿಯ ದುಂಡನೆಯ ಭಾಗವು ಭೂಮಿಯಾಗಿ ಬಿಳಿಯ ಭಾಗವು ಸಮುದ್ರವಾಗುತ್ತದೆ . ಒಂದೆ ಮೊಟ್ಟೆಯಿಂದ ಭೂಮಿ ಮತ್ತು ಸಮುದ್ರದ ಸೃಷ್ಟಿಯಾಯಿತೆಂದು ತಿಳಿಸುವುದು ಗಮನಾರ್ಹವಾದುದು. ಭೂಮಿಯು ಬಲಿಯದೆ ಇದ್ದುದನ್ನು ಕವಿ ವರ್ಣಿಸುವ ರೀತಿಯು ತುಂಬಾ ಸೊಗಸಾಗಿದೆ. ''ಹಶೀಮಕ್ಕೆ ನೆತ್ತಿ ಅಳದಂಗ್'' ಎನ್ನುವ ವಾಕ್ಯದಲ್ಲಿ ಬಳಸಿರುವ ಉಪಮೆ ಕವಿಯ ಕಾವ್ಯಪ್ರತಿಭೆಯನ್ನು ಪರಿಚಯಿಸುತ್ತದೆ.

ಭೂಮಿ ಬಲಿಯದಂತಿರಲು ತಪಸ್ಸು ಮಾಡುತ್ತಿದ್ದ ಹೊಲತಿಯನ್ನು ಮಾದೇವರಾಯ ಕೊಂದು ಅವಳನ್ನು ತುಂಡು ತುಂಡನ್ನಾಗಿ ಮಾಡುತ್ತಾನೆ. ಒಂದೊಂದು ತುಂಡಿಗೆ ಒಂದೊಂದು ಜಾತಿ ಸೃಷ್ಟಸುತ್ತಾನೆ. ಹೀಗೆ ಭೂಮಿ - ಸಮುದ್ರಗಳನ್ನು ಸೃಷ್ಟಿಸಿದ ನಂತರ ಹಾಲೂಟ ಮಾಡಲು ಕುಳಿತಾಗ ಅವನಿಟ್ಟ ''ಹಾಲುಂಬ ತುತ್ತಿ '' ನಿಂದ ಬಂದ ಹಾಲಿನಿಂದ ಹಾಲಕ್ಕಿ ಒಕ್ಕಲಿಗರು ಹುಟ್ಟಿದರು.

ಹಾಲಕ್ಕಿ ಒಕ್ಕಲಿಗರು ಸುಗ್ಗಿ ಕುಣಿತದ ಸಂದರ್ಭದಲ್ಲಿ ಹಾಡುವ ಈ ಗೀತೆಯು ಸುಗ್ಗಿಯ ಹಿಗ್ಗಿನ ವಿಷಯ ತಿಳಿಸುವುದಕ್ಕಿಂತ ತಮ್ಮ ಮತ್ತು ಭೂಮಿಯ ಸೃಷ್ಟಿಯನ್ನು ತಿಳಿಸುತ್ತದೆ. ಅವರ ಸುಗ್ಗಿ ಮೇಳ ಪಾಲ್ಗುಣ ಶುದ್ಧ ದಶಮಿಯಂದು ಮಾದೇವರಾಯನ ಹಾಡನ್ನು ಅವರು ಹಾಡುವುದು ವಾಡಿಕೆ.

ಈ ಕಥನ ಗೀತೆಯ ಎರಡು ಪಾಠಾಂತರಗಳು ದೊರೆಯುತ್ತವೆ. ಅವುಗಳಲ್ಲಿ ಕಾಣುವ ವ್ಯತ್ಯಾಸವೆಂದರೆ, ಒಂದು ಪಾಠಾಂತರದಲ್ಲಿ ಭೂಮಿ ಹುಟ್ಟಿಗಿಂತ ಮೊದಲೇ ಹುಟ್ಟಿದ ಮಾದೇವರಾಯ ಸೂಜಿಯ ಮೊನೆಯ ಮೇಲೆ ಆರು ವರ್ಷಗಳ ವರೆಗೆ ತಪಸ್ಸು ಮಾಡಿ ''ಅಂಗುಜನ ಹಕ್ಕಿ''ಯನ್ನು ಪಡೆಯುತ್ತಾನೆ. ಆಹಕ್ಕಿಗೆ 'ನೆಣೆಯಾಡುವ' ದಿನ ಬಂದಾಗ ಅದಕ್ಕೆ ತನ್ನ ಮುಂಗೈ ಮೇಲೆ ಅವಕಾಶ ಮಾಡಿ ಕೊಡುತ್ತಾನೆ. ಆಹಕ್ಕಿ ಮೊಟ್ಟೆ ಇಟ್ಟು ಹಾರುವಾಗ ಮೊಟ್ಟೆಗೆ ಉಗುರು ತಾಗಿ ಅದು ಕೆಳಕ್ಕೆ ಬೀಳುತ್ತದೆ. ಆಗ ಮಾದೇವರಾಯ, ಮೊಟ್ಟೆಯ ಬಿಳಿ ಭಾಗ ಜೀವತಳಿ ನೆಲ ಹೊಲ , ಮಧ್ಯದ ಕೆಂಪು - ಫಲ, ಗುಡ್ಡ , ಮೊಟ್ಟೆಯ ಓಡು - ಆಕಾಶ ಆಗಲೆಂದು ಹಾರೈಸಿ ನೆಲ-ಹೊಲ-ಗುಡ್ಡ-ಮರ ಮಡಗಿ , ಆಕಾಶ ಮತ್ತು ನೂರೊಂದು ಕೋಟಿ ದೇವತೆಗಳನ್ನು ಪಡೆದು ಅವುಗಳ ಜೊತೆಗುಳಿಯುತ್ತಾನೆ.

ಮತ್ತೊಂದು ಪಾಠದಲ್ಲಿ ಪಾರಿವಾಳದ ಮೊಟ್ಟೆ ಒಡೆದು ಅದರೊಳಗಿನ ಕೆಂಪು ಭಾಗವು ಭೂಮಿ , ಬಿಳಿಭಾಗವು ಸಮುದ್ರ, ಮೇಲಿನ ಕವಚವು ಆಕಾಶ ಆಯಿತೆಂದು ತಿಳಿಸಲಾಗಿದೆ. ಅದರಲ್ಲಿ ಬಲಿಯದೆ ಇದ್ದ ಭೂಮಿಗೆ ಮಾದೇವರಾಯ ಹೇಳುವ ಸಮಾಧಾನ ತುಂಬಾ ಸೊಗಸಾಗಿದೆ.

''ಹೆದರಲು ಬೇಡ ಭೂಮಿ ! ನೆಡಗಲು ಬೇಡ ಭೂಮಿ
ಕಲ್ಲು ಕಾಣಾರ ಬಲುಮೀಲಾ ! ಕೊಡ್ತೇನೆ ಬೂಮಿ ತಾಯೆ''

ಭೂಮಿ ಗಟ್ಟಿಯಾಗಿರಲು ಕಲ್ಲು ಕಾಣಾರ ನೀಡುವ ಭರವಸೆಯನ್ನು ಮಾದೇವರಾಯ ಕೊಡುತ್ತಾನೆ.

* ಹೇಳು ತೇವೋ ಗುಮ್ಮೆಪದನಾವಾ : ಡಾ। ಎಸ್. ಆರ್ ನಾಯಕ

ಜನಪದರ ಕಲ್ಪನೆಯಿಂದ ಸೃಷ್ಟಿಯಾದ ಪಾರಿವಾಳದ ಅಂಡವು ಶಿಷ್ಟರ ದೃಷ್ಟಿಯಲ್ಲಿ ಬ್ರಹ್ಮನ ಅಂಡವಾಯಿತು. ಒಟ್ಟಿನಲ್ಲಿ ಭೂಮಿ-ಆಕಾಶ-ಸಮುದ್ರಗಳ ಸೃಷ್ಟಿಯು ಅಂಡದಿಂದಾಯಿತೆಂಬ ವಿಷಯವು ಅರ್ಥಪೂರ್ಣವಾಗಿದೆ. ಜೊತೆಗೆ ಹೊಲತಿಯ ಬಲಿಯಿಂದ ಹೊಸ ಸೃಷ್ಟಿಗೆ ಸಿಗುವ ಪ್ರೋತ್ಸಾಹವು, ಬಲಿಯಿಂದಲೇ ಹೊಸ ಸೃಷ್ಟಿಯ ಆವಿಷ್ಕಾರವೆಂಬ ನಂಬಿಕೆಯನ್ನು ಬಲಪಡಿಸುತ್ತದೆ. ಸತ್ತ ವ್ಯಕ್ತಿಯ ಚೈತನ್ಯ ಮತ್ತೊಂದು ಜೀವಕ್ಕೆ ಬರುತ್ತದೆಂಬ ನಂಬಿಕೆ ಆದಿವಾಸಿಗಳಲ್ಲಿ ರೂಢಿಯಲ್ಲಿದೆ. ಈ ಅಂಶವು ಗೀತೆಯಲ್ಲಿ ಧ್ವನಿಸುತ್ತದೆ. ಹೊಲತಿಯ ರಕ್ತತರ್ಪಣೆಯಿಂದ ಭೂಮಿಯನ್ನು ಬಲಪಡಿಸಿದ ವಿವರಣೆ ನರಬಲಿಯ ಸಂಪ್ರದಾಯವನ್ನು ತಿಳಿಸುತ್ತದೆ. ಆದಿವಾಸಿಗಳನ್ನು ಹೊಲೆಯರೆನ್ನುವ ಅಂಶ ಧ್ವನಿಪೂರ್ಣ.

ಈ ಜನಪದ ಗೀತೆ ನೀಡುವ ಮಾಹಿತಿಗಿಂತ ಪುರಾಣಗಳು ನೀಡುವ ವಿವರಣೆ ಭಿನ್ನವಾಗಿದೆ.

ಕಥಾಸರಿತ್ಸಾಗರದ ಕಥಾ ಪೀಠಲಂಬಕದ ಎರಡನೆಯ ತರಂಗದ ಕಥೆಯಲ್ಲಿ, ಭೂಮಿಯ ಸೃಷ್ಟಿಯ ಬಗ್ಗೆ ಹೀಗೆ ತಿಳಿಸಲಾಗಿದೆ.

''ಬಹಳ ಹಿಂದೆ ಪ್ರವಾಹಗಳ ಕೊನೆಯ ಕಾಲದಲ್ಲಿ ಭೂಮಿಯು ದ್ರವರೂಪದಲ್ಲಿತ್ತು. ಆ ವೇಳೆಗೆ ಶಿವ ತನ್ನ ತೊಡೆಯನ್ನು ಕತ್ತರಿಸಿ ಒಂದು ಹನಿ ರಕ್ತವನ್ನು ಈ ನೀರಿಗೆ ಬೀಳಿಸಿದನು. ಅದು ಒಂದು ಮೊಟ್ಟೆಯಾಕಾರವನ್ನು ಪಡೆದುಕೊಂಡಿತು. ಶಿವ ಆ ಮೊಟ್ಟೆಯನ್ನು ತೆಗೆದುಕೊಂಡು ಚೂರು ಮಾಡಿದನು. ಇದರಿಂದ ಒಬ್ಬ ಮನುಷ್ಯ ಬಂದನು. ಅವನಿಂದ ಪ್ರಪಂಚದ ಸೃಷ್ಟಿಗೆ ಪ್ರಕೃತಿಯನ್ನು ಮಾಡಲಾಯಿತು. ಆ ಮೊಟ್ಟೆ ಒಡೆದ ಅರ್ಧ ಚೂರು ಆಕಾಶವಾಯಿತು. ಮತ್ತೊಂದು ಅರ್ಧ ಚೂರು ಭೂಮಿಯಾಯಿತು''.

ಇದೂ ಸಹ ಮೇಲಿನ ಜನಪದ ಗೀತೆಯ ವಿಷಯವನ್ನೇ ಹೋಲುತ್ತಿದ್ದರೂ ಮೊಟ್ಟೆಯ ಹುಟ್ಟಿಗೆ ಕಾರಣವಾದ ಪಕ್ಷಿಯ ವಿವರಣೆ ಇದರಲಿಲ್ಲ. ಸಮುದ್ರದ ಸೃಷ್ಟಿಯನ್ನು ಇದು ತಿಳಿಸುವುದಿಲ್ಲ.

ದೇವೀ ಭಾಗವತದ ನವಮಸ್ಕಂದದಲ್ಲಿ - '' ಆರಂಭದಲ್ಲಿ ಮಹಾವಿಷ್ಣುವು ಎಲ್ಲೆಲ್ಲಿಯೂ ಹರಡಿಕೊಂಡಿದ್ದನು. ನೀರಿನ ಮೇಲ್ಬಾಗದಲ್ಲಿ ಮಲಗಿರುವ ಈ ಮಹಾವಿಷ್ಣುವಿನ ಪ್ರತಿಯೊಂದು ರೋಮಕೂಪದಲ್ಲಿಯೂ ಒಂದೊಂದು ಬ್ರಹ್ಮಾಂಡವಿದೆ. ಮುಂದೆ ಈ ವಿರಟ್ ಪುರುಷ ಮನಸ್ಸನ್ನು ಪಡೆದನು. ಈ ಮನಸ್ಸು ಪ್ರತಿಯೊಂದು ರೋಮಕೂಪಕ್ಕೂ ಸಮನಾಗಿ ಸಂಬಂಧಿಸಿರುತ್ತದೆ. ಅನಂತರದಲ್ಲಿ ಇದರಿಂದ ಪಂಚಮಹಾಭೂತಗಳು ರೂಪಿತವಾದವು. ಇವುಗಳ ಸೇರುವಿಕೆಯಿಂದ 'ಮಹಾಪೃಥ್ವಿ' ಎಂಬ ಭೂತ ರೂಪಿತವಾಯಿತು. ಅನಂತರದಲ್ಲಿ ಇದನ್ನು ನಾನಾ ಚೂರುಗಳಾಗಿ ಕತ್ತರಿಸಲಾಯಿತು. ಪ್ರತಿಯೊಂದು ಚೂರನ್ನೂ ಪ್ರತಿಯೊಂದು ರೋಮಕೂಪದಲ್ಲಿ ಶೇಖರಿಸಲಾಯಿತು. ಈ ಚೂರುಗಳೇ ಸೃಷ್ಟಿಯ ಸಮಯದಲ್ಲಿ 'ಭೂಮಿ'ಗಳಾದವು. ಮೊದಲಿನಂತೆಯೇ ಭೂಮಿಗಳು ಆ ರೋಮಕೂಪದಲ್ಲಿಯೇ ಮುಳುಗಿ ಹೋದವು. ಈ ಪ್ರತಿಯೊಂದು ಬ್ರಹ್ಮಾಂಡಗಳಲ್ಲೂ ಭೂಮಿ, ಪರ್ವತಗಳು, ಕಾಡುಗಳು, ಸಮುದ್ರಗಳು, ಸಪ್ತದ್ವೀಪಗಳು, ಹಿಮಪರ್ವತ, ಮೇರು, ಸೂರ್ಯ, ಚಂದ್ರ ಮತ್ತು ಇತರೆ ದೇವತೆಗಳಿದ್ದಾರೆ. '' - ಎಂದು ತಿಳಿಸಲಾಗಿದೆ.

ವೈಷ್ಣವ ಸಂಪ್ರದಾಯಗಳನ್ನು ಸಾರುವ ಈ ಪುರಾಣವು ವಿಷ್ಣುವಿನ ರೋಮಕೂಪದಿಂದ ಭೂಮಿಯ ಸೃಷ್ಟಿಯಾದದ್ದೆಂದು ತಿಳಿಸುತ್ತದೆ. ಭೂಮಿ ಒಂದು ಎನ್ನುವುದಕ್ಕಿಂತ ಹಲವು ಎನ್ನುವ ವಿಷಯವು ಗಮನಾರ್ಹವಾಗಿದೆ.

ಶಿವಪುರಾಣದಿಂದ ದೊರೆಯುವ ವಿಷಯವೆಂದರೇ '' ಭಗವಾನ್ ಸ್ವಯಂಭುವು ಅನೇಕ ಪ್ರಜೆಗಳನ್ನು ಉತ್ಪಾದಿಸುವ ಇಚ್ಛೆಯಿಂದ ಮೊದಲು ಜಲವನ್ನು ನಿರ್ಮಿಸಿದನು ಮತ್ತು ಆ ಜಲದಲ್ಲಿ ವೀರ್ಯವನ್ನಿರಿಸಿದನು. ಆ ಜಲವು ನರಸ್ವರೂಪವಾಯಿತು. ಆ ನರನ ಪುತ್ರನೆಂಬ ನಾರಾಯಣನು ಆ ಜಲದಲ್ಲಿ ಸ್ಥಾನಾವಿಷ್ಟನಾದನು. ಆಗ ಜಲಸ್ಥಿತ ಆ ಅಂಡವು ಸುವರ್ಣದಂತೆ ಕಾಂತಿಯುಕ್ತವಾಯಿತು. ಬ್ರಹ್ಮನು ಯಜ್ಞ ಮಾಡುವುದಕ್ಕೆ ಸ್ವಯಂಭುನಾಮದಿಂದ ತೋರಿದನು. ಆ ಹಿರಣ್ಯಗರ್ಭನು ಒಂದು ವರ್ಷ ಅಂಡದಲ್ಲಿದ್ದು ನಂತರ ಅದು ಎರಡು ಖಂಡಗಳಾದವು. ಅವುಗಳಲ್ಲಿ ಒಂದು ಖಂಡದಲ್ಲಿ ಆಕಾಶ ಹಾಗೂ ಭೂಮಿಗಳಾದವು. ಇನ್ನೊಂದು ಖಂಡದಲ್ಲಿ ಹದಿನಾಲ್ಕು ಲೋಕಗಳನ್ನು ಉಂಟುಮಾಡಿದನು. ಆ ಎರಡೂ ಖಂಡಗಳ ಮಧ್ಯವು ಆಕಾಶವಾಯಿತು. ಮತ್ತು ಜಲದ

ಮೇಲಿದ್ದ ಪೃಥ್ವಿ ಹಾಗೂ ಆಕಾಶಗಳಲ್ಲಿ ಹತ್ತೂ ದಿಕ್ಕುಗಳ ರಚನೆಯಾಯಿತು''. ಇದರಲ್ಲೂ ಸಹ ಭೂಮಿಯ ಸೃಷ್ಟಿಗೆ ಅಂಡವೆಂದೇ ತಿಳಿಸಲಾಗಿದೆ. ನಮ್ಮ ಜನಪದರ ಕಲ್ಪನೆಗೆ ಇದು ಹತ್ತಿರವಾಗುತ್ತದೆ.

ಮುಸ್ಲಿಮ್ ಮೀನುಗಾರರು ನಂಬುವ ಕುರಾನ್ ಗ್ರಂಥದಲ್ಲಿ ಅಲ್ಲಾನಿಂದ ಭೂಮಿ-ಆಕಾಶಗಳೆರಡೂ ಸೃಷ್ಟಿಯಾದವೆಂದು, ಅವೆರಡನ್ನು ಸೃಷ್ಟಿಸಲು ಆರು ಯುಗಗಳನ್ನು ತೆಗೆದುಕೊಂಡನೆಂದೂ, ಮೊದಲಿಗೆ ಭೂಮ್ಯಾಕಾಶಗಳೆರಡೂ ಒಟ್ಟಿಗಿದ್ದು ಅನಂತರ ಅವೆರಡನ್ನು ಬೇರ್ಪಡಿಸಲಾಯಿತೆಂದು ತಿಳಿಯುತ್ತದೆ. ಮೊದಲಿಗೆ ಭೂಮಿ ಜಲರೂಪದಲ್ಲಿತ್ತೆಂದು ಅದು ತಿಳಿಸುತ್ತದೆ.

ವಿಜ್ಞಾನವು ಸಮುದ್ರ ಸೃಷ್ಟಿಯ ಬಗ್ಗೆ ತನ್ನದೇ ಆದ ವಿವರಣೆ ನೀಡುತ್ತದೆ. '' ಸುಮಾರು ನಾಲ್ಕೂವರೆ ಶತಕೋಟಿ ವರ್ಷಗಳ ಹಿಂದೆ ಭೂಮಿ ಉರಿಯುವ ಅನಿಲದ ಚಂಡಿನಂತಿದ್ದು, ಆ ಚಂಡಿನ ಕಾವು ಆರುತ್ತಾ ಬಂದಂತೆ ಕೆಂಗಾವಿನ ಕಲ್ಲಿನಂತಾಯಿತು. ಕ್ರಮೇಣ ಭೂಮಿಯ ಸುತ್ತ ಮೋಡಗಳ ದಟ್ಟವಾದ ಪದರುಗಳು ರೂಪುಗೊಂಡವು. ಈ ಹೊಸ ಗ್ರಹದ ನೂರಕ್ಕೆ ನೂರರಷ್ಟು ನೀರು ಪೂರ್ತಿಯಾಗಿ ಆ ಮೋಡಗಳಲ್ಲಿ ಅಡಗಿತ್ತು. ಬಿಸಿಯಾದ ಆ ಗ್ರಹದ ಮೇಲೆ ಒಂದು ಹನಿ ನೀರು ಬಿದ್ದರೂ ಆವಿಯಾಗುತ್ತಿತ್ತು.''

'' ಆ ಮೋಡಗಳು ಎಷ್ಟು ದಟ್ಟವಾದ ಭೂಮಿಯನ್ನು ಆವರಿಸಿಕೊಂಡಿದ್ದವೆಂದರೆ, ಸೂರ್ಯನ ಬೆಳಕು ಆ ಮೋಡಗಳನ್ನು ಹಾದು ಭೂಮಿಗೆ ತಲುಪುತ್ತಿರಲಿಲ್ಲ. ಆಗ ಭೂಮಿ ಕಗ್ಗತ್ತಲೆಯಿಂದ ತುಂಬಿತ್ತು. ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿದ್ದ ಭೂಮಿಯ ಶಾಖವು ಸ್ವಲ್ಪ ಮಟ್ಟಿಗೆ ತಣ್ಣಗಾಗಲು ಸುಮಾರು 26,000 ವರ್ಷಗಳು ಬೇಕಾದವು. ಸೂರ್ಯನ ಕಿರಣಗಳು ಭೂಮಿಯನ್ನು ಮುಟ್ಟದಿದ್ದರಿಂದಲೇ ಬಿಸಿಯಾಗಿದ್ದ ಭೂಮಿ ಕ್ರಮೇಣ ತಣ್ಣಗಾಯಿತು ಎನ್ನಬಹುದು''.

'' ಕ್ರಮೇಣ ಭೂಮಿಯ ಮೇಲೆ ತಣ್ಣನೆಯ ವಾತಾವರಣ ರೂಪುಗೊಂಡಿತು. ಅನುಕೂಲಕರ ಹವಾಗುಣದ ಫಲವಾಗಿ ಧಾರಾಕಾರವಾಗಿ ಮಳೆ ಸುರಿಯಲಾರಂಭಿಸಿತು. ಒಂದಲ್ಲ ....ಎರಡಲ್ಲ ಲಕ್ಷಾಂತರ ವರ್ಷಗಳ ವರೆಗೆ ಈ ಮಳೆ ಎಡೆಬಿಡದೆ ಸುರಿಯಿತು. ಇದರಿಂದ ಭೂಮಿಯ ಮೇಲಿನ ದೊಡ್ಡ ದೊಡ್ಡ ಕಂದಕಗಳೂ, ಹಳ್ಳಗಳೂ ತುಂಬಿಕೊಂಡು 'ಸಮುದ್ರ' ಸೃಷ್ಟಿಯಾದವು.''

''ಒಂದೇ ಸಮನೆ ಜೋರಾಗಿ ಸುರಿಯುತ್ತಿದ್ದ ಮಳೆಯಿಂದ ಮಣ್ಣು ಬಂಡೆ ಲೋಹಗಳು ಕರಗಿ ಸಮುದ್ರಕ್ಕೆ ಜಾರಿ ಅದರ ನೀರು ಉಪ್ಪಾಗಲಾರಂಭಿಸಿತು. ಇದಕ್ಕೂ ಮೊದಲು ಸಮುದ್ರದ ನೀರು ಉಪ್ಪಾಗಿರಲಿಲ್ಲ. ಕಾಲಾಂತರದಲ್ಲಿ 'ಉಪ್ಪು ನೀರಿನ ಸಮುದ್ರಗಳು' ರೂಪುಗೊಂಡು, ಭೂಮಿ ಎಂದಿನಂತೆ ಸಾಮಾನ್ಯ ವಾತಾವರಣವನ್ನು ಪಡೆಯಿತು. ಸೂರ್ಯನ ಕಿರಣಗಳಿಗೆ ಅಡ್ಡಲಾಗಿದ್ದ ಮೋಡಗಳು ಸರಿದವು. ಭೂಮಿಯ ಮೇಲೆ ರಾತ್ರಿ - ಹಗಲುಗಳು ಪ್ರಾರಂಭವಾದವು. ಇಂತಹ ಸುಂದರ ವಾತಾವರಣದಿಂದ ಪ್ರಪಂಚದ ಪ್ರಥಮ ಜೀವಿಗಳು ಸಮುದ್ರದಲ್ಲಿಯೇ ಸೃಷ್ಟಿಯಾದವು. ಈ ರೀತಿಯ ಭೂಮಿಯ ಮೇಲೆ ಜೀವಿಗಳನ್ನು ಪರಿಚಯಿಸುವುದರಲ್ಲಿ ಹಾಗೂ ಭೂಮಿಯ ಉಷ್ಣತೆಯನ್ನು ಏರುಪೇರಾಗದಂತೆ ನಿಯಂತ್ರಿಸುವಲ್ಲಿ ಸಮುದ್ರಗಳು ಪ್ರಮುಖ ಪಾತ್ರವಹಿಸಿವೆ''.

ಮೇಲಿನ ವಿವರಣೆಗಳನ್ನೆಲ್ಲಾ ಸಮುದ್ರ ಸೃಷ್ಟಿಯ ಬಗ್ಗೆ ತಮ್ಮದೇ ಆದ ವಿಶಿಷ್ಟತೆಯನ್ನು ಕಾಪಾಡಿಕೊಂಡಿವೆ. ಜಾನಪದರ ದೃಷ್ಟಿಯಲ್ಲಿ ಸಮುದ್ರದ ಸೃಷ್ಟಿಯ ಹಿಂದೆ ದೈವೀಶಕ್ತಿಯ ಕೈವಾಡವಿರುವುದು ಕಂಡುಬಂದರೆ ವೈಜ್ಞಾನಿಕ ವಿವರಣೆಯಲ್ಲಿ ಕಾರಣದಲ್ಲಿ ಅದು ಸಹಜ ಸೃಷ್ಟಿಕಾರ್ಯವಾಗಿದೆ. ಅದೇನೇ ಇದ್ದರೂ ಸಮುದ್ರದ ಸೃಷ್ಟಿಯು ನೆಲದ ಮೇಲಿನ ಜೀವಿಗಳ ಹುಟ್ಟು - ಬೆಳವಣಿಗೆಗೆ ಮೂಲಕಾರಣ. ನೆಲದ ಮೇಲಿನ ಋತುಬದಲಾವಣೆಗೆ ಸಮುದ್ರವೇ ಮೂಲ. ಸಮುದ್ರದಿಂದ ಮಳೆ : ಮಳೆಯಿಂದ ಬೆಳೆ: ಬೆಳೆಯಿಂದ ಬದುಕು. ಆದ್ದರಿಂದ ನೆಲದ ಉಸಿರು ಸಮುದ್ರವಾಗುತ್ತದೆ. ಬಹಳಷ್ಟು ಜನರಿಗೆ ಸಮದ್ರದ ಮಹತ್ವದ ಅರಿವೇ ಇಲ್ಲವೆನ್ನಬಹುದು. ಒಂದು ದೃಷ್ಟಿಯಿಂದ ಸಮುದ್ರ ಸೃಷ್ಟಿಯ ಹಿಂದೆ ಯಾವ ಶಕ್ತಿಯ ಕೈವಾಡ ಬೇಕಾದರೂ ಇರಲಿ ಆದರೆ ಅದೊಂದು ಜೀವಿಗಳಿಗೆ ದೈವೀ ಶಕ್ತಿ ನೀಡಿದ ವಿಶಿಷ್ಟ ಕೊಡುಗೆ ಎನ್ನುವುದರಲ್ಲಿ ಅನುಮಾನವಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತಾಲ್ಲೋಕುವಾರು ಹರಡಿರುವ ಮೀನುಗಾರರು.

	ಜಾತಿ	ಮಂಗಳೂರು	ಉಡುಪಿ	ಕುಂದಾಪುರ	ಒಟ್ಟೂ
1.	ಮೊಗವೀರರು	90	80	51	221
		(45.0%)	(53.3%)	(34.0%)	(44.0%)
2.	ಖಾರ್ವಿಗಳು	22	-	31	35
		(11.0%)		(21.0%)	(7.0%)
3.	ಬೆಸ್ತರು	-	15	20	35
		-	(10.0%)	(13.10%)	(7.0%)
4.	ಭೋವಿಗಳು	18	-	-	18
		(9.0%)	-	-	(12.0%)
5.	ಮುಸ್ಲಿಮರು	14	09	19	42
	(ಮಾಪಿಳ್ಳೆಗಳು)	(7.0%)	(6.0%)	(13.0%)	(8.0%)
6.	ಕ್ರಿಶ್ಚಿಯನ್ನರು	30	27	18	75
		(15.0%)	(18.0%)	(12.0%)	(15.0%)
7.	ಪರಿಶಿಷ್ಟ ಜಾತಿ	20	17	09	46
		(10.0%)	(11.3%)	(6.0%)	(9.2%)
8.	ಇತರರು				
	ಶೆಟ್ಟಿಗಳು	6	-	-	6
		(3.0%)	-	-	(1.2%)
	ಜಿ. ಎಸ್.ಬಿ.	-	2	-	2
		-	(1.4%)	-	(0.4%)
	ಶೇರುಗಾರರು	-	-	02	2
		-	-	(1.0%)	(0.4%)
	ಒಟ್ಟು	200	150	150	500
		(100.0 %)	(100.0 %)	(100.0%)	(100.0%)

1. ಮೋಗವೀರರು : ಕರ್ನಾಟಕ ಕರಾವಳಿಯ ಮೀನುಗಾರಿಕೆಯಲ್ಲಿ ಹೆಸರುವಾಸಿಯಾದ ಜನಾಂಗವೆಂದರೆ ಮೋಗವೀರರು. ಬಹಳ ಹಿಂದಿನಿಂದಲೂ ಇವರ ಬದುಕಿನೆಡೆಗೆ ಗಮನವಿಟ್ಟ ಸಮಾಜ ಶಾಸ್ತ್ರಜ್ಞರು ಆಳ ಆಧ್ಯಯನದ ಮೂಲಕ ಅವರ ಬದುಕಿನ ರೂಪರೇಖೆಗಳನ್ನು ಬಹುಮುಖವಾಗಿ ಪರಿಚಯಿಸಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಗೆ ತನ್ನ ಪ್ರವಾಸದ ಸಂದರ್ಭದಲ್ಲಿ ಭೇಟಿ ಕೊಟ್ಟ ಫ್ರಾನ್ಸಿಸ್ ಬುಚನ್ ಎಂಬುವನು '' ಮೋಗವೀರರು ತುಳು ಮಾತನಾಡುವ ಜನರಾಗಿದ್ದು ಮಲಯಾಳಿ ಮಾತನಾಡುವರ ಮುಖದವರನ್ನು ಹೋಲುತ್ತಾರೆ. ಆದರೆ ಅವರ ನಡುವೆ ಯಾವುದೇ ಸಂಬಂಧವಿಲ್ಲ'' ಎಂದು ತಿಳಿಸಿದ್ದಾನೆ.

ಇ. ಥರ್ಸ್ಟನ್ ಒಂಬ ಸಮಾಜಶಾಸ್ತ್ರಜ್ಞ ''ದಕ್ಷಿಣ ಕನ್ನಡ ಜಿಲ್ಲೆಯ ಮೊಗೇರರು ತುಳು ಮಾತಾಡುವವರಾಗಿದ್ದು ಅವರಲ್ಲಿ ಹೆಚ್ಚಿನವರು ಅಳಿಯ ಸಂತಾನ ಪದ್ಧತಿಯನ್ನು ಅನುಸರಿಸುವವರಾಗಿದ್ದಾರೆ. ಆದರೆ ಜಿಲ್ಲೆಯ ಉತ್ತರ ಭಾಗದಲ್ಲಿ ವಾಸಿಸುವವರು ಕನ್ನಡ ಮಾತೃಭಾಷೆಯವರು

ಮತ್ತು ಮಕ್ಕಳ ಸಂತಾನ ಪದ್ಧತಿಯನ್ನು ಅನುಸರಿಸುವವರು '' ಎಂದಿದ್ದಾನೆ. ಮುಂದುವರಿದು '' ಮೊಗೇರರು ಮೀನುಗಾರಿಕೆ ನಡೆಸುತ್ತಿರುವ ವಸಾಹತುಗಳನ್ನು 'ಪಟ್ಟಣ' ಎಂದು ಕರೆಯುತ್ತಾರೆ. ಈ ಕಾರಣದಿಂದಾಗಿಯೇ ಪಟ್ಟಣದವ ಎಂಬ ಹೆಸರು ಅವರ ಜಾತಿನಾಮದ ಪರ್ಯಾಯ ನಾಮವಾಗಿಯೂ ರೂಢಿಯಲ್ಲಿದೆ. ಮದ್ರಾಸಿನ ತಮಿಳು ಮೀನುಗಾರರು ಸಹ ಪಟ್ಟಣದಲ್ಲಿ ವಾಸಿಸುವುದರಿಂದ ಅವರನ್ನು ಸಹ ಪಟ್ಟಣದವರು ಎನ್ನುತ್ತಾರೆ. ಬಂಗಾಲ ಉಪಸಾಗರ ತೀರದಲ್ಲಿ ಮಚಲೀ ಪಟ್ಟಣವೆಂಬ ಪಟ್ಟಣವೇ ಇರುವುದನ್ನು ಇಲ್ಲಿ ಗಮನಿಸಬಹುದು. ಮಚಲೀ ಪಟ್ಟಣ ಎಂದರೆ ಮೀನುಗಾರಿಕೆಯ ಮೀನುಗಾರರ ಪಟ್ಟಣ ಎಂದೇ ಅರ್ಥ'' .

ಪ್ರತಿ ವಸಾಹತಿಗೂ, ಕಡಿಮೆಯೆಂದರೆ ಇಬ್ಬರು ಗುರಿಕಾರರಾದರೂ ಇರಲೇಬೇಕು. ಕೆಲವು ವಸಾಹತುಗಳಲ್ಲಿ ನಾಲ್ಕು ಮಂದಿ ಇರುವುದೂ ಇದೆ. ಗುರಿಕಾರರು ಅವರ ಕರ್ತವ್ಯಧಿಕಾರದ ಸಂಕೇತವಾಗಿ ಎಡಗೈಯಲ್ಲಿ ಬಂಗಾರದ ಬಳೆಯೊಂದನ್ನು ಧರಿಸುವ ಪದ್ಧತಿಯಿದೆ. ಈ ಅಧಿಕಾರವು ಅಳಿಯ ಸಂತಾನ ಪದ್ಧತಿಯ ನಿಯಮಾನುಸಾರವಾಗಿ ಮಾವನಿಂದ ಅಳಿಯನಿಗೆ ಸಲ್ಲುತ್ತದೆ.

ಮೊಗವೀರರಿಗೆ 'ಮರಕಾಲರು' ಎಂಬ ಹೆಸರು ಹೇಗೆ ಬಂದಿತೆಂಬುದರ ಬಗ್ಗೆ ಅವರು " The Ordinary Caste title of the Mogers is Marakalgu in the Kundapur Taluk, the title naiekar is prefered to Marakaleru". ಎಂದಿದ್ದಾರೆ.

ಜಿ. ಸ್ಟರಕ್ ಅವರು ಮದ್ರಾಸ್ ಡಿಸ್ಟ್ರಿಕ್ಟ್ ಮ್ಯಾನುಯಲ್ ಸೌತ್ ಕೆನರ ಎಂಬ ಗ್ರಂಥದಲ್ಲಿ '' ಮೊಗೇರರು ದೀರ್ಘ ಸುಂದರಕಾಯರು, ಪ್ರಾಮಾಣಿಕರು, ಮತ್ತು ಧೈರ್ಯಶಾಲಿಗಳು, ಅವರು ವೈಷ್ಣವರಾಗಿದ್ದು ತಿರುಪತಿ ವೆಂಕಟರಮಣ ದೇವರನ್ನು ವಿಶೇಷ ಭಕ್ತಿಯಿಂದ ಪೂಜಿಸುತ್ತಾರೆ. ಪ್ರತಿವರ್ಷವೂ ಹೊಸಕ್ಕಿಯೂಟದ ಸಮಾರಂಭಕ್ಕಿಂತ ಮೊದಲು ತಿರುಪತಿ ದೇವರಿಗೆ ಕಾಣಿಕೆ ಸಲ್ಲಿಸುತ್ತಾರೆ. ಆದರೆ ಅದರ ಮುಖ್ಯ ಕುಲದೇವತೆ ಮಾಸ್ತಮ್ಮ '' ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಈ ಅಭಿಪ್ರಾಯಗಳನ್ನೆಲ್ಲಾ ವೆಂಕಟರಾಜ ಪುಣಿಂಚತ್ತಾಯ ಅವರು ತಮ್ಮ ''ಮೊಗವೀರ ಸಂಸ್ಕೃತಿ'' ಯೆಂಬ ಗ್ರಂಥದಲ್ಲಿ ಸಂಗ್ರಹಿಸಿ ಅವುಗಳಲ್ಲಿ ಕಾಣುವ ತಪ್ಪುಗಳನ್ನು ಸರಿಪಡಿಸಲು ಪ್ರಯತ್ನಿಸಿದ್ದಾರೆ. ಅವರು ಬುಚನ್, ಮೊಗವೀರರು, ತುಳು ಮಾತನಾಡುವರು ಎಂದು ಹೇಳುವುದನ್ನು ಗಮನಿಸಿ ಕನ್ನಡ ಮಾತೃಭಾಷೆಯನ್ನಾಗಿಸಿಕೊಂಡವರನ್ನು ಅವನು ಉಲ್ಲೇಖಿಸಿಲ್ಲ ಎಂದು ತಿಳಿಸಿದ್ದಾರೆ. ಥರ್ಸ್ಟನ '' ಜಿಲ್ಲೆಯ ಉತ್ತರ ಭಾಗದಲ್ಲಿ ವಾಸಿಸುವವರು ಕನ್ನಡ ಮಾತೃಭಾಷೆಯವರು ಮತ್ತು ಮಕ್ಕಳ ಸಂತಾನ ಪದ್ಧತಿಯನ್ನು ಅನುಸರಿಸುವವರು ಎಂಬ ಅಭಿಪ್ರಾಯಕ್ಕೆ ಪ್ರತಿಯಾಗಿ ಕನ್ನಡ ಮಾತಾಡುವವರೆಲ್ಲರೂ ಮಕ್ಕಳ ಸಂತಾನ ಪದ್ಧತಿಯ ಅವಲಂಭಿಗಳಲ್ಲಿ ಅವರಲ್ಲಿ ಅನೇಕರು ಅಳಿಯ ಸಂತಾನ ಪದ್ಧತಿಯ ಪರಂಪರೆಯವರು ಇದ್ದಾರೆ. '' ಎಂದಿದ್ದಾರೆ. ಬುಚನ್ ಎಂಬ ವಿದ್ವಾಂಸ ಮೊಗೇರರು ಮಲಯಾಳ ದೇಶದ ಮಕ್ವನ್ ಜಾತಿಯವರಂತೆ ಇರುವವರು ಎಂದು ಹೇಳುತ್ತಾನೆ. ಆದರೆ ಶಾರೀರಿಕವಾಗಿ ಆಗಲೀ, ಸಾಂಸ್ಕೃಕವಾಗಿ ಆಗಲೀ ಈ ಎರಡೂ ಜನಾಂಗಗಳಲ್ಲಿ ಹೋಲಿಕೆ ಕಾಣುವುದಿಲ್ಲ. ಇವುಗಳನ್ನೆಲ್ಲಾ ಗಮನಿಸಿದರೆ ಒಂದು ಜನಾಂಗದ ಬಗ್ಗೆ ಅಧ್ಯಯನ ಮಾಡಿ ನೀಡುವ ಉಲ್ಲೇಖಗಳು ಸರ್ವಕಾಲಿಕವಾಗಿ ನಿಲ್ಲುವುದಿಲ್ಲ. ಬದಲಾವಣೆಯ ಪರಿಸರಕ್ಕೆ ಒಳಗಾಗುವ ಜನಾಂಗವು ತನ್ನ ಪ್ರಾಚೀನ ಸಂಸ್ಕೃತಿಯನ್ನು ರಕ್ಷಿಸಿಕೊಳ್ಳಲು ಹೆಣಗಿದರು. ಅದು ಬರುವ ತಲೆಮಾರಿನ ಸಂಸ್ಕೃತಿಗೆ ತಲೆಬಾಗಲೇ ಬೇಕಾಗುತ್ತದೆ. ಆದ್ದರಿಂದ ಯಾವುದೇ ಜನಾಂಗಿಕ ಅಧ್ಯಯನವೂ ಪರಿಪೂರ್ಣವಾದ ಸರ್ವಕಾಲಿಕ ಮಾಹಿತಿಗಳನ್ನು ನೀಡಲು ಸಾಧ್ಯವಿಲ್ಲ. ಈ ದೃಷ್ಟಿಯಿಂದ ಪ್ರತಿಯೊಂದು ಜನಾಂಗಿಕ ಅಧ್ಯಯನವು ಆಯಾಕಾಲದ ಚೌಕಟ್ಟಿನೊಳಗಿನ ಚಿತ್ರಣವೆಂಬುದನ್ನು ತಿಳಿಯಬೇಕಾಗುತ್ತದೆ.

ಹೀಗೆ ವಿದೇಶಿಗರ ಗಮನ ಸೆಳೆದ ಮೀನುಗಾರರಿಗೆ ' ಮೊಗವೀರ ' ಎಂಬ ಹೆಸರು ಹೇಗೆ ಬಂದಿತೆಂಬುದನ್ನು ವೆಂಕಟರಾಜ ಪುಣಂಚತ್ತಾಯ ಅವರು '' ಮೊಗವೀರ ಎಂಬುದು ಮೊಗೇರ ಪದದ ಪರಿಷ್ಕೃತ ನಾಮ. ಮೊಗೇರ ಪದದ ನಿಷ್ಪತ್ತಿಯ ಬಗ್ಗೆ ಅನೇಕ ಊಹಾಪೋಹಗಳಿಗೆ 'ಮೊ' ಅಂದರೆ ನೀರು 'ಗೇರ್' ಎಂದರೆ ಗೆದ್ದವ ಮೊಗೇರ ಅಂತ ಒಬ್ಬರು ಮೊಗವೀರರು ಹೇಳಿದರೆ ''ಮರಿಗಿ'' ಅತಿ ಪ್ರಾಚೀನವಾದ ಪುಟ್ಟ ದೋಣಿ ಮರಗಿಯವರೇ ಮೊಗೇರರು ಎಂದು ಇನ್ನು ಕೆಲವರು ಹೇಳುತ್ತಾರೆ. 'ಮೊಗೆ' ಎಂಬುದಕ್ಕೆ ಕಿಟ್ಟಲ್ ಕೋಶದಲ್ಲಿ " A small earthern Vessel for lading out. ಘಟಭೇದ'' ಎಂಬ ಅರ್ಥ ಕೊಡಲಾಗಿದೆ. ಬುಚನನು ತನ್ನ ಗ್ರಂಥದಲ್ಲಿ

ಮೊಗೇರರನ್ನು 'ಮೊಗೆಯರ್' ಎಂದು ಕರೆದಿರುವನು. ಮಲಯಾಳದಲ್ಲಿ 'ಮುಕವರ್' (ಮುಕಯ್ಯನ್ನವರ್) ಎಂಬ ಪದಕ್ಕೆ ನೀರನ್ನು ಮೊಗೆದು ತೆಗೆಯುವರು ಎಂಬ ಅರ್ಥವಿದೆ. ಮೊಗೆ ಎಂಬ ಮೂಲಧಾತು ಕನ್ನಡದಲ್ಲೂ ಅದೇ ಅರ್ಥದಲ್ಲಿ ಬಳಕೆಯಲ್ಲಿದೆ. ಅಂತೂ ನೀರನ್ನು ಮೊಗಿಯುವವರು, ನೀರನ್ನು ಮೊಗೆದು ತೆಗೆಯುವವರು ಎಂಬ ಅರ್ಥದ ವ್ಯಾಪ್ತಿಯಲ್ಲಿ ಮೊಗೇರ ಪದವು ಹುಟ್ಟಿರಬೇಕು'' ಎಂದು ಅವರು ತಿಳಿಸಿದ್ದಾರೆ.

ಗೋವಿಂದ ಪೈಯವರು ಹರಿವಂಶದ ವಿಷ್ಣುಪರ್ವದಲ್ಲಿ (ಕ್ರಿ.ಶ. 200-400) 'ಮುದ್ಗರ ಎಂಬ ಪದವಿರುವುದನ್ನು ಪರಿಶೀಲಿಸಿ ಈ ಮುದ್ಗರರೇ ಮೊಗೇರರಾಗಿರಬೇಕು ಎಂದು ಊಹಿಸಿರುವುದನ್ನು ಡಾ: ಪಿ. ಗುರುರಾಜ ಭಟ್ಟರು ಅನುಮೋದಿಸಿದ್ದಾರೆ.

ಈ ಎಲ್ಲಾ ವ್ಯಾಖ್ಯಾನಗಳನ್ನು ಗಮನಿಸಿ ನೀರನ್ನು ಮೊಗೆದು ಮೀನು ಹಿಡಿಯುವ ಕಾರಣದಿಂದ ಮೋಗವೀರರಾದರು ಎಂಬ ವೆಂಕಟರಾಜ ಪುಣಿಂಚತ್ತಾಯರ ಅಂತಿಮ ವ್ಯಾಖ್ಯಾನ ಅಷ್ಟೊಂದು ಸಮಂಜಸವೆನಿಸದು. ಏಕೆಂದರೆ ಕರಾವಳಿಯ ಮೀನುಗಾರಿಕೆಯಲ್ಲಿ ನೀರು ಮೊಗೆವ ಕೆಲಸವೇ ಇರುವುದಿಲ್ಲ. ಅಲ್ಲದೆ ಸಮುದ್ರದಲ್ಲಿ ನೀರು ಮೊಗೆಯುವದು ಅಸಾಧ್ಯವೇ ಆಗಿದೆ. ಹೀಗಿರುವಾಗ ನೀರು ಮೊಗೆದು ಮೀನು ಹಿಡಿಯುವ ಕಾರಣದಿಂದ ಮೊಗವೀರರಾದರೆಂಬ ಹೇಳಿಕೆ ಸರಿಯೆನಿಸದು.

ಮೇಲಿನ ವಿವರಣೆಗಳಲ್ಲಿ '' ಮರಿಗಿ ಅತಿ ಪ್ರಾಚೀನವಾದ ಪುಟ್ಟ ದೋಣಿ ಮರಿಗಿಯವರೇ ಮೊಗೇರರು'' ಎಂದು ಅಭಿಪ್ರಾಯ ಪಟ್ಟವರ ಮಾತಲ್ಲಿ ಸ್ವಲ್ಪ ಮಟ್ಟಿನ ಸತ್ಯ ಕಾಣಿಸುತ್ತದೆ. ಹಿಂದೆ ನಾಡದೋಣಿಗಳಿಂದ ಒಬ್ಬಿಬ್ಬರು ಮಾತ್ರ ಮೀನು ಹಿಡಿಯಲು ಹೋಗುತ್ತಿದ್ದರು. ಆ ಸಂದರ್ಭದಲ್ಲಿ ಅವರು ಎದುರಾಗುವ ರಾಕ್ಷಸಾಕಾರದ ಅಲೆಗಳ ವಿರುದ್ಧ, ಎದ್ದ ಬಿರುಗಾಳಿಯ ವಿರುದ್ಧ ಹೋರಾಡುವುದು ಅನಿವಾರ್ಯವಾಗಿತ್ತು. ಕೆಲವು ವೇಳೆ ಕಡಲ್ಗಳ್ಳರ ಜೊತೆ ಹೊರಾಟಕ್ಕಿಳಿಯಲೇ ಬೇಕಾಗಿತ್ತು, ಹೀಗೆ ಪರಾಕ್ರಮವನ್ನು ಪ್ರದರ್ಶಿಸಿ ಜನರಿಗೆ 'ಮೊಗವೀರ' ರೆಂದು ಹೆಸರು ಬಂದಿರಬಹುದು. ಅವರು ವೀರರೆಂಬುದಕ್ಕೆ ತುಳುನಾಡಿನ ವೀರ ಮಹಿಳೆ ರಾಣಿ ಅಬ್ಬಕ್ಕ ದೇವಿ ತನ್ನ ನೌಕಾಪಡೆಯಲ್ಲಿ ಬೆಸ್ತರನ್ನು ಸೇರಿಸಿಕೊಳ್ಳುತ್ತಿದ್ದ ನಿದರ್ಶನ ಸಾಕ್ಷಿಯಾಗಿದೆ.

ಕಡಲ ಸಾಹಸಕ್ಕೆ ಹೆಸರಾದ ಮೊಗವೀರರನ್ನು ತುಳುನಾಡಿನ ಪ್ರಾಚೀನ ಜನಾಂಗವೆಂದು ನಂಬಲಾಗಿದೆ. ಅಂಕಿ ಅಂಶದ ಪ್ರಕಾರ ಜಿಲ್ಲೆಯಲ್ಲಿ ಸುಮಾರು 16,000 ಮೊಗವೀರರಿದ್ದಾರೆಂದು ತಿಳಿದು ಬರುತ್ತದೆ. ಕಡಲ ತೀರದ ಹುಲ್ಲಿನ ಗುಡಿಸಲು ವಾಸಿಸುತಿದ್ದವರು ಇಂದು ಮತ್ಸ್ಯೋದ್ಯಮಕ್ಕೆ ಮಹತ್ವ ಸಿಕ್ಕ ಕಾರಣದಿಂದ ಅವರ ಆರ್ಥಿಕ ಮಟ್ಟ ಸುಧಾರಿಸಿ ಹೆಂಚಿನ ಮತ್ತು ಆರ್.ಸಿ. ಸಿ. ಮನೆಗಳಲ್ಲಿ ವಾಸಿಸುವಂತಾಗಿದೆ. ಉದ್ಯೋಗಕ್ಕೆ ನಿರತರಾಗಿರುವ ಮೊಗವೀರರ ಮನೆಯ ಮುಂದೆ ಮೀನು ಹಿಡಿವ ಬಲೆ, ದೋಣಿಯ ಹುಟ್ಟು ಇರುವುದು ಸಾಮಾನ್ಯ ದೃಶ್ಯವಾಗಿದೆ. ಉದ್ಯೋಗಕ್ಕೆ ಹೋಗಿ ಬಂದ ನಂತರ ಬಲೆಯನ್ನು ಮನೆಯ ಮುಂದಿನ ಪಕಾಸಿಗೆ ನೇತು ಹಾಕಿರುತ್ತಾರೆ. ಪ್ರತಿ ಮನೆಗೂ ಒಂದೊಂದು ಬಾವಿ ಇದ್ದು ಅದರ ಮೇಲೆ ಹಳೆಯ ಬಲೆಯನ್ನು ಹೊದಿಸಿರುತ್ತಾರೆ. ಏಕೆಂದರೆ ಅವರ ಮನೆಯ ಸುತ್ತಮುತ್ತ ಜಲಚರ ಪ್ರಾಣಿಗಳನ್ನು ಒಣಗಿಸುವುದು ಮತ್ತು ಪ್ರತಿದಿನ ಅಡಿಗೆಗೆ ಮೀನು ಕೊಚ್ಚುವುದು ಸಾಮಾನ್ಯವಾದದ್ದರಿಂದ ಕಾಗೆ, ಹದ್ದುಗಳು ಅವುಗಳನ್ನು ತಂದು ಬಾವಿಯಲ್ಲಿ ಹಾಕಬಹುದೆಂಬ ಕಾರಣದಿಂದ ಬಾವಿಗೆ ಬಲೆ ಹೊದಿಸಲಾಗುತ್ತದೆ. ಮನೆಯ ಎದುರು ತುಳಸಿಕಟ್ಟೆ, ಅಕ್ಕಪಕ್ಕ ತೆಂಗಿನ ಮರವಿರುವುದು ಸಾಮಾನ್ಯ.

ಹಿಂದೆ ಮೊಗವೀರರು ಹೆಣ್ಜೆಪ್ಪಿನ ಮತ್ತು ಮತ್ತಿ ಮರದ ಕತ್ತೆಯ ರಸದಲ್ಲಿ ಬೇಯಿಸಿ ಒಣಗಿಸಿದ ಒಂದು ವಿಶಿಷ್ಟ ಅಂಗಿಯನ್ನು ಧರಿಸುತ್ತಿದ್ದು ಅದನ್ನು ತುಳುವಿನಲ್ಲಿ '' ಷಣ್ವದ ಅಂಗಿ'' ಎಂದು ಕರೆಯುತ್ತಿದ್ದರು. ಅದು ತುಂಬ ದಪ್ಪವಾಗಿದ್ದು ಬಹುಕಾಲ ಬಾಳಿಕೆ ಬರುತ್ತಿತ್ತೆಂದು ವೆಂಕಟರಾಜ ಪುಣಂಚತ್ತಾಯ ಅವರು ತಿಳಿಸಿದ್ದಾರೆ. ಇಂದು ಗಂಡಸರು ಮೀನು ಹಿಡಿಯುವಾಗ ಚೆಡ್ಡಿ ಮಾತ್ರ ತೊಟ್ಟಿರುತ್ತಾರೆ. ಉಳಿದ ಸಂದರ್ಭಗಳಲ್ಲಿ ಪ್ಯಾಂಟು ಶರ್ಟು ತೊಡುತ್ತಾರೆ. ಹೆಂಗಸರು ಸೀರೆ ಕುಪ್ಪಸ ಧರಿಸಿ ಬಳೆ, ಓಲೆ, ಮೂಗತಿ ಮೊದಲಾದ ಆಭರಣಗಳನ್ನು ತೊಟ್ಟಿರುತ್ತಾರೆ.

ರಾಗಿಗಂಜೀ, ಕುಸುಬಲಕ್ಕಿ ಅನ್ನ ಮತ್ತು ಮೀನಿನ ಸಾರು ಮೊಗವೀರರ ಪ್ರಮುಖ ಆಹಾರ, ಅವರು ಪರ್ಸಿಯನ ದೋಣಿಯಲ್ಲಿ ಮೀನು ಹಿಡಿಯಲು ಹೋದಾಗ ಮಸಾಲೆ ಅರೆವ ಕಲ್ಲು, ಸ್ಟೌವ್ ಮತ್ತು ಪಾತ್ರೆಗಳನ್ನು ಮರೆಯದೇ ಕೊಂಡೊಯ್ಯುತ್ತಾರೆ. ಮೀನು ಹಿಡಿದ ಗುಂಪಿನಲ್ಲಿ ಒಬ್ಬಾತ ಅಡಿಗೆ ಮಾಡುವವನಿರುತ್ತಾನೆ. ಅವನು ಮೀನಿನ ಹುಳಿ ಮಾಡಿ ಕುಸುಬಲಕ್ಕಿ ಅನ್ನ ಬೇಯಿಸುತ್ತಾನೆ. ಪಾತಿ ದೋಣಿ ಯಲ್ಲಿ ಒಬ್ಬಿಬ್ಬರು ಮಾತ್ರ ಹೋಗುವುದರಿಂದ ಅವರು ಅವಲಕ್ಕಿ, ಬೆಲ್ಲ, ಇಲ್ಲವೇ ಇನ್ನಿತರ ಆಹಾರವನ್ನು ತೆಗೆದು ಕೊಂಡು ಹೋಗುತ್ತಾರೆ. ಜೊತೆಗೆ ಸಿಹಿ ನೀರನ್ನು ತೆಗೆದುಕೊಂಡು ಹೋಗುವುದನ್ನು ಯಾವ ದೋಣಿಯವರು ಸಹ ಮರೆಯುವದಿಲ್ಲ. ಏಕೆಂದರೆ ಸಮುದ್ರದಲ್ಲಿರುವಾಗ ಆಹಾರಕ್ಕಿಂತ ಸಿಹಿ ನೀರಿಗೆ ಹೆಚ್ಚಿನ ಮಹತ್ವವಿರುತ್ತದೆ. ಮನೆಗೆ ಹಿಂದಿರುಗಿದ ಮೊಗವೀರರು ರಾಗೀ ಗಂಜಿಯ ಜೊತೆಗೆ ಮೀನೂಟ ಮಾಡುತ್ತಾರೆ. ಇದಕ್ಕೆ ' ಗಂಜಿಯಾಟ' ವೆಂದು ಕರೆಯುತ್ತಾರೆ.

ಮೊಗವೀರ ಸಮಾಜದ ಒಳಾಡಳಿತ ವ್ಯವಸ್ಥೆ ಉಳಿದ ಸಮಾಜಗಳಿಗಿಂತ ಭಿನ್ನ ಹಾಗೂ ವಿಶಿಷ್ಟವಾದುದು. ಈ ಕಾರಣದಿಂದ ವಿದೇಶಿಯರು ಅದಕ್ಕೆ ಆಕರ್ಷಿತರಾದದ್ದು. ಅವರ ಸಮಾಜದ ಆಡಳಿತಾಧಿಕಾರಿಗೆ ' ಗುರಿಕಾರ' 'ಬುದ್ವಂತ' ಎಂದು ಕರೆಯುತ್ತಾರೆ. ಈ ಗುರಿಕಾರರು ಅಂಬುಲೆ (ಒಂಟಿ) ಎಂಬ ವಿಶೇಷ ಆಭರಣವನ್ನು ಕಿವಿಗೆ ಧರಿಸುತ್ತಾರೆ. ಆಡಳಿತದ ಅನುಕೂಲತೆಗೆ ಅವರು ತಮ್ಮ ಊರು ಅಥವಾ ಗ್ರಾಮವನ್ನು ''ಪಟ್ಣ'' ಎಂದು ಕರೆದು ಪ್ರತಿಯೊಂದು ಪಟ್ಣಕ್ಕೆ, ಜನಸಂಖ್ಯೆಯನ್ನನುಸರಿಸಿ ನಾಲ್ಕರಿಂದ ಆರು ಗುರಿಕಾರರು ಆಡಳಿತ ನೋಡಿಕೊಳ್ಳಲು ನೇಮಕಗೊಂಡಿರುತ್ತಾರೆ. ನ್ಯಾಯತೀರ್ಮಾನದ ಹಂತಗಳನ್ನು ಅವರು 1. ಒಂದು ಪಟ್ಣದ ತೀರ್ಮಾನ 2. ನಾಲ್ಕು ಪಟ್ಣದ ತೀರ್ಮಾನ 3. ಏಳು ಪಟ್ಣದ ತೀರ್ಮಾನ 4. ಹದಿನಾಲ್ಕು ಪಟ್ಣದ ತೀರ್ಮಾನವೆಂದು ನಾಲ್ಕು ಭಾಗಗಳನ್ನಾಗಿಸಿಕೊಂಡಿದ್ದಾರೆ. ಒಂದು ಪಟ್ಣದ ತೀರ್ಮಾನದಲ್ಲಿ ಅಪರಾಧಿಗೆ ನ್ಯಾಯ ದೊರಕದೇ ಇದ್ದರೆ. ಅವನು ಹಂತ ಹಂತವಾಗಿ ಹದಿನಾಲ್ಕು ಪಟ್ಣದ ತೀರ್ಮಾನದವರೆಗೂ ಹೋಗಬಹುದು, ಆದರೆ ಕೊನೆಯ ಹಂತದ ತೀರ್ಮಾನವನ್ನು ಅವನು ಮೀರಿ ನಡೆಯುವಂತಿಲ್ಲ. ಕೊನೆ ಹಂತದ ತೀರ್ಮಾನಕ್ಕೆ ಬೆಲೆಕೊಡದವರನ್ನು 'ಜಾತಿಕಟ್ಟ್' ನ ಶಿಕ್ಷೆ ವಿಧಿಸುತ್ತಾರೆ. ಆಗ ಅವನೊಡನೆ ಮೊಗವೀರರು ಯಾವ ಸಂಬಂಧವನ್ನು ಇಟ್ಟುಕೊಳ್ಳುವುದಿಲ್ಲ. ಅವರಲ್ಲಿ ದೊಡ್ಡ ತಪ್ಪಿಗೆ ನೀಡುವ ಘೋರ ಶಿಕ್ಷೆ ಇದಾಗಿದೆ. ಸಾಮಾನ್ಯ ಶಿಕ್ಷೆ ಎಂದರೆ ದಂಡ ವಿಧಿಸುವುದು. ಇಂದಿಗೂ ಮೊಗವೀರರು ಬ್ರಹ್ಮಾವರದ ಬಳಿ ಇರುವ ಬಾರ್ಕೂರು ಹೋಬಳಿಯ ಬೆಣ್ಣೆ ರುದ್ರ ದೇವಸ್ಥಾನದಲ್ಲಿನ ಹದಿನಾಲ್ಕು ಪಟ್ಣದ ತೀರ್ಮಾನಕ್ಕೆ ಬೆಲೆಕೊಟ್ಟು ನಡೆಯುತ್ತಾರೆ. ಹೀಗಿದ್ದರೂ ಹಿಂದಿನವರಷ್ಟು ಈಗಿನವರು 'ಬುದ್ವಂತ'ನ ಮಾತಿಗೆ ತಲೆಬಾಗುವುದು ಕಡಿಮೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೊಗವೀರರ ಮೂರು ಹೋಬಳಿಗಳಿವೆ. ಅವುಗಳೆಂದರೆ ಮಂಗಳೂರು ಹೋಬಳಿ, ಬಾರ್ಕೂರು ಹೋಬಳಿ ಮತ್ತು ಬಗ್ವಾಡಿ ಹೋಬಳಿಗಳು ಪ್ರತಿಯೊಂದು ಹೋಬಳಿಯ ನ್ಯಾಯ ತೀರ್ಮಾನವು ಆಯಾ ಹೋಬಳಿಯ ದೇವಸ್ಥಾನದಲ್ಲಿ ನಡೆಯುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯ ಮೊಗವೀರರ ಮೇಲೆ ತುಳುಭಾಷೆಯ ಪ್ರಭಾವ ಹೆಚ್ಚಾಗಿರುವುದರಿಂದ ಉಳ್ಳಾಲದಿಂದ ಕಲ್ಯಾಣಪುರದವರೆಗಿನ ಮೊಗವೀರರರು ತುಳುವನ್ನು ತಮ್ಮ ಮಾತೃಭಾಷೆಯನ್ನಾಗಿಸಿ ಕೊಂಡಿದ್ದಾರೆ. ಆದರೂ ಅವರಲ್ಲಿ ತುಳು ಮಾತನಾಡುವವರ ಸಂಖ್ಯೆ ಹೆಚ್ಚಾಗಿದೆ. ಆದ್ದರಿಂದಲೇ ತುಳು ಮಾತನಾಡುವವರ ಸಂಖ್ಯೆ ಹೆಚ್ಚಾಗಿದೆ. ಆದ್ದರಿಂದಲೇ ತುಳು ಪಾಡ್ದನಗಳಲೆಲ್ಲಾ ಮೊಗವೀರರ ಬಗ್ಗೆ ಪ್ರಸ್ತಾಪವಿದೆ.

ಮೊಗವೀರರು ಹಿಂದೆ ನಾವಿಕರಾಗಿ, ಮೀನುಗಾರರಾಗಿ, ಬಂದರುಗಳಲ್ಲಿ ಸಾಮಾನು ಸಾಗಿಸುವರಾಗಿ, ಪಲ್ಲಕ್ಕಿ ಹೊರುವವರಾಗಿ ಕೆಲಸ ಮಾಡುತ್ತಿದ್ದರೆ, ಕೆಲವರು ಕ್ಷೌರಿಕ ವೃತ್ತಿಯನ್ನು ಕೈಗೊಂಡವರಾಗಿದ್ದರೆಂದು ಡಾ: ಎನ್.ಕೆ. ಕಡೆತೋಟದ ಅವರು ತಿಳಿಸಿದ್ದಾರೆ. ಮೀನುಗಾರಿಕೆಯ ವಿವರ ನೀಡುವಾಗ ಅವರ ಉಪ ಕಸುಬಿನ ವಿವರ ಅತಿ ಅಶ್ಯವಕವೆನಿಸುತ್ತದೆ. ಏಕೆಂದರೆ ಮೀನುಗಾರಿಕೆ ಅವರ ಪೂರ್ಣಾವಧಿ ಉದ್ಯೋಗವಾಗದು. ವರ್ಷದಲ್ಲಿ ಮೂರು ತಿಂಗಳು ಅವರು ಸಮುದ್ರದ ಸಂಬಂದದಿಂದ ದೂರವಿಬೇಕಾಗುತ್ತದೆ. ಆ ಸಂದರ್ಭದಲ್ಲಿ ಅವರು ವ್ಯವಸಾಯ ಮಾಡುವುವ, ದೋಣಿ ರಿಪೇರಿ, ಬಲೆ ಹೆಣಿಯುವ ಮೊದಲಾದ ಉಪಕಸುಬುಗಳನ್ನು

ಮಾಡುತ್ತಾರೆ. ಹಿಂದೆ ಇವರು ಮರಕಡಿಯುವ ಮತ್ತು ಬಿಲ್ಲು ಹಿಡಿದು ಹೋರಾಡುವ ಕಸುಬಿನಲ್ಲಿ ನಿರತರಾಗಿದ್ದು ತಿಳಿದುಬರುತ್ತದೆ. 'ಕೋಟಿ ಚೆನ್ನಯ್ಯ' ಪಾಡ್ದನದಲ್ಲಿ ಒಂದು ಕಡೆ '' ಬಿರುಪತೆ ಮುರುಗು ಆಯ ಬರೊಡಾಂಡೆ'' (ಬಿಲ್ಲು ಹಿಡಿದ ಮೊಗೇರ ಅವನು ಬರಬೇಕಾಯಿತು) ಎಂಬ ಪ್ರಸ್ತಾಪವಿದೆ. ಇದರಿಂದ ಮೊಗವೀರರು ಒಂದು ಕಾಲದಲ್ಲಿ ಬಿಲ್ಲು ಹಿಡಿದು ಹೋರಾಡಿರಬಹುದೆಂದು ಊಹಿಸಲವಕಾಶವಿದೆ. ಪಂಜುರ್ಲಿ ಪಾಡ್ದನದಲ್ಲಿ ಬಲ್ಲಾಳರು ಮರಗಳನ್ನು ಸಾಗಿಸಲು ಮರಕಲರನ್ನು ನೇಮಿಸುತ್ತಾರೆ, ಆಗ ಮರಕಲರು ಹೇಳುವ ಮಾತು ಈ ರೀತಿ ಬರುತ್ತದೆ. '' ಅಯ್ಯ, ಯೆಂಕಳು ಉಳ್ಳಾಯದ ಕಳು ಪಣ್ಣಲ್‌ನವು ಉಂಡಾ, ಯಂಕಳು ಸಾಮಿ ಭೂಮಿಗೆ ಅಪಿಲೆಕ್ಕ ಉಪ್ಪುನಾಕಳು, ಯೆಂಕಳು ಅಂಜಿತ್ತಿದ್ರೋಹಿಳು ಅತ್ತೆ, ಅಂಜಿತ್ತಿನಾಕುಳು ಅತೆಂಡ ಅಂಚಿತ್ತಿ ಜಲಧಿ ಆಯಿ ಕಡಲ್‌ದ ಮಿತ್ತ್‌ದಿನೋಕು ರಡ್ ಸರ್ತಿವೋಡೊಡು ಪೋದು, ಆ ಮೀನುಳಿ ಕಣತ್‌ದ್ ಇಲ್ಲೆ ಇಲ್ಲುಳಿಗೆಕೊಂಡು ಪಾರ್‌ದ್ ಪೂರ್‌ದ್ ವೇಳಿ ಗೆಪ್ಪುನಾಕುಳು, ಈರೆಗೆ ಸುಳ್ಳು ಪಣಯ'' (ಅಯ್ಯ ನಾವು ಒಡೆಯನಲ್ಲಿ ಸುಳ್ಳು ಹೇಳಲಿಕ್ಕೆ ಇದೆಯೇ, ನಾವು ದೇವರಿಗೆ ಮತ್ತು ಭೂಮಿಗೆ ಸರಿಯಾಗುವಂತೆ ಬದುಕುವವರು, ನಾವು ಅಂತಹ ದ್ರೋಹಿಗಳಲ್ಲ. ಅಂತಹವರಾಗಿದ್ದರೆ, ಅಂತಹ ದೊಡ್ಡ ಸಮುದ್ರದ ಮೇಲೆ ದಿನಕ್ಕೆ ಎರಡು ಬಾರಿ ದೋಣಿಯಲ್ಲಿ ಹೋಗಿ ಅಲ್ಲಿಂದು ಮೀನುಗಳನ್ನು ತಂದು ಮನೆ ಮನೆಗೆ ತೆಗೆದುಕೊಂಡು ಓಡಾಡುತ್ತಾ ಮಾರಾಟ ಮಾಡಿ ಕಾಲ ಕಳೆಯುವವರು, ನಿಮ್ಮಲ್ಲಿ ಸುಳ್ಳು ಹೇಳಲಾರೆವು) ಈ ಮಾತಿನಲ್ಲಿ ಮೊಗವೀರರನ್ನು ''ಮರಕಲರು'' ಎಂದು ಕರೆದಿರುವುದನ್ನು ಗಮನಿಸಬಹುದು. ಹೀಗೆಯೇ ಮೊಗವೀರರನ್ನು 'ಮರಕಾಲರು' ಎಂದೂ ಸಹ ಕರೆಯುತ್ತಿದ್ದರೆಂದು, ಮರಕಾಲ ಎಂದರೆ ಮುಂದುವರಿವ ಮರದ ಸಾಧನ ಅಂದರೆ ನಾವೆ. ಇದನ್ನು ಅವಲಂಬಿಸಿ ಬದುಕುತ್ತಿದ್ದವರು ಇವರು. ಈ ಮರಕಲರ ಸಾಂಪ್ರದಾಯಿಕ ಕಸುಬು ಮೀನು ಹಿಡಿದು ಮಾರಾಟ ಮಾರಾಟಮಾಡುವುದೆಂಬುದು ಮೇಲಿನ ಮಾತಿನಿಂದ ಖಚಿತವಾಗುತ್ತದೆ. ಆದರೆ ಬಲ್ಲಾಳರು ಮರಕಲರನ್ನು ಮರಗಳನ್ನು ಕಡಿಯಲು ಬಳಸುತ್ತಿದ್ದರೆಂಬ ಬಗ್ಗೆ ಉಲ್ಲೇಖವಿದೆ. 'ಮರಕಲ' ಎಂಬ ಶಬ್ದಕ್ಕೂ 'ಮರಕಡಿವ' ಕೆಲಸಕ್ಕೂ ಸಂಬಂಧವಿದ್ದ ಹಾಗೆ ಕಾಣಿಸುತ್ತದೆ. ಸಮುದ್ರದಲ್ಲಿ ಮೀನು ಹಿಡಿಯುವುದರಲ್ಲಿ ಪ್ರವೀಣರಾಗಿದ್ದ ಮರಕಲರ ು ಮರ ಕಡಿಯುವುದರಲ್ಲೂ ಪ್ರಸಿದ್ಧರಾಗಿರಬೇಕು, ಅಲ್ಲದೆ ಅವರು ತಮ್ಮ ದೋಣಿಗಳಿಗೆ ಮರ ಕಡಿಯುವಾಗ ಮರದ ಗುಣ ಹಾಗೂ ಪಕ್ವತೆಗಳನ್ನೆಲ್ಲಾ ಅರಿತು ಮರ ಕಡಿಯುತ್ತಿದ್ದಿರಬೇಕು. ಆದ್ದರಿಂದ ಅವರನ್ನು ''ಮರಕಲ'' ರೆಂದು ಕರೆದಿರಬಹುದು. ಹಿಂದೆ ಮೊಗವೀರರ ಉಪಕಸುಬು ಮರಕಡಿಯುವದು ಸಹ ಆಗಿದ್ದಿರಬೇಕು. ''ಬೊಬ್ಬರ್ಯ'' ಪಾಡ್ದನದಲ್ಲಿ ಮರಕಲರು ದೋಣಿಯಲ್ಲಿ ವ್ಯಾಪಾರಕ್ಕೆ ಹೋಗುವ ವಿಷಯವಿದೆ. ' ಕೇತುಪಾಂಡಿ ಪಾಡ್ದನ' ದಲ್ಲಿ ಎದ್ದೋಡಿಕೇತು ಮರಕಲನು ಹಡಗು ಕಟ್ಟಿ ವ್ಯಾಪಾರ ಮಾಡುತ್ತಾನೆ.
(ತುಳು ಜನಪದ ಸಾಹಿತ್ಯ - ಡಾ: ಬಿ.ಎ. ವಿವೇಕ ರೈ)

ಪಾಡ್ದನಗಳಲ್ಲಿ ಬರುವ ವಿಷಯಗಳನ್ನೆಲ್ಲಾ ಗಮನಿಸಿದಾಗ ಮೊಗವೀರರು ಹಿಂದಿನಿಂದಲೂ ಕೈಗೊಂಡ ಕಸುಬುಗಳ ವಿವರ ತಿಳಿಯುತ್ತದೆ. ಇಂದಿಗೂ ಅವರು ಮೀನು ಹಿಡಿಯುವದನ್ನೆ ಮುಖ್ಯ ಕಸುಬನ್ನಾಗಿ ಹೊಂದದೆ ಮೀನಿನ ವ್ಯಾಪಾರ, ಕೃಷಿ, ಮೊದಲಾದ ಕೆಲಸಗಳಲ್ಲಿ ನಿರತರಾಗಿದ್ದಾರೆ. ಹಗಲಿರುಳೆನ್ನದೆ ಕಡಲ ಮಡಿಲಲ್ಲೇ ತೇಲಾಡುವ ಮೊಗವೀರರ ಬದುಕಿಗೆ ಆಧಾರವೆಂದರೆ ಅವರು ನಂಬಿದ ದೇವರುಗಳು, ಆದ್ದರಿಂದಲೇ ಅವರು ಬಹುದೇವರಾಧಕರು ಅಪಾಯದ ಪ್ರಾಣಿಗಳೆಲ್ಲಾ ಅವರ ದೇವರಾದವು, ತಿಮಿಂಗಿಲ, ಪಂಜುರ್ಲಿ, ಹಾಯ್ಗುಳಿ, ಮಂಜುನಾಥ, ವೀರಭದ್ರ, ಮಾಸ್ತಿ, ಜಟ್ಟಿಗ, ಬೊಬ್ಬರ್ಯ, ಕಲ್ಕುಡಕ, ಕಲ್ಕುರ್ಟಿ, ಮೊದಲಾದ ದೇವರುಗಳು ಅವರ ನಂಬಿಕೆಗೆ ಪಾತ್ರವಾದವು. ಈ ಎಲ್ಲಾ ದೇವರುಗಳಿಗಿಂತ ಬಾರ್ಕೂರಿನ ಹಂದಾಡಿ ಗ್ರಾಮದ ಮಾಸ್ತಿಯಮ್ಮ ಅವರ ಕುಲದೇವತೆಯಾಗಿ ಶ್ರೇಷ್ಠಸ್ಥಾನ ಪಡೆದಿದ್ದಾಳೆ. ವರ್ಷಕ್ಕೊಮ್ಮೆ ಅವರು ಮಾಸ್ತಿಯ ಜಾತ್ರೆ ನಡೆಸಿ ಅವಳನ್ನು ತೃಪ್ತಿಪಡಿಸುವ ವಾಡಿಕೆ ಇದೆ.

ಮೊಗವೀರರ ಹಬ್ಬಗಳಲ್ಲಿ ಆಷಾಡಿ ಹಬ್ಬ, ಅಜ್ಜಿ ಹಬ್ಬ ಚೌತಿ ಮತ್ತು ದೀಪಾವಳಿ, ಪ್ರಮುಖವಾದವು, ಆಷಾಡ ಮಾಸದ ಮೊದಲ ಹುಣ್ಣಿಮೆ ಅಥವಾ ಅಮಾವಾಸ್ಯೆ ದಿನ ಆಷಾಡಿ ಹಬ್ಬವನ್ನು ಆಚರಿಸುತ್ತಾರೆ. ಆ ದಿನದ ವಿಶೇಷ ಅಡುಗೆ ದೋಸೆಯಾಗಿರುತ್ತದೆ. ಅಜ್ಜಿ ಹಬ್ಬವನ್ನು ತಿಂಗಳಲ್ಲಿ ಅನುಕೂಲವಾದಾಗ ಆಚರಿಸುತ್ತಾರೆ. ಆ ಸಂದರ್ಭದಲ್ಲಿ ಹೊಸ್ತಿಲನ್ನು ಅಲಂಕರಿಸಿ ಅದರ ಮೇಲೆ ದೋಸೆ ಇಟ್ಟು ನಮಸ್ಕರಿಸುವ ಸಂಪ್ರದಾಯವಿದೆ. ಈ ಹಬ್ಬಗಳ ಹೊರತು ಭೂತಾರಾಧನೆ, ಸೀಡಿಸೇವೆ, ಹರಿಸೇವೆ, ಹೌದಾರಾಯನ ವಾಲ್ಗ, ಮೊದಲಾದ ಆಚರಣೆಗಳು ರೂಢಿಯಲ್ಲಿವೆ. ಹಬ್ಬ ಹರಿದಿನಗಳಲ್ಲಿ ಅವರು '' ಶಕ್ತಿ ಕಲ್ಲೆತ್ತುವ'' , ಒಂದೆಡೆ ಕಾಯಿ ಇಟ್ಟು ಅದಕ್ಕೆ ಕಲ್ಲು ಹೊಡೆವ ''ಕಾಯಿ ಜೂಜಿನಾಟ'', ಊರ ಗುರಿಕಾರ , ತೆಂಗಿನಕಾಯಿ ಹಿಡಿದು ದೇವಸ್ಥಾನದ ಮುಂದೆ ನಿಂತಾಗ ಅದನ್ನು ಬಲವಂತದಿಂದ ಕಸಿದುಕೊಂಡು ದೇವಸ್ಥಾನದ ಸುತ್ತಾ ಪ್ರದಕ್ಷಿಣೆ ಹಾಕುವ 'ಕಾಯಿ ಗುರಿಯಾಟ' ಮತ್ತು ಎರಡು ಗುಂಪಿನಲ್ಲಿ ಒಂದು ಗುಂಪಿನವರು

ಅಡಗಿಸಿಕೊಂಡಿರುವ ಚೆಂಡನ್ನು ಮತ್ತೊಂದು ಗುಂಪಿನವರು ಹುಡುಕಿ ತೆಗೆಯುವ ''ಗೊಡ್ಡಾಟ'' ಗಳನ್ನು ಆಡಿ ಮನರಂಜನೆ ನೀಡುತ್ತಾರೆ.

ಸಂಪ್ರದಾಯ ನಿಷ್ಠರಾದ ಮೊಗವೀರರು ಆಚರಿಸುವ ಆಚರಣೆಗಳು ಅವರಿಗೇ ವಿಶಿಷ್ಟವಾದವು.

ತುಳು ಮಾತೃಭಾಷೆಯ ಮೊಗವೀರರು ಆಚರಿಸುವ ಕೆಲವು ಸಂಪ್ರದಾಯಗಳು ಕನ್ನಡ ಮಾತೃಭಾಷೆಯ ಮೊಗವೀರರು ಆಚರಿಸುವ ಸಂಪ್ರದಾಯಗಳಿಗಿಂತ ಭಿನ್ನವಾಗಿರುತ್ತವೆ. ಇದಕ್ಕೆ ಪ್ರಾದೇಶಿಕ ವ್ಯತ್ಯಾಸದೊಡನೆ ಭಾಷಾ ವ್ಯತ್ಯಾಸಗಳೂ ಕಾರಣವಾಗಿವೆ. ತುಳು ಮಾತನಾಡುವ ಮೊಗವೀರರು ಹುಡುಗಿ ಮೈನೆರೆದಾಗ ಬೇರೆ ಬೇರೆ ''ಬಳಿಗೆ'' ಸೇರಿದ ಮುತ್ತೈದೆಯರನ್ನು ಕರೆತಂದು ಮೈನೆರೆದವಳನ್ನು ಸಿಪ್ಪೆ ಸುಲಿದ ಏಳು ತೆಂಗಿನಕಾಯಿಗಳ ಮೇಲೆ ಕೂಡಿಸಿ ಅವಳ ಸುತ್ತಾ ನಾಲ್ಕು ಮಣ್ಣಿನ ಪಾತ್ರೆಗಳಲ್ಲಿ ಕಲಶದ ನೀರು ತುಂಬಿಟ್ಟು, ಮುತ್ತೈದೆಯರು ಅವಳ ತಲೆಯ ಮೇಲೆ ಅಕ್ಷತೆ ಕಾಳು ಹಾಕಿ ಕಲಶದ ನೀರು ಎರೆಯುತ್ತಾರೆ. ಅನಂತರ ಅವಳಡಿ ಇಟ್ಟಿದ್ದ ತೆಂಗಿನ ಕಾಯಿಗಳಲ್ಲಿ ಒಂದನ್ನು ತೆಗೆದು ಅನ್ನದ ಜೊತೆಯಲ್ಲಿ ಸೇರಿಸಿ ಎಲ್ಲರು ತಿನ್ನುತ್ತಾರೆ.

ಕನ್ನಡ ಮಾತನಾಡುವ ಮೊಗವೀರರು ಹುಡುಗಿ ಮೈನೆರೆದ ತಕ್ಷಣ ಅವಳನ್ನು ತೆಂಗಿನ ಮರದ ಕಟ್ಟೆಯಲ್ಲಿ ಮೇಲೆ ಕುಳಿತುಕೊಳ್ಳುವಂತೆ ಹೇಳುತ್ತಾರೆ. ಅವಳು ಕುಳಿತು ಕೊಂಡ ಐದು ಮುತ್ತೈದೆಯರು ಅವಳ ತಲೆಗೆ ಎಣ್ಣೆ ಹಚ್ಚಿ ಸ್ನಾನ ಮಾಡಿಸಿ ಮನೆಗೆ ಕರೆತರುತ್ತಾರೆ. ಬಂದವರಿಗೆಲ್ಲಾ ಸಿಹಿ ಕಜ್ಜಾಯವನ್ನು ಹಂಚುತ್ತಾರೆ. ಐದನೇ ದಿನ ಕಲಶಸ್ನಾನದ ಸಂಪ್ರದಾಯವಿರುತ್ತದೆ.

ನಾಮಕರಣ ಶಾಸ್ತ್ರವು ಮಗು ಹುಟ್ಟಿದ ಏಳನೆಯ ದಿನ ನಡೆಯುತ್ತದೆ. ಆದಿನ ಎಕ್ಕೆಗಿಡದ ನಾರಿನ ''ಎಡುದಾರ'' ಮಾಡಿ ಮಗುವಿಗೆ ಕಟ್ಟುತ್ತಾರೆ. ಆ ಸಂದರ್ಭದಲ್ಲಿ ''ಆಮೆ ಮುಚ್ಚುವುದು'' ಎಂಬ ವಿಶಿಷ್ಟ ಸಂಪ್ರದಾಯವನ್ನು ಆಚರಿಸುತ್ತಾರೆ. ಮಗು ಹುಟ್ಟಿದ ತಕ್ಷಣ ಅದರ ''ಕಸುವನ್ನು'' ಒಂದು ಮಣ್ಣಿನ ಪಾತ್ರೆಯಲ್ಲಿ ಹಾಕಿ ಹೊಂಡದಲ್ಲಿ ಹುಗಿದು ಅದರ ಮೇಲೆ ಒಂದು ಹಲಗೆ ಇಡುತ್ತಾರೆ. ಇದಕ್ಕೆ 'ಆಮೆ ಹೊಂಡ' ಎಂದು ಕರೆಯುತ್ತಾರೆ. ಹತ್ತನೆಯ ದಿನ ಸೂಲಗಿತ್ತಿ ಮಗು ಮತ್ತು ಬಾಣಂತಿಯನ್ನು ಸ್ನಾನ ಮಾಡಿಸಿದ ನಂತರ ಆಮೆ ಹೊಂಡದ ಬಳಿ ದೀಪ ಉರಿಸಿ, ಐದು ದೋಸೆಗಳನ್ನು ಅದಕ್ಕೆ ನಿವಾಳಿಸಿ ದೂರ ಎಸೆದು ಬರುತ್ತಾರೆ. ಆ ನಂತರ ಮೂರು ಮುಷ್ಠಿ ಮಣ್ಣನ್ನು ಹೊಂಡಕ್ಕೆ ಹಾಕಿ ಮುಚ್ಚಿ ಅದರಲ್ಲಿ ಬಾಳೆ ಇಲ್ಲವೆ ಬಸಳೆಯ ಬಳ್ಳಿಯನ್ನು ನೆಡುತ್ತಾರೆ.

ಮೊಗವೀರರ ಮದುವೆ ಸಂಪ್ರದಾಯವು ನಿಶ್ಚಿತ ಕಾರ್ಯದಿಂದ ಪ್ರಾರಂಭವಾಗುತ್ತದೆ. ಒಪ್ಪಿಗೆಯಾದ ಹೆಣ್ಣಿನ ಬಗ್ಗೆ ಮೊದಲು ಅವರು ದೇವರಲ್ಲಿ ಪ್ರಸಾದ ಕೇಳುತ್ತಾರೆ. ಅದು ಪ್ರಸಾದ ಕೊಟ್ಟರೆ ಮಾತ್ರ ಮುಂದಿನ ಕಾರ್ಯಗಳು ನಡೆಯುವುದು. ದೇವರ ಒಪ್ಪಿಗೆ ಪಡೆದ ನಂತರ ಗುರಿಕಾರನ ಪ್ರಾಮುಖ್ಯತೆಯಲ್ಲಿ ಗಂಡಿನ ಮನೆಯವರು ಹೆಣ್ಣಿನ ಮನೆಗೆ ಹೋಗುತ್ತಾರೆ. ಅಲ್ಲೂ ಸಹ ಊರಿನ ಗುರಿಕಾರನೇ ಮುಂದಾಳಾಗಿರುತ್ತಾನೆ. ಗಂಡಿನ ಕಡೆಯವರು ಹೆಣ್ಣನ್ನು ಒಪ್ಪಿದ ತಕ್ಷಣ ಗುರಿಕಾರನು ಹೆಣ್ಣಿನ ಕಡೆಯ ಗುರಿಕಾರನ ಕೈ ಮುಟ್ಟುತ್ತಾನೆ. ಅಲ್ಲಿಗೆ ಅವರ '' ನಂಬಿಕೆ ಶಾಸ್ತ್ರ'' ಆದಂತೆಯೆ. ಅನಂತರ ತುಳಸಿ ಕಟ್ಟೆಯ ಮುಂದಿಟ್ಟ 'ದೇವರ ವೀಳ್ಯೆ'' ಯನ್ನು ಬಂದವರಿಗೆಲ್ಲಾ ನೀಡಿ ಮದುವೆ ಸಂಪ್ರದಾಯಕ್ಕೆ ನಾಂದಿ ಹಾಡುತ್ತಾರೆ. ಮದುವೆ ಸಂಬಂಧಕ್ಕೆ ''ಬಳಿ'' ಮುಖ್ಯವಾಗುತ್ತದೆ. ಹೆಣ್ಣು ಶ್ರೀಮಂತರ ಮನೆಯವಳಾಗಿದ್ದು ಸುಂದರವಾಗಿದ್ದರೂ ಬಳಿಕೂಡದಿದ್ದರೆ ಅಂತಹ ಹೆಣ್ಣನ್ನು ಮದುವೆ ಮಾಡಿಕೊಳ್ಳಲು ಮುಂದಾಗುವುದಿಲ್ಲ. ಒಂದೇ ಬಳಿಯಲ್ಲಿ ವಿವಾಹ ನಿಷಿದ್ಧ. ಅವರಲ್ಲಿ ಪ್ರಚಲಿತವಿರುವ ಪ್ರಮುಖ ಬಳಿಗಳೆಂದರೆ ಸಾಲೆನ್ನಾಯ, ಮಂಚೆನ್ನಾಯ, ತಿಗಳನ್ನಾಯ, ತೊಳಾರ ಬನ್ನಾಯ, ಮೈಂದಣ್ಣಾಯ, ಪುತ್ರನ್ನಾಯ, ಸಿರಿಯನ್ನಾಯ, ಬಂಗಾರಣ್ಣಾಯ, ಕುಂದನ್ನಾಯ, ದೋರಣ್ಣಾಯ, ಕರ್ಮಿರನ್ನಾಯ, ಕೋಟ್ಯನ್ನಾಯ, ಅಮ್ಮಣ್ಣಾಯ, ಕಂಚಿನ್ನಾಯ ಮೊದಲಾದವು ಈ ಬಳಿಗಳಲ್ಲಿ ತೊಳಾರ ಬನ್ನಾಯ ಬಳಿ ಎಲ್ಲಕ್ಕಿಂತ ಕೀಳಾದ 'ಬಳಿ'. ಆ ಬಳಿಯ ಹೆಣ್ಣನ್ನು ಮದುವೆ ಮಾಡಿಕೊಳ್ಳುವುದರಿಂದ ಮನೆಯೆಲ್ಲಾ ತೊಳೆದು ಹೋಗುತ್ತದೆಂದು ನಂಬುತ್ತಾರೆ.

ಹಿಂದೆ ಕನ್ಯಾ ಶುಲ್ಕ ಕೊಡುವ ಪದ್ಧತಿ ಜಾರಿಯಲ್ಲಿದ್ದು ಈಗ ಅದಕ್ಕೆ ವಿರುದ್ಧವಾದ ವರದಕ್ಷಿಣೆಯ ಪದ್ಧತಿ ರೂಢಿಯಲ್ಲಿದೆ. ಮದುವೆಯ ದಿನ ವರನ ಕೈಯನ್ನು ಅವನ ಭಾವ ಹಿಡಿದು, ವಧುವಿನ ಕೈಯನ್ನು ಅತ್ತಿಗೆ ಇಲ್ಲವೆ ನಾದಿನಿ ಹಿಡಿದು ಧಾರೆ ಮಂಟಪಕ್ಕೆ ಮೂರು ಬಾರಿ ಪ್ರದಕ್ಷಿಣೆ ಹಾಕುತ್ತಾರೆ. ಆನಂತರ ಹೂಮಾಲೆಗಳ ವಿನಿಮಯದ ಜೊತೆಗೆ ವಧುವಿನ ತಂದೆ ಅಥವಾ ಸೋದರ ಮಾವ ಹಾಲಿನಿಂದ ಧಾರೆ ಎರೆದು ಕೊಡುವ ಸಂಪ್ರದಾಯವಿದೆ.

ಮದುವೆಯಲ್ಲಿ ಗುರಿಕಾರನೇ ಪ್ರಮುಖನು ಅವನ ಒಪ್ಪಿಗೆಯಿಲ್ಲದೆ ಯಾವ ಕಾರ್ಯವೂ ಸಾಗುವುದಿಲ್ಲ. ಅವನಿಗೆ ಪಂಚೆ ಟವಾಲನ್ನು ಮದುವೆಯ ದಿನ ಕೊಡುಗೆಯಾಗಿ ನೀಡಲಾಗುತ್ತದೆ.

ತುಳು ಮೊಗವೀರರ ಮತ್ತು ಕನ್ನಡ ಮೊಗವೀರರ ಮದುವೆ ಸಂಪ್ರದಾಯದ ಆಚರಣೆಯಲ್ಲಿ ವ್ಯತ್ಯಾಸವಿದೆ . ಕನ್ನಡ ಮೊಗವೀರರು ಮದುವೆ ದಿವಸ '' ಬೊಳು ಮೀಸುವ '' ಶಾಸ್ತ್ರವನ್ನು ಆಚರಿಸುತ್ತಾರೆ. ಮನೆಯ ಬಾವಿ ಹತ್ತಿರ ಚಿಕ್ಕ ಚಪ್ಪರ ಹಾಕಿ ಒಂದು 'ಒರಳಲ್ಲಿ' ಅರಿಶಿನದ ನೀರನ್ನು ತುಂಬಿಡುತ್ತಾರೆ. ವಧು -ವರರನ್ನು ಅಲ್ಲಿಗೆ ಕರೆ ತಂದು ವರನಿಗೆ ಕ್ಷೌರ ಮಾಡಿಸಿ ಹೊಂಗಾರ ಮರದ ಮಣೆಯ ಮೇಲೆ ಕೂಡಿಸಿ ಅವನ ಕಾಲುಗಳನ್ನು ಬೇರೆ ಮಣೆಯ ಮೇಲೆ ಇಟ್ಟು ಮುತ್ತೈದೆಯರು ಅರಿಶಿನ ಮತ್ತು ಸೀಗೆಪುಡಿ ಹಚ್ಚಿ ನೀರು ಹಾಕುತ್ತಾರೆ. ಆ ಸಂದರ್ಭದಲ್ಲಿ ವರನ ಭಾವಂದಿರಿಬ್ಬರು ಒಂದೊಂದು ಒನಕೆ ಹಿಡಿದು ವರನ ಸುತ್ತಾ ಎಡದಿಂದ ಬಲಕ್ಕೆ ಬಲದಿಂದ ಎಡಕ್ಕೆ ಓಡಾಡುತ್ತಾ ' ಒರಳ ' ಲ್ಲಿನ ನೀರಿಗೆ ಒನಕೆ ಕುಟ್ಟಿ ನೀರು ಹೊರಚೆಲ್ಲುವಂತೆ ಮಾಡುತ್ತಾರೆ. ಇದಕ್ಕೆ ಪ್ರತಿಯಾಗಿ ಅವರಿಗೆ ಒಂದು ಓಲೆ ಗರಿಯ ಬೀಸಣಿಗೆ ಮತ್ತು ಒಂದು ವೀಳ್ಯಾಪಟ್ಟಿ ಸಿಗುತ್ತದೆ. ಸ್ನಾನದ ನಂತರ ಧಾರೆ ಮತ್ತು ಉಡುಗೊರೆಯ ಕಾರ್ಯ ನಡೆಯುತ್ತದೆ.

ವಧುವನ್ನು ವರನಿಗೆ ಒಪ್ಪಿಸುವ ಮೊದಲು '' ನಮ್ಮ ಹುಡುಗಿಯ ಜವಾಬ್ದಾರಿ ಯಾರು?'' ಎಂದು ಹೆಣ್ಣಿನ ಕಡೆಯವರು ಕೇಳಿದ್ದಕ್ಕೆ ''ಮೊದಲು ತಂದೆ ತಾಯಿ ಅನಂತರ ಗಂಡ, ಆಮೇಲೆ ಅಣ್ಣತಮ್ಮ, ತಪ್ಪಿದರೆ ಊರ ಗೃಹಸ್ಥರು'' ಎಂದು ಹೇಳಿದ ನಂತರ ಸೋದರ ಮಾವ ವರನ ತಂದೆಗೆ ಹೆಣ್ಣನ್ನು ಒಪ್ಪಿಸುತ್ತಾನೆ.

ಈ ಸಂಪ್ರದಾಯವು ಮೊಗವೀರರ ಸಂಸ್ಕೃತಿಯ ವಿಶಿಷ್ಟತೆಯನ್ನು ಪರಿಚಯಿಸುತ್ತದೆ. ಇಂತಹ ವಿಶೇಷ ಆಚರಣೆಗಳು ಈಗೀಗ ಮಾಯವಾಗುತ್ತಿವೆ. ನಾವು ವಿದ್ಯಾವಂತರ ಮದುವೆಗಳಲ್ಲಿ ಗಮನಿಸಬಹುದು. ಹಿರಿಯರ ಹೇಳಿಕೆಯಂತೆ ಹಿಂದೆ ಎಂಟು ದಿನಗಳವರೆಗೆ ಮದುವೆ ನಡೆಯುತ್ತಿದ್ದು ಮದುವೆಯೂಟದ ನಂತರದ 'ಮೀನು ಊಟ' ಮಾಡಿಯೇ ಬಂದ ನೆಂಟರು ಹಿಂದಿರುಗುತ್ತಿದ್ದುದು. ಆದರೆ ಇಂದು ಮದುವೆ ಕೇವಲ ಎರಡು ದಿನಗಳಲ್ಲಿ ಮುಗಿಯುವುದರಿಂದ ಹಲವಾರು ಸಂಪ್ರದಾಯಗಳು ನಮ್ಮ ತಲೆಮಾರಿಗೇ ಕೊನೆಯಾದವು ಎನ್ನುತ್ತಾರೆ. ಹಲವಾರು ವಿಶಿಷ್ಟ ಸಂಪ್ರದಾಯಗಳು ಆಚರಣೆಯಾಗದೆ ಹೇಳಿಕೆಯಲ್ಲೇ ಉಳಿದಿರುವುದು ಮೊಗವೀರರ ಸಂಸ್ಕೃತಿಗಾದ ನಷ್ಟವೆನ್ನಬಹುದು.

ಸತ್ತವರನ್ನು ಸುಡುವ ಸಂಪ್ರದಾಯ ಮೊಗವೀರರಲ್ಲಿದೆ. ಹೆಣ ಸುಟ್ಟು ಬೂದಿಯನ್ನು ಅವರು ಸಮುದ್ರದಲ್ಲಿ ಬಿಡುತ್ತಾರೆ. ಹದಿಮೂರನೇ ದಿನ ಪುರೋಹಿತರಿಂದ ಸಮುದ್ರದ ದಡದಲ್ಲಿ ತಿಲಹೋಮ, ಪಿಂಡಪ್ರಧಾನ ಕಾರ್ಯಗಳನ್ನು ಮಾಡಿಸುತ್ತಾರೆ.

ಕಡಲ ಮಕ್ಕಳಾದ ಮೊಗವೀರರು ಧೈರ್ಯಶಾಲಿಗಳು, ಸಾಹಸಿಗಳು ಇದನ್ನು ಸಮುದ್ರದ ದಂಡೆಯಲ್ಲಿ ನಿಂತು ನೋಡಬೇಕು. ಮೀಸೆ ಮೂಡದ ಮಕ್ಕಳು 'ಪಾತಿ' ದೋಣಿಯಲ್ಲಿ ಕುಳಿತು ಎದುರಾಗುವ ಅಲೆಗಳ ವಿರುದ್ಧ ತೇಲಿಕೊಂಡು ಹೋಗುವ ದೃಶ್ಯ ನೋಡುವವರನ್ನು ನಡುಗಿಸುತ್ತದೆ. ಅದು ಏನೇ ಇರಲಿ ಕಡಲ ತೀರದ ಸಂಸ್ಕೃತಿಗೆ ಮೊಗವೀರರು ತನ್ನದೇ ಆದ ಕಾಣಿಕೆ ಸಲ್ಲಿಸಿದ್ದಾರೆ.

ಕೊಂಕಣ ಖಾರ್ವಿಗಳು

ಮೂಲ : ಕಡಲನ್ನಾಶ್ರಯಿಸಿ ಬದುಕುವ ಖಾರ್ವಿಗಳಲ್ಲಿ ಕನ್ನಡ ಖಾರ್ವಿಗಳು, ಕೊಂಕಣ ಖಾರ್ವಿಗಳು ಎಂದು ಎರಡು ವಿಧಗಳಿವೆ. ಕನ್ನಡ ಖಾರ್ವಿಗಳು ಕರ್ನಾಟಕದ ಕರಾವಳಿ ಮೂಲದವರಾದರೆ ಕೊಂಕಣ ಖಾರ್ವಿಗಳು ಗೋವಾ ಮೂಲದವರೆಂದು ಹೇಳಲಾಗುತ್ತದೆ. ಕನ್ನಡ ಖಾರ್ವಿಗಳನ್ನು ದಕ್ಷಿಣ ಕನ್ನಡದಲ್ಲಿ ''ಹರಿಕಂತರು'' ಎಂದು ಕರೆಯಲಾಗುತ್ತದೆ. ಉತ್ತರ ಕನ್ನಡದಲ್ಲಿ ಅವರನ್ನು 'ಖಾರ್ವಿಗಳು ' ಎಂದು ಕರೆಯುತ್ತಾರೆ. ಕೊಂಕಣ ಖಾರ್ವಿ ಮತ್ತು ಕನ್ನಡ ಖಾರ್ವಿಗಳ ನಡುವೆ '' ಕೊಡು-ಕೊಳ್ಳುವಿಕೆ'' ಸಂಬಂಧವಿಲ್ಲ.

16ನೇ ಶತಮಾನದಲ್ಲಿ ಪೋರ್ಚುಗೀಸರು ಗೋವಾದಲ್ಲಿ ಮತಾಂತರ ಕಾರ್ಯಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟಿದ್ದ ಸಂಧರ್ಭದಲ್ಲಿ ಕೊಂಕಣ ಖಾರ್ವಿಗಳು ತಮ್ಮ ಸಂಸ್ಕೃತಿಯನ್ನು ರಕ್ಷಿಸಿಕೊಳ್ಳುವ ಸಲುವಾಗಿ ಗೌಡ ಸಾರಸ್ವತ ಬ್ರಾಹ್ಮಣರ ಜೊತೆಯಲ್ಲಿ ಕರ್ನಾಟಕ ಕರಾವಳಿಗೆ ಬಂದರು. ಆಗ ಕರಾವಳಿಯಲ್ಲಿ ವಿಜಯನಗರ ಮತ್ತು ಕೆಳದಿ ಅರಸರ ಆಳ್ವಿಕೆ ಇತ್ತು. ಅವರ ಸೈನ್ಯಕ್ಕೆ ಸೇರಿಕೊಂಡರೆ ಪೋರ್ಚುಗೀಸರ ಒತ್ತಾಯದಿಂದ ದೂವಿರಬಹುದುಂದು ಭಾವಿಸಿ ಅವರು ಸೈನ್ಯದಲ್ಲಿ ಭರ್ತಿಯಾದರು. ಅರಸರ ಆಶ್ರಯ ತಪ್ಪಿದ ನಂತರ ತಮ್ಮ ಮೂಲ ವೃತ್ತಿಯಾದ ಮೀನುಗಾರಿಕೆಯನ್ನು ಪ್ರಾರಂಭಿಸಿದರೆಂದು ತಿಳಿದು ಬರುತ್ತದೆ.

ಜೆಸ್ಟರಕ್ ಎಂಬ ಐ.ಸಿ.ಎಸ್. ಅಧಿಕಾರಿಯು ದಕ್ಷಿಣ ಕನ್ನಡ ಜಿಲ್ಲೆಯ ಮ್ಯಾನ್ಯುಯಲನ್ (Manual 1894) ಮೊದಲ ಸಂಪುಟದಲ್ಲಿ ಖಾರ್ವಿ ಜನಾಂಗದ ಬಗ್ಗೆ ಹೀಗೆ ಬರೆದಿದ್ದಾನೆ. " Kharvis are the Marathi Fisher Man. Who migrates to this district from Bombay presidency. The name Kharvi is said to be corrupt from of the Sanskrit "Kshara" , salt, they are hard working, but thriftless and much given to drink, chiefly Toddy. They are Sea-fisher men and good sailors and also working domestic servants and labours. They employ Havik Brahmins to perform their marriages and other cermonies. The head of the Sringeri Matt is their spritual teacher ".

'ಖಾರ್ವಿ ' ಎಂಬ ಪದವು ಸಂಸ್ಕೃತದ 'ಕ್ಷಾರ ' ಎಂಬ ಪದದಿಂದ ನಿಷ್ಪತ್ತಿಯಾದುದು. ಇದು ಉಪ್ಪು ನೀರಿಗೂ ಮತ್ತು ಖಾರ್ವಿ ಜನರಿಗೂ ಇರುವ ಸಂಬಂಧವನ್ನು ಸೂಚಿಸುತ್ತದೆ. ಅಲ್ಲದೆ ಇವರನ್ನು ಕೊಂಕಣಿಯಲ್ಲಿ '' ಖಾರ ವಿಲೋಗ '' ಎಂದು ಕರೆಯುತ್ತಿದ್ದರು. ' ಖಾರ ' ಎಂದರೆ ಉಪ್ಪು ಎಂಬ ಅರ್ಥವಿದ್ದರೆ ''ಲೋಗ'' ಎಂದರೆ ಜನ ಎಂಬ ಅರ್ಥ ಬರುತ್ತದೆ. ಈ ದೃಷ್ಟಿಯಲ್ಲಿ ಖಾರ್ವಿಗಳು ಉಪ್ಪು ನೀರನ್ನಾಶ್ರಯಿಸಿ ಬದುಕುವ ಜನವೆಂಬುದು ಸ್ಪಷ್ಟವಾಗುತ್ತದೆ. ಬಹಳ ಹಿಂದಿನಿಂದಲೂ ಇವರು ಕಡಲು ಮೀನಿಗಾರಿಕೆಯಲ್ಲಿ ಪ್ರವೀಣರಾಗಿದ್ದುದು ಮಾತ್ರವಲ್ಲದೆ ಚತುರ ನಾವಿಕರೂ ಸಹ ಆಗಿದ್ದರು. ದೊಡ್ಡ ದೊಡ್ಡ ಮಚವೆಗಳನ್ನು ಬಂದರಿನೊಳಗೆ ವ್ಯವಸ್ಥಿತವಾಗಿ ತರುವ ಮತ್ತು ಹೊರಗೊಯ್ಯುವ ಕೆಲಸದಲ್ಲಿ ಪರಿಣತರಾಗಿದ್ದರಿಂದ ಇವರನ್ನು ಸರಕಾರದ ಕೆಲಸವಾದ 'ಆರ್ಕಾಟಿ ' ನಲ್ಲಿ ಸೇರಿಸಿಕೊಳ್ಳಲಾಗಿತ್ತು. ಇಂದಿಗೂ ಅವರ ವಂಶಜರು ತಮ್ಮ ಹೆಸರಿನ ಮುಂದೆ 'ಆರ್ಕಾಟ ' ಎಂದು ಸೇರಿಸಿಕೊಳ್ಳುತ್ತಾರೆ. ಇದೇ ರೀತಿ ನಾವೆಯ ನಾಯಕರಾಗಿಯೂ ಅವರು ಕೆಲಸ ನಿರ್ವಹಿಸಿದ್ದಾರೆ. ಅದಕ್ಕಾಗಿ ಅವರ ಹೆಸರಿನ ಮುಂದೆ ನಾಯಕ, ಸಾರಂಗ, ತಾಂಡೇಲ ಎಂಬ ವಿಶೇಷಣಗಳು ಕಾಣಸಿಕೊಳ್ಳುತ್ತವೆ. ಈ ಎಲ್ಲಾ ಮಾಹಿತಿಗಳು ಖಾರ್ವಿಗಳ ಮೂಲವೃತ್ತಿಯನ್ನು ಪರಿಚಯಿಸುವುದರ ಜೊತೆಗೆ ಅವರ ಕಡಲ ಸಾಹಸಗಳನ್ನು ತಿಳಿಸುತ್ತವೆ. ಅಮ್ಮೆಂಬಳ ಅವರ ''ಖಾರ್ವಿ ಇವರಿಗೆ ಕಡಲೇ ಆಸರೆ'' ಎಂಬ ಪ್ರಬಂಧದಲ್ಲಿ ''ಸುಮಾರು ನಾಲ್ಕು ತಲೆಮಾರುಗಳ ಹಿಂದೆ ಈ ಸಮಾಜದ ಬಹು ಮಂದಿಯ ಹಾಯಿ ಹಡಗುಗಳು ವ್ಯಾಪಾರಕ್ಕಾಗಿ ಉತ್ತರಕ್ಕೆ ಮುಂಬಯಿಯವರೆಗೂ ಹೋಗುತ್ತಿದ್ದುವಂತೆ, ಮುಂದೆ ಸಮಾಜದ ಆರ್ಥಿಕ ಪರಿಸ್ಥಿತಿಯ ಕುಸಿತದಿಂದಾಗಿ, ಇಲ್ಲಿನ ಪ್ರಬಲ ವ್ಯಾಪಾರಿಗಳ ಜತೆ ಸ್ಪರ್ಧಿಸುವುದು ಆಗದೆ ಹೋದುದರಿಂದ ಇವರು ವ್ಯಾಪಾರೋದ್ಧಿಮೆಯನ್ನು ಕೈ ಬಿಡಬೇಕಾಯಿತು'' ಎಂದು ತಿಳಿಸಿರುವುದರಲ್ಲಿ ಖಾರ್ವಿಗಳು ಕಡಲ ವ್ಯಾಪಾರಿಗಳೂ ಆಗಿದ್ದರೆಂಬುದು ತಿಳಿಯುತ್ತದೆ. ಹಿಂದೆ ಕಡಲ ಮೇಲಿನ ವಿವಿಧ ಉದ್ಯೋಗಗಳ ಮೂಲಕ ಶ್ರೀಮಂತರಾಗಿದ್ದ ಕೊಂಕಣ ಖಾರ್ವಿಗಳು ಇಂದು ಕೇವಲ ಮೀನುಗಾರಿಕೆಯನ್ನು ಮಾತ್ರ ಅವಲಂಬಿಸಿ ಬದುಕುವ ಜನರಾಗಿದ್ದಾರೆ.

ಕಡಲ ತೀರದಲ್ಲಿ ತಮ್ಮದೇ ಆದ ಮನೆಗಳನ್ನು ನಿರ್ಮಿಸಿಕೊಂಡು ಒಗ್ಗಟ್ಟಿನಿಂದ ಬದುಕುವ ಖಾರ್ವಿಗಳಲ್ಲಿ ಗ್ರಾಮಕ್ಕೊಬ್ಬ ಗುರಿಕಾರನಿದ್ದು ಅವನು ಗ್ರಾಮಸ್ಥರ ಯೋಗಕ್ಷೇಮ ಕಾಪಾಡುವ ವ್ಯಕ್ತಿಯಾಗಿರುತ್ತಾನೆ. 'ಗುರಿಕಾರನ' ಹುದ್ದೆಯು ಸಮಾಜದಲ್ಲಿ ಶ್ರೇಷ್ಠ ಸ್ಥಾನ ಗಳಿಸಿಕೊಂಡಿದ್ದ ಸಾರಂಗ, ನಾಯಕ್, ಹೆಗ್ಡೆ, ಪಟೇಲ್ ಮೊದಲಾದ ಮನೆತನದವರಿಗೆ ಮಾತ್ರ ಮೀಸಲಾಗಿತ್ತು. ಗ್ರಾಮದ ಪ್ರತಿಯೊಂದು ಮಂಗಳ ಕಾರ್ಯವೂ ಗುರಿಕಾರನ ಒಪ್ಪಿಗೆಯಿಲ್ಲದೆ ನಡೆಯುವಂತಿರಲಿಲ್ಲ. ಆತನ ಮಾತನ್ನು ಯಾರೂ ಮೀರುವಂತಿರಲಿಲ್ಲ.

ಧಾರ್ಮಿಕ ವ್ಯವಸ್ಥೆ : ಕೊಂಕಣ ಖಾರ್ವಿಗಳ ಧಾರ್ಮಿಕ ವ್ಯವಸ್ಥೆಯಲ್ಲಿ ವಿಶಿಷ್ಟತೆ ಕಾಣಿಸದಿದ್ದರೂ ಕೆಲವು ಸಂಪ್ರದಾಯ ಮತ್ತು ಆಚರಣೆಗಳಲ್ಲಿ ಅವರು ಕಿಂಚಿತ್ತಾದರೂ ತನ್ನ ತನವನ್ನು ಉಳಿಸಿಕೊಂಡಿದ್ದಾರೆ. ಉಳಿದ ಮೀನುಗಾರರಂತೆ ಇವರು ಜಟ್ಟಿಗ, ಮಾಸ್ತಿ, ಹಾಯ್ಗುಳಿ, ಮಹಾಕಾಳಿ ಮೊದಲಾದ ಶಕ್ತಿದೇವತೆಗಳ ಆರಾಧಕರಾಗಿದ್ದಾರೆ. ಆವರ್ಸದ ಬಾಣೇಶ್ವರಿ ಮತ್ತು ಕಾತ್ಯಾಯನಿ ದೇವತೆಗಳು ಅವರ ಕುಲದೇವತೆಗಳಾಗಿವೆ. ಮಂಗಳ ಮತ್ತು ಅಮಂಗಳ ಕಾರ್ಯಗಳೆರಡರಲ್ಲೂ ಬ್ರಾಹ್ಮಣರನ್ನು ಆಹ್ವಾನಿಸಿ ಅವರಿಂದ ಕಾರ್ಯ ನಿರ್ವಹಿಸುವ ಸಂಪ್ರದಾಯವಿದೆ.

ಮದುವೆ : ಮದುವೆಗೆ ಇವರಲ್ಲಿ ಬಳಿ ಪ್ರಧಾನವಲ್ಲ , ಕುಲದೈವ ಪ್ರಧಾನ. ವಧೂ-ವರರ ಕುಲದೈವ ಒಂದೇ ಇದ್ದರೆ ಮಾತ್ರ ಮದುವೆ ನಿಶ್ಚಯ ಮಾಡಲು ಮುಂದಾಗುತ್ತಾರೆ. ಗುರಿಕಾರನೇ ಮದುವೆಯಲ್ಲಿ ಪ್ರಮುಖ ವ್ಯಕ್ತಿ. ನಿಶ್ಚಯ ಕಾರ್ಯಕ್ಕೆ ಕೊಂಕಣ ಖಾರ್ವಿಗಳು ''ನಿಶ್ಚಯ ತಾಂಬೂಲ'' ವೆಂದು ಕರೆಯುತ್ತಾರೆ. ಅದು ಹೆಣ್ಣಿನ ಮನೆಯಲ್ಲಿ ನಡೆಯುತ್ತದೆ. ಹೆಣ್ಣು ನಿಶ್ಚಯವಾದ ನಂತರ ವಧು ಮತ್ತು ವರನ ಗ್ರಾಮದ ಗುರಿಕಾರರು ತಾಂಬೂಲವನ್ನು ವಿನಿಮಯ ಮಾಡಿಕೊಳ್ಳುತ್ತಾರೆ. ಅನಂತರ ವಧುವಿಗೆ ವರನ ಮನೆಯ ಸೀರೆ, ಕುಪ್ಪಸ ಉಡಿಸಿ ಹೂ ಮುಡಿಸಿ ಮಡಿಲು ತುಂಬುತ್ತಾರೆ. ಅದೇ ದಿನ ತನ್ನ ಮನೆಯಲ್ಲಿ ವರನು ಹೊಸ ಬಟ್ಟೆ ತೊಟ್ಟು ಮುತ್ತೈದೆಗಳಿಂದ '' ಸೇಸೆ ಕಾಳು'' ಹಾಕಿಸಿಕೊಳ್ಳುವ ಸಂಪ್ರದಾಯ ನಡೆಯುತ್ತದೆ.

ಮದುವೆಯ ದಿನ ''ಉದ್ದಿನ ಮುಹೂರ್ತ '' ಇರುತ್ತದೆ. ವರನ ಕಡೆಯವರು ವಧುವಿನ ಊರಿಗೆ ಬಂದಿರುತ್ತಾರೆ. ಅಲ್ಲಿ ಐದು ಜನ ಮುತ್ತೈದೆಯರು ವಧುವಿಗೆ ಹಲಸಿನ ಹಣ್ಣು, ಕೇದಿಗೆ ಹೂ, ಮತ್ತು ಉದ್ದನ್ನು ಕೊಡುತ್ತಾರೆ. ಅವಳು ಉದ್ದನ್ನು ಎಲ್ಲರ ಎದುರು ಬೇಯಿಸಬೇಕಾಗುತ್ತದೆ. ವರನಿದ್ದಲ್ಲಿಗೆ ಕ್ಷೌರಿಕನು ಬಂದು ಕ್ಷೌರ ಮಾಡುತ್ತಾನೆ. ಆನಂತರ ಸ್ನಾನದ ಶಾಸ್ತ್ರ, ಶೃಂಗಾರದ ಶಾಸ್ತ್ರ ನಡೆಯುತ್ತದೆ. ಇದೆ ಸಂದರ್ಭದಲ್ಲಿ ಬ್ರಾಹ್ಮಣನಿಂದ ಜನಿವಾರ ಧಾರಣೆ ಶಾಸ್ತ್ರ ನಡೆಯುತ್ತದೆ. ಇದು ಗಮನಾರ್ಹವಾದುದು. ಶೃಂಗಾರಗೊಂಡ ವರನು ಮದುವೆ ಚಪ್ಪರದೊಳಗೆ ಬರುವ ಮೊದಲು ವಧುವಿನ ತಾಯಿ ಬಂದು ವರನ ಕಾಲು ತೊಳೆದು ಆತನ ಕೈ ಹಿಡಿದು ಚಪ್ಪರದೊಳಗೆ ಕರೆದೊಯ್ಯುತ್ತಾಳೆ. ಅಲ್ಲಿ ಪುರೋಹಿತನಿಂದ ಮುಹೂರ್ತ ಕಾರ್ಯ ಪ್ರಕಾರ ನಡೆಯುತ್ತದೆ. ಹಿಂದೆ ಇವರಲ್ಲಿ ಬಾಲ್ಯ ವಿವಾಹ ಪದ್ಧತಿ ರೂಢಿಯಲ್ಲಿತ್ತೆಂದು ಹೇಳುತ್ತಾರೆ.

ಮುಟ್ಟಿನ ಶಾಸ್ತ್ರ : ಹುಡುಗಿ ಬಾರಿ ಮುಟ್ಟಾದಾಗ ಅವಳು ಸ್ನಾನ ಮಾಡಿದ ದಿನ ಊರಿನ ಪುರೋಹಿತರನ್ನು ಕರೆದು ಮನೆಯಲ್ಲಿ ಗೋಳಿ ಮರದ ಕಟ್ಟಿಗೆಯಿಂದ ಹೋಮ ಮಾಡಿಸುತ್ತಾರೆ. ಹೋಮದ ನಂತರ ಹುಡುಗಿ ಹುಣಸೆ ಹುಳಿಯ ರಸ ಬೆರೆಸಿದ ನೀರಲ್ಲಿ ಸ್ನಾನ ಮಾಡಿ ಶುದ್ಧವಾಗಬೇಕು. ಪಾತ್ರೆಗಳನ್ನು ಶುದ್ಧಗೊಳಿಸಲು ಹುಣಸೆ ಹುಳಿ ಬಳಸುವ ಪದ್ಧತಿಯನ್ನು ಇವರು ಹೆಣ್ಣನ್ನು ಶುದ್ಧಗೊಳಿಸಲು ಬಳಸುವುದು ಗಮನಾರ್ಹವಾದುದು.

ಬಾಣಂತಿ ಶಾಸ್ತ್ರ : ಕೊಂಕಣ ಖಾರ್ವಿಗಳಲ್ಲಿ ಬಾಣಂತಿ ಶಾಸ್ತ್ರವು ಅವರ ವಿಶಿಷ್ಟ ಸಂಪ್ರದಾಯವನ್ನು ಬಿಂಬಿಸುತ್ತದೆ. ಮಗು ಹುಟ್ಟಿದ ನಾಲ್ಕನೇ ದಿನ ಬಾಣಂತಿ, ''ಗರ್ಭದ ಮಾಸು'' ಹುಗಿದ ಸ್ಥಳದಲ್ಲಿ ದೀಪ ಹಚ್ಚಿ, ಎಲೆಯಲ್ಲಿ ಅನ್ನ ಮತ್ತು ಮೀನಿನ ಸಾರಿನ ಎಡೆ ಇಟ್ಟು ನಮಸ್ಕರಿಸುತ್ತಾಳೆ. ದೇವರು ಮಗುವಿನ ಆಯಸ್ಸನ್ನು ಆರನೇ ದಿನ ಬರೆಯುತ್ತಾನೆಂದು ಅವರು ನಂಬುತ್ತಾರೆ. ಆದಿನ ಅವರಿಗೆ ವಿಶೇಷ ದಿನ. ಸೂಲಗಿತ್ತಿಯು ಆ ದಿನದ ವಿಶೇಷ ಅತಿಥಿ. ಮನೆಯಲ್ಲಿ ಬೇಯಿಸಿದ ಅವರೆಕಾಳು, ಕಪ್ಪು ಹೆಸರುಕಾಳು, ತೆಂಗಿನಹೋಳನ್ನು ಮರಸಣಿಗೆಯ ಎಲೆಯಲ್ಲಿಟ್ಟು ಅದನ್ನು ಮಗುವಿನ ಮುಂದೆ ಇಡುತ್ತಾರೆ. ಆ ಸಂದರ್ಭದಲ್ಲಿ ಕೆಲವು ಮತ್ತೈದೆಯರು ಸರದಿ ಪ್ರಕಾರ ತಾಮ್ರದ ಕೊಡಪಾನದ ಬಾಯಿಗೆ ಬಾಯಿಟ್ಟು

ಊದಿ ಶಬ್ದ ಮಾಡುತ್ತಾರೆ. ಈ ಶಬ್ದವು ಆಯಸ್ಸು ಬರೆಯಲು ಬರುವ ದೇವರಿಗೆ ನೀಡುವ ಸ್ವಾಗತವಾಗಿದೆ. ಕಾರ್ಯ ಮಗಿದ ನಂತರ ಬಡಿಸಿದ ನೈವೇದ್ಯವನ್ನು ಮುತ್ತೈದೆಯರು ಪ್ರಸಾದವೆಂದು ಕೊಂಡೊಯ್ಯುತ್ತಾರೆ. ಹನ್ನೆರಡನೆಯ ದಿನ ಪುರೋಹಿತರ ಮನೆಯಿಂದ ಗಂಧ-ತೀರ್ಥವನ್ನು ಸ್ವೀಕರಿಸಿ ಮನೆಯವರೆಲ್ಲಾ ಸೂತಕ ಕಳೆದು ಕೊಳ್ಳುತ್ತಾರೆ. ಬಾಣಂತಿ ಸ್ನಾನ ಮುಗಿಸಿ ಮನೆ ಬಾವಿಯ ಬಳಿ ಬಂದು ವೀಳ್ಯದೆಲೆ ಅಡಿಕೆಯನ್ನು ಬಾವಿಯಲ್ಲಿ ಹಾಕಿ '' ಬಾವಿ ಮುಟ್ಟೊ '' ಶಾಸ್ತ್ರವನ್ನು ಆಚರಿಸುತ್ತಾಳೆ. ಅದೇ ದಿನ ಮಗುವಿಗೆ ತೊಟ್ಟಿಲಿಗೆ ಹಾಕಿ ನಾಮಕರಣ ಮಾಡಲಾಗುತ್ತದೆ.

ಹಬ್ಬಗಳು : ಇವರ ಹಬ್ಬಗಳಲ್ಲಿ ಪ್ರಮುಖವಾದವು '' ನೂಲು ಹುಣ್ಣಿಮೆ'' , ''ಹೋಳಿ ಹುಣ್ಣಿಮೆ ''ಮತ್ತು ಚಂದ್ರ ಯುಗಾದಿ. ನೂಲು ಹುಣ್ಣಿಮೆಯ ದಿನ ಅವರು ವಾದ್ಯದ ಶಬ್ದದೊಡನೆ ಸಮುದ್ರ ತೀರಕ್ಕೆ ಹೋಗಿ ಜನಿವಾರ, ಅವಲಕ್ಕಿ, ಪಂಚಕಜ್ಜಾಯ ಮತ್ತು ವಿವಿಧ ಬಗೆಯ ತಿಂಡಿಗಳನ್ನೆಲ್ಲಾ ಅರ್ಪಿಸಿ ಪೂಜೆ ಸಲ್ಲಿಸುತ್ತಾರೆ. ಆ ಸಂದರ್ಭದಲ್ಲಿ ದೇವರಿಗೆ ತಮ್ಮ ಉದ್ಯೋಗದಲ್ಲಿ ಏಳಿಗೆ ಕೊಡಬೇಕೆಂದು ಂದು ಕೇಳಿಕೊಳ್ಳುತ್ತಾರೆ. ಈ ಮಂಗಳ ಕಾರ್ಯವು ಅವರ ಮುಂದಿನ ಕಡಲ ಕಾರ್ಯಗಳಿಗೆಲ್ಲಾ ನಾಂದಿಯಾಗಿದೆ. ಸಮುದ್ರ ಪೂಜೆಯ ಮೂರನೇ ದಿನ ಅವರು ತಮ್ಮ ತಮ್ಮ ದೋಣಿಗಳನ್ನು ಕಡಲಿಗಿಳಿಸಿ ಉದ್ಯೋಗ ಪ್ರಾರಂಭಿಸುತ್ತಾರೆ. ನೂಲು ಹುಣ್ಣಿಮೆ ದಿನದಲ್ಲಿನ ಆಚರಣೆಯಲ್ಲಿ ಗಮನಾರ್ಹವಾದುದೆಂದರೆ ಆ ದಿನ ಧರಿಸುವ ಜನಿವಾರವನ್ನು ಏಳೆಂಟು ದಿನಗಳ ನಂತರ ತೆಗೆದಿರಿಸಿ ತಮ್ಮ ಮೂಲ ಸಂಸ್ಕೃತಿಗೆ ಹಿಂದಿರುಗುವುದು. ಜನಿವಾರ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾದ ಕೊಂಕಣ ಖಾರ್ವಿಗಳು ಅದನ್ನು ತಾತ್ಕಾಲಿಕ ಆಚರಣೆಯಲ್ಲಿ ಮಾತ್ರ ಉಳಿಸಿಕೊಂಡು ತಮ್ಮ ಸಂಸ್ಕೃತಿಯನ್ನು ಬಲವಾಗಿ ಅಪ್ಪಿಕೊಂಡು ಬದುಕುತ್ತಿರುವುದು ವಿಶಿಷ್ಟವಾದುದು.

ಕೊಂಕಣಿ ಖಾರ್ವಿಗಳು ಹೋಳಿಹುಣ್ಣಿಮೆಯ ಮೊದಲೆರಡು ರಾತ್ರಿಗಳು ಡೋಲು ಬಾರಿಸುತ್ತಾ, ಕೊಂಕಣಿ ಹಾಡುಗಳನ್ನು ಹಾಡುತ್ತಾ ಮನೆ ಮನೆಗೆ ಹೋಗಿ ಅಲ್ಲಿ ಕೊಟ್ಟಿದ್ದನ್ನು ಸ್ವೀಕರಿಸಿ ಮಧ್ಯರಾತ್ರಿಗೆ ಮನೆಗೆ ಹಿಂದಿರುಗುತ್ತಾರೆ. ಹುಣ್ಣಿಮೆಯ ರಾತ್ರಿ ಊರಿನ ಮನೆಯವರೆಲ್ಲಾ ತೆಂಗಿನ ಗರಿಗಳನ್ನು ತಂದು ಗದ್ದೆಯೊಂದರಲ್ಲಿ ರಾಶಿ ಹಾಕುತ್ತಾರೆ. ಅಷ್ಟರೊಳಗೆ ಯುವಕರು ಹರಕು ಬಟ್ಟೆ ತೊಟ್ಟು ಒಬ್ಬರ ಮೈಮೇಲೆ ಮತ್ತೊಬ್ಬರು ಧೂಳೆರಚುತ್ತಾ, ಡೋಲು ಬಾರಿಸುತ್ತಾ, ಕುಣಿಯುತ್ತಾ ಗದ್ದೆಗೆ ಬರುತ್ತಾರೆ. ಬೆಂಕಿಯ ಮುಂದೆ ಕುಣಿಯುತ್ತಿರುವ ಯುವಕರಲ್ಲಿ ನಾಲ್ವರಿಗೆ ದೈವ ಮೈಮೇಲೆ ಬಂದು ಅವರು ಸ್ಮಶಾನದ ಕಡೆಗೆ ಓಡಿ ಹೋಗಿ ಅಲ್ಲಿ ಹೆಣ ಸುಟ್ಟಾಗ ಸಿಡಿದಿದ್ದ ಎಲುಬು ಚೂರುಗಳನ್ನು ಆಯ್ದು ತಂದು ಗದ್ದೆಯಲ್ಲಿ ಸೇರಿರುವ ಜನರಿಗೆ ತೋರಿಸುತ್ತಾರೆ. ಆನಂತರ ಆ ಚೂರುಗಳನ್ನು ಹೊಂಡ ತೆಗೆದು ಹೂತು ಅದರ ಮೇಲೆ ಒಂದು ಗಿಡ ನೆಡುತ್ತಾರೆ. ಈ ಆಚರಣೆಯ ಬಗ್ಗೆ ಆಮ್ಮೆಂಬಳರವರು ''ಶಿವನ ಹಣೆಗಣ್ಣಿನಿಂದ ಉರಿದು ಬೂದಿಯಾದ ಮನ್ಮಥ ಮುಂದೆ ಅವನ ಕರುಣೆಯಿಂದ ಅನಂಗನಾಗಿ, ಚಿರಂಜೀವಿಯಾಗಿ ಬಾಳಿ ಬದುಕುವುದರ ಸಂಕೇತಾರ್ಥ '' ಎಂದು ಅಭಿಪ್ರಾಯಪಡುತ್ತಾರೆ.

ಸ್ಮಶಾನದಿಂದ ತಂದ ಮೂಳೆಗಳನ್ನು ಹುಗಿದ ನಂತರ ಹೋಳಿ ದಹನ ಮಾಡುತ್ತಾರೆ. ಆಗ ಯುವಕರು ಡೋಲು ಬಾರಿಸುತ್ತಾ ಕೊಂಕಣಿ ಪದ ಹಾಡುತ್ತಾ ಬೆಂಕಿಯ ಸುತ್ತಾ ಪ್ರದಕ್ಷಿಣೆ ಹಾಕುತ್ತಾರೆ. ದಹನ ಕ್ರಿಯೆ ಮುಗಿದ ನಂತರ ಎಲ್ಲರೂ ಮನೆಗೆ ಹಿಂದಿರುಗುತ್ತಾರೆ. ಮಾರನೆಯ ದಿನ ಗಂಡಸರು ಹೆಂಗಸರು ಮತ್ತು ಮಕ್ಕಳೆಲ್ಲಾ ಸ್ನಾನ ಮಾಡಿ ಗುಡಿಗೆ ಹೋಗಿ ಪೂಜೆ ಸಲ್ಲಿಸಿ ಹಿಂದಿರುಗುತ್ತಾರೆ. ಆಗ ಯುವಕರೆಲ್ಲರೂ ದಾರಿಯುದ್ದಕ್ಕೂ ಕೋಲಾಟ ನೃತ್ಯವಾಡುತ್ತಾ ಬರುತ್ತಾರೆ.

ನೂಲುಹುಣ್ಣಿಮೆ ಖಾರ್ವಿಗಳ ವೈಷ್ಣವ ಸಂಪ್ರದಾಯದ ಆಚರಣೆಯನ್ನು ತಿಳಿಸಿದರೆ ಹೋಳಿ ಹುಣ್ಣಿಮೆ ಶೈವ ಸಂಪ್ರದಾಯದ ಆಚರಣೆಯನ್ನು ಪರಿಚಯಿಸುತ್ತದೆ. ಒಟ್ಟಿನಲ್ಲಿ ಕೊಂಕಣ ಖಾರ್ವಿಗಳು, ಶೈವ ಮತ್ತು ವೈಷ್ಣವ ಸಂಪ್ರದಾಯಗಳೆರಡರ ಪ್ರಭಾವಕ್ಕೂ ಒಳಗಾಗಿರುವ ಮಾಂಸಾಹಾರಿ ಸಂಸ್ಕೃತಿಯ ಜನ.

ಕೊಂಕಣಿ ಖಾರ್ವಿಗಳ ಚಾಂದ್ರಯುಗಾದಿಯು , ಚಂದ್ರಮಾನ ಯುಗಾದಿಯ ಆಚರಣೆಯೇ ಆಗಿರುವುದರಿಂದ ಅದರಲ್ಲಿ ವಿಶೇಷತೆಗಳೇನೂ ಕಾಣಿಸುವುದಿಲ್ಲ.

ಇವರ ಪ್ರಮುಖ ಉದ್ಯೋಗ ಮೀನುಗಾರಿಕೆಯಾಗಿರುವುದರಿಂದ ಇವರು ಮೊದಲು ತಮ್ಮದೇ ಆದ ದೋಣಿ ಮತ್ತು ಬಲೆಗಳನ್ನು ಹೊಂದುವ ಕಡೆ ಗಮನ ಕೊಡುತ್ತಾರೆ. ಇಂದು ಹಲವು ಪರ್ಶಿಯನ್ ದೋಣಿಗಳ ಮಾಲೀಕರು ಕೊಂಕಣ ಖಾರ್ವಿಗಳಾಗಿದ್ದಾರೆ. ಮೀನು ಸಂರಕ್ಷಣೆಗೆ ಬೇಕಾಗುವ ಐಸ್ ಫ್ಯಾಕ್ಟ್ರಿಗಳ ಮಾಲೀಕರು ಅವರಾಗಿದ್ದಾರೆ. ಹೀಗಿದ್ದರೂ ಶೇಕಡಾ 60ರಷ್ಟು ಜನ ಇನ್ನು ತಮ್ಮ ದೈನಂದಿನ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವ ಮಟ್ಟವನ್ನು ಸಹ ಮುಟ್ಟಿಲ್ಲ. ' ಸರಕಾರದ ಸೌಲಭ್ಯಗಳೆಲ್ಲ ಶ್ರೀಮಂತರಿಗೆ ಸಿಗುತ್ತಿವೆ'. ಎಂಬುದು ಇವರ ಹೇಳಿಕೆ. ಆದರೂ ಕರ್ನಾಟಕ ಕರಾವಳಿಯಲ್ಲಿ ಕಡಲ ಕೃಷಿಕರಲ್ಲಿ ಮೊಗವೀರರ ನಂತರ ಖಾರ್ವಿಗಳ ಹೆಸರು ನಿಲ್ಲುತ್ತದೆ.

ಅಂಬಿಗರು : – 'ಅಂಬಿಗ' ಎಂಬ ಪದವು ಸಂಸ್ಕೃತದ ''ಅಂಬು'' ಎಂಬ ಪದದಿಂದ ಬಂದಿದೆ. ವೈ.ಎಸ್. ದುರ್ಗೇಕರರವರು ಅಂಬು ಎಂದರೆ ದೋಣಿ ಈ ದೋಣಿ ನಡೆಸುವವರೇ ಅಂಬಿಗರಾದರು.'' ಎಂದು ಅಭಿಪ್ರಾಯಪಟ್ಟಿದ್ದಾರೆ. ಹಿಂದೆ ಹೊಳೆ ದಾಟಿಸಲು ಸಮುದ್ರದಲ್ಲಿ ಪ್ರಯಾಣ ಮಾಡಲು ಅಂಬಿಗರ ದೋಣಿಯೇ ಬೇಕಾಗಿತ್ತು. ರಸ್ತೆಯ ನದಿಯ ದಡಕ್ಕೆ ಕೊನೆಗೊಳ್ಳುತ್ತಿದ್ದ ಕಾರಣದಿಂದ ಪ್ರಯಾಣಿಕರನ್ನು ನದಿ ದಾಟಿಸಿ ಪ್ರಯಾಣ ಮುಂದುವರಿಸಲು ನೆರವಾಗುತ್ತಿದ್ದ ಮಂದಿ ಅಂಬಿಗರಾಗಿದ್ದರು. ರಾಮಾಯಣ ಮಹಾಭಾರತಗಳಲ್ಲಿ ಅಂಬಿಗರು ಕುಲಜರಾಗಿ ಕಾಣಿಸಿಕೊಂಡಿದ್ದಾರೆ. ಅಂಬಿಗರನ್ನೇ ಅಲ್ಲಿ ಬೆಸ್ತರೆಂದು ಕರೆಯಲಾಗಿದೆ.

ಪ್ರಾಚೀನ ಇತಿಹಾಸ ಪಡೆದಿರುವ ಅಂಬಿಗರು ಉತ್ತರ ಕನ್ನಡ ಜಿಲ್ಲೆಯ ಕಡಲ ತೀರದಲ್ಲಿ ಮತ್ತು ಪ್ರಮುಖ ನದಿಗಳ ದಡದಲ್ಲಿ ವಾಸವಾಗಿದ್ದಾರೆ. ನದಿ ಮತ್ತು ಸಮುದ್ರಗಳೆರಡರಲ್ಲೂ ದೋಣಿ ನಡೆಸುವುದರಲ್ಲಿ ಪ್ರವೀಣರಾದ ಇವರು ಮೀನು ಹಿಡಿಯುವುದರಲ್ಲೂ ಚತುರರು. ಇತ್ತೀಚೆಗೆ ನದಿಗಳ ಮೇಲೆ ಸೇತುವೆಗಳು ನಿರ್ಮಾಣಗೊಂಡು ಸಾರಿಗೆಯ ಸೌಲಭ್ಯ ಉತ್ತಮಗೊಂಡ ಕಾರಣದಿಂದ ಪ್ರವಾಸಿಗರನ್ನು ನದಿ ದಾಟಿಸುವಂತಹ ಅಂಬಿಗರ ಮೂಲ ಕಸುಬು ನಿಂತು ಹೋಗಿ ಮೀನುಗಾರಿಕೆಯಿಂದ ಅವರ ಜೀವನ ಸಾಗುತ್ತಿದೆ. ಅಲ್ಲದೆ ಯಾಂತ್ರಿಕ ದೋಣಿಗಳು ಬಂದ ನಂತರ ನಾಡ ದೋಣಿಗಳನ್ನವಲಂಭಿಸಿ ಬದುಕುತ್ತಿರುವ ಅಂಬಿಗರ ಸ್ಥಿತಿ ಶೋಚನೀಯವಾಗಿದೆ. ಅವರು ಗಾಳದಿಂದ ಮತ್ತು ಬಲೆಗಳಿಂದ ನದಿ ಮತ್ತು ಸಮುದ್ರಗಳಲ್ಲಿ ಸಾಕಷ್ಟು ಮೀನು ಹಿಡಿದು ಮಾರಾಟ ಮಾಡಿ ಬರುವ ಹಣದಲ್ಲಿ ರಾಗಿ ಗಂಜಿ ಮತ್ತು ಮೀನೂಟ ಮಾಡುತ್ತಾರೆ. ಅವರು ಶಾಲೆಗಳ ಬಗ್ಗೆ ಹೇಳುವುದೆಂದರೆ '' ಶಾಲೆಗಳು ತಮಗಾಗಿ ಅಲ್ಲ, ತಮಗೂ ಅದಕ್ಕೂ ಸಂಬಂಧವೆ ಇಲ್ಲ. ಅಪ್ಪ ನೀರಿನಲ್ಲಿ, ಅಮ್ಮ ಕೇರಿಯಲ್ಲಿ, ಮಕ್ಕಳು ದಾರಿಯಲ್ಲಿ'' ಎಂಬ ಅವರ ಮಾತೇ ಅವರ ಬದುಕಿನ ಚಿತ್ರಣವನ್ನು ಕಣ್ಮುಂದೆ ನಿಲ್ಲಿಸಬಲ್ಲದು. ತೆಂಗಿನ ಮಡಿಲ ಹೊದಿಕೆಯ ಗುಡಿಸಲುಗಳೇ ಅವರ ಜೀವನ ಸ್ಥಿತಿಯನ್ನು ಪರಿಚಯಿಸುತ್ತವೆ. '' ಸಿಕ್ಕಾಗ ಶಿಕಾರಿ, ಇಲ್ಲದಾಗ ಭಿಕಾರಿ'' ಎಂದು ಅವರ ತಮ್ಮ ಉದ್ಯೋಗದ ಬಗ್ಗೆ ಗಾದೆ ಕಟ್ಟಿರುವುದನ್ನು ಗಮನಿಸಿದಾಗ ಅವರ ಉದ್ಯೋಗ ಕಣ್ಣು ಮುಚ್ಚಾಲೆ ಆಟವಾಗಿದೆ. ಈ ಕಾರಣದಿಂದ ಇಂದಿಗೂ ಅವರು ಬಡತನದ ಗಡಿ ರೇಖೆಯನ್ನು ದಾಟಿಲ್ಲ. ಆದರೂ ಚಿಂತೆಯಿಲ್ಲದೆ ಅವರು ಬದುಕು ಸಾಗಿಸುತ್ತಾರೆಂಬುದಕ್ಕೆ ಅವರ ದಷ್ಟ ಪುಷ್ಟ ಮೈಕಟ್ಟು ಸಾಕ್ಷಿ.

ಕನ್ನಡ ಮಾತನಾಡುವ ಅಂಬಿಗರಿಗೆ ಅಂಕೋಲಾ ತಾಲೂಕಿನ ಗಂಗಾವಳಿಯಲ್ಲಿನ ಗಂಗೆ ಕುಲದೇವತೆ. ಪ್ರತೀ ಅಶ್ವಿನೀ ಶುದ್ಧ ಅಷ್ಟಮಿಯಂದು ಅವರ ಗೋಕರ್ಣೇಶ್ವರನ ದಿಬ್ಬಣ, ಗಂಗೆಯ ಮದುವೆಗಾಗಿ ಗಂಗಾವಳಿಗೆ ಬರುತ್ತಾವೆ. ಆಗ ಅವರು ತಾವು ಹೊತ್ತ ಹರಕೆಗಳನ್ನು ಭಯ ಭಕ್ತಿಯಿಂದ ಸಲ್ಲಿಸುತ್ತಾರೆ. ಪ್ರತಿ ವರ್ಷ ಏಪ್ರಿಲ್, ಮೇ ತಿಂಗಳಲ್ಲಿ ಹರಕೆ ಹೊತ್ತವರು ಒಂದೊಂದು ಗ್ರಾಮದವರು '' ಸೋಮಾರಜ್ಞ'' ಎಂಬ ವಿಶೇಷ ಪೂಜೆ ಸಲ್ಲಿಸುತ್ತಾರೆ. ಬಹಳ ಹಿಂದಿನಿಂದಲೂ ಈ ವಿಶೇಷ ಪೂಜೆಯ ಸಂಪ್ರದಾಯ ಅವರಲ್ಲಿ ಆಚರಣೆಯಲ್ಲಿದೆ.

ಅಂಬಿಗರಲ್ಲಿನ ಕಾಣುವ ಸಾಮಾನ್ಯ ಗಂಡಸರ ಹೆಸರುಗಳೆಂದರೆ ಜಟ್ಟಿ, ಕಿಂಟ, ತಿಮ್ಮಪ್ಪ, ದುರ್ಗ, ಮಾಸ್ತಿ, ಹೊನ್ನಪ್ಪ, ವೆಂಕ, ಬಡಕ್ಕ ಮೊದಲಾದವು. ಸ್ತ್ರೀಯರಿಗೆ ಮಾರಿ, ದೇವಿ, ಸುಕ್ರಿ, ಹೊನ್ನಿ, ಜಟ್ಟಿ, ಪುಟ್ಟಿ, ಮಾಸ್ತಿ ಮೊದಲಾದವು ಹೆಸರುಗಳಿಡುತ್ತಾರೆ. ಇತ್ತೀಚೆಗೆ ನವೀನ ಹೆಸರುಗಳು ಇವರ ಮೇಲೂ ಪ್ರಭಾವ ಬೀರಿವೆ.

ಒಳಾಡಳಿತ ವ್ಯವಸ್ಥೆಯಲ್ಲಿ ಪ್ರತೀ ಗ್ರಾಮಕ್ಕೂ ಒಬ್ಬ ''ಮೆತ್ರಿ'' ಅಥವಾ 'ಬುದುವಂತ' ಎಂಬ ಆಡಳಿತಗಾರನಿದ್ದು, ಅವನಿಗೆ ಸಹಾಯಕನಾಗಿ 'ಕೋಲುಕಾರ ' ನೆಂಬ ವ್ಯಕ್ತಿಯಿರುತ್ತಾನೆ. ಮದುವೆ ನಿಶ್ಚಯವಾದ ಸಂದರ್ಭದಿಂದ ಹಿಡಿದು ಅದು ಪೂರ್ಣಗೊಳ್ಳುವ ವರೆಗೆ 'ಬುದುವಂತ' ನೇ ಪ್ರಮುಖ ವ್ಯಕ್ತಿ. ಈತನು ಆಡಳಿತಗಾರನಾಗಿ , ನ್ಯಾಯಾಧೀಶನಾಗಿ, ಸಲಹೆಗಾರನಾಗಿ, ಸಮಾಜ ಸುಧಾರಕನಾಗಿ ಕೆಲಸ ನಿರ್ವಹಿಸುತ್ತಾನೆ .

ಅಂಬಿಗರು ಶೃಂಗೇರಿ ಶಾರದೆಯ ಪರಮ ಭಕ್ತರು. ಅಲ್ಲಿನ ಪ್ರಸಾದವಿಲ್ಲದೆ ಅವರು ಯಾವ ಪ್ರಮುಖ ಕಾರ್ಯವನ್ನೂ ಮಾಡುವುದಿಲ್ಲ. ಶೃಂಗೇರಿ ಸ್ವಾಮಿಗಳ ಮಾತು ಅವರಿಗೆ ವೇದ ವಾಕ್ಯ, ಇವರ ಕುಲದೇವತೆ ' ಗಂಗೆ' ಯಾದರೆ, ಗ್ರಾಮದೇವತೆ ''ಜಟ್ಟಿಗ''. ಇವೆರಡರ ಹೊರತು ಮಾಸ್ತಿ, ಮಾರಿ, ಹಾಯ್ಗುಳ್ಳಿ, ಮೊದಲಾದ ದೇವತೆಗಳ ಬಗ್ಗೆಯೂ ಇವರಲ್ಲಿ ಅಚಲ ಭಕ್ತಿಯಿದೆ. ನರ್ಲಿ - ಪೂರ್ಣಿಮ, ದಸರಾ, ದೀಪಾವಳಿ, ಆಷಾಡ, ಏಕಾದಶಿ, ಶಿಮ್ಗ, ಕಾರ್ತಿಕ, ಏಕಾದಶಿ ಮೊದಲಾದವುಗಳು ಇವರ ಪ್ರಮುಖ ಹಬ್ಬಗಳು.

ಸತ್ತವರನ್ನು ಸುಡುವ ಮತ್ತು ಹೂಳುವ ಎರಡು ಪದ್ಧತಿಗಳು ಜಾರಿಯಲ್ಲಿವೆ. ಸತ್ತವರ ಆತ್ಮವು ತಮ್ಮ ಬಂಧುಗಳ ಆತ್ಮದೊಡನೆ ಸೇರುತ್ತದೆ ಎಂದು ಇವರು ನಂಬುತ್ತಾರೆ. ಆ ದಿನವನ್ನು ಅವರು '' ಮಹಾಲಯ ಪಕ್ಷ '' ಅಥವಾ '' ಎಲ್ಲಾ ಆತ್ಮಗಳನಂದ '' ಎಂದು ಕರೆಯುತ್ತಾರೆ. ಆದಿನ ಸತ್ತವರ ಆತ್ಮಗಳನ್ನು ನೆನಪಿಸಿಕೊಂಡು ವಿಶೇಷ ಪೂಜೆ ಸಲ್ಲಿಸುತ್ತಾರೆ.

ಆಧುನಿಕತೆಯ ಪ್ರಭಾಕ್ಕೊಳಗಾಗುತ್ತಿರುವ ಅಂಬಿಗರು ಈಗೀಗ' ನೌಕರಿಗೆ ಹೋಗುವ ಹಾಗೂ ವ್ಯಾಪಾರೋದ್ಯಮದಲ್ಲಿರುವ ಮನಸ್ಸು ಮಾಡುತ್ತಿದ್ದಾರೆ. ಆದರೂ ಶೇ 70 ರಷ್ಟು ಅಂಬಿಗರು ತಮ್ಮ ಕುಲಕಸುಬನ್ನೇ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ.

ಹರಿಕಂತರು :

ಕರ್ನಾಟಕ ಕರಾವಳಿಯ ಉತ್ತರ ಕನ್ನಡ ಜಿಲ್ಲೆಯಲ್ಲಿ ದಟ್ಟವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿರಳವಾಗಿ ಹರಡಿರುವ ಹರಿಕಾಂತರು ಸಮುದ್ರವನ್ನಾಶ್ರಯಿಸಿ ಬದುಕುತ್ತಿರುವ ಜನಾಂಗ. ಇವರನ್ನು ''ಹರ್ಕಂತ್ರು'', ''ಕಾರ್‌ರು'' ಎಂದೂ ಸಹ ಕರೆಯುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕನ್ನಡ ಖಾರ್ವಿಗಳೆಂಬ ಹೆಸರಲ್ಲಿ ಇವರು ಹೆಚ್ಚು ಪರಿಚಯವಾಗಿದ್ದಾರೆ.

ಮೂಲ : 'ಹರಿಕಂತ' ಎಂಬ ಹೆಸರು ಮೀನುಗಾರರಿಗೆ ಬರಲು ಕಾರಣವೇನೆಂಬುದರ ಬಗ್ಗೆ ಹಲವರು ಹಲವು ಬಗೆಯಾದ ಅಭಿಪ್ರಾಯ ನೀಡಿದ್ದಾರೆ.

ಕೆನರಾ ಗೆಜಟಿಯರ್‌ನಲ್ಲಿ 'ಹರಿಕರ್ತರ' ಎಂಬ ಪದದಿಂದ ''ಹರಿಕಂತ'' ಎಂಬ ಪದ ಬಂದಿದೆ. ಹುರಿಯನ್ನು ಹೆಣೆಯುತ್ತಿದ್ದವರನ್ನು ಹುರಿಕರ್ತರು ಎನ್ನುತ್ತಿದ್ದರು . ಹಿಂದೆ ಹರಿಕಂತರು ಹುರಿ ಹೆಣೆಯುತ್ತಿದ್ದರೆಂದು ಅದು ಅವರ ಉಪಕಸುಬಿನಲ್ಲಿ ಒಂದಾಗಿತ್ತು ಎಂದು ತಿಳಿಸಲಾಗಿದೆ.

ಈ ಅಭಿಪ್ರಾಯವನ್ನು ಪ್ರೊ : ಟಿ.ಟಿ. ತಾಂಡೇಲರು ಒಪ್ಪದೆ ಹರಿಕಂತ ಎಂಬ ಪದದಿಂದಲೇ 'ಹುರಿಕಾರತರ' ಎಂಬ ಪದವಾಗಿರಬಹುದೆಂದು ಅಭಿಪ್ರಾಯ ಪಡುತ್ತಾರೆ.

ಎಸ್. ಸಿಲ್ವಾ ಅವರು ಕಾರವಾರ ಜಿಲ್ಲಾ ದರ್ಶನದಲ್ಲಿ , ಹರಕಂತ ಎಂದರೆ ಸಂಸ್ಕೃತದಲ್ಲಿ '' ಸಮುದ್ರದ ಒಕ್ಕಲಿಗ '' ಎಂದು ಅರ್ಥೈಸಿದ್ದಾರೆ. ಇದನ್ನು ವಿ.ಗ. ನಾಯಕರು ಹರಿಕಾಂತರ ಸಂಸ್ಕೃತಿಯೆಂಬ ಕೃತಿಯಲ್ಲಿ ಸಂಸ್ಕೃತದಲ್ಲಿ ಈ ಅರ್ಥ ಬರುವುದೇ ಇಲ್ಲವೆಂದು ತಿರಸ್ಕರಿಸಿದ್ದಾರೆ.

'ಹರಕಾಂತ' ಎಂದರೆ 'ಶಿವನಿಗೆ ಸುಂದರ ಜನ' ಎಂದು ಕೆಲವರು ಅರ್ಥ ಹುಡುಕಿದರೆ ಕೆಲವರು 'ಹರ' ಎಂದರೆ 'ಶಿವ' 'ಕಂತ' ಎಂದರೆ 'ಚಂದ್ರ' ಎಂದು ಅರ್ಥೈಸಿ ಹರಕಂತರನ್ನು ಶಿವನ ಮಕ್ಕಳನ್ನಾಗಿಸಿದ್ದಾರೆ. ಈ ಅಭಿಪ್ರಾಯಗಳನ್ನು ವಿ.ಗ. ನಾಯಕರು ಒಪ್ಪಿಕೊಂಡು 'ಹರನ ಕಡೆಯವರು > ಹರಕಂತೆಯವರು > ಹರಕಂತರವರು > ಹರ್ಕಂತ್ರರವರು ಎಂದಾಗಿರುವ ಸಾಧ್ಯತೆ ಹೆಚ್ಚೆಂದು ತಿಳಿಸುತ್ತಾರೆ.

ವೈ.ಎಸ್. ದುರ್ಗೇಕರ್‌ರವರು ಹರಕಂತ್ರರು ಹಿಂದೆ ಸ್ವಾಮಿಗಳ ಪಲ್ಲಕ್ಕಿ ಹೊರುವ ಕೆಲಸದಲ್ಲಿದ್ದು ಅವರಿಗೆ ಸ್ವಾಮಿಗಳಿಂದ ಬಹುಮಾನ ಸಿಕ್ಕುವುದರ ಜೊತೆಗೆ ಸಂಸ್ಕೃತದ'' ಕಡಲ ಕೃಷಿಕ'' ರೆಂಬ ಅರ್ಥದ'' ಹರಕಂತರು'' ಎಂಬ ಹೆಸರು ನಾಮಕರಣವಾಯಿತೆಂದು ತಿಳಿಸುತ್ತಾರೆ.

ಟಿ.ಟಿ. ತಾಂಡೇಲರೂ ಸಹ ಶೃಂಗೇರಿ ಸ್ವಾಮಿಗಳಿಂದ ಕಡಲನ್ನು ನಂಬಿ ಬದುಕುವ ಈ ಜನರಿಗೆ '' ಹರಕಂತರು '' ಎಂದು ನಾಮಕರಣವಾಯಿತೆಂಬುದನ್ನೆ ವ್ಯಕ್ತಪಡಿಸುತ್ತಾರೆ.

ಈ ಎಲ್ಲಾ ಅಭಿಪ್ರಾಯಗಳನ್ನು ಗಮನಿಸಿದರೆ '' ಹರಿಕಾಂತರ '' ನ್ನು ಹರಕಾಂತರೆಂದು ಕರೆದು ಶಿವ ಭಕ್ತರ ಕಡೆ ಕೊಂಡೊಯ್ಯುವ ಪ್ರಯತ್ನವೇ ಹೆಚ್ಚಾಗಿ ಕಂಡು ಬರುತ್ತದೆ. ' ಹರಿಕಾಂತ ' ಎಂಬ ಪದದಿಂದ ಇವರು ವಿಷ್ಣುಭಕ್ತರೆಂದು ತಿಳಿಯುವ ಸಾಧ್ಯತೆಗಳೇ ಹೆಚ್ಚು. ಅವರು ಹಿಡಿವ ಮೀನುಗಳಲ್ಲಿ ರಾಮ್ ಶ್ರೀ ಮೀನು ಮತ್ಸ್ಯಾವತಾರ ತಾಳಿದ ವಿಷ್ಣುವಿನ ಪ್ರತೀಕವಾಗಿದೆ. ಅದೇ ರೀತಿ ಕೂರ್ಮಾವತಾರದಲ್ಲಿ ವಿಷ್ಣು ಕಾಣಿಸಿಕೊಂಡಾಗ ಕೂರ್ಮಾ ಮೀನಾಯಿತು. ಆದ್ದರಿಂದ ಇವೆರಡೂ ಮೀನುಗಳನ್ನು ತಿನ್ನುವುದು ಅವರಲ್ಲಿ ನಿಷೇಧ ಹಾಗೂ ಶನಿವಾರ ಮೀನು ತಿನ್ನಬಾರದು ಎಂಬ ನಂಬಿಕೆಗಳು ಹರಿಕಾಂತರು ವಿಷ್ಣುಭಕ್ತರೆಂಬುದಕ್ಕೆ ಹೆಚ್ಚಿನ ಒತ್ತು ಕೊಡುತ್ತವೆ. ಹರಿಯಕಾಂತರು, ಹರಿಕಾಂತರಾಗಿ ಪ್ರಚಲಿತವಾಗಿರಬಹುದು. ಎಸ್. ಸಿಲ್ವಾರವರು ಖಾರ್ವಿಗಳೇ ಹರಿಕಂತರು ಎಂದು ತಿಳಿಸಿ ತುಳುನಾಡಿನ ಮೊಗವೀರರಲ್ಲಿ ಕನ್ನಡ ಮಾತನಾಡುವ ಮೊಗವೀರರಿಗೆ ಹೊಸ ಹೆಸರಿನಿಂದ ಕರೆದರು. ಆಹೆಸರೇ 'ಹರಕಂತರು' ಎಂದು, ಅವರು ತುಳುನಾಡ ಜನರೆಂದು ಅಭಿಪ್ರಾಯ ಪಡುತ್ತಾರೆ. ಪ್ರೊ: ಟಿ.ಟಿ. ತಾಂಡೇಲರು ಸಹ ಹರಿಕಾಂತರ ಮೂಲವನ್ನು ತುಳುನಾಡಿಗೇ ಕೊಂಡೊಯ್ಯುತ್ತಾರೆ.

ವೈ. ಎಸ್. ದುರ್ಗೇಕರರು '' ಶ್ರೀಮಂತರು ಹಿಂದೆ ಮಂಚಲ ಬಳಸುತ್ತಿದ್ದುದರಿಂದ ಅದನ್ನು ಹೊರಲು ಹರಿಕಾಂತರು ಬರುತ್ತಿದ್ದರು. ಆಗ ಶ್ರೀಮಂತರ ಜೊತೆಯಲ್ಲಿ ಇವರು ಗೋವಾದಿಂದ ಬಂದಿರಬೇಕೆಂದು '' ತಿಳಿಸುತ್ತಾರೆ. ಆದರೆ ಗೋವಾದಿಂದ ಬಂದಿದ್ದರೆ ಅವರಲ್ಲಿ ಕೊಂಕಣಿ ಭಾಷೆಯ ಸೊಗಡು ಸ್ವಲ್ಪವಾದರೂ ಉಳಿಯಬೇಕಾಗಿತ್ತು.

ವಿ.ಗ. ನಾಯಕರು ತಮ್ಮ ಕ್ಷೇತ್ರ ಕಾರ್ಯದಲ್ಲಿ ದೊರೆತ ಐತಿಹ್ಯದ ಮೂಲಕ ಹರಿಕಾಂತರ ಮೂಲ ತಿಳಿಸುತ್ತಾರೆ. ಹಿಂದೆ ಹರಕಂತರು ಬ್ರಾಹ್ಮಣರಾಗಿದ್ದರು. ಒಂದು ಕಾಲದಲ್ಲಿ ಕ್ಷತ್ರಿಯರನ್ನು ಸಂಹರಿಸಿದ ಪರಶುರಾಮನು ಬ್ರಾಹ್ಮಣರನ್ನು ಕರೆದು ತಾನು ಸೃಷ್ಟಿಸಿದ ಭೂಮಿಯನ್ನು ದಾನ ಮಾಡುತ್ತಾನೆ. ಆದರೆ ಕಶ್ಯಪ ಗೋತ್ರದ ಚಂದ್ರ ವಂಶದ ಎಂಟು ಜನ ಬ್ರಾಹ್ಮಣರು ಅಲ್ಲಿಗೆ ತಡವಾಗಿ ಬಂದು ದಾನ ಬೇಡಿದ ಪರಿಣಾಮವಾಗಿ ಪರಶುರಾಮನಿಂದ '' ಕುಲಭ್ರಷ್ಟರಾಗಿ ಹೋಗಿ'' ಎಂಬ ಶಾಪಕ್ಕೆ ಗುರಿಯಾಗುತ್ತಾರೆ. ನೊಂದ ಬ್ರಾಹ್ಮಣರು ಕುಬೇರನಲ್ಲಿಗೆ ಹೋಗಿ (ಕೆಲವರು ವಿಷ್ಣುವಿನಲ್ಲಿ ಎನ್ನುತ್ತಾರೆ) ಪರಿಹಾರ ಯಾಚಿಸುತ್ತಾರೆ. ಆತನು 'ಹತ್ತಿರದ ಕಡಲನ್ನು ನಿಮ್ಮದಾಗಿಸಿಕೊಳ್ಳಿ, ಅದರ ಒಡಲಲ್ಲಿರುವುದನ್ನು ಹಿಡಿದು ತಿಂದು ಬದುಕಿಕೊಳ್ಳಿ'' ಎಂದು ದಾರಿ ತೋರಿಸುತ್ತಾನೆ. ಆ ಹೊತ್ತಿನಿಂದ ಆ ಬ್ರಾಹ್ಮಣರು ಜನಿವಾರ ತೊರೆದು ಮೀನುಗಾರರಾದರು ಎನ್ನುತ್ತಾರೆ.

ಇವರು ಮೊದಲು ಜನಿವಾರ ಹಾಕಿಕೊಂಡೇ ಇರುತ್ತಿದ್ದರು. ಇವರಲ್ಲಿ ಕೆಲವರ ಜನಿವಾರ ಹಿತ್ತಲ ಬೇಲಿಗೆ ಸಿಕ್ಕಿ ಹರಿದು ಹೋಯಿತು. ಹೀಗಾಗಿ ಇವರನ್ನು 'ಹರ್ಕಂತ್ರು, ಹರಕಂತ್ರು'' ಎಂದು ಕರೆದಿರಬಹುಬುದು ಕೆಲವರ ಅಭಿಪ್ರಾಯ.

ಈ ಅಭಿಪ್ರಾಯಗಳನ್ನೆಲ್ಲಾ ಗಮನಿಸಿ ಹರಿಕಾಂತರ ಭಾಷೆ ಸಂಸ್ಕೃತಿಯ ಆಧಾರದ ಮೇಲೆ ಹೇಳಬೇಕಾದರೆ ಹರಿಕಾಂತರ ಮೂಲ ಕರ್ನಾಟಕ ಕರಾವಳಿಯೆಂಬುದಂತು ಖಚಿತ. ಆದರೆ ಅವರು ಸಸ್ಯಾಹಾರಿ ಸಂಸ್ಕೃತಿಯಿಂದ ಮಾಂಸಾಹಾರಿ ಸಂಸ್ಕೃತಿಯ ಕಡೆಗೆ ಬಂದವರೆಂಬುದನ್ನು ವಿ.ಗ. ನಾಯಕರು ನೀಡುವ ಐತಿಹ್ಯದ ಆಧಾರದ ಮೇಲೆ ನಿರ್ಧರಿಸುವುದು ಕಷ್ಟ. ಇವರು ಶೈವ ಮೂಲದವರೆಂದು ಹೇಳುವುದಕ್ಕಿಂತ ವೈಷ್ಣವ ಸಂಪ್ರದಾಯ ಬದ್ಧರೆಂದು ಹೇಳಲು ಹೆಚ್ಚು ಆಧಾರಗಳು ಸಿಗುತ್ತವೆ.

ವಾಸಸ್ಥಳ : ತಮ್ಮ ಬದುಕಿಗೆ ಆಶ್ರಯ ಉಪ್ಪು ನೀರ ಸಮುದ್ರವೇ ಆಗಿರುವುದರಿಂದ ಅದರ ದಡದಲ್ಲೇ ಹರಿಕಾಂತರ ವಾಸ. ಹುಲ್ಲು ಹೊದ್ದ ಗುಡಿಸಲು ಮತ್ತು ಹೆಂಚು ಹೊದ್ದ ಮನೆಗಳು ಒಂದೆಡೆ ಇದ್ದು ಅದು 'ಹರ್ಕಂತ ಕೇರಿ' ಎಂದು ಹೆಸರಾಗಿದೆ.

ಉಡುಗೆ ತೊಡುಗೆ : ಹಿಂದೆ ಪುರುಷರು ಲಂಗೋಟಿಯಲ್ಲಿರುತ್ತಿದ್ದುದು ಹೆಚ್ಚು. ಆದರೆ ಹೆಗಲ ಮೇಲೆ ಪಂಜಿಯನ್ನು ಹಾಕಿಕೊಂಡಿರುತ್ತಿದ್ದರು. ಅದು ಬೆವರು ಒರೆಸಿಕೊಳ್ಳಲು ಉಪಯೋಗವಾಗುತ್ತಿತ್ತು . ಇತ್ತೀಚೆಗೆ ಮೀನು ಹಿಡಿಯುವಾಗ ಬರೀ ಚೆಡ್ಡಿಯಲ್ಲಿರುತ್ತಾರೆ. ಉಳಿದ ಸಂದರ್ಭದಲ್ಲಿ ಗಂಡಸರು ಪ್ಯಾಂಟು ಶರ್ಟು ತೊಟ್ಟರೆ, ವಯಸ್ಸಾದವರು ಪಂಜಿ ಮತ್ತು ಶರ್ಟು ತೊಡುತ್ತಾರೆ. ವಯಸ್ಸಾದವರು ಕಿವಿಯಲ್ಲಿ ಒಂಟಿ ಅಥವಾ ಮುರ ತೊಡುತ್ತಾರೆ.

ಸ್ತ್ರೀಯರು ಹದಿನೆಂಟು ಮೊಳದ ಸೀರೆಯುಟ್ಟು ಸೆರಗಿನಿಂದ ಎದೆಭಾಗವನ್ನು ಮುಚ್ಚಿಕೊಳ್ಳುತ್ತಿದ್ದ ರೀತಿ ಹಿಂದಿತ್ತು. ಈಗಲೂ ವಯಸ್ಸಾದ ಮಹಿಳೆಯರ ಉಡುಪು ಇದೇ ಆಗಿದೆ. ಉಳಿದ ಮಹಿಳೆಯರು ಆಧುನಿಕ ಉಡುಪಾದ ಲಂಗ, ಸೀರೆ, ರವಿಕೆ ಉಡುತ್ತಾರೆ. ವೃದ್ಧ ಸ್ತ್ರೀಯರು ಕಿವಿಗೆ ಕರಾಪಳಿ, ಮುಗಳು ಕಡ್ಡಿ, ಕುಡುಕು ಮೊದಲಾದ ಆಭರಣಗಳನ್ನು ತೊಡುತ್ತಾರೆ. ಉಳಿದವರು ' ಬುಗುಡಿ' ತೊಡುತ್ತಾರೆ.

ಉದ್ಯೋಗ : ಹರಿಕಾಂತರ ಪ್ರಮುಖ ಉದ್ಯೋಗ ಮೀನು ಹಿಡಿದು ಮಾರುವುದು. ಪುರುಷರು ಮೀನು ಹಿಡಿದರೆ, ಸ್ತ್ರೀಯರು ಅವುಗಳನ್ನು ಮಾರಾಟ ಮಾಡಿಕೊಂಡು ಮನೆಗೆ ಬೇಕಾದ ಸಾಮಾನನ್ನು ಕೊಂಡುಕೊಂಡು ಬರುತ್ತಾರೆ. ಸಾಮಾನ್ಯವಾಗಿ ಹರಿಕಾಂತರಲ್ಲಿ ಮನೆಗೊಂದು ಚಿಕ್ಕ ನಾಡದೋಣಿಯಾದರೂ ಇದ್ದೇ ಇರುತ್ತದೆ. ಕೆಲವರು ಪರ್ಶಿಯನ್ ಬೋಟ್‌ಗೆ ಪಾಲುದಾರರಾಗಿ ' ಉದ್ಯೋಗ ಮಾಡುತ್ತಾರೆ. ಮೀನು ಹೆಚ್ಚು ಹಿಡಿದಾಗ ಮನೆ ಹೆಂಗಸರು ಸಿಗಿದು ಉಪ್ಪುಹಾಕಿ ಒಣಗಿಸುತ್ತಾರೆ. ಮಳೆಗಾಲದಲ್ಲಿ ಹೆಚ್ಚಿನ ದರಕ್ಕೆ ಅವುಗಳನ್ನು ಮಾರಾಟ ಮಾಡುತ್ತಾರೆ. ಗಂಡಸರಿಗಿಂತ ಹೆಂಗಸರಿಗೆ ಮೀನಿನ ವ್ಯವಹಾರ ಜ್ಞಾನ ಹೆಚ್ಚು. ಗಂಡಸರು ಮೀನು ಹಿಡಿಯುವುದರಲಷ್ಟೇ ಜಾಣರು. ಮೀನಿನ ಚಲನವಲನಗಳ ಆಧಾರದ ಮೇಲೆ ಮೀನಿನ ಸ್ಥಳವನ್ನು ಗುರುತಿಸಿ ಅವುಗಳನ್ನು ಬಲೆ ಇಲ್ಲವೆ ಗಾಳದ ಸಹಾಯದಿಂದ ಹಿಡಿಯುತ್ತಾರೆ. ನೀರಿನಲ್ಲಿ ಹೋಗುತ್ತಿರುವ ಮೀನಿನ ಮಂದೆಯನ್ನು ದೂರದಿಂದಲೇ ನೋಡಿ ಅದರ ಜಾತಿ ಯಾವುದೆಂಬುದನ್ನರಿಯುತ್ತಾರೆ. ಯಾವ ಕಾಲದಲ್ಲಿ ಮೀನಿನ ಓಡಾಟ ಹೆಚ್ಚಾಗುತ್ತದೆ ಯಾವ ಯಾವ ಕಾಲದಲ್ಲಿ ಮೀನು ಸಮುದ್ರ ತಳದಲ್ಲಿ ಉಳಿಯುತ್ತದೆ ಎಂಬುದನ್ನು ಅವರು ಯಾವ ಶಾಸ್ತ್ರಾಭ್ಯಾಸ ಮಾಡದೆ ಹೇಳಬಲ್ಲರು.

ವರ್ಷದಲ್ಲಿ ಒಂಬತ್ತು ತಿಂಗಳು ಮಾತ್ರ ಮೀನು ಹಿಡಿಯುವ ಉದ್ಯೋಗದಲ್ಲಿ ನಿರತರಾದ ಹರಿಕಂತ್ರರು ಉಳಿದ ಮೂರು ತಿಂಗಳಲ್ಲಿ ವ್ಯವಸಾಯ, ದೋಣಿ, ಬಲೆ ರಿಪೇರಿ ಕೆಲಸಗಳಲ್ಲಿ ತೊಡಗಿರುತ್ತಾರೆ. ಆದರೂ ಮೀನು ಹಿಡಿವ ಕೆಲಸ ತರುವಷ್ಟು ತೃಪ್ತಿಯನ್ನು ಬೇರಾವ ಕೆಲಸವೂ ಅವರಿಗೆ ತರುವುದಿಲ್ಲವೆಂಬುದನ್ನು ಅವರು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತಾರೆ.

ದೇವತೆಗಳು : ಹರಿಕಾಂತರು ನಂಬುವ ದೇವರು ಒಂದಲ್ಲಾ ಎರಡಲ್ಲಾ, ಅವರಿಗೆ ಎದುರಾಗುವ ಕಷ್ಟಗಳು ಸಹ ಒಂದೆರಡಲ್ಲ ಆದ್ದರಿಂದ ಅವರು ಹಲವು ದೇವರುಗಳ ಮೊರೆಹೊಕ್ಕಿ ಕಷ್ಟಗಳಿಂದ ಪಾರಾಗಲು ಬಯಸುತ್ತಾರೆ. ಆರ್ಯದುರ್ಗೆ, ಕೋಡಿಬೀರ, ನೇತ್ರಾಣಿ ಜಟ್ಟಿಗ, ಮಾಸ್ತಿ, ದೇವರ್ಸನಾಯ್ಕನ ಗುತ್ತೂ, ಅಮ್ಮನವರು, ಹಾಯ್ಗೂಳಿ ಮೊದಲಾದ ದೇವರುಗಳಿಗೆ ಅವರು ತಮ್ಮ ಭಕ್ತಿಯನ್ನರ್ಪಿಸುತ್ತಾರೆ. ಅದರ ಕುರುಹಾಗಿ ದೇವರ ಹೆಸರಿನ ಮುಂದೆ 'ಕರ' ಎಂಬ ವಿಶೇಷಣವನ್ನು ಸೇರಿಸಿಕೊಂಡು ತಮ್ಮ ಹೆಸರನ್ನಿಟ್ಟುಕೊಂಡು ತಮ್ಮ

ಕುಲದೇವತೆಯನ್ನು ಪರಿಚಯಿಸಿಕೊಳ್ಳುತ್ತಾರೆ. ಅಂಕೋಲೆಯ ಬಳಿ ಇರುವ ಆರ್ಯಾದುರ್ಗೆ ದೇವತೆಯ ಮೂಲಸ್ಥಾನ ಕಾರವಾರದ ಹತ್ತಿರವಿರುವ ಅಂಜದೀವ್ ಎಂಬ ದ್ವೀಪವೆಂದು ಹೇಳುತ್ತಾರೆ. ಅದರ ಉತ್ಸವದಲ್ಲಿ ರಥ ಎಳೆಯುವವರು ಮತ್ತು ಪಲ್ಲಕ್ಕಿ ಹೊರುವವರು ಹರಿಕಂತರೇ ಆಗಿರುತ್ತಾರೆ. ಹರಿಕಾಂತರ ಬೇಟೆ ದೇವರು ಭಾವಿಕೇರಿಯ ' ಕಾನಬೀರ' ನಾಗಿದ್ದಾನೆ. ಈ ದೇವತೆ ಮೀನುಬೇಟೆಯ ಸಂದರ್ಭದಲ್ಲಿ ಮೀನಿರುವ ಸ್ಥಳಕ್ಕೆ ಕರೆದೊಯ್ಯುತ್ತದೆ ಎಂದು ನಂಬುತ್ತಾರೆ. ಆದಕ್ಕೆ ಬಾಗಿಲು ಕಟ್ಟಿ ಎಂಬ ವಿಶೇಷ ಪೂಜೆ ಸಲ್ಲಿಸುತ್ತಾರೆ.

ಸಮುದ್ರದಲ್ಲಿರುವಾಗ ಅಪಾಯಗಳಿಂದ ಪಾರುಮಾಡುವ ದೇವರೆಂದರೇ ನೇತ್ರಾಣಿ ಜಟ್ಕ. ನೇತ್ರಾಣಿ, ಭಟ್ಕಳದಿಂದ 20 ಮೈಲಿ ದೂರದಲ್ಲಿರುವ ಚಿಕ್ಕ ದ್ವೀಪ. ಸಾಮಾನ್ಯವಾಗಿ ಇದು ಮೀನುಗಾರರೆಲ್ಲರ ಆರಾಧ್ಯ ದೇವತೆಯಾಗಿದೆ. ಆದ್ದರಿಂದ ಮೀನುಗಾರರು ವರ್ಷಕ್ಕೊಮ್ಮೆಯಾದರೂ ನೇತ್ರಾಣಿ ದ್ವೀಪಕ್ಕೆ ಹೋಗಿ ಪೂಜೆ ಕೊಟ್ಟು ಬರುತ್ತಾರೆ.

ದೆವ್ವಗಳ ಬಗ್ಗೆ ಹರಿಕಂತರಿಗೆ ಎಲ್ಲಿಲ್ಲದ ಭಯ, ದೆವ್ವಗಳಲ್ಲಿ ಚಿಕ್ಕಮಕ್ಕಳ ದೆವ್ವ, ಹೆಣ್ಣು ಮಕ್ಕಳ ದೆವ್ವ, ಗಂಡು ಮಕ್ಕಳ ದೆವ್ವಗಳಿವೆ ಎಂದು ನಂಬುತ್ತಾರೆ. ಮನೆಯಲ್ಲಿ ಹಿರಿಯರು ತೀರಿ ಕೊಂಡರೆ ಅವರು ದೆವ್ವವಾಗಿ ಕಾಡುತ್ತಾರೆಂಬ ನಂಬಿಕೆ ಅವರಲ್ಲಿ ದೃಢವಾಗಿದೆ. ದೆವ್ವಗಳ ಕಾಟವನ್ನು ''ನೋಟಗಾರ''ನಿಂದ ನೋಡಿಸುತ್ತಾರೆ. ಆತನು ಯಾವ ದೆವ್ವದ ಕಾಟವಿದೆ ಎಂಬುದನ್ನು ತಾನರಿತ ಭವಿಷ್ಯ ಜ್ಞಾನದಿಂದ ಕಂಡು ಹಿಡಿದು ದೆವ್ವದ ಕಾಟಕ್ಕೆ ಪರಿಹಾರವನ್ನು ಸೂಚಿಸುತ್ತಾನೆ. ಕೆಲವರ ಮೈಮೇಲೆ ಜಟ್ಟಿಗ ಮತ್ತು ಮಾಸ್ತಿ ಬಂದು ಭವಿಷ್ಯ ನುಡಿಯುತ್ತದೆ. ಬಾಣಂತಿ ಸತ್ತರೆ ಅವಳು ದೆವ್ವವಾಗಿ ಬಾಣಂತಿಯರನ್ನೇ ಕಾಡುತ್ತಾಳೆ ಎನ್ನುತ್ತಾರೆ. '' ಬೇಲಿ ಸವಾರಿ ದೆವ್ವ'' ಹಿಡಿಯುವುದಕ್ಕಿಂತ ಹೊಡೆಯುವುದು ಹೆಚ್ಚು ಆದ್ದರಿಂದ ಅದಕ್ಕೆ ಹರಿಕಂತರು ಹೆಚ್ಚು ಹೆದರುತ್ತಾರೆ. ಅದು ಹೆಂಗಸರಿಗೆ ಹೊಡೆದರೆ ಅವರ ಎಡ ಭುಜ ಸಿಡಿಯುವಂತೆ ನೋವಾಗುತ್ತದೆ. ಗಂಡಸರಿಗೆ ಹೊಡೆದರೆ ಬಲ ಭುಜ ಸಿಡಿಯುತ್ತದೆ, ಎಂದು ನಂಬುತ್ತಾರೆ. '' ಆಕಾಶ ದೇವ್ತಿ'' ಯು ಚಿಕ್ಕ ಮಕ್ಕಳನ್ನು ಕಾಡುವ ದೆವ್ವವಾಗಿದ್ದು ಅದು ಮಗುವಿನ ಮೂರು, ಐದು ಅಥವಾ ಏಳನೆಯ ದಿನ ಮಗುವನ್ನೇ ಕೊಂಡೆಯ್ಯುವ ಅಪಾಯವಿರುವುದರಿಂದ ಈ ಮೂರು ದಿನಗಳು ಮಗುವನ್ನು ಯಾರಾದರೂ ಎತ್ತಿಕೊಂಡೇ ಇರಬೇಕು, ಹಾಗಿದ್ದರೆ ಅದು ಮಗುವನ್ನು ಮುಟ್ಟುವದಿಲ್ಲ. ಶೆಟ್ಟಿದೆವ್ವ ಹಿಡಿದಾಗ (ಬಾಲಗ್ರಹ) ಮಗುವಿನ ಕೈ ಸೆಟೆಯುತ್ತದೆ. ನಾಲಿಗೆ ಒಣಗುತ್ತದೆ, ಅಳು ಹೆಚ್ಚಾಗುತ್ತಲ್ಲೇ ಹೋಗುತ್ತದೆ. ಆಕಾಶ ದೇವ್ತಿ ಕಾಡುವಾಗ ಮಕ್ಕಳು ಆಕಾಶದ ಕಡೆಗೆ ರೆಪ್ಪೆ ಬಡಿಯದಂತೆ ದೃಷ್ಠಿ ನೆಟ್ಟಿರುತ್ತಾರೆ, ಎಂದು ನಂಬುತ್ತಾರೆ. ಹೀಗೆ ದೆವ್ವಗಳ ಕಾಟದ ನಂಬಿಕೆ ಹರಿಕಂತರ ಮನಸ್ಸಿನ ಮೇಲೆ ತೀವ್ರ ಪ್ರಭಾವ ಬೀರಿರುವುದರಿಂದ ಅವರಿಗೆ ಬರುವ ಕಾಯಿಲೆಗಳನ್ನು ಸಹ ಅವರು ದೆವ್ವಗಳ ಕಾಟವೆಂದು ನಂಬಿ ನೋಟಗಾರನಿಂದ ನೋಟ ನೋಡಿಸುತ್ತಾರೆಯೇ ವಿನ: ಆಸ್ಪತ್ರೆಗೆ ಹೋಗುವ ತಿಳುವಳಿಕೆ ಇನ್ನೂ ಅವರಲ್ಲಿ ಕಾಣಿಸುವುದಿಲ್ಲ. ಅಲ್ಲದೇ ಎಷ್ಟೋ ಕಾಯಿಲೆಗಳನ್ನು ದೆವ್ವಗಳಿಗೆ ತೃಪ್ತಿ ಪಡಿಸುವುದರಲ್ಲಿ ಅವರು ಗುಣ ಪಡಿಸಿಕೊಂಡಿದ್ದಾರೆ, ಇದಕ್ಕೆ ಅವರ ದೃಢ ನಂಬಿಕೆ ಮುಖ್ಯ ಕಾರಣ.

ಆಡಳಿತ ವ್ಯವಸ್ಥೆ : - ಹರಿಕಾಂತರು ತಮ್ಮ ಸಮಾಜದ ಒಳಾಡಳಿತವನ್ನು ತಮ್ಮದೇ ಆದ ರೀತಿಯಲ್ಲಿ ನಡೆಸುತ್ತಾರೆ. ಪ್ರತಿಯೊಂದು ಗ್ರಾಮಕ್ಕೂ ಒಬ್ಬ 'ಸೇರುಗಾರ ' ನಿದ್ದು ಅವನ ಸಹಾಯಕ್ಕೆ 'ಕೋಲ್ಕಾರ' ಇರುತ್ತಾನೆ. ಅವನ ಸಹಾಯಕ್ಕೆ 'ಚೌಗುಲೆ' ಇರುತ್ತಾನೆ. ಸಭೆ ಕರೆಯಲು ಕೋಲ್ಕಾರ ಸದಸ್ಯರಿಗೆ ಹೇಳಿ ಕೊಟ್ಟು ಬರುತ್ತಾನೆ. ಸೇರುಗಾರನು ಹತ್ತು ಹಿರಿಯರನ್ನು ತನ್ನ ಸದಸ್ಯರನ್ನಾಗಿ ನೇಮಿಸಿಕೊಂಡು ತನ್ನೂರಿನ ಸಮಿತಿಯನ್ನು ರಚಿಸಿಕೊಳ್ಳುತ್ತಾನೆ. ಗ್ರಾಮದ ಸಭೆಗಿಂತ 'ಸೀಮೆ ಕೂಟ' ಉನ್ನತವಾದುದು. ಹಲವು ಗ್ರಾಮಗಳು ಸೇರಿ ಒಂದು ಸೀಮೆಯಾಗಿರುತ್ತದೆ. ಇಲ್ಲೂ ಸಹ ಆಡಳಿತ ನಡೆಸಲು ಯಜಮಾನ ಮತ್ತು ಅವರ ಸಹಾಯಕನಾಗಿ 'ಕೋಲ್ಕಾರ' ಮತ್ತು 'ಚೌಗುಲೆ' ಯರು ಇರುತ್ತಾರೆ. 'ಸೀಮೆ ಕೂಟ' ದ ತೀರ್ಪೆ ಅಂತಿಮ ತೀರ್ಪಾಗಿರುತ್ತದೆ. ಆದ್ದರಿಂದ ಅದನ್ನು ದಾಟಿ ಯಾರೂ ಹೋಗುವಂತಿಲ್ಲ. ಸಾಮಾನ್ಯವಾಗಿ ನ್ಯಾಯದ ಹಿಂದೆ ಶೃಂಗೇರಿ ಶಾರದಾಂಬೆಯ ಬಗ್ಗೆ ಅವರಿಟ್ಟಿರುವ ದೃಢ ನಂಬಿಕೆಯ ಪ್ರಮುಖವಾದುದು. ದೊಡ್ಡ ಅಪರಾಧಕ್ಕೆ ಮಾಡಿದವನಿಗೆ ನೀಡುವ ಶಿಕ್ಷೆಯೆಂದರೆ ಶೃಂಗೇರಿ ಮಠಕ್ಕೆ ಹೋಗಿ ಕಪ್ಪ ಕಾಣಿಕೆ ಸಲ್ಲಿಸಿ ಬರುವುದು.

ಹರಿಕಾಂತರಲ್ಲಿ ಕಾಣುವ ಐದು ಪ್ರಮುಖ ಸೀಮೆಗಳ ಬಗ್ಗೆ ವಿ. ಗ. ನಾಯಕರು ನೀಡಿರುವ ವಿವರಣೆ ಗಮನಾರ್ಹ :-

1) ಹರಿಕಾಂತರ 'ಗೇರುಸೊಪ್ಪೆ ಸೀಮೆ' ಯಡಿ ಗೇರುಸೊಪ್ಪೆ, ಮಂಕಿ, ಬೈಲೂರು, ಮುರ್ಡೇಶ್ವರ, ಕಾಯ್ಕಿಣಿ, ಶಶಿಹಿತ್ಲು, ಹಿರೇದೂಮಿ, ಗಾಳೀ ಗಿಡ, ಹೆರಾಡಿ, ಮಾವಿನಕುರ್ವೆ, ಭಟಕಳ ಮತ್ತು ಬಂದರು ಗ್ರಾಮಗಳು ಸೇರುತ್ತವೆ.

2) ಚಂದಾವರ ಸೀಮೆಗೆ ಕಲ್ಬಾಗ, ಶಶಿಹಿತ್ಲು, ಧಾರೇಶ್ವರ, ಗುಹೇ ಅಂಗಡಿ, ಹುಬ್ಬಣಕೇರಿ, ಹೆಣ, ಕಾಗಾಲ, ಗುಡ್ ಕಾಗಾಲ, ಅಘನಾಶಿನಿ, ಗ್ರಾಮಗಳು ಸೇರುತ್ತವೆ.

3) ಮಿರ್ಜಾನ್ ಸೀಮೆಯಲ್ಲಿ ಕಿಮಾನಿ, ಬೆಟ್ಕುಳಿ, ಮೊರ್ಬಾ, ಬರ್ಗಿಗಜನಿ, ಸಕ್ಗಣ, ನುಶಿಕೋಟ, ಮಾದನ್ಗೇರಿ, ಹಿಲ್ಲೂರು, ಹೊಸಕಟ್ಟಾ, ಮುಡಂಗಿ, ಅಗರ ಕೋಣ, ಮತ್ತು ಪಗಡಗೇರಿಗಳು ಬರುತ್ತವೆ.

4) ಅಂಕೋಲಾ ಸೀಮೆಯಲ್ಲಿ ಶಿರೂರು, ಹಿಚ್ಕಡ, ಮಂಜಗುಣ, ಬಿಳಿಹೊಯ್ಗೆ, ಕೇಣ, ಬೆಳಂಗಿ, ಹಡದ, ಭಾವಿಕೇರಿ, ಮತ್ತು ದಾಂಡೆ ಭಾಗಗಳನ್ನೊಳಗೊಂಡಿವೆ.

5) ಕಡವಾಡ ಸೀಮೆಯೊಳಗಡೆ ಹಾರವಾಡ, ಮಂದಗೆ, ಅಮದಳ್ಳಿ, ಕೊಡರೆ, ಅಲಿಗದ್ದೆ, ಅರಗೆ, ಸಂಕ್ರುಭಾಗ, ಬಿಣಗ, ಬೈತ್‌ಖೋಲ, ಕೋಣಿ, ಕಾಜುಭಾಗಗಳು, ಸೇರುತ್ತವೆ.

ಹೀಗೆ ಉತ್ತರ ಕನ್ನಡ ಜಿಲ್ಲೆಯ ಹರಿಕಾಂತರ ಸೀಮೆಗಳಲ್ಲಿ ಆಯಾಯ ಪ್ರದೇಶದಲ್ಲಿ ಬರುವ ಗ್ರಾಮಗಳು ಸೇರಿದ್ದು ಅವು ಸೀಮೆಯ ಯಜಮಾನನ ನಿಯಂತ್ರಣದಲ್ಲಿರುತ್ತವೆ. ಒಳಾಡಳಿತ ನಡೆಸುವವರ ಸ್ಥಾನವು ವಂಶಪಾರಂಪರ್ಯವಾಗಿ ಮುಂದುವರಿಯುತ್ತವೆ. ಆದರೂ ನಿರಂಕುಶ ಆಳ್ವಿಕೆಯ ಕುರುಹುಗಳೆಲ್ಲೂ ಕಾಣಸಿಗದು. ಜನಪರ ಆಡಳಿತ ವಿಧಾನ ಇಂದಿಗೂ ಇವರಲ್ಲಿ ಉಳಿದುಕೊಂಡಿರುವುದರಿಂದಲೇ ಗ್ರಾಮ ಕೂಟ ಮತ್ತು ಸೀಮೆ ಕೂಟಗಳು ಅಸ್ಥಿತ್ವದಲ್ಲಿ ಉಳಿದಿವೆ.

ಮದುವೆ :- ಹರಿಕಾಂತರ ಮದುವೆಯಲ್ಲಿ ಗಮನಾರ್ಹವಾದ ಸಂಪ್ರದಾಯಗಳ ಆಚರಣೆಗಳು ಕಾಣುವುದಿಲ್ಲ. ಮದುವೆಗಿಂತ ಮುಂಚೆ ಬಳಿ ನೋಡುವ ಪದ್ಧತಿ ರೂಢಿಯಲ್ಲಿದೆ. ಒಂದೇ ಬಳಿಯವರಲ್ಲಿ ಮದುವೆ ನಿಷಿದ್ಧ ಇರುವ ಪ್ರಯುಕ್ತ ತಮ್ಮ ಬಳಿಯ ಹೊರಗಿನ ಹೆಣ್ಣನ್ನು ಅವರು ತರುತ್ತಾರೆ. ಹಿಂದೆ ಬಳಿ ನೋಡುವ ಜೊತೆಗೆ ಮೀನು ಹಿಡಿವ ಬಲೆಗಳು ಗಂಡಿನ ಮನೆಯಲ್ಲಿ ಎಷ್ಟಿವೆ ಎಂದು ಹೆಣ್ಣಿನ ಕಡೆಯವರು ವಿಚಾರಿಸಿಕೊಳ್ಳುತ್ತಿದ್ದರೆಂದು ಹೇಳುತ್ತಾರೆ. ಬಲೆಗಳ ಸಂಖ್ಯೆ ಹೆಚ್ಚಿದಂತೆ ಆ ಮನೆಯವರ ದುಡಿಮೆ ಹೆಚ್ಚಾಗಿರುತ್ತದೆ ಎಂಬ ಅರ್ಥವು ಅವರ ಕೇಳಿಕೆಯಲ್ಲಡಗಿದೆ. ಜೊತೆಗೆ ಆ ಮನೆಯವರು ಶ್ರಮ ಜೀವಿಗಳೆಂಬುದು ಅರಿವಾಗುತ್ತಿತ್ತು. ಅಂತಹ ಮನೆಗೆ ಹೆಣ್ಣು ಕೊಟ್ಟರೆ ಅವಳು ಸುಖವಾಗಿರಬಲ್ಲಳೆಂಬ ನಿರೀಕ್ಷೆ ಅವರದಾಗಿತ್ತು. ಈಗ ಆ ಸಂಪ್ರದಾಯವು ಮಾಯವಾಗಿದೆ .

'' ಸಕ್ಕರೆ ಬಾಳೆಹಣ್ಣು ತಿನ್ನುವ '' ನಿಶ್ಚಯ ಕಾರ್ಯದಿಂದ ಮದುವೆ ಕಾರ್ಯ ಪ್ರಾರಂಭವಾಗುತ್ತದೆ. ಇದರಲ್ಲಿ ಎರಡೂ ಗ್ರಾಮಗಳ ಯಜಮಾನರು ಮತ್ತು ಕೋಲ್ಕಾರರು ಪ್ರಮುಖರಾಗಿರುತ್ತಾರೆ. ಇವರನ್ನು ಮುಂದಿಟ್ಟುಕೊಂಡು ಹೆಣ್ಣು ಗಂಡಿನ ಕಡೆಯವರು ಮದುವೆ ನಿಶ್ಚಯ ಮಾಡಿ ಬಂದವರಿಗೆ ಬಾಳೆಹಣ್ಣು ಸಕ್ಕರೆ ಹಂಚಿ ಶಾಸ್ತ್ರ ಮುಗಿಸುತ್ತಾರೆ. ಈ ಮಂಗಳ ಕಾರ್ಯದ ವಿಷಯವನ್ನು ಐದೂ ಸೀಮೆಯಲ್ಲಿನ ಜನರಿಗೆಲ್ಲಾ ವೀಳ್ಯೆ ಹಂಚುವುದರ ಮೂಲಕ ತಿಳಿಸಲಾಗುತ್ತದೆ. ಸಾಮಾನ್ಯವಾಗಿ ನಿಶ್ಚಯ ಕಾರ್ಯ ಮುಗಿದ ಎರಡು ಮೂರು ತಿಂಗಳಲ್ಲಿ ಮದುವೆ ಇಟ್ಟು ಕೊಳ್ಳುತ್ತಾರೆ. ಅನುಕೂಲವಿದ್ದವರು ನಿಶ್ಚಯ ಕಾರ್ಯದ ನಂತರದ ಕೆಲವೇ ದಿನಗಳಲ್ಲಿ ಮದುವೆ ಕಾರ್ಯ ಮುಗಿಸುತ್ತಾರೆ.

ಮಹೂರ್ತಕ್ಕಿಂತ ಒಂದು ದಿನ ಮುಂಚೆ '' ಜವಳಿ ತರುವ '' ಶಾಸ್ತ್ರವಿರುತ್ತದೆ. ಇದು ವಧು - ವರರಿಬ್ಬರ ಮನೆಯಲ್ಲಿ ಏಕಕಾಲದಲ್ಲಿ ನಡೆಯುತ್ತದೆ. ಮದುವೆಗೆ ಬಂದ ಹತ್ತಿರದ ಸಂಬಂಧಿಕರಿಗೆ ಹಾಗೂ ಹೊಸ ಸಂಬಂಧದ ಪ್ರಮುಖರಿಗೆ ಗೌರವ ನೀಡುವ ಆಚರಣೆ ಇದಾಗಿದೆ. ಹೊಸ ಬಟ್ಟೆಗಳನ್ನು ಕೊಡುವುದರ ಮೂಲಕ ಅವರಿಗೆ ಗೌರವಾದರಗಳನ್ನು ಸಲ್ಲಿಸುತ್ತಾರೆ. ಇದೇ ದಿನ ಅವರು ಆಚರಿಸುವ ' ಮನಬ್ಬ ' ದ ಆಚರಣೆ ವಿಶಿಷ್ಟವಾದುದು. ಅದರಲ್ಲಿ ಮದುವೆಯಾದ ಹೊಸ ಮೂರು ಜೋಡಿಗಳನ್ನು ಆಹ್ವಾನಿಸುತ್ತಾರೆ. ಇವರು ಹಿಂದಿನ ಮೂರು ತಲೆಮಾರಿನ ಪ್ರತೀಕವಾಗಿರುತ್ತಾರೆ. ಇವರ ಜೊತೆಗೆ ಹೊಸ ತಲೆಮಾರಿನ ಮದುವೆಯಾಗದ ಯುವಕ ಯುವತಿಯರ ಒಂದು ಜೋಡಿಯನ್ನು ಕರೆತರುತ್ತಾರೆ. ಮನೆಯವರು ಈ ನಾಲ್ಕು ಜೋಡಿಗಳ ಪಾದ ತೊಳೆದು ಹೂಹಾಕಿ ನಮಸ್ಕರಿಸುತ್ತಾರೆ. ಇದು ಹಳೆಯ ಮತ್ತು ಹೊಸ ತಲೆಮಾರುಗಳನ್ನು ಒಂದುಗೂಡಿಸಿ ಗೌರವಿಸುವ ಸಂಪ್ರದಾಯವಾಗಿದೆ.

ಮದುವೆ ನಡೆಯುವುದು ಮದುಮಗಳ ಮನೆಯಲ್ಲಿರುವುದರಿಂದ ದಿಬ್ಬಣ ಮದುವೆಯ ಹಿಂದಿನ ದಿನವೇ ವಧುವಿನ ಊರಿಗೆ ಬರುತ್ತದೆ. ಮದುವೆಯ ದಿನ ಬೆಳಿಗ್ಗೆ ತಮ್ಮ ತಮ್ಮ ಊರಿನ ಭಟ್ಟರ ಮನೆಗಳಿಂದ ತಂದ ಅಕ್ಷತೆಯ ''ಸಾಸಿ'' ಕಾಳನ್ನು ತಮ್ಮ ಕುಲದೇವರ ಮುಂದಿಟ್ಟು ಪರಸ್ಪರ ವಿನಿಮಯ ಮಾಡಿಕೊಳ್ಳುತ್ತಾರೆ. ಮದುವೆಯ ದಿನ ಮೊದಲ ಶಾಸ್ತ್ರ ವಧು-ವರರಿಗೆ ಗೆ ''ಕೊಂಬಿನ ನೀರು'' ಮೀಯಿಸುವುದಾಗಿದೆ. ಅದರ ನಂತರ ಅವರಿಗೆ ಶೃಂಗಾರ ಮತ್ತು ಧಾರೆ ಎರೆವ ಸಂಪ್ರದಾಯಗಳನ್ನು ಆಚರಿಸಲಾಗುತ್ತದೆ. ಅವುಗಳಲ್ಲಿ ವಿಶೇಷತೆಗಳೇನು ಕಂಡು ಬರುವುದಿಲ್ಲ. ಮದುಮಗಳು ಗಂಡನ ಮನೆಗೆ ಹೋಗುವಾಗ ಅವಳ ತಂದೆ ತಟ್ಟೆ - ಚೊಂಬು ಮತ್ತು ಎರಡು ತೆಂಗಿನ ಗಿಡಗಳನ್ನು ಕೊಟ್ಟು ಕಳುಹಿಸುತ್ತಾನೆ. ಮದುವೆಯಾಗಿ ಮನೆಗೆ ಬಂದ ಮಗ ಮತ್ತು ಸೊಸೆಯನ್ನು ತಂದೆ ಕೈಹಿಡಿದು ಪ್ರಧಾನ ಬಾಗಿಲ ವರೆಗೆ ಕರೆದುಕೊಂಡು ಹೋಗಿ ಬಿಡುತ್ತಾನೆ. ಅನಂತರ ಬಾಗಿಲು ತಡೆವ ಶಾಸ್ತ್ರ, ಮುಡಿ ತುಂಬೊ ಶಾಸ್ತ್ರಗಳು ಸಾಮಾನ್ಯ ರೀತಿಯಲ್ಲಿ ಜರುಗುತ್ತವೆ. ಮದುವೆಯ ವಿಶೇಷತೆ ಎಂದರೆ ಮದುಮಗನ ಮನೆಯಲ್ಲಿ ಮದುವೆಗೆ ಹೆಣ್ಣಿನ ಮನೆಗೆ ಹೊರಡುವ ಮುಂಚೆ ಹೊಸ ಮಡಿಕೆಯೊಂದರಲ್ಲಿ ಪಾಯಸ ತುಂಬಿ ಬಾಯಿಗೆ ಬಟ್ಟೆ ಕಟ್ಟಿಟ್ಟು ಹೋದದ್ದನ್ನು ಮದುವೆ ಮುಗಿಸಿಕೊಂಡು ಹಿಂದಿರುಗಿದ ಮಾರನೆಯ ದಿನ ಬಾಯಿಯ ಬಟ್ಟೆ ಬಿಚ್ಚಿ ಪಾಯಸದ ಊಟ ಮಾಡುವ ಸಂಪ್ರದಾಯವಾಗಿದೆ.

ಹರಿಕಾಂತರಲ್ಲಿ ವಿಧವಾ ವಿವಾಹಕ್ಕೆ ಅವಕಾಶ ಉಂಟು, ಆದರೆ ವಿಧುರ ಮತ್ತು ವಿಧವೆಯರಿಬ್ಬರ ನಡುವೆ ಮಾತ್ರ ವಿಧವಾ ವಿವಾಹ ನಡೆಯುತ್ತದೆ. ಮಧ್ಯರಾತ್ರಿ ನಡೆವ ಈ ವಿವಾಹವನ್ನು ಮದುವೆಯಾಗದ ಯುವತಿಯರು ಮತ್ತು ಮಕ್ಕಳು ನೋಡಬಾರದೆಂಬ ನಂಬಿಕೆ ಇದೆ.

ಬಸುರಿ ಶಾಸ್ತ್ರ:- ಬಯಕೆ ಶಾಸ್ತ್ರ ಹರಿಕಾಂತರಲ್ಲಿ ಉಳಿದ ಜನಾಂಗದವರಂತೆಯೇ ನಡೆದರೂ ಗರ್ಭಿಣಿ ತನ್ನ ಮನೆಗೆ ಹೋಗುವಾಗ ಅವಳು ಮುಟ್ಟಿದ ತೆಂಗಿನ ಕಾಯಿಯೊಂದನ್ನು ಅವಳ ಮಾವ ಮನೆಯ ಮುಂದಿನ ತುಳಸಿ ಕಟ್ಟೆಯ ಮುಂದಿಟ್ಟು ಹೆರಿಗೆ ಸುಖಮಯವಾಗುವಂತೆ ಪ್ರಾರ್ಥಿಸಿ ಕಳುಹಿಸಿ ಕೊಡುತ್ತಾನೆ.

ಚೊಚ್ಚಿಲು ಬಾಣಂತನ ತವರಿನಲ್ಲಿ ನೆರವೇರುತ್ತದೆ. ಹಿಂದೆ ಮನೆಯ ಜಗಲಿಯ ಮೇಲೆ ಹೆರಿಗೆ ಮಾಡಿಸುತ್ತಿದ್ದ ಪದ್ಧತಿ ಜಾರಿಯಲ್ಲಿತ್ತು. ಮಗು ಹುಟ್ಟಿದ ತಕ್ಷಣ ಅದರ ಮೈಗೆ ಎಮ್ಮೆ ಸಗಣಿಯನ್ನು ಬಳಿದು ಅನಂತರ ಬಿಸಿನೀರಿನಿಂದ ಸ್ನಾನ ಮಾಡಿಸುವ ಸಂಪ್ರದಾಯ ಈಗಲೂ ಜಾರಿಯಲ್ಲಿದೆ. ಮಗು ಭಾಗ್ಯಶಾಲಿಯೇ ಎಂಬುದನ್ನರಿಯಲು ಅವರ ತಲೆಯ ಹತ್ತಿರ ಒಂದು ಸಿದ್ದಿ ಅಕ್ಕಿ ಮತ್ತು ಒಂದು ರೂಪಾಯಿಯನ್ನಿಟ್ಟು ಹನ್ನೆರಡನೇ ದಿನ ಅಕ್ಕಿಯು ಹೆಚ್ಚಾಗಿದ್ದರೆ ಮಗು ಭಾಗ್ಯಶಾಲಿಯಾಗುವುದೆಂದು ನಂಬುವರು.

ಹೆರಿಗೆಯಿಂದ ಅಪವಿತ್ರಗೊಂಡ ಮನೆ ಮತ್ತು ಬಾಣಂತಿಯನ್ನು ಭಟ್ಟರ ಮನೆಯ 'ಪಂಚಗೋಮಯ' ಕುಡಿಸಿ ಶುದ್ಧಗೊಳಿಸಿದರೆ, ಅದನ್ನು ಮನೆಯಲ್ಲೆಲ್ಲಾ ಸಿಂಪಡಿಸಿ ಮನೆ ಶುದ್ಧಗೊಳಿಸುತ್ತಾರೆ. ಇದು ಹೆರಿಗೆಯಾದ ಮೂರನೇ ದಿನ ನಡೆಯುವರ ಆಚರಣೆಯಾಗಿದೆ. ಮಗುವಿನ ನಾಮಕರಣ ಮಗು ಹುಟ್ಟಿದ ಹನ್ನೆರಡನೇ ದಿನ ನಡೆಯುತ್ತದೆ. ಆ ದಿನದ ವಿಶೇಷ ಆಚರಣೆ ಎಂದರೆ, ಮನೆಯ ಹಿರಿಯರು ಸೂಚಿಸಿದ ಹೆಸರನ್ನು ಊರಿನ ಭಟ್ಟರು ಹರಿವಾಣದಲ್ಲಿನ ಅಕ್ಕಿಯ ಮೇಲೆ ಅರಿಶಿಣದ ಕೊಂಬಿನಿಂದ ಬರೆದು ನಾಮಕರಣ ಮಾಡಿ ಹೋಗುತ್ತಾರೆ. ಅನಂತರ ಬಾಣಂತಿಯು ಐದು ಜನ ಮುತ್ತೈದೆಯರೊಡಗೂಡಿ ಚೊಂಬು ತೆಗೆದುಕೊಂಡು ಬಾವಿಯ ಬಳಿ ಹೋಗುತ್ತಾಳೆ. ಬಾಣಂತಿ ಚೊಂಬಿನಿಂದ ಬಾವಿಯ ನೀರನ್ನು ತೆಗೆದುಕೊಂಡು ಬಾವಿಯಲ್ಲಿ ಸುರಿಯುತ್ತಾಳೆ. ಹೀಗೆ ಐದು ಬಾರಿ ಮಾಡಿದ ನಂತರ ಒಂದು ವೀಳ್ಯೆ ಪಟ್ಟಿ ಹಾಗೂ ಐದು ಚಮಚೆ ಕೊಬ್ಬರಿಯೆಣ್ಣೆಯನ್ನು ಬಾವಿಯಲ್ಲಿ ಬಿಡುತ್ತಾಳೆ. ಬಾವಿಗೆ ಗಂಧ ಹಚ್ಚಿ ಹೂಮುಡಿಸಿ ಕಾಯಿ ಒಡೆದು ಆರತಿ ಬೆಳಗುತ್ತಾಳೆ. ಜೊತೆಗೆ ಬಂದ ಮುತ್ತೈದೆಯರ ತಲೆಗೆ ಎಣ್ಣೆ ಹಚ್ಚಿ ಸಕ್ಕರೆ ನೀಡುತ್ತಾಳೆ. ಕೊನೆಗೆ ಬಾವಿಯಿಂದ ಒಂದು ಚೊಂಬು ನೀರು ಮೊಗೆದುಕೊಂಡು ಮನೆಗೆ ಹಿಂದಿರುಗುತ್ತಾಳೆ. ಅಷ್ಟರಲ್ಲಿ ಮನೆಯವರು ಹೊಸ್ತಿಲಲ್ಲಿ ಅಡ್ಡವಾಗಿ ಬೆಂಕಿಕೊಳ್ಳಿಯನ್ನಿಟ್ಟಿರುತ್ತಾರೆ. ಅದನ್ನು ಐದುಬಾರಿ ಅವಳು ದಾಟಿ ಒಳಹೋಗುತ್ತಾಳೆ. ಅದರ ನಂತರ ಅವಳು ಮಗುವಿನ ಹೊಕ್ಕಳು ಹುಗಿದಿದ್ದ ''ಆಂವಿ ಹೊಂಡಕ್ಕೆ'' ಹೋಗಿ ಕಳ್ಳಿ ನೆಟ್ಟು ಅದಕ್ಕೆ ಕುಂಕುಮ ಇಟ್ಟು ತೆಂಗಿನ ಎಣ್ಣೆ ಹಚ್ಚಿ, ಕಾಯಿ ಒಡೆದು ಪೂಜೆಸಲ್ಲಿಸಿ ನೈವೇದ್ಯ ಅರ್ಪಿಸಿ ಐದು ಸುತ್ತು ಪ್ರದಕ್ಷಿಣೆ ಹಾಕಿ ಹಿಂದಿರುಗುತ್ತಾಳೆ. ಅಲ್ಲಿಂದ ತಂದ ಪ್ರಸಾದವನ್ನು ಸಂತಾನವಿಲ್ಲದ ಮುತ್ತೈದೆಯರಿಗೆ ಕೊಡುತ್ತಾಳೆ. ಅದನ್ನು ತಿಂದವರಿಗೆ ಸಂತಾನ ಪ್ರಾಪ್ತಿಯಾಗುವುದೆಂದು ನಂಬುತ್ತಾರೆ.

ಹಿಂದಿನವರು ಮಗುವಿಗೆ ಸುಕ್ರ, ಶನಿಯ, ಬಡಿಯ, ಮಂಗಳ ಮೊದಲಾದ ದಿನದ ಹೆಸರುಗಳನ್ನಿಡುತ್ತಿದ್ದರು. ಕೆಲವರು ಸ್ವರ, ಪಟಿಗ್ಲಾ, ಹೊಳ್ಯಾ ಎಂಬ ಮೀನುಗಳ ಹೆಸರುಗಳನ್ನು ಇಡುತ್ತಿದ್ದರು. ಆದರೆ ಇಂತಹ ಹೆಸರುಗಳು ಈಗ ಕಾಣಸುವುದಿಲ್ಲ. ರಾಮ, ಲಕ್ಷ್ಮಣ, ಪಾರ್ವತಿ, ಗೌರಿ, ಲಕ್ಷ್ಮಿ ಎಂಬ ಶಿಷ್ಟದೇವತೆಗಳ ಹೆಸರುಗಳು ಇಗ ಹೆಚ್ಚಾಗಿ ಚಾಲ್ತಿಯಲ್ಲಿವೆ.

ಮಗುವಿನ ತಲೆಗೂದಲು ತೆಗೆವ ಶಾಸ್ತ್ರವನ್ನು 'ಜೋಳಂಗಿ' ಎಂದು ಕರೆಯುತ್ತಾರೆ. ಗಂಡು ಮಗು ಎರಡು ಅಥವಾ ಐದನೇ ವರ್ಷದವನಿದ್ದಾಗ ಸೋದರ ಮಾವನು ತಲೆಯ ಮುಂಭಾಗದಲ್ಲಿ ಐದು ಮೆಟ್ಟಲಿನಾಕಾರದಲ್ಲಿ ಕೂದಲನ್ನು ಕತ್ತರಿಸಿ ಉಳಿದ ಕೂದಲನ್ನೆಲ್ಲಾ ತೆಗೆಯುತ್ತಾನೆ. ಈ ಪದ್ಧತಿಯು ಗೊಂಡರಲ್ಲಿ, ಮತ್ತು ಹಾಲಕ್ಕಿ ಒಕ್ಕಲಿಗರಲ್ಲೂ ರೂಢಿಯಲ್ಲಿದೆ. ಆದರೂ ಇತ್ತೀಚಿಗೆ ಈ ಸಂಪ್ರದಾಯ ನಾಗರೀಕತೆಯ ಪ್ರಭಾವದಿಂದ ಮರೆಯಾಗುತ್ತಿದೆ.

ಸಂಸ್ಕಾರ:- ಸತ್ತವರನ್ನು ಸುಡುವ ಪದ್ದತಿ ಹರಿಕಾಂತರಲ್ಲಿದೆ. ಸತ್ತ ತಕ್ಷಣ ಹೆಣವನ್ನು ನೆಲದ ಮೇಲೆ ಮಲಗಿಸಿ ಅದರ ಮೈಗೆ ಎಣ್ಣೆ ತಿಕ್ಕಿ ಮೈ ಮುಚ್ಚುತ್ತಾರೆ. ಸತ್ತ ಸುದ್ದಿಯನ್ನು ಕೊಲ್ಕಾರನು '' ಶಿವ್ನ ಬಿಟ್ಟ'' ಗೆ ಬನ್ನಿ ಎಂದು ಊರಿನವರಿಗೆಲ್ಲಾ ಹೇಳುತ್ತಾನೆ. ಸತ್ತವರು ಯಾತ್ರೆ ಮಾಡಿದ್ದರೆ ಅವರನ್ನು ಕೂಡಿಸಿ ವಾದ್ಯ, ಪಟಾಕಿಯ ಶಬ್ದಗಳೊಡನೆ ಸುಡಲು ಒಯ್ಯುತ್ತಾರೆ. ಮುತ್ತೈದೆ ಸತ್ತರೆ ಸಿಂಗಾರದಹೂ ಮುಡಿಸಿ ಕುಂಕುಮ ಹಚ್ಚಿ ಚಿನ್ನದ ಆಭರಣ ತೊಡಿಸುತ್ತಾರೆ. ಹೆಣದ ಬಾಯಲ್ಲಿ ಅಡಿಕೆ ಎಲೆ ಕುಟ್ಟಿ ಇಡುತ್ತಾರೆ. ಸುಡಲು ಹೆಣ ಒಯ್ಯುವಾಗ ಅರ್ಧದಾರಿಯಲ್ಲಿ ಹೆಣ ಇಳಿಸಿ ಅಲ್ಲಿ ನಾಲ್ಕಾಣೆ ಹಾಕಿ ಮುಂದುವರಿಯುತ್ತಾರೆ. ಹಾದಿಯಲ್ಲಿ ಹಣ ಹಾಕಿ ಮುಂದುವರಿಯುವುದು ಹರಿಶ್ಚಂದ್ರನ ಸಾಲ ತೀರಿಸುವ ಬಗೆ ಎಂದು ಹೇಳುತ್ತಾರೆ. ಹೆಣ ಸುಟ್ಟು ಹಿಂದಿರುಗುವಾಗ ಅವಲಕ್ಕಿಯನ್ನು ಎಡಗೆಯಿಂದ ಎಸೆಯುತ್ತಾ ಬರುತ್ತಾರೆ . ಸತ್ತವಳು ಬಾಣಂತಿಯಾಗಿದ್ದರೆ ರಾಗಿ, ಸಾಸಿವೆ, ಎಸೆಯುತ್ತಾರೆ. ಅನಂತರದ ಆಚರಣೆಗಳೆಲ್ಲಾ ಸಾಮಾನ್ಯವಾಗಿ ಇತರೇ ಹಿಂದುಳಿದ ವರ್ಗಗಳಲ್ಲಿನ ರೀತಿಯಲ್ಲೇ ನಡೆಯುತ್ತದೆ.

ಹಬ್ಬ :- ಹರಿಕಾಂತರು ಆಚರಿಸುವ ಹಬ್ಬಗಳಲ್ಲಿ ನಾಗಪಂಚಮಿ, ದೀಪಾವಳಿ, ಹೊಸ್ತು, ಚೌತಿ, ನೂಲು ಹುಣ್ಣಿಮೆ, ಬೆಚ್ಚನೆ ಸಂಕ್ರಾತಿ, ಆಷಾಡ ಏಕಾದಶಿ, ಆಳಿಯನ ಅಮಾವಾಸ್ಯೆ, ತುಳಸೀ ಹುಣ್ಣಿಮೆ, ಶಿವರಾತ್ರಿ, ಸುಗ್ಗಿ ಪ್ರಮುಖವಾದವು. ಅಳಿಯನ ಅಮಾವಾಸ್ಯೆಯಲ್ಲಿ ವಿಶೇಷವೆಂದರೆ ಹಬ್ಬಕ್ಕೆ ಬಂದ ಅಳಿಯ ಊಟವಾದ ತಕ್ಷಣ ಮನೆಯಲ್ಲುಳಿಯದೆ ತನ್ನ ಮನೆಗೆ ಹಿಂದಿರುಗುವುದು, ಹಿಂದೆ ಯಾರದೋ ಮನೆಯಲ್ಲಿ ಉಳಿದ ಅಳಿಯನಿಗಾದ ಆಘಾತದ ಪರಿಣಾಮದಿಂದ ಈ ಆಚರಣೆ ರೂಢಿಗೆ ಬಂದಿರಬಹುದೆಂದು ವಿ.ಗ. ನಾಯಕರು ಅಭಿಪ್ರಾಯ ಪಡುತ್ತಾರೆ.

ನೂಲು ಹುಣ್ಣಿಮೆ ಸಮುದ್ರವನ್ನಾಶ್ರಯಿಸಿದ ಜನರ ವಿಶೇಷ ಹಬ್ಬ. ಆ ದಿನ ಸ್ನಾನ ಮಾಡಿ ತುಳಸಿ ಕಟ್ಟೆಗೆ, ದೋಣಿಗೆ ಮಾವಿನ ಎಲೆಗಳನ್ನು ಸಿಕ್ಕಿಸಿ ತಮ್ಮ ಕುಲದೇವರಿಗೆ, ಸಮುದ್ರಕ್ಕೆ, ದೋಣಿಗೆ '' ನೂಲು '' (ಜನಿವಾರ) ಹಾಕುತ್ತಾರೆ. ಆ ಮನೆಯ ಯುವಕರು ಮತ್ತು ಹಿರಿಯರು ಜನಿವಾರ ಹಾಕಿಕೊಂಡು ಮಾರನೆ ದಿನ ತೆಗೆಯುತ್ತಾರೆ. ಸಮುದ್ರಕ್ಕೆ ಮತ್ತು ತಮ್ಮ ಕುಲದೇವರಿಗೆ ಎಡೆ ಇಟ್ಟು ಕಾಯಿ ಒಡೆದು ಪೂಜೆ ಸಲ್ಲಿಸುತ್ತಾರೆ. ಕೆಲವರು ನೂಲು ಹುಣ್ಣಿಮೆ ದಿನ ಸಮುದ್ರ ಸ್ನಾನ ಮಾಡುತ್ತಾರೆ. ಇದು ಪಾಪ ಪರಿಹಾರದ ಒಂದು ಆಚರಣೆ ಎಂದು ನಂಬುತ್ತಾರೆ. ಜನಿವಾರ ಸಂಸ್ಕೃತಿಯ ಪ್ರಭಾವವು ಹರಿಕಾಂತರಲ್ಲಿ ಈ ಸಂಪ್ರದಾಯದ ಆಚರಣೆಗೆ ಕಾರಣವೆನ್ನಬಹುದು. ವಿ. ಗ. ನಾಯಕರು '' ಹರಿಕಾಂತರು '' ಬ್ರಾಹ್ಮಣರೆಂದು ನಂಬಿಕೊಂಡಿರುವ ಹಿನ್ನೆಲೆಯಲ್ಲಿ ನೂಲು ಹುಣ್ಣಿಮೆಯನ್ನು ತಪ್ಪದೇ ಆಚರಿಸುತ್ತಾರೆ ಎಂದು ತಿಳಿಸಿದ್ದಾರೆ. ಆದರೆ ನೂಲು ಹುಣ್ಣಿಮೆ ಆಚರಣೆ ಕೇವಲ ಹರಿಕಾಂತರಲ್ಲಿ ಮಾತ್ರ ಕಾಣಿಸದೆ ಮೀನಿಗಾರರಲ್ಲೆಲ್ಲಾ ಕಾಣಿಸಿಕೊಳ್ಳುವುದರಿಂದ ಅವರ ಅಭಿಪ್ರಾಯ ಸಮಂಜಸವೆನಿಸದು.

ಹಬ್ಬ ಹರಿದಿನಗಳಲ್ಲಿ ಹಿಗ್ಗಿ ಕುಣಿವ ಅವರ ಸುಗ್ಗಿ ಕುಣಿತ, ಬುಗಡಿ ಕುಣಿತಗಳು ಅವರಲ್ಲಿ ಉಳಿದುಕೊಂಡಿರುವ ಜಾನಪದ ಕಲೆಗಳನ್ನು ಪರಿಚಯಿಸುತ್ತವೆ. ಅವರ ಗುಮಟೆ ಪದಗಳು ಜನಪದ ಸಾಹಿತ್ಯಕ್ಕೆ ವಿಶೇಷ ಕೊಡುಗೆಯಾಗಿದೆ.

ಉಪ್ಪು ಕಡಲ ಮಡಿಲನ್ನೇ ನಂಬಿ ಬದುಕುತ್ತಿರುವ ಹರಿಕಾಂತರ ಬದುಕು ಹಿಂದಿಗಿಂತ ಇಂದು ಎಷ್ಟೋ ಸುಧಾರಿಸಿದೆ. ಹುಟ್ಟಿನ ದೋಣಿಗಳ ಸ್ಥಳದಲ್ಲಿ ಯಾಂತ್ರಿಕ ದೋಣಿಗಳು ಬಂದಿವೆ. ಸೆಣಬಿನ ಬಲೆಯ ಜಾಗದಲ್ಲಿ ನೈಲಾನ್ ಬಲೆಗಳು ಬಳಕೆಯಾಗುತ್ತಿವೆ. ಬುಟ್ಟಿಗಳಲ್ಲಿ ಹೋಗುತ್ತಿದ್ದ ಮೀನುಗಳು ಇಂದು ಲಾರಿ ತುಂಬಿ ಹೋಗುವಂತಾಗಿದೆ. ಅವರ ಮಕ್ಕಳು ಶಾಲಾ ಕಾಲೇಜುಗಳ ಮೆಟ್ಟಿಲು ಹತ್ತಿ ವಿದ್ಯಾವಂತರಾಗುತ್ತಿದ್ದಾರೆ. ಸಾಮಾಜಿಕ ಆರ್ಥಿಕ ದೃಷ್ಟಿಯಿಂದ ಅವರ ಬದುಕು ಸುಧಾರಿಸಲ್ಪಟ್ಟಿದೆ. ಆದರೂ ಇನ್ನೂ ಕೆಲವರು ಸರಕಾರದ ಸೌಲಭ್ಯಗಳಿಂದ ವಂಚಿತರಾಗಿಯೇ ಬದುಕುತ್ತಿದ್ದಾರೆ.

ಖಂಡೆ ಖಾರ್ವಿಗಳು : -

ಖಂಡೆ ಖಾರ್ವಿಗಳು ಬಹಳ ಹಿಂದೆ ಕತ್ತಿಯನ್ನು ಜೊತೆಯಲ್ಲಿಟ್ಟುಕೊಂಡು ದೋಣಿ ನಡೆಸುತ್ತಿದ್ದರೆಂದು ತಿಳಿದು ಬರುತ್ತದೆ. ಅದರಲ್ಲೂ ಉಪ್ಪು ನೀರಿನಲ್ಲಿ ದೋಣಿ ನಡೆಸುವುದರಲ್ಲಿ ಪ್ರವೀಣರಾಗಿದ್ದ ಇವರನ್ನು '' ಕತ್ತಿಧರಿಸಿದ ನಾವಿಕ '' ರೆಂದೂ ಸಹ ಕರೆಯಲಾಗುತ್ತದೆ. ಪ್ರಮುಖವಾಗಿ ಇವರು ಮೀನುಗಾರರಾಗಿದ್ದು ವಿರಾಮ ಕಾಲದಲ್ಲಿ ಯೋಧರಾಗಿ ಹೋರಾಡುತ್ತಿದ್ದರೆನ್ನಲಾಗಿದೆ. ಹೊನ್ನಾವರ ತಾಲೂಕಿನಲ್ಲಿ ಕೇಂದ್ರಿ ಕೃತರಾಗಿರುವ ಇವರು ' ಖಾರ್ವಿ' ಜನಾಂಗಕ್ಕೆ ಸೇರಿದ್ದು ಗೋವಾ ಮೂಲದವರೆಂದು ತಿಳಿದು ಬರುತ್ತದೆ. ಕೊಂಕಣಿ ಮಾತನಾಡುವಾಗ ಕನ್ನಡದಂತೆ ರಾಗವಾಗಿ ಎಳೆದು ಮಾತನಾಡುತ್ತಾರೆ. ಗಂಡು ಮಕ್ಕಳಿಗೆ ಈರಯ್ಯ, ಮಲ್ಲಯ್ಯ, ರೋಗು, ಟೊಂಡೊ, ಕೊಮಾರ, ಗನು, ವೈಕು, ಭಿಕರೂ ಮೊದಲಾದ ಹೆಸರಿಡುತ್ತಾರೆ. ಹೆಣ್ಣುಮಕ್ಕಳಿಗೆ ಲಕ್ಷ್ಮಿ, ಗೌರಿ, ಪಾರ್ವತಿ, ಕುರ್ಶಿ ಮೋದಲಾದ ಹೆಸರಿಡುತ್ತಾರೆ. ಗೋವಾದ ಟಾಪ್‌ಡೆಮ್‌ನಲ್ಲಿರುವ '' ರಾವುಲ್‌ನಾಥ'' ಇವರ ಕುಲದೇವರು.

ಮೀನು ಹಿಡಿಯುವುದು ಇವರ ಮುಖ್ಯ ಕಸುಬಾದರೆ ಬಲೆ ಹೆಣೆಯುವುದು, ದೋಣಿ ಕಟ್ಟುವುದು ಉಪಕಸುಬಾಗಿದೆ. ಹೆಂಗಸರು ತೆಂಗಿನ ಸಿಪ್ಪೆಯಿಂದ ನಾರು ತೆಗೆದು ಹಗ್ಗ ಮಾಡಿ ಮಾರಾಟ ಮಾಡುತ್ತಾರೆ. ಹಿಂದೆ ಇವರು ಸೆಣಬಿನಿಂದ ಬಲೆ ಹೆಣೆಯುತ್ತಿದ್ದರೆಂದು ತಿಳಿಯುತ್ತದೆ.

ಸಂಪ್ರದಾಯ ಪ್ರಿಯರಾದ ಖಂಡೆ ಖಾರ್ವಿಗಳು ಗೋಕರ್ಣ, ತಿರುಪತಿ, ಧರ್ಮಸ್ಥಳಕ್ಕೆ ಯಾತ್ರೆ ಹೋಗುತ್ತಾರೆ. ಆದರೂ ಚಂದಾವರದ ಹನುಮಂತನ ಬಗ್ಗೆ ಅವರಿಗೆ ಅತಿಯಾದ ಭಕ್ತಿ ವರ್ಷಕ್ಕೊಮ್ಮೆ ಅವನ ಮೂರ್ತಿಯನ್ನು ಅಲಂಕರಿಸಿ ಮೆರವಣಿಗೆ ಮಾಡುತ್ತಾರೆ. ಧಾರ್ಮಿಕ ಸಮಾರಂಭಗಳು ಪುರೋಹಿತರ ನಿರ್ದೇಶನದಂತೆ ನಡೆಯುತ್ತವೆ. ಗ್ರಾಮಕ್ಕೆ ಬುದುವಂತನೇ ಆಡಳಿತಗಾರ ಅವನ ಸಹಾಯಕನಾಗಿ ''ಚೌಗುಲೆ'' ಇರುತ್ತಾನೆ.

ಭೂತ - ಪಿಶಾಚಿಗಳ ಬಗ್ಗೆ ಅವರಲ್ಲಿ ಭಯ, ಭಕ್ತಿ ಹೆಚ್ಚು , ಅವು ತೊಂದರೆ ಕೊಡುವ ಮತ್ತು ನಿವಾರಿಸುವ ಎರಡೂ ಕೆಲಸ ಮಾಡುತ್ತವೆಂದು ನಂಬುತ್ತಾರೆ. ಬಲಿಕೊಡುವುದರ ಮೂಲಕ ಕೋಪಗೊಂಡ ಭೂತ ಪಿಶಾಚಿಗಳನ್ನು ಸಮಾಧಾನ ಪಡಿಸುತ್ತಾರೆ.

ಇವರು ಆರ್ಥಿಕ ಸ್ಥಿತಿ ಇನ್ನೂ ಸುಧಾರಿಸಬೇಕಾಗಿದೆ. ಮೀನು ಹಿಡಿದು ಮಾರಾಟ ಮಾಡುವುದು ಅವರ ಉದ್ಯೋಗವಾಗಿದೆ. ಮಳೆಗಾಲದಲ್ಲಿ ಒಣಮೀನು, ಚಿಪ್ಪು ಮೀನುಗಳನ್ನು ಮಾರಾಟ ಮಾಡುತ್ತಾರೆ. ಉಳಿದ ಖಾರ್ವಿಗಳೊಡನೆ ಹೋಲಿಸಿದರೆ ಖಂಡೆ ಖಾರ್ವಿಗಳು ಬಹಳ ಹಿಂದುಳಿದ ಜನಾಂಗ.

ಪಾಗಿಗಳು : - ಗೋವಾ ಮೂಲದವರಾದ ಪಾಗಿಗಳು, ಮುಂಬಯಿ ಪ್ರಾಂತ್ಯಕ್ಕೆ ಉತ್ತರ ಕನ್ನಡ ಜಿಲ್ಲೆ ಸೇರಿದ ಸಂದರ್ಭದಲ್ಲಿ ಈ ಕಡೆಗೆ ವಲಸೆ ಬಂದವರೆಂದು ಊಹಿಸಲಾಗಿದೆ. 'ಪಾಗ್' ಎಂಬ ಕೊಂಕಣಿ ಪದದಿಂದ 'ಪಾಗಿ' ಎಂಬ ಪದ ಬಂದಿರುವುದಾಗಿ ಉತ್ತರ ಕನ್ನಡ ಜಿಲ್ಲಾ ಗೆಜೆಟಿಯರ್‌ನಲ್ಲಿ ತಿಳಿಸಲಾಗಿದೆ. 'ಪಾಗ್' ಎಂದರೆ 'ಮೀನಿಗೆ' ಎಂಬ ಆರ್ಥವಿದೆ. ವೈ. ಎಸ್. ದುರ್ಗೇಕರ್‌ರವರು ''ಪಾಗ್ ಎಂದರೆ 'ಬೀಸು' ಎಂಬ ಅರ್ಥ ಕೊಂಕಣಿಯಲ್ಲಿದೆ ಎಂದು ತಿಳಿಸಿ ಬೀಸು ಬಲೆಗಳಿಂದ ಮೀನು ಹಿಡಿಯುವುದರಲ್ಲಿ ಪ್ರವೀಣರಾಗಿದ್ದ ಇವರನ್ನು

'ಪಾಗಿಗಳು' ಎಂದು ಕರೆದರು'' ಎಂದು ಅಭಿಪ್ರಾಯ ಪಡುತ್ತಾರೆ. ಅದಲ್ಲದೇ ಮಹಾರಾಷ್ಟ್ರದಲ್ಲಿ 'ಪಾಗಿ' ಗಳು ಕರ್ನಾಟಕದ ಅಂಬಿಗರಂತೆ ಪ್ರಯಾಣಿಕರಿಗೆ ನದಿ ದಾಟಿಸುವ ಕೆಲಸ ಮಾಡುತ್ತಿದ್ದರೆಂದು ಹೇಳುತ್ತಾರೆ. ಕೊಂಕಣಿಯನ್ನು ಮಾತೃಭಾಷೆಯನ್ನಾಗಿಸಿಕೊಂಡ ಈ ಜನ ಗೋವಾ ಮೂಲದವರೆನ್ನುವುದರಲ್ಲಿ ಸಂಶಯವಿಲ್ಲ. ಅವರು ಇಂದಿಗೂ ತಮ್ಮ ಕುಲದೇವತೆ ಗೋವಾದ ಮಹಾಮಾಯಿ ಎಂದು ಹೇಳುತ್ತಾರೆ. ಜೊತೆಗೆ ಅಲ್ಲಿನ ಮಲ್ಲಿಕಾರ್ಜುನ ಗುರುಪರ್ದೇಶಿ ಎಂಬುದು ತಮ್ಮ ಆರಾಧ್ಯ ದೇವತೆ ಎನ್ನುತ್ತಾರೆ. ಮೂಲದಲ್ಲಿ ಇವರು ಕೊಂಕಣಿ ಖಾರ್ವಿಗಳಾಗಿದ್ದು ಕಾಲಕ್ರಮೇಣ ಅವರಿಂದ ಹೊರಬಂದವರೆಂದು ಕೆಲವರು ಅಭಿಪ್ರಾಯ ಪಡುತ್ತಾರೆ.

ಪಾಗಿಗಳು ಗಂಡು ಮಕ್ಕಳಿಗಿಡುವ ಸಾಮಾನ್ಯ ಹೆಸರುಗಳೆಂದೆ ಜೋಗು, ಕುಷ್ಟ, ಫಕೀರ, ಇಥೋಡ, ವಂಟು, ಪುರುಸು, ಮೊದಲಾದವು. ಹೆಣ್ಣುಮಕ್ಕಳಿಗಿಡುವ ಹೆಸರುಗಳಲ್ಲಿ ಆನಂದಿ, ಭಾಗಿ, ಪಂಡರಿ ಮೊದಲಾದವು ಸಾಮಾನ್ಯವಾಗಿವೆ. ಗೋಧಿ ಬಣ್ಣದವರಾದ ಪಾಗಿಗಳು ಶ್ರಮಜೀವಿಗಳಾಗಿರುವುದರಿಂದ ಆರೋಗ್ಯಕರ ಮೈಕಟ್ಟನ್ನು ಹೊಂದಿರುತ್ತಾರೆ. ದೋಣಿ ನಡೆಸುವ ಮೂಲ ಉದ್ಯೋಗ ನಡೆಸದೇ ಇರುವ ಕಾರಣ ಮೀನು ಹಿಡಿಯುವುದನ್ನು ಕಸುಬನ್ನು ತಮ್ಮ ಉದ್ಯೋಗವನ್ನಾಗಿಸಿಕೊಂಡಿದ್ದಾರೆ. ರಾಗಿಗಂಜಿ, ಕುಸುಬಲಕ್ಕಿ, ಅನ್ನ ಹಾಗೂ ಮೀನು ಇವರ ಪ್ರಮುಖ ಆಹಾರ. ಉಳಿದ ಮೀನುಗಾರರಂತೆ ಇವರು ಸಹ ಜಟ್ಟಿಗ, ಮಾಸ್ತಿ, ಮಾರಿ ಮೊದಲಾದ ಗ್ರಾಮದೇವತೆಗಳನ್ನು ನಂಬುತ್ತಾರೆ. ಆದರೆ ಇವರ ವಿಶೇಷ ಪೂಜೆ ಸಲ್ಲುವುದು ಕಾರವಾರದ ಬಳಿ ಇರುವ ಕದ್ರಾದ ಮಹಾಮಾಯಿ ದೇವತೆಗೆ. ಆ ದೇವತೆಗೆ ಬಲಿ ಕೊಡುವ ಸಂಪ್ರದಾಯವಿದೆ. ಶೃಂಗೇರಿ ಶಾರದೆಯನ್ನು ಸಹ ಇವರು ಅಚಲ ಶ್ರದ್ಧೆಯಿಂದ ನಂಬುವುದರಿಂದ ವರ್ಷಕ್ಕೊಮ್ಮೆಯಾದರೂ ಶೃಂಗೇರಿಗೆ ಭೇಟಿ ನೀಡಿ ಕಾಣಿಕೆ, ಹರಕೆ ಅರ್ಪಿಸಿ, ಪ್ರಸಾದ ಪಡೆದು ಬರುತ್ತಾರೆ. ಮಾಟ, ಮಂತ್ರ, ಭೂತ, ಪಿಶಾಚಿಗಳ ಬಗ್ಗೆ ಇವರಲ್ಲಿ ನಂಬಿಕೆ ಹೆಚ್ಚು. ಬರುವ ರೋಗರುಜಿನಗಳಿಗೆ ಭೂತ ಪಿಶಾಚಿಗಳ ಕಾಟವೇ ಕಾರಣವೆಂದು ನಂಬುವುದರಿಂದ ಅವುಗಳನ್ನು ತೃಪ್ತಿಪಡಿಸುವುದರ ಮೂಲಕ ಬಂದ ರೋಗಗಳನ್ನು ಅವರ ೨ ದೂರಮಾಡಿಕೊಳ್ಳಲು ಪ್ರಯತ್ನಿಸುತ್ತಾರೆಯೇ ವಿನ ಆಸ್ಪತ್ರೆಗೆ ಹೋಗುವುದಿಲ್ಲ. ತಮಗೆ ಬಂದ ಕಾಯಿಲೆಯ ಬಗ್ಗೆ ಅವರು 'ನೋಟ ನೋಡುವವ' ನಲ್ಲಿಗೆ ಹೋಗಿ ಯಾವ ದೆವ್ವದ ಕಾಟದ ಕಾರಣದಿಂದ ತಮಗೆ ಕಾಯಿಲೆ ಬಂದಿದೆ ಎಂದು ಪ್ರಶ್ನೆ ಕೇಳಿ ಆತ ನೀಡಿದ ಸೂಚನೆಯಂತೆ ನಡೆಯುತ್ತಾರೆ. ಒಂದು ವೇಳೆ ದೆವ್ವಗಳಿಗೆ ತೃಪ್ತಿಪಡಿಸಿದರೂ ಕಾಯಿಲೆ ವಾಸಿಯಾಗದಿದ್ದರೆ ಯಾರೋ ಮಾಟ ಮಾಡಿಸಿದ್ದಾರೆಂದು ನಂಬುತ್ತಾರೆ. ಆಗಲೂ ನೋಟಗಾರನೇ ಅವರಿಗೆ ಮಾರ್ಗದರ್ಶಕನಾಗುತ್ತಾನೆ. ಪಾಗಿಗಳ ಸಮಾಜದಲ್ಲಿ ನೋಟಗಾರ ಕೇವಲ ಭವಿಷ್ಯಗಾರ ಮಾತ್ರನಾಗದೆ ಅವರ ಕಷ್ಟಸುಖಗಳಿಗೆ ಕಾರಣ ತಿಳಿಸಿ ಅವುಗಳನ್ನು ದೂರ ಮಾಡುವ ಮಂತ್ರವಾದಿಯೂ ಸಹ ಆಗಿರುತ್ತಾನೆ.

ಸತ್ತವರನ್ನು ಸುಡುವ ಸಂಪ್ರದಾಯವಿದೆ. ಸತ್ತನಂತರ ಪ್ರೇತಗಳಾಗುತ್ತಾರೆಂಬ ನಂಬಿಕೆ ಅವರಲ್ಲಿರುವುದರಿಂದ ವಿಶೇಷ ಪೂಜೆ ಸಲ್ಲಿಸುವುದರ ಮೂಲಕ ಅವರಿಗೆ ತೃಪ್ತಿ ಪಡಿಸುತ್ತಾರೆ. ಹನ್ನೊಂದನೆಯ ದಿನ ಪುರೋಹಿತರ ಮನೆಯಿಂದ ತಂದ ಪಂಚಗವ್ಯವನ್ನು ಮನೆಯಲ್ಲೆಲ್ಲಾ ಸಿಂಪಡಿಸಿ ಸೂತಕ ಕಳೆಯುತ್ತಾರೆ.

ಗಬಿತರು :– 'ಗಲಬಾತ್ ' ಎಂಬ ಉರ್ದು ಪದಕ್ಕೆ '' ದೊಡ್ಡ ಹಡಗು '' ಎಂದು ಅರ್ಥ. 'ಗಬ್ರಿ' ಎಂಬುದು ಹಡಗಿನ ಹೆಸರು. ಈ ಹಡಗಿನಲ್ಲಿ ಕೆಲಸ ಮಾಡುವವರನ್ನು 'ಗಬ್ರಿತರು' - 'ಗಬಿತರು' ಎಂದು ಕರೆಯಲಾಯಿತೆಂದು ಉತ್ತರ ಕನ್ನಡ ಜಿಲ್ಲಾ ಗೆಜೆಟಿಯರ್‌ನಲ್ಲಿ ತಿಳಿಸಲಾಗಿದೆ. 14 ನೆಯ ಶತಮಾನದಲ್ಲಿ ಮರಾಠರೂ ಮತ್ತು ಪೇಶ್ವೆಗಳು ರಾಜ್ಯಭಾರ ಮಾಡುತ್ತಿದ್ದಾಗ ಅರಬ್ಬರು ವ್ಯಾಪಾರದ ಸಲುವಾಗಿ ಮಹಾರಾಷ್ಟ್ರ ಮತ್ತು ಗೋವಾಗಳ ಕಡೆ ಬರುತ್ತಿರುವಾಗ ಅವರ ನಾವೆಯಲ್ಲಿ ಗಬಿತರು ಕೆಲಸ ಮಾಡುತ್ತಿದ್ದರು. ಕೆಲವು ಸಂದರ್ಭಗಳಲ್ಲಿ ನಾವೆಯನ್ನು ನಡೆಸುತ್ತಿದ್ದರು. ಆಗ ನಾವೆಯಲ್ಲಿ ಸರಕನ್ನು ಹೇರಿಕೊಂಡು ಅರಬ್ಬರ ಸ್ಥಳಕ್ಕೆ ಅದನ್ನು ಸಾಗಿಸುತ್ತಿದ್ದರು. ಕೆಲವರು ನಾವೆ ನಿರ್ಮಾಣ ಮಾಡುತ್ತಿದ್ದರು. ಹೀಗೆ ನಾವೆಯ ಬಗ್ಗೆ ಅವರಿಗೆ ಪರಿಪೂರ್ಣ ಜ್ಞಾನವಿದ್ದ ಕಾರಣದಿಂದ ಇವರನ್ನು ಅರಬ್ಬರು ತಮ್ಮ ನಾವೆಯಲ್ಲಿ ಉಪಯೋಗಿಸಿಕೊಂಡರೆಂದು ತಿಳಿಯುತ್ತದೆ.

ವೈ. ಎಸ್. ದುರ್ಗೇಕರರು ಗಬಿತರನ್ನು 'ಗಾಬಿತರು' ಎಂದು ಕರೆದು ಅವರು 'ಕಡಲ ದಾರಿಗರು' ಎಂದು ಕರೆದಿದ್ದಾರೆ. ಅದಕ್ಕೆ ಅವರು ಕೊಡುವ ಕಾರಣವೆಂದರೆ ಗ-ಬೀತ>ಗಬೀತ, 'ಗ' ಎಂದರೆ ''ದಾರಿಗ'' ಎಂದು, 'ಬೀತ' ಎಂದರೆ ''ತುಂಬಿದ'', ''ದಟ್ಟವಾದ''ಎಂದು ಅರ್ಥೈಸಿ , ತುಂಬಿದ ಜಲರಾಶಿಯಲ್ಲಿ ದಾರಿ ಹುಡುಕುವವರನ್ನು ಗಬೀತರು ಎನ್ನುವರು ಎಂದು ತಿಳಿಸಿದ್ದಾರೆ. ಇವರ ಅಭಿಪ್ರಾಯಕ್ಕಿಂತ ಗೆಜೆಟಿಯರ್‌ನಲ್ಲಿ 'ಗಬಿತರು' ಎಂಬ ಪದಕ್ಕೆ ನೀಡಿರುವ ಅರ್ಥ ಸಮಂಜಸವೆನಿಸುತ್ತದೆ. ಏಕೆಂದರೆ ಇವರು ಮರಾಠರಿಗೂ ಮತ್ತು ಪೇಶ್ವೆಯರಿಗೂ ಯುದ್ಧ ನೌಕೆಗಳನ್ನು ನಿರ್ಮಿಸಿಕೊಟ್ಟ ಬಗ್ಗೆ ಉಲ್ಲೇಖವಿದೆ.

ಮಹಾರಾಷ್ಟ್ರದ ರತ್ನಗಿರಿ ಅವರ ಮೂಲಸ್ಥಾನವಾಗಿದ್ದು 17ನೇ ಶತಮಾನದಲ್ಲಿ ಶಿವಾಜಿಯು ದಕ್ಷಿಣದ ಕಡೆಗೆ ದಂಡೆಯಾತ್ರೆ ಕೈಗೊಂಡಾಗ ಅವನ ಸೈನ್ಯದೊಡನೆ ಗಬಿತರು ಬಂದಿರಬಹುದೆಂದು ಊಹಿಸಲಾಗಿದೆ. ಕೆಲವರು ಕಾರವಾರವು ನೈಸರ್ಗಿಕ ಬಂದರಾಗಿದ್ದು ವ್ಯಾಪಾರಕ್ಕೆ ಯೋಗ್ಯವಾಗಿದ್ದರಿಂದ ವ್ಯಾಪಾರಿ 'ಮಚವೆ'ಯಲ್ಲಿ ಗಬಿತರು ಉತ್ತರ ಕನ್ನಡ ಜಿಲ್ಲೆಗೆ ಬಂದಿರಬಹುದೆಂದು ಅಭಿಪ್ರಾಯ ಪಡುತ್ತಾರೆ. ಹೀಗೆ ಬಂದ ಗಬಿತರು 1862 ರಲ್ಲಿ ಉತ್ತರ ಕನ್ನಡ ಜಿಲ್ಲೆಯು ಮುಂಬೈ ಪ್ರಾಂತ್ಯದಲ್ಲಿರುವಾಗ ಕಾರವಾರದ ಸದಾಶಿವ ಗಡದಲ್ಲಿರುವ ದೇವಭಾಗವೆಂಬ ಊರಲ್ಲಿ ಮೊಟ್ಟಮೊದಲು ತಂಗಿದ್ದು ಅನಂತರ ಮಾಜಾಳಿ, ಕೋಡಿಭಾಗ್, ಸುಂಕೇರಿಗಳಲ್ಲಿ ನೆಲೆಸಿದರೆಂದು ತಿಳಿಯುತ್ತದೆ. ಆಗ ಅವರಲ್ಲಿ ಹಲವು ಮಚವೆಗಳಿದ್ದವೆಂದು ತಿಳಿಯುತ್ತದೆ. ಕೋಡಿಭಾಗ್, ಸುಂಕೇರಿ, ನಂದನ ಗದ್ದೆಗಳಲ್ಲಿ 15-20 ಮಚವೆಗಳಿದ್ದವು. ದಂಡೆಭಾಗದಲ್ಲಿ 10-12 ಮಚವೆಗಳು, ಹಾರವಾಡ(ದಾಂಡೆಭಾಗದ)ಯಲ್ಲಿವೆ. 10 - 15 ಮಚವೆಗಳು, ಕೇಣಿಯಲ್ಲಿ 8 ,ಕದಡಿಯಲ್ಲಿ 10 - 15 , ಅಳಿವೆದಂಡೆಯಲ್ಲಿ 8 - 10 , ಮಚವೆಗಳನ್ನು ಗಬಿತರು ಹೊಂದಿದ್ದರೆಂದು ವೈ. ಎಸ್. ದುರ್ಗೇಕರರು ತಿಳಿಸುತ್ತಾರೆ. ಈ ಮಚವೆಗಳ ಮೂಲಕ ಅವರು ಕಟ್ಟಿಗೆ, ಅಡಿಕೆ, ಎಣ್ಣೆ, ಹೆಂಚು ಮೊದಲಾದ ವಸ್ತುಗಳನ್ನು ಕಾರವಾರದ ಬಂದರಿನಿಂದ ಮುಂಬೈ, ಮದ್ರಾಸ್, ಮಂಗಳೂರು ಮೊದಲಾದ ಸ್ಥಳಗಳಿಗೆ ಕೊಂಡೊಯ್ಯುವ ಕೆಲಸ ಮಾಡುತ್ತಿದ್ದರು. ಗಾಳಿಯ ಆಧಾರದ ಮೇಲೆ ಚಲಿಸುವ ಅವರ ನಾವೆಗಳು ಎಷ್ಟೋ ಸಂದರ್ಭಗಳಲಿ ಬಿರುಗಾಳಿಯ ಅಪಾಯವನ್ನು ಎದುರಿಸಬೇಕಾದ ಪ್ರಸಂಗ ಒದಗಿದಾಗ ಬರುತ್ತಿದ್ದಾಗ ಗಬಿತರು ಧೈರ್ಯವಾಗಿ ಅಂತಹ ಅಪಾಯಗಳಿಂದ ಪಾರಾಗುತ್ತಿದ್ದರೆಂದು ತಿಳಿಯುತ್ತದೆ. ಕಾಲಕ್ರಮೇಣ ಸಮುದ್ರದಲ್ಲಿ ಯಾಂತ್ರಿಕ ದೋಣಿಗಳು ಬಂದು ಗಬಿತರ ಮಚವೆಗಳಿಗೆ ಬೇಡಿಕೆ ಕಡಿಮೆಯಾದ ಕಾರಣ ಅವರು ಮಚವೆ ನಡೆಸುವ ತಮ್ಮ ಮೂಲವೃತ್ತಿಯನ್ನು ಬಿಟ್ಟು, ಮೀನುಗಾರಿಕೆಯನ್ನು ತಮ್ಮ ಕಸುಬನ್ನಾಗಿ ಆಯ್ಕೆ ಮಾಡಿಕೊಂಡರು.

ಗಬಿತರು ಉತ್ತರ ಕನ್ನಡ ಜಿಲ್ಲೆಯ ಕಾರವಾರ, ಅಂಕೋಲಾ, ಮತ್ತು ಕುಮಟಾ ತಾಲೂಕುಗಳಲ್ಲಿ ಹರಡಿಕೊಂಡಿದ್ದಾರೆ. ಅವರಿರುವ ಸ್ಥಳವನ್ನು ಗಬಿತವಾಡ ಎಂದು ಹೆಸರಿಸಿಕೊಳ್ಳುತ್ತಾರೆ. ಮಹಾರಾಷ್ಟ್ರ ಮೂಲದವರಾದ್ದರಿಂದ ಇವರ ಮೂಲಭಾಷೆ ಮರಾಠಿಯಾಗಿದ್ದು ಈಗ ಅವರು ವಾಸಿಸುವ ಸ್ಥಳದ ಪ್ರಾದೇಶಿಕ ಭಾಷೆಯೊಡನೆ ತಮ್ಮ ಮರಾಠಿ ಭಾಷೆಯನ್ನು ಮಿಶ್ರಣ ಮಾಡಿಕೊಂಡು ಮಾತನಾಡುತ್ತಾರೆ. ಕಾರವಾರದ ಸುತ್ತಮುತ್ತಲಿನ ಗಬಿತರು ಕೊಂಕಣಿ ಮಿಶ್ರಿತ ಮರಾಠಿ ಭಾಷೆಯನ್ನಾಡಿದರೆ ಕುಮಟಾ ತಾಲೂಕಿನ ಗಬಿತರು ಕನ್ನಡ ಮಿಶ್ರಿತ ಮರಾಠಿ ಮಾತನಾಡುತ್ತಾರೆ.

ಗಬಿತರ ಉಡುಪು ಮರಾಠಿಗರ ಉಡುಪನ್ನು ಹೋಲುತ್ತದೆ. ಪುರುಷರು ಬಿಳಿಯ ಕಚ್ಚೆ ಪಂಚೆಯುಟ್ಟು ಬಿಳಿ ಅಂಗಿ ತೊಟ್ಟಿದ್ದು ತಲೆಗೆ ಮುಂಡಾಸು ಸುತ್ತುತ್ತಾರೆ. ಹೆಂಗಸರು ಮಾಸಲು ಕೆಂಪು ಬಣ್ಣದ ಕಂಚಿ ಸೀರೆಯನ್ನು ಕಚ್ಚೆ ಹಾಕಿ ಉಡುತ್ತಾರೆ. ಜೊತೆಗೆ ಕುಪ್ಪಸ ತೊಡುತ್ತಾರೆ. ಮೂಗಿಗೆ ಉಂಗುರಾಕಾರದ ಜೊತಾಡುವ ಮೂಗುತಿ ಧರಿಸಿ, ಹಣೆಗೆ ರೂಪಾಯಿಯಗಲದಷ್ಟು ಕುಂಕುಮ ಹಚ್ಚುತ್ತಾರೆ.

ಮೀನು ಹಿಡಿಯುವುದರಲ್ಲಿ ಮತ್ತು ಮೀನಿನ ವ್ಯಾಪಾರದಲ್ಲಿ ಚತುರರಾದ ಗಬಿತರು ಸರ್ಕಾರದ ಸೌಲಭ್ಯವನ್ನು ಉಪಯೋಗಿಸಿಕೊಂಡು ನಾಡ ದೋಣಿಗಳ ಬದಲು ಯಾಂತ್ರಿಕ ದೋಣಿಗಳನ್ನು ಹೊಂದಿದ್ದಾರೆ. ಆ ದೋಣಿಗಳಲ್ಲಿ ಮೀನು ಹಿಡಿಯಲು ಹೋಗುವ ಗುಂಪಿನ ನಾಯಕನನ್ನು 'ತಾಂಡೇಲ' ಎಂದು ಕರೆಯುತ್ತಾರೆ. ಆತನು ಮೀನಿನ 'ತೆಪ್ಪ' (ಗುಂಪು) ವನ್ನು ಕಂಡು ಹಿಡಿದು ಉಳಿದವರಿಗೆ ಬಲೆ ಬಿಡಲು ಹೇಳುತ್ತಾನೆ. ತಾಂಡೇಲನ ನಿರ್ದೇಶನದಂತೆ ಉಳಿದವರ ಬಲೆ ಬಿಟ್ಟು ಮೀನು ಹಿಡಿಯುತ್ತಾರೆ. ಅವನ ದಿನಗೂಲಿ ಉಳಿದವರ ಕೂಲಿಯ ಎರಡರಷ್ಟಿರುತ್ತದೆ. ಪುರುಷರು ಮೀನು ಹಿಡಿದು ದಡ ತಲುಪಿದ ತಕ್ಷಣ ಸ್ತ್ರೀಯರು ಅವುಗಳನ್ನು ಹೊತ್ತು ಲಾರಿಗೆ ತುಂಬುತ್ತಾರೆ. ಉಳಿದವುಗಳನ್ನು ಮಾರಾಟ ಮಾಡಿಕೊಂಡು ಬರುತ್ತಾರೆ.

ಇವರು ಶೈವ ಮತ್ತು ವೈಷ್ಣವ ಸಂಪ್ರದಾಯಗಳೆರಡನ್ನೂ ಆಚರಿಸುತ್ತಾರೆ.ಶಿವ, ವಿಷ್ಣು, ವಿಠೋಬ, ಖಂಡೋಬ, ತುಳಜಾ ಭವಾನಿ ಮೊದಲಾದ ದೇವರುಗಳ ಬಗ್ಗೆಯೂ ಇವರಲ್ಲಿ ಅಚಲ ಶ್ರದ್ಧೆಯಿದೆ. ಆದರೂ ಗಬಿತರ ಕುಲದೇವತೆ ವಿಠೋಬವಾಗಿದ್ದು . ಅದು ಮಹಾರಾಷ್ಟ್ರದ ಪಾಂತಾರ ಪುರದಲ್ಲಿದೆ. ಅಲ್ಲಿಗೆ ಹೋಗಿ ಬಂದರೆ ಇವರು ಯಾತ್ರೆ ಮಾಡಿದಂತೆ. ಪ್ರತಿಯೊಬ್ಬರ ಮನೆಗೂ ವಿಠೋಬನ ಭಾವಚಿತ್ರ ಇದ್ದೇ ಇರುತ್ತದೆ. ಬಲಿ ಸಂಪ್ರದಾಯದ ಆಚರಣೆಯ ಮೂಲಕ ದೇವರನ್ನು ತೃಪ್ತಿ ಪಡಿಸುವ ಪದ್ಧತಿ ಜಾರಿಯಲ್ಲಿದೆ ಮದುವೆ, ಹರಿದಿನ ಮೊದಲಾದ ಸಂದರ್ಭಗಳಲ್ಲಿ ಪುರೋಹಿತನನ್ನು ಆಹ್ವಾನಿಸುತ್ತಾರೆ.

ಗ್ರಾಮದ ಆಡಳಿತವು '' ಬುದುವಂತನ'' ಕೈಯಲ್ಲಿರುತ್ತದೆ. ಉಳಿದ ಮೀನುಗಾರರಂತೆಯೇ ''ಬುದುವಂತನ '' ಕೈ ಕೆಳಗೆ ಕೋಲುಕಾರನಿದ್ದು ಇವನು ಬುದುವಂತನ ನಿರ್ದೇಶನದಂತೆ ಊರಿನವರಿಗೆಲ್ಲಾ ಸುದ್ದಿ ತಿಳಿಸುತ್ತಾನೆ.

ವಿಧವಾ ವಿವಾಹಕ್ಕೆ ಮತ್ತು ಬಹುಪತ್ನಿತ್ವಕ್ಕೆ ಇವರಲ್ಲಿ ಅವಕಾಶವುಂಟು. ಆದರೆ ವಿವಾಹ ವಿಚ್ಛೇದನ ಬಹಳ ಕಡಿಮೆ. ಮದುವೆಯಲ್ಲಿ ಬುದುವಂತನೇ ಪ್ರಮುಖ ವ್ಯಕ್ತಿ. ಅಂತರ್ಜಾತೀಯ ವಿವಾಹಕ್ಕೆ ಇವರಲ್ಲಿ ಆಸ್ಪದವೇ ಇಲ್ಲ. ತಪ್ಪು ಮಾಡಿದವರನ್ನು ದಂಡ ಮತ್ತು ಜಾತಿಕಟ್ಟಿನ ಶಿಕ್ಷೆ ವಿಧಿಸುತ್ತಾರೆ.

ಹಬ್ಬ ಹರಿದಿನಗಳಲ್ಲಿ ಗಬಿತರ 'ಪುಗಡಿ ' ಕುಣಿತ ಅತ್ಯಂತ ಆಕರ್ಷಣೀಯ. ಹೆಂಗಸರು ಖಾಲಿ ಕೊಡಗಳನ್ನು ಹಿಡಿದು ಕೊಂಡು ಕುಣಿಯುತ್ತಾರೆ. ಕುಣಿತದ ಸಂದರ್ಭದಲ್ಲಿ ಆಗಾಗ ಕೊಡವನ್ನು ಬಾಯಿಯ ಬಳಿ ತಂದು ''ಪೂವ್ ಪೂವ್'' ಎಂದು ಊದುತ್ತಾರೆ. ಲಯಬದ್ಧವಾಗಿ ಕತ್ತು ಮತ್ತು ಸೊಂಟವನ್ನು ಬಳುಕಿಸುತ್ತಾರೆ. ಹೀಗೆ ಕುಣಿಯುವಾಗ ಸಂಕೋಚವಿಲ್ಲದೆ ಸ್ವೇಚ್ಛೆಯಾಗಿ ಕುಣಿಯುತ್ತಾ ತಿರುಗುತ್ತಾರೆ. ಆಗ ವಾದ್ಯದ ಸಾಧನವಾಗಿ ಮನೆಯಲ್ಲಿನ ಬಟ್ಟಲು ಇಲ್ಲವೇ ಕಂಚಿನ ತಟ್ಟೆಯನ್ನೇ ಬಳಸುತ್ತಾರೆ. ತೊಟ್ಟಿರುವ ಸಾಮಾನ್ಯ ಉಡುಪೇ ಕುಣಿತದ ವೇಷ ಭೂಷಣವಾಗಿರುತ್ತದೆ. ಗುಂಪು ಕಟ್ಟಿ ಕುಣಿಯುವಾಗ ಕೆಲವರು ಸುಗ್ಗೀ ಕುಣಿತದ ಇಲ್ಲವೇ ಗುಮಟೇ ಹಾಡುತ್ತಾರೆ. ಸಾಮಾನ್ಯವಾಗಿ ಕುಣಿಯುವವರ ಕೈಯಲ್ಲೆಲ್ಲಾ ಖಾಲೀ ಕೊಡಗಳು ಇದ್ದೇ ಇರುತ್ತವೆ. ವಾದ್ಯ ನುಡಿಸುವ ಬಗೆಯು ವಿಶೇಷವಾಗಿರುತ್ತದೆ. ಒಬ್ಬಳು ತನ್ನ ಬಲಗೈಲಿ ಕಂಚಿನ ಬಟ್ಟಲನ್ನು ಹಿಡಿದು ಎಡಗೈಲಿ ಜಾಗಟೆ ಬಾರಿಸುವ ಹಾಗೆ ಬಾರಿಸಿದರೆ ಮತ್ತೊಬ್ಬಳು ಕೌಚಿದ ಬಾಂಡ್ಲಿಯ ಮೇಲೆ ಕೋಲನ್ನು ಉಜಿ '' ರೊಂಯ್'' ಎಂಬ ಶಬ್ದ ಮಾಡುತ್ತಿರುತ್ತಾಳೆ. ಕುಣಿಯುವಾಗ ಒಮ್ಮೆ ಒಬ್ಬೊಬ್ಬರಾಗಿ ಕುಣಿದರೆ ಮತ್ತೊಮ್ಮೆ ಗುಂಪು ಕಟ್ಟಿ ಕೈಕೈ ಹಿಡಿದು ಕುಣಿಯುತ್ತಾರೆ. ಗಬಿತರ 'ಪುಗಡಿ' ಕುಣಿತ ಜನಪದ ಕಲಾ ಕ್ಷೇತ್ರಕ್ಕೆ ವಿಶಿಷ್ಟವಾದ ಕೊಡುಗೆ.

ಸತ್ತವರನ್ನು ಹೂಳುವ ಮತ್ತು ಸುಡುವ ಎರಡೂ ಪದ್ದತಿಗಳನ್ನು ಗಬಿತರು ಆಚರಣೆಯಲ್ಲಿಟ್ಟುಕೊಂಡಿದ್ದಾರೆ. ಸಾಮಾನ್ಯವಾಗಿ ಉಳಿದ ಮೀನುಗಾರರಿಗಿಂತ ಗಬಿತರ ಆರ್ಥಿಕ ಸ್ಥಿತಿ ಉತ್ತಮವಾಗಿರುವುದರಿಂದ ಅವರ ಸಮಾಜವು ಅಕ್ಷರಸ್ಥ ಸಮಾಜವಾಗಿದೆ. ನೌಕರಿ, ವ್ಯಾಪಾರ, ಮೀನುಗಾರಿಕೆಯಿಂದ ಅವರು ಸುಧಾರಿತ ಜನಾಂಗವಾಗಿದ್ದಾರೆ.

ಕಬ್ಬೇರರು :- ಉತ್ತರ ಕನ್ನಡ ಜಿಲ್ಲೆಯ ಕುಮಟಾ, ಹೊನ್ನಾವರ, ಸಿದ್ದಾಪುರ, ಯಲ್ಲಾಪುರ, ಹಾಗೂ ಸೂಪಾ ತಾಲೂಕುಗಳಲ್ಲಿ ವಾಸವಾಗಿರುವ ಕಬ್ಬೇರರು ಮೂಲದಲ್ಲಿ ಬೋಯಿಗಳೆಂದು ತಿಳಿದು ಬರುತ್ತದೆ. ಉತ್ತರ ಕರ್ನಾಟಕ ಮೂಲದವರಾದ ಇವರು ವ್ಯವಸಾಯ ಹಾಗೂ ಮತ್ತು ಮೀನುಗಾರಿಕೆ ಈ ಎರಡೂ ಉದ್ಯೋಗ ಮಾಡುತ್ತಾರೆ. ವ್ಯವಸಾಯಗಾರರನ್ನು ''ಗೌರೀ ಮಕ್ಕಳು'' ಎಂದು ಮೀನುಗಾರರನ್ನು ''ಗಂಗೆಮಕ್ಕಳು'' ಎಂದು ಕರೆಯುತ್ತಾರೆ. ರಾಜರ ಆಳ್ವಿಕೆಯ ಕಾಲದಲ್ಲಿ ಇವರು ಅರಸರ ಪಲ್ಲಕ್ಕಿ ಹೊರುತ್ತಿದ್ದರೆಂದು ಹೇಳುತ್ತಾರೆ. ಮೀನುಗಾರಿಕೆಯನ್ನು ಕಸುಬನ್ನಾಗಿಸಿಕೊಂಡ ಕಬ್ಬೇರರು ಘಟ್ಟದ ಮೇಲಿಂದ ಸಮುದ್ರದ ಕಡೆಗೆ ವಲಸೆ ಬಂದು ಕರಾವಳಿಯುಲ್ಲುಳಿದರು. ಇವರು ಒಳನಾಡ ಮೀನುಗಾರಿಕೆಯಲ್ಲಿ ಪ್ರವೀಣರಾದಷ್ಟು ಕಡಲ ಮೀನುಗಾರಿಕೆಯಲ್ಲಿ ಪ್ರಸಿದ್ಧರಾಗಲಿಲ್ಲ. ಹೆಣ್ಣು ಮಕ್ಕಳಿಗೆ ಬುಟ್ಟಿ, ಬಸ್ಸಿ, ಪರ್ಶ, ಮೊದಲಾದ ಹೆಸರರಿಡುತ್ತಾರೆ. ಗಂಡು ಮಕ್ಕಳಿಗೆ ಡೀಮ್, ರಂಗ, ರಾಮ, ಪೀವ, ಪರ್ಶ, ಎಂದು ಹೆಸರಿಡುತ್ತಾರೆ. ಉಳಿದ ಮೀನುಗಾರರು ಇಡುವ ಹೆಸರುಗಳಿಗಿಂತ ಇವರ ಹೆಸರುಗಳು ಭಿನ್ನವಾಗಿರುವುದರಿಂದ ಅವರು ಕಡಲ ತೀರದ

ಮೀನುಗಾರರಲ್ಲವೆಂಬುದು ಸ್ಪಷ್ಟವಾಗುತ್ತದೆ. ಅಲ್ಲದೆ ಅವರ ಕುಲದೇವರಾದ ಬನವಾಸಿಯ ಬುಟ್ಟಿಯಮ್ಮ, ಧಾರವಾಡದ ಮೈಲಾರದೇವಿ, ಬೆಳಗಾವಿ ಜಿಲ್ಲೆಯ ಎಲ್ಲಮ್ಮ, ಸಿರಿಸಿಯ ಮಾರಿ, ಮೊದಲಾದವುಗಳು ಸಹ ಇವರು ಘಟ್ಟದಿಂದ ಬಂದವರೆಂಬುದನ್ನು ಸ್ಪಷ್ಟಪಡಿಸುತ್ತದೆ.

ಮದುವೆ ಸಂಪ್ರದಾಯಗಳಲ್ಲಿ ಗಮನಾರ್ಹವಾದ ಸಂಪ್ರದಾಯವೆಂದರೆ , ಮದುವೆಯ ಮೊದಲ ವರ್ಷದಲ್ಲಿ ಮನೆಯಲ್ಲಿ ಮೂರು ತಲೆಗಳಾಗಬಾರದೆಂಬ ನಂಬಿಕೆ ಇದೆ. ಒಂದುವೇಳೆ ಮೂರು ತಲೆಗಳಾದರೆ ಅದು ಅಶುಭವೆಂದು ಅವರು ನಂಬುತ್ತಾರೆ. ಆದ್ದರಿಂದ ಮದುವೆಯ ಮೊದಲ ವರ್ಷ ಮದುಮಗ ಮತ್ತು ಮದುಮಗಳು ಕೂಡದಂತೆ ದೂರವಿಟ್ಟಿರುತ್ತಾರೆ. ಅವರಿಬ್ಬರು ಕೂಡುವುದು ಎರಡನೇ ವರ್ಷದಲ್ಲಿ , ಬಹಳ ಹಿಂದೆ ಇವರಲ್ಲಿ ವಿವಾಹ ಪೂರ್ವ ಲೈಂಗಿಕ ಸಂಬಂಧಕ್ಕೆ ಒಪ್ಪಿಗೆ ಇತ್ತೆಂದು ತಿಳಿದುಬರುತ್ತಾರೆ. ಮದುವೆಯಲ್ಲಿ ಪುರೋಹಿತನಿಂದ ಹೆಣ್ಣಿನ ಕೊರಳಿಗೆ ತಾಳಿ ಕಟ್ಟಿಸುತ್ತಾರೆ. ವಿಧವಾ ವಿವಾಹಕ್ಕೆ ಇವರಲ್ಲಿ ಅವಕಾಶವಿದೆ. ವಿಧವಾ ವಿವಾಹವು ದೇವಸ್ಥಾನದಲ್ಲಿ ವಿಧವೆ ಮತ್ತು ವಿಧುರನ ನಡುವೆ ನಡೆಯುತ್ತದೆ. ಮುತ್ತೈದೆಯರು ಅದರಲ್ಲಿ ಭಾಗವಹಿಸುವ ಹಾಗಿಲ್ಲ. ವಿಧವಾ ವಿವಾಹಕ್ಕೆ ' ಉಡಿಕೆ' ಎಂದು ಕರೆಯುತ್ತಾರೆ. ಕೆಲವರು ಹೆಣ್ಣು ಮಕ್ಕಳನ್ನು ಹುಳುಗಮ್ಮನಿಗೆ ಬಸವಿ ಬಿಡುತ್ತಾರೆ.

ಊರಿನ ಕ್ಷೇಮದ ಜವಾಬ್ದಾರಿಯು 'ಬುದುವಂತ' ನ ಮೇಲಿರುತ್ತದೆ. ಅಪರಾಧಿಗೆ ದಂಡ ವಿಧಿಸುವ ಇಲ್ಲವೇ ತಲೆಬೋಳಿಸುವ ಶಿಕ್ಷೆ ರೂಢಿಯಲ್ಲಿದೆ. ಬುದುವಂತ ಕೊಟ್ಟ ತೀರ್ಪುನ್ನು ತಿರಸ್ಕರಿಸುವುದು ಅಪರಾಧವೆಂದು ತಿಳಿಯುತ್ತಾರೆ.

ಸತ್ತವರನ್ನು ಸುಡುವ ಪದ್ಧತಿ ಇದೆ. ಹಿಂದೆ ಹೂಳುವ ಸಂಪ್ರದಾಯವಿತ್ತೆಂದು ಹೇಳುತ್ತಾರೆ. ಸತ್ತವರ ಆತ್ಮಶಾಂತಿಗಾಗಿ ಹನ್ನೆರಡನೆಯ ದಿನ ಕಳಸದ ಚೊಂಬನ್ನು ಪೂಜಿಸಿ ಮಾರನೇಯದಿನ ಯಾರೂ ಇಲ್ಲದ ಸ್ಥಳದಲ್ಲಿ ಅದರಲ್ಲಿನ ನೀರನ್ನು ಸುರಿದು ಬರುತ್ತಾರೆ.

ದಾಲಜಿಗಳು : ಕರ್ನಾಟಕ ಕರಾವಳಿಯ ಮೀನುಗಾರರಲ್ಲಿ ದಾಲಜಿಗಳು ಇಸ್ಲಾಂ ಧರ್ಮಾವಲಂಬಿಗಳು , ಮೂಲದಲ್ಲಿ ಇವರು ಅರಬ್ಬೀ ದೇಶದವರೆಂದು ತಿಳಿದು ಬರುತ್ತದೆ. ಅರಬ್ ದೇಶದಲ್ಲಿ ಹಜ್ಜಾಜ ದೊರೆ ಆಳ್ವಿಕೆ ನಡೆಸುವಾಗ ಅಲ್ಲಿನ ಖುರೇಷಿ ಜನಾಂಗದವ-ರನ್ನು ಅವನು ದೇಶ ಬಿಟ್ಟು ಹೋಗುವಂತೆ ಆಜ್ಞೆ ಮಾಡಿದನು. ಅವನ ಆಜ್ಞೆಯನ್ನು ತಿರಸ್ಕರಿಸಿದಾಗ ಅವರ ಮನೆಗಳಿಗೆ ಬೆಂಕಿ ಹಚ್ಚುವಂತೆ ಆಜ್ಞೆ ಹೊರಡಿಸಿದನು. ಆಗ ನಾವೆ ನಡೆಸುವುದರಲ್ಲಿ ಪ್ರವೀಣರಾಗಿದ್ದ ಅವರು ಹಡಗುಗಳಲ್ಲಿ ಕುಳಿತು ಭಾರತದ ಕಡೆ ಬಂದರು. ಹಾಗೆ ಬಂದ ಹಡಗುಗಳಲ್ಲಿ ಒಂದು ಹಡಗು ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲ್ಲೂಕಿನ ಹೊಸ ಪಟ್ಟಣ ಎಂಬ ಊರಿನ ಬಂದರಿಗೆ ಬಂದಿತು. ಮತ್ತೊಂದು ದಕ್ಷಿಣ ಕನ್ನಡ ಜಿಲ್ಲೆಯ ಕಡೆಗೆ ಹೋಯಿತು. ಹೊಸಪಟ್ಟಣದ ಬಂದರಿಗೆ ಬಂದ ಖುರೇಷಿ ಜನಾಂಗದವರನ್ನು ''ನವಾಯಿತರು'' ಎಂದು ಕರೆಯಲಾಯಿತು. ಹಾಗೆಂದರೆ ''ಹೊಸದಾಗಿ ಬಂದವರು'' ಎಂದರ್ಥ. ದಕ್ಷಿಣ ಕನ್ನಡ ಜಿಲ್ಲೆಯ ಕಡೆ ಹೋದ ಹಡಗಿನವರು ಗಂಗೊಳ್ಳಿಯಲ್ಲಿಳಿದರು. ಉಳಿದವರು ಮಂಗಳೂರಿನ ಕಡೆ ಪ್ರಯಾಣ ಮಾಡಿದರು. ಗಂಗೊಳ್ಳಿಯಲ್ಲಿ ಇಳಿದುಕೊಂಡವರು ಕಾಲಕ್ರಮೇಣ ಶಿರೂರು , ಮುರ್ಡೇಶ್ವರ ಮೊದಲಾದ ಸ್ಥಳಗಳಲ್ಲಿ ಹರಡಿಕೊಂಡರು. ಅವರು ನಾವೆ ನಡೆಸುವುದರಲ್ಲಿ ಪ್ರವೀಣರಾಗಿದ್ದರಿಂದ ಅವರನ್ನು 'ನಾಖುದಾ' ಎಂದು ಕರೆದರು. ಅಂದರೆ 'ನಾವಿಕರು' ಎಂದರ್ಥ. ಮಂಗಳೂರಿನ ಕಡೆ ಹೋದವರನ್ನು ಮಾಪಿಳ್ಳೆ, ಬ್ಯಾರಿ ಎಂದು ಕರೆದರು. ಖುರೇಷಿ ಜನಾಂಗದವರ ಮುಖ್ಯ ಉದ್ಯೋಗ ಹಡಗು ನಡೆಸುವುದೇ ಆಗಿತ್ತು. ಕಾಲಕ್ರಮೇಣ ಅವರು ಮೀನುಗಾರಿಕೆಯನ್ನು ಮುಖ್ಯ ಉದ್ಯೋಗವನ್ನಾಗಿ ಆಯ್ಕೆ ಮಾಡಿಕೊಂಡರು. ಆದರೆ ''ನವಾಯಿತರು'' ಇಂದಿಗೂ ವ್ಯಾಪಾರವನ್ನು ತಮ್ಮ ಮುಖ್ಯ ಉದ್ಯೋಗವನ್ನಾಗಿಸಿಕೊಂಡಿದ್ದಾರೆ. ಅಲ್ಲದೇ ತಮ್ಮ ಮೂಲಸ್ಥಾನದೊಡನೆ ಸಂಬಂಧವನ್ನು ಕಾಯ್ದಿಟ್ಟು ಕೊಂಡಿದ್ದಾರೆ. ಆದ್ದರಿಂದಲೇ ಅವರಲ್ಲಿ ಶೇಕಡಾ 90ರಷ್ಟು ಗಂಡಸರು ಕೊಲ್ಲಿ ರಾಷ್ಟ್ರಗಳಲ್ಲಿ ದುಡಿಯುತ್ತಿದ್ದಾರೆ. ಉಳಿದವರು ಹಡಗಿನ ಮೂಲಕ ವಿದೇಶಿ ವಸ್ತುಗಳನ್ನು ತಂದು ಭಾರತದಲ್ಲಿ ಮಾರಾಟ ಮಾಡುವ ಕೆಲಸದಲ್ಲಿ ತೊಡಗಿದ್ದಾರೆ. ಇವರ ವಿದೇಶಿ ವಸ್ತುಗಳ ವ್ಯಾಪಾರದ ಕಾರಣದಿಂದ ಭಟ್ಕಳವು ''ಮಿನಿದುಬಾಯ್'' ಎನಿಸಿಕೊಂಡಿದೆ.

ಅರಬ್ ದೇಶದಿಂದ ಬಂದವರಲ್ಲಿ ನವಾಯಿತರಷ್ಟ ಶ್ರೀಮಂತರು ಉಳಿದವರಾಗಲಿಲ್ಲ. ಏಕೆಂದರೆ ದಾಲಜಿಗಳು ಕಡಲನ್ನಾಶ್ರಯಿಸಿ ಬದುಕಲು ಪ್ರಾರಂಭಿಸಿದರು. ' ಸಿಕ್ಕರೆ ಶಿಕಾರಿ ಇಲ್ಲದಿದ್ದರೆ ಭಿಕಾರಿ' ಎನ್ನುವ ಉದ್ಯೋಗ ಅವರದಾಯಿತು. ಆದ್ದರಿಂದ ಇಂದಿಗೂ

'ನಾಖುದ' ಎಂದು ಕರೆಯಿಸಿಕೊಳ್ಳುವ ದಾಲಿಜಿಗಳು ಬಡತನದ ರೇಖೆಯನ್ನು ದಾಟಿಲ್ಲ. ನವಾಯಿತರಲ್ಲಿ ಕಾಣುವಷ್ಟು ಇಸ್ಲಾಂ ಧರ್ಮದ ಆಚರಣೆಗಳು 'ದಾಲಿಜಿ'ಗಳಲ್ಲಿ ಕಾಣುವುದಿಲ್ಲ. ಬುರ್ಖಾ ಧರಿಸದೆ ಹೊರ ಹೋಗುವ ಸ್ತ್ರೀಯನ್ನು ನವಾಯಿತರಲ್ಲಿ ಕಾಣಲು ಸಾಧ್ಯವಿಲ್ಲ. ಆದರೆ ದಾಲಜಿ ಹೆಣ್ಣು ಮಕ್ಕಳು ಕಾಡಿಗೆ ಹೋಗಿ ಕಟ್ಟಿಗೆ ಹೊತ್ತುಕೊಂಡು ಬರುತ್ತಾರೆ. ನದಿಗಳಿಗೆ ಹೋಗಿ ಬಟ್ಟೆ ಒಗೆದುಕೊಂಡು ಬರುತ್ತಾರೆ. ಗಂಡಸರು ಸಮುದ್ರದಿಂದ ಹಿಡಿದು ತಂದ ಮೀನನ್ನು ತೊಳೆದು ಉಪ್ಪು ಹಾಕಿ ಒಣಗಿಸುತ್ತಾರೆ.

ಉತ್ತರ ಕನ್ನಡ ಜಿಲ್ಲೆಯ ಮೊದಲ ಕಲೆಕ್ಟರು ಆದ 'ರೀಡರ್' ಎಂಬುವರು ಮಾಡಿದ ಜಾತಿಗಳ ವರ್ಗದಿಂದ ಮತ್ತು ''ಇಬ್ನ ಬಟೂಟಾ'' ಎಂಬುವನು ಬರೆದಿಟ್ಟ ದಾಖಲಯ ಪ್ರಕಾರ ''ನಾಖುದಾ ಮುಸ್ಲಿಮರ ಹಡಗು ಅರಬ್ ದೇಶದಿಂದ ಬರುವಾಗ ಬಿರುಗಾಳಿಯ ಹೊಡೆತಕ್ಕೆ ಸಿಕ್ಕಿ ಒಡೆದು ಹೋದಾಗ ಅದರಲ್ಲಿದ್ದ ಗಂಡಸರು ಜೀವ ಉಳಿಸಿಕೊಳ್ಳಲು ಕರಾವಳಿಯ ಕಡೆಗೆ ಬಂದರು. ಸ್ಥಳೀಯರೊಡನೆ ವಿವಾಹ ಸಂಬಂಧ ಬೆಳೆಸಿಕೊಂಡರು. ಈ ಸಂಬಂಧದ ಫಲವಾಗಿ ''ದಾಲಜಿ'' ಜನಾಂಗವು ಹುಟ್ಟಿತು'' ಎಂದು ತಿಳಿಯುತ್ತದೆ .ಈ ಜನಾಂಗವು ಮಹಾರಾಷ್ಟ್ರದ ರತ್ನಗಿರಿ ಮತ್ತು ಕೊಲಾಬಾ ಜಿಲ್ಲೆಯಲ್ಲಿ ಹೆಚ್ಚಾಗಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ದಾಲಜಿಗಳ ಭಾಷೆಯಲ್ಲಿ ಉರ್ದು, ಅರೇಬಿಕ್, ಮರಾಠಿ, ಕೊಂಕಣಿ, ಸಂಸ್ಕೃತ ಮೊದಲಾದ ಭಾಷೆಗಳು ಮಿಶ್ರಣಗೊಂಡಿವೆ. ಅದಕ್ಕೆ ಲಿಪಿ ಇಲ್ಲ. ಉರ್ದು ಲಿಪಿಯನ್ನೇ ಬರೆಯಲು ಬಳಸುತ್ತಾರೆ. ಭಾಷಾ ವಿಜ್ಞಾನಿಗಳಿಗೆ ದಾಲಜಿ ಭಾಷೆ ಒಂದು ಸಂಶೋಧನೆಯ ವಸ್ತುವಾಗಬಲ್ಲದು.

ಮೀನುಗಾರಿಕೆ ಮತ್ತು ಮೀನಿನ ವ್ಯಾಪಾರವನ್ನು ಉದ್ಯೋಗವನ್ನಾಗಿಸಿಕೊಂಡ ಇವರು ಉತ್ತರ ಕನ್ನಡ ಜಿಲ್ಲೆಯ ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ ಮತ್ತು ಭಟ್ಕಳ ತಾಲೂಕಿನಲ್ಲಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲೂಕಿನಲ್ಲಿ ಹರಡಿಕೊಂಡಿದ್ದಾರೆ. ಕೆಲವರು ತಮ್ಮದೇ ಆದ ದೋಣಿ ಮತ್ತು ಬಲೆಗಳನ್ನು ಹೊಂದಿ ಶ್ರೀಮಂತರಾಗಿದ್ದಾರೆ. ಪುರುಷರು ಮೀನು ಹಿಡಿಯಲು ಹೋದಾಗ ಮನೆಯ ಜವಾಬ್ದಾರಿಯನ್ನು ಹೆಂಗಸರು ಹೊತ್ತಿರುತ್ತಾರೆ. ಕಾಡಿನಿಂದ ಕಟ್ಟಿಗೆ ತರುವುದು, ಮನೆಗೆಲಸ, ಮಕ್ಕಳ ಪೋಷಣೆ ಮೊದಲಾದ ಕೆಲಸಗಳೆಲ್ಲಾ ಮನೆಯೊಡತಿಯೇ ಮಾಡುತ್ತಾಳೆ. ಆದ್ದರಿಂದ ಇವರಲ್ಲಿ ಪತಿಪತ್ನಿಯರ ಸಹಕಾರವಿದ್ದರೆ ಮಾತ್ರ ಸಂಸಾರ ಸಾಗಿಸಲು ಸಾಧ್ಯ. ದಾಲಜಿಗಳನ್ನು ಉಳಿದ ಮುಸ್ಲಿಮರು ಕನಿಷ್ಟ ದೃಷ್ಟಿಯಿಂದ ಕಾಣುತ್ತಾರೆ. ಅವರೊಡನೆ ಮದುವೆ ಸಂಬಂಧ ಬೆಳೆಸಲು ಹಿಂಜರಿಯುತ್ತಾರೆ. ಒಂದು ದೃಷ್ಟಿಯಲ್ಲಿ ನೆಲದ ಮತ್ತು ಜಲದ ಅಂಚಿನಲ್ಲಿ ಬದುಕುವ ದಾಲಜಿಗಳು ಮುಸ್ಲಿಮ್ ಸಮಾಜದಲ್ಲಿ ದ್ವೀಪವಾಗಿದ್ದಾರೆ. ಇಸ್ಲಾಂ ಧರ್ಮದಲ್ಲಿ ಹನಫಿ, ಶಾಫಿ, ಹಂಬಲಿ, ಮಾಲಕಿ ಎಂಬ ನಾಲ್ಕು ಉಪಪಂಗಡಗಳಿವೆ. ಇವು 'ಸುನ್ನಿ' ವಿಭಾಗಕ್ಕೆ ಸೇರುತ್ತವೆ. ಸುನ್ನಿ ಮತ್ತು ಶಿಯಾ ಎಂಬವು ಇಸ್ಲಾಂ ಧರ್ಮದ ಪ್ರಮುಖ ಎಂದು ಕವಲುಗಳು. ಸಾಮಾನ್ಯವಾಗಿ ಕರ್ನಾಟಕ ಕರಾವಳಿಯಲ್ಲಿ ಶಾಫಿ ಪಂಗಡದ ಮುಸ್ಲಿಮರೇ ಹೆಚ್ಚಾಗಿದ್ದಾರೆ. ನವಾಯಿತರು, ದಾಲಜಿಗಳು, ಬ್ಯಾರಿಗಳು ಶಾಫಿ ಪಂಗಡಕ್ಕೆ ಸೇರಿದವರು. ನವಾಯಿತರು ಮತ್ತು ದಾಲಜಿಗಳ ಭಾಷೆಯಲ್ಲಿ ಹೋಲಿಕೆ ಕಂಡರು. ಬ್ಯಾರಿಗಳ ಮಲಯಾಳಿ ಭಾಷೆ ತನ್ನದೇ ಆದ ಪ್ರತ್ಯೇಕತೆಯನ್ನು ಕಾಪಾಡಿಕೊಂಡಿದೆ. ಇಸ್ಲಾಂ ಧರ್ಮದನುಸಾರ ನಡೆವ ಇವರು ರಂಜಾನ್, ಬಕ್ರೀದ್ ಹಬ್ಬಗಳನ್ನು ಆಚರಿಸುತ್ತಾರೆ. ಗೋರಿ ದರ್ಶನದಿಂದ ತಮ್ಮ ಕಷ್ಟಗಳನ್ನು ದೂರಮಾಡಿಕೊಳ್ಳುವ ಸಂಪ್ರದಾಯ ರೂಢಿಯಲ್ಲಿದೆ.

ಬ್ಯಾರಿಗಳು :

ತುಳುನಾಡಿನ ಕರಾವಳಿಯನ್ನಾಶ್ರಯಿಸಿಕೊಂಡಿರುವ ಜನಾಂಗಗಳಲ್ಲಿ ಬ್ಯಾರಿ ಜನಾಂಗ ಒಂದು. ಇವರ ಬಗ್ಗೆ ಡಾ : ಬಿ.ಎ. ವಿವೇಕ ರೈ ಅವರು ''ತುಳುನಾಡಿನಲ್ಲಿ ಮುಸ್ಲಿಮರ ಸಂಪರ್ಕ ಪ್ರಧಾನವಾಗಿ ಆಗಿರುವುದು ವ್ಯಾಪಾರದ ದೃಷ್ಟಿಯಿಂದ. ಈ ಕಾರಣದಿಂದಲೇ ತುಳುನಾಡಿನ ಮುಸ್ಲಿಮರು ಸಾಮಾನ್ಯವಾಗಿ 'ವ್ಯಾಪಾರಿ' ಎಂಬ ಶಬ್ದದ ತದ್ಭವವಾದ 'ಬ್ಯಾರಿ' ಹೆಸರಿನಿಂದ ಕರೆಯಲ್ಪಡುತ್ತಾರೆ.. ಪಾಡ್ದನಗಳಲ್ಲಿಯೂ ಮುಸ್ಲಿಮರು ಪ್ರಧಾನವಾಗಿ ವ್ಯಾಪಾರ ವೃತ್ತಿಗೆ ಸಂಬಂಧಿಸಿದಂತೆ ಇರುವುದರಿಂದ 'ಬ್ಯಾರಿಗಳು' ಎಂದೇ ಸ್ಥಾನವನ್ನು ಪಡೆದರು '' ಎಂದು ಅಭಿಪ್ರಾಯ ಪಡುತ್ತಾರೆ. ಡಾ॥ ವಿವೇಕ ರೈ ಅವರು ಬಳಸಿರುವ ವ್ಯಾಪಾರವೆಂಬ ಪದವು ಭಾರತ ದೇಶದೊಳಗಿನ ವ್ಯಾಪಾರವಾಗದೆ ದೇಶ ವಿದೇಶಗಳ ನಡುವಿನ ವ್ಯಾಪಾರವೆಂಬ ವಿಶಾಲ ಅರ್ಥವನ್ನು ಪಡೆದಿದೆ. ಹಿಂದೆ ಅರಬ್ ದೇಶದವರು ಭಾರತದಲ್ಲಿನ ರಾಜರುಗಳಿಗೆ ಖರ್ಜೂರ, ಕುದುರೆ, ಉಣ್ಣೆ ಕಂಬಳಿಗಳನ್ನು ತಂದು ಮಾರುತ್ತಿದ್ದರು. ಇಲ್ಲಿಂದ ಹತ್ತಿಯ ಬಟ್ಟೆ, ಗರಮ್

ಮಸಾಲೆ, ರತ್ನ ಮೊದಲಾದವುಗಳನ್ನು ಕೊಂಡೊಯ್ಯುತ್ತಿದ್ದರು. ಈ ಅಂತರ್ದೇಶೀಯ ವ್ಯಾಪಾರವನ್ನು ಅಲ್ಲಿಂದ ಬಂದ ಬ್ಯಾರಿಗಳು ಮುಂದುವರಿಸಿದರೆಂಬುದಕ್ಕೆ ಬೊಬ್ಬರ್ಯ ಪಾಡ್ದನದಲ್ಲಿ ಹಡಗಿನ ವ್ಯಾಪಾರಿಯಾದ ಬ್ಯಾರಿಯ ಬಗ್ಗೆ ಉಲ್ಲೇಖವಿದೆ. ಇಂದಿಗೂ ಬ್ಯಾರಿ ಜನಾಂಗದ ಕೆಲವರು ವಿದೇಶಿ ವಸ್ತುಗಳ ಮಾರಾಟದ ಕಸುಬನ್ನು ಹೊಂದಿದ್ದಾರೆ. ಕೆಲವರು ಮೀನುಗಾರಿಕೆ ಮತ್ತು ಮೀನು ವ್ಯಾಪಾರದಲ್ಲಿ ನಿರತರಾಗಿದ್ದಾರೆ.

ಮಲಯಾಳಿ ಮಾತೃಭಾಷೆಯ ಬ್ಯಾರಿಗಳು ಕೇರಳ ಸಂಸ್ಕೃತಿಯ ಪ್ರಭಾವಕ್ಕೊಳಗಾಗಿದ್ದಾರೆ. ಅವರ ನಡೆ-ನುಡಿಗಳೆಲ್ಲಾ ಕೇರಳದ ಮುಸ್ಲಿಮರನ್ನು ಹೋಲುತ್ತವೆ.

ಬ್ಯಾರಿಗಳು ತುಳುನಾಡಿನ ಪ್ರಾಚೀನ ಜನಾಂಗವೆಂಬುದಕ್ಕೆ ತುಳು ಪಾಡ್ದನಗಳಲ್ಲಿ ಅವರ ಪ್ರಸ್ತಾಪವಿದೆ. ಡಾ: ಬಿ. ಎ. ವಿವೇಕ ರೈ ಅದನ್ನು ಹೀಗೆ ಸಂಗ್ರಹಿಸಿದ್ದಾರೆ. ''ಬೊಬ್ಬರ್ಯ'' ಎಂಬ ಪಾಡ್ದನವು ಇಂತಹ ಮುಸ್ಲಿಂ(ಬ್ಯಾರಿ) ವ್ಯಾಪಾರಿಯೊಬ್ಬನು ಭೂತವಾದ ಕಥೆಯನ್ನು ಒಳಗೊಂಡಿದೆ. 'ಬೊಬ್ಬರ್ಯ' ಆದಿ ದೀಪ ಪುಟ್ಟನಿಗೋವೆಡ್ ಬಳತಿನಿ ಕೊಚ್ಚಿಡ್. ಅಪ್ಪೆ ಪಾತುಮ್ಮ ಆಮ್ಮೆ ಸುಲಿಕಲ್ಲ ಮುರವೆ ಬ್ಯಾರಿ'' (ಬೊಬ್ಬರ್ಯ ಹುಟ್ಟಿದ್ದು ಗೋವೆಯಲ್ಲಿ, ಬೆಳೆದದ್ದು ಕೊಚ್ಚಿಯಲ್ಲಿ, ತಾಯಿ ಪಾತುಮ್ಮ, ತಂದೆ ಸುಲಿಕಲ್ಲ ಮುರವ ಬ್ಯಾರಿ) ಬೊಬ್ಬರ್ಯ ಪಾಡ್ದನದ ಇನ್ನೊಂದು ಪಾಠದ ಪ್ರಕಾರ ಈತನ ತಾಯಿ ಮೊದಲು ಜೈನ ಹೆಣ್ಣಾಗಿದ್ದಳೆಂದೂ ಅವಳ ಮೂಗಿನಲ್ಲಿ ಇರುತ್ತಿದ್ದ ವಿಷಸರ್ಪದಿಂದ ಅನೇಕ ಗಂಡಂದಿರು ಮರಣಗೊಂಡರೆಂದೂ ಕೊನೆಗೆ ಮುಸ್ಲಿಮನೊಬ್ಬ ಈಕೆಯನ್ನು ಮದುವೆಯಾಗಿ ಉಪಾಯದಿಂದ ಆ ಸರ್ಪವನ್ನು ಕೊಂದನೆಂದೂ ಹೇಳಲಾಗಿದೆ. ''ಈ ಪಾಡ್ದನವು ಒಂದು ವಿಷಯವನ್ನು ಸ್ಪಷ್ಟಪಡಿಸುತ್ತದೆ. ಅದೆಂದರೆ ಅರಬ್‌ನಿಂದ ಬಂದವರು ಸ್ಥಳೀಯರನ್ನು ಮದುವೆಯಾದರೆಂಬುದು. ಈ ಬಗ್ಗೆ ನವಾಯಿತರಲ್ಲೂ, ದಾಲಜಿಗಳಲ್ಲೂ ಉಲ್ಲೇಖಗಳು ಸಿಗುತ್ತವೆ. ಜೈನರೊಡನೆ ಅವರ ವಿವಾಹ ಸಂಬಂಧವೇರ್ಪಟ್ಟಿತ್ತು ಎಂಬ ಹೇಳಿಕೆಗಳು ದೊರೆಯುತ್ತವೆ.

ಪು.ತಿ.ನೋ

ಕರ್ನಾಟಕದ ಕಡಲ ತೀರದ ಮೀನುಗಾರರಲ್ಲಿ ಗಮನಿಸಬಹುದಾದ ಸಾಮಾನ್ಯ ಅಂಶಗಳೆಂದರೆ ಅವರ ಮನೆಯ ಸ್ವರೂಪ, ಆಡಳಿತ ವ್ಯವಸ್ಥೆ ಮತ್ತು ಧಾರ್ಮಿಕ ವ್ಯವಸ್ಥೆ ಮೀನುಗಾರರ ಮನೆಗಳು ಹೆಚ್ಚಾಗಿ ಹುಲ್ಲಿನ ಇಲ್ಲವೇ ಕೆಂಪು ಹಂಚಿನ ಮನೆಗಳಾಗಿರುತ್ತದೆ. ಕೆಂಪು ಹಂಚಿನ ಮನೆಯವರು ಆರ್ಥಿಕವಾಗಿ ಮುಂದುವರಿಂವರೆಂಬ ನಂಬಿಕೆ ಇದೆ. ಮನೆಯ ಮುಂದೆ ತುಳಸಿ ಕಟ್ಟೆ, ಮನೆಯ ಹಿಂದೆ ಬಾವಿ, ಅದರ ಮೇಲೆ ಹರಿದ ಮೀನಿನ ಬಲೆಯ ಹೊದಿಕೆ. ಮನೆಯ ಮುಂದಿನ ಬಾಗಿಲು ಉತ್ತರಕ್ಕೆ ಇರುವುದೇ ಹೆಚ್ಚು. ಮೀನಿನ ಬಲೆಯನ್ನು ಮನೆಯ ಮುಂದಿನ ''ಪಕಾಸಿಗೆ'' ನೇತು ಹಾಕಿರುತ್ತಾರೆ. ಇದು ಅವರ ಮನೆಯ ಸಾಮಾನ್ಯ ಲಕ್ಷಣಗಳು, ಕಂಪೌಂಡು ಹಾಕಿ ತಮ್ಮ ಮನೆಯನ್ನು ಪ್ರತ್ಯೇಕಿಸಿಕೊಳ್ಳುವ ಸಂಕುಚಿತ ಗುಣ ಇವರಲ್ಲಿ ಇನ್ನೂ ಬಂದಿಲ್ಲ, ಮನೆಯ ಮುಂದೆ ಅಥವಾ ಹಿಂದೆ ತೆಂಗಿನಗಿಡಗಳು ಇದ್ದೇ ಇರುತ್ತದೆ. ಮನೆಯ ಒಳಾಂಗಣದಲ್ಲಿ ಒಂದು ದೊಡ್ಡ ಆವರಣವಿದ್ದು ಅದಕ್ಕೆ ಹೊಂದಿಕೊಂಡು ಒಂದು ಪ್ರತ್ಯೇಕ ಮಲಗುವ ಕೋಣೆ, ಹಾಗೂ ಒಂದು ಅಡಿಗೆಯ ಮನೆ ಇರುತ್ತದೆ. ಹಿಂದಿನ ಬಾಗಿಲ ಪಕ್ಕದಲ್ಲಿ ಬಚ್ಚಲು ಮನೆ ಇರುತ್ತದೆ. ಶೌಚಾಲಯಗಳನ್ನು ಮನೆಯ ಹೊರಗೆ ಕಟ್ಟಿಕೊಂಡಿರುತ್ತಾರೆ. ಉಳತದವರು ಸಮುದ್ರ ತೀರಕ್ಕೆ ಹೋಗಿ ಬರುವ ತೆರೆಳಿಗೆ ಕೈಯೊಡ್ಡುತ್ತಾ ಕುಳಿತು ತಮ್ಮ ದೈನಂದಿನ ಕಾರ್ಯವನ್ನು ಕರ್ನಾಟಕ ಕರಾವಳಿಯಲ್ಲಿನ ಮೀನಾಗಾರರಲ್ಲಿ ಮೊಗವೀರರು, ಹರಿಕಾಂತರು ಮತ್ತು ಅಂಬಿಗರು ಮಾತ್ರ ಇಲ್ಲಿನ ಮೂಲ ನಿವಾಸಿಗಳು, ಉಳಿದ ಜನಾಂಗಗಳೆಲ್ಲಾ ಈ ಕರಾವಳಿಯ ಶಾಂತತೆಗೆ ಮರುಳಾಗಿ ಉದ್ಯೋಗ ಹುಡುಕಿಕೊಂಡು ಬಂದರು. ಉದ್ಯೋಗದ ನೆಪದಲ್ಲಿ ಬಂದ ಇವರು ಕಡಲ ಸಂಪತ್ತನ್ನು ಕಂಡು ಇಲ್ಲಿನ ಮೂಲ ನಿವಾಸಿಗಳೊಡನೆ ಒಂದಾದರು. ಸಾಮಾನ್ಯವಾಗಿ ಮೊಗವೀರರು ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಜನಾಂಗ, ಹರಿಕಾಂತರು ಉತ್ತರ ಕನ್ನಡ ಜಿಲ್ಲೆಯ ಪ್ರಾಚೀನ ಮೀನುಗಾರರು ಅಂಬಿಗರು ಕರ್ನಾಟಕ ಕರಾವಳಿಯಲ್ಲಿ ಹಬ್ಬಿಕೊಂಡಿರುವ ಬಹಳ ಹಳ್ಳಿಯ ಜನಾಂಗ. ಈ ಮೂರು ಜನಾಂಗಗಳ ಬದುಕಿನ ಪರಿಚಯವು ಕರಾವಳಿ ಸಂಸ್ಕೃತಿಯ ಪೂರ್ಣ ಸ್ವರೂಪವನ್ನು ನೀಡುತ್ತದೆ. ಬಯಲು ಸೀಮೆಯ ಸಂಸ್ಕೃತಿಗಿಂತ ಕಡಲ ತೀರದ ಸಂಸ್ಕೃತಿ ತನ್ನದೇ ಆದ ವೈಶಿಷ್ಟ್ಯವನ್ನು- ಳಿಸಿಕೊಂಡಿರುವಂತಹದು. ಅಲ್ಲಿನ ಸಂಸ್ಕೃತಿಯು ಪರಿಪೂರ್ಣವಾಗಿ ನಾಗರೀಕತೆಯ ಪ್ರಭಾವಕ್ಕೊಳಗಾಗುತ್ತಿದೆ. ಹಿಂದಿನ ಕಾಲದ ರಾಗಿ ಗಂಜಿ, ಮೀನಿನ ಸಾರು, ಕುಸುಬಲಕ್ಕಿ ಅನ್ನದ ಊಟ ಇಂದಿಗೂ ಕರಾವಳಿಯ ಪ್ರಿಯ ಆಹಾರ, ಉಡುವ ತೊಡುವ ಉಡುಗೆ ತೊಡುಗೆಗಳು ಅವರ ಸಂಸ್ಕೃತಿಯ ಅಪ್ಪಟತನವನ್ನು ಬಿಂಬಿಸುತ್ತದೆ.

ಈ ದೃಶ್ಯ ನೋಡುವವರಲ್ಲಿ ಬಗೆ ಮೂಡಿಸುವಂತಹದು. ಏಕೆಂದರೆ ತೆರೆಗಳಿಗೆ ಕಾದುಕುಳಿತವರು ಒಮ್ಮೆ ಬಂದ ತೆರೆಗಳಿಗೆ ಕೈಯೊಡ್ಡಿ ನೀರು ಸ್ವೀಕರಿಸಿ ಮತ್ತೊಂದು ತೆರೆ ಬರುವುದನ್ನೆ ಕಾಯುತ್ತಾ ಕುಳಿತು ಬಿಡುತ್ತಾರೆ. ಈ ಜನಪದ ಶೌಚಾಲಯ ಪದ್ದತಿಯು ಪ್ರದೇಶದ ವೈಶಿಷ್ಟಗಳಲ್ಲಿ ಒಂದು.

ಕರಾವಳಿಯ ಮೀನುಗಾರರು ಎಷ್ಟೇ ಶ್ರೀಮಂತರಾಗಲಿ ಇಲ್ಲವೇ ಬಡವರಿರಲಿ ಹಾಲನ್ನು ಕೊಂಡು ತರುತ್ತಾರೆಯೇ ವಿನಾಃ ದನ ಕರುಗಳನ್ನು ಸಾಕುವುದು ಕಡಿಮೆ, ಅವರಲ್ಲಿ ಸಾಕುಪ್ರಾಣಿಗಳು ಅಪರೂಪ, ಮೀನಿನ ನಂತರ ಅವರಿಗೆ ಪ್ರಿಯವಾದದ್ದು ಕೋಳಿ, ಆದ್ದರಿಂದ ಅವರು ಮನೆಯಲ್ಲಿ ಕೋಳಿಗಳನ್ನು ಸಾಕುತ್ತಾರೆ.

ಮೀನುಗಾರರು ಮಾಂಸಾಹಾರಿಗಳಾದರೂ ಅವರ ಮೇಲೆ ಸಸ್ಯಾಹಾರಿ ಸಂಸ್ಕ್ರಯ ಪ್ರಭಾವಾಗಿರುವುದನ್ನು ನಾವು ಅವರ ಧಾರ್ಮಿಕ ವ್ಯವಸ್ಥೆಯಲ್ಲಿ ಗಮನಿಸಬಹುದು. ಅವರು ತಮ್ಮ ಪ್ರಾದೇಶಿಕ ದೇವತೆಗಳಿಗೆ ಎಷ್ಟೇ ಭಯ ಭಕ್ತಿಯಿಂದ ನಡೆದುಕೊಂಡರು, ಶೃಂಗೇರಿಯ ಶಾರದೆಗಾಗಿ ತಮ್ಮ ಬಹುಪಾಲು ಭಕ್ತಿಯನ್ನು ಮುಡಿಪಿಡುತ್ತಾರೆ. ಪ್ರತಿಯೊಂದು ಮಂಗಳ ಕಾರ್ಯಕ್ಕೂ ಶೃಂಗೇರಿ ಶಾರದೆಯ ಪ್ರಸಾದ ಅತೀ ಅವಶ್ಯಕ. ಇದರ ನಂತರ ಪ್ರಮುಖವಾದದ್ದು ಅವರ ಕುಲದೇವತೆ, ಇವರ ದೇವತೆಗಳ ಬಗ್ಗೆ ಯೋಚಿಸಿದರೆ ಮೊದಲು ಇವರು ಪರಾಕ್ರಮ ಪ್ರದರ್ಶನ ಮಾಡಿ ಬಲಿಯಾದ ಜಟ್ಟಿಗ, ಹಾಯ್ಗೊಳಿ ಹಾಗೂ ತ್ಯಾಗಕ್ಕೆ ಬಲಿದಾನಕ್ಕೆ ಹೆಸರಾದ ಮಾಸ್ತಿಯ ಬಗ್ಗೆ ತಮ್ಮ ಆರಾಧನೆಯನ್ನು ಪ್ರಾರಂಭಿಸಿ ಅನಂತರ ವೈಷ್ಣವ ಮತ್ತು ಶೈವ ಸಂಪ್ರದಾಯದ ಶಿಷ್ಟದೇವರುಗಳ ಪ್ರಭಾವಕ್ಕೆ ಒಳಗಾಗಿರುವಂತೆ ತಿಳಿದು ಬರುತ್ತದೆ. ಶೈವಕ್ಕಿಂತ ಹೆಚ್ಚಾಗಿ ವೈಷ್ಣವ ಸಂಪ್ರದಾಯಗಳು ಅವರಲ್ಲಿ ಕಾಣಿಸಿಕೊಳ್ಳುತ್ತವೆ. ಇದಕ್ಕೆ ಕಾರಣ ಶಿವನಿಗಿನತ ವಿಷ್ಣು ಸಮುದ್ರದೊಡನೆ ಹೆಳ್ಳಿನ ಸಂಬಂಧವನ್ನು ಹೊಂದಿದ್ದವನು. ಅವನು ಮತ್ಸ್ಯಾವತಾರನಾಗಿ, ಕೂರ್ಮಾವತಾರವಾಗಿ ಕೊನೆಗೆ ಸಮುದ್ರವನ್ನೆ ವಾಸದ ಮನೆಯನ್ನಾಗಿಸಿಕೊಂಡವನು. ಈ ದೃಷ್ಠಿಯಿಂದ ಅವನು ಸಮುದ್ರವನ್ನು ಆಶ್ರಯಸಿದ ಜನರ ಅಪೂರ್ವ ಭಕ್ತಿ ಗೌರವಾಳಿಗೆ ಪಾತ್ರನಾದ, ಆದರೂ ಅವರಿಗೆ ಶಿವನೂ ಬೇಕು. ಭೈರವನೂ ಬೇಕು. ಜಟ್ಟಿಗ, ಮಾಸ್ತಿ, ಅಜ್ಜಮೀನು, ಸಮುದ್ರದ ನೀರು ಎಲ್ಲವೂ ಬೇಕು ಏಕೆಂದರೆ ಸದಾ ಜಲದ ಮೇಲೆ ತೇಲಾಡುವ ಅವರಿಗೆ ಕಷ್ಟ ಒದಗಿಬಂದಾಗ ಇವರಲ್ಲಿ ಯಾರಾದರೂ ಒಬ್ಬರು ಸಹಾಯಕ್ಕೆ ಬಂದೇ ಬರುವರೆಂದು ನಂಬಿಕೆ ಅವರಿಲ್ಲಿ ಭದ್ರವಾಗಿ ಬೇರು ಬಿಟ್ಟಿದೆ.

ಜನಿವಾರ ಪದ್ಧತಿ ಅವರ ಮೇಲೆ ಎಷ್ಟು ತೀವ್ರವಾದ ಪರಿಣಾಮ ಬೀರಿದೆ ಎಂದರೆ ಬೆಸ್ತರಾದರೂ ಇಲ್ಲಿನ ಜನ ಜನಿವಾರ ಧರಿಸುವ ಹಬ್ಬವನ್ನು 'ನೂಲು ಹುಣ್ಣಿಮೆ' ಯಲ್ಲಿ ಆಚರಿಸುತ್ತಾರೆ. ಸತ್ತವರನ್ನು ಸುಡುವ ಪದ್ಧತಿನ್ನು ಆಚರಿಸುತ್ತಾರೆ. ತುಳಸಿ ಕಟ್ಟೆಯಂತು ಮನೆಯ ಮುಂದೆ ಇದ್ದೇ ಇರಬೇಕು. ಒಂದು ದೃಷ್ಠಿಯಿಂದ ಕರ್ನಾಟಕ ಕರಾವಳಿಯ ಮೀನುಗಾರರು ಬಹುಪಾಲು ವೈಷ್ಣವರೇ ಆಗಿ ಹೋಗಿದ್ದಾರೆ.

ಕಡಲನ್ನಾಶ್ರಯಿಸಿರುವ ಜನರಲ್ಲಿನ ಒಳಾಡಳಿತ ವ್ಯವಸ್ಥೆಯ ಸಾಮಾನ್ಯ ಲಕ್ಷಣಗಳೆಂದರೆ ಗ್ರಾಮಕ್ಕೊಬ್ಬ 'ಬುದುವಂತ' ಇದ್ದು ಅವನ ಸಹಾಯಕನಾಗಿ 'ಕೋಲುಕಾರ' ಇರುವುದು, ಈ ವ್ಯವಸ್ಥೆ ಇಂದಿಗೂ ಜೀವಂತ ಇರುವುದು ಪ್ರಾಚೀನ ಸಂಸ್ಕೃತಿಯ ಅಪ್ಪಟತನಕ್ಕೊಂದು ನಿದರ್ಶನ.

ಹೀಗೆ ಕರಾವಳಿಯ ಮೀನುಗಾರರು ತಮ್ಮ ಬದುಕಿನ ಎಲ್ಲಾ ಕ್ಷೇತ್ರಗಳಲ್ಲೂ ಬಹುಪಾಲು ಏಕತಾನತೆಯನ್ನು ಕಾಪಾಡಿಕೊಂಡಿದ್ದಾರೆ. ಇದಕ್ಕೆ ಆಧುನಿಕ ಸಮಾಜದ ಪ್ರಭಾವ ಅವರ ಮೇಲೆ ಅಷ್ಟಾಗಿ ಆಗದೇ ಇದ್ದುದೇ ಕಾರಣ. ಆದರೂ ಇಂದಿನ ಅವರ ಬದುಕಿನ ವ್ಯವಸ್ಥೆ ಹಿಂದಿನದಕ್ಕಿಂತ ಹೆಚ್ಚು ಸುಧಾರಿಸಿದೆ. ಅವರಿಂದು ಸಮಾಜದಲ್ಲಿ ಕುಲಜರಲ್ಲ, ದೇಶದ ಆರ್ಥಿಕಾಭಿವೃದ್ಧಿಗೆ ದುಡಿವ ಜನಾಂಗಗಳಲ್ಲಿ ಈ ಮೀನುಗಾರರೂ ಒಂದು. ಆದರೂ ಸರಕಾರದಿಂದ ಸಿಗುವ ಸೌಲಭ್ಯಗಳು ಹಲವರಿಗೆ ಸಿಗುತ್ತಿಲ್ಲ. ಆದ್ದರಿಂದಲೇ ಇಂದಿಗೂ ಮೀನುಗಾರರಲ್ಲಿ ಹಲವರು ಬಡತನದ ಗಡಿರೇಖೆಯ ಒಳಗೇ ಇರುವುದು. ಮುಸ್ಲಿಂ ಮೀನುಗಾರರು ಇಸ್ಲಾಂ ಧರ್ಮದ ಅನುಯಾಯಿಗಳಾಗಿರುವುದರಿಂದ ಅದಕ್ಕನುಗುಣವಾಗಿ ಅವರಲ್ಲಿ ಸಂಪ್ರದಾಯ ಮತ್ತು ಆಚರಣೆಗಳು ನಡೆಯುತ್ತವೆ. ಹಿಂದೆ ತುಳುನಾಡಿನ ಮುಸ್ಲಿಂ ಮೀನುಗಾರರಲ್ಲಿ ಹಿಂದೂ ಮತ್ತು ಮುಸ್ಲಿಂ ಸಂಸ್ಕೃತಿಗಳ ಸಮ್ಮಿಶ್ರಣವನ್ನು ಗಮನಿಸಬಹುದಾಗಿತ್ತು. ಅದು ಕಾಲಕ್ರಮೇಣ ಎರಡೂ ಸಂಸ್ಕೃತಿಗಳು ಪ್ರತ್ಯೇಕಗೊಂಡು ವ್ಯವಹಾರಿಕ ದೃಷ್ಟಿಯಿಂದ ಮಾತ್ರ ಹಿಂದೂ ಮತ್ತು ಮುಸ್ಲಿಂ ಮೀನುಗಾರರ ಸಂಬಂಧವು ಒಂದಾಗಿ ಮುಂದುವರಿಯುತ್ತಿದೆ. ಏನೇ ಆದರೂ ಸಮುದ್ರದ ಮೇಲಿದ್ದಾಗ ಅವರೆಲ್ಲಾ ಒಂದು , ಮನೆ ಸೇರಿದಾಗ ಮಾತ್ರ ಅವರು ಪ್ರತ್ಯೇಕ. ಅದಕ್ಕಾಗಿಯೇ ಅವರ ಕೇರಿಗಳು ಪ್ರತ್ಯೇಕವಾಗಿರುವುದು. ಈ ಪ್ರವೃತ್ತಿ ಮಾನವನ ನಾಶಕ್ಕೆ ನಾಂದಿ, ಇದನ್ನರಿತು, ಬೆರೆತು ಬದುಕುವ ಮತ್ತು ಸಾಂಸ್ಕೃತಿಕ ವಿನಿಮಯ ಪ್ರವೃತ್ತಿಯನ್ನು ಬೆಳೆಸಿಕೊಳ್ಳುವ ವಿಶಾಲ ಮನೋಭಾವನೆಯನ್ನು ಹೆಚ್ಚಿಸಿಕೊಂಡರೆ ಮಾತ್ರ ಮಾನವನಲ್ಲಿ ಮಾನವೀಯತೆ ಉಳಿಯಲು ಸಾಧ್ಯ.

ಕರ್ನಾಟಕ ಕರಾವಳಿಯ ಭೌಗೋಳಿಕ ಪರಿಸರ

ಭಾರತ ಮಾತೆಯ ಸೌಂದರ್ಯಕ್ಕೆ ಬೆಳ್ಳಿ ಕಿರೀಟದ ಹಿಮಪರ್ವತಗಳು, ಅಚ್ಚಹಸಿರಿನ ಕಾಡುಪ್ರದೇಶಗಳು ಹೇಗೆ ಮೆರುಗು ಕೊಡುತ್ತಿವೆಯೋ ಹಾಗೇಯೇ ನಗೆಯ ನೊರೆಯುಕ್ಕಿಸುತ್ತಾ ಬರುವ ಸಮುದ್ರ ತೀರವು ಆ ಮಾತೆಯ ರೇಷ್ಮೆ ಸೀರೆಯ ಅಂಚಿನಂತಿದೆ. ಸದಾ ಭೂಪ್ರದೇಶದ ಚೆಲುವನ್ನುಂಡು ಬೇಸತ್ತವರು ಕಡಲಂಚಿಗೆ ಪ್ರವಾಸ ಕೈಗೊಂಡು ಜಲ ಪ್ರದೇಶದ ಕಣ್ಬೆಳೆತಕ್ಕೊಳಗಾದಾಗ ಅದರ ಅನುಭವವಾಗುತ್ತದೆ. ಇಂತಹ ಸೌಂದರ್ಯ ಶಕ್ತಿಯನ್ನು ಪಡೆವ ಅದೃಷ್ಟ ಭಾರತದ ಎಲ್ಲಾ ರಾಜ್ಯಗಳಿಗೂ ಲಭ್ಯವಾಗಿಲ್ಲ. ಕೇವಲ ಒಂಬತ್ತು ರಾಜ್ಯಗಳು ಮಾತ್ರ ಕಡಲಂಚಿನ ಸೊಬಗನ್ನು ಹೊಂದಿರುವುದು, ಅವುಗಳಲ್ಲಿ ಪೂರ್ವದ ಕಡಲಂಚಿನ ಸೊಬಗನ್ನು ಪಶ್ಚಿಮ ಬಂಗಾಳ, ಒರಿಸ್ಸಾ, ಆಂಧ್ರ ಹಾಗೂ ತಮಿಳುನಾಡು ರಾಜ್ಯಗಳು ಹೊಂದಿದ್ದರೆ, ಪಶ್ಚಿಮ ಕರಾವಳಿಯ ಚೆಲುವನ್ನು ಗುಜರಾತ, ಮಹಾರಾಷ್ಟ್ರ, ಗೋವಾ, ಕೇರಳಾ ಮತ್ತು ಕರ್ನಾಟಕ ರಾಜ್ಯಗಳು ಹೊಂದಿವೆ. ಪೂರ್ವ ಮತ್ತು ಪಶ್ಚಿಮ ಸಮುದ್ರ ತೀರದ ಸೌಂದರ್ಯಗಳಲ್ಲಿ ವ್ಯತ್ಯಾಸವಿದೆ. ಪೂರ್ವದ ಕಡಲು ಕೆಲವು ಸಂದರ್ಭಗಳಲ್ಲಿ ಉಗ್ರರೂಪ ತಾಳಿ ನೋಡುವವರಲ್ಲಿ ಭಯವನ್ನುಂಟು ಮಾಡಿದರೆ, ಪಶ್ಚಿಮದ ಕಡಲು ಸದಾ ಶಾಂತ ಹಾಗೂ ಗಂಭೀರವಾದದ್ದು ನೋಡುವವರಲ್ಲಿ ಸಂತೋಷ, ಗೌರವ ಮೂಡಿಸುವಂತಹಂದು. ಸೂರ್ಯೋದಯದ ಸೊಬಗನ್ನು ಪೂರ್ವದ ಕಡಲಲ್ಲಿ ಕಂಡರೆ ಸೂರ್ಯೋಸ್ತದ ಸೌಂದರ್ಯವನ್ನು ಪಶ್ಚಿಮ ಸಾಗರದಲ್ಲಿ ಸವಿಯಬಹುದು. ಕರಾವಳಿ ಪ್ರದೇಶ ತನಗಂಟಿರುವ ರಾಜ್ಯಗಳಿಗೆ ಕೇವಲ ಚೆಲುವಿನ ಕೊಡುಗೆಯನ್ನು ಮಾತ್ರ ನೀಡದೆ ಸಮುದ್ರ ಸಂಪತ್ತಿನ ಕಾಣಿಕೆಯನ್ನು ಸಹ ಸಲ್ಲಿಸುತ್ತಿರುವುದು ಗಮನಾರ್ಹವಾದುದು.

ಕರ್ನಾಟಕವು ಭಾರತದ ಸಮುದ್ರ ಸಂಬಂಧ ರಾಜ್ಯಗಳಲ್ಲಿ ಒಂದೆಂದೂ 1956 ರಲ್ಲಿ ಪರಿಗಣಿಸಲ್ಪಟ್ಟಿತು. ಅರಬ್ಬೀ ಸಮುದ್ರದೊಡನೆ ಕೊಂಡಿತಾಗಿಸಿಕೊಂಡಿರುವ ಕರ್ನಾಟಕ ರಾಜ್ಯವು 302 ಕಿ.ಮೀ. ತೀರ ಪ್ರದೇಶವನ್ನು ಹೊಂದಿದೆ. ಇದು ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ ಗ್ರಾಮದಿಂದ ಪ್ರಾರಂಭವಾಗಿ ಉತ್ತರ ಕನ್ನಡ ಜಿಲ್ಲೆಯ ಪೂಜಾರಿ ಎಂಬ ಗ್ರಾಮದವರೆಗೆ ಹಬ್ಬಿದೆ. ಕರ್ನಾಟಕ ರಾಜ್ಯದ ಜಿಲ್ಲೆಗಳಲ್ಲೆಲ್ಲಾ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು ಮಾತ್ರ ಸಮುದ್ರದ ಸೊಬಗನ್ನು ಹೊಂದಿರುವಂತಹವು. ಉತ್ತರ ಕನ್ನಡ ಜಿಲ್ಲೆಯಲ್ಲಿ 146 ಕಿ.ಮೀ. ಉದ್ದದ ತೀರ ಪ್ರದೇಶವಿದೆ. ರಾಜ್ಯದ ಒಟ್ಟು ತೀರ ಪ್ರದೇಶವು 25,000 ಚದರ್ ಕಿಲೋ ಮೀಟರುಗಳಾಗಿವೆ. ಕರ್ನಾಟಕದ ಕಡಲ ತೀರವು ಇಡೀ ಭಾರತದ 1/15 ಭಾಗದಷ್ಟಿದೆ. ಇದು 12.44 ಉತ್ತರ ಅಕ್ಷಾಂಶ ರೇಖೆಯಿಂದ 15 ಉತ್ತರ ಅಕ್ಷಾಂಶ ರೇಖೆಯ ನಡುವೆ ಹರಡಿಕೊಂಡಿದೆ. 25,000 ಚದರ ಕಿಲೋ ಮೀಟರುಗಳ ತೀರ ಪ್ರದೇಶದ ಅಗಲವು 50 ರಿಂದ 125 ಕಿ.ಮೀ. ಗಳವರೆಗೆ ಹಬ್ಬಿದೆ. ಸರಾಸರಿ ಅಗಲವು 94.3 ಕಿ.ಮೀಗಳಾಗಿದೆ.

ಪಶ್ಚಿಮ ಘಟ್ಟಗಳಲ್ಲಿ ಹುಟ್ಟಿ ಅರಬ್ಬೀ ಸಮುದ್ರ ಸೇರುವ ನದಿಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ನೇತ್ರಾವತಿ, ಉತ್ತರ ಕನ್ನಡ ಜಿಲ್ಲೆಯ ಶರಾವತಿ ಮತ್ತು ಕಾಳಿ ಪ್ರಮುಖವಾದವು. ಕಾಳಿ ನದಿಯ ವಿಶೇಷತೆ ಎಂದರೆ ಉತ್ತರ ಕನ್ನಡದಲ್ಲಿ ಹುಟ್ಟಿ ಇದೇ ಜಿಲ್ಲೆಯ ಕಾರವಾರದ ಬಳಿ ಸಮುದ್ರ ಸೇರುವುದು. ಕೇವಲ ವಿದ್ಯುಚ್ಛಕ್ತಿಯ ಉತ್ಪಾದನೆಗಾಗಿ ಮಾತ್ರ ಬಳಸಲಾಗುತ್ತಿರುವ ಈ ನದಿಗೆ ಹಲವಾರು ಆಣೆಕಟ್ಟುಗಳನ್ನು ಕಟ್ಟಿ ಜಲಾಶಯಗಳನ್ನು ನಿರ್ಮಿಸಲಾಗಿದೆ. ಈ ದೊಡ್ಡ ನದಿಗಳಲ್ಲದೆ ಇನ್ನೂ ಹಲವಾರು ಚಿಕ್ಕ ಪುಟ್ಟ ನದಿಗಳು ಸಹ್ಯಾದ್ರಿಯ ಮಡಿಲಲ್ಲಿ ಹುಟ್ಟಿ ಅರಬ್ಬೀ ಸಮುದ್ರದಲ್ಲಿ ಒಂದಾಗುತ್ತವೆ.

ಕರ್ನಾಟಕ ಕರಾವಳಿಯು ಜನರನ್ನಾಕರ್ಷಿಸುವುದು ಅದರ ಪ್ರಕೃತಿ ಸೌಂದರ್ಯದಿಂದ ಒಂದೆಡೆ ಹಸಿರು ಹೊದ್ದಿರುವ ಸಹ್ಯಾದ್ರಿ ಶ್ರೇಣಿ, ಮತ್ತೊಂದೆಡೆ ಬೆಳ್ಳಿ ಅಂಚಿನ ನೀಲಿ ಸಮುದ್ರ ಎಂತಹವರನ್ನು ಕ್ಷಣ ಕಾಲ ಕಟ್ಟಿ ಹಾಕುತ್ತದೆ. ಅದರಲ್ಲೂ ಕರ್ನಾಟಕದ ಕಾಶ್ಮೀರವೆಂದು ಕರೆಯುತ್ತಿರುವ ಉತ್ತರ ಕನ್ನಡ ಜಿಲ್ಲೆ ಪ್ರಕೃತಿ ಸೌಂದರ್ಯದ ತವರು. ಈ ತವರಿಗೆ ಸೋತ ವಿಶ್ವಕವಿ ರವೀಂದ್ರನಾಥ ಠಾಕೂರರು ಕೆಲಕಾಲ ನೆಲೆನಿಂತು ಇಲ್ಲಿನ ಪ್ರಕೃತಿ ಸೌಂದರ್ಯದ ಸವಿಯನ್ನುಂಡು ತೃಪ್ತಿಪಟ್ಟಿದ್ದಾರೆ.

ಕರ್ನಾಟಕ ತೀರ ಪ್ರದೇಶದಲ್ಲಿ ಪಶ್ಚಿಮ ಮಾನ್‌ಸೂನ್ ಮಳೆ ಮೇ-ಜೂನ್ ಮಾಹೆಯಲ್ಲಿ ಪ್ರಾರಂಭವಾಗಿ ಅಗಸ್ಟ - ಸೆಪ್ಟೆಂಬರ್‌ವರೆಗೆ ಮುಂದುವರಿಯುತ್ತದೆ. ಆ ಸಂದರ್ಭದಲ್ಲಿ ಕಡಲು ಉಗ್ರವಾಗಿರುವುದರಿಂದ ಮೀನುಗಾರರು ಸಮುದ್ರದಲ್ಲಿ ಪ್ರವೇಶಿಸದಂತೆ ಸೂಚನೆ ನೀಡಲಾಗುತ್ತದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಸರಾಸರಿ ಮಳೆ ಪ್ರಮಾಣ 2764.1 ಮೀ. ಮೀ. ಗಳಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಸರಾಸರಿ ಮಳೆಯ ಪ್ರಮಾಣವು 3922.4 ಮೀ. ಮೀ.ಗಳಾಗಿರುತ್ತದೆ. ಏಪ್ರಿಲ್ ಮಾಹೆಯಲ್ಲಿ ತೀರ ಪ್ರದೇಶದಲ್ಲಿ ಗರಿಷ್ಠ ಉಷ್ಣಾಂಶ 49 ಡಿಗ್ರಿ ಸೆಂ. ಆಗಿರುತ್ತದೆ. ಡಿಸೆಂಬರ್ ಮಾಹೆಯಲ್ಲಿ ಕನಿಷ್ಠ ಉಷ್ಣಾಂಶವು 20 ಡಿಗ್ರಿ ಸೆಂ ಆಗಿರುತ್ತದೆ. ತೀರದಲ್ಲಿರುವವವರು ಮೀನುಗಾರಿಕೆಯನ್ನು ಪ್ರಮುಖ ಉದ್ಯೋಗವನ್ನಾಗಿಸಿಕೊಂಡಿರುವುದರಿಂದ ಸಮುದ್ರವೇ ಅವರ ಬದುಕಿಗೆ ಆಧಾರ. ಉತ್ತರ ಕನ್ನಡ ಜಿಲ್ಲೆಯಲ್ಲಿ ಸುಮಾರು ಶೇ.70 ರಷ್ಟು ಮೀನುಗಾರರ ಹಳ್ಳಿಗಳಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶೇ. 77ರಷ್ಟು ಮೀನುಗಾರರ ಹಳ್ಳಿಗಳಿದ್ದು ಕರ್ನಾಟಕ ತೀರ ಪ್ರದೇಶದಲ್ಲಿ ಒಟ್ಟು ಮೀನುಗಾರರ ಹಳ್ಳಿಗಳು 147. ಈ ಹಳ್ಳಿಗರು ಮಳುಗಾಲದಲ್ಲಿ ಭತ್ತ, ಕಡಲೆಕಾಯಿ, ಬೆಳೆಯುವ ವ್ಯವಸಾಯ ಮಾಡುತ್ತಾರೆ. ತೆಂಗು ತೀರ ಪ್ರದೇಶದ ಪ್ರಮುಖ . ಮೀನುಗಾರಿಕೆ ಪ್ರಮುಖ ಉದ್ಯೋಗವಾಗಿದ್ದರು ವ್ಯವಸಾಯ ತೀರದ ಜನರ ಉಪಕಸುಬು.


ಜಿಲ್ಲಾವಾರು ತೀರಪ್ರದೇಶ ಮತ್ತು ಮೀನುಗಾರರ ಹಳ್ಳಿಗಳು

		ಉ.ಕ.	ದ.ಕ.	ಕರ್ನಾಟಕದ ಒಟ್ಟು ತೀರ ಪ್ರದೇಶ
1.	ತೀರ ಪ್ರದೇಶ	146 ಕಿ.ಮೀ	156 ಕಿ.ಮೀ	302 ಕಿ.ಮೀ
2.	ಒಟ್ಟು ತೀರ ಪ್ರದೇಶ			25,000 ಚ.ಕಿ.ಮೀ
3.	ಆರ್ಥಿಕ ವಲಯ ಹೊರತು ಪಡಿಸಿರುವ ಪ್ರದೇಶ			87,000 ಚ.ಕಿ.ಮೀ
4.	ಮೀನುಗಾರರ ಹಳ್ಳಿಗಳು	70	77	147


ಕರ್ನಾಟಕ ರಾಜ್ಯ




ಕರ್ನಾಟಕ ಕರಾವಳಿ




ಉತ್ತರ ಕನ್ನಡ ಜಿಲ್ಲೆ



ದಕ್ಷಿಣ ಕನ್ನಡ ಜಿಲ್ಲೆ



ಸಮುದ್ರ ತಳದ ಸ್ವರೂಪ



ಸಮುದ್ರದ ಬಗ್ಗೆ ಈಗಿನವರೆಗೆ ನಡೆದಿರುವ ಜಾನಪದ ಅಧ್ಯಯನ

ಹಳೆಗನ್ನಡ ಕಾವ್ಯಗಳಲ್ಲಿ ಸಮುದ್ರ ವರ್ಣನೆ ಅನಿವಾರ್ಯವೆಂಬ ಕಾರಣದಿಂದ ಹಳೆಗನ್ನಡ ಸಾಹಿತ್ಯದಲ್ಲಿ ಸಮುದ್ರಕ್ಕೊಂದು ಸ್ಥಾನ ದೊರೆಯಿತು. ಅದರ ನಂತರ ನವೋದಯ ಸಾಹಿತ್ಯದಲ್ಲಿ ವಿ. ಕೃ. ಗೋಕಾಕರು ಸಮುದ್ರವನ್ನು ಕುರಿತು ಕವನ ಸಂಕಲನಗಳನ್ನು ಹೊರತಂದರು. ಆದರೂ ಭೂಮಿಯ ಮೇಲಿನ ಪ್ರಕೃತಿ ಕನ್ನಡ ಕವಿಗಳಿಗೆ ಪ್ರಿಯವಾದಷ್ಟು ಸಮುದ್ರದ ಸೌಂದರ್ಯ ಪ್ರಿಯವಾಗಲಿಲ್ಲ. ಜನಪದರಂತೂ ಸಮುದ್ರ ತಮ್ಮ ಬದುಕಿನ ಉಸಿರೆಂದು ಭಾವಿಸಿ ಅದನ್ನು ಕಥೆ, ಕವನ, ಗಾದೆ, ಒಗಟು, ಐತಿಹ್ಯಗಳಲ್ಲೆಲ್ಲಾ ಬಳಸಿಕೊಂಡು ತೃಪ್ತಿಪಟ್ಟರು. ಅದನ್ನೆಲ್ಲಾ ಒಂದೆಡೆ ಸಂಗ್ರಹಿಸಿ ಓದುಗರಿಗೆ ಪರಿಚಯಿಸುವ ಪೂರ್ಣ ಪ್ರಮಾಣದ ಕಾರ್ಯವನ್ನು ಇಂದಿನವರೆಗೆ ಯಾರೂ ಸಹ ಮಾಡಿಲ್ಲ. ಅಮೃತ ಸೋಮೇಶ್ವರರು ಸಮುದ್ರ ಜಾನಪದದ ಬಗ್ಗೆ ಪ್ರಬಂಧ ಒಂದನ್ನು ವಿಚಾರಗೋಷ್ಠಿಯಲ್ಲಿ ಮಂಡಿಸಿರುವುದು ತಿಳಿಯುತ್ತದೆ. ಕಾರವಾರದ (ವೈ. ಎಸ್. ದುರ್ಗೇಕರರು ''ಕನ್ನಡ ಕಡಲಿಗರು'' , ''ಕಡಲ ಮೀನುಗಾರಿಕೆ '', ''ಕಡಲಿಗರು'' ಎಂಬ ಪುಸ್ತಕಗಳನ್ನು ಹೊರತಂದಿದ್ದಾರೆ. ಇವು ಮೀನುಗಾರರ ಬದುಕಿನ ಪಕ್ಷಿನೋಟ ನೀಡುವ ಜನಾಂಗಿಕ ಅಧ್ಯಯನವಾಗಿದೆ.)

ಪ್ರಸಿದ್ಧ ಜಾನಪದ ವಿದ್ವಾಂಸರಾದ (ಡಾ : ಎಲ್. ಆರ್. ಹೆಗಡೆಯವರು ಸಂಗ್ರಹಿಸಿರುವ ಜನಪದ ಕಥೆಗಳಲ್ಲಿ ಸಮುದ್ರಕ್ಕೆ ಸಂಬಂಧಿಸಿದ ಕಥೆಗಳು ಕೆಲವು ಸಿಗುತ್ತವೆ.) ತುಳುಪಾಡ್ದನಗಳಲ್ಲಿ ಕೆಲವು ಪಾಡ್ದನಗಳು ಸಮುದ್ರ ಸಂಬಂಧಿತ ವಿಷಯಗಳನ್ನು ಹೊಂದಿವೆ, ಆದರೆ ಅವುಗಳಲ್ಲಿ ಒಂದೆರಡು ಮಾತ್ರ ಕನ್ನಡದಲ್ಲಿ ಲಭ್ಯವಾಗಿದೆ. (ಡಾ : ಬಿ. ಎ. ವಿವೇಕ ರೈಯವರ '' ತುಳು ಜನಪದ ಸಾಹಿತ್ಯದಲ್ಲಿ'') ಸಮುದ್ರದ ಬಗ್ಗೆ ಅಲ್ಪ ಸ್ವಲ್ಪ ಸಾಹಿತ್ಯ ಸಿಗುತ್ತದೆ. ಸಮುದ್ರ ಗೀತೆಗಳನ್ನು ಪ್ರತ್ಯೇಕವಾಗಿ ಯಾರೂ ಸಂಗ್ರಹಿಸಿಲ್ಲ. ಕರಾವಳಿಯ ಜನಪದ ಗೀತೆಗಳಲ್ಲಿ ಒಂದಡೆರಡು ಗೀತೆಗಳು ಸಿಗುತ್ತವೆ. ಜನಪದ ತ್ರಿಪದಿಗಳಲ್ಲಿ ಕಡಲ ಬಗ್ಗೆ ಕೆಲವು ಬಿಡಿಮುತ್ತುಗಳು ದೊರೆಯುತ್ತವೆ.

ಕಡಲ ಗಾದೆ ಮತ್ತು ಒಗಟುಗಳ ರಾಶಿಯೇ ಇದೆ. ಆದರೆ ಇದು ಸಹ ನಮಗೆ ಪ್ರತ್ಯೇಕವಾಗಿ ಸಿಗದೆ ಜನರಿಂದ ಮತ್ತು ಈಗಾಗಲೇ ಸಂಗ್ರಹಿಸಿರುವ ಗಾದೆ, ಒಗಟುಗಳಿಂದ ಹೆಕ್ಕಿಕೊಳ್ಳಬೇಕಾಗುತ್ತದೆ.

ಇನ್ನೂ ಬಹಳಷ್ಟು ಸಮುದ್ರ ಸಾಹಿತ್ಯ ಜನಪದರ ಕಂಠದಲ್ಲಿಯೇ ಉಳಿದಿದೆ. ಆದರೂ ಸಾಕಷ್ಟು ವಿಷಯವನ್ನು ಈ ಮಹಾಪ್ರಬಂಧದಲ್ಲಿ ಅಡಗಿಸಿಡುವ ಪ್ರಯತ್ನ ಮಾಡಲಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ ಭೂಮಿಗಿಂತ ಮೂರು ಪಟ್ಟು ಹೆಚ್ಚಿರುವ ಸಮುದ್ರದ ಜಾನಪದ ಸಾಮಗ್ರಿಯನ್ನೆಲ್ಲಾ ಒಂದೆಡೆ ಸಂಗ್ರಹಿಸಿ ಕೊಡುವ ಕೆಲಸ ಮಾತ್ರ ಇಲ್ಲಿ ನಡೆದಿದೆ. ಇದು '' ಸಮುದ್ರ ಜಾನಪದ '' ದ ಪ್ರಥಮ ಕೃತಿಯಾಗುವುದರಲ್ಲಿ ಸಂಶಯವಿಲ್ಲ.

1:5 ಪ್ರಸ್ತುತ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ವಿಶಾಲ ಕ್ಷೇತ್ರವಾದ ಜಾನಪದ ಇಂದು ವಿಜ್ಞಾನದ ದೀಕ್ಷೆ ತೊಟ್ಟು ವಿಶ್ವವ್ಯಾಪಕ ಮತ್ತು ವಿಶ್ವ ಮಾನ್ಯವಾಗಿದೆ. ಇದರ ಚೌಕಟ್ಟಿನಿಂದ ಹೊರತಾದ ವಿಷಯವೇ ಇಲ್ಲ. ಆದಿ ಮಾನವನಷ್ಟೇ ಪ್ರಾಚೀನವಾದ ಜಾನಪದದ ಅಧ್ಯಯನದಿಂದ ಮಾತ್ರ ಮಾನವ ಸಂಸ್ಕೃತಿಯ ಪರಿಪೂರ್ಣ ಪರಿಚಯ ಸಾಧ್ಯ. ಆದ್ದರಿಂದಲೇ ಜರ್ಮನಿ, ಫ್ರಾನ್ಸ್, ಇಂಗ್ಲೇಂಡ್, ಸ್ವೀಡನ್, ಸ್ಕಾಟ್‌ಲೆಂಡ್, ಫಿನ್ ಲ್ಯಾಂಡ್, ಅಮೇರಿಕಾ ಮೊದಲಾದ ದೇಶಗಳ ವಿದ್ವಾಂಸರು ಜಾನಪದ ಅಧ್ಯಯನದ ಕಡೆಗೆ ಗಮನ ಕೇಂದ್ರೀಕರಿಸುವುದು. ನಮ್ಮ ದೇಶವು ಇತ್ತೀಚೆಗೆ ಜಾನಪದ ಅಧ್ಯಯನಕ್ಕೆ ಮಹತ್ವ ನೀಡುತ್ತಿದೆ. ಈ ಅಧ್ಯಯನವು ನಿರಂತರವಾಗಿ ಸಾಗುವ ಕಾರ್ಯ. ಅದರಲ್ಲೂ ಬಹುಜನಾಂಗದ ಭಾರತದಲ್ಲಿ ಜನಪದ ಸಾಹಿತ್ಯವನ್ನು ಸಂಗ್ರಹಿಸುತ್ತಾ ಹೋದ ಹಾಗೆಲ್ಲಾ ಹೊಸ ಹೊಸ ವಿಷಯಗಳು ಸಿಗುತ್ತಲೇ ಹೋಗುತ್ತವೆ. ಈ ದೃಷ್ಟಿಯಿಂದ ನಾನು ''ಸಮುದ್ರ ಜಾನಪದ'' ಎಂಬ ಹೊಸ ವಿಷಯವನ್ನು ಸಂಶೋಧನೆಗಾಗಿ ಆಯ್ಕೆ ಮಾಡಿಕೊಂಡು ಜಾನಪದ ಕ್ಷೇತ್ರಕ್ಕೊಂದು ವಿಶಿಷ್ಟ ಕೊಡುಗೆ ಸಲ್ಲಿಸುವ ಪ್ರಯತ್ನ ಮಾಡಿದ್ದೇನೆ. ಈಗಿನವರೆಗೆ ಯಾರೂ ಸಹ ಪರಿಪೂರ್ಣವಾಗಿ ಈ ಕೆಲಸ ಮಾಡಿಲ್ಲ. ಚಿಕ್ಕಪುಟ್ಟ ಒಂದೆರಡು ಲೇಖನಗಳಲ್ಲಿ ವಿಶಾಲ ಸಮುದ್ರವನ್ನು ಅಡಗಿಸಿಡುವ ಕಾರ್ಯ ಮಾತ್ರ ನಡೆದಿದೆ. ಅದು ಸಾಗರ ಸಂಬಂಧಿತ ಜಾನಪದ ವಿಷಯಗಳ ಪೂರ್ಣ ಪ್ರಮಾಣದ ಮಾಹಿತಿಯನ್ನು ಒದಗಿಸದು. ಆದ್ದರಿಂದ ಈ ವಿಷಯಗಳು ಕಡಲಾಳಿತ್ತರ ಕಂದರದಲ್ಲಿ ಕರಗಿ ಹೋಗುವ ಮುನ್ನ ಅವುಗಳಿಗೊಂದು ಸ್ವರೂಪ ಕೊಡುವ ಉದ್ದೇಶ ನನ್ನದು. ಅಲ್ಲದೆ ಸಮುದ್ರವನ್ನಾಶ್ರಯಿಸಿರುವ ಜಾನಪದರ ಬದುಕು ನೆಲವನ್ನಾಶ್ರಯಿಸಿರುವ ಜಾನಪದರಿಗಿಂತ ಭಿನ್ನ ಮತ್ತು ವಿಶಿಷ್ಟವಾದುದು. ಕಡಲ ತೆರೆಯ ಆಶ್ರಯದಲ್ಲಿ ಬದುಕುವವರು ದಿನ ಬೆಳಗಾದರೆ ಮುಗಿಲೆತ್ತರಕ್ಕೇಳುವ ಅಲೆಗಳೊಡನೆ ಹೋರಾಟ ಮಾಡಬೇಕಾಗುತ್ತದೆ. ದೈತ್ಯಾಕಾರದ ತಿಮಿಂಗಿಲಗಳಿಂದ ತಮ್ಮ ದೋಣಿಗಳನ್ನು ರಕ್ಷಿಸಿಕೊಳ್ಳಲು, ಭೂತದಂತೆ ಬರುವ ಬಿರುಗಾಳಿಯೊಡನೆ ಸೆಣಸಾಟ ನಡೆಸಲು, ಹೋರಾಡಬೇಕಾಗುತ್ತದೆ. ಇಂತಹ ಸಾಹಸಿಗಳ ಬದುಕು ಎಷ್ಟು ಕುತೂಹಲಕಾರಿಯೋ ಅವರ ಸಾಹಿತ್ಯ ಕೂಡ ಅಷ್ಟೇ ಆಸಕ್ತಿ ಸಂಪೂರ್ಣವಾದುದು.

ಒಂದು ಸಂಶೋಧನೆಯಲ್ಲಿ ತೊಡಗಬೇಕಾದರೆ ಪ್ರಮುಖವಾಗಿ'' ಎರಡು ವಿಧಾನಗಳನ್ನು ಅನುಸರಿಸಬಹುದು, ಮೊದಲನೆಯದು, ವಿಸ್ತಾರವಾದ ಅಧ್ಯಯನ (ಎಕ್ಸ್‌ಟೆನ್‌ಸಿವ್ ಸ್ಟಡಿ) ಎರಡನೆಯದು, ಆಳವಾದ ಅಧ್ಯಯನ (ಇನ್‌ಟೆನ್ಸಿವ್ ಸ್ಟಡಿ). ಅಧ್ಯಯನದ ಕ್ಷೇತ್ರ ದೊಡ್ಡದಾಗಿದ್ದರೆ, ಆಗ ವಿಸ್ತಾರವಾದ ಅಧ್ಯಯನ ಕೈಗೊಳ್ಳಬೇಕಾಗುತ್ತದೆ. ಅಧ್ಯಯನದ ಕ್ಷೇತ್ರ ಚಿಕ್ಕದಾಗಿದ್ದರೆ, ಆಗ ಆಳವಾದ ಅಧ್ಯಯನ ಕೈಗೊಳ್ಳಬಹುದು. ಇಲ್ಲಿ ನಾನು ಆಯ್ಕೆ ಮಾಡಿಕೊಂಡಿರುವುದು ಕರ್ನಾಟಕ ಕರಾವಳಿಯ ಕ್ಷೇತ್ರವನ್ನು ಮಾತ್ರ, ಆದ್ದರಿಂದ ಈ ಕ್ಷೇತ್ರದಲ್ಲಿ ಆಳವಾದ ಅಧ್ಯಯನ ನಡೆಸಲು ಹೆಚ್ಚು ಕಾಲಾವಧಿಯ ಅವಶ್ಯಕತೆ ಇದೆ. ನನ್ನ ಸಂಶೋಧನೆಯನ್ನು ಕಡಿಮೆ ಕಾಲಾವಧಿಯಲ್ಲಿ ಮುಗಿಸಬೇಕೆಂದಿರುವುದರಿಂದ ವಿಸ್ತಾರವಾದ ಅಧ್ಯಯನವನ್ನು ಅನುಸರಿಸಿದ್ದೇನೆ.

ಕಡಲನ್ನಾಶ್ರಯಿಸಿರುವ ಜನರ ಬದುಕು ಮತ್ತು ಸಾಹಿತ್ಯವನ್ನು ಕ್ಷೇತ್ರ ಕಾರ್ಯ ಹಾಗೂ ಸಹಾಯಕ ಕೃತಿಗಳ ಅಧ್ಯಯನದ ಮೂಲಕ ನೀಡಿದ್ದೇನೆ. ಈ ಸಂಶೋಧನೆಗೆ ಮುಖ್ಯವಾಗಿ ಕ್ಷೇತ್ರ ಕಾರ್ಯವೇ ಆಧಾರ. ಇದಕ್ಕೆ ಪೂರಕವಾಗಿ ಕೃತಿಗಳ ಅಧ್ಯಯನ ನಡೆದಿದೆ.

ಈ ನಿಬಂಧವು ಏಳು ಅಧ್ಯಾಯಗಳಿಂದ ಕೂಡಿದೆ. ಮೊದಲ ಅಧ್ಯಾಯವು ಪೀಠಿಕಾರೂಪದಲ್ಲಿದ್ದು, ಸಮುದ್ರ ಜಾನಪದ ಅಧ್ಯಯನಕ್ಕೆ ಅಗತ್ಯವಾದ ಹಿನ್ನೆಲೆಗಳನ್ನು ಒಳಗೊಂಡಿದೆ. ಎರಡನೇ ಅಧ್ಯಾಯದಲ್ಲಿ ಕಡಲನ್ನಾಶ್ರಯಿಸಿದವರ ಭಾಷೆ, ಸಾಹಿತ್ಯ ಪ್ರಕಾರಗಳ ಬಗ್ಗೆ ವಿಚಾರ ಮಾಡಲಾಗಿದೆ. ಸಾಹಿತ್ಯ ಪ್ರಕಾರದಲ್ಲಿ ಸಮುದ್ರಕ್ಕೆ ಸಂಬಂಧ ಪಟ್ಟ ಜನಪದ ಸಾಹಿತ್ಯದ ಕಡೆಗೆ ಮಾತ್ರ ಗಮನ ಹರಿಸಲಾಗಿದೆ. ಮೂರನೆಯ ಅಧ್ಯಾಯವು ಸಮುದ್ರ ಮತ್ತು ಜನರ ನಡುವಿನ ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಸಂಬಂಧದ ಬಗ್ಗೆ ಪರಿಚಯಿಸುತ್ತದೆ. ಸಾಮಾಜಿಕ ಸಂಬಂಧವು ಸಮುದ್ರದಾಹಾರ ಮತ್ತು ಸಮುದ್ರ ಬೇಟೆಯನ್ನೊಳಗೊಂಡಿದೆ. ಆರ್ಥಿಕ ಸಂಬಂಧದಲ್ಲಿ ಜನರು ಸಮುದ್ರ ಸಂಪತ್ತಿನಿಂದ ತಮ್ಮ ಆರ್ಥಿಕ ವ್ಯವಸ್ಥೆಯನ್ನು ರೂಪಿಸಿಕೊಂಡಿರುವುದನ್ನು ಕುರಿತು ವಿವೇಚಿಸಲಾಗಿದೆ. ಸಮುದ್ರ ಮತ್ತು ಧರ್ಮದ ನಡುವಿನ ಸಂಬಂಧವನ್ನು ಈ ಅಧ್ಯಾಯದ ಕೊನೆಯಲ್ಲಿ ತಿಳಿಸಲಾಗಿದೆ. ನಾಲ್ಕನೇ ಅಧ್ಯಾಯದಲ್ಲಿ ಸಮುದ್ರ ಸಂಬಂಧಿತ

ಧರ್ಮದ ನಡುವಿನ ಸಂಬಂಧವನ್ನು ಈ ಅಧ್ಯಾಯದ ಕೊನೆಯಲ್ಲಿ ತಿಳಿಸಲಾಗಿದೆ. ನಾಲ್ಕನೇ ಅಧ್ಯಾಯದಲ್ಲಿ ಸಮುದ್ರ ಸಂಬಂಧಿತ ವಸ್ತು ಮತ್ತು ಪ್ರಾಣಿಗಳ ಬಗ್ಗೆ ಇರುವ ನಂಬಿಕೆ ಮತ್ತು ಆಚರಣೆಗಳಿವೆ. ಐದನೇ ಅಧ್ಯಾಯದಲ್ಲಿ ಸಮುದ್ರ ಕ್ರಿಡೆಗಳನ್ನು, ಆರನೇ ಅಧ್ಯಾಯದಲ್ಲಿ ಸಮುದ್ರ ಸಂಬಂಧಿತ ಕಲೆ ಮತ್ತು ಮನರಂಜನೆಗಳನ್ನು ವಿವರಿಸಲಾಗಿದೆ. ಕೊನೆಯ ಅಧ್ಯಾಯವು ಸಂಶೋಧನೆಯ ಸಮಾರೋಪವಾಗಿದೆ. ನಿಬಂಧಕ್ಕೆ ಸಂಬಂಧಪಟ್ಟ ಛಾಯಾಚಿತ್ರ, ನಕ್ಷೆ ಮತ್ತು ರೇಖಾಚಿತ್ರಗಳನ್ನು ಸಂಬಂಧಿತ ಸ್ಥಳದಲ್ಲಿ ಅಳವಡಿಸಲಾಗಿದೆ. ಕೊನೆಯದಾಗಿ ಗ್ರಂಥಸೂಚಿಯನ್ನು ನೀಡಲಾಗಿದೆ.

ಈ ಮೇಲ್ಕಂಡ ವಿವರಗಳನ್ನೊಳಗೊಂಡ ಸಮುದ್ರ ಜಾನಪದ ನಿಬಂಧವು ವಿವರಣಾತ್ಮಕ ವಿಷಯಗಳನ್ನೊಳಗೊಂಡ ಒಂದು ವಿಶಿಷ್ಟ ನಿಬಂಧವೇ ಹೊರತು, ವಿಮರ್ಶಾತ್ಮಕ ಜಾನಪದ ನಿಬಂಧವಲ್ಲ. ಈ ದೃಷ್ಟಿಯಿಂದ ಸಮುದ್ರ ಜಾನಪದದ ವಿಮರ್ಶಾತ್ಮಕವಾದ ಅಧ್ಯಯನಕ್ಕೆ ಪ್ರತ್ಯೇಕವಾದ ಅವಕಾಶವಿದೆ.

2. ಭಾಷೆ - ಸಾಹಿತ್ಯ

2:1 ಸಮುದ್ರದಾಶ್ರಯಪಡೆದವರ ಭಾಷೆ :

ಕರ್ನಾಟಕ ಕರಾವಳಿಯಲ್ಲಿ ಹಬ್ಬಿಕೊಂಡಿರುವ ಸಮುದ್ರ ಒಂದೇ ಆಗಿದ್ದರೂ ಅದನ್ನು ಆಶ್ರಯಿಸಿ ಬದುಕುವ ಜನರ ಮತಧರ್ಮ, ಭಾಷೆ, ಸಂಪ್ರದಾಯ, ಆಚರಣೆಗಳು ಬೇರೆ ಬೇರೆಯಾಗಿವೆ. ಅವರ ಉದ್ಯೋಗ ಮಾತ್ರ ಒಂದೇ ಆಗಿದೆ. ಹಿಂದೆ ಈ ಕರಾವಳಿ ತುಳುನಾಡು ಮತ್ತು ಕೊಂಕಣ ಸೀಮೆಗಳಿಗೆ ಹಂಚಿಹೋಗಿತ್ತು. ಅದರ ಪ್ರಭಾವ ಇಂದಿಗೂ ಇಲ್ಲಿನ ಭಾಷೆ ಮತ್ತು ಸಂಸ್ಕೃತಿಗಳಲ್ಲಿ ಉಳಿದುಕೊಂಡಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತುಳು, ಉತ್ತರ ಕನ್ನಡ ಜಿಲ್ಲೆಯಲ್ಲಿ ಕೊಂಕಣಿ ಬಹು ಜನರ ಭಾಷೆಯಾಗಿದೆ. ಇವೆರಡರ ನಡುವೆ ಕನ್ನಡ ಒದ್ದಾಡುತ್ತಿದೆ. ಆದರೂ ಅವೆರಡೂ ಭಾಷೆಗಳೊಡನೆ ಅದು ಬಾಂಧವ್ಯ ಬೆಳೆಸಿಕೊಂಡು ಬೆಳೆಯುತ್ತಿದೆ. ಒಂದು ದೃಷ್ಟಿಯಿಂದ ಈ ಎರಡೂ ಜಿಲ್ಲೆಗಳಲ್ಲಿ ಆರ್ಥಿಕವಾಗಿ ಮುಂದುವರಿದ ವರ್ಗದವರ ಮಾತೃ ಭಾಷೆ ತುಳು ಮತ್ತು ಕೊಂಕಣಿಯಾಗಿದೆ. ಬಡವರ ಮಾತೃ ಭಾಷೆ ಕನ್ನಡವಾಗಿದೆ. ಬಹುಪಾಲು ಕಡಲಾಶ್ರಯದಾತರು ಕನ್ನಡವನ್ನಾಡುತ್ತಾರೆ. ಹೊರ ರಾಜ್ಯಗಳಿಂದ ಬಂದು ನೆಲೆಸಿದವರು ಕೊಂಕಣಿ, ಮಲೆಯಾಳಂ ಮಾತಾಡುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತುಳು, ಮಲೆಯಾಳಂ ಮಾತೃಭಾಷೆಯ ಜನರು ಹೆಚ್ಚಿದ್ದಾರೆ. ಈ ಜಿಲ್ಲೆಯ ಮುಸ್ಲಿಮರ ಮಾತೃಭಾಷೆ ಮಲೆಯಾಳಂ. ಆದರು ವ್ಯವಹಾರಕ್ಕಾಗಿ ಅವರೂ ಸಹ ತುಳು ಇಲ್ಲವೆ ಕನ್ನಡ ಭಾಷೆಯನ್ನು ಬಳಸುತ್ತಾರೆ. ಉತ್ತರ ಕನ್ನಡದ ಮುಸ್ಲಿಮರಲ್ಲಿ ಭಟ್ಕಳ ತಾಲ್ಲೂಕಿನ ಹೊರತು ಉಳಿದವರ ಮಾತೃಭಾಷೆ ಉರ್ದು ಆಗಿದೆ. ಅವರು ಸಹ ವ್ಯವಹಾರಕ್ಕಾಗಿ ಕನ್ನಡ ಇಲ್ಲವೆ ಕೊಂಕಣಿ ಭಾಷೆಯನ್ನು ಬಳಸುತ್ತಾರೆ. ಭಟ್ಕಳ ತಾಲ್ಲೂಕಿನ ಮುಸ್ಲಿಮರು "ನವಾಯಿತಿ"ಯನ್ನು ಮಾತೃಭಾಷೆಯನ್ನಾಗಿಸಿಕೊಂಡಿದ್ದಾರೆ. ಸಮುದ್ರದಾಶ್ರಯ ಪಡೆದ ಮುಸ್ಲಿಮರನ್ನು "ನಾಖುದಾ" ಮುಸ್ಲಿಮರೆನ್ನುತ್ತಾರೆ. "ನಾಖುದಾ" ಎಂದರೆ 'ನಾವಿಕರು' ಎಂಬ ಅರ್ಥವಿದೆ. ನವಾಯಿತಿ ಭಾಷೆಯು ಉತ್ತರ ಕನ್ನಡ ಜಿಲ್ಲೆಯ ಭಟ್ಕಳದ ಮುಸ್ಲಿಮರ ವಿಶೇಷ ಭಾಷೆಯಾಗಿದ್ದು ಅದರಲ್ಲಿ ಅರೆಬ್ಬಿ, ಸಂಸ್ಕೃತ, ಮರಾಠಿ, ಕೊಂಕಣಿ ಮೊದಲಾದ ಭಾಷೆಗಳು ಸೇರಿಕೊಂಡಿವೆ. ಉರ್ದು ಲಿಪಿಯನ್ನು ಅವರು ಬರವಣಿಗೆಯಲ್ಲಿ ಬಳಸುತ್ತಾರೆ. ಹೊಸ ಭಾಷೆಯ ಅಧ್ಯಯನಕ್ಕೆ 'ನವಾಯಿತಿ' ಭಾಷೆ ವಸ್ತುವಾಗಬಲ್ಲದು.

ಕಡಲಿಗರ ಭಾಷೆಗಳಾದ ಕೊಂಕಣಿ ಮತ್ತು ತುಳುವಿನ ಬಗ್ಗೆ ಗಮನಹರಿಸದೆ ಅವರಾಡುವ ಕನ್ನಡ ಭಾಷೆಯಲ್ಲಿ ಕಾಣುವ ವಿಶೇಷತೆ ಗುರುತಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಕರ್ನಾಟಕದ ಕಡಲಿಗರ ಕನ್ನಡವನ್ನು ಪ್ರಮುಖವಾಗಿ ಎರಡು ವಿಧಗಳಾಗಿ ವಿಂಗಡಿಸಿಕೊಳ್ಳಲಾಗಿದೆ. (1) ದಕ್ಷಿಣ ಕನ್ನಡದ ಕಡಲಿಗರ ಕನ್ನಡ (2) ಉತ್ತರ ಕನ್ನಡದ ಕಡಲಿಗರ ಕನ್ನಡ. ದಕ್ಷಿಣ ಕನ್ನಡದ ಕಡಲಿಗರ ಕನ್ನಡದ ಮೇಲೆ ತುಳುಭಾಷೆಯ, ಉತ್ತರ ಕರ್ನಾಟಕದ ಕಡಲಿಗರ ಕನ್ನಡದ ಮೇಲೆ ಕೊಂಕಣಿ, ಮರಾಠಿ ಭಾಷೆಗಳ ಪ್ರಭಾವ ಆಗಿದೆ ಆ ಎರಡೂ ಜಿಲ್ಲೆಯ ಕನ್ನಡ ಭಾಷೆಯಲ್ಲಿ ಗುರುತಿಸಬಹುದಾದ ವಿಶಿಷ್ಟತೆಗಳೆಂದರೆ:

ಉತ್ತರ ಕನ್ನಡದ ಕಡಲಿಗರ ಕನ್ನಡ :

ಈ ಜಿಲ್ಲೆಯ ಕಡಲಿಗರ ಕನ್ನಡ ಧ್ವನಿಯ ವ್ಯವಸ್ಥೆಯುತನ್ನದೇ ಆದ ವಿಶೇಷತೆಯನ್ನು ಹೊಂದಿದೆ.

ಸ್ವರಗಳಿಗೆ ಬದಲಾಗಿ ವ್ಯಂಜನಗಳನ್ನು ಬಳಸುವುದು :

1) ಅ > ಲ **(ಅಕಾರಕ್ಕೆ ಬದಲಾಗಿ ಲಕಾರವನ್ನು ಬಳಸಲಾಗುತ್ತದೆ)**

1) ಆರಣ್ಯ > ಲರಣ್ಯ

2) ಆಕಳ > ಲಾಕಳ

3) ಅರಮನಿ > ಲರಮನಿ

4) ಅರಸುಮಗ > ಲರಸುಮಗ

5) ಅರಗಳಿಗೆ > ಲರಗಳಿಗೆ

6) ಅತ್ತೆ > ಲತ್ತೆ

2) ಎ > ಲ (ಎಕಾರಕ್ಕೆ ಬದಲಾಗಿ ಲಕಾರವನ್ನು ಬಳಸುತ್ತಾರೆ)

ಎಷ್ಟೆಷ್ಟು > ಲೆಷ್ಟೆಷ್ಟು

ಎಚ್ಚರ > ಲೆಚ್ಚರ

3) ಹ > ಅ

ಹಸೆಮಣೆ > ಅಸೆಮಣೆ

4) ವ > ಇ

ವಿಚಾರ > ಇಚಾರ

5) ಹ > ಎ

ಹೆಸರು > ಎಸರು

6) ಷ,ಶ > ಸ

ಪುಷ್ಪ > ಪುಸ್ಪ

ದೇಶ > ದೇಸ

ಶಿಶು > ಸಿಸು

ಶಿವ > ಸಿವ

7) ಖ > ಕ

ದು:ಖ > ದುಕ್ಕ

8) ಏ, ಎ > ಯ

ಎಷ್ಟು > ಯೇಸು

ಏಳು > ಯೇಳು

9) ಣ > ಳ

ಬಾಣಂತಿ > ಬಾಳಂತಿ

10) ಎ > ಇ

ಧರೆ > ಧರಿ

ಕೆರೆ > ಕೆರಿ

ಮನೆ > ಮನಿ

ತಂದೆ > ತಂದಿ

ನಿದ್ದೆ > ನಿದ್ದಿ

ಮಣೆ > ಮಣೆ

ಬಸಳೆ > ಬಸಳಿ

ಬಾಳೆ > ಬಾಳಿ

11) ಸಂಯುಕ್ತಾಕ್ಷರಗಳನ್ನು ಬಿಡಿಸಿ ಹೇಳುವುದು

ಸಮುದ್ರ > ಸಮುದರ

ತೀರ್ಥ > ತೀರುತ

ಸರ್ಪ > ಸರಪ

ಸ್ವಾಮಿ > ಸೋಮಿ

ರತ್ನ > ರತುನ

12) ಕ್ರಿಯಾಪದದ ನಡುವೆ 'ಯ' ಕಾರದ ಬಳಕೆ:

ತೊಡಿಸುವರು > ತೊಡಿಸ್ಯಾರು

ಮುಡಿಸುವರು > ಮುಡಿಸ್ಯಾರು

ಬಡಿಸುವರು > ಬಡಿಸ್ಯಾರು

ಕೊಡಿಸುವರು > ಕೊಡಿಸ್ಯಾರು

ಮಲಗಿದ್ದಾಳೆ > ಮಲಗ್ಯಾಳೆ

ನೆನೆಸುವನು > ನೆನೆಸ್ಯೇನೊ

13) ಪದ ಮಧ್ಯದಲ್ಲಿ ಬಿಂದು ಬರುವುದು:

ಬಾವಿ > ಬಾಂವಿ > ಬಾಂಮಿ

ಸ್ವಾವುಗೆ > ಸಾವುಂಗಿ

ಹೊರಟ > ಹೊಂಟ

ಅನ್ನುವುದು > ಅಂಬೋದು

14) ಸಂಖ್ಯಾವಾಚಕಗಳು:

ಒಂದು > ವಂದು

ಎರಡು > ಯೆಡ್ಡು

ಏಳು > ಏಲು

ಹತ್ತು > ಲತ್ತು

15) ಬಿಡಿ ಅಕ್ಷರವನ್ನು ಸಂಯುಕ್ತಾಕ್ಷರ ಮಾಡಿ ಹೇಳುವುದು, ಸಂಕ್ಷಿಪ್ತಗೊಳಿಸುವುದು:

ಹೊರಗೆ > ಹೆರ್ಗೆ

ಒಳಗೆ > ಒಳ್ಗೆ

ಕುಂಬಳ > ಕುಂಬ್ಳ

ತೊಟ್ಟಿಲು > ತೊಟ್ಲು

16) ಕೆಲವು ಸಂದರ್ಭಗಳಲ್ಲಿ ಸ > ಚ ಆಗುತ್ತದೆ:

ಸೂಜಿ > ಚೂಜಿ

ತುಳಸಿ > ತೊಳಚಿ

ಸಾಸಿವೆ > ಚಾಚ್ವೆ

ಸಣ್ಣ > ಚಣ್ಣ

17) ತ > ಚ

ತೊಟ್ಟು > ಚೊಟ್ಟು

18) ವ > ಮ

ಕಿವಿ > ಕಿಮಿ

ಬಾವಿ > ಬಾಮಿ

ಸಾಸಿವೆ > ಸಾಸ್ಮೆ

19) ಅಕ್ಷರ ಪಲ್ಲಟ:

ಪ್ರಪಂಚ > ಪರ್ಪಂಚ

ಮಂತ್ರಿಸಿ > ಮಂತರ್ಸಿ

ಮೃತ್ಯು > ಮಿರ್ತು

20) ಧ್ವನಿ ವಿಸ್ತಾರ:

ಪ್ರಾಯ > ಪಿರಾಯ

ನೂಲು > ನುಗುಲು

21) ಅಪಭ್ರಂಶ ರೂಪಗಳು:

ಬೆಳದಿಂಗಳು > ತಿಂಗಳ ಬೆಳಕು

ಅಮಾವಾಸೆ > ಅಮಾಸಿ

22) ಶಬ್ದಾರ್ಥ ರೂಪಗಳು:

ಹಡಿಮಂಚ (ಹೊಡೆದ ಮಂಚ)

ಕೈಮರ್ಗಿ (ಕೈಯಲ್ಲಿ ಹಿಡಿಯುವ ಮರಿಗೆ)

ಭಾಷಾ ಶಾಸ್ತ್ರದನುಸಾರ ಉತ್ತರ ಕನ್ನಡ ಜಿಲ್ಲೆಯ ಕಡಲಿಗರಾಡುವ ಭಾಷೆಯನ್ನು ವಿಶ್ಲೇಷಿಸಿದರೆ ಮಹಾ ಪ್ರಬಂಧಕ್ಕೆ ಬೇಕಾಗುವಷ್ಟು ವಿಷಯ ದೊರೆಯುತ್ತದೆ. ಇಲ್ಲಿ ಕೇವಲ ಅದರ ಸಂಕ್ಷಿಪ್ತ ಪರಿಚಯವನ್ನು ಮಾತ್ರ ಮಾಡಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಕಡಲಿಗರ ಕನ್ನಡ:

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕನ್ನಡಕ್ಕಿಂತ ತುಳು ಮಾತಾಡುವವರ ಸಂಖ್ಯೆ ಹೆಚ್ಚು. ಅವರಾಡುವ ಕನ್ನಡವು ಸಹ ತುಳು ಭಾಷೆಯ ಶೈಲಿಯಲಿದ್ದು ಬರಹದ ರೂಪದಲ್ಲಿರುತ್ತದೆ. ಸಾಮಾನ್ಯವಾಗಿ ದಕ್ಷಿಣ ಕನ್ನಡದ ಬಹುಪಾಲು ಹಳ್ಳಿಗಳ ಹೆಸರು ತುಳು ಭಾಷೆಯ ಶಬ್ದಗಳಾಗಿವೆ. ತುಳು ಪ್ರಭಾವಕ್ಕೊಳಗಾದ ಕನ್ನಡವನ್ನು ಉಡುಪಿಯಿಂದ ಮಂಗಳೂರಿನವರೆಗೆ ಕಾಣಬಹುದು. ಉಡುಪಿಯಿಂದ ಕುಂದಾಪುರದ ಕಡೆಗೆ ಬಂದರೆ ಕನ್ನಡಿಗರ ಮನೆ ಹೊಕ್ಕ ಅನುಭವವಾಗುತ್ತದೆ. ಕುಂದಾಪುರದವರ ಕಡೆಯವರಾಡುವ ಕನ್ನಡಕ್ಕೂ ಮಂಗಳೂರಿನವರಾಡುವ ಕನ್ನಡಕ್ಕೂ ಸ್ಥೂಲ ವ್ಯತ್ಯಾಸ ಕಂಡುಬರುತ್ತದೆ. ಇಲ್ಲಿ ಆ ವ್ಯತ್ಯಾಸಗಳನ್ನು ತಿಳಿಸುವುದಕ್ಕಿಂತ ಅಲ್ಲಿನ ಕನ್ನಡದ ಸಾಮಾನ್ಯ ಲಕ್ಷಣಗಳನ್ನು ಪರಿಚಯ ಮಾಡಲಾಗಿದೆ.

ಸ್ವರ ವೈವಿಧ್ಯ: ಅ > ಎ

ನಗು > ನೆಗೆ

ಕಪ್ಪೆ > ಕೆಪ್ಪೆ

ಜಗುಲಿ > ಜೆಗುಲಿ

ಆ > ಏ

ಆಮೆ > ಏಮೆ

ಆಡು > ಏಡು

ಅ > ಒ

ಬಳ್ಳಿ > ಬೊಳ್ಳಿ

ಹಲ್ಲಿ > ಪೊಲ್ಲಿ

ಮಸಿ > ಮೊಸಿ

ಮರಿ > ಮೊರಿ

ಇ > ಎ

ಇರುವೆ > ಎರು

ಇಲಿ > ಎಲಿ

ನಿರಿ > ನೆರಿ

ಇದಿರು > ಎದುರು

ಉ > ಒ

ಹುರಿ > ಹೊರಿ

ತುಟಿ > ತೊಟಿ

ಕುದಿ > ಕೊದಿ

ಸುರಿ > ಸೊರಿ

ಒ > ಉ

ಸೊಂಡಿಲು > ಸುಂಡ್ಲು

ಹೊಕ್ಕಳು > ಹುಕ್ಳು

ಒ > ಎ

ಹೊರಗೆ > ಹೆರಗೆ

ಹೊರಡು > ಹೆರಡು

ವ್ಯಂಜನ ವೈವಿಧ್ಯ:

ತ > ಚ

ತಂಬಿಗೆ > ಚೆಂಬು

ತಳ್ಳು > ಚಳ್ಳು

ತಣಿ > ಚೆಣಿ

ಸ > ಚ

ಸಪ್ಪೆ > ಚಪ್ಪೆ

ಸೊಪ್ಪು > ಚೊಪ್ಪು

ಹ > ಪ

ಹಳ್ಳ > ಪಳ್ಳ

ಹತ್ತು > ಪತ್ತು

ವ > ಮ

ಕಿವಿ > ಕೆಮಿ

ಬಾವಿ > ಬಾಮಿ

ತಿವಿ > ತಿಮಿ

ಪದದ ನಡುವೆ ಅನುಸ್ವರವನ್ನು ಬಳಸಲಾಗುತ್ತದೆ:

ಆಟ > ಆಂಟ

ಸೌತೆ > ಚೌಂತೆ

ಹಬ್ಬು > ಹಂಬು

ಹಾಗೆ > ಹಾಂಗೆ

ಹೀಗೆ > ಹೀಂಗೆ

ಲಕಾರಕ್ಕೆ ಬದಲಾಗಿ ನಕಾರವನ್ನು ಬಳಸುತ್ತಾರೆ.

ಮಲಗು > ಮನಗು

ಲಂಗರು > ನಂಗರು

ಕ > ಗ

ಕೆಂಡ > ಗೆಂಡ, ಕೇರು > ಗೇರು

ಗ > ಯ

ಬಗನಿ > ಬಯ್ನ,

ಸ > ಚ

ಸೌತೆ > ಚೌಂತೆ, ಸಣ್ಣ > ಚಣ್ಣ

ರ > ಯ

ಎರಡು > ಎಯ್ಡು, ಗರುಡ > ಗಯ್ಡ

ಳ > ಲ

ಮರಳು > ಮರ್ಲು, ಎಸಳು > ಎಸ್ಲು

ಬೆರಳು > ಬೆರ್ಲು, ಸರಳು > ಸರ್ಲು

ಕೊರಳು > ಕೊರ್ಲು

ಅಕ್ಷರ ಪಲ್ಲಟ:

ಮಂತ್ರಿಸಿ	>ಮಂತರ್ಸಿ,	ಮೃತ್ಯು	>	ಮಿರ್ತು
ಅಂದಾಜು	>ಅಂಜಾದು,	ಲೋರಿ	>	ರೋಲಿ

ಸಂಕ್ಷಿಪ್ತಗೊಳಿಸುವುದು:

ತೊಟ್ಟಿಲು	>	ತೊಟ್ಲು,	ತೋರಣ	>	ತೋರ್ಣ
ಬಟ್ಟಲು	>	ಬಟ್ಲು,	ಸಿಡಿಲು	>	ಸೆಡ್ಲು

ಧ್ವನಿ ವಿಸ್ತಾರ:

ನೂಲು	>	ನುಗುಲು,	ಪ್ರಾಯ	>	ಪಿರಯ
ಕ್ರಯ	>	ಕಿರಾಯ,	ರವಕೆ	>	ರವಕೀ

ಅಪಭ್ರಂಶ ರೂಪಗಳು:

ಅಮವಾಸೆ	>	ಅಮಾಸಿ
ಧ್ಯಾನ	>	ಜಾನ
ಅಗ್ರಹಾರ	>	ಅಗ್ರಾರ

ಶಬ್ದಾರ್ಥ ರೂಪಗಳು:

ಕೈಮರ್ಗಿ (ಕೈಯಲ್ಲಿ ಹಿಡಿದ ಮರಿಗೆ)

ಹಡಿಮಂಜ (ಹೊಡಿಯುವ ಮಂಚ)

ವಿಶಿಷ್ಟಾರ್ಥ ಪದಗಳು:

ಗೂಡುಹಾಕು	(ಸಾಯು)	ಮೋಳ್ ಬೆಕ್ಕು	(ಗಂಡು ಬೆಕ್ಕು)
ನಿಗುರು	(ಸಾಯು)	ಜಂಬು	(ದುರ್ವಾಸನೆ)
ಬಾಧೆ	(ಭಾರ)	ಮೀವರಿ	(ಬಚ್ಚಲು)
ಹಗುರ	(ನಿಧಾನ)	ಜಪ್ಪು	(ಹೊಡೆ)
ಘನ	(ಒಳ್ಳೆಯ, ಉತ್ತಮ)	ಕಮ್ಸು	(ಗುದ್ದು)
ಸಪೂರ	(ತೆಳ್ಳಗೆ)	ಹೀರ್ಕಳು	(ಅಗಲು)
ಮಡೆ	(ಹುಲ್ಲಿನ ಹಗ್ಗ)	ಅರಿ	(ಒಂದು ಹಿಡಿ)
ಕಲ್ಕ	(ಮಸಾಲೆ)	ತೆತ್ತಿಗಾರ	(ಮದುವೆ ಮಾಡಿಸುವ ಭಾವ)
ಏರಿ	(ಸಾಲು)	ಹುಲ್‌ಕುತ್ರಿ	(ಭತ್ತದ ಹುಲ್ಲಿನ ರಾಶಿ)
ದಾನಿ	(ಹಲಸಿನ ಬೀಜ)	ಗೋಯೆಬೀಜ	(ಕಾಜು)

ದಕ್ಷಿಣ ಕನ್ನಡದ ಮೀನುಗಾರರ ಭಾಷೆಯು ಉತ್ತರ ಕನ್ನಡದ ಮೀನುಗಾರರ ಭಾಷೆಗಿಂತ ಭಿನ್ನವಾಗಿರುವುದರ ಜೊತೆಗೆ ತನ್ನದೇ ಆದ ವಿಶಿಷ್ಟತೆಯನ್ನುಳಿಸಿಕೊಂಡಿದೆ. ಅಲ್ಲದೆ ಕನ್ನಡ ಮಾತನಾಡುವ ಶೈಲಿಯಿಂದ ಅವರು ದಕ್ಷಿಣ ಕನ್ನಡ ಜಿಲ್ಲೆಯ ಜನರೆಂದು ಸುಲಭವಾಗಿ ಗುರುತಿಸಲ್ಪಡುತ್ತಾರೆ. ಕನ್ನಡ ಭಾಷೆಯ ಬೆಳವಣಿಗೆಗೆ ಕರಾವಳಿಯ ಮೀನುಗಾರರ ಆಡು ಮಾತಿನ ಕೊಡುಗೆ ಗಮನಾರ್ಹವೆನಿಸುತ್ತದೆ.

2:2 ಸಮುದ್ರ ಗೀತೆಗಳು

ಕವಿಗಳಿಗೆ ಪ್ರಕೃತಿ ಪ್ರಿಯವಾದಷ್ಟು ಸಮುದ್ರ ಪ್ರಿಯವಾಗಲಿಲ್ಲ. ಆದ್ದರಿಂದಲೇ ಕಾವ್ಯ ಕ್ಷೇತ್ರದಲ್ಲಿ ಹಸಿರು ಹೊದ್ದ ಗಿಡ ಮರ ಬಳ್ಳಿಗಳಿಗೆ ಸಿಕ್ಕ ಸ್ಥಾನವು ವಿಶಾಲವಾದ ಸಾಗರಕ್ಕೆ ಸಿಗಲಿಲ್ಲ. ಆದರೂ ಮಹಾಕಾವ್ಯಗಳಲ್ಲಿ ಬರುವ ಅಷ್ಟಾದಶ ವರ್ಣನೆಗಳಲ್ಲಿ ಸಮುದ್ರಕ್ಕೂ ಒಂದು ಸ್ಥಾನ ನೀಡಲಾಗಿದೆ. ಕೆಲವು ಮಹಾಕವಿಗಳು ಸಮುದ್ರ ದರ್ಶನದ ಅನುಭವವನ್ನುಂಡು ಅದನ್ನು ಕಾವ್ಯದಲ್ಲಿ ಕಾಣಿಸಿದರೆ, ಕೆಲವರು ತಮ್ಮ ಕಲ್ಪನಾ ಜಗತ್ತಿನಲ್ಲಿ ಸಮುದ್ರ ಸೃಷ್ಟಿಸಿಕೊಂಡು ಅದನ್ನು ಕಾವ್ಯದ ಮೂಲಕ ಪರಿಚಯಿಸಿದರು. ಹೊಸಗನ್ನಡ ಸಾಹಿತ್ಯದಲ್ಲೂ ಸಮುದ್ರದೆಡೆಗೆ ಕವಿಗಳ ಒಲವು ಅಷ್ಟಾಗಿ ಕಾಣುವುದಿಲ್ಲ. ಡಾ|| ವಿ.ಕೃ.ಗೋಕಾಕರಿಗೆ ಸಮುದ್ರಯಾನದ ಅವಕಾಶ ದೊರೆತ ಕಾರಣದಿಂದ ಅವರ ಕವಿತೆಗಳಿಗೆ ಸಮುದ್ರ ವಸ್ತುವಾಯಿತು. ಅವರ ನಂತರ ಬೆರಳೆಣಿಕೆಗೆ ಸಿಗುವಷ್ಟು ಕವಿತೆಗಳು ಮಾತ್ರ ಸಮುದ್ರ ದರ್ಶನ ಮಾಡಿಸುತ್ತವೆ. ಹೀಗಿದ್ದರೂ ಶಿಷ್ಟ ಸಾಹಿತ್ಯದಲ್ಲಿ ಸಮುದ್ರಕ್ಕೆ ಸಿಕ್ಕಿರುವ ಸ್ಥಾನ ಕಡಿಮೆ ಎಂದೇ ಹೇಳಬಹುದು. ಜಾನಪದರು ಸಾಗರವನ್ನು ಕಾಣಲಿ, ಕಾಣದೇ ಇರಲಿ, ಅವರ ಹಾಡುಗಳಲ್ಲಿ ಅದೊಂದು ಹೋಲಿಕೆಯ ವಸ್ತುವಾಗಿ ಬಳಕೆಯಾಗಿದೆ. ಸಾಗರಕ್ಕೆ ಸಂಬಂಧಪಟ್ಟ ಉಪ್ಪು, ಮುತ್ತು, ಜಲಚರಪ್ರಾಣಿ, ಬಲೆ ಮುಂತಾದವು ಅವರ ಗೀತೆಗಳಲ್ಲಿ ಸ್ಥಾನಪಡೆದವು. ಅವುಗಳನ್ನೆಲ್ಲಾ ಜಾನಪದರು ತಮ್ಮ ಕಾವ್ಯ ಪ್ರತಭೆಯ ಮೂಲಕ ಹಾಡಾಗಿ ಹೆಣೆದರು. ಅಂತಹ ಸಮುದ್ರ ಸಂಬಂಧಿ ಹಾಡುಗಳಲ್ಲಿ ಎರಡು ವಿಧಗಳಿರುವುದು ಕಂಡುಬರುತ್ತದೆ.

(1) ಬಿಡಿ ಗೀತೆಗಳು

(2) ಕಥನ ಗೀತೆಗಳು

ಜನಪದರ ಭಾವನೆಗೆ ಕಡಲು ಸ್ಫೂರ್ತಿ ತುಂಬಿದ ಪರಿಣಾಮವಾಗಿ ಅವರ ಅನುಭವದ ಗಣಿಯಿಂದ ಸಮುದ್ರ ಸಂಬಂಧಿತ ಬಿಡಿ ಮುತ್ತುಗಳು ಹೊರಹೊಮ್ಮಿವೆ. ತ್ರಿಪದಿಗಳಲ್ಲಿ ವಿವಿಧ ಬಣ್ಣ, ಗುಣದ ಬಿಡಿಮುತ್ತುಗಳ ರಾಶಿಯೇ ದೊರೆಯುತ್ತದೆ.

ಕರಾವಳಿಯಲ್ಲಿ ಶಿವರಾತ್ರಿ, ಅಮಾವಾಸ್ಯೆಯ ಸಮುದ್ರ ಸ್ನಾನವು ಪಾಪ ಪರಿಹಾರದ ಒಂದು ಆಚರಣೆಯಾಗಿದೆ. ಆ ಸಂದರ್ಭದಲ್ಲಿ ಕಡಲಿಗರು ಸಾಗರಕ್ಕೆ ನಾಣ್ಯ ಸಮರ್ಪಿಸಿ, ಸ್ನಾನ ಮಾಡುತ್ತಾರೆ. ಆ ದಿನ ತೀರ ಪ್ರದೇಶವು ಸ್ನಾನದ ದೃಶ್ಯದಿಂದ ಆಕರ್ಷಣೀಯವಾಗಿರುತ್ತದೆ. ಸ್ನಾನ ಮುಗಿಸಿದ ಭಕ್ತರು ನೇರವಾಗಿ ಶಿವಾಲಯಕ್ಕೆ ಬಂದು ಪೂಜೆ ಸಲ್ಲಿಸುತ್ತಾರೆ. ಈ ಸಂಪ್ರದಾಯದ ಆಚರಣೆಯಲ್ಲಿ ಬರುವ ಸಮುದ್ರ ಸ್ನಾನದ ಸ್ವರೂಪ ಮತ್ತು ಉದ್ದೇಶವನ್ನು ತ್ರಿಪದಿಯಲ್ಲಿ ಪರಿಚಯಿಸಿರುವುದನ್ನು ಗಮನಿಸಬಹುದು.

ಹರಹರ ಎಂದೇ ಹರುವಾಗಂಗೀ ಮಿಂದೆ
ಸಿವಸಿವಾ ಅಂದೇ ಮುಳ್ಗೀದೆ ಸಮ್ದ್ರವ
ತೆರೆಬಂದು ಪಾಪ ತೊಳದಾವು.

ಶಿವ ಸ್ಮರಣೆಯೊಂದಿಗೆ ಸಮುದ್ರ ಸ್ನಾನಮಾಡುವ ಜನಪದರ ಪಾಪವನ್ನು ತೊಳೆಯುತ್ತಿರುವ ಅಲೆಗಳ ದೃಶ್ಯವನ್ನು ಕಣ್ಣಿಗೆ ಕಟ್ಟುವಂತೆ ವಿವರಿಸುತ್ತಿರುವ ಜನಪದ ಕವಿ ಅವರಲ್ಲಿದ್ದ ನಂಬಿಕೆಯನ್ನು ಪ್ರಾಸಬದ್ಧವಾದ ತ್ರಿಪದಿಯಲ್ಲಿ ಪರಿಚಯಿಸುತ್ತಿದ್ದಾನೆ. ಅಂತರಂಗದ ಪಾಪವನ್ನು ಮೈಗಂಟಿದ ಕೊಳೆಯೆಂದು ಭಾವಿಸುತ್ತಿರುವುದು ಅದನ್ನು ಶುದ್ಧಗೊಳಿಸುವ ಕಾರ್ಯದಲ್ಲಿ ಸಮುದ್ರದ ತೆರೆ ತೊಡಗಿರುವುದು ವಿಚಾರವಂತರಿಗೆ ಅರ್ಥಹೀನವಾಗಿ ಕಂಡರೂ ಜನಪದರ ಸಂಪ್ರದಾಯದಲ್ಲಿ ವೈಚಾರಿಕತೆಗೆ ಅವಕಾಶವಿಲ್ಲ. ಹಲವು ವಿಚಾರವಂತರೂ ಇಂದು ಗಂಗಾಸ್ನಾನದ ಸಂಪ್ರದಾಯವನ್ನು ಆಚರಿಸಿ ಜನಪದರ ನಂಬಿಕೆಗೆ ಬದ್ಧರಾಗಿಯೇ ಬದುಕುತ್ತಿರುವುದು ಗಮನಾರ್ಹವಾದುದು.

ಸಾಗರ ಎಂದ ತಕ್ಷಣ ಅದರಲ್ಲಿ ಬರಿಯ ನೀರು ಮಾತ್ರವಿರುವುದೆಂದು ತಿಳಿಯುವ ಮಂದಿಯೇ ಹೆಚ್ಚು. ಆದರೆ ಸಾಗರದಲ್ಲಿ ನಿಂತ ಕಲ್ಲುಗಳನ್ನು ಕಂಡು ಅದನ್ನು ಗೀತೆಯಲ್ಲಿ ಬಳಸಿದವರು ಬಹಳ ಅಪರೂಪ. ಅಂತಹ ಅಪರೂಪದ ತ್ರಿಪದಿಯೊಂದು, ತಾಯಿ ಮಕ್ಕಳ ಭವಿಷ್ಯ ರೂಪಿಸಲು ಹಾತೊರೆಯುವ ಭಾವನೆಯನ್ನು ಪರಿಚಯಿಸುತ್ತದೆ.

ಸಾಗರಗಲಾಯಿಸವಾಗಲೇ ಬಾಲಯ್ಗೀ
ಹಾಲಿಳ್ಳಿ ಮರಕೇ ಹಲಿಹುವ್ವೇ। ಬಾಲಮ್ನಾ
ವಾಲಿ ಬಾಗ್ಯಾಕು ಹರ್ರೂವೇ।

ಆಳೆತ್ತರಕ್ಕೆ ಜಿಗಿಯುತ್ತಾ ಬರುವ ಸಾಗರದ ಅಲೆಗಳು ನಡುನೀರಲ್ಲಿ ನಿಂತ ಕಲ್ಲಿಗೆ ಅಪ್ಪಳಿಸಿದರೂ ಸಹ ಆ ಕಲ್ಲು ಸ್ವಲ್ಪವೂ ಅಲುಗದೆ ಅಚಲವಾಗಿರುತ್ತದೆ. ಅದೇರೀತಿ ಬದುಕಿನಲ್ಲಿ ಬರುವ ಕಷ್ಟದ ಅಲೆಗಳ ಹೊಡೆತವನ್ನು ಸಹಿಸಿಕೊಂಡು ಸಾಗರದ ಕಲ್ಲಾಗಿ ತನ್ನ ಮಗ ನಿಲ್ಲಲು ಹಾಗೂ ಮಗಳ ಓಲೆಯ ಭಾಗ್ಯವು ಸ್ಥಿರವಾಗಲು ತಾಯಿ ಅಶ್ವತ್ಥಮರದ ಕಟ್ಟೆಯ ಮೇಲೆ ರಂಗೋಲಿ ಹಾಕುವ ಹರಕೆ ಹೊರುತ್ತಾಳೆ. ಇದರಲ್ಲಿ ಹೆಣ್ಣೊಬ್ಬಳ ತಾಳ್ಮೆಯನ್ನು ಸಾಗರದ ಕಲ್ಲಲ್ಲಿ ಕಂಡು ಅದನ್ನು ಮಗನಲ್ಲೂ ಕಾಣಲು ಬಯಸಿರುವುದು ಗಮನಾರ್ಹವಾದುದು. ಸಂಸಾರವೆಂಬ ಸಾಗರದಲ್ಲಿ ನಿಂತಿರುವ ಮಗ ಕಲ್ಲಿನಂತಿದ್ದರೆ ಮಾತ್ರ ಬದುಕಬಲ್ಲನೆಂಬುದು ತಾಯಿಯ ಆಶಯ.

ಮನುಷ್ಯರ ಸ್ವಭಾವ ವಿಚಿತ್ರವಾದುದು. ಅದನ್ನರಿತ ಜನಪದ ಕವಿ ತ್ರಿಪದಿಯೊಂದರಿಂದ ಮನುಷ್ಯನನ್ನು ತಿದ್ದಲು ಹೊರಟಿರುವುದನ್ನು ನೋಡಬಹುದು.

ಭಾಗ್ಯ ಬಂತಂತೇಳಿ ಬಾಳ ನೀನುರಿಬೇಡ
ಈ ಭಾಗ್ಯ ನಿನಗೆ ಸ್ಥಿರವಲ್ಲ। ಸಮುದ್ರದ
ಭರತ - ಬಂದಿಳಿತ ಇಳಿದಂಗೆ

ವಿಶಾಲವಾದ ಸಮುದ್ರದಲ್ಲಿ ಭರತ - ಇಳಿತಗಳು ಅಸ್ಥಿರ. ಇದೇರೀತಿ ಬರುವ ಭಾಗ್ಯ ಸಹ ಮನುಷ್ಯನಲ್ಲಿ ಹೆಚ್ಚು ದಿನವಿರುವುದಿಲ್ಲ. ಆದ್ದರಿಂದ ಭಾಗ್ಯ ಬಂದಾಗ ಅಹಂಕಾರದಿಂದ ವರ್ತಿಸುವುದು ಸರಿಯಲ್ಲವೆಂದು ಕವಿ ಎಚ್ಚರಿಸುತ್ತಾನೆ.

ಬಡತನ-ಸಿರಿತನಗಳೆರಡೂ ಸ್ಥಿರವಲ್ಲದ್ದರಿಂದ ಮನುಷ್ಯನಿಗೆ ಎಂತಹ ಸ್ಥಿತಿ ಒದಗಿಬಂದರೂ ಚಂಚಲಗೊಳ್ಳದ ನಡೆ-ನುಡಿಯನ್ನು ಕಾಪಾಡಿಕೊಂಡು ಹೋಗುವುದರಿಂದ ಅದು ಅವನ ವ್ಯಕ್ತಿತ್ವದ ಶ್ರೇಷ್ಠತೆಗೆ ಅವಕಾಶಮಾಡಿಕೊಡಬಲ್ಲದೆಂಬ ಕವಿಮಾತು ಈ ತ್ರಿಪದಿಯಲ್ಲಿದೆ.

ಕಡಲು ಕೊನೆಗಾಣದಷ್ಟು ವಿಶಾಲವಾದ ನೀರನ್ನು ಹೊಂದಿದ್ದರೂ ಅದರ ಮೇಲೆ ನೃತ್ಯ ಮಾಡುತ್ತಾ ಬರುವ ಅಲೆ ನಮ್ಮ ಜನಪದ ಕವಿಯನ್ನು ಸೆರೆಹಿಡಿದಿದೆ. ಆತ ಮೆಚ್ಚಿಕೊಂಡ ವಸ್ತುಗಳ ಸರದಿಯಲ್ಲಿ ಕಡಲಲೆಯನ್ನು ಸೇರಿಸಿಕೊಳ್ಳಲು ಬಯಸಿರುವುದನ್ನು ಇಲ್ಲಿ ಗಮನಿಸಬಹುದು.

ಕಡಿಯಕ್ಕ ಕೊಳ್ ಚಂದ, ಕಡದಾ ಮಜ್ಜಿಗೆ ಚಂದ
ಕಡಲೊಳಗೆ ಬರುವ ತೆರೆಚಂದ। ಬಾಲಮ್ಮ
ನೀ ಚಂದ ನಿನ್ನ ದೊರೆ ಚಂದ।

ಕಡಿ ಅಕ್ಕಿಯ ಅನ್ನ, ಕಡೆದ ಮಜ್ಜಿಗೆ, ಕಡಲಿನ ತೆರೆ ಇವುಗಳಲ್ಲಿ ಅನ್ನ ಮತ್ತು ಮಜ್ಜಿಗೆ ಬಾಯಿಗೆ ರುಚಿನೀಡಿದರೆ, ಕಡಲಲ್ಲಿ ಬರುವ ತೆರೆಗಳು ಕಣ್ಣಿಗೆ ಆನಂದವನ್ನು ನೀಡುವಂತಹವು. ಈ ಅಲೆಗಳೊಡನೆ ಆಟವಾಡುವ ಮಂದಿಯನ್ನು ಇಂದಿಗೂ ತೀರದಲ್ಲಿ ಕಾಣುತ್ತೇವೆ. ಅದು ಏನೇ ಇರಲಿ, ಅನ್ನದ ಮತ್ತು ಮಜ್ಜಿಗೆಯ ರುಚಿ ಮನಸ್ಸಿಗೆ ಸಂತೋಷ ಕೊಡುವಂತೆ ನೃತ್ಯ ಮಾಡುತ್ತಾ, ನಗೆಯ ನೊರೆ ಉಕ್ಕಿಸುತ್ತಾ ಬರುವ ತೆರೆ ಹಾಗೂ ಹೊಸ ದಂಪತಿಗಳು ಕಣ್ಣಿಗೆ ಆನಂದ ನೀಡಿ ಮನಕ್ಕೆ ಮೆಚ್ಚುಗೆಯಾಗುವಂತಹವು ಎಂಬುದನ್ನು ಕವಿ ಪರಿಚಯಿಸುತ್ತಾನೆ.

ಇದೇ ಬಗೆಯ ಅಲೆಯನ್ನು ತೊಟ್ಟಿಲು ತೂಗುವಾಗ ನೆನಪಿಸಿಕೊಂಡು, ಆನಂದಪಡುವ ಇನ್ನೊಂದು ರೂಪದ ದರ್ಶನವನ್ನು ಕವಿ ಮುಂದಿನ ತ್ರಿಪದಿಯಲ್ಲಿ ಮಾಡಿಸಿದ್ದಾನೆ.

ನಾ ತೂಗು ತೊಟ್ಟಿಲಿಗೆ ನಾಗಬೆತ್ತದ ನೇಣು
ನಾ ತೂಗಿ ಕಡಲ ತೆರೆತೂಗಿ। ಗೋಪಾಡಿ
ಅಮ್ಮ ತೂಗಿದಳು ಬನದಲ್ಲಿ.

ಗೋಪಾಡಿಯ ಚಿಕ್ಕುವಮ್ಮ ಭಕ್ತರನ್ನು ತೊಟ್ಟಿಲಲ್ಲಿಟ್ಟು ತೂಗುವಾಗ ತೆರೆಯು ಅದಕ್ಕೆ ಕೈಗೂಡಿಸಿ, ತೂಗುವುದೆಂದು ಕಲ್ಪಿಸಿಕೊಳ್ಳುವ ಸುಂದರ ದೃಶ್ಯ ಇಲ್ಲಿದೆ.

ಜರಿಯುವುದರ ಮೂಲಕ ಸಂತೋಷ ಹಂಚಿಕೊಳ್ಳುವ ಸಂಪ್ರದಾಯ ಮದುವೆಗಳಲ್ಲಿ ಆಚರಣೆಯಲ್ಲಿದೆ. ಬೀಗರನ್ನು ಜಲಚರ ಪ್ರಾಣಿಗಳಿಗೆ ಹೋಲಿಸಿ ಜರಿಯುವ ರೀತಿಯು ತ್ರಿಪದಿಗಳಲ್ಲಿ ತುಂಬಿಕೊಂಡಿದೆ.

ಸೀಗಡಿ ದಂಡೆ ಕಟ್ಟಿಕೊಂಡು ಕರಿಮೀನ ಕಡಕಕ್ಕಿ
ಎರವಿನ ಕುವಾಲ ತಲೆಗಿಕ್ಕಿ ಬೀಗರು
ಕೊರವರು ಬಂದವರೆ ಮದುವಿಗೆ.

ಬೀಗರು ಧರಿಸಿರುವ ವೇಷಭೂಷಣಗಳು ಸೀಗಡಿ ಕರಿಮೀನನ್ನು ಹೋಲುವುದರಿಂದ ಅವು ಕನಿಷ್ಟವಾದವು ಎಂದು ಅವರನ್ನು ಜರಿದು ಅವರ ತಾಳ್ಮೆ ಪರೀಕ್ಷಿಸುವ ಪ್ರಯತ್ನ ಇದರಲ್ಲಿದೆ.

ಒಬ್ಬ ಪುರುಷನಿಗೆ ಒಬ್ಬಳು ಹೆಂಡತಿ ಇದ್ದರೆ ಮಾತ್ರ ಅವನು ಸುಖವಾಗಿ ಬದುಕಬಲ್ಲನೆಂಬುದು ಸಾಮಾನ್ಯ ಅಭಿಪ್ರಾಯ. ಲೋಕರೂಢಿಗೆ ವಿರುದ್ಧವಾಗಿ ಇಬ್ಬರು ಹೆಂಡತಿಯರನ್ನು ಕಟ್ಟಿಕೊಂಡರೆ ಅಂತಹವನ ಸ್ಥಿತಿ ಹೇಗಿರುತ್ತದೆ ಎಂಬುದನ್ನು ಈ ತ್ರಿಪದಿ ತಿಳಿಸುತ್ತದೆ.

ಇಬ್ಬರೆಂಡರನಾದಾ ಏಡೀಯ ಮುಳ್ಳದಾ
ಕೋಡಗನಾದಾ, ಕೊರವಾದಾ ಬಾಲ್ಯಾರು
ಮಾಡಿಟ್ಟ ಸಿಂಬೆ ಅರಿವ್ಯಾದಾ.

ಏಡೀಯ ಮುಳ್ಳು, ಕೋಡಗ, ಕೊರವ ಮೀನು, ಮಾಡಿಟ್ಟ ಸಿಂಬೆ ಇವುಗಳೆಲ್ಲಾ ಸ್ವಾತಂತ್ರ್ಯ ಕಳೆದುಕೊಂಡವುಗಳು. ಏಡಿಯ ಮುಳ್ಳಿನ ಚಲನವಲನಗಳಿಗೆ ಏಡಿಯ ನಿಯಂತ್ರಣವಿರುತ್ತದೆ. ಕೋಡಗ ಅದನ್ನಾಡಿಸುವವನ ಸೆರೆಯಲ್ಲಿರುತ್ತದೆ. ಕೊರವ ಮೀನುಗಳು ಕೊಕ್ಕೆಯಲ್ಲಿ ಸಿಕ್ಕಿರುತ್ತದೆ. ಸಿಂಬೆಯ ಅರಿವೆ ತನ್ನ ಕಸುವನ್ನೆಲ್ಲಾ ಕಳೆದುಕೊಂಡು ಮುದುಡಿಕೊಂಡಿರುತ್ತದೆ. ಅದೇ ರೀತಿ ಹೆಂಡರಿಬ್ಬರ ಕೈಯಲ್ಲಿ ತನ್ನ ಕಡಿವಾಣವನ್ನು ಕೊಟ್ಟು ಆತ ಅಸಹಾಯಕನಾಗಿ ಬದುಕಬೇಕಾಗುತ್ತದೆಂಬ ವಿವರಣೆಯೊಂದಿಗೆ ಪುರುಷನನ್ನು ಏಕ ಪತ್ನಿವ್ರತಸ್ಥನಾಗಿಯೇ ಇಡುವ ಪ್ರಯತ್ನ ತ್ರಿಪದಿಯಲ್ಲಿ ನಡೆದಿದೆ.

ಗಾಳ ಮತ್ತು ಬಲೆಗಳೆರಡೂ ಮೀನನ್ನು ಸುಲಭವಾಗಿ ಸೆರೆಮಾಡಿಕೊಳ್ಳುವ ಸಾಧನಗಳು. ಇವುಗಳಿಗೆ ಸಿಕ್ಕಿದ ಮೀನು ತಪ್ಪಿಸಿಕೊಳ್ಳುವುದಂತೂ ಅಸಾಧ್ಯ. ಇದನ್ನು ಗಮನಿಸಿದ ಜನಪದ ಕವಿ ಯಾವ ಸಂದರ್ಭದಲ್ಲಿ ಅದನ್ನು ಬಳಸಿಕೊಂಡಿದ್ದಾನೆ ನೋಡಿ:

ಸೂಳೆಗೇರಿಯ ನೋಟ ಹೇಳಲಾರದ ಮಾಟ
ಗಾಳದೊಳು ಮೀನ ಸಿಕ್ಕಂತೆ। ದಿಟ ಪುರುಷ
ಸೂಳೆಯ ಬಲೆಗೆ ಸಿಗಿಬಿದ್ದು.

ಸೂಳೆಗೇರಿಯ ದೃಶ್ಯ ಪುರುಷರನ್ನು ಸೆಳೆದುಕೊಳ್ಳುವ ಮಾಟವಿದ್ದಂತೆ. ಮಾಟದಿಂದ ಮನುಷ್ಯನನ್ನು ತನ್ನ ಅಧೀನಕ್ಕೆ ತೆಗೆದುಕೊಂಡು ತನಗಿಷ್ಟಬಂದಂತೆ ಬಳಸಿಕೊಳ್ಳಲಾಗುವುದು. ಮಾಟಕ್ಕೆ ಒಳಗಾದವನು ನಾಶವಾಗುತ್ತಾ ಹೋಗುತ್ತಾನೆ. ಅದೇ ರೀತಿ ಸೂಳೆಯ ಆಕರ್ಷಣೆಗೆ ಒಳಗಾದವನು ಗಾಳಕ್ಕೆ ಸಿಕ್ಕ ಮೀನಾಗುತ್ತಾನೆ. ಈ ತ್ರಿಪದಿಯು ಸೂಳೆಯ ಸ್ನೇಹದಿಂದ ದೂರವಿರುವ ಎಚ್ಚರಿಕೆ ನೀಡುತ್ತಿದೆ. ಸೂಳೆಯ ಬಲೆಗೆ ಬಿದ್ದವನ ಸ್ಥಿತಿಯನ್ನು ಬಿಂಬಿಸುವ ಕನ್ನಡಿಯಾಗಿದೆ.

ಮೀನುಗಾರರಿಗೆ ಬಲೆಯೇ ಬಂಡವಾಳ. ಅದು ಕೈತಪ್ಪಿತೆಂದರೆ ಅವರ ದುಡಿಮೆ ದಿಕ್ಕುತಪ್ಪಿದಂತೆಯೇ

ಆದ್ದರಿಂದ ಬಲೆ ಬೀಸುವಾಗ ಅವರು ಎಚ್ಚರಿಕೆಯಿಂದ ಬೀಸುತ್ತಾರೆ. ಏಕೆಂದರೆ ಅದು ಸಮುದ್ರದೊಳಗಿನ ಕಲ್ಲಿಗೆ ಸಿಕ್ಕಿ ಹರಿದುಹೋಗಬಹುದು. ಈ ಎಚ್ಚರಿಕೆಯನ್ನು ಕವಿ ಯಾರಿಗೆ ನೀಡುತ್ತಿದ್ದಾನೆಂಬುದನ್ನು ಗಮನಿಸಿ.

ನೆಲ್ಲಿಯ ಬಲ್ಲೆನೆಂದು ಬಲಿಯ ಬೀಸಲು ಬೇಡ
ನೆಲೆತಪ್ಪಿ ಬಲಿಯಬಳಕೊಟ್ಟು - ಅಣ್ಣಯ್ಯ
ದಿಕ್ತಪ್ಪಿ ದೇಶಬಿಡಬೇಡ.

ಎಲ್ಲಿ ಬೇಕಾದರೂ ತಾನು ಬದುಕಬಲ್ಲೆ ಎಂಬ ಭ್ರಮೆಯಿಂದ ಮನೆಬಿಟ್ಟು ಹೋಗುವ ಅಣ್ಣನಿಗೆ ತಂಗಿ ಎಚ್ಚರಿಸುವ ರೀತಿ ತುಂಬಾ ಸೊಗಸಾಗಿದೆ. ತಂಗಿಗೆ ಅಣ್ಣ ಬುದ್ಧಿವಾದ ಹೇಳುವುದು ಲೋಕರೂಢಿ. ಆದರೆ ಅಣ್ಣನಿಗೆ ತಂಗಿ ಮಾರ್ಗದರ್ಶನ ಮಾಡುವ ಹಂತಕ್ಕೆ ಆತ ಮುಟ್ಟಿರುವುದರಿಂದ ಅವಳು ಲೋಕರೂಢಿಯನ್ನು ಮರೆತು ಅಣ್ಣನನ್ನು ಹಾದಿಗೆ ತರಲು ಪ್ರಯತ್ನಿಸುತ್ತಿದ್ದಾಳೆ. ಹಾದಿ ತಪ್ಪಿದವರನ್ನು ಎಚ್ಚರಿಸಲು ಹಿರಿ-ಕಿರಿಯರೆಂಬ ಭೇದ-ಭಾವನೆಯನ್ನೆಣಿಸಬಾರದೆಂಬ ಧ್ವನಿ ಇದರಲ್ಲಿದೆ. ಜಾನಪದರಿಗೆ ತನ್ನೂರೇ ದೇಶ. ಆ ದೇಶ ಬಿಟ್ಟವನು ತನ್ನೂರಿನ ಜನರ ಪ್ರೀತಿಯ ಸಂಬಂಧ ಕಳೆದುಕೊಳ್ಳುತ್ತಾನೆ. ಇಂತಹ ಪರಿಸರ ಬೇರೆ ಊರಿನಲ್ಲಿ ಸಿಗುವುದಿಲ್ಲ. ಆದ್ದರಿಂದ ಅಲ್ಲಿ ಸುಖ ಸಿಗಲು ಸಾಧ್ಯವಿಲ್ಲ ಎಂಬ ಮುನ್ನೆಚ್ಚರಿಕೆಯನ್ನು ಇಲ್ಲಿ ತಂಗಿ ಅಣ್ಣನಿಗೆ ಸೂಚಿಸುತ್ತಿದ್ದಾಳೆ.

ಪ್ರಕೃತಿ ಸೌಂದರ್ಯದ ಸವಿಯುಂಡು ನಲಿವ ಜಾನಪದರಿಗೆ ಮೂಡಣ ದಿಕ್ಕಲ್ಲಿ ಮೂಡುವ ಬೆಳಕು ಪ್ರಾಣಿ ಪಕ್ಷಿಗಳ ಚಟುವಟಿಕೆಗಳ ಪ್ರಾರಂಭಕ್ಕೆ ನಾಂದಿ ಎಂಬುದು ಗೊತ್ತು. ಬೆಳಗಿನ ಬೆಳ್ಳಿಯ ಬೆಳಕನ್ನು ಕಂಡು ನಲಿವ ಮೀನಿನ ಗುಂಪನ್ನು ಕಂಡು ಆನಂದಿಸುವ ಜನಪದ ಕವಿ ಅದನ್ನು ತ್ರಿಪದಿಯ ಮೂಲಕ ಸಹೃದಯರಿಗೂ ಉಣಬಡಿಸುವುದನ್ನು ನೋಡಿ.

ಬೆಳ್ಳಗೆ ಬೆಳಗಾಗಿ ಬೆಳ್ಳಿ ಮೂಡಲವಾಗಿ
ಒಳ್ಳೊಳ್ಳೆ ಮೀನ ಗರಿತಗಿದು। ಆಡ್ಯಾವ
ಗರತಿ ಗಂಗಮ್ಮನ ಉಡಿಯಾಗ।

ಸಮುದ್ರದ ಉಪ್ಪು ಊಟದ ರುಚಿಯನ್ನು ಕಾಪಾಡುವಂತಹದು. ಅಂತಹ ಉಪ್ಪಿಲ್ಲದ ಊಟದ ಬಗ್ಗೆ ವ್ಯಕ್ತಗೊಳ್ಳುವ ಭಾವನೆ ನೋಡಿ.

ಉಪ್ಪಿಲ್ಲದೂಟವೆ ಒಪ್ಪತ್ತು ಉಣಲಾರೆ
ಉದ್ದಿಲ್ಲದ ಸೀರೆ ಉಡಲಾರೆ - ಅಪ್ಪಯ್ಯ
ತಪ್ಪಿಲ್ಲದೆ ಕಾಲನ ಹಿಡಿಲಾರೆ.

ಉಡುವ ಸೀರೆ ಮಾನರಕ್ಷಣೆಯ ವಸ್ತ್ರಮಾತ್ರವಲ್ಲ. ಅದು ಉಟ್ಟವರ ಸೌಂದರ್ಯವನ್ನು ಹೆಚ್ಚಿಸುವಂತಿರಬೇಕು. ಊಟಕ್ಕೆ ಸಮುದ್ರದ ಉಪ್ಪು ಹೇಗೆ ರುಚಿ ತುಂಬುತ್ತದೆಯೋ ಅದೇರೀತಿ ಸ್ತ್ರೀಯ ಉದ್ದಳತೆಗೆ ತಕ್ಕ ಸೀರೆ ಅವಳ

ಸೌಂದರ್ಯಕ್ಕೆ ಮೆರಗುಕೊಡಬಲ್ಲದು. ಇದನ್ನರಿತ ಜನಪದ ಕವಿಯತ್ರಿ ತನಗೆ ಎಂತಹ ಸೀರೆಬೇಕೆಂಬುದನ್ನು ತಂದೆಗೆ ಸೂಚಿಸುತ್ತಿರುವ ಬಗೆ ಮೆಚ್ಚುವಂತಹದು. ಜನಪದರು ರುಚಿಯಿಲ್ಲದ ಊಟವನ್ನು ಒಪ್ಪತ್ತೂ ಉಣ್ಣುವವರಲ್ಲ. ಹೊಟ್ಟೆಗೆ ರುಚಿಯಾದ ಊಟ ಹೇಗೆ ಮುಖ್ಯವೋ ಅದೇರೀತಿ ದೇಹಕ್ಕೆ ಸರಿಹೊಂದುವಂತಹ ಬಟ್ಟೆ ಸಹ ಅಷ್ಟೇಮುಖ್ಯ. ಸ್ವಾಭಿಮಾನಕ್ಕಾಗಿ ಬದುಕುವ ಅವರು ತಪ್ಪಿಲ್ಲದೆ ಬೇರೆಯವರಿಗೆ ಎಂದೂ ತಲೆಬಾಗುವವರಲ್ಲ. ಈ ತ್ರಿಪದಿಯು ಅವರ ಗುಣಲಕ್ಷಣಗಳನ್ನು ಪರಿಚಯಿಸುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯವರ ಕಡಲ ದೈವ ಬೊಬ್ಬರ್ಯ. ಮುಸ್ಲಿಮ್ಮನಾದ ಬೊಬ್ಬರ್ಯ ಹಿಂದೂಗಳ ಆರಾಧ್ಯ ದೈವನಾದದ್ದು ಅವನಲ್ಲಿರುವ ರಕ್ಷಣಾ ಶಕ್ತಿಯಿಂದ. ಇಂತಹ ದೈವನ ಯೋಗಕ್ಷೇಮವನ್ನು ವಿಚಾರಿಸಿಕೊಳ್ಳುತ್ತಿರುವ ಬಗೆ ಹೇಗೆ ವ್ಯಕ್ತಗೊಂಡಿದೆ ಎಂಬುದನ್ನು ಗಮನಿಸಬಹುದು.

ಏಳು ಸಂದ್ರದ ತುದಿಯಲ್ಲಿನ ಕೀಳು ಸಂದ್ರದಲ್ಲಿ
ಹ್ಯಾಗಿದ್ರಿ ಬಬ್ಬರ್ಯ ಹಿಮದಲ್ಲಿ ಒಳಗಿರುವೆಯಾ
ಏಳು ಬಾಗಿಲ ಬೀಗ ಜಡಿದೂ.

ಸಮುದ್ರಗಳಲ್ಲಿ ಮೇಲು ಸಮುದ್ರ ಮತ್ತು ಕೀಳು ಸಮುದ್ರವೆಂದು ವಿಂಗಡಿಸಿ ನೋಡುವ ಜನಪದರು ಅದರಲ್ಲಿ ವಾಸಿಸುವ ಬೊಬ್ಬರ್ಯನು ಹಿಮದ ಚಳಿಯಿಂದ ರಕ್ಷಿಸಲ್ಪಟ್ಟಿರಬಹುದೇ ಎಂದು ವಿಚಾರಿಸಿಕೊಳ್ಳುವ ಭಕ್ತನ ಕಾತುರತೆ ಇಲ್ಲಿ ವ್ಯಕ್ತಗೊಂಡಿದೆ. ಅಲ್ಲದೆ ದೇವರು ಭಕ್ತರ ಯೋಗ-ಕ್ಷೇಮ ವಿಚಾರಿಸುವ ಸಂಪ್ರದಾಯವು ಇಲ್ಲಿ ಅದು ವಿರುದ್ಧವಾಗಿದೆ.

ನಾವಿಕರಿಗೆ ಹಡಗು ನಡೆಸುವುದು ವೃತ್ತಿಯಾಗಿದ್ದರೂ ಆ ವೃತ್ತಿಯಲ್ಲೇ ಆಟದ ಆನಂದವನ್ನು ಅನುಭವಿಸುವುದನ್ನು ಹಾಡುಗಾರ್ತಿ ಅಭಿವ್ಯಕ್ತಿ ಪಡಿಸಿರುವ ಬಗೆಯನ್ನು ಗಮನಿಸಬಹುದು.

ಹಡಗು ದುಡಕಂಡ ನಡು ಸಮುದ್ರಕೋಗ್ವಾಗ
ಬಿಡುಮಡದಿ ನಿನ್ನ ವೈರತ - ನಾನೀಗ
ಕಡಲಾಟಿಕೋಗಿ ಬರುತ್ತೇನೆ.

ನಡು ಸಮುದ್ರಕ್ಕೆ ಹೋಗಿ ದುಡಿದರೂ ದಣಿಯದ ಅಂಬಿರಲ್ಲಿರುವ ಉತ್ಸಾಹದ ಅರಿವು ಈ ತ್ರಿಪದಿಯಿಂದಾಗುತ್ತದೆ. ನಡು ಸಮುದ್ರಕ್ಕೆ ಹೋಗುವಾಗ ವೈರತ್ವವಿರಬಾರದೆಂಬ ನಂಬಿಕೆಯ ಹಿಂದೆ ಸಾಗರಕ್ಕೆ ಹೋದವನು, ಮರಳಿ ಬರುವನೋ ಇಲ್ಲವೋ ಎಂಬ ಸಂಶಯ ವ್ಯಕ್ತಗೊಂಡಿದೆ. ಆದ್ದರಿಂದಲೇ ದ್ವೇಷದಿಂದ ದೂರವಿರಲು ಆತ ಮಡದಿಗೆ ಉಪದೇಶಿಸುತ್ತಾನೆ. ಸಮುದ್ರದಲ್ಲಿ ಮೀನು ಹಿಡಿಯುವ ವೃತ್ತಿಯು ಸಾಹಸಮಯವಾದದ್ದು.

ಜನಪದರು ಶ್ರಮದ ದುಡಿಮೆಯನ್ನು ಕಡಲಾಟವೆಂದು ಭಾವಿಸಿರುವುದರಲ್ಲಿ ಅವರಿಗೆ ಮೀನು ಹಿಡಿಯುವುದು ಒಂದು ಆಟವಾಗಿದ್ದು, ಮೀನು ಹೆಚ್ಚು ಸಿಕ್ಕಿದರೆ ಅದರಿಂದ ಅವರಿಗೆ ಸಂತೋಷವೂ, ಸಿಗದಿದ್ದರೆ ಆಟದಲ್ಲಿ ಸೋತ ಅನುಭವವು ಆಗುತ್ತದೆ ಎಂಬ ಅರ್ಥವಿದೆ.

ಕಡಲಿಗಿಳಿದ ನಂತರ ಹಲವು ಬಗೆಯ ಅಡ್ಡಿ ಆತಂಕಗಳಿಗೆ ಎದೆ ಒಡ್ಡುವ ಪ್ರಸಂಗಗಳು ಬರುತ್ತವೆ. ಅಂತಹ ವಿಘ್ನಗಳನ್ನು ಮನೆಯಲ್ಲಿದ್ದೇ ದೂರಮಾಡುವ ಹೆಣ್ಣಿನ ಪ್ರಯತ್ನವನ್ನು ಈ ಸಾಲುಗಳು ತಿಳಿಸುತ್ತವೆ.

ವಾಲಗ ವಜ್ಜುರ ಕೊಡುವೆ ವಾಲಗ ಮುತ್ತನು ಕೊಡ್ವೆ
ಗೋವಿಗೋದಡುಗ ತಡಿಬೇಡ

ಮೀನು ಹಿಡಿಯಲು ಹೋದ ತನ್ನ ಪತಿಯ ಹಡಗನ್ನು ತಡೆದು ಈ ದುಡಿಮೆಗೆ ಅಡ್ಡಿಮಾಡದೇ ಇದ್ದರೆ ದೇವರಿಗೆ ಹರಕೆ ಸಲ್ಲಿಸಲು ಬಯಸುವ ಹೆಣ್ಣಿನ ಭಕ್ತಿ-ಭಾವನೆಯನ್ನು ಕವಿ ಇದರಲ್ಲಿ ಪರಿಚಯಿಸಿದ್ದಾನೆ.

ಮಳೆ ಬಿದ್ದು ಕೆರೆ-ಕಟ್ಟೆಗಳೆಲ್ಲಾ ತುಂಬಿ ಹಡಗು ಚಲಿಸುವ ಸುಂದರ ದೃಶ್ಯದ ಪ್ರತಿಬಿಂಬ ಈ ತ್ರಿಪದಿಯಲ್ಲಿರುವುದನ್ನು ನೋಡಬಹುದು.

ಸಕಲಾತಿ ಮಳೆ ಹೊಯ್ದಿ ಸೀತಾಳಿ ಕೆರೆತುಂಬಿ
ಜ್ಯೋತಿಯ ತಮ್ಮಯ್ಯನ ಹಡಗೆದ್ದು ಹೋಗ್ವಾಗೆ
ಸಾತೇ ಮಾಡಿಸುವೆ ಸಭಿ ಕೂಡೆ.

ಮಗನ ಹಡಗು ಸಂಚರಿಸುವುದನ್ನು ಕಂಡು ಆನಂದ ಪಡಲು ಬಯಸುವ ತಾಯಿ, ಅವನ ಆಸೆಯ ಈಡೇರಿಕೆಗೆ ಹರಕೆ ಹೊರುವ ಸಂಪ್ರದಾಯದ ಆಚರಣೆಯಲ್ಲಿ ತೊಡಗಿರುವುದು ಮತ್ತು ಮಗನ ಸುಖವನ್ನು ತನ್ನ ಮನದಲ್ಲಿ ಕಲ್ಪಿಸಿಕೊಳ್ಳುವುದನ್ನು ಈ ತ್ರಿಪದಿ ಬಿಂಬಿಸುತ್ತದೆ. ಹಡಗಿನ ಓಡಾಟ ಸಮುದ್ರದಲ್ಲಿ ಮಾತ್ರ. ಆದರೆ ತ್ರಿಪದಿಯ ಕವಿ ಹಡಗನ್ನು ಸೀತಾಳಿ ಕೆರೆಯಲ್ಲಿ ಸಂಚರಿಸುವುದನ್ನು ಕಾಣಲು ಬಯಸುವುದನ್ನು ಗಮನಿಸಿದರೆ, ಕವಿಗೆ ಸಮುದ್ರದ ಪರಿಚಯವಿಲ್ಲದ್ದು ತಿಳಿಯುತ್ತದೆ. ಕೆರೆಯಲ್ಲಿ ಸಮುದ್ರವನ್ನು ಕಾಣುತ್ತಿರುವುದರಿಂದ ಕವಿ ಅದರಲ್ಲಿ ಹಡಗನ್ನು ನಡೆಸಿದ್ದಾನೆ. ಎಷ್ಟೋ ಕವಿಗಳು ಸಮುದ್ರವನ್ನು ಕಾಣದೇ ಇರುವುದರಿಂದ ಕಾವ್ಯದಲ್ಲಿ ಇಂತಹ ತಪ್ಪಿಗೆ ಎಡೆ ಮಾಡಿದ್ದಾರೆ.

ಮುತ್ತಿನ ಬಗ್ಗೆ ಜನಪದರಲ್ಲಿ ಇರುವ ನಂಬಿಕೆ, ಗೌರವ ಮೊದಲಾದವು ಅವರ ತ್ರಿಪದಿಗಳಲ್ಲಿ ವ್ಯಕ್ತಗೊಂಡಿದೆ. ಸ್ವಾತಿ ಮಳೆಯಲ್ಲಿ ಬಿದ್ದ ಹನಿ ಕಪ್ಪೆಚಿಪ್ಪಿನಲ್ಲಿ ನಿಂತರೆ ಅದು ಮುತ್ತಾಗುತ್ತದೆ ಎಂದು ಹೇಳುವ ಜನಪದರು ನವರತ್ನದ ಮುತ್ತುಗಳನ್ನು ಕನಸಲ್ಲಿ ಕಂಡರೆ ಸಂತಾನಲಾಭವೆಂದು ನಂಬುತ್ತಾರೆ. ಅವರ ಗೀತೆಗಳಲ್ಲಿ ಅಂತಹ ಮುತ್ತಿನ ರಾಶಿಯನ್ನೇ ಕಾಣಬಹುದು.

'ಹೊಸ್ತು' ಹಬ್ಬದಲ್ಲಿ ಮನೆ ಯಜಮಾನ ತನ್ನ ಗದ್ದೆಗೆ ಹೋಗಿ ಭತ್ತದ ತೆನೆಗಳನ್ನು ಕೊಯ್ದು "ಕದಿರು" ತರುತ್ತಾನೆ. ಆ "ಕದಿರ"ನ್ನು ಕುಟ್ಟಿ ಅಕ್ಕಿಯೊಡನೆ ಮಿಶ್ರಣ ಮಾಡಿ ಅನ್ನ, ಪಾಯಸ ಮೊದಲಾದವನ್ನು ಹೊಸಧಾನ್ಯದಿಂದ ತಯಾರಿಸುತ್ತಾರೆ. ★"ಕದಿರನ್ನು" ಮನೆ ಬಾಗಿಲ ತೋರಣದ ಎರಡೂ ಬದಿಗೂ ಕಟ್ಟುತ್ತಾರೆ. ಇಂತಹ ಮಹತ್ವ ಸ್ಥಾನ ಪಡೆದ "ಕದಿರನ್ನು" ತರಲು ಹೋಗುವ ಯಜಮಾನನ ವೇಷಭೂಷಣಗಳು ಮುತ್ತಿನಿಂದ ತಯಾರಿಸಿದಂತಹವು. (ಕದಿರು ಎಂದರೆ ಭತ್ತದ ತೆನೆ)

ಮುತ್ತಿನೊಂಟಿಯನಿಟ್ಟ ಮುತ್ತಿನ ಹಾರ ತೊಟ್ಟು
ಮುತ್ತು ರುಮಾಲು ತಲೆಗಿಟ್ಟ। ನಮ್ಮಣ್ಣ
ಮುತ್ತಿನಂಥ ಕದಿರ ತರಲ್ಹೋದ

ಈ ತ್ರಿಪದಿಯಲ್ಲಿ "ಮುತ್ತಿಗೆ" ಶ್ರೇಷ್ಠವೆಂಬ ಅರ್ಥವನ್ನು ಕೊಡಲಾಗಿದೆ. ಅವನ ಉಡುಗೆ ತೊಡುಗೆಗಳೆಲ್ಲಾ ಶ್ರೇಷ್ಠವಾಗಿದ್ದವೆಂಬುದನ್ನು ಕವಿ ಮುತ್ತಿನ ಹೋಲಿಕೆಯ ಮೂಲಕ ತಿಳಿಸುತ್ತಿದ್ದಾನೆ.

ಹೆತ್ತವಳು ಮಗಳನ್ನು ಮದುವೆ ಮಾಡಿ ಪರರ ಮನೆಗೆ ಕೊಡುವಾಗ ತನ್ನ ಮಗಳನ್ನು ಮುತ್ತಿಗೆ ಹೋಲಿಸಿ ವರ್ಣಿಸಲಾಗಿದೆ.

ಕತ್ತಿನ ಮುತ್ತು ಕಿತ್ತು ದಾನ ಮಾಡಿ
ಹೆತ್ತೈಲ್ಲ ತಾಯಿ ನೆರೆಹೊರೆಗೆ ಹೆಣ್ಮಗಳ
ಕೊಟ್ಟ ಮೇಲ್ಯಾಕೆ ಸುಖದುಃಖ

ಮುತ್ತನ್ನು ಬಹಳ ಎಚ್ಚರಿಕೆಯಿಂದ ರಕ್ಷಿಸಬೇಕು ಅದು ಕೆಳಗೆ ಬಿದ್ದರೆ ಹೋಯಿತು. ಅದೇ ರೀತಿ ಹೆಣ್ಣೊಬ್ಬಳು ತಾಯಿ ತನ್ನನ್ನು ಸಾಕಿರುವುದನ್ನು ಸರ ಮುತ್ತಿಗೆ ಹೋಲಿಕೆ ಮಾಡಿ ತವರಲ್ಲಿ ತನ್ನ ಸ್ಥಾನಮಾನದ ಪರಿಚಯವನ್ನು ಅತ್ತೆಗೆ ತಿಳಿಸುತ್ತಿರುವುದು ತುಂಬಾ ಅರ್ಥಪೂರ್ಣವಾಗಿದೆ.

ಅತ್ತಿಯ ಮನಿಯಾಗ ಅರವತ್ತು ಗಂಗಾಳ
ಬೆಳಗತೇನತ್ತಿ ಬೈಬ್ಯಾಡ ತವರವರು
ಸರಮುತ್ತು ಮಾಡಿ ಸಲವ್ಯಾರ.

ಮದುವೆ ಸಂದರ್ಭದಲ್ಲಿ ಹಾಡುವ ಗೀತೆಗಳಲ್ಲಿ ಮುತ್ತನ್ನು ಬಳಸದೆ ಅವರು ಇರುವುದಿಲ್ಲ. ಹೆಣ್ಣು ಕರೆತಂದು ಹಸೆಮಣೆಯ ಮೇಲೆ ಕೂಡಿಸುವಾಗಲೂ ಅವಳಿಗೆ ಮುತ್ತು ಮುಡಿಸಿ ಕೂಡಿಸಲಾಗುತ್ತದೆ. ಅದನ್ನು ಮುಂದಿನ ತ್ರಿಪದಿ ಪರಿಚಯಿಸುತ್ತದೆ.

ಕಂಚೀ ಹಣ್ಣಿನಂತಾ ಕೆಂಚೇ ಬಂದಳರಾಯಾ
ತಾವಾ ಬಿಡ ನಿನ್ನಾ ಒಡನಲ್ಲೇ। ಅತ್ತಿ ಮಗಳೆ
ಮುತ್ತಾ ಮುಡದಾಕೆ ತಲಬಾಗೇ।

★ ಕದಿರು ಎಂದರೆ ಭತ್ತದ ತೆನೆ.

'ತಾವಾ ಬಿಡ ನಿನ್ನಾ ಒಡನಲ್ಲೇ' ಎಂಬ ಮಾತಿನಲ್ಲಿ ಹೆಣ್ಣಿಗೆ ನಿನ್ನ ಜೊತೆ ಸಮಾನಸ್ಥಾನ ಕೊಟ್ಟು ಅವಳ ರಕ್ಷಣೆಯ ಭಾರ ನಿರ್ವಹಿಸು ಎಂಬ ಸೂಚನೆ ಇದೆ. "ಮುತ್ತಾ ಮುಡದಾಕೇ ತಲಬಾಗು" ಎಂಬಲ್ಲಿ ಹೆಣ್ಣು ಎಷ್ಟೇ ಐಶ್ವರ್ಯ ಹೊತ್ತು ತಂದಿದ್ದರೂ ಗಂಡಿಗೆ ವಿಧೇಯಳಾಗಿ ನಡೆಯಬೇಕೆನ್ನುವ ಉಪದೇಶವಿದೆ. ಈ ಕವಿಯಿತ್ರಿ ಹೆಣ್ಣಿಗೆ ಮುತ್ತಿನ ಹೂ ಮುಡಿಸಿರುವುದು ವಿಶೇಷವಾದುದು.

ಮದುವೆ ಮಂಟಪದಲ್ಲಿ ಮದುಮಗನಿಗೆ ಮದುಮಗಳನ್ನು ಒಪ್ಪಿಸುವ ಪೂರ್ವದಲ್ಲಿ ಆತನ ಸಂಬಂಧಿಕರಿಗೆಲ್ಲಾ ಉಡುಗೊರೆ ಕೊಡುವ ಸಂಪ್ರದಾಯವಿದೆ. ಅದರ ನಂತರ ಹೆಣ್ಣಿನೊಡನೆ ಬಳುವಳಿ ಅರ್ಪಿಸಲಾಗುತ್ತದೆ. ಆ ಸಂದರ್ಭದಲ್ಲಿ ಹಾಡಿನಲ್ಲಿ ಮುತ್ತನ್ನು ಕವಿ ಬಳಸಿಕೊಂಡಿರುವುದನ್ನು ಗಮನಿಸಬಹುದು.

ಏಗೇ ನನ್ನಮ್ಮಗೆ ಯಾತರಾ ಬಳುವಳೇ
ಅಪ್ಪೋಜೆ ಮೊಕತುಳವಾ ಕೊರಗಿಂಡೇ। ಕೊಟ್ಹೊರ್ತು
ಮುತ್ತಿನ ಬಾಗಲವಾ ಗಳಿಯಾಳ।

ಗುತ್ತಿನಾಹ್ಹಕ್ಕಲ್ಲಿ ಹೊಕ್ಕಿ ಮೇವಾ ಎಮ್ಮೆ
ಮಿತ್ರೇ ತಂಗೆವ್ವ ತನಗೆಂಬೊ। ಅವ್ವಪ್ಪ
ಮುತ್ತೀನಾ ಹಗ್ಗದಲಿ ಹೊಡಕೊಟ್ಟ.

ಮದುಮಗಳು ತನ್ನ ತವರನ್ನು ಬಿಟ್ಟು ಪತಿಯ ಮನೆ ಸೇರುವಾಗ ಅವಳೊಂದಿಗೆ ಬಳುವಳಿಯ ವಸ್ತುಗಳನ್ನು ತಂದೆ ಕಳುಹಿಸುವುದು ಸಂಪ್ರದಾಯ. ಆದರೆ ಮದುಮಗಳು ತನಗಿಷ್ಟವಾದುದನ್ನು ತಂದೆಯಿಂದ ಕೇಳಿ ಪಡೆಯುತ್ತಿರುವುದು ಈ ತ್ರಿಪದಿಗಳಲ್ಲಿ ಕಾಣುತ್ತದೆ. ಅದರಲ್ಲೂ ಆಕೆ ಬಯಸುವುದು ಅಪ್ಪನ ನೆನಪನ್ನು ಸದಾ ಹಸಿರಾಗಿಡಲು ನೆರವಾಗುವಂತಹ ಆತನು ಮುಖ ತೊಳೆಯಲು ಬಳಸುತ್ತಿದ್ದ ಗಿಂಡಿ ಮತ್ತು ಹಾಲ್ಕೊಡುವ ಎಮ್ಮೆಯನ್ನು. ಇವೆರಡನ್ನು ಕೊಡದಿದ್ದರೆ ತನ್ನ ಮನೆಯ ಮುತ್ತಿನ ಬಾಗಿಲನ್ನು ದಾಟುವುದಿಲ್ಲವೆಂದು ಹಟ ಹಿಡಿದ ಮಗಳ ಮನಕ್ಕೆ ಬೇಸರಗೊಳಿಸಲು ಇಷ್ಟಪಡದ ತಂದೆ ಗಿಂಡಿಯ ಜೊತೆಗೆ ಎಮ್ಮೆಗೆ ಮುತ್ತಿನ ಹಗ್ಗ ಕಟ್ಟಿ ಹೊಡೆದು ಕಳುಹಿಸುತ್ತಾನೆ. ಜನಪದ ಕವಿ 'ಮುತ್ತು' ಎಂಬ ಶಬ್ದವನ್ನು ತನಗೆ ಶ್ರೇಷ್ಠವಾದುದನ್ನು ಪರಿಚಯಿಸಲು ಬಳಸುತ್ತಾನೆ.

ಪತಿಯ ಮನೆಸೇರಿದ ಹೆಣ್ಣಿನಿಂದ ಮಾಡಿಸುವ ಕೆಲಸದಲ್ಲೂ ಮುತ್ತು ಸುರಿದಿರುವುದನ್ನು ಗಮನಿಸಬಹುದು.

ಉತ್ತುಮ್ಮಾ ಮಗಳೇ ಮುತ್ತಿ ಜೋಗುಳಿಗ್ಹೊಯ್ಯೇ
ಸೊಕಾಡುತ ಬಾರೇ ಬಯಲಲ್ಲೇ। ಬಾವಿಕೇರಿ
ಮುತ್ತು ರಾಜಣವೇ ಬಳಿಯಲೆ।

ಹಾಡುಗಾರ್ತಿಗೆ ಗದ್ದೆಯಲ್ಲಿ ಬೆಳೆದ ಧಾನ್ಯವು ಮುತ್ತಿಗೆ ಸಮಾನ. ಅದು ಸೊಗಸಾಗಿ ಬೆಳೆದರೆ ಎಲ್ಲಿಲ್ಲದ ಸಂತೋಷ.

ಆ ಸಂತೋಷದಲ್ಲಿ ವಧುವಿಗೆ ಮಡಿಲು ತುಂಬುವ ಅಕ್ಕಿ ಸಹ ಮುತ್ತಾಗಿ ಕಾಣುತ್ತಿದೆ. ಆ ಮುತ್ತನ್ನು ಗದ್ದೆಯಲ್ಲಿ ಎರಚುತ್ತಾ ಬರಲು ಆಹ್ವಾನಿಸಲಾಗಿದೆ. ಹೆಣ್ಣು ಗಂಡನ ಮನೆಗೆ ಕೇವಲ ಸ್ತ್ರೀಯಾಗಿ ಬರುವವಳಲ್ಲ. ಅವಳು ಮನೆ ಅಭಿವೃದ್ಧಿಗೊಳಿಸುವ ದೇವತೆಯಾಗಿ ಬರಬೇಕೆಂದು ಜನಪದರು ನಿರೀಕ್ಷಿಸುತ್ತಾರೆ. ಸಂತಾನ ಲಕ್ಷ್ಮೀಯಾಗಿ, ಭಾಗ್ಯಲಕ್ಷ್ಮೀಯಾಗಿ ಮನೆ ಬೆಳಗಿಸಬೇಕೆಂದು ಪತಿಯ ಕಡೆಯವರು ಬಯಸುತ್ತಾರೆ. ಆದ್ದರಿಂದಲೇ ಅಭಿವೃದ್ಧಿಯನ್ನು ಸಾಂಕೇತಿಸುವ ಅರ್ಥದಲ್ಲಿ ಮುತ್ತನ್ನು ಕವಿ ಇಲ್ಲಿ ಬಳಸಿದ್ದಾನೆ.

ಪತಿಯ ಮನೆಯಲ್ಲಿ ಎಷ್ಟೇ ಸುಖವಾಗಿದ್ದರೂ ತವರಿಗೆ ಹೋಗುವುದೆಂದರೆ ಹೆಣ್ಣಿಗೆ ಎಲ್ಲಿಲ್ಲದ ಸಂತೋಷ. ತನ್ನನ್ನು ಕರೆಯಲು ತಮ್ಮ ಬರಬಹುದೆಂದು ತಿಳಿದು ಅವಳು ಮುತ್ತಿನ ಏಣಿಯನ್ನು ಹತ್ತಿನೋಡುವ ತವಕವನ್ನು ಈ ತ್ರಿಪದಿ ತಿಳಿಸುತ್ತದೆ.

ಮಿತ್ತೀನಾ ಒಳಗೆ ಮುತ್ತಿನೇಣೀ ಚಾಚೇ
ಹತ್ತೆ ನೋಡಾಳೆ ತವ್ರೂರಾ ಬಯ್ಲಲ್ಲೇ
ಉತ್ತುಮ್ ತಮ್ಮಯ್ಯ ಬರುವಾದಾ.

ಯಮರಾಜ ತನ್ನ ಮುತ್ತೈದೆತನವನ್ನು ಕಸಿದುಕೊಂಡಾಗ ಹೆಣ್ಣು ಆತನ ಮನದ ತಂತಿ ಮೀಟುವ ಸಂದರ್ಭದಲ್ಲೂ ಮುತ್ತನ್ನು ಅವಳು ಮರೆಯುವುದಿಲ್ಲ.

ಉತ್ತುಮ್ರ ಹೊಟ್ಟೀಲುಟ್ಟೀ ಮುತ್ತೀನಾ ಸರ್ವಾದೆ
ಮುತ್ತ ತರ್ಲ್ಲಾದೆ ರಾಯರ।ಪುಣ್ಯಾಂದೇ
ಮುತ್ತನಾ ಕೆಂದನಿಯಾ ಮುಡ್ಡದೆ।ಯಮರಾಯ
ಎತ್ತಾಗಿಂದ್ ಬಂದೇ ಕಸ್ಕಂಡೆ.

ಕ.ರಾ. ಕೃ ರವರ "ಬರಗೂರು ವೀರಮ್ಮ" ಎಂಬ ಸಂಗ್ರಹದಲ್ಲಿ ಬರಗೂರು ವೀರಮ್ಮ ವಿಧವೆಯಾದಾಗ ಅವಳ ಪರವಾಗಿ ತೌರೂರಿಗೆ "ವೀರ ಓಲೆ" ಬರೆಸಿ ಶುಭಮಂಗಳ ಸಾಮಗ್ರಿಗಳನ್ನು ತರುವಂತೆ ಕರೆಕೊಡುತ್ತಾರೆ. ಆ ಸಾಮಗ್ರಿಗಳಲ್ಲಿ ಮುತ್ತಿನ ಬಟ್ಟು ಸಹ ಒಂದು.

ಮೂರು ಚಿಂತಾಕು, ಅರಿಷಿಣಕಂಬೀಸೀರೆ
ಮಡಿಲಕ್ಕಿ ಮುತ್ತಿನ ಬಟ್ಟ
(ಅ)ಹರಸೆ ತೌರೋರು ತರಹೇಳಿ.

ಜನಪದರು ಯಾವುದನ್ನು ಶ್ರೇಷ್ಠವೆಂದು ಭಾವಿಸುವರೊ ಅವೆಲ್ಲಾ ಅವರ ದೃಷ್ಟಿಯಲ್ಲಿ ಮುತ್ತೇ ಆಗಿರುತ್ತದೆ. 'ಉಡಿ ತುಂಬುವ' ಸಂಪ್ರದಾಯದಲ್ಲಿ ಬಳಸುವ ಅಕ್ಕಿಗೆ ಅವರು ಹೆಚ್ಚು ಮಹತ್ವ ಕೊಡುತ್ತಾರೆ. ಅದು ಸಾಮಾನ್ಯ ಅಕ್ಕಿಯಲ್ಲ "ಮುತ್ತಿನ ಉಡಿಯಕ್ಕಿ" ಎಂಬುದನ್ನು ಈ ತ್ರಿಪದಿಯ ಮೂಲಕ ತಿಳಿಸಲಾಗಿದೆ.

ಮುತ್ತಿನ ಉಡಿಯಕ್ಕಿ ಎತ್ತಿ ಉಡಿಯನು ತುಂಬಿ
ಮುತ್ತೈದೆರಾರೂತಿ ಬೆಳಗ್ಯಾರ। ಕೋ॥ ತವರೂರು -
ಅತ್ತು ಕರೆದರೂ ಸಿಗದಾವ.

ಮದುಮಗನು ಮದುವೆ ಸಮಾರಂಭದಲ್ಲಿ ಶ್ರೇಷ್ಠ ವ್ಯಕ್ತಿ. ಆತನು ಬಳಸುವ ಪ್ರತಿಯೊಂದು ವಸ್ತುವೂ ಶ್ರೇಷ್ಠವೇ ಆಗಿರುತ್ತದೆಂದು ಭಾವಿಸುವ ಜನಪದ ಕವಿಯು ಅದನ್ನು ಮುತ್ತಿನ ಮೂಲಕ ವ್ಯಕ್ತಪಡಿಸಿದ್ದಾನೆ.

ಮುನ್ನೂರ ಕುದುರಿಗೆ ಹೊನ್ನ ಮುತ್ತಿನ ಥಡಿಯು
ಚಿನ್ನದ ಕಡಿವಾಣ ಬಾಯಾಗ। ಓ॥ ಕೈ ಹಗ್ಗ
ಸಣ್ಣ ಮುತ್ತಿನ ಸರವಾಗಿ

ರಾಜಗೊಂಡೆ ಧರಿಸಿ ಅಬತಗಿರಿಯ ಹಿಡಿಸಿ
ಮುತ್ತಿನ ಸತ್ತರಿಗಿ ಹಿಡಿದಾರ। ಓ॥ ಕಣಗಟ್ಟಿ
ಮೋಜಿನ ಕಾಳಿಯ ಊದ್ಯಾರ.

ಜನಪದ ಕವಿಗೆ ಮಾತ್ರ ಮುತ್ತು ಪ್ರಿಯವೆಂದಲ್ಲ. ಕವಿಯ ದೇವರಿಗೂ ಅದು ಹೆಚ್ಚು ಇಷ್ಟ ಆದ್ದರಿಂದಲೇ ದೇವರು ಹಿಡಿದ ಬೀಸಣಿಗೆ ದೇವಾಲಯದ ಬಾಗಿಲೆಲ್ಲಾ ಮುತ್ತಿನದೇ ಆಗಿರುವುದು.

ಹೊತ್ತು ಮುಳುಗಿದರೇನ, ಕತ್ತಲಾದರು ಏನ
ತಪ್ಪದಲಿ ಗುಡಿಗೆ ಬರುವೇನು ಸಂಗಯ್ಯ
ಮುತ್ತಿನ ಬಾಗಿಲ ತೆಗೆದೀರೋ.

ಗುಡ್ಡದ ಮಲ್ಲಯ್ನ ಗುಡಿಯೆಲ್ಲ ಬಂಗಾರ
ಹಾಸಿಗೆಲ್ಲು ಹವಳಾವು। ಮಲ್ಲಯ್ನ
ಬೀಸಣಿಕೆಗೆಲ್ಲ ಬಿಡಿಮುತ್ತು.

ಜನಪದರ ಬದುಕಿನಲ್ಲಿ ಮುತ್ತಿಗೆ ಹೆಚ್ಚು ಮಹತ್ವ. ತಾವು ಮೆಚ್ಚಿಕೊಂಡ ವಸ್ತುವಿಗೆಲ್ಲ ಅವರು ಮುತ್ತನ್ನೇ ಬಳಸುತ್ತಾರೆ. ಅವರಿಗೆ ಬೆಲೆಬಾಳುವ ವಸ್ತುಗಳಲ್ಲೆಲ್ಲಾ ಮುತ್ತೇ ಶ್ರೇಷ್ಠ.

ಸಮಾಜದಲ್ಲಿ ಮೀನು ತಿನ್ನುವವರನ್ನು ಮತ್ತು ಮೀನು ಹಿಡಿವ ವೃತ್ತಿ ಮಾಡುವವರನ್ನು ಕೆಳವರ್ಗದವರೆಂದು ಭಾವಿಸುತ್ತಾರೆ. ಇವರು ಮೇಲ್ವರ್ಗದವರ ದೃಷ್ಟಿಯಲ್ಲಿ ಅಸ್ಪೃಶ್ಯರು. ಇಂತಹವರಿಗೆ ಒಲಿದ ಮೇಲ್ವರ್ಗದ ಹೆಣ್ಣಿನ ಬಗ್ಗೆ ಕನಿಕರ ವ್ಯಕ್ತಪಡಿಸಿರುವುದನ್ನು ಗಮನಿಸಬಹುದು.

ಜಂಬೂರಂಬೋದು ಇಂಬಳ್ಳಿ ಪಟ್ಟಣ
ಜಂಬೂರ್ಧಾರುವರ ಮಗಳೇನೆ। ಉಡುಸಲವ್ವ
ನೀ ಮೀನ ಮಾರೊನಿಗೆ ಒಲಿದೇನೆ.

ಜನಪದರಲ್ಲಿ ಹುಡುಗ ಹುಡುಗಿ ಒಪ್ಪಿ ಮದುವೆಯಾಗುವುದು ಅಪರಾಧ. ಅದರಲ್ಲೂ ಅಂತರ್ಜಾತಿ ವಿವಾಹಕ್ಕೆ ಅಲ್ಲಿ ಆಸ್ಪದವೇ ಇಲ್ಲ. ಹೀಗಿರುವಾಗ ಸಂಪ್ರದಾಯದ ಸಂಕೋಲೆಯನ್ನು ಮುರಿದು ಮೇಲ್ಜಾತಿಯ ಹೆಣ್ಣು ಕೆಳಜಾತಿಯವನಿಗೆ ಒಲಿದಿರುವುದನ್ನು ಜನಪದ ಸಮಾಜ ಸಹಿಸದು. ಅದರ ಇಣುಕುನೋಟ ಈ ತ್ರಿಪದಿಯಲ್ಲಿದೆ.

ಅಂಬಿಗರ ಕೆಲಸ ಎಲ್ಲರಿಗೂ ಚಿರಪರಿಚಿತ. ಆದರೆ ಅವನು ತನ್ನ ಕೆಲಸದಲ್ಲಿ ಬಳಸುವ ಬಲೆಯ ವಿಧಗಳು ಅವನಿಗೆ ಮಾತ್ರಗೊತ್ತಿರುವುದರಿಂದ ಅವುಗಳನ್ನು ಹಾಡುಗಾರ ತನ್ನ ಹಾಡಿನ ಮೂಲಕ ಪರಿಚಯಿಸಿರುವುದು ಈ ತ್ರಿಪದಿಗಳಲ್ಲಿ ಕಾಣಬಹುದು.

ಅಣ್ಣ ಅಂಬಿಗುರಣ್ಣ ತುಪ್ಪ ಬಾನವನುಂಡು
ಮುತ್ತಿನ ಬಲಿಯ ಹೆಗಲೇರಿ। ಅಂಬಿಗರಣ್ಣ
ಹೋದಾನೆ ಕಾವೇರಿ ಹೊಳಿಗಂಡು

ಹಾಸು ಬಲಿಯ ಹಾಸೀದ, ಬೀಸು ಬಲಿಯ ಬೀಸೀದ
ಎಳಿಬಲಿನ್ಹಾಕಿ ಎಳುದಾನೆ
ಎಳಿ ಬಲಿನ್ಹಾಕಿ ಎಳುದಾನಂಬಿಗರಣ್ಣ
ಬಂದಾಳೆ ಗಂಗಮ್ಮ ದಡಗಂಡು.

ಅಂಬಿಗನಿಗೆ ಬಲೆಯೇ ಬಂಡವಾಳ, ಅದರಲ್ಲಿ ಹಲವು ವಿಧಗಳಿವೆ. ಇಲ್ಲಿ ಹಾಸು ಬಲೆ, ಬೀಸುಬಲೆ, ಎಳೆವ ಬಲೆಗಳ ವಿಧಗಳನ್ನು ಮಾತ್ರ ತಿಳಿಸಲಾಗಿದೆ. ಸಂದರ್ಭಕ್ಕೆ ತಕ್ಕಹಾಗೆ ಈ ಬಲೆಗಳನ್ನು ಬಳಸಲಾಗುತ್ತದೆ. ಬಲೆ ಬೀಸಿ ಎಳೆಯುವುದು ಬಲ ಉಳ್ಳವನಿಗೆ ಮಾತ್ರ ಸಾಧ್ಯ. ಆದ್ದರಿಂದಲೇ ಆತ ತುಪ್ಪದ ಅನ್ನವನುಂಡು ಹೊರಟಿರುವುದು.

ಭಾರವಾದ ವಸ್ತುಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸ್ಥಳಾಂತರಿಸುವಾಗ ಒಬ್ಬನ ಬಲ ಸಾಲದು. ಅಂತಹ ಸಂದರ್ಭದಲ್ಲಿ ಹಲವರ ಕೈ ಒಂದುಗೂಡಬೇಕಾಗುತ್ತದೆ. ಅದಲ್ಲೂ ಏಕಕಾಲದಲ್ಲಿ ಹಲವರ ಶಕ್ತಿ ಒಂದುಗೂಡಿದರೆ ಮಾತ್ರ ವಸ್ತು ತನ್ನ ಮೂಲಸ್ಥಾನವನ್ನು ಬಿಡಲು ಸಾಧ್ಯ. ಶಕ್ತಿಯನ್ನೆಲ್ಲ ಒಂದೆಡೆ ಕೇಂದ್ರೀಕರಿಸಲು ಸಹಾಯಕವಾಗಿ ಶಬ್ದವನ್ನು ಬಳಸಲಾಗುತ್ತದೆ. "ಹಡಗಿಗೆ" ಕಟ್ಟಿದ ಹಗ್ಗವನ್ನು ಹಿಡಿದವರು ಅದನ್ನು ಎಳೆಯುವಾಗ ಏಕಕಾಲದಲ್ಲಿ ಎಲ್ಲರ ಬಾಯಿಂದಲೂ ಒಂದೇ ಬಗೆಯ ಶಬ್ದ ಹೊರಬೀಳುತ್ತದೆ. ಆ ಸಂದರ್ಭದಲ್ಲಿ ಒಬ್ಬಾತ ಮೊದಲೊಂದು ವಾಕ್ಯ ಹೇಳುತ್ತಾನೆ. ಉಳಿದವರೆಲ್ಲಾ ಏಕಕಾಲದಲ್ಲಿ ಅದಕ್ಕೆ ಉತ್ತರವಾಗಿ "ಹೊಯ್" ಹಾಕುತ್ತಾರೆ. ಇಂತಹ ಪದಗಳಿಗೆ ಶಕ್ತಿಗೂಡಿಸುವ ಪದಗಳೆಂದು ಕರೆಯುತ್ತಾರೆ.

ಇಂತಹ ಪದಗಳಿಗೆ ಬಹು ಪ್ರಾಚೀನವಾದ ಇತಿಹಾಸವಿದೆ. ಯಂತ್ರಗಳು ಬರುವ ಮುಂಚಿತವಾಗಿ ಭಾರವಾದ ವಸ್ತುಗಳನ್ನು ಮೇಲಕ್ಕೆತ್ತಲು ಇಲ್ಲವೆ ಸ್ಥಳಾಂತರಿಸಲು ಇಂತಹ ಪದಗಳ ಬಳಕೆ ರೂಢಿಯಲ್ಲಿದ್ದುದು ತಿಳಿದು ಬರುತ್ತದೆ. ರಾಜರ ಆಳ್ವಿಕೆಯ ಕಾಲದಲ್ಲಿ ಕೋಟೆ ಕಟ್ಟಲು ದೊಡ್ಡ ದೊಡ್ಡ ಕಲ್ಲುಗಳನ್ನು ಬಳಸಲಾಗುತ್ತಿತ್ತು. ಅಂತಹ ಕಲ್ಲುಗಳನ್ನು ಮೇಲೆತ್ತಿ ಇಡಲು ಶಕ್ತಿಗೂಡಿಸುವ ಪದಗಳ ಸಹಾಯ ಅವರಿಗೆ ಅಗತ್ಯವಾಗಿತ್ತು. ಇದೇರೀತಿ ಮೀನುಗಾರರಿಗೂ ಸಹ ಈ ಪದಗಳು ಹೆಚ್ಚು ಸಹಾಯಕವಾಗಿವೆ. ಅವರ ವೃತ್ತಿಯಲ್ಲಿ ಬುದ್ಧಿಗಿಂತ ಹೆಚ್ಚಾಗಿ ಬಲಕ್ಕೆ ಹೆಚ್ಚಿನ ಮಹತ್ವವಿದೆ. ಮಳೆಗಾಲದಲ್ಲಿ ದಡಕ್ಕೆ ತಳ್ಳಿದ ದೊಡ್ಡ ಯಾಂತ್ರಿಕ ದೋಣಿಗಳನ್ನು ನೀರಿಗೆ ತಳ್ಳುವಾಗ ಮತ್ತು ಮಳೆಗಾಲ ಪ್ರಾರಂಭವಾಗುವ ಮುನ್ನ ಅದನ್ನು ದಡದ ಮೇಲೆ ತರುವಾಗ ಹಲವರ ಬಲದ ಅವಶ್ಯಕತೆ ಇದೆ. ಅಂತಹ ಸಂದರ್ಭದಲ್ಲಿ ಶಕ್ತಿಗೂಡಿಸುವ ಪದಗಳನ್ನು ಅವರು ಹಾಡುತ್ತಾರೆ. ಇದಲ್ಲದೆ ನಾಡ ದೋಣಿಗಳನ್ನು ಪ್ರತಿದಿನ ಸಂಜೆ ದಡದ ಮೇಲೆ ತರುವ ಮತ್ತು ಬೆಳಗಾಗುವುದರೊಳಗೆ ಸಮುದ್ರಕ್ಕೆ ತಳ್ಳುವ ಕೆಲಸ ಅವರ ದೈನಂದಿನ ಕೆಲಸಗಳಲ್ಲಿ ಒಂದಾಗಿದೆ. ಆ ಸಂದರ್ಭದಲ್ಲಿ ಸಹ ಅವರು ಶಕ್ತಿಗೂಡಿಸುವ ಪದಗಳ ಸಹಾಯ ಪಡೆಯುತ್ತಾರೆ. ಮೀನು ತುಂಬಿದ ದೊಡ್ಡ ಬಲೆಯನ್ನು ಮೇಲೆ ಎಳೆಯುವಾಗಲೂ ಅಂತಹ ಪದಗಳನ್ನು ಹಾಡುವುದು ಸಾಮಾನ್ಯ.

ಶಕ್ತಿ ಗೂಡಿಸುವ ಪದಗಳಲ್ಲಿ ವಸ್ತು, ಸಾಹಿತ್ಯ ಗೌಣ. ಬಾಯಿಗೆ ಬಂದ ಪದಗಳನ್ನೆಲ್ಲಾ ಒಂದುಗೂಡಿಸಿ ಹಾಡುತ್ತಾ ಹೋಗುತ್ತಾರೆ. ಆದರೆ ಒಮ್ಮೆ ಹೇಳಿದ ವಾಕ್ಯವನ್ನು ಪುನರಾವರ್ತನೆ ಮಾಡುವುದು ಬಹಳ ಅಪರೂಪ. ಒಂದು ದೃಷ್ಟಿಯಿಂದ ಅವು ಕೇವಲ ಉದ್ಗಾರಗಳೆನ್ನಬಹುದು. ನಿದರ್ಶನಕ್ಕೆ ಕೆಲವು ಶಕ್ತಿಗೂಡಿಸುವ ಪದಗಳನ್ನು ನೋಡಬಹುದು. "ಓ ಅಲಂಬೆಯಾಲಿ" ಎಂಬ ಪದ ಹಾಡುವಾಗ "ಓ ಅಲಂಬೆಯಾಲಿ" ಎಂದು ಒಬ್ಬ ಹೇಳಿದರೆ ಹಗ್ಗ ಹಿಡಿದು ಎಳೆಯುವಾಗ ಉಳಿದವರೆಲ್ಲ "ಐಲೆಯಾಲಿ" ಎಂದು ಏಕಕಾಲದಲ್ಲಿ ಧ್ವನಿಗೂಡಿಸುತ್ತಾರೆ. ಆ ಹಾಡು ಹೀಗೆ ಮುಂದುವರಿಯುತ್ತದೆ.

ಯಾಲ್ರೇ ಸಲಮಯಾಲಿ	ಐಲೆಯಾಲಿ
ದ್ರೀನ್ರೇ ಸಲಮಯಾಲಿ	- ,, -
ದಿನೋರ್ ಜಾಗೇಯಾಲಿ	- ,, -
ಕಾಬನ್ರೆ ಬಾಗೇಯಾಲಿ	- ,, -
ಕಾಬೊನ್ ಕಲ್ಲುಯಾಲಿ	- ,, -
ಕೊಲ್ಲೂರೆ ಕಾಯಯಾಲಿ	- ,, -
ಅಲ್ಲೋದ್ದಾಯಯಾಲಿ	- ,, -
ಅಲ್ಲೋಮಾನಯಾಲಿ	- ,, -
ಚಂಬೋಲಾಸಯಾಲಿ	- ,, -
ಚಂಬೊತ್ ಎಂಬರ್ ಯಾಲಿ	- ,, -
ಕಾಬೊತ್ ಬಂದರ್ ಯಾಲಿ	- ,, -
ದುನಿಯಾನ್ ಮಾರೆಯಾಲಿ	- ,, -
ದುನಿಯರೆ ಜೋರ್ ಯಾಲಿ	- ,, -



ಶಕ್ತಿಗೂಡಿಸುವ
ಪದ ಹಾಡುತ್ತಾ
ದೋಣಿಯನ್ನು
ದಡಕ್ಕೆ ಎಳೆಯು-
ತ್ತಿರುವುದು.



ಜೋರ್ ಜವಾನ್‌ಯಾಲಿ	ಐಲೆಯಾಲಿ
ಮರ್ಜಿರೆ ವಾಲಯಾಲಿ	- ,, -
ವಡುವರೆ ಸಾಲಯಾಲಿ	- ,, -
ಸಾಲೊತ್ ಎಂಬೊರ್‌ಯಾಲಿ	- ,, -
ಬಂದೊರ್ ಬಾರೆಯಾಲಿ	- ,, -
ಕಿನಿಯಾನ್ ಮಾರೆಯಾಲಿ	- ,, -
ಕಿನಿಯೊ ಬಂಗಾಲಯಾಲಿ	- ,, -
ಬಂಗಾಲ್ ಬಡಿಯೆಯಾಲಿ	- ,, -
ಕಾನಂ ಕಸ್ತೂರಿಯಾಲಿ	- ,, -
ಅರಾಮ ಗೇಲೋ	- ,, -
ಉಸ್ರಯಿ ಗೇಲೋ	- ,, -
ಉಸ್ರಯಿ ವರ್‌ಣೆ	- ,, -
ಏಲೇ ಉಟೋಮರ್ಜಿಯಾಲಿ	ಏಲಂಬೆಯಾಲಿ
ಯಾತ್ ಸೊಲಾಮಯಾಲಿ	- ,, -
ದೀನ್ ಸುಲಾಮಯಾಲಿ	- ,, -
ದೀನಾರ್ ಜಾಗಯಾಲಿ	- ,, -
ಕಾಪ್ಪನ್ ಬಾಗಯಾಲಿ	- ,, -
ಕಾಪ್ಪನ್ ಕೊಲ್ಲುಯಾಲಿ	- ,, -
ಕೊಲ್ಲುರೆ ಕಾಯೊಯಾಲಿ	- ,, -
ಅಲ್ಲೋದ್ದಾಯೆಯಾಲಿ	- ,, -
ಅಲ್ಲೋದು ಮಾನಯಾಲಿ	- ,, -
ಜಾಂಬವು ಲಾನಯಾಲಿ	- ,, -
ಜಾಂಬಕ ಮರ್ಜಿಯಾಲಿ	- ,, -
ಮರ್ಜಿಗೆ ಬಾಲಯಾಲಿ	- ,, -
ಬಾಡಂ ಸಾಲಯಾಲಿ	- ,, -
ಸಾಲತ ಇಂಬೊಯಾಲಿ	- ,, -
ಕಾಪತ ಬಂದೊಯಾಲಿ	- ,, -
ಬಂದೊರು ಬಾರೆಯಾಲಿ	- ,, -
ಚೆನಿಯರ್ಕ ಮಾರೆಯಾಲಿ	- ,, -
ಕಾಂಚೀಕಿ ರಾಬಾಯಾಲಿ	- ,, -

ಲಸ್ಕೇರಿ ಬಾರೋಯಾಲಿ	ಏಲಂಬೆಯಾಲಿ
ಬಾರಾ ಬಾರೀಯಾಲಿ	- ,, -
ಪೋಸಾ ಪೋರಿಯಾಲಿ	- ,, -
ನಾಮದ್ ಬರಿಯಾಯಾಲಿ	- ,, -
ನಾಮಯ್ ನೂರುಯಾಲಿ	- ,, -

ಈ ಪದವನ್ನು ಗಮನಿಸಿದರೆ ಇದು ಮುಸ್ಲಿಂ ಮೀನುಗಾರರ ಪದವಾಗಿ ಕಂಡುಬರುತ್ತದೆ. ಏಕೆಂದರೆ ಪ್ರತಿಯೊಂದು ವಾಕ್ಯದ ಕೊನೆಯಲ್ಲಿ "ಯಾ ಅಲಿ" ಎಂಬ ಶಬ್ದ ಬರುತ್ತದೆ. ಮುಸ್ಲಿಮರಲ್ಲಿ ಕಾಣುವ ಪ್ರಮುಖ ಎರಡು ಪಂಗಡಗಳಾದ ಸುನ್ನಿ - ಶಿಯಾಗಳಲ್ಲಿ ಶಿಯಾ ಪಂಗಡದವರು "ಅಲಿ" ಎಂಬುವವರನ್ನು ಪ್ರವಾದಿ ಎಂದು ನಂಬುತ್ತಾರೆ. ಮೊಹರಂ ಹಬ್ಬದಲ್ಲಿ "ಯಾ ಅಲಿ" ಎಂದು ಉದ್ಗಾರ ಮಾಡುತ್ತಾ ತಮ್ಮ ಎದೆಗೆ ಹೊಡೆದುಕೊಳ್ಳುತ್ತಿರುತ್ತಾರೆ. ಅಲ್ಲೂ ಸಹ "ಯಾ ಅಲಿ" ಎಂಬ ಶಬ್ದವು ಶಕ್ತಿಯನ್ನು ಹೊರಹಾಕಲು ಬಳಸಲಾಗುತ್ತದೆ. ಈ ಶಬ್ದವಲ್ಲದೆ ದೀನ್, ಮರ್ಜಿ, ಜವನ್, ಜೋರ್ ಜವಾನ್, ದುನಿಯ ಮೊದಲಾದ ಉರ್ದು ಪದಗಳು ಹಾಡಿನಲ್ಲಿ ಕಾಣಿಸಿಕೊಳ್ಳುತ್ತವೆ. ಅಲ್ಲದೆ ಸಾಮಾನ್ಯವಾಗಿ ಶಕ್ತಿಗೂಡಿಸುವ ಪದಗಳಲ್ಲಿ ಹಾಡುಗಾರರ ಧರ್ಮಕ್ಕೆ ಸಂಬಂಧಿಸಿದ ದೇವರುಗಳ ಹೆಸರು ಇದ್ದೇ ಇರುತ್ತದೆ. ಈ ಹಾಡಿನಲ್ಲಿ ಮುಸ್ಲಿಮ್ ಸಂಸ್ಕೃತಿಯ ಶಬ್ದಗಳು ಹೆಚ್ಚಾಗಿ ಕಾಣಿಸುವ ಕಾರಣದಿಂದ ಇದು ಮುಸ್ಲಿಮ್ ಮೀನುಗಾರರಿಗೆ ಸಂಬಂಧಿಸಿದ ಹಾಡೆಂದು ನಿರ್ಧರಿಸಬಹುದು. ಇದೇ ಲಕ್ಷಣಗಳನ್ನು ಮುಂದಿನ ಹಾಡು ಸಹ ಹೊಂದಿರುವುದನ್ನು ಗಮನಿಸಬಹುದು.

ದಾಮ್ಲಾ ಹೋಬೆಲು ಮಾಲಿ	ದಾಮ್ಲಾರೆ ಮಾಲಿ
ದಾಮ್ಲಾ ಹೀಮತ ಮಾಲಿ	- ,, -
ದಾಮ್ಲಾ ಹೋದಿರ ಬಾಲ	- ,, -
ದಾಮ್ಲಾ ಬಾಡೀ ಸಾಲ	- ,, -
ದಾಮ್ಲಾ ಸಾಲಾ ಎಂಬರ್	- ,, -
ದಾಮ್ಲಾ ಕಾಪುಲಿ ಬಂದರ್	- ,, -
ದಾಮ್ಲಾ ಬಂದರ್ ಬಾರಿ	- ,, -
ದಾಮ್ಲಾ ಹೀಮತ ಗೋರಿ	- ,, -
ದಾಮ್ಲಾ ಗೋರಿತು ಬಾಲ	- ,, -
ದಾಮ್ಲಾ ಕಾಪನ್ ಕುಲ್ಲು	- ,, -
ದಾಮ್ಲಾ ಮೊಗೇರ ಸೊಲ್ಲು	- ,, -

ಮುಂದೆ ತಿಳಿಸಲಾದ ಹಾಡು ಹಿಂದೂ ಸಂಸ್ಕೃತಿಯ ಲಕ್ಷಣಗಳನ್ನು ಹೊಂದಿದೆ. ದ್ಯಾವರೇ, ಹಣ್ಣುಕಾಯಿ ಮೊದಲಾದ ಪದಗಳು ಅದಕ್ಕೆ ಸಾಕ್ಷಿಯಾಗಿವೆ.

ಅಯ್ಯಯ್ಯೋ ಲೇಸಾ ಲೇಸು	ಅಯ್ಯಯ್ಯೋ ಲೇಸಾ ಲೇಸು
ಈ ಕಡ್ಲು ಈ ಮೈಮಾ ಲೇಸಾ	- ,, -
ನಮ್ಮೂರಿಗೆ ನಾವೂ ಲೇಸೊ	- ,, -
ಹೋಗಬೇಕು ಈ ಚೆಂದ ಲೇಸಾ	- ,, -
ಅಯ್ಯಯ್ಯೋ ಲೇಸಾ ಲೇಸೋ	- ,, -
ಈ ಕಡ್ಲು ಭಯಂಕರಾ ಲೇಸಾ	- ,, -
ಉತ್ರಾಣಿ ಗಾಳ್ಯೆಲ್ಲೋ ಲೇಸೋ	- ,, -
ನಮ್ಮೂರಿಗೆ ನಾವು ಲೇಸು	- ,, -
ಹೋಗಬೇಕು ಈ ತಂದೆ ಲೇಸಾ	- ,, -
ನಿನ್ಗೆ ದ್ಯಾವರಿಗೆ ಲೇಸೊ	- ,, -
ಏನಾರು ನಿನಗ್ಯಾ ಲೇಸು	- ,, -
ಹಣ ಕಾಯಿ ಕೊಡುವೆ ಲೇಸೊ	- ,, -
ನಮ್ಮೊಂದು ಬಿಟ್ಕೊಡು ಲೇಸಾ	- ,, -
ನಮ್ಮೂರಿಗೆ ನಾವು ಹೋಕಳ್ತೇವೆ ಲೇಸು	- ,, -
ಅಯ್ಯಯ್ಯೋ ದ್ಯಾವರೆ ಲೇಸಾ	- ,, -
ಏ ತಂದೆ ಏ ಒಡಿಯ ಲೇಸು	- ,, -
ಅಯ್ಯಯೋ ಮಾರಾಯಾ ಲೇಸು	- ,, -
ನಮ್ಮೂರಿಗೆ ನಾವು ಲೇಸೋ	- ,, -
ಮುಟ್ಸಿಬಿಡು ತಾರ್‍ಯ ಲೇಸು	- ,, -
ಆ ಮೇಲೆ ಏ ತಂದೆ ಲೇಸು	- ,, -
ಅಯ್ಯ ಸ್ವಲ್ಪ ಕಡ್ಲು ಲೇಸೋ	- ,, -
ಕಮ್ಮಿಯಾಯ್ತು ತಂದೆ ಲೇಸು	- ,, -
ಹ್ಯಾಗಾರು ನಮ್ಮೂರಿಗೆ ನಾವು ಲೇಸು	- ,, -
ಬಂದು ಬಿಟ್ರು ತಂದೆ ಲೇಸು	- ,, -
ಅಯ್ಯಯ್ಯ ಮರಯಾ ಲೇಸೋ	- ,, -
ಏ ಮಹಗಣ್ವತೆಯೇ ಲೇಸಾ	- ,, -
ನಿನ್ನೊಡ್ಯನಿಂದ ಲೇಸ	- ,, -
ನಿನ್ನ ಸಲುವಾಗಿ ನಮ್ಮೂರಿಗೆ ಲೇಸು	- ,, -
ಬಂದಲು ಮುಟ್ಸಾಯ್ತು ಲೇಸು	- ,, -
ಅಯ್ಯಯ್ಯೋ ಮರಾಯಾ ಲೇಸು	- ,, -
ಯಾವ ದೇಸ ಯಾವ ಊರು ಲೇಸೋ	- ,, -

ಅಯ್ಯಯ್ಯೋ ದ್ಯಾವರ್‍ಯಾ ಲೇಸಾ	ಅಯ್ಯಯ್ಯೋ ಲೇಸಾ ಲೇಸು
ನಮ್ಮೂರಿಗೆ ನಾವು ಲೇಸೋ	- ,, -
ಏ ಮರೆಯಾ ಲೇಸೋ ಲೇಸೊ	- ,, -
ಅಯ್ಯಯ್ಯೋ ತಂದ್ಯಾ ಲೇಸಾ	- ,, -
ಏನೋ ಮಾರಿಯೊಡೆಯಾ ಲೇಸು	- ,, -
ನಮ್ಮೂರಿಗೆ ನಾವು ಲೇಸು ಲೇಸೋ	- ,, -
ಮುಟ್ಟಿದೆವು ನಾವಿನ್ನೆ ಲೇಸು	- ,, -

ಈ ಹಾಡಿನಲ್ಲಿ ಭಯಂಕರಗೊಂಡ ಕಡಲಿನಿಂದ ಬಿಡುಗಡೆ ಪಡೆದು ಸುರಕ್ಷಿತವಾಗಿ ಮನೆಸೇರಲು ದೇವರಿಗೆ ಪ್ರಾರ್ಥಿಸಿಕೊಳ್ಳುವ ದೈನ್ಯತೆ ವ್ಯಕ್ತವಾಗುತ್ತದೆ. ಕ್ಷೇಮದಿಂದ ಮನೆಸೇರಲು ಬಯಸುವ ಅಂಬಿಗನ ಕಾತುರತೆ ಒಂದೆಡೆ ಇದ್ದರೆ ಉಗ್ರಸ್ವರೂಪ ತಾಳುತ್ತಿರುವ ಕಡಲಿನ ದೃಶ್ಯ ಮತ್ತೊಂದೆಡೆ ಪರಿಚಯವಾಗುತ್ತದೆ. ವಿಘ್ನಗಳಿಂದ ಪಾರುಮಾಡುವ ಗಣಪತಿಯ ಮೊರೆಹೊಕ್ಕಿರುವ ಅಸಹಾಯಕ ಅಂಬಿಗರ ಮನದಲ್ಲಿ ತುಂಬಿರುವ ಭೀತಿಯು ಹಾಡಿನ ಪ್ರತಿಸಾಲಿನಲ್ಲೂ ಇಣುಕಿದೆ.

ಒಂದು ಧರ್ಮದ ದೇವರನ್ನು ಮತ್ತೊಂದು ಧರ್ಮದವರು ಇಷ್ಟಪಡದೇ ಇರುವುದನ್ನು ಅಭಿವ್ಯಕ್ತಪಡಿಸಲು ಶಕ್ತಿಗೂಡಿಸುವ ಪದಗಳನ್ನು ಕೆಲವೆಡೆ ಬಳಸಿಕೊಂಡಿರುವುದು ಕಂಡುಬರುತ್ತದೆ. ಧಾರ್ಮಿಕ ವಿಡಂಬನೆಯ ಮೂಲಕ ಸಂತೋಷಪಡುವ ಮತ್ತು ಅದರಿಂದ ತನ್ನ ಧರ್ಮದ ಅಭಿಮಾನವನ್ನು ಬಲಪಡಿಸುವ ಪ್ರವೃತ್ತಿ ಬಹು ಪ್ರಾಚೀನವಾದುದು. ಜನಪದರು ಅದನ್ನು ಶಕ್ತಿಗೂಡಿಸುವ ಪದಗಳಲ್ಲಿ ವ್ಯಕ್ತಪಡಿಸಿರುವ ರೀತಿಯನ್ನು ಗಮನಿಸಬಹುದು.

ಅಲ್ಲಲ್ಲಾ ಓ ಅಲ್ಲಾ ಕೋಳೀ ಬಾಯಿಗೆ ಹಲ್ಲಿಲ್ಲಾ
ಏ ಮಾರಾಯಾ ಒಡಿಯಾ ಲೇಸೋ
ಎಲ್ಲಿಂದೆಲ್ಲಿಗೇ ಲೇಸು। ಗೋಕುನ ತುದಿ ಮೇಲೆ ಲೇಸು
ಬರುವೇಕು ದೋಣಿ ಲೇಸು। ತುಂಬಿದಲಡುಗೆ ಲೇಸು
ಮಾರಾಯಾ ಜನುವೆ ಲೇಸು। ತುಂಬಿದಲುಡುಗೆ ಲೇಸು
ಹಾಕಿದ ದಂಡು ಲೇಸು। ನಮ್ಮೂರಿಗೆ ನಾವು ಲೇಸು
ಗೋಕನ ಕೊಡಿ ಮೇಲೆ ಲೇಸು। ಕಡುಲು ಗಿರಿ ಮೇನೆ ಲೇಸ
ಬರುಬೇಕು ನಾವು ಲೇಸು।ಕಲ್ಲಿಗನ ಕ(ಕು) ಬಲಿಯಾ ಲೇಸ
ನಾವು ನೋಡಿನ್ನಾ ಲೇಸ। ಇಳುದೀ ಬಿಡಿರೋ ಲೇಸ
ಹಾಕಿದು ದಂಡಾ ಲೇಸ। ಎಲ್ಲಿಂದಲ್ಲಿಗೆ ಲೇಸ
ತದುಡಿ ಕಿನ್ನರಿಗೆ ಲೇಸ। ನೆಡಿಬೇಕು ದೇವ ಲೇಸು
ಹಾಕಿದ ದಂಡು ಲೇಸ। ದಂಡು ಮುರಿದು ಲೇಸು
ಬರಬೇಕು ದೋಣಿ ಲೇಸು। ನಾವತ್ತಿದ ಪಾತಿ ಲೇಸು

ಹತ್ತಿ ಬರಬೇಕು ಲೇಸು। ತಳದಗಿರುವಂಥ ಲೇಸೊ
ಬಡುಗಿನ ಗಾಳಿ ಲೇಸ। ಬರುತಾಳೊ ಜೋರು ಲೇಸು
ತಾಯ ಮಾರಾಯಾ ಲೇಸು। ಮಾರಮ್ಮಗನುಭೂತಿ ಲೇಸು
ತಾಯ ಮಾರೇಯೋ ಲೇಸು। ಎಲ್ಲಿಂದೆಲ್ಲಿಗೆ ಲೇಸು
ತಡುದಿ ಕಿನ್ನರಿಗೆ ಲೇಸು। ಬರಬೇಕು ನಾವು ಲೇಸು
ನಾವತ್ತಿದ ಪಾತಿ ಲೇಸು। ಬರಲಪ್ಪ ಬರಲಿ ಲೇಸು
ಈನಾಮು ಪಡಿವಾ ಲೇಸು। ಸಾವಕಾರ್‍ರರ ಕೈಲಿ ಲೇಸು
ಓ ಲೇನಾ ಪಾಡು ಲೇಸು। ನಾವು ಕುಡುವಾನೊ ಲೇಸು
ಬಹುಮಾನ ಪಡೆದಾನೊ ಲೇಸು। ಅಂಬ್ರಿಜ್ಞ ಸಾವಕಾರ ಲೇಸು
ಕೊಡಬೇಕು ನಮಗೆ ಲೇಸು। ಒಳ್ಳೆಯೊಂದು ಹತ್ತು ರೂಪಾಯಿ ಲೇಸು
ಈನಮುತಗಳ್ಬೇಕು ಲೇಸು। ಮಾರಾಯಾ ಜನವೇ ಲೇಸು
ಗೋಕಾನ ಕೊಡಿಯ ಲೇಸು। ತುಂಬಿದ ಹಡಗು ಲೇಸು।
ಓ ಬೇಲೇ ಮಾ ಓ ಬೇಲೇ ಮಾ
ಓ ಬೇಲೇ ಮಾರಾಜಾ ಓ ಬೇಲೇ ಮಾ
ಹೋಗೋಣ ನಾಳೇ ನಮ್ಮೂರ ಜಾತ್ರೇಗೆ
ಬರಿಗೈಯ ಜಾತ್ರಿಗೆ ಹೋಗೋದು ಹ್ಯಾಂಗ
ಕೈಯಾಗೆ ಕಾಸಿದ್ರೆ ಜಾತ್ರೆಯೋ ರಂಗ
ಹೋಗೋಣ ನಾಳೇ ನಮ್ಮೂರ ಜಾತ್ರೇಗೆ
ಹೋಗೋಣ ನಾಳೇ ಜಾತ್ರೆಗೆ

ಈ ಹಾಡಿನಲ್ಲಿ ಮೀನುಗಾರರು ಮೆಚ್ಚಿಕೊಂಡ ವಸ್ತುಗಳ ಪರಿಚಯದ ಜೊತೆಗೆ ತನ್ನ ಕೆಲಸಕ್ಕೆ ಬೇರೆಯವರಿಂದ ಬಹುಮಾನ ಪಡೆಯುವ ಆಕಾಂಕ್ಷೆ ವ್ಯಕ್ತವಾಗುತ್ತದೆ. ಅವರ ಹಾಡಿನ ಮೇಲೆ ಉರ್ದು ಭಾಷೆಯ ಪ್ರಭಾವವಿರುವುದು "ಈನಮು" ಎಂಬ ಪದಬಳಕೆಯಿಂದ ಕಂಡುಬರುತ್ತದೆ. ಹಾಡುವ ರೀತಿಯಲ್ಲಿ, ಒಬ್ಬಾತ ಹಾಡಿನ ಪ್ರತಿಯೊಂದು ಸಾಲನ್ನು ಹೇಳಿ ನಿಲ್ಲಿಸಿದ ತಕ್ಷಣ ಉಳಿದವರೆಲ್ಲಾ "ಲೇಸು" ಎಂದು ಧ್ವನಿಗೂಡಿಸಿ ಬಲೆ ಅಥವಾ ದೋಣಿ ಎಳೆಯಲು ಶಕ್ತಿಗೂಡಿಸುತ್ತಾರೆ. ಹಾಡಲ್ಲಿ ತೇಲಾಡುವ ಪಾತಿ ದೋಣಿ, ಹಡಗು ಎಂಬ ಪದಗಳು ಮೀನುಗಾರರು ಬಳಸುವ ದೋಣಿಯ ಬಗೆಗಳನ್ನು ತಿಳಿಸುತ್ತವೆ. ದುಡಿಯುವ ಮತ್ತು ದುಡಿಸಿಕೊಳ್ಳುವ ವರ್ಗಗಳನ್ನು ಹಾಡುಗಾರ ಪರಿಚಯಿಸುತ್ತಾ ಮೀನುಗಾರರು ದುಡಿಯುವ ವರ್ಗದವರಾಗಿದ್ದು, ದುಡಿಸಿಕೊಳ್ಳುವ ವರ್ಗದವರ ಮೆಚ್ಚುಗೆ ಪಡೆಯ ಹಂಬಲ ಉಳ್ಳವರೆಂದು ತಿಳಿಸುತ್ತಾನೆ. ಹಾಡಿನ ಕೊನೆಯಲ್ಲಿ ಹಗಲಿರುಳು ದುಡಿದರು ವರ್ಷಕ್ಕೊಮ್ಮೆ ನಡೆವ ಜಾತ್ರೆಗೆ ಹೋಗಿ ಸಂತೋಷ ಪಡುವ ಭಾಗ್ಯವಿಲ್ಲವೆಂಬ ನೋವು ವ್ಯಕ್ತಗೊಂಡಿದೆ.

ದೋಣಿ ನಡೆಸುವಾಗ ಬೇಸರಿಕೆ ಕಳೆಯಲು ಕೆಲವು ಪದಗಳನ್ನು ಹಾಡುವುದು ಸಾಮಾನ್ಯ. ಅಂತಹ ಹಾಡುಗಳಲ್ಲೂ ಸಹ ಅರ್ಥ ಮುಖ್ಯವಿರದೆ ಉದ್ಗಾರದ ಶಬ್ದಗಳೇ ಮುಖ್ಯವಾಗಿರುತ್ತವೆ. ಅಂತಹ ಒಂದು ಹಾಡನ್ನು ಗಮನಿಸಬಹುದು.

ಹೋ ಬೇಲಾರೋ ಮೌಲಾ ತಾನಿಸು ಬೇಲಾ ರೂ ಬೇಲಾ
ಜಗಜಗಿತ ಗುಲಾಬಿ ಪರಿಮಳ ಮಾಗೌತ
ಹೊ ಬೇಲಾ ರೋ ಮೌಲಾ ತಾನಿಸು ಬೇಲಾ ರೂ ಬೇಲಾ
ಮನಸಯಿತೆ ನಿನ್ನ ಮೇಲೆ ಕೋಮಲಿ ಸರವ ಕೊರಳೊಳು
ಹೊ ಬೇಲಾ ರೂ ಮೌಲಾ ತಾನಿಸು ಬೇಲಾ ರೂ ಬೇಲಾ
ಬಾರೆಲೆ ಹುಡುಗಿ ಬಂಗಾಲಿಗೆ ಬಂಗಾಲಿ ಹೂವೊಂದು ತುರಿಬೀನ
ಹೋ ಬೇಲಾ ರೂ ಮೌಲಾ ತಾನಿಸು ಬೇಲಾ ರೂ ಬೇಲಾ
ಐಸಾ ಮಾಲೂಂ ಸುರತಕೋ ಏನಿವಿಲ್ಲಲಯ್ಯ ಕೊಡಿಯಾಳಕೊ
ನಮ್ಮ ಹಡಗ ಎಂಬುವುದು ಮಚ್ಚಿ ಶಿಕಾರಿ ಹೋಗುತ್ತೈತೆ
ಹೊ ಬೇಲಾ ರೊ ಮೌಲಾ ತಾನಿಸು ಬೇಲಾ ರೂ ಬೇಲಾ
ಓ ಹಾಯ್ ಲೇ ಸಾ ಹೋ ಬೇಲ ಲೇಸಾ
ಜಗಜಗತಾ ಪಾತಿಕ್ಕುತಾ
ಗುಲಾಬಿ ಪರಿಮಳ ಮಾಗವ್ ತಾ
ಡಾಬಲಾ ರೇ ಮಾಲೆ। ಡಾಬಲಾ ಮಾಲಂ ಬೋಲಿ
ಡಾಬಲೊ ರಾ ಚಾಲಿ। ಡಾಬುಲಾ ಚಾಲಿವಲ್ಲಿ
ಡಾಬುಲೊ ಬಾಲ ಚಂದನ। ಡಾಬುಲಾ ಗೋರಿ ನಂದನ
ಡಾಬುಲೊ ಗೊರಟು ಗಾಜಿ। ಡಾಬುಲೊ ನೌಡಬಾಜಿ
ಡಾಬುಲೊ ಸವನ್ ಸವ್ವ। ಡಾಬುಲೊ ಸವ್ವನ್ ಸವ್ವ
ಡಾಬುಲೊ ಕುಲುಬಾಯಿ ಸವ್ವ। ಡಾಬುಲಸೊ ಕಲ್ಲು ಕಾಯಂ
ಡಾಬಬೊ ಅಲ್ಲಾ ದಾಯಂ। ಡಾಬುಲೊ ದಾಯಂ ದಂಡಿ
ಹಲೋಂಬೆ ಓ ಲೇಸಾ
ಹೋ ಬೇಲಾ ಹೋ ಮೌಲಾ
ಬಂಗಡಿ ಮೀನು ಪಾತಿಕ್ಕುತಾ
ಹೋ ಬೇಲಾ ಹೋ ಮೌಲಾ
ಬೈಗೆ ಮೀನು ಪಾತಿಕ್ಕುತಾ
ಹೊಬರ ಲೇಸೊ। ಹೊದಿಬಲ್ಲ ಲೇಸೊ
ಹೋದಾನು ಹೊದಿ ಲೇಸೊ। ದಾಯಂ ದಂಡಿ ಲೇಸೊ
ಲೇಸು ಮಾಲಿ ಲೇಸು। ಮಾಲಿರೆ ಮೌಲಾ ಲೇಸು
ಮೌಲಾ ಹಾಲಿ ಲೇಸು। ಹಿಮ್ಮತು ಬೋಲಿ ಲೇಸು
ಹಿಮ್ಮತು ಮಡದಿ ಲೇಸು। ವಿಟ್ಟಳೆ ಏಡದಿ ಲೇಸು
ಮಡದಿ ವಾಲ ಲೇಸು। ಲೇಸು ಮಾಲಿ ಲೇಸು

ಎಲ್ಲರಣ್ಣಾ ಲೇಸು । ಬಾರು ಮಾಡಿ ಲೇಸು
ಒಂದೊಂದು ಎಳೆತ ಲೇಸು । ಮುಂದಕೆ ಎಳೆವ ಲೇಸು
ಮುಂದಿನ ಕೋಡಿ ಲೇಸು । ಮುಕ್ಕಾರು ಕೋಡಿ ಲೇಸು
ಕೋಡಿ ಕುಂದ ಲೇಸು । ಸೇರಿಕೊಳ್ಳುವ ಲೇಸು
ಹೂಬಾರ ಲೇಸು । ಹೊದಿ ಬಲ್ಲಾ ಲೇಸು
ಹಾ ಡ ಮಾಲಿಯಾ । ಮಾಲಿರೆ ಮೌಲಿ ಡಮಾಲಿಯಾ
ಮವುಲ ನಾಲೀ ಡಮಾಲಿಯಾ । ಡಂಗುರ ಚಾಲೀ ಡಮಾಲಿಯಾ
ಚಾಲರೆ ವಲ್ಲಾ ಡಮಾಲಿಯಾ । ಚಾಲಿ ಚಂದನಾ ಡಮಾಲಿಯಾ
ಗೋರಿ ನಂದನಾ ಡಮಾಲಿಯಾ । ಚಾಲಿ ಚಂದನಾ ಡಮಾಲಿಯಾ
ಸೌಡರೆ ಬಾಚೀ ಡಮಾಲಿಯಾ । ಸದ್ವನು ಸವ್ವಾ ಡಮಾಲಿಯಾ
ಕುಲು ಬಾಯಿ ಸವ್ವಾ ಡಮಾಲಿಯಾ । ಕುಲ್ಲು ಕಾಯಂ ಡಮಾಲಿಯಾ
ಅಲ್ಲಾ ಪಾಯುಮೆ ಡಮಾಲಿಯಾ । ಅಲ್ಲಾ ಬರಾಕಿ ಡಮಾಲಿಯಾ
ದಸ್ತು ಪಿರಾಕಿ ಡಮಾಲಿಯಾ । ದಸ್ತನು ದರಿಯಾ ಡಮಾಲಿಯಾ
ಸಾರಂಗು ಬರಿಯಾ ಡಮಾಲಿಯಾ । ಸಹಬಾಸು ಸಲ್ಲಾ ಡಮಾಲಿಯಾ
ಸಹಬಾಸು ಸಖ ಡಮಾಲಿಯಾ । ಸಾರಂಗು ಸುಪಾರಿ ಡಮಾಲಿಯಾ
ಸುಪಾರಿಗೆಲ್ಲಾ ಡಮಾಲಿಯಾ । ಸಹಬಾಸು ಸಲ್ಲಾ ಡಮಾಲಿಯಾ
ಸಹಬಾಸು ಸಖ ಡಮಾಲಿಯಾ । ಸಲಮೈ ಜೋಕಿ ಡಮಾಲಿಯಾ
ಸಲಮೈ ಸವಾರಿ ಡಮಾಲಿಯಾ । ಸವಾರಿಗೆಲ್ಲಾ ಡಮಾಲಿಯಾ
ಸಾಂಬಸು ಮೆಲ್ಲಾ ಡಮಾಲಿಯಾ । ಸಲಮೈರಾಮ ಡಮಾಲಿಯಾ
ದಂಡಿಲೇ ಜಾದು ಡಮಾಲಿಯಾ । ದಂಡಿ ಮೇಗಡಿ ಡಮಾಲಿಯಾ
ವಿಟ್ಟಳೆ ಏಡದಿ ಡಮಾಲಿಯಾ । ವಿಶೂ ಏ ರಾಕಿ ಡಮಾಲಿಯಾ
ದಸ್ತು ಬರಾಕಿ ಡಮಾಲಿಯಾ । ದಸ್ತಾಯ ದಂಡಿ ಡಮಾಲಿಯಾ
ಕಲ್ಲಾರೆ ಬಂಡಿ ಡಮಾಲಿಯಾ ॥

ಈ ಹಾಡು ಮುಸ್ಲಿಂ ಸಂಸ್ಕೃತಿಯನ್ನು ಬಿಂಬಿಸುತ್ತಿದೆ. ಅವರ ದೇವರಾದ 'ಅಲ್ಲಾ' ನನ್ನು ಅಂಬಿಗ ನೆನೆಸಿಕೊಳ್ಳುವುದು ಅವನನ್ನು "ಮೌಲಾ" ಎಂದು ಕರೆಯುತ್ತಾ ಮೀನು ಹಿಡಿಯಲು ಸಹಾಯಕವಾಗುವಂತೆ ಪ್ರಾರ್ಥಿಸಿಕೊಳ್ಳುತ್ತಿರುವ ಭಕ್ತಿ ಭಾವನೆ ಅಲ್ಲಲ್ಲಿ ವ್ಯಕ್ತಗೊಂಡಿದೆ. ಉರ್ದು ಪದಗಳನ್ನು ಹಾಡಿನಲ್ಲಿ ಬಳಸಿರುವ ಅಂಬಿಗ ತನ್ನ ಸಂಸ್ಕೃತಿಯನ್ನು ಪರಿಚಯಿಸಿರುವುದಲ್ಲದೆ ಉರ್ದು ಶಬ್ದಗಳ ಕೊಡುಗೆಯನ್ನು ಕನ್ನಡಕ್ಕೆ ಸಲ್ಲಿಸಿದ್ದಾನೆ. ಮಚ್ಚಿ, ಶಿಕಾರಿ, ಐಸಾಮಾಲೂಂ, ಹಿಮ್ಮತು, ದರಿಯಾ, ಸಹಬಾಸು, ಸವಾರಿ, ಮೌಲಾ, ಮೊದಲಾದ ಉರ್ದು ಪದಗಳು ಕನ್ನಡ ಭಾಷೆಯ ಬೆಳವಣಿಗೆಗೆ ಸಹಾಯಕವಾಗುತ್ತವೆ. ಮೀನು ಬೇಟೆಯಲ್ಲಿ ಹೆಚ್ಚಾಗಿ ಸಿಗುವ ಬಾಂಗಡೆ ಮತ್ತು ಬೈಗೆ ಎಂಬ ಎರಡು ಜಾತಿಯ ಮೀನುಗಳು ಅಂಬಿಗರ ಬದುಕಿಗೆ ಆಧಾರವಾಗಿರುವಂತಹವು. ಆದ್ದರಿಂದ ಈ ಹಾಡಿನಲ್ಲಿ ಆ ಮೀನುಗಳನ್ನು ಅಂಬಿಗರು ನೆನೆಸಿಕೊಳ್ಳುತ್ತಾ ದೋಣಿ ನಡೆಸುತ್ತಿದ್ದಾರೆ.

ಈ ಹಾಡು ದೋಣಿಯನ್ನು ದಡಕ್ಕೆಳೆಯುವ ಸಂದರ್ಭದಲ್ಲೂ ಹಾಡಲಾಗುತ್ತದೆ. ಆಗ ವಾಕ್ಯವೊಂದನ್ನು ಒಬ್ಬಾತ ಹೇಳುತ್ತಾನೆ. ಉಳಿದವರು "ಲೇಸೊ" ಇಲ್ಲವೆ "ಡಾಮಾಲಿಯಾ" ಎಂದು ಹೇಳುತ್ತಾ ಶಕ್ತಿಗೂಡಿಸುತ್ತಾರೆ. ಇವೆರಡು ಶಬ್ದಗಳು ಕೇವಲ ಉದ್ಗಾರಗಳು ಮಾತ್ರವಾಗಿವೆ. ಹಾಡಿನಲ್ಲಿ ಬರುವ ಸಾಲುಗಳು ಅರ್ಥ ಮುಂದುವರಿಸಲು ಸಹಕಾರಿಯಾಗದೆ ತನ್ನದೇ ಆದ ಅರ್ಥ ಇಲ್ಲವೆ ಉದ್ಗಾರವನ್ನು ಹೊಮ್ಮಿಸುತ್ತಾ ಹೋಗುತ್ತದೆ. ಈ ಕಾರಣದಿಂದ ಇವುಗಳನ್ನು ಉದ್ಗಾರಗಳೆಂದು ಪರಿಗಣಿಸಬಹುದು.

ಇದೇ ಬಗೆಯ ಹಾಡಿನ ಮತ್ತೊಂದು ತುಣುಕನ್ನು ಗಮನಿಸಬಹುದು.

ದಾಮ್ಲಾ ರೆ ಮಾಲಿ
ದಾಮ್ಲಾ ಹೋಬೆಲು ಮಾಲಿ
ದಾಮ್ಲಾ ಹೀಮತ ಮಾಲಿ
ದಾಮ್ಲಾ ಹೋದಿರ ಬಾಲ
ದಾಮ್ಲಾ ಬಾಡೀ ಸಾಲ
ದಾಮ್ಲಾ ಸಾಲ ಎಂಬರ್
ದಾಮ್ಲಾ ಕಾಪುಲಿ ಬಂದರ್
ದಾಮ್ಲಾ ಬಂದರ್ ಬಾರಿ
ದಾಮ್ಲಾ ಹೀಮತ್ ಗೋರಿ
ದಾಮ್ಲಾ ಗೋರಿತು ಬಾಲ
ದಾಮ್ಲಾ ಕಾಪನ್ ಕುಲ್ಲು
ದಾಮ್ಲಾ ಮೊಗೇರ ಸೊಲ್ಲು.

ಇದರಲ್ಲಿ ಬರುವ "ದಾಮ್ಲಾ" ಶಬ್ದವು ಎಲ್ಲರೂ ಒಂದಾಗಿ ಹೇಳುವ ಶಬ್ದವಾಗಿದ್ದು ಉಳಿದ ಶಬ್ದಗಳನ್ನು ಗುಂಪಿನ ನಾಯಕ ಹೇಳುತ್ತಾನೆ.

ಇಂತಹ ಉದ್ಗಾರದ ಹಾಡುಗಳು ಕಡಲಿಗರಲ್ಲಿ ಬಹಳಷ್ಟು ಸಿಗುತ್ತವೆ. ಅವರು ಹಾಡಿನ ಅರ್ಥದ ಬಗ್ಗೆಯಾಗಲಿ, ಭಾಷೆಯ ಬಗ್ಗೆಯಾಗಲಿ ತಲೆ ಕೆಡಿಸಿಕೊಳ್ಳದೆ ಹಾಡು ಶಕ್ತಿಗೂಡಿಸಲು ಸಹಾಯಕವಾದರೆ ಸಾಕು ಅದೇ ಅವರ ಹಾಡಿನ ಉದ್ದೇಶವಾಗುತ್ತದೆ.

ಹೀಗೆ ಸಮುದ್ರ ಸಂಬಂಧಿ ವಿಷಯಗಳನ್ನೊಳಗೊಂಡ ಕಡಲಿಗರ ಬಿಡಿ ಪದಗಳು ಅವರ ಸಂಸ್ಕೃತಿ, ಭಾಷೆ, ಸಾಹಿತ್ಯವನ್ನು ಪರಿಚಯಿಸುವ ಬಿಡಿಮುತ್ತುಗಳಾಗಿವೆ.

ಗರತಿ ಮನೆಯ ಒಡತಿ. ಅವಳು ಮನೆಯ ಜವಾಬ್ದಾರಿ ಹೊತ್ತವಳಾಗಿರುವುದರಿಂದ ಬೆಳಗಿನ ಜಾವ ಎದ್ದು ಮನೆಕೆಲಸದಲ್ಲಿ ನಿರತಳಾಗಬೇಕಾಗುತ್ತದೆ. ಅಂತಹ ಗರತಿ ಜಗವನ್ನೇ ಮರೆತು ಮಲಗಿದಾಗ ಅವಳನ್ನೆಚ್ಚರಿಸಲು ಈ ಹಾಡುಗಾರ್ತಿ ಪ್ರಯತ್ನಿಸುತ್ತಿರುವುದನ್ನು ಗಮನಿಸಬಹುದು.

ಬಂಗಡೆ ಬಂತು ಬಂಗುಲೆಲಿದ ಬಿತ್ತು
ಗರತಿ ನಿನಗೆಂತ ನಿದ್ರಿಯೇ!
ತೂರೆ ಬಂತು ತುರಾಡ್ ಹೋಯ್ತು
ಗರತಿ ನಿನಗೆಂತ ನಿದ್ರಿಯೇ!
ಊರ ನಾರ್‍ಯವರು ನೀರಿಗೆ ಬಂದ್ರ
ಗರತಿ ನಿನಗೆಂತ ನಿದ್ರಿಯೇ!
ಎತ್ತು ಬಂತು ಗೆದ್ದೀನೆ ತಿಂತು
ಗರುತಿ ನಿನಗೆಂತ ನಿದ್ದೂರಿ!
ಕಂದುಲೆ ಬಂತೆ ಕಂದಸ್ಕಂಡೊಯ್ತು
ಗರತಿ ನಿನಗೆಂತ ನಿದ್ದೂರಿ!
ಸಿದ್ದಾಪುರ್‍ನವರು ಸಿದ್ದಿಗೆ ಬಂದ್ರು
ಗರತಿ ನಿನಗೆಂತ ನಿದ್ದೂರಿ!
ಬಸ್ವಾ ಬಂತು ಬಸಳೇ ತಿಂತು
ಗರುತಿ ನಿನಗೆಂತ ನಿದ್ದೂರಿ!
ಬಂಗ್ಡಿ ಬಂತು ಬಂಗ್ಲಿಲಿ ಬಿತ್ತು
ಗರ್ತಿಗೆಂತ ನಿದ್ದೂರಿ!
ತೋರಿ ಬಂತು ತೊರ್ಕೊಂಡೊಯ್ತು
ಗರ್ತಿಗೆಂತ ನಿದ್ದೂರಿ!
ಬಸವ ಬಂತು ಬಸುಳಿ ತಿಂತು
ಗರ್ತಿಗೆಂತ ನಿದ್ದೂರಿ!
ತಿಂಗಳ ಮೋಡಿ ಅಂಗಳಕೆ ಬಂತು
ಗರತಿಗೆಂತ ನೆದುರಿ!
ಬಂಗಡೆ ಬಂತು ಬಂಗಲೆಲಿ ಬಿತ್ತು
ಗರತಿಗೆಂತ ನೆದುರಿ!
ಕಂದಲೆ ಬಂತು ಬಂಗಲೆಲಿ ಬಿತ್ತು

ಗರತಿಗೆಂತ ನೆದುರಿ!

ತೋರಿ ಬಂತು ತೂರಾಡೋಯ್ತು

ಗರತಿಗೆಂತ ನೆದುರಿ!

ಪೇಡಿ ಬಂತು ಪೆಡಾಡಿ ಹೊಯ್ತು

ಗರತಿಗೆಂತ ನೆದುರಿ!

ಸುತ್ತ ಮುತ್ತಲಿನವರು ಕೆಲಸದಲ್ಲಿ ನಿರತರಾಗಿರುವಾಗಲೂ ಗರತಿ ಮಲಗಿರುವುದು ಸರಿಯಲ್ಲವೆಂದು ನಿರ್ಧರಿಸುವ ಹಾಡುಗಾರ್ತಿ "ನಿನಗೆಂತ ನಿದ್ರಿಯೇ" ಎಂದು ಆಶ್ಚರ್ಯ ಪಡುತ್ತಾಳೆ. ಅವಳ ನಿದ್ರೆ ಅವಳಿಗೆ ಸಂತೋಷ ತಂದರೂ ಮನೆಯವರಿಗೆ ಅಸಂತೋಷ ತರುವ ಸೂಚನೆ ನೀಡುತ್ತಿದೆ ಎಂಬರ್ಥ ಅವಳ ಆಶ್ಚರ್ಯದಲ್ಲಿ ವ್ಯಕ್ತಗೊಳ್ಳುತ್ತದೆ. ಮನೆಯ ಬಸಳೆ, ಗದ್ದೆ ಎಲ್ಲವೂ ನಾಶವಾಗುತ್ತಿದೆ. ಆದರೂ ಅವಳು ಎಚ್ಚರಗೊಳ್ಳಲಿಲ್ಲವೆಂದ ಮೇಲೆ ಅದು "ಮನೆ ಹಾಳಿನ" ನಿದ್ದೆಯಾಗಿದೆ ಎಂಬ ಸಂಶಯವನ್ನು ಹಾಡುಗಾರ್ತಿ ಸೂಚಿಸುತ್ತಾಳೆ. ರಾತ್ರಿ ಮೀನು ಬೇಟೆಗೆ ಹೋದವರು ಬಂಗಡೆ ಮೀನನ್ನು ಹಿಡಿದು ತಂದಿದ್ದಾರೆ. ಅದನ್ನು ಕೊಂಡೊಯ್ದು ಮಾರಾಟ ಮಾಡಲು ಗರತಿ ಏಳಬೇಕು. ಇದು ಅವಳ ದೈನಂದಿನ ಕೆಲಸಗಳಲ್ಲೊಂದು. ಮೀನುಗಾರರಲ್ಲಿ ಮನೆಯ ಗಂಡಸರು ಸಮುದ್ರದ ಸಂಪತ್ತನ್ನು ತಂದು ತನ್ನ ಮನೆಯೊಡತಿಗೆ ಒಪ್ಪಿಸುವುದು, ಅದನ್ನು ಅವಳು ಮಾರಾಟ ಮಾಡಿ ಮನೆ ಸಾಗಿಸುವುದು ಸಾಮಾನ್ಯ. ಕರಾವಳಿಯ ಜನರಿಗೆ ಬಸಳೆ ಬಹು ಪ್ರಿಯವಾದ ಸೊಪ್ಪು. ಅದನ್ನು ಅವರು ಮನೆಯ ಮುಂದೆ ಬೆಳೆಸುತ್ತಾರೆ. ಮೀನು ತೊಳೆದ ನೀರನ್ನು ಅದಕ್ಕೆ ಹಾಕಿ ಹುಲುಸಾಗಿ ಬೆಳೆಯುವಂತೆ ಮಾಡುತ್ತಾರೆ. ಅಂತಹ ಪ್ರಿಯವಾದ ಸೊಪ್ಪನ್ನು ಬಸವ ತಿಂದು, ನಾಶ ಮಾಡುತ್ತಿರುವುದನ್ನು ಹಾಡುಗಾರ್ತಿ ಸಹಿಸದೇ ಇರುವ ಭಾವನೆ "ಬಸ್ವಾ ಬಂತು ಬಸಳೆ ತಿಂತು" ಎಂಬ ವಾಕ್ಯದಲ್ಲಿ ವ್ಯಕ್ತಗೊಂಡಿದೆ. ಹಾಡಿನ ಕೊನೆಯಲ್ಲಿ ಬಂಗಡೆ, ಕಂದಲೆ, ತೋರಿ, ಪೇಡಿ ಎಂಬ ಕಡಲಿಗರಿಗೆ ಪ್ರಿಯವಾದ ಮೀನುಗಳ ಬಗೆಗಳನ್ನು ಹಾಡುಗಾರ್ತಿ ಪರಿಚಯಿಸಿದ್ದಾಳೆ.

ದಕ್ಷಿಣ ಕನ್ನಡ ಜಿಲ್ಲೆಯ ಮೀನುಗಾರರಲ್ಲಿ ಬಹು ಜನರು ತುಳು ಮಾತನಾಡುವವರಿದ್ದಾರೆ. ಸಮುದ್ರ ಸಂಬಂಧಿ ಹಾಡುಗಳು ಅವರಲ್ಲಿ ಹೇರಳವಾಗಿ ಸಿಗುತ್ತವೆ. ಮೀನಿನ ದಿಬ್ಬಣದ ಬಗ್ಗೆ ತಿಳಿಸುವ ತುಳು ಹಾಡೊಂದನ್ನು ನೋಡಬಹುದು.

ಬಂಗುಡೆ ಮದಿಮಾಯೇ ಬೂತಾಯಿ ಮದಿಮಾಳೆ

ದಿಬ್ಬಣೊಡೆ ಪೊನಗ।

ನೀರ್‌ಡಿತ್ತಿ ಮೀನುಗಳು ಮಾತಪಿದಾಡೊಂದುಳ್ಳೆರೆ॥

ಅಹಾ। ಪಿದಾಡೊಂದುಳ್ಳೆರೆ॥

ಕೊಂಬು ಕೊಣ್ದು ಪಾರ್ಪೆ ಕೊಂತ್ಯಣ್ಣೆ

ದಿಡುಂಬು ಗುದ್ಪೆ ಮಡೆಂಜಣ್ಣೆ॥

ಮೀನೆ ಒಯಿಪುವೆ ಮುಗುಡಣ್ಣೆ

ಮುಂಡಾಸೆ ಕಟ್ಟುವೆ ಮೊರಂಟೆ ಅಣ್ಣೆ

ಮುಂಡೊಗು ನಾಮೊ ಪಾಡ್ಪೆ ಕೊಡ್ಯಣಣ್ಣೆ

ಪರಡೊಂದು ಬರ್ಪೆ ಡೆಂಜಿಣ್ಣೆ॥

ಸೀರೆ ನೆರಿ ಪತ್ತಳ್ ಚಂದ್ರ ಮಡಕ್ಕ॥
ತರೆ ಬಾರೆದ್ ಕಟ್ಟಳ್ ಬಾಲೆಕ್ಕ
ಪೂ ಮುಡಿಪುವಳೆ ಕಿಜಣಕ್ಕ
ಕುಟ್ಟೊಂದು ಬರ್ಪಳೆ ಎಟ್ಯಕ್ಕ
ಲಾಗ್ಯೊಂದು ಬರ್ಪಳೆ ಕೈಪೆ ಅಕ್ಕ॥

(ಬಂಗುಡೆ 'ಮದುಮಗ' ಬೂತಾಯಿ ಮದುಮಗಳು
ದಿಬ್ಬಣದಲಿ ಹೋಗುವಾಗ
ನೀರೊಳಗಿದ್ದ ಮೀನುಗಳೆಲ್ಲ ಹೊರಡುತ್ತಿದ್ದಾರೆ.
ಆಹಾ ಹೊರಡುತ್ತಿದ್ದಾರೆ.
ಕೊಂಬು ಹಿಡಿದು ಓಡುತ್ತಾನೆ 'ಕೊಂತಿ' ಅಣ್ಣಾ
ಡಿಡುಂಬು ಗುದ್ದುತ್ತಾನೆ 'ಮಡೆಂಜಿ' ಅಣ್ಣಾ
ಮೀಸೆ ಎಸೆಯುತ್ತಾನೆ 'ಮುಗುಡು' ಅಣ್ಣಾ
ಮುಂಡಾಸು ಕಟ್ಟುತ್ತಾನೆ 'ಮೊರಂಟೆ' ಅಣ್ಣಾ
ಹಣೆಗೆ ನಾಮ ಹಾಕುತ್ತಾನೆ 'ಕೊಡ್ಯಾನ' ಅಣ್ಣಾ
ತೆವಳುತ್ತಾ ಬರುತ್ತಾನೆ 'ಏಡಿ' ಅಣ್ಣಾ
ಸೀರೆ ನೆರಿಗೆ ಹಿಡಿಯುತ್ತಾಳೆ 'ತೆಬಟೆ' ಅಕ್ಕಾ
ಕಣ್ಣಿಗೆ ಕಾಡಿಗೆ ಹಾಕುತ್ತಾಳೆ 'ಚಂದ್ರಮಡ' ಅಕ್ಕಾ
ತಲೆ ಬಾಚಿ ಕಟ್ಟುತ್ತಾಳೆ 'ಬಾಲೆ' ಅಕ್ಕ
ಹೂ ಮುಡಿಸುತ್ತಾಳೆ 'ಕಿಜಣ' ಅಕ್ಕ
ಕುಟ್ಟಿಕೊಂಡು ಬರುತ್ತಾಳೆ 'ಸಿಗಡಿ' ಅಕ್ಕ
ನೆಗೆದುಕೊಂಡು ಬರುತ್ತಾಳೆ 'ಕೈಪೆ' ಅಕ್ಕ)

ಡಾ॥ ಬಿ. ಎ. ವಿವೇಕ ರೈ ತಮ್ಮ ತುಳು ಜನಪದ ಸಾಹಿತ್ಯದಲ್ಲಿ ಈ ಮೇಲಿನ ಹಾಡಿನ ಪಾಠಾಂತರವನ್ನು ಹೀಗೆ ಕೊಡುತ್ತಾರೆ.

'ಬಂಗುಡೆ ಮದಿಮಾಯೆ, ಬೂತಾಯಿ ಮದಿಮಳೆ
ದಿಬ್ಬಣ ಪೊನಾಗ
ನೀರಿಡಿತ್ತಿ ಮೀನೆಳು ಮತಾ ಮಸ್ಕರಿ ಮಲ್ತೆರ್‌ಗೆ
ಆಹಾ, ಮಸ್ಕಿರಿ ಮಲ್ತೆರ್‌ಗೆ'

(ಬಂಗುಡೆ ಮದುಮಗ ಬೂತಾಯಿ ಮದುಮಗಳು
ದಿಬ್ಬಣ ಹೋಗುವಾಗ

ನೀರಲ್ಲಿ ಮೀನುಗಳೆಲ್ಲ ಗೇಲಿ ಮಾಡಿದವು
ಆಹಾ, ಗೇಲಿ ಮಾಡಿದುವು)

ಬಂಗಡೆ ಮತ್ತು ಭೂತಾಯಿ ಮೀನು ಮೀನುಗಾರರ ಬದುಕಿಗೆ ಆಧಾರ. ಸಾಮಾನ್ಯನಿಗೂ ಕಡಿಮೆ ದರದಲ್ಲಿ ದೊರೆಯುವ ಆಹಾರದ ಜಲಚರ ಪ್ರಾಣಿ ಅವು. ಬಹೂಪಯೋಗಿ ಮೀನುಗಳಾದ ಬಂಗಡೆ, ,ಬೂತಾಯಿ ಮನುಷ್ಯರಿಗೆ, ಪ್ರಾಣಿ, ಪಕ್ಷಿ, ಗಿಡ-ಮರ, ಕೋಳಿಗಳಿಗೆಲ್ಲಾ ಆಹಾರವಾಗುತ್ತವೆ. ಭೂತಾಯಿ ಎಣ್ಣೆಮೀನಾಗಿರುವುದರಿಂದ ಮೀನೆಣ್ಣೆ ತಯಾರಿಸಲು ಅದನ್ನು ಬಳಸುತ್ತಾರೆ. ಹೀಗೆ ಮೀನುಗಾರರಿಗೆ ಹಲವು ವಿಧವಾಗಿ ಹಣಗಳಿಸಲು ಮಾಧ್ಯಮವಾಗುವ ಬಂಗಡೆ ಮತ್ತು ಭೂತಾಯಿ ಮೀನನ್ನು ಅವರು ಹೆಚ್ಚು ಗೌರವದಿಂದ ಕಾಣುತ್ತಾರೆ. ಹಾಡಿನಲ್ಲಿ ನಾಯಕ, ನಾಯಕಿಯ ಪಟ್ಟವನ್ನು ಬಂಗಡೆ ಮತ್ತು ಭೂತಾಯಿ ಮೀನಿಗೆ ಕೆಟ್ಟಿದ ಹಾಡುಗಾರ್ತಿ ತನ್ನ ಸಮಾಜದಲ್ಲಿ ಅವುಗಳಿಗಿರುವ ಸ್ಥಾನಮಾನವನ್ನು ಪರಿಚಯಿಸುತ್ತಾಳೆ.

ಬಂಗಡೆ ಮೀನು ಭೂತಾಯಿಗಿಂತ ದೊಡ್ಡದಿರುವುದರಿಂದ ಅದನ್ನು ಮದುಮಗನೆಂದು ಅದಕ್ಕಿಂತ ಚಿಕ್ಕದಾದ ಭೂತಾಯಿಯನ್ನು ಮದುಮಗಳೆಂದು ಭಾವಿಸಿ, ದಿಬ್ಬಣದ ಪ್ರಮುಖರನ್ನು ಸಿದ್ಧಗೊಳಿಸುತ್ತಾಳೆ. ಮದುಮಗ ಮತ್ತು ಮದುಮಗಳಿಂದಲೇ ದಿಬ್ಬಣವಾಗದು ಆದ್ದರಿಂದ ಅವುಗಳೊಡನೆ ಉಳಿದ ಮೀನುಗಳನ್ನೆಲ್ಲ ಸಹಾಯಕ್ಕಾಗಿ ತೆಗೆದುಕೊಂಡಿದ್ದಾಳೆ. ದಿಬ್ಬಣದಲ್ಲಿ ಭಾಗವಹಿಸುವ ಕೊಂತಿ, ಮಡೆಂಜಿ, ಮುಗುಡು, ಮೊರಂಟೆ, ಕೊಡ್ಯಾನ್, ಡೆಂಜಿ, ತೆಬಟೆ, ಚಂದ್ರಮಡ, ಬಾಲೆ, ಕಿಜಣ, ಎಟ್ಟಿ, ಕೆಪೆ, ಏಡಿ ಮೊದಲಾದ ಜಲಚರಗಳು ತಮ್ಮದೇ ಆದ ವಿಶಿಷ್ಟ ಗುಣ ಉಳ್ಳಂತಹವು. ಗುಣಕ್ಕೆ ತಕ್ಕ ಹಾಗೆ ಅವು ಕೆಲಸ ನಿರ್ವಹಿಸುತ್ತಿವೆ. 'ಕೊಂತಿ' ಮೀನು ತೆಳ್ಳಗೆ ಉದ್ದವಾಗಿರುತ್ತದೆ. ನೀರಲ್ಲಿ ಈಜಾಡುವಾಗ ಅದನ್ನು ನೋಡಿದರೆ ಕೊಂಬು ಊದುವ ವ್ಯಕ್ತಿಯಂತೆ ಕಾಣುವ ಕಾರಣದಿಂದ ಹಾಡಿನಲ್ಲಿ ಕೊಂಬು ಹಿಡಿದುಕೊಂಡು ಓಡುವ ಮೀನೆಂದು ಪರಿಚಯಿಸಲಾಗಿದೆ. 'ದಿಡುಂಬು' ಎಂಬುವುದು ಒಂದು ಚರ್ಮವಾದ್ಯ. 'ಮಡಂಜೆ' ಮೀನಿನ ಚಲನವಲನವನ್ನು ಗಮನಿಸಿ, ಅದು 'ದಿಡುಂಬು' ಹೊಡೆಯುತ್ತಿದೆ ಎಂದು ವರ್ಣಿಸಲಾಗಿದೆ. 'ಮುಗುಡು' ಮೀನಿಗೆ ಉದ್ದವಾದ ಮೀಸೆಗಳಿವೆ. ಅದು ಮೀಸೆ ಎಸೆಯುತ್ತಾ ಬರುವ ಅದರ ಸ್ವಾಭಿಮಾನವನ್ನು ಹಾಡುಗಾರ್ತಿ ತಿಳಿಸುತ್ತಾಳೆ. 'ಮೊರಂಟೆ' ಮೀನಿನ ತಲೆ, ಗಾತ್ರದಲ್ಲಿ ದೊಡ್ಡದಾಗಿದ್ದು, ಮುಂಡಾಸು ಕಟ್ಟಿದಂತೆ ಕಾಣುತ್ತದೆ. ಕೊಡ್ಯಾನ್ ಮೀನಿಗೆ ಹಣೆಯಲ್ಲಿ ನಾಮದಂತೆ ಗುರುತಿದೆ. 'ಏಡಿ' ನಡೆಯುವುದು ತೆವಳುತ್ತಾ. ಈ ಎಲ್ಲಾ ಜಲಚರಗಳನ್ನು ಗಂಡು ಜಾತಿಗೆ ಸೇರಿಸಿ ಮದುಮಗನಿಗೆ ಸಹಾಯಕರನ್ನಾಗಿಸಿದ್ದಾಳೆ. ಹೆಣ್ಣು ಜಾತಿಗೆ ಸೇರುವ ತೆಬಟೆ, ಚಂದ್ರಮಡೆ, ಬಾಲೆ, ಕಿರ್ಜ, ಎಟ್ಟೆ, ಕೈಪೆ ಮೀನುಗಳು ಮದುಮಗಳನ್ನು ಅಲಂಕರಿಸುವ ಕೆಲಸದಲ್ಲಿ ನಿರತರಾಗಿರುವುದನ್ನು ತಿಳಿಸುತ್ತಾಳೆ.

ತುಳು ನಾಡಿನಲ್ಲಿ ಪ್ರಸಿದ್ಧವಾದ ಮೀನುಗಳ ಪಟ್ಟಿಯನ್ನು ಈ ಹಾಡಿನಲ್ಲಿ ಗಮನಿಸಬಹುದು. ಮೀನುಗಾರರಿಗೆ ಪ್ರತಿಯೊಂದು ಜಾತಿಯ ಮೀನಿನ ಗುಣ-ಸ್ವಭಾವದ ಪರಿಚಯವಿದೆ. ಮದುವೆ ಸಂಪ್ರದಾಯದ ಆಚರಣೆಯನ್ನು ಮೀನುಗಳಲ್ಲಿ ಕಾಣಲು ಬಯಸುತ್ತಿರುವ ಹಾಡುಗಾರ್ತಿ ಪ್ರಾಣಿಗಳನ್ನು ತನ್ನಂತೆಯೇ ಎಂದು ಭಾವಿಸಲು ಅವುಗಳೊಡನೆ ಮೀನುಗಾರರು ಹೊಂದಿರುವ ನಿಗಟ ಸಂಪರ್ಕ ಕಾರಣವಾಗುತ್ತದೆ. ಪ್ರಾಣಿಗಳ, ಮರ-ಗಿಡಗಳ ನಡುವೆ ಮದುವೆ ಮಾಡಿಸುವ ಸಂಪ್ರದಾಯವು ಜನಪದರಲ್ಲಿ ಸಾಮಾನ್ಯವಾಗಿದೆ.

ಡಾ|| ಬಿ. ಎ. ವಿವೇಕ ರೈ ಅವರು ತಿಳಿಸುವಂತೆ "ಇನ್ನೊಂದು ತುಳು ಜನಪದ ಗೀತೆಯಲ್ಲಿ ಒಬ್ಬಾಕೆ ಗೆಳತಿಯನ್ನು ಕರೆದು ಪಡುವಣಕ್ಕೆ ಹೋಗೋಣ" ಎನ್ನುತ್ತಾಳೆ. ಪಡುವಣದಲ್ಲಿ ಕಡಲಿದೆ, ಅಲ್ಲಿ ಸಾಕಷ್ಟು ಮೀನುಗಳಿವೆ. ಅವುಗಳನ್ನು ಹಿಡಿಯೋಣ ಎನ್ನುವುದು ಆಕೆಯ ಆಸೆ. ಆ ಹಾಡು ಹೀಗೆ ಆರಂಭವಾಗುತ್ತದೆ.

ಓ ಮನಂಗೋ ಓ ಚೆನಂಗೋ - ಪಡ್ಡಯಿ ಪೋವಂತಾಯಿಜಿ
ಎಟ್ಟಿ ತಿನಂದೆ ಕರಿಯಿಜಿ

'ಓ ಮನಂಗೋ, ಓ ಚೆನಂಗೋ ಪಡುವಣಕ್ಕೆ ಹೋಗದೆ ಆಗದು
ಸೀಗಡಿ ಮೀನು ತಿನ್ನದೆ ಆಗದು'

ಹೀಗೆ ಮುಂದುವರಿಯುವ ಪ್ರತಿ ಸಾಲಿನಲ್ಲೂ ಒಂದೊಂದು ಜಾತಿಯ ಮೀನುಗಳ ಹೆಸರುಗಳು ಬರುತ್ತವೆ. ಹಾಡಲ್ಲಿ ಬರುವ ಮನಂಗೊ ಎಂಬುದು ಒಂದು ಜಾತಿಯ ಮೀನಿನ ಹೆಸರಾಗಿದ್ದು, ಅದಕ್ಕೆ ಸರಿಹೊಂದುವ ಪ್ರಾಸಬದ್ಧ ಶಬ್ದವು 'ಚೆನಂಗೋ' ಆಗಿದೆ. ಹೆಣ್ಣು ಮೀನು ತಿನ್ನುವ ಬಯಕೆಯನ್ನು ಈ ಹಾಡು ವ್ಯಕ್ತಪಡಿಸುತ್ತದೆ. ಅಲ್ಲದೆ ಕರಾವಳಿಯ ಪ್ರಮುಖ ಆಹಾರವನ್ನು ಇದು ಪರಿಚಯಿಸುತ್ತದೆ. ಅದರಲ್ಲೂ ಕರಾವಳಿಯ ಜನರಿಗೆ 'ಸೀಗಡಿ' ಎಂದರೆ ಪಂಚಪ್ರಾಣ. ಅದಕ್ಕೆ ಜಲಚರ ಪ್ರಾಣಿಗಳಲ್ಲೆಲ್ಲಾ ಹೆಚ್ಚು ಬೆಲೆ. ಸೀಗಡಿ ಪದಾರ್ಥ ಮಾಡಿದರೆ ಅದು ಅವರ ವಿಶೇಷ ಆಹಾರ ಅದನ್ನು ತಿನ್ನುವ ತವಕ ಹಾಗೂ ತಿನ್ನದಿದ್ದರೆ ತಾಳಲಾಗದ ಮನೋಭಾವ ಇವೆರಡನ್ನು ಹಾಡು ತಿಳಿಸುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊರಗರು ಹರಿಜನರಲ್ಲೊಂದು ವರ್ಗ. ಅವರು ಹಾಡುವ "ಲೇಲೇ ಪದಗಳಲ್ಲೂ" ಮೀನಿನ ವರ್ಣನೆ ಇದೆ. ಕುಣಿತದ ಸಂದರ್ಭದಲ್ಲಿ ಹಾಡುವ ಈ ಹಾಡಿನಲ್ಲಿ ಮೀನುಗಾರಿಕೆಯ ಚಿತ್ರಣವಿದೆ.

" ಲೇ ಲೇ ಲೇಲೆ ಲೇಲೇಲಾ ಲೇಲೆ ಲೇಲೆ ಲೇಲೆಲಾ
ಓಡ ಕರೆಕ್ ಕೊಣತೆದೇ ತೇಡೆ ಮೀನು ಪತ್ತೊಡು
ಲಲಲ ಮೀನ್ ಪತ್ಯೆಗಾ ವುಲೊಲೊ ಯೇಮೆ ಪೋಂಡೆಗಾ
ಕಾಣಿ ಮೀನ್ ಉಂಡುಗಾ, ಕಣ್ ಬುಡೆದ್ ತೂಲಿಗಾ
ಪೊರ್ತು ಬಯ್ಯ ಅಂಡೆಗಾ, ಜತ್ತೆ ದೋಡೊ ಪೋಯಿಗಾ"

" ಲೇ ಲೇ ಲೇಲೆ ಲೇಲೇಲಾ ಲೇಲೆ ಲೇಲೆ ಲೇಲೆಲಾ
ದೋಣಿಯನ್ನು ಕೆರೆಗೆ ತಂದು ತೇಡೆ ಮೀನು ಹಿಡಿಯಬೇಕು
ಲ ಲ ಲ ಮೀನು ಹಿಡಿಯಿರೋ 'ಅಯ್ಯೊ ಆಮೆ ಹೋಯಿತೋ
ಕಾಣೆ ಮೀನು ಇವೆ, ಎಲಾ ಕಣ್ಣು ಬಿಟ್ಟು ನೋಡೆಲಾ
ಹೊತ್ತು ಸಂಜೆ ಆಯಿತೋ ದೋಣಿ ಇಳಿದು ಹೋಗುವಾ'

ಚಿತ್ರಕ ಶೈಲಿಯಲ್ಲಿರುವ ಈ ಹಾಡು ಕುಣಿತಕ್ಕೆ ಸರಿಹೊಂದುವ ಭಾಷೆಮತ್ತು ಲಯದಿಂದ ಪ್ರಾರಂಭವಾಗಿ ಕಡಲಿಗರ ವೃತ್ತಿಯನ್ನು ಪರಿಚಯಿಸುತ್ತದೆ. ಪ್ರಮುಖ ಮೀನುಗಳಾದ ತೇಡೆ ಕಾಣೆ ಹಾಗೂ ಆಮೆಯನ್ನೂ ಹಿಡಿಯುತ್ತಿರುವ ಬಗೆಯನ್ನು ಹಾಡಲ್ಲಿ ಗಮನಿಸಬಹುದು. ಮೀನುಗಾರರು ವೃತ್ತಿ ನಿರತರಾದಾಗ ಅವರಲ್ಲಿ ವ್ಯಕ್ತಗೊಳ್ಳುವ ತವಕ "ಲಲಲ ಮೀನ್ ಪತ್ಯೆಗಾ ವುಲೊಲೊ ಯೇಮೆ ಪೋಂಡೆಗಾ" ಎಂಬ ವಾಕ್ಯದಲ್ಲಿ ಗಮನಿಸಬಹುದಾಗಿದೆ. ಪತ್ಲೆಗಾ, ಪೋಂಡುಗಾ, ಉಂಡುಗಾ, ತೂಲಗಾ, ಅಂಡೆಗಾ, ಪೋಯಿಗಾ, - ಈ ಎಲ್ಲ ಪದಗಳ ಕೊನೆಯಲ್ಲಿ ಬರುವ 'ಗಾ' ಎನ್ನುವ ಅಕ್ಷರವು ಹರಿಜನರ ಹುಡುಗರನ್ನು ಸಂಬೋಧಿಸುವುದನ್ನು ಸೂಚಿಸುತ್ತದೆ. ಸಾಮಾನ್ಯ ಮಾತುಕತೆಗಳಲ್ಲಿಯೂ ಹರಿಜನ ಬಾಲಕರನ್ನು ಕುರಿತು ಹೇಳುವಾಗ ಮಾತಿನ ಕೊನೆಯಲ್ಲಿ 'ಗಾ' ಸೇರಿಸುತ್ತಾರೆ. 'ಮಗಾ' ಎನ್ನುವ ಪ್ರೀತಿ ಸೂಚಕವಾದ ಶಬ್ದ 'ಅಗಾ' ಎಂದಾಗಿ ಅದೇ ಸಂಕ್ಷಿಪ್ತವಾಗಿ 'ಗಾ' ಎಂದಾಗಿದೆ.

ಮಾಗಾ > ಅಗಾ > ಗಾ

ಈ ಮೊದಲಿನ 'ಮೀನಿನ ದಿಬ್ಬಣ' ಹಾಡಿಗೆ ಹೋಲಿಕೆಯಾಗುವ ಮೀನಿನ ಮದುವೆ ಹಡೊಂದು ಕನ್ನಡದಲ್ಲಿ ಸಿಗುತ್ತದೆ. ಹೆಣ್ಣು ಕೊಡುವ ಬಗ್ಗೆ ವಿಚಾರಿಸುವ ಸಂಪ್ರದಾಯ ಈ ಹಾಡಲ್ಲಿ ವ್ಯಕ್ತಗೊಂಡಿದೆ.

ಆ ಮೀನು ಈ ಮೀನು ಮಾಮೀನು ಮಡದಲೆ ಮೀನು
ಆಯಿಕ್ ಮೀನ್ ಬುದ್ವಂತನ ಕರೆಸಿ
ಆಯಿಕ್ ಮೀನ್ ಬುದ್ವಂತನ ಕರೆಸಿ ಪಂಚೆತಿ ಮಾಡಿ
ಯಾವ್ ಮೀನಿಗೆ ಹೆಣ್ಣ ಕೊಡಲಿಕ್ಕು
ಯಾವ್ ಮೀನಿಗೆ ಹೆಣ್ಣ ಕೊಡಲಕ್ಕು ಬುದ್ವಂತರೆ
ಮುಳ್ಳು ಶ್ಯಾಡಿಗೆ ಹೆಣ್ಣ ಕೊಡಬಹುದು

ಮುಳ್ಳು ಶ್ಯಾಡಿಗೆ ಹೆಣ್ಣ ಕೊಟ್ಟರೆ ಬುದ್ವಂತರೆ
ಮುಳ್ಳು ಮುಳ್ಳಿನಲಿ ಉಡುವರು
ಕೊಡಬೇಕು ದೊಡ್ಕೆರೆಯ ಕರಸಿಗೆ ಹೆಣ್ಣನ್ನು
ಕೊಟ್ಟರೆ ಪಕ್ಕದೊಳದರ ಸಲಗುವುದು

ಈ ಕಿರುಗೀತೆ ಮೀನುಗಾರರ ಸಮಾಜದ ಒಳಾಡಳಿತವನ್ನು ತಿಳಿಸುತ್ತದೆ. ಊರಿನ ಆಡಳಿತ ನೋಡಿಕೊಳ್ಳಲು ನೇಮಕವಾಗಿರುವ ಬುದ್ವಂತನನ್ನು ಬಿಟ್ಟು ಊರವರು ಯಾವ ವಿಶೇಷ ಕಾರ್ಯವನ್ನೂ ಮಾಡುವುದಿಲ್ಲ. ಮದುವೆ ಕಾರ್ಯದಲ್ಲಿ ಬುದ್ವಂತ ಮಾರ್ಗದರ್ಶಕ, ನ್ಯಾಯವಾದಿ ಸಲಹೆಗಾರ. ಆದಕಾರಣ ಮೀನಿಗೆ ಮದುವೆ ಮಾಡಲು ಅದರ ತಂದೆ-ತಾಯಿ ಹೆಣ್ಣನ್ನು ಯಾರಿಗೆ ಕೊಡಬೇಕೆಂದು ಈ ಬುದ್ವಂತನನ್ನು ಕೇಳುತ್ತಿರುವುದು. ಆತನ ಮೊದಲ ಸೂಚನೆ 'ಮುಳ್ಳು ಶ್ಯಾಡಿಗೆ ' ಹೆಣ್ಣು ಕೊಡಬಹುದೆಂದು. ಆದರೆ ಅದಕ್ಕೆ ಒಪ್ಪದೆ ಇರಲು ಮೀನಿನ ವಾರಸುದಾರರು ಕೊಡುವ ಕಾರಣ ಸಮಂಜಸವಾಗಿದೆ. ಇಲ್ಲಿ 'ಮುಳ್ಳು' ಮೀನಿನ ಕೆಟ್ಟ ಗುಣವನ್ನು ಬಿಂಬಿಸುತ್ತದೆ. ಕೆಟ್ಟವರ ಮನೆ ಸೇರಿದ ಹೆಣ್ಣಿಗೆ ಎಂದೂ ಸುಖ ಸಿಗದೆಂಬ ಇಲ್ಲಿನ ಅನುಭವದರಿವು ಸಮಾಜಕ್ಕೊಂದು ಮಾರ್ಗದರ್ಶನ. ಒಳ್ಳೆಯ ಗುಣ ಉಳ್ಳವರ ಮನೆ ಸೇರಿದರೆ,

ಹೆಣ್ಣು ಸುಖವಾಗಿರಬಲ್ಲಳೆಂಬುದನ್ನು ಹಾಡಿನ ಕೊನೆಯ ಸಾಲುಗಳಲ್ಲಿ ಕವಿ ತಿಳಿಸುತ್ತಾನೆ. ಜನಪದ ಸಂಪ್ರದಾಯ ಒಂದರ ಪರಿಚಯವನ್ನು ಈ ಹಾಡು ಮಾಡಿಕೊಡುತ್ತದೆ. ಹೆಣ್ಣು ಹೆತ್ತವರು ತಮ್ಮ ಮಗಳನ್ನು ಪರರ ಮನೆಗೆ ಕೊಡುವಾಗ ಸಮಾಜದ ಮುಖಂಡರ ಅಭಿಪ್ರಾಯ ಕೇಳುವ ಜನಪದ ಸಮಾಜದ ನಿಯಮವನ್ನು ಈ ಹಾಡು ತಿಳಿಸುತ್ತದೆ.

ಪ್ರಿಯತಮನು ಸಮುದ್ರದ ಸಂಪತ್ತನ್ನು ತರಲು ಹೋದಾಗ ಮನೆಯಲ್ಲಿ ಪ್ರಿಯತಮೆ ಕಾಲ ಕಳೆಯುವುದು ಕಷ್ಟವಾಗುತ್ತದೆ. ಯಾವ ಕೆಲಸದಲ್ಲೂ ಆಸಕ್ತಿ ಇಲ್ಲದ ಅವಳು, ಪ್ರಿಯತಮನ ದೋಣಿ ದಡದ ಕಡೆಗೆ ಬರುವುದನ್ನೇ ನಿರೀಕ್ಷಿಸುತ್ತಿರುತ್ತಾಳೆ. ಪ್ರೀತಿಯ ಕೊಡ ತುಂಬಿಕೊಂಡು ನಿಂತಿರುವ ಹೆಣ್ಣೊಬ್ಬಳ ಭಾವನೆಗಳನ್ನು ತುಳು ಪದ್ಯದ ತುಣುಕು ಬಹುಸೊಗಸಾಗಿ ಚಿತ್ರಿಸುವುದನ್ನು ಗಮನಿಸಬಹುದು.

ಬ್ಯಾಲೆಗಿ ಜ್ವಾಲೆ ಪೊಣ್ಣು
ಕಾಲೆಗಿ ಜ್ವಾಲೆ
ಕತಾಲ್ದವಾಡ ಬನ್ನಗ
ತಯರಾಯಲೆ
(ಹೆಣ್ಣು ಕೆಲಸಕ್ಕೆ ಸಿಗುವವಳಲ್ಲ
ಸಮಯಕ್ಕೆ ಬರುವವಳೂ ಅಲ್ಲ
ಆದರೆ ಕಂತ ಬಲೆಯ ದೋಣಿ ಬರುವಾಗ ಮಾತ್ರ
ತಯಾರಾಗಿರುತ್ತಾಳೆ
ಯಾಕೆಂದರೆ ಅದಲ್ಲಿ ಆಕೆಯ ಪ್ರಿಯತಮ ಬರುತ್ತಾನೆ)

ಹಗಲೆಲ್ಲಾ ಸಮುದ್ರದಲ್ಲಿ ದುಡಿದು ದಣಿದು ಬರುವ ಪ್ರಿಯತಮನಿಗೆ ಮುಖ ದರ್ಶನ ನೀಡಿ ದಣಿವಾರಿಸಲು ನಿರೀಕ್ಷಿಸುವ ಹೆಣ್ಣಿನ ಮನವನ್ನು ಹಾಡುಗಾರ್ತಿ ಬಹಳ ಹತ್ತಿರದಿಂದ ಅರಿತಿರುವಂತಹವಳು. ಆದ್ದರಿಂದ ಈ ಹಾಡಿನ ಮೂಲಕ ಅದನ್ನು ಪರಿಣಾಮಕಾರಿಯಾಗಿ ಪರಿಚಯಿಸುತ್ತಾಳೆ.

ಮೀನುಗಾರಿಕೆ ಸಾಮೂಹಿಕ ಕಾರ್ಯ. ಒಂಟಿ ಶಕ್ತಿಗಿಂತ ಜಂಟಿ ಶಕ್ತಿ ಅಲ್ಲಿ ಪ್ರಧಾನ. ಈ ಸಾಮೂಹಿಕ ಕೆಲಸದ ವರ್ಣನೆಯನ್ನು ಈ ಪದ್ಯ ತಿಳಿಸುತ್ತದೆ.

ಅಂಬ ಪಾಡ್ದ್ ದಮ್ಮು ಕಟ್ಟ್‌ಡ್
ಜಾರೊಡು ಬೇಗ
ನಿಲೆಲ್ ದಾಂತಿ ನೀರ್ ಡೆಂಕ್ಲು
ಕನತೂ ಮೀನ್‌ನ್
ಬೈಲ್ ಜತ್‌ದ್ ಮೀನ್ ಮಾರ್‌ದ್
ಬರುವೊ ಬೇಗ - ನನ
ಬರವೋ ಬೇಗ ॥

(ಉಸಿರು ಕಟ್ಟಿ ಅಂಬ ಹಾಕುತ್ತಾ
ನಾವು ಬೇಗನೆ ಹೋಗಬೇಕು
ನೆಲೆ ಸಿಗದ ನೀರಿಗೆ ಹೋಗಿ
ನಾವು ಮೀನು ತಂದಿದ್ದೇವೆ
ಇನ್ನು ಬಯಲಿಗೆ ಹೋಗಿ ಮೀನು ಮಾರಿ
ನಾವು ಬೇಗ ಬರುತ್ತೇವೆ
ನಾವು ಬೇಗ ಬರುತ್ತೇವೆ)

ದಡದಲ್ಲಿದ್ದ ದೋಣಿಯನ್ನು ಸಮುದ್ರಕ್ಕೆ ತಳ್ಳುವಾಗ ಅಲ್ಲಿದ್ದವರೆಲ್ಲಾ ಸೇರಿ "ಅಂಬ ಹಾಕಿ" ಶಕ್ತಿಗೂಡಿಸುತ್ತಾರೆ. ಸಮುದ್ರ ಸೇರಿದ ದೋಣಿ ನಡುಕಡಲಿಗೆ ಹೋಗುತ್ತದೆ. ಜನಪದರ ದೃಷ್ಟಿಯಲ್ಲಿ ಅದು "ನೆಲೆ ಸಿಗದ ನಿರಾಗಿದೆ". ಅಂತಹ ಆಳ ಪ್ರದೇಶದಲ್ಲಿ ಮೀನು ಹಿಡಿಯುವ ಅವರ ಸಾಹಸಕಾರ್ಯ ಮೆಚ್ಚುವಂತಹದು. ಕಷ್ಟಪಟ್ಟು ಹಿಡಿದು ತಂದ ಮೀನನ್ನು ಬಯಲು ಪ್ರದೇಶದಲ್ಲಿ ಮಾರಾಟ ಮಾಡಲು ಹೊರಟ ಮೀನುಗಾರರ ಆಸೆಯನ್ನು ಕೊನೆಯ ಸಾಲುಗಳು ವ್ಯಕ್ತಪಡಿಸುತ್ತವೆ. ಈ ಪದ್ಯದಲ್ಲಿ ಮೀನುಗಾರರ ಆಶಾಭಾವವು ವ್ಯಕ್ತಗೊಳ್ಳುತ್ತದೆ.

ಮೀನುಗಾರರ ಕೌಟುಂಬಿಕ ಚಿತ್ರಣ ನೀಡುವ ಚುಟುಕೊಂದರ ಸಾಲುಗಳಲ್ಲಿ ಮನೆಯ ವಾತಾವರಣವನ್ನು ಕಣ್ಮುಂದೆ ತಂದು ನಿಲ್ಲಿಸುವ ಕವಿಯ ಪ್ರತಿಭೆ ಮೆಚ್ಚುವಂತಹದಾಗಿದೆ.

ಜೋಜೋ ಬಾಲೆಗ್ ಜೋ ಜೋ ಬಾಲೆ
ಬಾಲೆತಮ್ಮೆ ಮೀನ್‌ಗ್ ಪೋದಂಡ್
ಬಾಲೆತಪ್ಪೆ ಮೂಡಾಯಿ ಪೊದಂಡ್
ಜೆಪ್ಪುಲ ಬಾಲೆ ಈ ಬುಲ್ಪಡಾ
ದೇವೆರುಲ್ಲೆರ್ ಮಗಾ ನಿಕ್ಕ್
ನಾರಾಯಣ ದೇವರ್

(ಜೋಜೋ ಮಗುವಿಗೆ ಜೋಜೋ ಮಗುವೆ
ಮಗುವಿನ ತಂದೆ ಮೀನಿಗೆ ಹೋಗಿರುವನು
ತಾಯಿ ಮೀನು ಮಾರಲು ಮೂಡಲ ದಿಕ್ಕಿಗೆ ಹೋಗಿರುವಳು
ನೀನು ಮಲಗು ಕಂದ ಅಳಬೇಡ
ದೇವರಿದ್ದಾರೆ ಮಗಾ ನಿನಗೆ
ನಾರಾಯಣ ದೇವರಿದ್ದಾರೆ)

ಮೀನುಗಾರರ ಕುಟುಂಬದಲ್ಲಿ ಮನೆಯೊಡೆಯ ಮತ್ತು ಮನೆಯೊಡತಿಯರಿಬ್ಬರೂ ದುಡಿಯಲು ಹೋಗುವುದು ಅನಿವಾರ್ಯವಾಗುತ್ತದೆ. ಸಮುದ್ರಕ್ಕೆ ಹೋಗಿ ಮೀನು ತರುವ ಕೆಲಸ ಮನೆಯ ಯಜಮಾನನದಾದರೆ, ಪತಿ ತರುವ ಮೀನನ್ನು ಮಾರಾಟ ಮಾಡುವ ಕೆಲಸ ಪತ್ನಿಯದು. ಹೀಗೆ ಅವರಿಬ್ಬರೂ ತಮ್ಮ ತಮ್ಮ ಕೆಲಸಗಳಲ್ಲಿ ನಿರತರಾದಾಗ ಮನೆಯಲ್ಲಿನ ಮಕ್ಕಳ ಜವಾಬ್ದಾರಿ ನೆರೆಹೊರೆಯ ಹೆಗಲ ಮೇಲಿರುತ್ತದೆ. ತಾಯಿಯನ್ನು ಕಾಣುವ ಕಾತುರತೆಯನ್ನು ತುಂಬಿಕೊಂಡು ಅದನ್ನು ಅಳುವಿನ ಮೂಲಕ ಮಗು ವ್ಯಕ್ತಪಡಿಸಿದಾಗ ಸಮಾಧಾನ ಮಾಡುವ ನೆರೆ ಮನೆಯ ಹೆಣ್ಣೊಬ್ಬಳು ಹೇಳುವ ಮಾತು ಅರ್ಥಪೂರ್ಣವಾದುದು. ಮಕ್ಕಳು ತಂದೆ-ತಾಯಿಯಿಂದ ದೂರವಿದ್ದಾಗ ಅವುಗಳಿಗೆ ಸಮಾಧಾನಪಡಿಸುವಂತಹವನು ದೇವರೊಬ್ಬನೆ ಏಕೆಂದರೆ ಅವುಗಳ ಹಟಕ್ಕೆ ತಂದೆ ತಾಯಿಗಳ ದರ್ಶನವೇ ಮದ್ದಾಗಿರುವ ಸಂದರ್ಭದಲ್ಲಿ ಅವರೇ ಇಲ್ಲದಾಗ ದೇವರು ಮಾತ್ರ ಅವರ ಹಟ ನಿಲ್ಲಿಸಲು ಸಾಧ್ಯ. ಈ ಪದ್ಯದಲ್ಲಿ ಮಗುವಿನ ಮೇಲಿನ ಮಮತೆಗಿಂತ ತನ್ನ ಹೆಗಲ ಮೇಲಿರುವ ಜವಾಬ್ದಾರಿ ಮುಖ್ಯವೆಂದು ಭಾವಿಸುವ ತಾಯಿಯ ಕರ್ತವ್ಯ ಪ್ರಜ್ಞೆ ಮುಖ್ಯವಾಗಿದೆ. ಮೀನನ್ನು ಮಾರಾಟ ಮಾಡಲು ಹೋಗದೆ, ಮಗುವಿನ ಯೋಗಕ್ಷೇಮದೆಡೆ ಅವಳು ಮನಸ್ಸು ಮಾಡಿದರೆ ಪತಿಯ ಶ್ರಮವೆಲ್ಲಾ ಮಣ್ಣುಪಾಲಾಗುತ್ತದೆ. ಕೆಲವೇ ಗಂಟೆಗಳಲ್ಲಿ ಮಾರಾಟವಾಗದಿದ್ದರೆ ಮೀನು ಹಾಳಾಗುವುದು ಮಾತ್ರವಲ್ಲ, ಆ ದಿನದ ಒಲೆ ಉರಿಯುವುದಿಲ್ಲ. ಇಂತಹ ಇಕ್ಕಟ್ಟಿನ ಸಂದರ್ಭದಲ್ಲಿ ತಾಯಿ ಮಗುವಿನ ಮಮತೆಯನ್ನು ತಾತ್ಕಾಲಿಕವಾಗಿ ಬದಿಗಿಟ್ಟು ತನ್ನ ಕೆಲಸದ ಕಡೆಗೆ ಗಮನಹರಿಸುವುದು ಅನಿವಾರ್ಯವಾಗುತ್ತದೆ. ಹಾಡುಗಾರ್ತಿ ಒಂದು ಚಿಕ್ಕ ಕುಟುಂಬದ ಸ್ಥಿತಿಗತಿಯನ್ನು ಈ ಕಿರುಗವಿತೆಯಲ್ಲಿ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾಳೆ.

ಹೀಗೆ ಸಮುದ್ರಕ್ಕೆ ಸಂಬಂಧಿಸಿದ ವಸ್ತುವನ್ನು ಬಳಸಿಕೊಂಡು ರಚಿಸಲ್ಪಟ್ಟಿರುವ ಬಿಡಿ ಗೀತೆಗಳು "ಕರಿಯನ್ನು ಕನ್ನಡಿಯಲ್ಲಿ ಕಂಡರಿಸಿದಂತೆ" ಕಾಣುತ್ತವೆ. ಜನಪದರು ವಿವಿಧ ವಸ್ತುಗಳನ್ನು ಬಹುಸುಲಭವಾಗಿ ಸೆರೆಹಿಡಿಯಬಲ್ಲರು. ಪ್ರಕೃತಿ ಪ್ರೇಮಿಗಳಾದ ಅವರು ಸಮುದ್ರಕ್ಕೆ ಮಹಾಕವಿಗಳಿಗಿಂತ ಹೆಚ್ಚಿನ ಮಹತ್ವ ಕೊಟ್ಟಂತಹವರು. ಆದ್ದರಿಂದಲೇ ಅವರ ಬಿಡಿಗೀತೆಗಳು ಸಮುದ್ರದ ಸಂಪತ್ತನ್ನೆಲ್ಲಾ ಪರಿಪೂರ್ಣವಾಗಿ ಪರಿಚಯಿಸುವುದರ ಮೂಲಕ ಸಹೃದಯರನ್ನು ಸೆರೆಹಿಡಿಯುತ್ತವೆ. ಜನಪದ ಗೀತೆಗಳ ಕ್ಷೇತ್ರದಲ್ಲಿ ಸಮುದ್ರಕ್ಕೊಂದು ಸ್ಥಾನ ಕಲ್ಪಿಸಿ ವಿಶಿಷ್ಟ ಸ್ಥಾನ ಪಡೆಯುತ್ತವೆ.

ಕಥನ ಗೀತೆಗಳು:

ಜನಪದರ ಜಗತ್ತಿನಲ್ಲಿ ಸಾಹಿತ್ಯ, ಕಲೆ, ನೃತ್ಯ, ಸಂಗೀತಗಳಿಗೆ ಹೆಚ್ಚಿನ ಸ್ಥಾನ. ಅವು ಮನರಂಜನೆಯ ಮಾಧ್ಯಮಗಳು ಮಾತ್ರವಲ್ಲ ಅವರ ಸಂಸ್ಕೃತಿಯನ್ನರಿಯಲು ಅವುಗಳನ್ನರಿಯುವುದು ಅನಿವಾರ್ಯ. ಅದರಲ್ಲೂ ಅವರ ಕಥಾಸಾಹಿತ್ಯವು ಅವರ ಬದುಕಿನ ವಿವಿಧ ದೃಶ್ಯಗಳನ್ನು ಪ್ರತಿಬಿಂಬಿಸುವ ದರ್ಪಣ. ಗದ್ಯ ಕಥೆಗಳಿಗಿಂತ ಕಥನ ಗೀತೆಗಳು ಅವರಲ್ಲಿನ ಕಾವ್ಯ ಕಲೆ, ಕಥನ ಶೈಲಿ, ಸಂಗೀತಗಳನ್ನು ಪರಿಣಾಮಕಾರಿಯಾಗಿ ಪರಿಚಯಿಸಬಲ್ಲದು. ಮಹತ್ವವಾದ ಸಮುದ್ರ ಸಂಬಂಧಿ ವಿಷಯಗಳನ್ನು ಕಥೆಯಲ್ಲಡಗಿಸಿ ಹಾಡುವಾಗ ಜನಪದರ ನೋವು ನಲಿವುಗಳು ಉಬ್ಬರವಿಳಿತಗಳಂತೆ ಬಂದು ಸಹೃದಯರನ್ನು ಸೆರೆಹಿಡಿಯುತ್ತವೆ. ನಿದರ್ಶನಕ್ಕೆ ಕೆಲವು ಕಥನ ಗೀತೆಗಳನ್ನು ಗಮನಿಸಬಹುದು.

(ಅ) ಎಲ್ಲಾಳೆಯ ಕಥನ ಕವನ:

ಇದು ದು:ಖಾಂತ ಕಥನ ಗೀತೆ. ಮದುವೆಯಾದ ಹೆಣ್ಣು ತನ್ನ ಪತಿಯೊಡನೆ ಬದುಕಲು ತವರನ್ನು ಬಿಟ್ಟು ಗಂಡನಮನೆಗೆ ಹೋದಾಗ ಅಲ್ಲಿ ಅವಳು ತನ್ನ ಪತಿಯ ಪರೀಕ್ಷೆಗೊಳಗಾಗಿ ಜಯಿಸುವುದು ಕಥಾವಸ್ತು. ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣು ತನ್ನ ಪಾವಿತ್ರತೆಯನ್ನು ಕಾಪಾಡಿಕೊಂಡು ಬದುಕಿದರೂ ಪುರುಷರ ಸಂಶಾಯದ ಸುಳಿಗೆ ಸಿಕ್ಕಿ ಒದ್ದಾಡುವ ಅಸಹಾಯಕ ಸ್ಥಿತಿಯನ್ನು ಎಲ್ಲಾಳೆಯ ಕಥನ ಕವನ ತಿಳಿಸುತ್ತದೆ.

ರಾಜ ತನ್ನ ಮಗಳು ಎಲ್ಲಾಳೆಯನ್ನು ಮದುವೆ ಮಾಡಿ ಪತಿಯ ಮನೆಗೆ ಕಳುಹಿಸುವಾಗ ಅವಳೊಡನೆ ಸುಂದರಳಾದ ಸೇವಕಿಯನ್ನು ಕಳುಹಿಸುತ್ತಾನೆ. ಅವಳು ಪತಿಯ ಮನೆಗೆ ಬಂದಾಗ ಸುಂದರಳಾದ ಸೇವಕಿಯನ್ನು ಆತ ತನ್ನ ಪತ್ನಿ ಎಂದು ಭಾವಿಸಿ ತನ್ನ ಕೈ ಹಿಡಿದ ಪತ್ನಿಯನ್ನು ಸೇವಕಿ ಎಂದು ತಿಳಿಯುತ್ತಾನೆ. ಪತಿಯ ತಪ್ಪು ತಿಳಿವಳಿಕೆಯನ್ನು ದೂರಮಾಡಲು ಪತ್ನಿ ಪ್ರಯತ್ನಿಸುತ್ತಾಳೆ. ಆದರೆ ಅದಕ್ಕೆ ಅವನು ಒಪ್ಪದೆ ತಾನೊಡ್ಡುವ ಪರೀಕ್ಷೆಗಳನ್ನೆಲ್ಲಾ ಜಯಿಸಿದರೆ ಮಾತ್ರ ನಿನ್ನನ್ನು ತಾನು ಪತ್ನಿ ಎಂದು ಸ್ವೀಕರಿಸುವೆನೆಂದು ಸವಾಲೊಡ್ಡುತ್ತಾನೆ. ಅಸಹಾಯಕಳಾದ ಎಲ್ಲಾಳೆ ಪತ್ನಿಯ ಪರೀಕ್ಷೆಗೆ ಒಳಗಾಗುತ್ತಾಳೆ.

ಮೊದಲ ಪರೀಕ್ಷೆ:

ಪತಿವರ್ತೆ ಅಂದ್ಹೇಳೆ ಹಸನಗಿಗೊಳಬೇಡಾ
ಪತಿವರ್ತೆ ಸಯ್ಯೆ ದರಿಯಲ್ಲೆ
ಪಿಕಾಸಿಲೂ ಅಗಿಬಾರಾ ಕುಟಾರಿಲೂ ಕಡಿಬಾರಾ
ಅರ್‍ಯಾಮನ್ಬಾವಿ ಕಡಿಬೇಕೇ?

ಅರೆಯ ಮೇಲೂ ಬಾವಿ ತೆಗೆವ ಕಠಿಣ ಕೆಲಸಕ್ಕೂ ಎಲ್ಲಾಳೆ ಸಿದ್ಧವಾಗುತ್ತಾಳೆ.

ಮೆಂದಾಳ ಮಡಿ ಉಟ್ಟಿ ಕಂಡಾಳ
ಹರಹರ ಅಂದಾಳ ಹೊನ್ನಾ ಬುಟ್ಟಿಟ್ಟಾಳ
ಮೋಡಲ ದಿಕ್ಕೀಗೆ ನಡೆದಾಳ
ಮೋಡಲ ದಿಕ್ಕೀಗೆ ನಮೊ ಅಂದೇ
ನೆಂತಾ ಸೂಲ್ಯಮ್ಮಗೇ ನಮೋ ಅಂದೇ

ಹೀಗೆ ಸೂರ್ಯನಿಗೆ ನಮಸ್ಕರಿಸಿ ನಿಂತ ಎಲ್ಲಾಳೆಯ ಭಕ್ತಿಗೆ ಮೆಚ್ಚಿ ದೇವಿ ಪ್ರತ್ಯಕ್ಷಳಾಗಿ ಅವಳ ಕೆಲಸದಲ್ಲಿ ಸಹಾಯಕಳಾಗುತ್ತಾಳೆ.

ಸತ್ಯಾ ಎದ್ದರೆ ಮಗಳೆ
ನೀ ಇಂದೂ ಹಿಂದ್ಹೋಗೆ
ಈ ಹಳ್ಳಾ ಮಂತ್ರಸೇ ಎಗಿಹೋಗ

ದೇವಿ ಕೊಟ್ಟ ಹರಳನ್ನು ಒಗೆದು ತಕ್ಷಣ ಕಲ್ಲುಬಂಡೆಯೊಳಗಿಂದ ನೀರು ಚಿಮ್ಮಿಸಿ ಮನೆಗೆ ಬಂದು ಪತಿದೇವರನ್ನು ಕರೆದುಕೊಂಡು ಹೋಗಿ ಪರೀಕ್ಷೆಯಲ್ಲಿ ಉತ್ತೀರ್ಣವಾಗಿರುವುದನ್ನು ತೋರಿಸುತ್ತಾಳೆ. ಆದರೂ ಅವನಿಗೆ ಸಂಶಯ ಬಗೆಹರಿಯಲಿಲ್ಲ. ಆದ್ದರಿಂದ ಎರಡನೆ ಪರೀಕ್ಷೆಗೆ ಅವಳನ್ನು ಗುರಿಪಡಿಸುತ್ತಾನೆ.

ಎರಡನೇ ಪರೀಕ್ಷೆ:

ಬುಟ್ಟಿಯಲ್ಲಿ ನೀರು ತರುವುದು
ಆ ಸಂದರ್ಭದಲ್ಲೂ ಅವಳು ದೇವಿಯ ನೆರವಿನಿಂದ ಬುಟ್ಟಿಯಲ್ಲಿ ನೀರು ತಂದು

ಮಾಳೂಗೆ ಮೆನೆ
ದಾಳಾನಾಡುವ ಪುರುಸರಿಯಾ
ಇದ ನೋಡಿ ಬನ್ನಿ ಅರಗಳಿಗೆ
ನಾ ತಂದಾ ನೀರಿನಲ್ಹೊ ಕವಾ ತುಳದ್ಹೋಗಿ

ಎಂದು ಅಲ್ಲಿ ನೆರೆದಿದ್ದ ಪುರುಷರನ್ನೆಲ್ಲಾ ಕರೆನೀಡುತ್ತಾಳೆ. ಅವಳ ಕರೆಯು ಪುರುಷ ಪ್ರಧಾನ ಸಮಾಜಕ್ಕೆ ಸವಾಲೆಸೆದಂತಿದೆ. ಅವಳು ಮುಖ ತೊಳೆಯುವಂತೆ ಆಹ್ವಾನವಿಯ್ಯುವ ಮಾತಿನಲ್ಲಿ ಹೆಣ್ಣಿನ ಬಗ್ಗೆ ಪುರುಷರಲ್ಲಿರುವ ಸಂಶಯ ಭಾವನೆಯನ್ನು ತೊಳೆದುಕೊಳ್ಳುವ ಧ್ವನಿ ಇದೆ.

ಎಲ್ಲಾಳೆಯ ಗಂಡನಿಗೆ ಅವಳು ಎರಡನೆಯ ಪರೀಕ್ಷೆಯಲ್ಲಿ ಉತ್ತೀರ್ಣವಾದದ್ದು ತೃಪ್ತಿತರಲಿಲ್ಲ. ಏಕೆಂದರೆ ಅವನಿಗೆ ಬೇಕಾದದ್ದು ಅವಳ ಜಯವಲ್ಲ ಅವಳು ತನ್ನಿಂದ ದೂರವಾಗಬೇಕೆಂಬುದು. ಆದ್ದರಿಂದಲೇ ಅವನು ಮತ್ತೊಂದು ಅಪಾಯಕಾರಿ ಪರೀಕ್ಷೆಗೆ ಅವಳನ್ನು ಗುರಿಪಡಿಸುತ್ತಾನೆ. ರಾತ್ರಿ ಮುಗಿಯುವುದರೊಳಗೆ ಅರಮನೆ ಕಟ್ಟಬೇಕೆನ್ನುತ್ತಾನೆ. ಕರಡಿ ಹಾಲು ತರಬೇಕೆನ್ನುತ್ತಾನೆ. ಹುಲಿ ಕಟ್ಟಿ ಅದರ ಹಾಲು ತೆಗೆಯಬೇಕೆನ್ನುತ್ತಾನೆ. ನಾಗರಹಾವು ತರಬೇಕೆನ್ನುತ್ತಾನೆ. ಈ ಎಲ್ಲಾ ಪರೀಕ್ಷೆಗಳಲ್ಲೂ ಅವಳು ಉತ್ತೀರ್ಣಳಾಗುತ್ತಾಳೆ. ಆದರೂ ಅವನು ಅವಳನ್ನು ಸ್ವೀಕರಿಸಲು ಸಿದ್ದನಿಲ್ಲ. ಅವಳನ್ನು ಸೋಲಿಸಲು ಅವನೊಡ್ಡುವ ಕಠಿಣ ಪರೀಕ್ಷೆ ನೋಡಿ:

ಗೆದ್ದೆ ಗೆದ್ದೆ ಅಂದೆ ಹಸನಗಿಗೊಳಬೇಡಾ
ಸಮುದ್ರವ ನೀನ ಆಳಿಬೇಡ
ಸಮುದ್ರವ ನೀನ ಆಳದದ್ದೇಯಾದರೆ
ಪತಿವರ್ತೆ ಸಯ್ಯೆ ಜಗದಲ್ಲೆ

ಈ ಅಂತಿಮ ಪರೀಕ್ಷೆಯಿಂದ ಅವಳು ಪತಿಯ ಅಂತರಂಗವನ್ನರಿಯಲು ಹೊರಡುವ ರೀತಿ ಕಥೆಯ ಸಾಗುವಿಕೆಗೆ ತಿರುವು ನೀಡಿದೆ.

ಸಮುದ್ರದಾದಿಡಕೆ ನಿಡ್ದಾಳೇ ಎಲ್ಲಾಳೆ
ಹೂಂವು ಗಂಧಾ ಇಕ್ಕೆ ಸಮುದ್ರ ಪೋಜೆಯಾ ಮಾಡೇ
ಕೊಳಗಾಗದಲ್ಲೇ ಸಮುದ್ರವಾ ಅಳ್ದಾಳೇ
ಎಯ್ದು ಕೊಳಗಾ ಅಳ್ದೇ ಮತ್ತುಂದಾ ತುಂಬುವಾಗೇ
ಬಂದೀತು ಚಿನ್ನದಾ ಪಾಲಕೀಯೇ
ನಿಚ್ಚಾ ಪತಿವರ್ತಿಯಾ
ಚಿನ್ನದ ಪಾಲಕೀಯೇ
ಉಯ್ದೀತ ತನ್ನ ಮನಿಗಾಗೆ

ಹೀಗೆ ಎಲ್ಲಾಳೆ ಕಷ್ಟಪಟ್ಟು ಕೊನೆಗೆ ಸುಖಪಡಲು ಹೋದಳು. ಆದರೆ ಅವಳ ಗಂಡ ಬೀದಿ ಭಿಕ್ಷುಕನಾಗಿ ತಿರುಗಿ ಕಷ್ಟವನ್ನನುಭವಿಸುತ್ತಾನೆ.

ಮತ್ತೊಂದು ಕಥನ ಗೀತೆಯಲ್ಲಿ ಎಲ್ಲಾಳೆ ಸಮುದ್ರವನ್ನೂ ಅಳೆಯುತ್ತಿರುವಾಗಲೇ ಸಮುದ್ರ ಉಕ್ಕೇರಿ ಬಂದು ಪತಿಪತ್ನಿಯರಿಬ್ಬರನ್ನೂ ತನ್ನೊಡಲಲ್ಲಿ ಅಡಗಿಸಿಕೊಂಡು ಅವರ ಶಾಶ್ವತ ಬಂಧನವನ್ನು ಕಾಪಾಡಿತೆಂದು ತಿಳಿಸಲಾಗಿದೆ.

ನೆಲದ ಮೇಲಿನ ಕಷ್ಟಗಳನ್ನೆಲ್ಲಾ ಸಮುದ್ರದ ಸಂಪತ್ತಿನಿಂದ ದೂರ ಮಾಡಿಕೊಳ್ಳುವ ಮೀನುಗಾರರು ಕತೆಯಲ್ಲಿ ಅದೇ ಅರ್ಥವನ್ನು ಬಿಂಬಿಸಿದ್ದಾರೆ. ನೆಲದ ಮೇಲಿನ ಕಷ್ಟಗಳಿಗೆಲ್ಲಾ ಎದೆಯೊಡ್ಡಿ ನಿಂತ ಎಲ್ಲಾಳೆಯನ್ನು ಸಮುದ್ರ ಮುಕ್ತಗೊಳಿಸಿ ಶಾಶ್ವತವಾಗಿ ಪತಿ-ಪತ್ನಿಯ ಸಂಬಂಧವನ್ನು ಬಲಪಡಿಸಿತು. ಯಾವುದಕ್ಕಾಗಿ ಎಲ್ಲಾಳೆ ಕಷ್ಟಪಡುತ್ತಿದ್ದಳೋ ಅದನ್ನು ಸಮುದ್ರ ಒದಗಿಸಿಕೊಟ್ಟಿತು. ಸತ್ಯಕ್ಕೆ ತಡವಾಗಿಯಾದರೂ ಯಶಸ್ಸು ದೊರತೇ ದೊರೆಯುತ್ತದೆ ಎಂಬ ನೀತಿ ಈ ಕತೆಯಲ್ಲಿದೆ. ಪುರುಷನು ಸಮಾಜದಲ್ಲಿ ಪ್ರಧಾನ ಸ್ಥಾನ ಗಿಟ್ಟಿಸಿಕೊಂಡಿದ್ದರೂ ಅನ್ಯಾಯದ ಹಾದಿ ಹಿಡಿದರೆ ಕೊನೆಗೆ ಅವನು ಸ್ತ್ರೀಯ ಸತ್ಯಕ್ಕೆ ತಲೆಬಾಗಬೇಕಾಗುತ್ತದೆ ಎಂಬುದಕ್ಕೆ ಎಲ್ಲಾಳೆಯನ್ನು ದೂರ ಮಾಡಲು ಪ್ರಯತ್ನಿಸುತ್ತಿದ್ದ ಪತಿಯೇ ಎಲ್ಲಾಳೆಯೊಡನೆ ಒಂದಾಗಿ ಹೋಗುವುದು ನಿದರ್ಶನವಾಗಿದೆ. ಸಹೃದಯರ ಕಣ್ಣಲ್ಲಿ ನೀರು ಮೂಡಿಸುವಂತಹ ಈ ಕಥನ ಕವನದಲ್ಲಿ ಕವಿ ಹೆಣ್ಣಿನ ಪಾತ್ರದಲ್ಲಿ ಕರುಣಾರಸದ ಕೋಡಿ ಹರಿಸಿದ್ದಾನೆ. ಆತ್ಮವಿಶ್ವಾಸವಿದ್ದರೆ ಏನನ್ನು ಬೇಕಾದರೂ ಸಾಧಿಸಬಹುದೆಂಬ ಮಾರ್ಗದರ್ಶನವನ್ನು ಕತೆ ನೀಡುತ್ತದೆ. ನೆಲದ ಮೇಲಿನ ಕಷ್ಟಗಳನ್ನೆಲ್ಲಾ ಜಲದಲ್ಲಿ ತೊಳೆದುಕೊಳ್ಳುವ ಅಂತಿಮ ಹಂತ ಅರ್ಥಪೂರ್ಣವಾಗಿದೆ.

2. ಪರಾಶರ್ಣ ಮುನಿ:

ಕಾಮ ಮನುಷ್ಯನ ಬದುಕಿನಲ್ಲಿ ಮಹತ್ವದ ಪಾತ್ರವಹಿಸುತ್ತದೆ. ಎಂತಹವನನ್ನೂ ಅದು ತನ್ನ ಕೈಗೊಂಬೆ ಮಾಡಿಕೊಳ್ಳುತ್ತದೆ. ಈ ಲೋಕವನ್ನು ಮರೆತು ಪರಲೋಕದಲ್ಲಿ ಮಗ್ನನಾದ ಋಷಿ ಅದಕ್ಕೆ ಶರಣಾದಾಗ ಅದು ಮನಬಂದಂತೆ ಕುಣಿಸುತ್ತದೆ ಎಂಬುದಕ್ಕೆ ಒಂದು ನಿದರ್ಶನ "ಪರಾಶರ್ಣ ಮುನಿ" ಕಥನ ಕವನ. ಇದರಲ್ಲಿ ಪರಾಶರಮುನಿ ಹಾಗೂ ಮತ್ಸ್ಯಗಂಧಿಯರ ನಡುವಿನ ಪ್ರಣಯದ ಚಿತ್ರಣವಿದೆ. ಕೆಲವು ಸಂದರ್ಭಗಳಲ್ಲಿ ಮನುಷ್ಯ ತಾನು ಗಳಿಸಿರುವ ಜ್ಞಾನ, ಪಡೆದಿರುವ ಸ್ಥಾನಗಳೆರಡನ್ನೂ ಮರೆತು ಕಾಮತೃಪ್ತಿಗಾಗಿ ಕನಿಷ್ಟಮಟ್ಟಕ್ಕೆ ಇಳಿಯುತ್ತಾನೆ ಎಂಬುದನ್ನು ಈ ಕಥನ ಕವನ ತಿಳಿಸುತ್ತದೆ. ಇಲ್ಲಿ ಬರುವ ಅಂಬಿಗರ ಹುಡುಗಿ ಕಡಲನ್ನಾಶ್ರಯಿಸಿ ಬದುಕುವ ಹೆಣ್ಣು ಜಾತಿಯನ್ನು ಪ್ರತಿನಿಧಿಸುವಂತಹವಳು.

ಬಾರಸರ ಮುನಿಗೊಳಂಬವರೆ
ಜಪಕೆ ಕುಳಿತೆ ಹನ್ನೆರಡೆ ಉರುಸಾದೊ
ಚವಂದು ತಪವೇ ಮುರಿದಿನ್ನೆ
ತಿರುಗಾಗೇ ಮನೆಗೆ ಬರುವಾರೋ
ತಿರುಗಾಗೇ ಮನೆಗೆ ಬರುವಾಗೇ
ದಾರಿಯೊಳಗೆ ತಾರೀ ಸಿಕ್ಕಿದವೊ
ತಾರಿಯೊಳಗೆ ಯಾರ‍್ಯಾರಿಲ್ಲಾವೋ
ಬಾರಸರ ಮುನಿಗಳಂಬರವರೆ
ಕೂವು ಹಾಕುತಯ್ದಾರೊ
ಕೂವ ಹಾಕಿ ಕರೆವಾ ಸಮಿದಲ್ಲೆ
ಅಂಬಿಗರುಡುಗಿ ಮಚ್ಚಗಂದರಿಯೆ
ರನ್ನದೊಂದು ಹುಟ್ಪಾ ಹಿಡಿದಾಳೊ
ಪಾರಿನೊಂದು ಹಳ್ಳಾಕ್ ಬರುವಾಳೊ
ಪಾರಿನೊಂದು ಹಳ್ಳಾಕ್ ಬಂದೇಲೆ
ದೋಣಿ ಮುಗಿನ ಹಗ್ಗ ಬಿಡಿಸಿದಳೊ
ದೋಣಿ ಮುಗಿನ ಹಗ್ಗ ಬಿಡಿಸೇಲೆ
ಜಡದದೇಲೆ ದೋಣಿ ಹತ್ತುವಾಳೊ
ಬಾರಸರ ರುಸಿಗಳಂಬವರೆ
ಜಡಿದೇಲೆ ದೋಣಿ ಹತುವಾರೋ

ಪರಲೋಕದ ಜ್ಞಾನ ಪಡೆದು ಹಿಂದಿರುಗುವ ಪರಾಶರ ಮುನಿಗಳಿಗೆ ಹೊಳೆದಾಟಿಸಲು ಬಂದವಳು ಅಂಬಿಗರ ಹುಡುಗಿ ಎಂಬುದು ಗಮನಾರ್ಹವಾದುದು. ಹೆಣ್ಣು ಪುರುಷನಿಗೆ ಸಮಾನಳಾಗಿ ದುಡಿಯುತ್ತಿದ್ದುದು ಮತ್ತು ಧೈರ್ಯದಿಂದ ಕುಲ ಕಸುಬು ಮಾಡಲು ಸಿದ್ಧಳಾಗಿ ಬಂದುದರಲ್ಲಿ ತಾನು ಪುರುಷರಿಗೆ ಸಮಾನಳೆಂಬ ಧ್ವನಿ ಇದೆ. ಕೂಗು ಹಾಕಿದ ಮುನಿಗಳಿಗೆ ಹೊಳೆದಾಟಿಸುವ ಉದ್ದೇಶ ಹೊತ್ತು ಬಂದ ಅಂಬಿಗರ ಹುಡುಗಿಯ ಸೌಂದರ್ಯವನ್ನು ಸಹೃದಯರು ಮೆಚ್ಚುವಂತೆ ಕವಿ ಪರಿಚಯಿಸುವುದನ್ನು ನೋಡಬಹುದು.

ಅಂಬಿಗರುಡುಗಿ ಮಚ್ಚಗಂದರಿಯೊ
ರನ್ನದೊಂದು ಹುಟ್ಟ ಹಿಡಿದಾಳೊ
ರನ್ನದೊಂದು ಹುಟ್ಟ ಹಿಡಿದೇಲೇ
ಹಿಂದಕ್ಕೆ ಎರಡುಟ್ಟ ಹೊಡೆದಾಳೊ
ಮುಂದಕ್ಕೆ ಮೂರ‍್ಹುಟ್ಟ ಬಲಗ್ಯಾಳೊ
ಮುಂದಕ್ಕೆ ಮೂರ‍್ಹುಟ್ಟ ಬಲಗೂವಾಗೇ

ಮೈದೂಲ ಸೆರಗೇ ಜಾರಿದವೋ
ಎದಿಮ್ಯೆನಿನಾ ಕುಚಗೊಳ್ ಕಂಡಾವೋ
ಬಾರಸರ ರುಸಿಗೊಳಂಬವರಿಗೇ
ಕಾಮತುರವೇ ತಲೆಗೇ ಏರಿದವೋ

ಯೌವನ ತುಂಬಿದ ಮುಗ್ಧ ಹುಡುಗಿ ತನ್ನ ಕಾರ್ಯದಲ್ಲಿ ಮಗ್ನವಾಗಿ ಗುರಿಮುಟ್ಟುವ ದೃಷ್ಟಿ ಇಟ್ಟವಳು. ಅಂತಹ ಸಂದರ್ಭದಲ್ಲಿ ಅವಳಿಗೆ ತನ್ನ ಅಂಗಾಂಗದ ಮೇಲಿನ ಬಟ್ಟೆಯ ಅರಿವೇ ಇಲ್ಲ. ಆದರೆ ಪರಾಶರ ಮುನಿಯ ಉದ್ದೇಶ ಹೊಳೆದಾಟುವುದಾದರೂ ಈ ನಡುವೆ ಆತನನ್ನು ಅಲೌಕಿಕ ಜ್ಞಾನದಿಂದ ಬಾಹಿರಗೊಳಿಸಿ ಲೌಕಿಕದ ಕಡೆಗೆ ಸೆಳೆಯುವ ಕಾಮ ಋಷಿಯ ಸಾಧನೆಯ ಹಾದಿಗೆ ತಿರುವು ನೀಡುತ್ತದೆ. ಆ ಸಂದರ್ಭದಲ್ಲಿ ಮುನಿಯಿಂದ ಹೊರಡುವ ಮಾತುಗಳು:

ಕೇಳೆ ಕೇಳೆ ಅಂಬಿಗರುಡುಗೀಯೆ
ನಿನ್ನವೊಂದು ಬೋಗಾಕ್ ಬರುತೇನೆ?

ಯೋಗದ ಹಂತದಿಂದ ತಕ್ಷಣ ಭೋಗದ ಮಟ್ಟಕ್ಕೆ ಇಳಿದು ಬಿಡುವ ಪರಾಶರ ಮುನಿಗೆ ತನ್ನ ಜ್ಞಾನ-ಸ್ಥಾನಮಾನಗಳೆಲ್ಲ ಗೌಣವಾಗುತ್ತವೆ. ಅವುಗಳ ಮುಂದೆ ಕಾಮವೇ ಶ್ರೇಷ್ಠವೆನಿಸುತ್ತದೆ. ಅಂಬಿಗರ ಹುಡುಗಿಗೆ ಮುನಿಯ ಮಾತು ಆಶ್ಚರ್ಯ ತುಂಬುತ್ತದೆ. ಅವಳ ದೃಷ್ಟಿಯಲ್ಲಿ ಪರಾಶರ ಮುನಿ ಕಾಮಗೆದ್ದವನು. ಅದನ್ನವಳು ತನ್ನ ಮಾತಲ್ಲಿ ತಿಳಿಸಿ ಎಚ್ಚರಿಸಲು ಪ್ರಯತ್ನಿಸುತ್ತಾಳೆ.

ಕೇಳಿ ಕೇಳಿ ಸ್ವೋಮ್ಯರ್ ನೀವು ಕೇಳಿ
ನೀಮೆ ಮತ್ತೆ ದೇವೋತ್‌ಗೊಳೆಲೊ
ನಾನೇ ಮತ್ತೆ ಅಂಬೇರುಡುಗೀಯೋ
ನನ್ನ ಜೀಮ ಬಾಳೆ ಗುಲ್ಲೇಲೊ

ಎಂದು ಕೇಳಿಕೊಳ್ಳುತ್ತಾಳೆ. ಆದರೆ "ಕಾಮತುರಾಣಂ ನ ಭಯಂ ನ ಲಜ್ಜಂ" ಎನ್ನುವಂತೆ ಅವಳ ಯಾವ ಮಾತಿಗೂ ಬೆಲೆಕೊಡದ ಪರಾಶರಮುನಿ ತನ್ನ ಮನದಾಸೆಯ ಈಡೇರಿಕೆಯ ಹಾದಿ ಹಿಡಿಯುತ್ತಾನೆ.

ಬಾರಸರ ರುಸಿಗೊಳಂಬವರೆ
ಮಾಯತರದ ನೀರತರುವಾರೋ
ಮಾಯತರದ ನೀರ ತಂದೆಲೇ
ಅಂಬಿಗರುಡುಗಿ ಮೊಕಕೆ ಹೊಡೆದಾರೊ
ಅಂಬಿಗರುಡುಗಿ ಮೊಕಕೆ ಹೊಡೆದೇಲೆ
ಸಿವಗಂಗಿ ಬೋಗಾ ಕೊಡುವಾಗೇ

ಕಾನಂಬು ಕತ್ತಲ್ ಕಮಿದಾವೋ
ಹೂವಿನೊಂದು ಮಳೆಯು ಸುರಿದಾವೊ
ಬಾರಸರ ಕುಸಿಗೋಳಂಬವರೆ
ಅಂಬಿಗರುಡುಗಿಗೆ ಬೋಗಾ ಕೊಡುವಾರೊ

ಸಾಮಾನ್ಯವಾಗಿ ತಿಳಿದವರೇ ತಪ್ಪು ಹಾದಿ ಹಿಡಿಯುವುದು ಹೆಚ್ಚು. ಅವರು ತಮ್ಮ ತಪ್ಪು ಹಾದಿಯೂ ಸರಿಯಿದೆ ಎಂದು ಸಾಬೀತು ಮಾಡುವಷ್ಟು ಹೆಚ್ಚಾಗಿ ತಿಳಿದಿರುತ್ತಾರೆ. ಈ ಗೀತೆಯಲ್ಲಿ ಕೆಳವರ್ಗ ಸಂಸ್ಕೃತಿ ಮೇಲ್ವರ್ಗದವರ ಸೇವೆಗಾಗಿಯೇ ಹುಟ್ಟಿರುವುದರಿಂದ ತನ್ನತನ ಕಾಪಾಡಿಕೊಳ್ಳುವಷ್ಟು ಸ್ವತಂತ್ರ್ಯವಿಲ್ಲದೆ ಅಸಹಾಯಕವಾಗಿ ನಿಲ್ಲುತ್ತದೆ. ಕೆಳವರ್ಗದವರ ಮಾನಮರ್ಯಾದೆಗಳೆಲ್ಲಾ ಮೇಲ್ವರ್ಗದವರಿಗೆ ಅರ್ಪಿಸಿಬಿಡುವುದು ಪುಣ್ಯದ ಕೆಲಸವೆಂಬ ನಂಬಿಕೆಯನ್ನು ಅವರಲ್ಲಿ ಗಟ್ಟಿಗೊಳಿಸಲಾಗಿದೆ. ಹಾಗೇನಾದರೂ ಅವರು ತಮ್ಮ ಸರ್ವಸ್ವವನ್ನೂ ಅರ್ಪಿಸಲು ಹಿಂಜರಿದರೆ ಅದನ್ನು ಬಲವಂತವಾಗಿ ದಕ್ಕಿಸಿಕೊಳ್ಳುವ ಸ್ವತಂತ್ರ್ಯವನ್ನು ಮೇಲ್ವರ್ಗದವರು ಪಡೆದುಕೊಂಡಿದ್ದಾರೆ. ಆದ್ದರಿಂದಲೇ ಇಲ್ಲಿ ಅತ್ಯಾಚಾರ ಅಪರಾಧವಾಗದೆ ಪುಣ್ಯದ ಕೆಲಸವಾಗಿದೆ. ಅದನ್ನು ಕವಿ ಶಿವಗಂಗೆಯರ ಭೋಗಕ್ಕೆ ಹೋಲಿಸಿ ಅಪವಿತ್ರವನ್ನೂ ಪವಿತ್ರಗೊಳಿಸಿದ್ದಾನೆ. ಮೇಲ್ವರ್ಗದ ಸಂಸ್ಕೃತಿಯ ಸೋಂಕಿನಿಂದ ಕೆಳವರ್ಗ ಸಂಸ್ಕೃತಿ ಪವಿತ್ರಗೊಳ್ಳುವ ರೀತಿಯನ್ನು ಇಲ್ಲಿ ತಿಳಿಸಲಾಗಿದೆ. ಮನುಷ್ಯ ಮನುಷ್ಯರ ನಡುವೆ ಎದ್ದಿರುವ ಜಾತಿಯ ಅಡ್ಡಗೋಡೆಯನ್ನು ಕಾಮ ಕಿತ್ತೆಸೆದು ಭೋಗದಲ್ಲಿ ಎಲ್ಲರೂ ಒಂದೇ ಎಂಬುದನ್ನು ಅದು ಸಾರಿದೆ. ಸಂಪ್ರದಾಯಗಳ ಆಚರಣೆಯ ಸಂದರ್ಭದಲ್ಲಿ ಮೇಲು ಕೀಳು ಎಂಬ ಭಾವನೆ ಪ್ರಮುಖವಾಗಿದ್ದರೂ ಕಾಮದ ಮುಂದೆ ಅವುಗಳೆಲ್ಲ ಅರ್ಥಕಳೆದುಕೊಳ್ಳುತ್ತವೆ. ಕಡಲಿಗರ ಹೆಣ್ಣುಗಳು ಮೇಲ್ವರ್ಗದವರ ಭೋಗದ ವಸ್ತುವಾಗಿ ಪ್ರಸ್ತುತ ಸಮಾಜದಲ್ಲೂ ಕಾಣಿಸಿಕೊಳ್ಳುತ್ತಾರೆ. ಅದರ ಒಂದು ಪಕ್ಷಿನೋಟದ ಪರಿಚಯ ಈ ಕಥನ ಕವನದಲ್ಲಿದೆ.

3. ಗಂಗೆ ಗೌರಿ:

ಸಮುದ್ರದಾಶ್ರಯ ಪಡೆದ ಅಂಬಿಗರಿಗೆ ಸಂಬಂಧಿಸಿದ ಕಥನ ಗೀತೆಗಳಲ್ಲಿ "ಗಂಗೆ - ಗೌರಿ" ಒಂದು ಮಹತ್ವಪೂರ್ಣ ಕಥನಗೀತೆ. ಇದರಲ್ಲಿ ವರ್ಗ-ವರ್ಗಗಳ ನಡುವಿನ ಸಂಘರ್ಷವಿದೆ.

"ಕಟ್ಟಾಯ್ತಾರ" ಹುಟ್ಟಿದ ಗಂಗಮ್ಮನನ್ನು ನೋಡಿದ ಹಾರುವರು ಶಾಸ್ತ್ರ ಹೇಳಿದ್ದು. "ಗಂಗ್ಹುಟ್ಟಿದ ಗಳಿಗೆ ಇಸಗಳಿಗೆ! ಸಂಗಮ್ಮ ಬಿಟ್ಟುಬಲ್ಲಿ ಹರಿಯೊ ಜಲಧಿಗೆ" ಈ ಮಾತಿಗೆ ಸಂಗಮ್ಮ ಹೆತ್ತ ಮಕ್ಕಳನ್ನು ಬಿಡಲು ಸಾಧ್ಯವೇ ಎಂದು ಪ್ರಶ್ನಿಸಿದಾಗ ಸಿಗುವ ಉತ್ತರ.

"ಬಾಲೆ ತಕ್ಕೊಂಡೋರಿಗೆ ಬಾಲ ಸಂತಾನಿಲ್ಲ
ಜೋಳಿಗೆ ಹೊನ್ನು ಮೊದಲಿಲ್ಲ ಗಂಗಮ್ನ
ಬಿಟ್ಟುಬಲ್ಲಿ ಕಾವೇರಿ ಹೊಳೆಗಾಗಿ"

ಗಂಡು ಮಕ್ಕಳಿಂದಲೇ ವಂಶ ಬೆಳೆಯುವುದೆಂಬ ನಂಬಿಕೆ ರೂಢಿಯಲ್ಲಿದ್ದ ಕಾಲದಲ್ಲಿ, ಗಂಗಮ್ಮ ಉಳಿದ ಮನೆಯಲ್ಲಿ ಗಂಡು ಮಕ್ಕಳಾಗುವುದಿಲ್ಲವೆಂದು ಭವಿಷ್ಯ ನುಡಿ ಕೇಳಿ ಸಂಗಮ್ಮ ಹೆತ್ತ ಹೆಣ್ಣು ಮಗುವನ್ನು ಕಳೆದುಕೊಳ್ಳಲು ನಿರ್ಧರಿಸುತ್ತಾಳೆ. ಹಾರುವರ ಮಾತಿನ ಪ್ರಕಾರ ಮಗುವನ್ನು ಹೊಳೆಯಲ್ಲಿ ಬಿಟ್ಟುಬರುತ್ತಾಳೆ.

ಆಗ ಅಂಬಿಗರಣ್ಣ ಬರುವುದನ್ನು ಕವಿ ಚಿತ್ರಕ ಶೈಲಿಯಲ್ಲಿ ಪರಿಚಯಿಸುತ್ತಾನೆ.

"ಅಣ್ಣ ಅಂಬಿಗುರಣ್ಣ ತುಪ್ಪ ಬಾನವನುಂಡು
ಮುತ್ತೀನ ಬಲಿಯ ಹೆಗಲೇರಿ ಅಂಬಿಗರಣ್ಣ
ಹೋದಾನೆ ಕಾವೇರಿ ಹೊಳಿಗಂಡು

ಹಾಸು ಬಲಿಯ ಹಾಸೀದ ಬೀಸುಬಲಿಯ ಬೀಸಿದ
ಎಳಿಬಲಿನ್ಹಾಕಿ ಎಳುದಾನೆ
ಎಳಿಬಲಿನ್ಹಾಕಿ ಎಳುದಾನಂಬಿಗುರಣ್ಣ
ಬಂದಾಳೆ ಗಂಗ್ಯಮ್ಮ ದಡಗಂಡು"

ಈ ಮುಗ್ಧ ಮಗುವು ಅಂಬಿಗನ ಕೈಗೆ ಸಿಕ್ಕಿ ಅವನ ಮನೆಯಲ್ಲಿ ಬೆಳೆದು ಯೌವನಕ್ಕೆ ಬಂದು ನೀರು ಮೊಗೆಯಲು ಹಳ್ಳಕ್ಕೆ ಬಂದಾಗ ದಡದಲ್ಲಿ ಜಪ ಮಾಡುತ್ತಾ ಕುಳಿತ ಶಿವನ ಮನ ಚಂಚಲಗೊಳ್ಳುತ್ತದೆ. ಆಗ ಆತ ಜಪ ಮರೆತು ಬಾಲೆ ನೀನ್ಯಾವ ಕುಲದೋಳೆ? ಎಂದು ಪ್ರಶ್ನಿಸುತ್ತಾನೆ. ಅದಕ್ಕೆ ಅವಳು ತಿರಸ್ಕರಿಸಿ ನಡೆದಾಗ ಅವಳನ್ನು ಜಡೆಯಲ್ಲಿಟ್ಟುಕೊಳ್ಳಲು ಆಹ್ವಾನಿಸುತ್ತಾನೆ. ಆಗ ಅವಳು:

"ಮೀನು ತಿಂಬೋರು ನಾವು ಮಿಡಿಚೆ ತಿಂಬೋರು ನಾವು
ಮೀನು ಮಿಡಿಚೆಯ ಸಲವೋರು ಮಾಶಿವನೆ
ನಿಮ್ಹಾಲಿನಂತ ಕುಲವ ಕೆಡುಸಾನೆ

ಲಳ್ಳಿ ತಿಂಬೋರು ನಾವು ಗುಳ್ಳೆ ತಿಂಬೋರು ನಾವು
ಲಳ್ಳಿ ಗುಳ್ಳೆಯ ಸಲವೋರು ಮಾಶಿವನೆ
ನಮ್ಮೇಲಾದ ಕುಲವ ಕೆಡುಸಾನೆ"

ಎಂದು ಅವಳು ಸಮಾಜದಲ್ಲಿ ತನ್ನ ಕುಲಕ್ಕಿದ್ದ ಸ್ಥಾನವನ್ನು ಪರಿಚಯಿಸುತ್ತಾಳೆ. ಹೆಣ್ಣಿನ ಸೌಂದರ್ಯದ ಮುಂದೆ ಅವಳ ಜಾತಿ, ಮತ, ಧರ್ಮಗಳು ಅರ್ಥ ಕಳೆದುಕೊಳ್ಳುತ್ತವೆ. ಆಗ ಅವಳು ಕೇವಲ ಭೋಗದ ಜೀವಂತ ಗೊಂಬೆಯಾಗಿ ಕಾಣುತ್ತಾಳೆ. ಆದ್ದರಿಂದಲೇ ಶಿವ ಅವಳ ಜಾತಿ-ಕುಲಗಳನ್ನು ಲೆಕ್ಕಿಸದೆ ಅವಳನ್ನು ಮುಡಿಯಲ್ಲಡಗಿಸಿಕೊಳ್ಳುತ್ತಾನೆ. ಆದರೆ ಅಷ್ಟು ಸುಲಭವಾಗಿ ಅವಳಿಗೆ ಮೇಲ್ವರ್ಗದ ಸಂಪ್ರದಾಯಗಳ ನಡುವೆ ಸ್ಥಾನ ಗಿಟ್ಟಿಸಿಕೊಳ್ಳಲಾಗುವುದಿಲ್ಲ. ಅದಕ್ಕಾಗಿ ಅವಳು ಹೋರಾಟ ನಡೆಸಬೇಕಾಗುತ್ತದೆ. ಸವತಿ ಮತ್ಸರಕ್ಕೆ ಬಲಿಯಾಗಬೇಕಾಗುತ್ತದೆ. ಆ ಸಂದರ್ಭದಲ್ಲಿ ಮೇಲ್ವರ್ಗ ಮತ್ತು ಕೆಳವರ್ಗದ ಭಾವನೆಗಳ ನಡುವೆ ಸಂಘರ್ಷ ನಡೆಯುತ್ತದೆ. "ನೀನಂಬಿಗರ ಹೆಣ್ಣೆ ಮುಟ್ಟದಿರೆ" - ಎಂದು ನೀರು ಮುಟ್ಟಲು ಅಡ್ಡಿ ಮಾಡುವ ಗೌರಿಗೆ ಅವಳು ಕೊಡುವ ಉತ್ತರ:

"ಅಂಬಿಗರ ಹೆಣ್ಣೆಂದು ಹತ್ತೆಂಟಾಡದಿರೆ
ನಾ ನುಂಗಿಸುವೆ ಮೀನ ಮೊಸಳೆಯ"

ಎಂದು ಗದರಿಸಿದಾಗ, ಗೌರಿ ತನ್ನ ಕುಲದ ಶ್ರೇಷ್ಠತೆಯ ಅರಿವು ನಿನಗಿಲ್ಲವೆಂದು ಕಡೆಗಣಿಸಿ ನುಡಿದಾಗ ಗಂಗೆ ಕೊಡುವ ಉತ್ತರದಲ್ಲಿ ಕೆಳವರ್ಗದವರು ಮೇಲ್ವರ್ಗದವರನ್ನು ಹೇಗೆ ಕಾಣುವರೆಂಬುದನ್ನು ತಿಳಿಸಲಾಗಿದೆ.

"ಆನೆ ಮ್ಯಾಲೆ ಬರವೋರು ದಾನಕ್ಕೆ ಕೈ ನೀಡೋರು
ಅರಿಯೇನೆ ನಿಮ್ಮ ಕುಲಗೊಳ! ಗವರಾಜಿ
ನೀ ಜೇನ ಹಾರುವರ ಮಗಳಲ್ಲವೆ."

ಈ ಮಾತಿಗೆ ಗೌರಿ ನೀಡುವ ಉತ್ತರದಲ್ಲಿ ಗಂಗೆಯ ಕುಲವನ್ನು ಕನಿಷ್ಟವಾಗಿ ಕಾಣುವ ಭಾವನೆ ವ್ಯಕ್ತಗೊಂಡಿದೆ.

"ಸೀರೆ ಉಡುವೋಳೆ ಸೀಗಡಿಯ ಮಾರೋಳೆ
ತೆಪ್ಪಕೆ ಹಿಟ್ಟ ಹೊರುವೋಳೆ! ಅಂಬಿಗರ್ಹೆಣ್ಣೆ
ನೀ ಅರಿಯೇನೆ ನಮ್ಮ ಕುಲಗೋಳ

ಅರಿವೆ ಉಡುವೋಳೆ ಕರಿಮೀನ ಮಾರೋಳೆ
ಹರಿಗೋಲಕ್ಕೆ ಹಿಟ್ಟ ಹೊರುವೋಳೆ! ಅಂಬಿಗರ್ಹೆಣ್ಣೆ
ನೀನರಿಯೇನೆ---ನಮ್ಮ ಕುಲಗೊಳ."

ಅಂಬಿಗರ ಹೆಣ್ಣು ಮಾಡುವ ಕೆಲಸಗಳನ್ನು ಈ ತ್ರಿಪದಿಗಳು ತಿಳಿಸುತ್ತವೆ. ಅಂಬಿಗರಿಗೆ ಊಟ ತೆಗೆದುಕೊಂಡು ಹೋಗಿ ಕೊಟ್ಟು ಅಲ್ಲಿಂದ ಹಿಡಿದ ಮೀನನ್ನು ತಂದು ಮಾರಾಟ ಮಾಡುವುದು ಅವಳ ದೈನಂದಿನ ಕೆಲಸ. ಸೀಗಡಿ, ಕರಿಮೀನು ಮೊದಲಾದ ಜಲಚರಗಳನ್ನು ಹಿಡಿಯುವ ಮತ್ತು ಮಾರಾಟ ಮಾಡುವ ಕೆಲಸವನ್ನು ಕನಿಷ್ಠವೆಂದು ಭಾವಿಸುತ್ತಿದ್ದ ಮೇಲ್ವರ್ಗದ ಜನರ ಅಂತರಂಗವನ್ನು ಕವಿ ಇಲ್ಲಿ ತೆರೆದುತೋರಿಸಿದ್ದಾನೆ. ಮೀನು ಹಾಗೂ ರಾಗಿಹಿಟ್ಟು ಕೆಳವರ್ಗದವರ ಪ್ರಮುಖ ಆಹಾರವೆಂಬುದನ್ನು ಕವಿ ತಿಳಿಸುತ್ತಾನೆ. ಹೀಗೆ ಮುಂದುವರಿದ ಕಥೆನಗೀತೆ ಶಿವನ ಮಧ್ಯಸ್ಥಿಕೆಯಿಂದ ಮುಕ್ತಾಯಗೊಳ್ಳುತ್ತದೆ. ಸಮಾಜದಲ್ಲಿ ಅಂಬಿಗರು ಪಡೆದಿದ್ದ ಸ್ಥಾನವನ್ನು ಮತ್ತು ಮೇಲ್ವರ್ಗದವರನ್ನು ಕೆಳವರ್ಗದವರು ಕೆಳವರ್ಗದವರನ್ನು ಮೇಲ್ವರ್ಗದವರು ಕನಿಷ್ಟರೆಂದು ಭಾವಿಸುವುದನ್ನು ಈ ಗೀತೆ ಧ್ವನಿಸುತ್ತದೆ. ವರ್ಗ ಸಂಘರ್ಷವನ್ನು ಕಂಡುಂಡ ಕವಿ ಈ ಕಥನಗೀತೆಯ ಮೂಲಕ ಅದನ್ನು ಅಭಿವ್ಯಕ್ತಪಡಿಸಿದ್ದಾನೆ. ದೇವತೆಗಳಲ್ಲೂ ಸವತಿ ಮತ್ಸರ, ವರ್ಗ-ವರ್ಗಗಳ ನಡುವಿನ ದ್ವೇಷ ಮೊದಲಾದವುಗಳು ಇದ್ದವೆಂದು ಕಲ್ಪಿಸಿಕೊಂಡಿರುವುದು ಗಮನಾರ್ಹವಾದುದು.

4. ಹೊಳಿ ದಾಟಿಸೋ ಅಂಬಿಗಾರಣ್ಣಾ:

ಈ ಕಥನ ಗೀತೆಯು "ಗಂಗೆ-ಗೌರಿ" ಗೀತೆಯನ್ನು ಹೋಲುತ್ತಿದ್ದರೂ ಮುಕ್ತಾಯದ ಹಂತದಲ್ಲಿ ಇದು ಭಿನ್ನವಾಗಿ ನಿಲ್ಲುತ್ತದೆ. ಇದರಲ್ಲಿ ಕೆಂಬಾವಿಯ ಚೆನ್ನಮ್ಮ ಆದವಾನಿ ಸೀರೆಯುಟ್ಟು ಗೋದಿ "ಉಡಿಯಕ್ಕಿ" ಹಾಕಿಕೊಂಡು ಹೊಳೆ ದಂಡೆಗೆ ಬಂದು ಅಂಬಿಗನನ್ನು ಕುರಿತು:

ಆರು ಮಂದಿ ಅಕ್ಕ ತಂಗೇರು ನನಗೂಡಿಸಿ ಏಳುಮಂದಿ

ಅವರೆಲ್ಲ ಹೊಳಿಯ ದಾಟ್ಯಾರ

ನನ್ನೊಬ್ಬಕ್ಕಿನ ಹೊಳಿಯ ದಾಟಿಸೋ

ತವರವರು ಕೊಟ್ಟಂಥ ಹತ್ತು ಸೇರಿನ ರುಳಿ

ಅವ ತಗೊಂಡ ಹೊಳಿಯ ದಾಟಿಸೋ

ಎಂದು ಕೇಳುತ್ತಾಳೆ. ಆಗ ಅವನು ಹೊಳೆದಾಟಿಸುವು ಯಾರಿಚ್ಛಾ ತಾಯಿ ಗಂಗಮ್ಮನ ಮನದಿಚ್ಛಾ ಎಂದು ಹೇಳುತ್ತಾನೆ. ಅದಕ್ಕೆ ಅವಳು ತನ್ನ ತವರು ಮನೆಯವರು ಕೊಟ್ಟ ಡಾಬು, ಹತ್ತು ಸೇರು ಹುರುಳಿ ತೆಗೆದುಕೊಂಡು ಹೊಳೆ ದಾಟಿಸೆಂದು ಕೇಳಿಕೊಳ್ಳುತ್ತಾಳೆ. ಆಗ ದೋಣಿಯಲ್ಲಿ ಕುಳಿತು ಬರುವಾಗ ಅಂಬಿಗ ಹರಿಗೋಲನ್ನು ಬಿಡುತ್ತಾನೆ. ಅದನ್ನು ಕಂಡ ಆ ಹೆಣ್ಣು

ಜಾಲಿಗಿಡದ ಬುಡಕ ಜಾರಿ ಬಂತ ಹರಿಗೋಲ

ಜತ್ತನದಿಂದ ದಾಟಿಸೋ

ಎಂದು ಎಚ್ಚರಿಸುತ್ತಾಳೆ. ಆದರ ಪರಿವೆಯಿಲ್ಲದೆ ಅವಳಲ್ಲಿ ಮಗ್ನವಾದ ಆಂಬಿಗರಣ್ಣನ ತಪ್ಪಿನಿಂದ

ಮಾವಿನ ಗಿಡದ ಬುಡಕ ಮಾಯವಾಯ್ತ ಹರಿಗೋಲು

ರದ್ದಡಗಿ ಮುಂದ ಹೊಳಿ ಮುಣಗಿ

ನಾರಿ ಮಣಗಿದಲ್ಲಿ ಇಪ್ಪತ್ತು ಬಾರಿ ಮುಣಗೆದ್ದ

ನಾರಿ ನಿನ ಸೆರಗ ಸಿಗಲಿಲ್ಲ

ಮಿತ್ರಿ ಮುಣಗಿದಲ್ಲಿ ಇಪ್ಪತ್ತು ಬಾರಿ ಮುಣಗೆದ್ದ

ಕಾಲುಂಗುರ ಬೆರಳ ಸಿಗಲಿಲ್ಲ.

ಇಲ್ಲಿಗೆ ಮುಕ್ತಾಯಗೊಳ್ಳುವ ಈ ಗೀತೆಯಲ್ಲಿ ಕಾಮದ ದೃಷ್ಟಿಯಿಂದ ಅಂಬಿಗ ಪ್ರಯಾಣಿಕಳಾದ ಹೆಣ್ಣನ್ನು ನೋಡುವುದು ತಪ್ಪಾಗುತ್ತದೆ. ಆದ್ದರಿಂದ ಅನಾಹುತ ಅವನಿಗೆ ಎದುರಾಗುತ್ತದೆ. "ಮಿತ್ರಿ" ಎನ್ನುವ ಪದ ಅಂಬಿಗನು ಚೆನ್ನಮ್ಮನನ್ನು ಕಂಡಿರಬಹುದಾದ ಕಾಮುಕ ಭಾವನೆಗೆ ಅಥವಾ ಅವಳನ್ನು ತನ್ನ ವಶಪಡಿಸಿಕೊಳ್ಳಲು ಹೋಗಿ ಕೊನೆಗೊಂಡ ಅವನ ಹತಾಶ ಭಾವನೆಯನ್ನು ಧ್ವನಿಸುತ್ತದೆ ಎಂದು ಡಾ. ದೇವೇಂದ್ರ ಕುಮಾರ ಹಕಾರಿ ಹೇಳಿರುವುದು ಗಮನಾರ್ಹವಾಗಿದೆ.

ಹಿಂದಿನ ಕಥನ ಗೀತೆಗಿಂತ ವಿರುದ್ಧಾಂಶಗಳು ಇದರಲ್ಲಿವೆ. ಅಲ್ಲಿ ಬಯಸಿದ ಹೆಣ್ಣು ಬಲೆಗೆ ಬೀಳಲು ಅತೀಂದ್ರಿಯ ಜ್ಞಾನದ ನೆರವು ದೊರೆಯುತ್ತದೆ. ಅನ್ಯಾಯಕ್ಕೆ ಅದು ನ್ಯಾಯದ ಸ್ವರೂಪ ಕೊಡುತ್ತದೆ. ಇಲ್ಲಿ ಹೆಣ್ಣಿನ ಆಕರ್ಷಣೆ ಗಂಡಿನ ಕಾಮಕ್ಕೆ ಉತ್ತೇಜನ ನೀಡಿದರೂ ಕೊನೆಗೆ ಕಾಮ ಸೋಲುತ್ತದೆ. ಪ್ರಾಣಕ್ಕಿಂತ ಇಲ್ಲಿ ಶೀಲ ಬೆಲೆಯುಳ್ಳದ್ದಾಗಿರುತ್ತದೆ. ಒಂದೇ ವರ್ಗದ ಹೆಣ್ಣು ಗಂಡಿನ ಭಾವನೆಗಳ ನಡುವೆ ಇಲ್ಲಿ ಸಂಘರ್ಷವೇರ್ಪಟ್ಟಿರುವುದರಿಂದ ನ್ಯಾಯಕ್ಕೆ ಬೆಲೆ ಸಿಕ್ಕಿದೆ. ಹೆಣ್ಣಿನ ಸೆರಗು ರಕ್ಷಿಸಲ್ಪಟ್ಟಿದೆ.

5. ಯಾ ಅಲ್ಲಾ ಯಾರಬ್ಬೀ:

ದೋಣಿಯನ್ನು ಸಮುದ್ರಕ್ಕೆ ನೂಕುವಾಗ ಈ ಕಥನ ಗೀತೆಯನ್ನು ಹಾಡುತ್ತಾರೆ. ಮುಸ್ಲಿಮ್ ಮೀನುಗಾರರಲ್ಲಿ ಈ ಹಾಡು ರೂಢಿಯಲ್ಲಿದೆ. "ಯಾ ಅಲ್ಲಾ ಯಾರಬ್ಬಿ" ಎಂದು ಹೇಳಿ ಒಬ್ಬಾತ ನಿಲ್ಲಿಸಿದ ತಕ್ಷಣ ಉಳಿದವರು ಅದೇ ಸೊಲ್ಲನ್ನು ಪುನರಾವರ್ತಿಸುತ್ತಾರೆ. ಹೀಗೆ ಪ್ರಾರಂಭವಾಗುವ ಕಥನ ಗೀತೆ ಮುಂದುವರಿಯುತ್ತಾ ಹೋಗುತ್ತದೆ. ನೂಕಿದ ಹಡಗು ಸಮುದ್ರ ಸೇರಿದ ತಕ್ಷಣ ನೂಕಿದವರೆಲ್ಲಾ ಹಡಗೇರುತ್ತಾರೆ. ತುಳುವಿನಲ್ಲಿರುವ ಈ ಗೀತೆಯು ಹೀಗೆ ಮುಂದುವರಿಯುತ್ತದೆ.

ಯಾ ಅಲ್ಲಾ ಯಾರಬ್ಬೀ
ಒಂಜಿ ನನ ಅಪ್ಪೆಗೆ
ಅಪ್ಪೆ ನನ ಉಳ್ಳೆರಾಡೊ
ಒಂಜಿ ಮಗ ಉಳ್ಳೆರಾಡೊ
ಸೇಕುಲ್ಲ ಸೈಯದು
ಅಮ್ಮೆ ನನ ಉಳ್ಳೆರಡೋ

(ಯಾ ಅಲ್ಲಾ ಯಾರಬ್ಬೀ
ಯಾರಬ್ಬೀ ಬ್ಯಾರಿಡೋ
ಒಬ್ಬಾನೊಬ್ಬ ತಾಯೀಗೆ
ಒಬ್ಬಾನೊಬ್ಬ ಮಗಾನು
ತಂದೆ ಕೂಡ ಇದ್ದಾನು
ಯಾರಬ್ಬೀಲಾ ಬ್ಯಾರೀಯೇ
ಅಪ್ಪ ಅವಗೆ ಮಗಾನು
ಸೇಕುಟ್ಟಿ ಸಯ್ಯದು)

"ಹೀಗೆ ಸೇಕುಟ್ಟಿ ಸಯ್ಯದು - ಎಂಬ ಕಥಾನಾಯಕ ಯಾರಬ್ಬೀಲ ಬ್ಯಾರಿಯ ಮಗನಾಗಿ ಹುಟ್ಟುತ್ತಾನೆ. ಆ ಬಾಲಕನ ವರ್ಣನೆ, ಅವನ ಉಡುಪು ಹಾಗೂ ಧರಿಸಿದ ಆಭರಣಗಳ ವರ್ಣನೆ ಹಾಡಲ್ಲಿ ಬರುತ್ತದೆ. ತಂದೆ ಅವನಿಗೆ ನಾಲ್ಕಾರು ಭಾಷೆಗಳನ್ನು ಗುರುಗಳಿಂದ ಕಲಿಸುತ್ತಾನೆ. ಕೊನೆಗೆ ಹುಡುಗ ಓದು ಸಾಕು ಎನ್ನುತ್ತಾನೆ. ಅದರ ನಂತರ ಅವನಿಗೆ ಮುಂಜಿ ಮಾಡುತ್ತಾರೆ. ಆ ವೇಳೆಯಲ್ಲಿ ಆ ಹುಡುಗ ತನ್ನ ಭವಿಷ್ಯದ ಆಸೆಯನ್ನು ಹೀಗೆ ತಿಳಿಯುತ್ತಾನೆ."

"ಹಡಗು ಒಂದನು ಕಟ್ಟೇಕು
ಭಾರೀ ವ್ಯಾಪಾರ ಮಾಡ್ಬೇಕು"

"ಹಡಗನ್ನು ಕಟ್ಟುವ ವಿಚಾರ ಅದನ್ನು ವ್ಯಾಪಾರಕ್ಕಾಗಿ ಕಳುಹಿಸುವ ವಿವರಗಳು, ಕಡಲಿನ ಮಾರ್ಗವಾಗಿ ಹಡಗು ದೇಶ ವಿದೇಶಗಳಲ್ಲಿ ಸಂಚರಿಸುವುದು. ಮಗನು ವ್ಯಾಪಾರಿ ಶ್ರೀಮಂತನಾಗುವುದು -ಎಲ್ಲವೂ ಹಾಡಲ್ಲಿ ಬರುತ್ತದೆ. ಕೊನೆಗೆ ಸೇಕುಟ್ಟಿ ಸೈಯ್ಯದು ಕಲ್ಕತ್ತೆಯ ತನಕವೂ ಹೋಗಿ ವ್ಯಾಪಾರ ನಡೆಯಿಸಿದ್ದು ಮಾತ್ರವಲ್ಲ ಅಲ್ಲಿಂದ ಒಬ್ಬಳು ಬೀಬಿಯನ್ನು ಸಂಪಾದಿಸಿ ತರುತ್ತಾನೆ."

ಈ ಕಥನ ಗೀತೆಯು ಇಸ್ಲಾಂ ಸಂಪ್ರದಾಯವಾದ "ಮುಂಜಿ" ಮಾಡಿಸುವ ಕಾರ್ಯವನ್ನು ವಿಶೇಷವಾಗಿ ಪರಿಚಯಿಸುತ್ತದೆ. ಮೂತ್ರದ ಹನಿ ಮರ್ಮಾಂಗದಲ್ಲಿ ನಿಲ್ಲದಿರಲೆಂಬ ಉದೇಶದಿಂದ ಮೂತ್ರಾಂಗದ ಮುಂದಿನ ಚರ್ಮವನ್ನು ತೆಗೆಯುವುದನ್ನು ಮುಸ್ಲಿಮರು "ಮುಂಜಿ" ಎಂದು ಕರೆಯುತ್ತಾರೆ. ಇಸ್ಲಾಂ ಧರ್ಮದನುಸಾರ ಮುಂಜಿ ಮಾಡಿಸದ ಗಂಡಸು ಮುಸ್ಲಿಮನಾಗಲಾರ. ಮುಂಜಿ ಮಾಡಿಸಿದ ನಂತರ ಆತ ಇಸ್ಲಾಂ ಧರ್ಮವನ್ನನುಸರಿಸುವ ಮುಸ್ಲಿಮನಾಗುತ್ತಾನೆ. ಈ ಕಾರಣದಿಂದಲೇ ಮುಂಜಿ ಮಾಡಿಸಿಕೊಂಡವನ ಹೆಗಲೇರುವ ಜವಾಬ್ದಾರಿಯನ್ನು ಹಾಡಲ್ಲಿ ತಿಳಿಸಲಾಗಿದೆ. ಪ್ರವಾದಿ ಮಹಮ್ಮದ್ (ಸ) ರವರ ಮುಖ್ಯ ಉದ್ಯೋಗ ವ್ಯಾಪಾರವೇ ಆಗಿದ್ದ ಕಾರಣದಿಂದ ಅವರ ಅನುಯಾಯಿಗಳಲ್ಲಿ ಬಹುಪಾಲು ವ್ಯಾಪಾರವನ್ನೇ ಉದ್ಯೋಗವನ್ನಾಗಿ ಆಯ್ಕೆ ಮಾಡಿಕೊಳ್ಳುವುದು ರೂಢಿಯಲ್ಲಿದೆ. ಅದರಂತೆ ಸೇಕುಟ್ಟಿ ಸಯ್ಯದು ಸಹ ವ್ಯಾಪಾರಿಯಾಗುತ್ತಾನೆ. ತನ್ನ ವ್ಯಾಪಾರವು ಜೀವನ ಸಾಗಿಸಲು ಮಾರ್ಗ ಮಾಡಿಕೊಟ್ಟಾಗ ಆತ ಬೀಬಿಯನ್ನು ಹುಡುಕಿಕೊಳ್ಳುತ್ತಾನೆ. ಇಲ್ಲಿ ಬಾಲ್ಯದಿಂದ ಯೌವನದವರೆಗಿನ ಬೆಳವಣಿಗೆಯ ಹಂತಗಳನ್ನು ಹಾಡುಗಾರ ಪರಿಚಯಿಸಿದ್ದಾನೆ. ಕರಾವಳಿ ಜನರ ಉದ್ಯೋಗ ಹಿಂದೆ ಹಡಗಿನ ವ್ಯಾಪಾರವಾಗಿತ್ತು. ಅದು ಸಾಮಾನ್ಯ ವ್ಯಾಪಾರವಾಗದೆ "ಭಾರೀ ವ್ಯಾಪಾರ" ವೆಂಬುದನ್ನು ಗೀತೆ ತಿಳಿಸುತ್ತದೆ. ಈ ಕಾರಣದಿಂದಲೇ ಬಯಲು ಸೀಮೆಯ ಜನರಿಗಿಂತ ಕರಾವಳಿಯ ಮಂದಿ ಹೆಚ್ಚು ಶ್ರೀಮಂತರು ಹಾಗೂ ಜಾಣರು ಎಂಬ ನಂಬಿಕೆ ಈಗಲೂ ಬಯಲು ಸೀಮೆಯಲ್ಲಿ ಪ್ರಚಲಿತವಾಗಿದೆ. ಹಾಡು ಸಮುದ್ರ ಸಂಚಾರ ಮತ್ತು ಅದರ ಮೂಲಕ ನಡೆಯುತ್ತಿದ್ದ ವಿಶೇಷ ವ್ಯಾಪಾರವನ್ನು ಪರಿಚಯಿಸುತ್ತದೆ. ಇಂದಿಗೂ ಕರಾವಳಿಯ ಮುಸ್ಲಿಮರು ಸಮುದ್ರ ಸಂಚಾರದ ಮೂಲಕವೇ ವಿದೇಶಿ ವಸ್ತುಗಳನ್ನು ತಂದು ವ್ಯಾಪಾರ ಮಾಡುತ್ತಾ ಶ್ರೀಮಂತರಾಗಿದ್ದಾರೆ.

6. ಹನುಮನ ಕೈ ಕಪ್ಪಾದೊ :

ಕರಾವಳಿಯ ಕೋತಿಗಳು ಬಯಲು ಸೀಮೆಯ ಕೋತಿಗಳಿಗಿಂತ ಬಣ್ಣದಲ್ಲಿ ಭಿನ್ನವಾಗಿರುತ್ತವೆ. ಬಯಲು ಸೀಮೆಯ ಕೋತಿಗಳು ಕೆಂಪಗಿದ್ದರೆ ಕರಾವಳಿಯ ಕೋತಿಗಳು ಕಪ್ಪಾಗಿರುತ್ತವೆ. ಕಪ್ಪು ಮುಖದ ಕೋತಿಗಳಿಗೆ ಕರಾವಳಿಯಲ್ಲಿ 'ಮಂಗ' ಎಂದು ಕರೆಯುತ್ತಾರೆ. ಅವುಗಳ ಮುಖ ಕಪ್ಪಾಗಲು ಕಾರಣವೇನೆಂಬುದನ್ನು ಈ ಕಥನ ಗೀತೆ ತಿಳಿಸುತ್ತದೆ.

ಶಿಟಬಿಲ್ ಶಿಟಬಿಲ್ ರಣಾದಬಿಲ್ಲೋ ತರಿಯೊ ತಾಂ ಬಿಲ್ ಬಿಲ್ಲೋ
ಬತ್ತಿತೋ ಸತ್ತಿತೋ ಕೊಟಾಣ ಕೋಟೀಯಾ ದಂಡು
ಕೋಟೀಯಾ ದಂಡು ಶೀತೆಯ ಶಿರಿರಾಮರ ದಂಡು
ಇಶ್ಪವೊಂದು ದಂಡೀನೊಳಗೆ ಯಾರ ಬಂಟರೋ
ಮದಾ ಶೊಕ್ಕಿದ ಮರಿ ಹೆಣೆಮೆನೆ ಕುಂತಾ ಹನುಮಂತ ಚೊಮಿಯೋ
ಹೋಗ ಬರ್ತಿನೋ ಲಂಕೆಯ ನೋಡ ಬರ್ತಿನೋ

ಲಂಕೆಯ ಒಳಗೆ ಬೆಂಕಿಯ ಬಾಣಾ ಗೆಯ್ದನಲೊ ಹನುಮ
ಲಂಕೆ ಚುಟ್ಟೆ ಪಡುಲಂಕೆಗೆ ಬೆಂಕಿ ಹಚ್ಚನಲೊ ಹನುಮ
ಲಂಕೆಗೆ ಹಿಡಿದಂಗೆ ಬೆಂಕಿ ಹನುಮನ ಬಾಲಕ್ಹಿಡಿದಾವೊ
ಬಾಲಾಕ್ಹಿಡಿತೆಂದೇ ಹನುಮ ಚಮುದರ ಕ್ಹೊಡೇನೋ
ಹನುಮಂತ ಬರ್ತಿನಂದೇ ಚಮುದರ ಓಡುತಯ್ದಾಲೊ
ಕೇಳು ಕೇಳೆಲೆ ಚತಿದೊಳು ಚಮುದರ ನೀ ಕೇಳೆ
ನಿನ್ನನಾರೆ ಶುಡಲೀಕೆ ನಾನು ಬರಲಿಲ್ಲ ಚಮುದರವೆ
ನನ್ನ ಒಂದು ಬಾಲಾದ ಬೆಂಕಿ ನಂಚೇ ಚಮುದರವೆ
ಅಟ್ಟಾ ಹೇಳಿದ ಮ್ಯನೇ ಚಮುದರ ನಿಲ್ಲೂತಯ್ದಾಳೋ
ಓಡೋಡೇ ಓಡೋಡೇ ಚಮುದರ ಬಿದ್ದನೊ ಹನಮಂತ
ಕಯ್ಯೆ ಚುಟತೆಂದೇ ಹನುಮಂತ ಮೊರೆಗುದಿಯಾನೊ
ಮೋರೆ ಕಪ್ಪಾದೊ ಹನುಮನ ಕಯ್ಯೇ ಕಪ್ಪಾದೊ

ಈ ಗೀತೆ ಸೊಗಸಾದ ಐತಿಹ್ಯವನ್ನು ಪರಿಚಯಿಸುತ್ತದೆ. ಜನಪದರು ರಾಮಾಯಣ ಮಹಾಭಾರತಗಳನ್ನು ಓದಿ ತಿಳಿಯದೇ ಇದ್ದರೂ ಕೇಳಿ ಚಿಂತಿಸುವಂತಹವರು. ಲಂಕೆಗೆ ಬೆಂಕಿ ಇಟ್ಟ ಹನುಮನ ಪ್ರಯತ್ನವೇನೋ ಸಫಲಗೊಂಡಿತು. ಆದರೆ ಅದರ ಗುರುತು ಮುಖ ಮತ್ತು ಕೈಗಳ ಮೇಲೆ ವಂಶಪಾರಂಪರ್ಯವಾಗಿ ಮುಂದುವರಿಯುವಂತೆ ಉಳಿಯಿತು. ಶ್ರೀರಾಮನ ಸೇವಕನಾಗಿ ಬಂದ ಹನುಮನ ಕೋಪಕ್ಕೆ ಸಮುದ್ರವೇ ಹೆದರಿ ಹಿಂಜರಿಯುತ್ತಿತ್ತು ಎಂದ ಮೇಲೆ ಲಂಕೆಯ ಗತಿ ಏನಾಗಿರಬಹುದು? ಅದು ಊಹಾತೀತ. ಇಲ್ಲಿ ಜನಪದ ಕವಿ ಮಹಾಭಾರತದ ಒಂದು ಘಟನೆಗೆ ಹೊಸ ಅರ್ಥ ಕಲ್ಪಿಸಿದ್ದಾನೆ.

7. ಒರೊ ಜಪ್ಪು ಜಮನೇರಳೊ :

ಜನಪದ ನಂಬಿಕೆಗಳು ಇದ್ದಕ್ಕಿದ್ದಂತೆ ಹುಟ್ಟಿಕೊಳ್ಳುವುದಿಲ್ಲ. ಅವು ತನ್ನ ಬೆನ್ನ ಹಿಂದೆ ಐತಿಹ್ಯ ಒಂದನ್ನು ಅಡಗಿಸಿಕೊಂಡೇ ಬಂದಿರುತ್ತವೆ. ಐತಿಹ್ಯಗಳ ಬುನಾದಿಯ ಮೇಲೆ ನಿಲ್ಲುವ ನಂಬಿಕೆಗಳು ಜನರನ್ನು ಬಹುಬೇಗ ಕೈಗೊಂಬೆ ಮಾಡಿಕೊಳ್ಳುತ್ತವೆ. ಅಂತಹ ನಂಬಿಕೆಯೊಂದರ ಹಿಂದಿನ ಐತಿಹ್ಯ "ಒರೊ ಜಪ್ಪು ಜಮನೇರಳೊ" ಎಂಬ ತುಳು ಕಥನ ಗಿತೆ. ಇದು 'ಬಾಲೆ' ಮತ್ತು 'ಮುಗುಡು' ಮೀನುಗಳೆರಡನ್ನೂ ಸೇರಿಸಿ ಒಂದೇ ಪಾತ್ರೆಯಲ್ಲಿ ಬೇಯಿಸಬಾರದೆಂಬ ನಂಬಿಕೆ ಹುಟ್ಟಲು ಕಾರಣವೇನೆಂಬುದನ್ನು ತಿಳಿಸುತ್ತದೆ.

ಊರೊಂದರಲ್ಲಿ ವಾಸಿಸುತ್ತಿದ್ದ ದಂಪತಿಗಳಿಗೆ ಒಂದು ಗಂಡು ಮೂರು ಹೆಣ್ಣು ಮಕ್ಕಳಿದ್ದರು. ಒಂದು ದಿನ ಮಗನು ಮಲ್ಲಿಗೆ ದಂಡೆಯೊಂದನ್ನು ತಂದು ಬಾಗಿಲ ಮೇಲ್ಭಾಗದಲ್ಲಿಟ್ಟು ತಾಯಿಗೆ "ಇದನ್ನು ಯಾರು ಮುಡಿಯುತ್ತಾರೋ ಅವರನ್ನು ನಾನು ಮದುವೆಯಾಗುತೇನೆ" ಎಂದು ಹೇಳಿ ಹೊರಗೆ ಹೋದ. ಅವನು ಹೋದ ನಂತರ ಅವನ ತಂಗಿಯರು ಬಂದು ಮಲ್ಲಿಗೆ ದಂಡೆ ಕಂಡು ಮುಡಿಯಲೆಂದು ಹೂವಿಗೆ ಕೈ ಹಾಕಿದರು. ಆಗ ತಾಯಿ ಅವರನ್ನು ತಡೆದು ಮಗ ಹೇಳಿ ಹೋದದ್ದನ್ನು ಅವರಿಗೆ ತಿಳಿಸಿದಳು. ಆ ತಕ್ಷಣ ಮೊದಲಿಬ್ಬರು ಹೂ ಮುಟ್ಟದೆ ಹೋದರು. ಆದರೆ ಕಿರಿಯವಳು "ಅಣ್ಣನು ತಂಗಿಯನ್ನು ಮದುವೆಯಾಗಲಾರ" ಎಂದು ಹೇಳಿ ಮಲ್ಲಿಗೆ ದಂಡೆಯನ್ನು ಮುಡಿದೇ ಬಿಟ್ಟಳು. ಅನಂತರ ಅಣ್ಣ ಬಂದ ವಿಷಯ ತಿಳಿಯಿತು.

ಆತನು ತನ್ನ ನಿರ್ಧಾರವನ್ನು ಬದಲಾಯಿಸಲಿಲ್ಲ. ತಂಗಿಯೊಡನೆ ಮದುವೆಯ ಸಿದ್ಧತೆಗಳಾದವು. ಮದುಮಗಳು ತಪ್ಪಿಸಿಕೊಂಡಾಳೆಂದು ಆಕೆಯನ್ನು ಒಂದು ಕೋಣೆಯಲ್ಲಿ ಹಾಕಿ ತೆಂಗಿನಕಾಯಿ ತುರುಬುವ ಕೆಲಸ ಕೊಟ್ಟರು. ಆಕೆ ಒಂದು ಹೆಗ್ಗಣಕ್ಕೆ ತೆಂಗಿನಕಾಯಿಯ ಆಸೆ ತೋರಿಸಿ, ಅದರಿಂದ ಸುರಂಗ ತೋಡಿಸಿ, ಅಲ್ಲಿಂದ ತಪ್ಪಿಸಿಕೊಂಡು ಬಂದು ಜಂಬು ನೇರಳೆ ಮರದ ಮೇಲೆ ಹತ್ತಿ ಕುಳಿತುಕೊಳ್ಳುತ್ತಾಳೆ. ಆನಂತರ ಮನೆಯವರೆಲ್ಲಾ ಅವಳನ್ನು ಹುಡುಕಿದರೂ ಅವಳು ಸಿಗುವುದಿಲ್ಲ. ಅವಳ ಹಿರಿಯಕ್ಕ ಮುಖ ತೊಳೆಯಲೆಂದು ಚಿಲುಮೆಯ ಬಳಿಗೆ ಬಂದಾಗ ಅವಳ ಮೈಮೇಲೆ ಒಂದು ಹನಿ ನೀರು ಬಿತ್ತು. ಆಕೆ ತಲೆ ಎತ್ತಿ ನೋಡಿದಾಗ ಜಂಬು ನೇರಳೆ ಮರದ ಮೇಲೆ ತನ್ನ ಕಿರಿಯ ತಂಗಿ ಕುಳಿತುಕೊಂಡು ಅಳುತ್ತಿದ್ದುದನ್ನು ಕಂಡು ಅವಳಿಗೆ ಹೀಗೆ ಹೇಳುತ್ತಾಳೆ:

ಬರೋ ಜಪ್ಪು ಜಮನೇರೊಳೋ
ಪಾಡಿದೊಂಪೂ ಮಾಲೂಂಡೆ
ಕಡ್ತಿ ಇರೆ ಬಾಡೂಂಡೆ
ಅಡಿ ಉನ್ಪು ಸೆಟ್ಟುಂಡೆ
ಮುತ್ತಿ ಬಚ್ಚಿರೆ ಉಲುಂಗುಂಡೆ
ಕೂಡಿ ಸಭೆ ಬಿರಿಪ್ಪುಂಡೆ
ಸುತ್ತಿ ಬಿನ್ನೆರ್ ಬರೆಳೆ ಬೆರ್
ಒರೊ ಜಪ್ಪೊ ಜಮನೇರೊಳೋ

ಹೀಗೆ ಹೇಳಿದ ನಂತರ ಮತ್ತೊಬ್ಬ ಅಕ್ಕ ಬಂದು ಮರದ ಮೇಲಿರುವ ತಂಗಿಯನ್ನು ಕಂಡು ಮೊದಲಿನಂತೆಯೇ ಕೇಳಿಕೊಳ್ಳುತ್ತಾಳೆ. ಆದರೂ ಅವಳು ಇಳಿಯದೇ ಇರುವುದನ್ನು ಕಂಡು ತಾಯಿ ಬರುತ್ತಾಳೆ. ಅವಳೂ ಸಹ ಮೊದಲಿನಂತೆಯೇ ಕೇಳಿಕೊಳ್ಳುತ್ತಾಳೆ.

ಒರೊ ಜಪ್ಪೊ ಜಮನೇರಳೊ
ಪಾಡಿದೊಂಪೂ ಮಾಲುಂಡೆ
ಕಡ್ತಿ ಇರೆ ಬಾಡೂಂಡೆ
ಅಡಿ ಉನ್ಪು ಸೆಟ್ಟುಂಡೆ
ಮುಕ್ತಿ ಬಚ್ಚಿರೆ ಉಲುಂಗುಂಡೆ
ಕೂಡಿ ಸಭೆ ಬಿರಿಪ್ಪುಂಡೆ
ಬತ್ತಿ ಬಿನ್ನೆರ್ ಬರೆಳೆಬೆರ್
ಒರೊ ಜಪ್ಪು ಜಮನೆರಳೋ ಎನ್ನುತ್ತಾಳೆ.

(ಒಮ್ಮೆ ಇಳಿಯೇ ಜಂಬುನೇರಳೆಯೇ
ಹಾಕಿದ ಚಪ್ಪರ ವಾಲುತ್ತಿದೆ
ಕಡಿದ ಎಲೆ ಬಾಡುತ್ತಿದೆ

ಅಟ್ಟ ಅನ್ನ ಕೆಡುತ್ತಿದೆ
ಕಿತ್ತ ವೀಳ್ಯದೆಲೆ ಒಣಗುತ್ತಿದೆ
ಕೂಡಿದ ಸಭೆ ಚೆದುರುತ್ತಿದೆ
ಬಂದ ನೆಂಟರು ಹಸಿದಿದ್ದಾರೆ
ಒಮ್ಮೆ ಇಳಿಯೇ ಜಂಬುನೇರಳೆಯೇ)

ಅದಕ್ಕೆ ಮರದ ಮೇಲಿಂದ ಮಗಳು ಉತ್ತರಿಸುವುದೆಂದರೆ:

ಪಾಡಿದೊಂಪೊ ಮಾಲಡ್
ಕಡ್ತಿ ಇರೆ ಬಾಡಡ್
ಅಡಿ ಉನ್ಪು ಸೆಟ್ಟದ್
ಮುತ್ತಿ ಬಜ್ಜಿರೆ ಉಲುಂಗಡ್
ಕೂಡಿ ಸಭೆ ಬಿಲಿಯಡ್
ಬತ್ತಿ ಬಿನ್ನೆರ್ ಬರೆಲಡ್
ದುಂಬುದ ಕಾಲೊಡ್ ಅಪ್ಪೇಂಡ್ ಲೆತ್ತೆನೆ
ನನದ ಕಾಲೊಡ್ ಮಾಮೀಂಡ್ ಲೆಪ್ಪೊಡೆ
ಯಾರ್ ಜಪ್ಪೂಬಿ------------ ಎಂದು ಹೇಳುತ್ತಾಳೆ.

ಕೊನೆಗೆ ಅಣ್ಣ ಬರುತ್ತಾನೆ. ಅವನು ಮರದ ಮೇಲಿರುವ ತಂಗಿಯನ್ನು ಕುರಿತು:

ಒರೊ ಜಪ್ಪೋ ಜಮನೇರಳೋ
ಪಾಡಿದೊಂಡೋ ಮಾಲುಂಡೇ
ಕಡ್ತಿ ಇರೆ ಬಾಡೂಂಡೆ
ಅಡಿ ಉನ್ಪು ಸೆಟ್ಟುಂಡೇ
ಮುಕ್ತಿ ಬಜ್ಜಿರೆ ಉಲುಂಗುಂಡೇ
ಕೂಡಿ ಸಭೆ ಬಿರಿಪ್ಪುಂಡೇ
ಬತ್ತಿ ಬಿನ್ನೆರ್ ಬರಳಬೆರ್
ಒರೊ ಜಪ್ಪು ಜಮನೆರಳೊ----- ಎನ್ನುತ್ತಾನೆ

ಅವನಿಗೂ ತಂಗಿ---
ಪಾಡಿದೊಂಪೊ ಮಾಲಡ್
ಕಡ್ತಿ ಇರೆ ಬಾಡಡ್

ಅಡಿ ಉನ್ಪು ಸೆಟ್ಪಡ್
ಮುತ್ತಿ ಬಚ್ಚಿರೆ ಉಲುಂಗಡ್
ಕೂಡಿ ಸಭೆ ಬಿಯಡ್
ಬತ್ತಿ ಬಿನ್ನೆರ್ ಬರೆಲಡ್
ದುಂಬುದ ಕಾಲೊಡು ಅಣ್ಣಾಂದ್ ಲೆತ್ತೆನೆ
ನನದ ಕಾಲೊಡು ಕಂಡನೀಂದ್ ಲೆಪ್ಪೊಡ
ಯಾರ್ ಜಪ್ಪೂಜಿ------------ ಎಂದೇ ಉತ್ತರಿಸುತ್ತಾಳೆ.

(ಹಾಕಿದ ಚಪ್ಪರ ಮಾಲಲಿ
ಕಡಿದ ಎಲೆ ಬಾಡಲಿ
ಅಟ್ಟ ಅನ್ನ ಕೆಡಲಿ
ಕಿತ್ತ ವೀಳ್ಯೆದೆಲೆ ಒಣಗಲಿ
ಕೂಡಿದ ಸಭೆ ಚೆದರಲಿ
ಬಂದ ನೆಂಟರು ಹಸಿಯಲಿ
ಹಿಂದಿನ ಕಾಲದಲಿ ಅಣ್ಣಾಯೆಂದು ಕರೆದೆ
ಮುಂದಿನ ಕಾಲದಲಿ ಗಂಡಾಯೆಂದು ಕರೆಯಬೇಕಲ್ಲ
ನಾನು ಇಳಿಯುವುದಿಲ್ಲ)

ಆಗ ಅಣ್ಣನು ಮರಕ್ಕೆ ಹತ್ತುತ್ತಾನೆ. ತಂಗಿ ಮರದ ಎಲೆ ಎಲೆಯ ಮೇಲೆ ಹೋಗುತ್ತಾಳೆ. ಆತನೂ ಅಲ್ಲಿಗೆ ಬರುತ್ತಾನೆ. ಆಕೆ ಕೆಳಗಿನ ಮಡುವಿಗೆ ಹಾರಿ 'ಬಾಲೆ' ಮೀನಾಗುತ್ತಾಳೆ. ಅವನು ಸಹ ಮಡುವಿಗೆ ಹಾರಿ 'ಮುಗುಡು' ಮೀನಾಗುತ್ತಾನೆ. 'ಮುಗುಡು' ಮೀನು 'ಬಾಲೆ' ಮೀನನ್ನು ನುಂಗುತ್ತದೆ. ಒಬ್ಬ ಒಂದು ಗಾಳ ಹಾಕಿ ಆ ಮುಗುಡು ಮೀನನ್ನು ಹಿಡಿದು ಮನೆಗೆ ತರುತ್ತಾನೆ. ಅಲ್ಲಿ ಆ ಮೀನನ್ನು ಕೊಯ್ಯುವಾಗ ಅದರೊಳಗೆ 'ಬಾಲೆ' ಮೀನು ಇರುತ್ತದೆ. ಆಗ ಬಾಲೆ ಹೇಳುತ್ತದೆ. "ಇವನನ್ನು ಹಾಕಿದ ಪಾತ್ರೆಯಲ್ಲಿ ನನ್ನನ್ನು ಹಾಕಬೇಡ, ಇವನನ್ನು ಬೇಯಿಸಿದ ಪಾತ್ರೆಯಲ್ಲಿ ನನ್ನನ್ನು ಬೇಯಿಸಬೇಡ" ಎಂದು. ಅದರಂತೆ ಅವನು ಬಾಲೆಯನ್ನು ಒಂದು ಪಾತ್ರೆಗೆ 'ಮುಗುಡ'ನ್ನು ಮತ್ತೊಂದು ಪಾತ್ರೆಗೆ ಹಾಕಿ ಬೇಯಿಸುತ್ತಾನೆ. ಕರಾವಳಿಯ ಮೀನುಗಾರರು ಇಂದಿಗೂ ಈ ನಂಬಿಕೆಯನ್ನು ತಪ್ಪದೆ ಆಚರಿಸುತ್ತಿದ್ದಾರೆ.

ಬಿ. ಎ. ವಿವೇಕ ರೈ ಯವರು ವಸ್ತುವಿನ ದೃಷ್ಟಿಯಿಂದ ಇದು ಎ 2110 creation of particular fishes ಮತ್ತು ಎ 1710 creation of animals through transformation ಎಂಬ ಆಶಯವುಳ್ಳ ಐತಿಹ್ಯದ ಗುಂಪಿಗೆ ಸೇರುತ್ತದೆ ಎಂದಿದ್ದಾರೆ. ತುಳುನಾಡಿನ ಎರಡು ಪ್ರಸಿದ್ಧ ಮೀನುಗಳಾದ 'ಮುಗುಡು' ಮತ್ತು 'ಬಾಲೆ' ಮೀನುಗಳ ಹುಟ್ಟನ್ನು ಕುರಿತ ಐತಿಹ್ಯದಂತೆ ಈ ಕಥೆ ವರ್ತಿಸುತ್ತದೆ.

'ಕನ್ನಡದಲ್ಲಿ ಇದೇ ಆಶಯವುಳ್ಳ ಜನಪದ ಕಥೆಯೊಂದು ರಾಗೌರವರ ಕರ್ನಾಟಕ ಜನಪದ ಕಥೆಗಳಲ್ಲಿ ಸಿಗುತ್ತದೆ.

ಅಲ್ಲಿಯು ಅಣ್ಣನು ತಂಗಿಯನ್ನು ಮದುವೆಯಾಗಬೇಕೆಂಬ ಹಟ ಹಿಡಿಯುತ್ತಾನೆ. ತಂಗಿ ಹೊಳೆಗೆ ಹಾರಿದಾಗ ಅಣ್ಣನೂ ಹೊಳೆಗೆ ಹಾರುತ್ತಾನೆ. ಅವರು ಗಂಡು ಮತ್ತು ಹೆಣ್ಣು ಮೀನಾಗುತ್ತಾರೆ. ಮುಂದೆ ಅದರ ಬೇರೆ ಬೇರೆ ರೂಪಾಂತರಗಳು ಬರುತ್ತವೆ. ಈ ಭಾಗ ತುಳು ಕತೆಯಲ್ಲಿಲ್ಲ. ★

ರಚನೆಯ ದೃಷ್ಟಿಯಿಂದ ಈ ತುಳು ಕತೆಯಲ್ಲಿ ಗದ್ಯದ ನಡುವೆ ಪದ್ಯಗಳ ತುಣುಕುಗಳು ಬರುತ್ತವೆ. ಲಯಬದ್ಧವಾಗಿ ಹಾಡಲು ಯೋಗ್ಯವಾದ ಹಾಡಿನ ರೂಪದಲ್ಲಿ ಅವು ಇದೆ. ಈ ರಚನೆಯು ಸ್ಕಾಂಡಿನೇವಿಯರ್, ಬ್ರಿಟನ್, ಅಮೇರಿಕಾ, ಆಫ್ರಿಕಾದ ಜನಪದ ಸಾಹಿತ್ಯದಲ್ಲಿ ವಿಶೇಷವಾಗಿ ಕಾಣಸಿಗುವ "Cante Fable"★ನ್ನು ಹೋಲುತ್ತವೆ ಎಂಬ ವಿವೇಕ ರೈಯವರ ಮೇಲಿನ ಹೇಳಿಕೆ ಸಮಂಜಸವಾಗಿದೆ. ಈ ಕಥನ ಗೀತೆಯು ವಿಶಿಷ್ಟವಾಗಿದ್ದು ಹೊಸ ಬಗೆಯ ವಸ್ತುವನ್ನು ಹೊಂದಿದೆ. ಅಣ್ಣ-ತಂಗಿಯರ ಸಂಬಂಧವನ್ನು ಶಾಶ್ವತವಾಗಿಡುವ ಪ್ರಯತ್ನವನ್ನು ಕವಿ ಇದರಲ್ಲಿ ತಂದಿದ್ದಾನೆ. ಅಣ್ಣ-ತಂಗಿಯರ ಸಂಬಂಧ ತೊರೆದು ಪುನರ್ಜನ್ಮದಲ್ಲಿ ಪತಿ-ಪತ್ನಿಯ ಹೊಸ ಸಂಬಂಧದ ಸೃಷ್ಟಿಯ ಕಲ್ಪನೆ ಗೀತೆಯ ಹೊಸ ವಸ್ತುವಾಗಿದೆ.

6. ಕಾಂತುನೆತ್ರಿ ಭೂತದ ಪಾಡ್ದನ :

ತುಳುನಾಡಿನ ಸಂಸ್ಕೃತಿಯನ್ನು ಸಾರುವ ಪಾಡ್ದನಗಳು ಜನಪದ ಸಾಹಿತ್ಯಕ್ಕೆ ವಿಶಿಷ್ಟ-ಕೊಡುಗೆಗಳಾಗಿವೆ. ಅವುಗಳಲ್ಲಿ ಬರುವ ಭೂತಗಳು ಅಲ್ಲಿನ ನಂಬಿಕೆ ಮತ್ತು ಆಚರಣೆಗಳನ್ನು ಪ್ರತಿನಿಧಿಸುತ್ತವೆ. ಆ ಭೂತಗಳ ಇತಿಹಾಸದ ಬಗ್ಗೆ ಗಮನಹರಿಸಿದರೆ ಅವು ಬೇರೆ ಬೇರೆ ಕಡೆಗಳಿಂದ ಬಂದು ತುಳುನಾಡಿನಲ್ಲಿ ನೆಲೆ ಮಾಡಿಕೊಂಡವೆಂದು ತಿಳಿದುಬರುತ್ತದೆ. ಹಾಗೆ ಬಂದ ಭೂತಗಳಲ್ಲಿ ಕಾಂತುನೆಕ್ರಿ ಭೂತವೂ ಒಂದು. ಅದರ ಇತಿಹಾಸವನ್ನು ಪರಿಚಯಿಸುವ ಪಾಡ್ದನವು ಈ ರೀತಿ ಇದೆ.

ಮಾಯಡ್ ಪಡಾವು ಬತ್ತ್‌ಂಡ್
ಪಣಂಬೂರು ಸ್ತಾನೊದ ವತ್ತಗ್
ಮಾಯದ ಪಡಾವು ವಂದಂಡ್
ಪಣಂಬೂರು ಸಾರಾಳ್ ಕೂಡಿಯೇರ್
ಪಣಂಬೂರು ಬೂಡುಡು ಕೂಡಿಯೇರ್
ಇಂದೊಂಜಿ ಪಡಾವು ಬತ್ತ್‌ಂಡ್ ಪಂಡವ್
ಸೋದನೆ ತೂಯೇರ್
ಸೋದನೆ ಮಳ್ತ್‌ದ್ ಮಾಯದ ಪೆಟ್ಟಿಗೆವ್
ಮಾಯಾದ ಪಡಾವು ತುಂಬಾದ್
ಪಣಂಬೂರು ಬೂಡುಗು ತುಂಬಾಯೇರ್

★ ತುಳು ಜನಪದ ಸಾಹಿತ್ಯ.

★ "Cante Fable"- This is a prase narrative which Contains elements of chant or song, sometimes only a line (A Narrative form in which a story is told partly in a song or two, sometimes much more)
by kennelth and Marry Clarke. " Introducing Folk

ಚಾವಣಿ ನಡುಟ್ ದೀಯೇರ್
ಪೆಟ್ಟಿಗೆದ ಬಾಯಿ ದೇತ್ತೇರ್
ತೂಯಿನ ಆಯ ಕಣ್ಣ ಪುಡಾಂಡ್
ಕೇಂಡುನ ಆಯ ಕೆಬಿ ಪುಡಾಂಡ್
ಪಣಂಬೂರ ಕಾವೇರಪ್ಪೆ
ಯೆಚ್ಚಿಡ ಬಂಟೆ ಬತ್ತ
ಇಂದು ದಾನೇ ಚೋದೀಗ ಅಂದದ್
ಅಳವಳಿ ಪಂಚಾಂಗೊಡ್ ಕೇಂಡೆರ್ ----
ಮಾಯ ಪಡಾವುಡ್ ಬತ್ತಿಂ ಚಿತ್ತಿ ಭೂತ
ಪಣಂಬೂರ್ ಬುಡಡ್
ಗೊಜ್ಜರ ಬಣಕುಳೆಗ್ ಬರಿಕ್
ಬಂಗಾರ ಕುಲೊಕು ಶಿಂಗಾರ ಬಕ್ತಿಂಚಿನ
ಭೂತೊ ಬತ್ತೆ ----

(ಮಾಯದ ಪಡಾವು ಬಂದಿತ್ತು
ಪಣಂಬೂರು ಸ್ತಾನದ ಬದಿಗೆ
ಮಾಯದ 'ಪಡಾವು' ಬಂದಿತ್ತು
ಪಣಂಬೂರು ಜನರೆಲ್ಲ ಕೂಡಿದರು
ಪಣಂಬೂರು ಬೀಡಲ್ಲಿ ಸೇರಿದರು
ಇದೊಂದು ಹಡಗು ಬಂತೆಂದು ಹೇಳಿ
ಶೋಧನೆ ಮಾಡತೊಡಗಿದರು
ಶೋಧನೆ ಮಾಡಲು ಮಾಯದ ಪೆಟ್ಟಿಗೆ
ಮಾಯದ ಹಡಗಲ್ಲಿ ಕಾಣಿಸಿತು
ಮಾಯ ಪೆಟ್ಟಿಗೆ ಹೊರಿಸಿ, ಸಾಗಿಸಿ
ಪಣಂಬೂರು ಬೀಡಿಗೆ ಸಾಗಿಸುತೆ
ಚಾವಡಿ ನಡುವಲಿ ಇರಿಸಿದರು
ಪೆಟ್ಟಿಗೆ ಬಾಯ ತೆರೆದಿಹರು
ಕಂಡವರ ಕಣ್ಣೇ ಹೊಟ್ಟಿತ್ತು
ಕೇಳ್ದರ ಕಿವಿಯೇ ಒಡೆದಿತ್ತು
ಪಣಂಬೂರ ಕಾವೇರಪ್ಪ
ಭಾರಿಯ ಬಂಟ ಬಂದಿದ್ದ
ಇದೇನು ಸೋಜಿಗ ಎಂದಿದ್ದ

ಪಂಚಾಂಗದವರ ಕೇಳಿದರು....

(ಅವರು ತಿಳಿಸಿದರು....)

ಮಾಯಕದ ಹಡಗಲಿ ಬಂದೀ ಭೂತ

ಸ್ಥಳೀಯ ಗೊಜ್ಜರ ಬನದ

ಬಂಗಾರದಂಥ ಕುಲಕ್ಕೆ

ಸಿಂಗಾರವಾದ ಭೂತ ಇದ್ದಂತೆ)

ಹೀಗೆ ಕತೆ ಮುಂದುವರಿಯುತ್ತದೆ. ಸಮುದ್ರದಲ್ಲಿ ಪ್ರಯಾಣ ಮಾಡುತ್ತಾ ಪಣಂಬೂರು ಸೇರಿದ ಭೂತನಿಗೆ ಅಲ್ಲಿ ಸ್ಥಾನ ಸಿಗಲಿಲ್ಲ. ಅಲ್ಲಿಂದ ಅದು ಮುಂದುವರಿಯುತ್ತಾ ಧರ್ಮಸ್ಥಳದ ಕಡೆಗೆ ಹೋಯಿತು. ಅಲ್ಲಿ ಮಂಜುನಾಥನ ಸೇವೆ ಮಾಡುವ ಸ್ಥಾನ ದೊರೆಯಿತು, ಸಾಮಾನ್ಯವಾಗಿ ಭೂತಗಳು ಕೆಳವರ್ಗದವರ ಆರಾಧ್ಯ ದೇವತೆಗಳು. ಅವು ಆ ವರ್ಗದ ಸಾಂಸ್ಕೃತಿಕ ಲಕ್ಷಣಗಳನ್ನು ಬಿಂಬಿಸುತ್ತವೆ. ಕೆಳವರ್ಗದವರೂ ಮೇಲ್ವರ್ಗದವರ ಸೇವೆಗಾಗಿಯೇ ಹುಟ್ಟಿದ ಜನ. ಅದೇರೀತಿ ಅವರ ದೇವತೆಗಳು ಸಹ ಮೇಲ್ವರ್ಗದ ದೇವತೆಗಳ ಸೇವೆಗಾಗಿಯೇ ಸೃಷ್ಟಿಯಾದಂತಹವು ಎಂಬುದಕ್ಕೆ ಈ ಪಾಡ್ದನ ನಿದರ್ಶನವಾಗಿದೆ.

ಸಮುದ್ರಕ್ಕೆ ಸಂಬಂಧಿಸಿ ವಿಷಯಗಳನ್ನು ವಸ್ತುವನ್ನಾಗಿಸಿಕೊಂಡು ರಚಿಸಲ್ಪಟ್ಟ ಬಿಡಿಗೀತೆ ಮತ್ತು ಕಥನ ಗೀತೆಗಳು ಕರಾವಳಿ ಸಂಸ್ಕೃತಿಯನ್ನು ಪರಿಚಯಿಸುವುದು ಮಾತ್ರವಲ್ಲದೆ ಜನಪದ ಗೀತೆಗಳ ಕ್ಷೇತ್ರದಲ್ಲಿ ತಮ್ಮದೇ ಆದ ವಿಶಿಷ್ಟ ಸ್ಥಾನ ಪಡೆಯುತ್ತವೆ. ಭಾಷೆ. ಶೈಲಿ, ವಸ್ತುಗಳ ದೃಷ್ಟಿಯಿಂದ ಅವು ತಮ್ಮ ವಿಶಿಷ್ಟತೆಗಳನ್ನುಳಿಸಿಕೊಳ್ಳುತ್ತವೆ. ನಿಬಂಧ ರಚಿಸುವಷ್ಟು ಸಾಮಗ್ರಿ, ಒದಗಿಸಬಲ್ಲ ಸಮುದ್ರ ಗೀತೆ ನಮಗೆ ದೊರೆಯುತ್ತವೆ. ಇಲ್ಲಿ ಅವುಗಳ ಇಣುಕು ನೋಟವನ್ನು ಮಾತ್ರ ಕೊಡಲಾಗಿದೆ.

2.3 ಸಮುದ್ರ ಕತೆಗಳು

ಸಮುದ್ರ ಕತೆಗಳ ಕ್ಷೇತ್ರ ಸಮುದ್ರ ಗೀತೆಗಳ ಕ್ಷೇತ್ರಕ್ಕಿಂತ ವಿಶಾಲ ಹಾಗೂ ಸಮೃದ್ಧವಾದುದು. ಅದಕ್ಕೆ ಕತೆಗಳಲ್ಲಿ ಅಡಗಿರುವ ಕುತೂಹಲ ಕೆರಳಿಸಿರುವ ವಿಶಿಷ್ಟ ಗುಣ ಕಾರಣ ಮುಗ್ಧ ಮಗುವನ್ನೂ ಸಹ ಸೆರೆ ಹಿಡಿಯುವಂತಹ ಆಕರ್ಷಣೀಯ ಲಕ್ಷಣಗಳನ್ನು ಪಡೆದಿರುವ ಕತೆಗಳು ಇಂದಿಗೂ ತಮ್ಮ ಸ್ಥಾನವನ್ನು ಕಾಪಾಡಿಕೊಂಡಿದೆ. ವಿವಿಧ ಬಗೆಯ ವಸ್ತುಗಳನ್ನೊಳಗೊಂಡು ಅವು ಜನಪದರನ್ನು ನಲಿಸಿವೆ, ಅಳಿಸಿವೆ, ತಿದ್ದಿವೆ, ಆಶ್ಚರ್ಯಗೊಳಿಸಿವೆ. ಸಮುದ್ರ ಕತೆಗಳಲ್ಲಿ ಸಮುದ್ರ ಮಾತ್ರ ವಸ್ತುವಾಗಿದೆ. ಅದರಲ್ಲಿನ ಜಲಚರ ಪ್ರಾಣಿ ಹಡಗು ಸಮುದ್ರ ಪ್ರಯಾಣ ಮೊದಲಾದುವು ವಸ್ತುಗಳಾಗುತ್ತವೆ. ಸಮುದ್ರದೊಡನೆ ಸಂಬಂಧ ಪಡೆದಿರುವ ವಸ್ತುವನ್ನೊಳಗೊಂಡ ಕತೆಗಳನ್ನು ಸಮುದ್ರ ಕತೆಗಳೆಂದು ಪರಿಗಣಿಸಲಾಗಿದೆ.

ಸಮುದ್ರಕ್ಕೆ ಸಂಭಂಧಿಸಿದ ವಿಷಯಗಳನ್ನೊಳಗೊಂಡು ರಚಿಸಲ್ಪಟ್ಟ ಕತೆಗಳನ್ನು ಪ್ರಮುಖವಾಗಿ ಐದು ಭಾಗಗಳನ್ನಾಗಿ ಮಾಡಬಹುದು.

(ಅ) ಜಲಚರ ಪ್ರಾಣಿ ಕತೆಗಳು
(ಆ) ದೋಣಿ ಕತೆಗಳು
(ಇ) ರಮ್ಯ ಕತೆಗಳು
(ಈ) ಅತಿಮಾನುಷ ಕತೆಗಳು
(ಉ) ನೀತಿಕತೆಗಳು

ಈ ವಿಂಗಡಣೆಗಳಲ್ಲಿ ಒಂದು ಭಾಗದ ಕತೆಗಳು ಪರಿಪೂರ್ಣವಾಗಿ ಮತ್ತೊಂದು ಭಾಗದಿಂದ ಭಿನ್ನವಾಗಿ ನಿಲ್ಲದೇ ಒಂದಲ್ಲಾ ಒಂದೆಡೆಯಲ್ಲಿ ಅವು ಆಂತರಿಕ ಸಂಬಂಧವನ್ನು ಪಡೆದುಕೊಂಡೇ ಇರುತ್ತವೆ. ದೋಣಿ ಕತೆಗಳಲ್ಲಿ ಜಲಚರ ಪ್ರಾಣಿಗಳು, ನೀತಿಕತೆಗಳಲ್ಲಿ ಅತಿಮಾನುಷ ವ್ಯಕ್ತಿಗಳು ಸೇರಿಕೊಂಡಿರಬಹುದು. ವಸ್ತು ಮತ್ತು ಉದ್ದೇಶಗಳ ಹಿನ್ನೆಲೆಯಲ್ಲಿ ಕತೆಗಳನ್ನು ವಿಂಗಡಿಸಲಾಗಿದ್ದರೂ ಒಂದರ ಲಕ್ಷಣ ಮತ್ತೊಂದರಲ್ಲಿ ಬಿಂಬಿಸುತ್ತದೆ.

(ಅ) **ಜಲಚರ ಪ್ರಾಣಿ ಕತೆಗಳು**

ಜನಪದರು ಜಲಚರ ಪ್ರಾಣಿಗಳ ಗುಣಸ್ವರೂಪವನ್ನು ಚೆನ್ನಾಗಿ ಬಲ್ಲವರು ಅವುಗಳನ್ನು ತಮ್ಮ ಕತೆಗಳಲ್ಲಿ ಪ್ರಮುಖ ಪಾತ್ರಗಳನ್ನಾಗಿ ಬಳಸಿಕೊಳ್ಳುವ ಚಾಣಕ್ಷತನ ಅವರಲ್ಲಿದೆ. ಮಾತುಬಾರದ ಪ್ರಾಣಿಗಳಿಗೆ ಮಾತನಾಡಿಸಿ ಅವುಗಳ ಸುತ್ತಾ ಕತೆಯೊಂದನ್ನು ಹೆಣೆಯುವಂತಹ ಕಥಾಚಾತುರ್ಯ ಅವರಲ್ಲಿ ಕಾಣಬಹುದು. ಪ್ರಾಣಿಗಳಲ್ಲಿ ಮನುಷ್ಯರ ಗುಣಸ್ವಭಾವವನ್ನು ಕಾಣುವ ಅವರು ಅವುಗಳನ್ನು ಮನುಷ್ಯರಿಗೆ ಸಮಾನರನ್ನಾಗಿ ಪರಿಗಣಿಸುತ್ತದೆ. ಅದನ್ನು ತಿಳಿಸುವ ಒಂದು ಕತೆ. '' **ಕೃತಜ್ಞ ಮೀನು ಮತ್ತು ಕೃತಜ್ಞ ಹಾವು**''

ಈ ಕತೆಯಲ್ಲಿನ ಅರಸನ ಹೆಂಡತಿ, ಹುಟ್ಟು ಕುರುಡಿ ಯಾದ ಹೆಣ್ಣು ಮಗುವಿಗೆ ಜನ್ಮಕೊಟ್ಟು ಸಾಯುತ್ತಾಳೆ. ಅರಸ ಎರಡನೇ ಮದುವೆಯಾಗುತ್ತಾನೆ. ಮಲತಾಯಿಯ ಕಾಟದಿಂದ ಅರಸನ ಮಗಳು ದನ ಕಾಯಲು ಹೋಗುತ್ತಾಳೆ. ಮತ್ತೊಂದು ಊರಲಿದ್ದ ಅರಸನ ಹೆಂಡತಿ ಮೀನಿಗೆ ಜನ್ಮ ಕೊಡುತ್ತಾಳೆ. ಆ ಮೀನು ದಿನಗಳೆದಂತೆ ಬೆಳೆದು ಪ್ರಾಯಕ್ಕೆ ಬರುತ್ತದೆ. ಆಗ ಅದು ತನಗೆ ಮದುವೆ ಮಾಡಬೇಕೆಂದು ಒತ್ತಾಯಿಸುತ್ತದೆ. ಅರಸ ಹೆಣ್ಣು ಹುಡುಕಲು ಹೋದಾಗ ದಾರಿಯಲ್ಲಿ ತಾಯಿಸತ್ತ ಕುರುಡಿಯನ್ನು ಕಂಡು ಮೀನಿಗೆ ಮದುವೆಯಾಗಲು ಕೇಳುತ್ತಾನೆ. ಅವಳು ಮಲತಾಯಿಯ ಕಾಟಕ್ಕಿಂತ ಮೀನಿಗೆ ಮದುವೆಯಾಗಿರುವುದೇ ಒಳ್ಳೆಯದು ಎಂದು ಯೋಚಿಸಿ ಅವನೊಡನೆ ಹೊರಡುತ್ತಾಳೆ. ಬರುವ ದಾರಿಯಲ್ಲಿ ಕುರುಡಿ ಹುತ್ತದ ಒಳಕ್ಕೆ ಕೈ ಹಾಕುತ್ತಾಳೆ. ಬಹಳ ವರ್ಷಗಳಿಂದ ಕಾಯಿಲೆ ಇದ್ದ ಸರ್ಪಕ್ಕೆ ಅವಳ ಕೈ ತಾಗಿದಾಗ ಆ ಸರ್ಪ ಗುಣಮುಖವಾಗುತ್ತದೆ. ಈ ಉಪಕಾರಕ್ಕಾಗಿ ಅದು ಮೂರು ಮಾಂತ್ರಿಕ ಕಲ್ಲುಗಳನ್ನು ಕುರುಡಿಗೆ ಕೊಟ್ಟು ಅದರಿಂದ ತನಗೆ ಬೇಕಾದುದನ್ನು ಪಡೆಯುವಂತೆ ತಿಳಿಸುತ್ತದೆ. ಆ ಕಲ್ಲುಗಳನ್ನು ತಂದು ಅವಳು ಮದುವೆಯಾಗುವ ಮೀನಿನ ಕಡೆ ಒಂದು ಕಲ್ಲನ್ನು ಎಸೆಯುತ್ತಾಳೆ. ಆ ಮೀನು ಸುಂದರ ರಾಜಕುಮಾರನಾಗುತ್ತದೆ. ಮತ್ತೊಂದು ಕಲ್ಲಿನಿಂದ ತನ್ನ ಕಣ್ಣಿಗೆ ದೃಷ್ಟಿ ತಂದುಕೊಳ್ಳುತ್ತಾಳೆ. ಉಳಿದ ಕಲ್ಲಿನಿಂದ ಒಳ್ಳೆಯ ಅರಮನೆ ಸೇವಕ ಸೇವಕಿಯರನ್ನೆಲ್ಲಾ ಸೃಷ್ಟಿಸಿಕೊಂಡು ರಾಜಕುಮಾರನೊಡನೆ ಸುಖವಾಗಿ ಕಾಲಕಳೆಯುತ್ತಾ ಇರುತ್ತಾಳೆ.

ಸ್ಮಿತ್ ಥಾಮ್ಸನ್ನರ ೧೬೦ ನೇ ವರ್ಗಕ್ಕೆ ಸೇರುವ ಈ ಕತೆಯ ಪಾಠಾಂತರ ಒಂದು ದೊರೆಯುತ್ತದೆ. ಅದರಲ್ಲಿ ಅರಸನೊಬ್ಬನಿರುತ್ತಾನೆ. ಅವನಿಗೆ ಮಕ್ಕಳಿರುವುದಿಲ್ಲ. ಅವನು ಗದ್ದೆಯ ಕಡೆ ತಿರುಗಾಡಲು ಹೋದಾಗ ನೂರಾರು ಮರಿಗಳೊಡನೆ ಏಡಿಯೊಂದು ಆಟವಾಡುತ್ತಿರುವುದನ್ನು ನೋಡುತ್ತಾನೆ.

ತನಗೆ ಒಂದೂ ಮಗುವಿಲ್ಲದ್ದು ಜ್ಞಾಪಕಕ್ಕೆ ಬಂದು ಬಹಳ ಬೇಸರವಾಗುತ್ತದೆ. ಆ ದಿನ ಅರಮನೆಯಲ್ಲಿ ಯಾರೊಡನೆಯೂ ಮಾತನಾಡದೇ ಮಲಗುತ್ತಾನೆ. ಮಾರನೆಯ ದಿನ ಬೇಡನೊಬ್ಬ ಬಂದು ಅರಸನಿಗೆ ಮಕ್ಕಳಾಗುವಂತೆ ಶುಭಹಾರೈಸಿ ಹೊರಟು ಹೋಗುತ್ತಾನೆ. ಕೆಲವೇ ದಿನಗಳಲ್ಲಿ ಆತನ ಹೆಂಡತಿ ಮೀನಿಗೆ ಜನ್ಮ ಕೊಡುತ್ತಾಳೆ. ಆ ಮೀನನ್ನು ದೊಡ್ಡ ಕೆರೆಯಲ್ಲಿ ಬಿಟ್ಟು ಸಾಕುತ್ತಾರೆ. ಅದು ಕೆಲವೇ ವರ್ಷಗಳಲ್ಲಿ ಪ್ರಾಯಕ್ಕೆ ಬಂದು ಮದುವೆ ಮಾಡುವಂತೆ ಒತ್ತಾಯಿಸುತ್ತದೆ. ಅರಸ ಮದುವೆಯ ಹುಡುಗಿಗಾಗಿ ಹಲವಾರು ದೇಶಗಳಲ್ಲಿ ಹುಡುಕಿಸಿ ಕೊನೆಗೊಂದು ಹುಡುಗಿ ತಂದು ಮೀನಿಗೆಮದುವೆ ಮಾಡಲಾಗುತ್ತದೆ. ಅವಳಿಗೆ ಮೀನಿನೊಡನೆ ಬದುಕಲು ತುಂಬಾ ಬೇಸರವಾಗುತ್ತದೆ. ಅವಳು ತಲೆಗೆ ಕೈ ಕೊಟ್ಟು ಬೇಸರದಿಂದ ಕುಳಿತಿರುವುದನ್ನು ಆಕಾಶ ಸಂಚಾರಿಗಳಾದ ಶಿವ–ಪಾರ್ವತಿಯರು ಕಂಡು ಅವಳ ಬಳಿಗೆ ಬರುತ್ತಾರೆ. ಅವಳ ಬೇಸರಿಕೆಗೆ ಕಾರಣ ಕೇಳಿ ಮೂರು ಮಾಂತ್ರಿಕ ಕಲ್ಲುಗಳನ್ನು ಕೊಟ್ಟು ಇವುಗಳನ್ನು ತನ್ನ ಗಂಡನ ಬಳಿಗೆ ಹೋಗಿ ಒಂದಾದ ಮೇಲೊಂದರಂತೆ ಎಸೆಯಲು ಹೇಳಿ ಅಲ್ಲಿಂದ ಮಾಯವಾಗುತ್ತಾರೆ.

ಆ ಹುಡುಗಿ ಮೀನಿನ ಬಳಿಗೆ ಬಂದು ಮೂರೂ ಕಲ್ಲುಗಳನ್ನು ಒಂದಾದ ಮೇಲೊಂದರಂತೆ ಎಸೆಯುತ್ತಾಳೆ. ಆಗ ಮೀನು ಮನುಷ್ಯನಾಗುತ್ತದೆ. ಆಗ ಅರಸ ರಾಜಕುಮಾರನಿಗೂ ಆ ಹುಡುಗಿಗೂ ಮತ್ತೊಮ್ಮೆ ಮದುವೆ ಮಾಡುತ್ತಾನೆ. ಕೆಲವು ತಿಂಗಳುಗಳು ಕಳೆದ ನಂತರ ಅವಳು ಗರ್ಭಿಣಿಯಾಗುತ್ತಾಳೆ. ಆಗ ಅವಳನ್ನು ತವರಿಗೆ ಕಳುಹಿಸಲಾಗುತ್ತದೆ. ಅಲ್ಲಿ ಮಲತಾಯಿಯ ಮಗಳೊಡನೆ ಅವಳು ನದಿಗೆ ಸ್ನಾನಕ್ಕೆ ಹೋದಾಗ ಮಲತಾಯಿಯ ಮಗಳು ಅವಳನ್ನು ನದಿಗೆ ನೂಕುತ್ತಾಳೆ. ಅವಳು ನೀರಿನ ಮೇಲೆ ತೇಲುತ್ತಾ ಹೋಗುವಾಗ ಅವಳಿಗೆ ಹಾವೊಂದು ಸಿಗುತ್ತದೆ. ಅದಕ್ಕೆ ಹನ್ನೆರಡು ವರ್ಷಗಳಿಂದ '' ಬಾವೊಂದು '' ಎದ್ದಿರುತ್ತದೆ. ಇವಳ ಕೈ ತಾಗಿದ ತಕ್ಷಣ ಆ ಬಾವು ಒಡೆದು ಬಹಳ ದಿನಗಳ ನೋವು ಕಡಿಮೆಯಾಗುತ್ತದೆ. ಹಾವು ಸಂತೋಷಗೊಂಡು ಅವಳಿಗೊಂದು ಮಾಯದ ಅರಮನೆ ಸೃಷ್ಟಿ ಮಾಡಿ ಕೊಡುತ್ತದೆ. ಅದರಲ್ಲಿ ಅವಳು ಗಂಡು ಮಗುವಿಗೆ ಜನ್ಮ ಕೊಡುತ್ತಾಳೆ. ಆ ಮಗುವಿಗೆ ಮೀನಕುಮಾರ ಎಂದು ನಾಮಕರಣ ಮಾಡಲಾಗುತ್ತದೆ. ಆದು ದೊಡ್ಡದಾದ ನಂತರ ಬಳೆಗಾರನೊಬ್ಬನ ಸಹಾಯದಿಂದ ತಾಯಿಯೊಂದಿಗೆ ತಂದೆಯ ಮನೆ ಸೇರಿ ಸುಖವಾಗಿರುತ್ತದೆ.

ಮೊದಲನೆಯ ಕತೆಯು ಕೇವಲ ಎರಡು ಘಟನೆಗಳನ್ನೊಳಗೊಂಡು ರಚಿತವಾಗಿದ್ದರೆ ಎರಡನೆಯ ಕತೆಯು ಕತೆಯೊಳಗೆ ಕತೆಗಳನ್ನಡಗಿಸಿಕೊಂಡು ರಚಿತವಾಗಿದೆ. ಮೊದಲ ಕತೆಯಲ್ಲಿ ಅಸಹಾಯಕ ಹೆಣ್ಣಿಗೆ ಹಾವು ನೇರ ಸಹಾಯ ಮಾಡಿದರೆ ಎರಡನೇ ಕತೆಯಲ್ಲಿ ಕತೆಗಾರ ಶಿವ–ಪಾರ್ವತಿಯರಿಗೆ ಮೊದಲು ಸಹಾಯ ಮಾಡಲು ಅವಕಾಶ ಕಲ್ಪಿಸಿ ಅನಂತರ ಹಾವಿನ ಸಹಾಯವನ್ನು ತಿಳಿಸಿದ್ದಾನೆ. ಮನುಷ್ಯರ ದೃಷ್ಟಿಯಲ್ಲಿ ನಿರ್ದಯಿ ಎನಿಸಿಕೊಂಡ ವಿಷಸರ್ಪ ದಯೆಯುಳ್ಳ ಪ್ರಾಣಿಯಾಗುತ್ತದೆ. ಉಪಕಾರಕ್ಕೆ ಪ್ರತ್ಯುಪಕಾರ ಮಾಡುವ ಗುಣವನ್ನು ವಿಷ ಸರ್ಪದಲ್ಲೂ ಕಂಡಿರುವ ಕತೆಗಾರನು ಕೆಟ್ಟವರಿಗೆ ಮಾತ್ರ ಕೆಡುಕನ್ನು ಮಾಡುವ ಪ್ರವೃತ್ತಿ ಹಾವಿನದು ಎಂಬುದನ್ನು ಮಾರ್ಮಿಕವಾಗಿ ತಿಳಿಸಿದ್ದಾನೆ. ಎರಡೂ ಕತೆಗಳ ಆಶಯ ಒಂದೇ ಆಗಿದ್ದು ಮಾನವನಿಂದ ತಿರಸ್ಕರಿಸಲ್ಪಟ್ಟದ್ದು ಪ್ರಾಣಿಗಳಿಂದ ಪುರಸ್ಕರಿಸಲ್ಪಟ್ಟಿರುವ ಅಂಶವನ್ನು ಅರ್ಥಪೂರ್ಣವಾಗಿ ತಿಳಿಸಲಾಗಿದೆ.

ಇದೇ ಭಾಗಕ್ಕೆ ಸೆರಿದ ಮತ್ತೊಂದು ಕತೆ '' ಮೊಸಳೆ ಮತ್ತು ಮನುಷ್ಯ'' ಎಂಬುದು . ಒಣಕೆರೆಯ ಏರಿಯ ಮೇಲೆ ಹೋಗುತ್ತಿದ್ದವನನ್ನು ಕಂಡ ಮೊಸಳೆಯು '' ಅಯ್ಯಾ ನಾನು ಈ ಕೆರೆಯ ನೀರನ್ನು ನಂಬಿ ಸಮುದ್ರ ಬಿಟ್ಟು ಬಂದು ಮೋಸ ಹೋದೆ. ಒಂದು ವಾರದಿಂದ ನೀರು ಆಹಾರವಿಲ್ಲದೆ ನಾನು ಸಾಯುವ ಸ್ಥಿತಿಯಲ್ಲಿದ್ದೇನೆ. ನೀನು ನನ್ನನ್ನು ಸಮುದ್ರಕ್ಕೆ ಬಿಟ್ಟರೆ ನಿನಗೆ ಪುಣ್ಯ ಬರುತ್ತದೆ.'' ಎಂದು ಧರ್ಮೋಪದೇಶ ಮಾಡಲು ಹೊರಟ ಮೊಸಳೆಯ ಮಾತನ್ನು ದಾರಿಯಲ್ಲಿ ಹೋಗುತ್ತಿದ್ದ ಮನುಷ್ಯನು ಕೇಳಿದನು. ನಿಜಕ್ಕೂ ಒಣಕೆರೆಯಲ್ಲಿ ಬಿದ್ದಿದ್ದ ಮೊಸಳೆಯ ಸ್ಥಿತಿ ಸಾಯುವಂತಾಗಿತ್ತು. ಇದು ಅವನಲ್ಲಿ ಕರುಣೆ ಮೂಡಿಸಿತು. ಆದರೂ ಆತ ಮೊಸಳೆಯ ಕೆಟ್ಟ ಗುಣಕ್ಕೆ ಹೆದರಿ ''ಇಲ್ಲಪ್ಪ ನಾನು ನೀರಿನಲ್ಲಿ ಬಿಟ್ಟ ತಕ್ಷಣ ನೀನು ನನ್ನನ್ನು ತಿಂದರೆ ....'' ಎಂದು ಆತ ಹೇಳಿದ. ''ಎಲ್ಲಾದರೂ ಉಂಟೆ ? ಉಪಕಾರ ಮಾಡಿದವರಿಗೆ ಅಪಕಾರ ಮಾಡಿದರೆ ನನಗೆ ಒಳ್ಳೆಯದಾಗುತ್ತಾ ಅಂತಹ ಪರಿಸ್ಥಿತಿ ಬಂದರೂ ನಾನು ಮೂರು ಜನರನ್ನು ಕೇಳಿ ಅವರು ತಿನ್ನು ಎಂದರೆ ಮಾತ್ರ ತಿನ್ನುತ್ತೇನೆ''. ಎಂದು ಹೇಳಿತು. '' ಮೂರು ಜನರಲ್ಲಿ ಒಬ್ಬರಾದರೂ ತನ್ನಕಡೆಗೆ ಮಾತನಾಡುವುದಿಲ್ಲವೇ ? ಎಂದು ಯೋಚಿಸಿ ತನ್ನ ಹೆಗಲ ಮೇಲಿನ ಗೋಣಿಚೀಲದಲ್ಲಿ ಮೊಸಳೆಯನ್ನು ತುಂಬಿಕೊಂಡು ಸಮುದ್ರದ ದಡಕ್ಕೆ ಹೊತ್ತು ಹೋದ. ಮೊಣಕಾಲುದ್ದದ ನೀರಿಗೆ ಬಂದು '' ಇಲ್ಲಿ ಮೊಣಕಾಲುದ್ದದ ನೀರಿದೆ ಬಿಡ್ಲ ?'' ಎಂದು ಮೊಸಳೆಗೆ ಕೇಳಿದ ''ಅಯ್ಯಾ ಮೊಣಕಾಲುದ್ದದ ನೀರು ನನಗೆ ಕುಡಿಯಲಿಕ್ಕೆ ಸಾಲದು ಸ್ವಲ್ಪ ಮುಂದೆ ಹೋಗಿ ಬಿಡಪ್ಪ ....'' ಎಂದು ಮೊಸಳೆ ಹೇಳಿತು. ಆತ ಸೊಂಟದುದ್ದದ ನೀರಿಗೆ ತಂದು ಅಲ್ಲಿ ಬಿಡಲು ಕೇಳಿದಾಗ ಆ ನೀರು ತಾನು ಹೊರಳಾಡಲು ಸಾಲದು ಎಂದು ಮೊಸಳೆ ಹೇಳಿತು. ಆತ ಮುಂದುವರಿದು ಎದೆಯುದ್ದದ ನೀರಿಗೆ ಹೋಗಿ ಗೋಣಿಚೀಲದ ಬಾಯಿ ಬಿಚ್ಚಿದ . ಸಮುದ್ರಕ್ಕೆ ಹೋದ ಮೊಸಳೆ ತಕ್ಷಣ ತಿರುಗಿ ಅವನ ಕಾಲು ಹಿಡಿದುಕೊಂಡಿತು. ಮೊಸಳೆರಾಜ ,''ಮೊಸಳೆರಾಜ ಉಪಕಾರ ಮಾಡಿದ್ದಕ್ಕೆ ಇದೇನಾ ನೀನು ಕೊಡುತ್ತಿರೋದು?'' ಎಂದು ಆತ ಪ್ರಶ್ನಿಸಿದ .

'' ಒಳ್ಳೆಯದು ಹೇಳಿದೆ ಹೊಟ್ಟೆ ಹಸಿದಾಗ ಉಪಕಾರ ಅಪಕಾರ ಏನೂ ಅರ್ಥವಾಗೊಲ್ಲ ಮೊದಲು ಹೊಟ್ಟೆ ತುಂಬಿಸಿಕೊಳ್ಳೋದು ಆಮೇಲೆ ಅವುಗಳನ್ನೆಲ್ಲಾ ಯೋಚಿಸೋದು '' ಎಂದು ಮೊಸಳೆ ಹೇಳಿತು.

''ಹೋಗಲಿ ನೀನು ತಿನ್ನುವ ಮೊದಲು ಮೂರು ಜನಕ್ಕೆ ಕೇಳ್ತೀನಿ ಎಂದು ಹೇಳಿದ್ದೆಯಲ್ಲಾ ಅದು ಏನಾಯಿತು ? ಎಂದು ಆತ ಕೇಳಿದಾಗ ಹತ್ತಿರದಲ್ಲಿ ಮೆಯ್ಯುತ್ತಿದ್ದ ಕುದುರೆಯನ್ನು ಕರೆದು ಮೊಸಳೆಯ ಮಾತನ್ನು ಅದರ ಮುಂದಿಟ್ಟ ಆಗ ಕುಂಟು ಕುದುರೆ ಮನುಷ್ಯರ ಬಗ್ಗೆ ಏನು ಹೇಳಲಿ ? ಅವರಿಗೆ ಯಾವಾಗಲೂ ಉಪಕಾರ ಮಾಡಬಾರದು. ನಾನು ಚೆನ್ನಾಗಿದ್ದಾಗ ನನ್ನ ಮೇಲೆ ಸವಾರಿ ಮಾಡ್ತಾ ಇದ್ರು ನಾನು ಒಮ್ಮೆ ಎಡವಿ ಬಿದ್ದು ಕುಂಟನಾದೆ. ಅಂದಿನಿಂದ ನನ್ನನ್ನು ಹೊರಗೋಡಿಸಿಬಿಟ್ಟರು. ನಾನು ಮಾಡಿದ ಸಹಾಯನೆಲ್ಲಾ ಮರೆತುಬಿಟ್ಟರು. ಆದ್ದರಿಂದ ಮನುಷ್ಯರಿಗೆ ಯಾವಾಗಲೂ ಉಪಕಾರ ಮಾಡಬಾರದು ಅನ್ನಿಸುತ್ತೆ '' ಎಂದು ಹೇಳಿ ಅಲ್ಲಿಂದ ಅದು ಹೊರಟು ಹೋಯಿತು.

ಕುಂಟುಕುದುರೆಯ ಮಾತಿನಿಂದ ಪ್ರಾಣದ ಆಸೆ ಬಿಡುತ್ತಿದ್ದ ಮೊಸಳೆ ಹೊತ್ತು ತಂದವ ಎರಡನೆಯ ಅಭಿಪ್ರಾಯಕ್ಕಾಗಿ ಸುತ್ತಾ ಕಣ್ಣಾಡಿಸಿದಾಗ ಅಲ್ಲಿ ಆಹಾರ ಹುಡುಕಲು ಬಂದ ಕಾಗೆಯನ್ನು ಕಂಡು ಅದರ ಮುಂದೆ ತನ್ನ ಮತ್ತು ಮೊಸಳೆಯ ಮಾತನ್ನು ಮುಂದಿಟ್ಟ. ಅದೂ ಸಹ ಮೊಸಳೆಯ ಪರವಾಗಿಯೇ ನ್ಯಾಯ ಹೇಳಿ ಅಲ್ಲಿಂದ ಹಾರಿ ಹೋಯಿತು. ಕೊನೆಗೆ ಏಡಿ ಹಿಡಿಯಲು ಬಂದ ನರಿಯ ಮುಂದೆ ಆತ ನ್ಯಾಯವಿಟ್ಟ. ಅದು '' ನೋಡಪ್ಪ ನಾನು ಮನುಷ್ಯರಷ್ಟು ಬುದ್ದಿವಂತನಲ್ಲ ಅಂತಹ ಬುದ್ದಿವಂತನಾದ ಮನುಷ್ಯನೇ ಮೊಸಳೆ ಕೈಗೆ ಸಿಕ್ಕಿಕೊಂಡಿರುವಾಗ ನಾನು ಏನು ಹೇಳಲಿ ? ಏನೇ ಆದರೂ ಮನುಷ್ಯರಿಗೆ ಮಾತ್ರ ಒಳ್ಳೆಯದು ಮಾಡಬಾರದು. ಏಕೆಂದರೆ ನಾನು ಆಹಾರ ಹುಡ್ಕೋದಕ್ಕೆ ಊರಿನ ಹತ್ತಿರ ಸುಳಿದರೆ ಸಾಕು ಕಲ್ಲು ಬೀಸಿ ನನ್ನ ಓಡಿಸ್ತಾರೆ. ಆದರೂ ನನ್ನ ಮುಂದೆ ನ್ಯಾಯ ಇಟ್ಟಾಗ ನಾನು ತೀರ್ಮಾನ ಮಾಡೋದು ನನ್ನ ಕರ್ತವ್ಯ. ಆದರೆ ಈ ಮೊಸಳೆ ಗೋಣಿಚೀಲದಲ್ಲಿ ಹೇಗೆ ಕುಳಿತಿತ್ತು ? ಅದನ್ನು ನೀನು ಹೇಗೆ ಹೊತ್ಕೊಂಡು ಬಂದೆ ? ಅದು ಮೊದಲು ಎಲ್ಲಿತ್ತು ? ಅನ್ನೋದನ್ನೆಲ್ಲಾ ಮೊದಲು ನಾನು ನೋಡಬೇಕು........... '' ಎಂದು ನರಿ ತನ್ನ ಅಭಿಪ್ರಾಯ ಸೂಚಿಸಿತು. ಅದರ ಮಾತಿಗೆ ಒಪ್ಪಿದ ಮೊಸಳೆ ಗೋಣಿಚೀಲದಲ್ಲಿ ಬಂದು ಕುಳಿತುಕೊಂಡಿತು. ಅದರ ಬಾಯಿ ಕಟ್ಟಿ ಅದನ್ನು ಆತ ಹೊತ್ತುಕೊಂಡು ಒಣಕೆರೆಯ ಏರಿಯ ಮೇಲೆ ಬಂದ ತಕ್ಷಣ ನರಿ '' ಮೊದಲು ಆ ಚೀಲವನ್ನು ಕೆರೆಯಲ್ಲಿ ಎಸೆ. ಎಲ್ಲಾದರೂ ಮೊಸಳೆಗೆ ಉಪಕಾರ ಮಾಡೋದು ಉಂಟಾ ?'' ಎಂದು ಹೇಳಿತು. ಆಗ ಆತ ತಕ್ಷಣ ಆ ಚೀಲವನ್ನು ಒಣಕೆರೆಗೆ ಎಸೆದು ಬದುಕಿದೆ ಎಂದು ನಿಟ್ಟುಸಿರು ಬಿಟ್ಟ. ನರಿಯ ಉಪಕಾರಕ್ಕೆ ಕೃತಜ್ಞತೆ ಸಲ್ಲಿಸಿ ಅಲ್ಲಿಂದ ಹಿಂದಿರುಗಿದ.

ಸ್ಟಿತ್ ಥಾಮ್ಸನ್ನರ ೧೫೫೫ ನೇ ವರ್ಗಕ್ಕೆ ಸೇರಿದ ಈ ಕತೆಯಲ್ಲಿ ಮೊಸಳೆಯ ಮೋಸ ಕೃತ್ಯವು ಸಫಲವಾಗದಂತೆ ತಡೆದ ನರಿಯ ಚಾಣಾಕ್ಷತನವನ್ನು ತಿಳಿಸಲಾಗಿದೆ. ಮನುಷ್ಯ ಎಷ್ಟೇ ಬುದ್ಧಿವಂತನಾದರೂ ಕೆಲವು ಸಂದರ್ಭಗಳಲ್ಲಿ ಪ್ರಾಣಿಗಳ ಚಾಣಾಕ್ಷತನದ ಎದುರು ದಡ್ಡನಾಗುತ್ತಾನೆ. ಆದ್ದರಿಂದ ತಾನೇ ಬುದ್ಧಿವಂತನೆಂದು ಅಹಂಕಾರದಿಂದ ಮೆರೆಯುವುದು ಸರಿಯಲ್ಲವೆಂಬ ನೀತಿಯು ಈ ಕತೆಯಲ್ಲಿದೆ.

''ಮೊಸಳೆ ನರಿ'' ಎಂಬ ಬೇರೊಂದು ಕತೆಯು ಮೊಸಳೆ ದೇಹದಲ್ಲಿ ದೊಡ್ಡದಾಗಿದ್ದರೂ ಬುದ್ಧಿಯಲ್ಲ ದಡ್ಡಪ್ರಾಣಿ ಎಂಬುದನ್ನು ಸಮರ್ಥಿಸುತ್ತದೆ. ಒಮ್ಮೆ ಮೀನು ಹಿಡಿಯಲು ನೀರಿಗಿಳಿದ ನರಿಯ ಕಾಲನ್ನು ಮೊಸಳೆ ಹಿಡಿದಾಗ ಚತುರ ನರಿ ನೀನು ಹಿಡಿದಿರುವುದು ನನ್ನ ಕಾಲನ್ನಲ್ಲ ಕಣೆಗಲೆ ಗಿಡದ ಬೇರನ್ನು ಎಂದು ಹೇಳಿದ ತಕ್ಷಣ ಅದು ಕಾಲನ್ನು ಬಿಟ್ಟು ಕಣೆಗಲೆ ಗಿಡದ ಬೇರನ್ನು ಹಿಡಿಯುತ್ತದೆ. ಅಲ್ಲಿಂದ ತಪ್ಪಿಸಿಕೊಂಡು ಓಡಿದ ನರಿಯು ತನ್ನ ಗವಿಯಲ್ಲಿ ಅಡಗಿಕೊಳ್ಳುತ್ತದೆ. ಮೊಸಳೆ ತನಗೆ ಮೋಸ ಮಾಡಿ ಹೋದ ನರಿಯನ್ನು ಹುಡುಕುತ್ತಾ ಬಂದು ನರಿಯ ಹೆಜ್ಜೆ ಗುರುತಿನಿಂದ ಗವಿಯಲ್ಲಿ ನರಿ ಇದೆ ಎಂಬುದನ್ನರಿತು ಗವಿಯಲ್ಲಿನ ಕತ್ತಲಲ್ಲಡಗಿ ಕುಳಿತುಕೊಳ್ಳುತ್ತದೆ. ಒಳಗಿದ್ದ ಮೊಸಳೆಯ ಸುಳಿವನ್ನರಿತ ನರಿಯು ಗವಿಯ ಬಾಯಿಗೆ ಬೆಂಕಿ ಹಚ್ಚಿ ಮೊಸಳೆಯನ್ನು ಸಾಯಿಸುತ್ತದೆ.

ಸ್ಮಿತ್ ಥಾಮ್ಸನ್ನರ ೬೬ರ ವರ್ಗಕ್ಕೆ ಸೇರಿದ ಈ ಕತೆಯು ಜಲಚರ ಪ್ರಾಣಿಯಾದ ಮೊಸಳೆಯ ಬುದ್ಧಿಯನ್ನು ಹಾಗೂ ನರಿಯ ಬುದ್ಧಿಯನ್ನು ಕಾಲ್ಪನಿಕವಾಗಿ ತಿಳಿಸಿ ನರಿ ಬುದ್ಧಿಯನ್ನು ಶ್ರೇಷ್ಠವೆಂದು ಸಾರಿದೆ. ಪ್ರಾಣಿಗಳೆಲ್ಲಾ ಬಹಳ ಚತುರನೆಂಬ ಬಿರುದು ಪಡೆದಿರುವ ನರಿಯು ಎರಡು ಕತೆಗಳಲ್ಲೂ ಮೊಸಳೆಯನ್ನು ಸೋಲಿಸುತ್ತದೆ. ಅದಕ್ಕೆ ಮೊಸಳೆಯ ಮಂದ ಬುದ್ಧಿ ಕಾರಣವಾಗುತ್ತದೆ. ಆದರೂ ಜಲಚರ ಪ್ರಾಣಿಗಳಲ್ಲೆಲ್ಲಾ ಮೊಸಳೆಯೇ ಚತುರವೆಂದು ಭಾವಿಸಲಾಗುತ್ತದೆ. ಅದರ ಚತುರತೆ ಕೇವಲ ನೀರಿನಲ್ಲಿ ಮಾತ್ರ ನಡೆಯುವಂತಹದು.

ಹೀಗೆಯೇ ಮೀನು, ಏಡಿ, ಸೀಗಡಿ ಮೊದಲಾದ ಜಲಚರಗಳಿಗೆ ಸಂಬಂಧಿಸಿದ ಕತೆಗಳು ಹಲವಿವೆ. ಇಲ್ಲಿ ಕೇವಲ ಒಂದೆರಡು ಕತೆಗಳನ್ನು ಮಾತ್ರ ನಿದರ್ಶನಕ್ಕಾಗಿ ಬಳಸಿಕೊಳ್ಳಲಾಗಿದೆ. ಜಲಚರ ಪ್ರಾಣಿ ಕತೆಗಳ ಮುಖ್ಯ ಉದ್ದೇಶ ಅವುಗಳ ಬುದ್ಧಿಶಕ್ತಿಯನ್ನು ತಿಳಿಸುವುದಾಗಿದೆ. ಮಾತಾಡಲು ಬಾರದಿದ್ದರೂ ತಮ್ಮ ಚಾಣಾಕ್ಷತನದಿಂದ ಅವು ಓದುಗರಲ್ಲಿ ಆಶ್ಚರ್ಯ ಮೂಡಿಸುತ್ತವೆ. ದುದ್ಧಿವ್ದ ನೀಡುತ್ತವೆ. ಕಡಲಿಗರು ಜಲಚರ ಪ್ರಾಣಿಗಳ ಗುಣ ಸ್ವಭಾವಗಳನ್ನು ಚೆನ್ನಾಗಿ ಬಲ್ಲ ಕಾರಣದಿಂದ ಅವುಗಳನ್ನು ಕತೆಯಲ್ಲಿ ದುಡಿಸಿಕೊಳ್ಳುವಾಗ ಅವುಗಳ ಸಹಜ ಸ್ವಭಾವಕ್ಕೆ ಧಕ್ಕೆ ಒದಗದಂತೆ ಎಚ್ಚರಿಕೆವಹಿಸುತ್ತಾನೆ. ಮನುಷ್ಯನಿಗಿಂತ ಪ್ರಾಣಿಗಳೇ ಒಳ್ಳೆಯವು ಎಂಬ ನಿರ್ಧಾರ ಕತೆಗಾರರಲ್ಲಿರುವದರಿಂದ ಹಲವು ಕತೆಗಳಲ್ಲಿ ಅದನ್ನು ಅದನ್ನು ಸಮರ್ಥಿಸಲಾಗಿದೆ.

೨. ದೋಣಿ ಕತೆಗಳು

ದೋಣಿಳ ಕತೆಗಳಲ್ಲಿ ದೋಣಿ ಪ್ರಮುಖ ಪಾತ್ರ ವಹಿಸದೆ ಸಹಾಯಕ ಪಾತ್ರವಾಗಿ ಕಾಣಿಸಿಕೊಳ್ಳುತ್ತದೆ. ಅದು ನಿರ್ಜೀವದ ವಸ್ತುವಾಗಿರುವುದರಿಂದ ಅದರ ಚಾಲಕನಾಗಿ ವ್ಯಕ್ತಿಯೊಬ್ಬ ಇದ್ದೇ ಇರುತ್ತಾನೆ. ಆ ವ್ಯಕ್ತಿಯ ಧ್ಯೇಯೋದ್ದೇಶಗಳ ಈಡೇರಿಕೆಗಾಗಿ ದೋಣಿಯನ್ನು ಸಹಾಯಕವಾಗಿ ಬಳಸಲಾಗುತ್ತದೆ. ಈ ಬಗೆಯ ಕತೆಗಳು ರಮ್ಯ ಕತೆಗಳೂ, ನೀತಿ ಇಲ್ಲವೇ ವಿನೋದ ಕತೆಗಳೂ ಆಗಬಹುದು. ಆದರೆ ಕತೆಯಲ್ಲಿ ದೋಣಿಗೆ ನೀಡಿದ ಮಹತ್ವದ ಕಾರಣದಿಂದ ಈ ಕತೆಗಳನ್ನು ದೋಣಿ ಕತೆಗಳೆಂದು ಕರೆಯಲಾಗಿದೆ. ದೋಣಿಯ ಸಹಾಯದಿಂದ ತನ್ನ ಕಾರ್ಯಸಾಧಿಸುವ ಕಥಾನಾಯಕನನ್ನು ಕುರಿತಂತಹ ಹಲವಾರು ಕತೆಗಳು ದೊರೆಯುತ್ತವೆ. ಇಲ್ಲಿ ನಿದರ್ಶನಕ್ಕಾಗಿ ಕೆಲವನ್ನು ಮಾತ್ರ ಕೊಡಲಾಗಿದೆ.

ಬಂಗಾರವತಿ ಈ ಕತೆಯಲ್ಲಿ ಪಟ್ಟಣಶೆಟ್ಟಿಯು ಮನೆಯಲ್ಲಿ ಕಾಲ ಕಳೆಯುತ್ತಿದ್ದ ಮಗನಿಗೆ ವ್ಯಾಪಾರ ಮಾಡಿ ಲಾಭಗಳಿಸುವಂತೆ ಸೂಚಿಸಿದಾಗ ಆತ ಹಡಗಿನಲ್ಲಿ ಸಾಮಾನು ತುಂಬಿಕೊಂಡು ದೇಶವಿದೇಶಗಳಲ್ಲಿ ವ್ಯಾಪಾರ ಮಾಡುವ ದೊಡ್ಡ ಉದ್ಯೋಗ ಮಾಡುವುದಾಗಿ ತಿಳಿಸುತ್ತಾನೆ. ತಾನು ಊರು ಬಿಟ್ಟಾಗ ತನ್ನ ಹೆಂಡತಿ ಪಾತಿವ್ರತ್ಯದ ಬಗ್ಗೆ ಖಾತ್ರಿಯಾಗುವುದಕ್ಕಾಗಿ ಅವಳು ಮಲ್ಲಿಗೆ ಹೂವಿನ ಕರಡಿಗೆಯನ್ನು ಗಂಡನಿಗೆ ಕೊಟ್ಟು ಅದರಲ್ಲಿನ ಮಲ್ಲಿಗೆ ಹೂ ಬಾಡಿದರೆ ತನ್ನ ಪಾತಿವ್ರತ್ಯಕ್ಕೆ ಕುಂದೊದಗಿದೆ ಎಂದು ತಿಳಿಯಬೇಕೆಂದು ಹೇಳಿ ಕಳುಹಿಸುತ್ತಾಳೆ.

ಪಟ್ಟಣ ಶೆಟ್ಟಿಯ ಮಗ ಗೋಪಾಲಕೃಷ್ಣ ಹಡಗಿನಲ್ಲಿ ಕುಳಿತು ವ್ಯಾಪಾರಕ್ಕೆ ಹೊರಟು ಪ್ರಯಾಣ ಮಾಡುವಾಗ ಮತ್ತೊಂದು ದಡದಲ್ಲಿ ಅವನಿಗೆ ಒಂದು ಊರು ಕಾಣುತ್ತದೆ. ಅಲ್ಲಿಗೆ ಹೋಗಿ '' ಹಡಗನ್ನು ಅಲ್ಲಿಯ ಧಕ್ಕೆಗೆ ತಾಡಿ ಪದ್ಧತಿಯ ಪ್ರಕಾರ ಬಂದೂಕುಗಳನ್ನು ಬಾರುಮಾಡಿಸಿ, ಸದ್ದಿನ ಕೋವಿಯನ್ನು ಹೊಡೆದನು'' ಆ ಶಬ್ದ ಕೇಳಿ ಊರಿನ ಮುಖಂಡಳಾದ ಬಂಗಾರವತಿಯೆಂಬ ವೇಶ್ಯ ತನ್ನ ಗೆಳೆಯರಾದ ಗಂಪಶೆಟ್ಟಿ ಪಟೇಲಬೋಳ ಗೌಡ ಮತ್ತು ಪಂಪಾ ಶಾಸ್ತ್ರಿಯೊಂದಿಗೆ ಬಂದು '' ತಾನು ಕೇಳುವ ಸಾಮಾನುಗಳನ್ನು ಕೊಟ್ಟರೆ ನನ್ನ ಸಂಪತ್ತೆಲ್ಲ ನಿಮ್ಮದು ಇಲ್ಲದಿದ್ದರೆ ನಿಮ್ಮ ಕೂಲಿಯಾಳುಗಳೊಂದಿಗೆ ನಿಮ್ಮ ಹಡಗು ನಮ್ಮದು'' ಎಂದು ಶರ್ತೊಂದನ್ನು ಮುಂದಿಡುತ್ತಾಳೆ. ಅದಕ್ಕೆ ಗೋಪಾಲಕೃಷ್ಣ ಒಪ್ಪಿದಾಗ ಅವಳು '' ಅಪಿ ಅಡಕೆ '' ಕೇಳಿ ಗೋಪಾಲಕೃಷ್ಣನನ್ನು ಸೋಲಿಸಿ ಅವನ ಸೊತ್ತನ್ನೆಲ್ಲಾ ವಶಪಡಿಸಿಕೊಳ್ಳುತ್ತಾಳೆ. ಕೊನೆಗೊಂದು ದಿನ ಅವನಲ್ಲಿದ್ದ ಮಲ್ಲಿಗೆ ಹೂವಿನ ಕರಡಿಗೆಯ ರಹಸ್ಯವನ್ನರಿತು ಬಂಗಾರವತಿ ಗೋಪಾಲಕೃಷ್ಣನ ಹೆಂಡತಿಯ ಶೀಲ ಕೆಡಿಸಲು ತನ್ನ ಮೂರು ಗೆಳೆಯರ ಮೂರು ಮಕ್ಕಳನ್ನು ಕಳುಹಿಸಿಕೊಡುತ್ತಾಳೆ. ಅವರು ಹಡಗಿನಲ್ಲಿ ಗೋಪಾಲಕೃಷ್ಣನ ಊರಿಗೆ ಹೋಗಿ ಅವನ ಹೆಂಡತಿಯ ಪಾತಿವ್ರತ್ಯ ಕೆಡಿಸಲು ಹೋಗಿ ಅವರೇ ಸಿಕ್ಕಿಬೀಳುತ್ತಾರೆ. ಆಗ ಅವನ ಹೆಂಡತಿ ಆ ಮೂವರನ್ನು ಮೂರು ಪೆಟ್ಟಿಗೆಗಳಲ್ಲಿ ಹಾಕಿ ಅವರಿಗೆ ಸಾಕಾಗುವಷ್ಟು ಆಹಾರ ಕೊಟ್ಟು ಅವರ ಕೈಗೆ ಕ್ರಮವಾಗಿ ಒಂದು – ಎರಡು – ಮೂರು ಸಾವಿರ ರೂಪಾಯಿಗಳನ್ನು ಕೊಟ್ಟು ಅದನ್ನು ತಾನು ಕೇಳಿದಾಗ ಪೆಟ್ಟಿಗೆಯಿಂದ ಹೊರಗೆಸೆಯಬೇಕೆಂದು ಹೇಳಿ ಪೆಟ್ಟಿಗೆಗಳನ್ನು ಹಡಗಿನಲ್ಲಿಟ್ಟುಕೊಂಡು ಬಂಗಾರವತಿಯ ಊರಿಗೆ ಹೊರಡುತ್ತಾಳೆ. ದಾರಿಯಲ್ಲಿದ್ದ ಮಂಗಗಳ ಆಟದ ಮೇಳವನ್ನು ಹಡಗಿನಲ್ಲಿ ತುಂಬಿಕೊಂಡು ಸಮುದ್ರದ ದಡಕ್ಕೆ ಬಂದು ಬಂದೂಕಿನಿಂದ ಶಬ್ದಮಾಡಿದಾಗ ಬಂಗಾರವತಿ ತನ ಗೆಳೆಯರೊಡನೆ ಅಲ್ಲಿಗೆ ಬರುತ್ತಾಳೆ. ಅವಳಿಗೆ ಮಂಗಗಳ ಆಟ ತೋರಿಸಿ ಇದ್ದ ಹಣವನ್ನೆಲ್ಲಾ ತನ್ನದಾಗಿಸಿಕೊಳ್ಳುತ್ತಾಳೆ. ಕೊನೆಗೆ ಪೆಟ್ಟಿಗೆಗಳನ್ನು ತೋರಿಸಿ ಇವು ದೇವರ ಪೆಟ್ಟಿಗೆಗಳೆಂದು , ತಮಗೆ ಬೇಕಾದಾಗ ಅವು ಹಣ ಕೊಡುತ್ತವೆ ಎಂದು ಹೇಳುತ್ತಾಳೆ. ಆದರೆ ಆ ಪೆಟ್ಟಿಗೆಗಳನ್ನು ಕೊಳ್ಳಲು ಬಂಗಾರವತಿಯಲ್ಲಿ ಹಣವಿಲ್ಲದ್ದರಿಂದ ಅವಳು ಗೆಳೆಯರಿಗೆ ಆ ಪೆಟ್ಟಿಗೆ ಕೊಳ್ಳುವಂತೆ ಒತ್ತಾಯಿಸುತ್ತಾಳೆ. ಅವರು ದೇವರ ಪೆಟ್ಟಿಗೆಗಳು ಹೇಗೆ ಹಣ ಕೊಡುತ್ತೆವೆಂಬುದನ್ನು ಪರೀಕ್ಷಿಸಲು ಹೇಳಿದಾಗ ಗೋಪಾಲಕೃಷ್ಣನ ಹೆಂಡತಿ ಮೂರು ಪೆಟ್ಟಿಗೆಗಳಿಂದ ಕ್ರಮವಾಗಿ ಒಂದು–ಎರಡು–ಮೂರು ಸಾವಿರ ರೂಪಾಯಿಗಳನ್ನು ಕೇಳುತ್ತಾಳೆ. ಆಗ ಅವು ಹಣವನ್ನು ಹೊರಗೆಸೆಯುತ್ತವೆ. ಈ ಆಶ್ಚರ್ಯ ಕಂಡು ಅವರಲ್ಲಿ ಆಸೆ ಮೂಡುತ್ತದೆ. ಆ ಪೆಟ್ಟಿಗೆಗಳನ್ನು ಗಂಪಶೆಟ್ಟಿ, ಪಟೇಲ ಬೋಳಗೌಡ , ಪಂಪಾ ಶಾಸ್ತ್ರಿಗಳು ಕೊಂಡುಕೊಳ್ಳುತ್ತಾರೆ. ರುಕ್ಮಿಣಿ ಹಣವನ್ನೆಲ್ಲಾ ತೆಗೆದುಕೊಂಡು ಹಡಗಿನಲ್ಲಿ ಕುಳಿತು ತನ್ನ ಗಂಡನನ್ನು ಹುಡುಕಿಕೊಂಡು ತನ್ನೂರು ಸೇರಿ ಸುಖವಾಗಿರುತ್ತಾಳೆ.

ಆ ಕಡೆಗೆ ಪೆಟ್ಟಿಗೆ ಕೊಂಡವರು ಮನೆಗೆ ಹೋಗಿ ಸಂತೋಷದಿಂದ ಅವುಗಳ ಮುಂದೆ ನಿಂತು ಹಣಕೊಡುವಂತೆ ಕೇಳುತ್ತಾರೆ. ಉತ್ತರ ಸಿಗದಿದ್ದರಿಂದ ಪೆಟ್ಟಿಗೆ ಒಡೆದು ನೋಡಿದರೆ ಅವುಗಳಲ್ಲಿ ತಮ್ಮ ಮ ಕ್ಕಳು ಇರುವುದನ್ನು ಕಂಡು ದುಃ ಖ ಪಡುತ್ತಾರೆ.

ಈ ಕತೆಯಲ್ಲಿನ ಘಟನೆಯ ಮುಂದುವರಿಕೆಗೆ ಹಡಗು ಸಹಕಾರಿಯಾಗಿದೆ. ಹೆಣ್ಣಿಗೆ ಹೆಣ್ಣೆ ಬುದ್ಧಿ ಕಲಿಸುವ ಆಶಯವನ್ನು ಹೊಂದಿದ್ದೇವೆ. ಹಡಗಿನ ವ್ಯಾಪಾರ ಹೆಚ್ಚು ಲಾಭಗಳಿಸುವ ವ್ಯಾಪಾರವೆಂಬುದನ್ನು ಕತೆ ತಿಳಿಸುತ್ತದೆ. ಇಂದಿಗೂ ಕರಾವಳಿಯಲ್ಲಿನ ಜನರು ಹೆಚ್ಚು ಶ್ರೀಮಂತರಾಗಲು ಹಡಗಿನಿಂದ ತರುವ ವಿದೇಶಿ ವಸ್ತುಗಳ ವ್ಯಾಪಾರವೇ ಮುಖ್ಯ ಕಾರಣವೆನ್ನಬಹುದು. ಹಡಗಿನ ವ್ಯಾಪಾರವು ಬಹು ಪ್ರಾಚೀನವಾದ ವ್ಯಾಪಾರವೆಂಬುದ್ನು ಈ ಕತೆ ತಿಳಿಸುತ್ತದೆ.

'' ಉತ್ಪತ್ತಿ''ಯ ಕಥೆಯಲ್ಲಿ ಅಂಬಿಗರ ಹುಡುಗಿ ಮತ್ತು ದೋಣಿ ಇವೆರಡೂ ಕತೆಯ ಪ್ರಮುಖ ಪಾತ್ರಗಳಾಗಿ ಬರುತ್ತವೆ. ಪರಸ್ಪರ ಅವಲಂಬಿಗಳಾಗಿ ಬರುವ ಈ ಎರಡೂ ಪಾತ್ರಗಳು ವಿಚಿತ್ರ ಕತೆಯೊಂದರ ಸೃಷ್ಟಿಗೆ ಸಹಾಯಕವಾಗುತ್ತವೆ.

ಬಾವಾಸನ್ಯಾಸಿಯು ಸಮುದ್ರದ ದಂಡೆಗೆ ಬಂದಾಗ ದೋಣಿಯ ಪಕ್ಕದಲ್ಲಿ ನಿಂತಿದ್ದ ಅಂಬಿಗರ ಹುಡುಗಿಯನ್ನು ಕಂಡು ಅವನ ಮನಸ್ಸು ಚಂಚಲಗೊಳ್ಳುತ್ತದೆ. ಆಗ ಸನ್ಯಾಸಿ ಆ ಹುಡುಗಿಗೆ ತನಗೆ ದೋಣಿಯಲ್ಲಿ ಬೇರೊಂದು ದಡಕ್ಕೆ ಕರೆದೆಕೊಂಡು ಹೋಗುವಂತೆ ಕೇಳುತ್ತಾನೆ. ಅದಕ್ಕೆ ಅವಳು ಸನ್ಯಾಸಿಯ ಮಾತಿಗೆ ಗೌರವ ಕೊಟ್ಟು ದೋಣಿ ತಂದು ನಿಲ್ಲಿಸುತ್ತಾಳೆ. ನಡು ಸಮುದ್ರಲ್ಲಿ ದೋಣಿ ಸಾಗುವಾಗ ಸನ್ಯಾಸಿ ತಕ್ಷಣ ಕತ್ತಲು ಕವಿಯುವಂತೆ ಮಾಡಿ ಅವಳ ಕೈ ಹಿಡಿಯುತ್ತಾನೆ. ಅದಕ್ಕವಳು '' ಸ್ವಾಮಿ ನೀವು ಎಷ್ಟಾದರೂ ಪರಮಾತ್ಮರು, ನಾನು ಎಷ್ಟಾದರೂ ಅಂಬಿಗರ ಹುಡುಗಿ ನನ್ನನ್ನು ಮುಟ್ಟಬಾರದು '' ಎಂದು ಬೇಡಿಕೊಂಡರೂ ಸನ್ಯಾಸಿ ಬಿಡದೇ ಅವಳನ್ನು ಭೋಗಿಸುತ್ತಾನೆ. ಅದನ್ನು ಕತೆಗಾರ '' ಕಾನೆಂಬ ಕತ್ತಲೆಯನ್ನು ಕಳೆದು ಬೆಳಕನ್ನುಂಟುಮಾಡಿದನು '' ಎಂದು ತಿಳಿಸಿ , ಸನ್ಯಾಸಿಯ ಅತ್ಯಾಚಾರವನ್ನು ಪವಿತ್ರ ಕೆಲಸವೆಂದು ಪರಿಗಣಿಸುತ್ತಾನೆ. ಅಂಬಿಗರ ಹುಡುಗಿಯನ್ನು ಭೋಗಿಸಿದ ನಂತರ ದೋಣಿಯನ್ನು ಹಿಂದೆ ತಿರುಗಿಸುವಂತೆ ಹೇಳಿ ಆ ಸನ್ಯಾಸಿ ದಡ ಸೇರಿ ಹೊರಟುಹೋಗುತ್ತಾನೆ.ಕೆಲವು ತಿಂಗಳ ನಂತರ ಅಂಬಿಗರ ಹುಡುಗಿ ನಾಲ್ಕು ಗಂಡು ಮಕ್ಕಳಿಗೆ ಜನ್ಮಕೊಡುತ್ತಾಳೆ. ಅದರಲ್ಲಿ ಮೊದಲನೆಯವ ಆಕಾಶಕ್ಕೆ ಹೋಗುತ್ತಾನೆ. ಉಳಿದವರು ಮನೆಯಲ್ಲೆ ಬೆಳೆಯುತ್ತಾರೆ. ಒಮ್ಮೆ ಆಕಾಶದಲ್ಲಿ ಬೆಳೆಯುತ್ತಿದ್ದ ಮಗನೊಡನೆ ರಾತ್ರಿಯಲ್ಲಿ ಮಾತನಾಡುತ್ತಿದ್ದ ತಾಯಿಯನ್ನು ಉಳಿದ ಮೂರು ಮಕ್ಕಳು ಕಂಡು ತಪ್ಪಾಗಿ ಭಾವಿಸಿ ತಾಯಿಯ ಶೀಲದ ಬಗ್ಗೆ ಶಂಕೆ ವ್ಯಕ್ತಪಡಿಸುತ್ತಾರೆ. ಕೊನೆಗೆ ನಿಜಾಂಶ ತಿಳಿದು ಪಶ್ಚಾತ್ತಾಪಕ್ಕೆ ಒಳಗಾಗುತ್ತಾರೆ. ಕೊನೆಯ ಇಬ್ಬರು ಮಕ್ಕಳು ತಾವು ಮಾಡಿದ ತಪ್ಪಿಗಾಗಿ ಕೊಂಡದಲ್ಲಿ ಬೀಳುತ್ತಾರೆ. ಅಲ್ಲಿಂದ ಅವರು ಇಬ್ಬರು ಗಂಡುಮಕ್ಕಳಾಗಿ ಹಾಗೂ ಇಬ್ಬರು ಹೆಣ್ಣು ಮಕ್ಕಳಾಗಿ ಪರಿವರ್ತನೆಗೊಂಡು ಎದ್ದು ಬರುತ್ತಾರೆ. ಗಂಡು ಮಕ್ಕಳಿಗೆ ಪಾಂಡೋರಾಜ ಕೈಲೋರಾಜ ಎಂದು ಹೆಸರಿಡುತ್ತಾರೆ. ಹೆಣ್ಣು ಮಕ್ಕಳಿಗೆ ಕುಂತಿ, ಗಂದೋರಿ ಎಂದು ಹೆಸರಿಡಲಾಗುತ್ತದೆ. ಪಾಂಡೋರಾಜ ಕುಂತಿಯನ್ನು ಕೈಲೋರಾಜ ಗಂದೋರಿಯನ್ನು ಮದುವೆಯಾಗಿ ಸುಖವಾಗಿರುತ್ತಾರೆ.

ಈ ಕತೆಯಲ್ಲಿ ಪಾಂಡವರ ಮತ್ತು ಕೌರವರ ಮೂಲದಲ್ಲಿ ಅಂಬಿಗರೆಂದು ತಿಳಿಸಿದ್ದರೂ ಅವರು ಕ್ಷತ್ರಿಯರಾಗುವುದು, ಶೂದ್ರರಾಗಿದ್ದ ಎರಡು ಮಕ್ಕಳು ಅಗ್ನಿ ಕುಂಡದಲ್ಲಿ ಬಿದ್ದು ಶುದ್ಧವಾದ ನಂತರ ಕತೆಗಾರ ಶೂದ್ರರನು ಶ್ರೇಷ್ಠಕುಲದವರನ್ನಾಗಿಸುವಾಗ '' ನಾಯಿ ಮುಟ್ಟಿದ ಮಡಿಕೆ ಸುಟ್ಟರೆ ಶುದ್ಧವಾಗುತ್ತದೆ '' ಎಂಬ ಜನಪದ ನಂಬಿಕೆಯನ್ನು ಬಳಸಿಕೊಂಡಿದ್ದಾನೆ.

' ಪರಾಶರಮುನಿ ' ಎಂಬ ಕಥನ ಕವನದಲ್ಲೂ ಇದೇ ಬಗೆಯ ಕಥಾವಸ್ತು ಕಾರ್ಯನಿರ್ವಹಿಸಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಶೂದ್ರಕನ್ಯೆಯರನ್ನು ಮೇಲ್ವರ್ಗದವರು ತಮ್ಮ ಭೋಗಕ್ಕಾಗಿ ಬಳಸಿಕೊಂಡರೂ ಅದನ್ನು ತಪ್ಪೆಂದು ಭಾವಿಸದೆ ತಮ್ಮ ಸ್ಪರ್ಶದಿಂದ ಶೂದ್ರರನ್ನು ಶ್ರೇಷ್ಠರಾಗಿ ಪರಿವರ್ತಿಸುವ ಮೇಲ್ವರ್ಗ ಪರ ನಿಯಮವನ್ನು ಮಾನವೀಯ ದೃಷ್ಠಿಯಿಂದ ನೋಡಿದರೆ ಹಾಸ್ಯಾಸ್ಪದವೆನಿಸುತ್ತದೆ.

ಈ ಕತೆಯಲ್ಲಿ ದೋಣಿಯು ಕತೆಯ ಸಾಗುವಿಕೆಗೆ ಸಹಾಯಕವಾಗಿದೆ. ಸಮುದ್ರದಲ್ಲಿ ಹೆಣ್ಣು ದೋಣಿ ನಡೆಸುವುದು ಕಡಲಿಗರಲ್ಲಿ ಕಾಣುವುದೇ ಇಲ್ಲ . ಆದರೂ ಕತೆಗಾರ ತನ್ನ ಮನೆತನದ ಕಸುಬನ್ನು ಹೆಣ್ಣು ಸಹ ಮಾಡಬಲ್ಲಳೆಂಬುದನ್ನು ತಿಳಿಸಿದ್ದಾನೆ. ಗಂಡಸರಿಗೆ ಸರಿ ಸಮಾನರಾಗಿ ದುಡಿಯುವ ಹೆಂಗಸರು ಕಡಲಿಗರಲ್ಲಿ ಇಂದೂ ಸಹ ಕಾಣುತ್ತಾರೆ. ಆದರೆ ಅವರು ಮೀನು ವ್ಯಾಪಾರ ಮಾಡುತ್ತಾರೆಯೇ ವಿನಾ ದೋಣಿ ನಡೆಸುವುದಿಲ್ಲ.

ಈ ಕತೆ ಎರಡು ಘಟನೆಗಳನ್ನೊಳಗೊಂಡು ಕೆಳವರ್ಗ ಮತ್ತು ಮೆಲ್ವರ್ಗ ವ್ಯಕ್ತಿಗಳ ದೃಷ್ಟಿಕೋನಗಳನ್ನು ಪರಿಚಯಿಸುತ್ತದೆ. ಕಥನ ಕವನದಲ್ಲಿ (ಪರಿಶರ ಮುನಿ) ಇದೇ ಬಗೆಯ ಕತೆ ಪುನರಾವರ್ತನೆಗೊಂಡಿದೆ. ದುಡಿಯುವ ಮತ್ತು ದುಡಿಸಿಕೊಳ್ಳುವ ವರ್ಗಗಳ ಇಣುಕು ನೋಟದ ದರ್ಶನ ಈ ಕತೆಯಲ್ಲಾಗುತ್ತದೆ. ಮೇಲ್ವರ್ಗದವರ ತೀಟೆ ತೀರಿಸಲು ಬಲಿಯಾಗುವ ಕೆಳವರ್ಗದವರು ಅದನ್ನು ಅತ್ಯಾಚಾರವೆಂದು ತಿಳಿಯದೆ ಪುಣ್ಯದ ಕೆಲಸವೆಂದು ಪರಿಗಣಿಸುವಂತೆ

'' ನೂರಾ ಒಂದು ಭೂತಗಳ ಕಥೆ'' ಯಲ್ಲಿ ದೋಣಿ ಸಹಾಯಕ ಪಾತ್ರವಾಗಿ ಕೆಲವೆಡೆ ಕಾರ್ಯನಿರ್ವಹಿಸಿದರೆ, ಕೆಲವು ಕಡೆ ಪ್ರಮುಖ ಪಾತ್ರವಾಗಿ ಕೆಲಸ ಮಾಡುತ್ತದೆ. ರಾಕ್ಷಸಿಯ ಮಗಳು ತನ್ನ ತಲೆಯ ಚಿನ್ನದ ಕೂದಲನ್ನು ದೋಣಿಯಲ್ಲಿ ಇಟ್ಟು ಸಮುದ್ರದಲ್ಲಿ ಬಿಡುತ್ತಾಳೆ. ಅದು ತೇಲುತ್ತಾ ಸಮುದ್ರದ ಮತ್ತೊಂದು ದಡ ಸೇರುತ್ತದೆ. ಅಲ್ಲಿಗೆ ತಿರುಗಾಡಲು ಬಂದ ಅರಸನ ಮತ್ತು ಪ್ರಧಾನಿಯ ಮಕ್ಕಳಿಬ್ಬರು ಆ ದೋಣಿಯನ್ನು ಕಾಣುತ್ತಾರೆ. ಮಂತ್ರಿಯ ಮಗ, ಬರುವ ದೋಣಿ ತನಗೆಂದೂ ಅರಸನ ಮಗ ಅದರಲ್ಲಿರುವುದು ತನಗೆಂದು ತಮ್ಮೊಳಗೆ ನಿರ್ಧರಿಸಿಕೊಳ್ಳುತ್ತಾರೆ. ದೋಣಿ ದಡ ಸೇರಿದ ತಕ್ಷಣ ಮಂತ್ರಿಯ ಮಗ ದೋಣಿ ತೆಗೆದುಕೊಂಡರೆ ಅರಸನ ಮಗ ಚಿನ್ನದ ಕೂದಲು ಮತ್ತು ಒಂದು ಪತ್ರವನ್ನು ತೆಗೆದುಕೊಳ್ಳುತ್ತಾನೆ. ಅನಂತರ ಚಿನ್ನದ ಕೂದಲಿನ ಹುಡುಗಿಯನ್ನು ಮದುವೆಯಾಗುವ ಹಟತೊಡುತ್ತಾನೆ. ಆಗ ರಾಜನು ಸಮುದ್ರದಾಚೆಗೆ ಹೋಗಿ ಚಿನ್ನದ ಕೂದಲಿನ ಹೆಣ್ಣನ್ನು ಯಾರು ತಂದುಕೊಡುತ್ತಾರೋ ಅವರಿಗೆ ತನ್ನ ಅರ್ಧ ರಾಜ್ಯ ಮತ್ತು ಅರ್ಧ ಭಂಡಾರವನ್ನು ಕೊಡುವುದಾಗಿ ಡಂಗುರ ಹೊಡೆಸುತ್ತಾನೆ. ಅದನ್ನು ಕೇಳಿದ ಮುದುಕಿಯೊಬ್ಬಳು

ತನಗೆ ಒಂದು ದೊಡ್ಡ ಹಡಗು , ಜೊತೆಗೆ ಸಣ್ಣ ಹಡಗು , ಜೊತೆಗೆ ಸಣ್ಣ ದೋಣಿ ಮತ್ತು ಅದನ್ನು ನಡೆಸಲು ಎಂಟು ಜನ ಕಲಾಸಿಗಳು . ಒಂದು ತಿಂಗಳು ಮೇಲೆ ಒಂದು ದಿನಕ್ಕಾಗುವಷ್ಟು ಆಹಾರ ಕೊಟ್ಟರೆ ಆ ಹುಡುಗಿಯನ್ನು ತಂದು ಕೊಡುವ ಭರವಸೆ ನೀಡುತ್ತಾಳೆ. ಅರಸನು ಅವಳಿಗೆ ಬೇಕಾಗುವದನ್ನೆಲ್ಲಾ ಕೊಡುತ್ತಾನೆ. ಅವಳು ಎಂಟು ದಿನಗಳಲ್ಲಿ ಸಮುದ್ರದಾಚೆಯ ದಡ ಸೇರಿ ದೊಡ್ಡ ಹಡಗಿನಿಂದ ಸಣ್ಣದೋಣಿಗೆ ಬಂದು ಕಲಾಸಿಗಳಿಗೆ ನನ್ನನ್ನು ಸ್ವಲ್ಪ ದೂರ ಬಿಟ್ಟು ಬಂದ ನಂತರ ನಾನು ಎಷ್ಟು ಹೊತ್ತಿಗೆ ಕೂಗುತ್ತೇನೋ ಅಷ್ಟ ಹೊತ್ತಿಗೆ ಬರಬೇಕೆಂದು ಆಜ್ಞೆ ಮಾಡಿ ಅಲ್ಲಿಂದ ಹೊರಟು ಹೋಗುತ್ತಾಳೆ.

ರಾಕ್ಷಸಿಯ ಮನೆಯಲ್ಲಿದ್ದ ಚಿನ್ನದ ಕೂದಲಿನ ಹುಡುಗಿಯು ಮುದುಕಿಯನ್ನು ಕಂಡು ಎಲ್ಲಿಂದ ಬಂದೆ ? ಎಂದು ಪ್ರಶ್ನಿಸುತ್ತಾಳೆ .ಮುದುಕಿ '' ನಾನು ಸಮುದ್ರದ ಆಚೆಯಿಂದ ಬಂದೆ '' ಎಂದು ಹೇಳಿ ಅವಳ ತಾಯಿಯ ಜೀವದ ರಹಸ್ಯವನ್ನು ಕೇಳುತ್ತಾಳೆ. ಆಗ ಅವಳು ಮೊದಲು ತನ್ನ ತಾಯಿಯಿಂದ ಜೀವದ ರಹಸ್ಯವನ್ನರಿತು ಅನಂತರ ಮುದುಕಿಗೆ ತನ್ನ ತಾಯಿಯ ಜೀವ ಪಟ್ಟಾಕತ್ತಿಯಲ್ಲಿದೆ. ಅದು ಮಣ್ಣು ಹಿಡಿದರೆ ತಾಯಿ ಸಾಯುತ್ತಾಳೆಂದು '' ತಿಳಿಸುತ್ತಾಳೆ. ಆ ಮುದುಕಿ ಉಪಾಯದಿಂದ ಪಟ್ಟಾ ಕತ್ತಿತೆಗೆದು ಕೆಸುವಿನ ಗಿಡದ ಬುಡದಲ್ಲಿ ಹುಗಿದು ಅದು ಮಣ್ಣು ಹಿಡಿವಂತೆ ಮಾಡಿ ತಾಯಿಯನ್ನು ಸಾಯಿಸುತ್ತಾಳೆ. ನಂತರ ಚಿನ್ನದ ಕೂದಲಿನ ಹುಡುಗಿಗೆ '' ಮೊಮ್ಮಗಳೇ ನಾನು ಬಂದು ಬಹಳ ದಿವಸಗಳಾದವು ಮನೆಗೆ ಹೋಗಬೇಕು '' ಎಂದು ಹೇಳಿದಾಗ ಅಜ್ಜವ್ವ ನೀನು ಮನೆಗೆ ಹೋಗಬೇಕಾದರೆ ಏನು ಬೇಕೋ ಅದನ್ನು ತೆಗೆದುಕೋ ಎಂದು ಮೊಮ್ಮಗಳು ಹೇಳಿದಳು. ''ನನಗೆ ಏನೂ ಬೇಡ ಮೊಮ್ಮಗಳೇ ನಾನು ಬಡ ಮುದುಕಿಯಲ್ಲ ನನಗೆ ಬಹಳ ಜನ ಆಳುಗಳಿದ್ದಾರೆ. . ನನ್ನದು ದೊಡ್ಡ ಬೋಟಿದೆ. ನೀನು ನೋಡುವುದಾದರೆ ನನ್ನೊಡನೆ ಬಾ ಎಂದು ಹೇಳಿ ಅವಳನ್ನು ಸಮುದ್ರದ ದಡಕ್ಕೆ ಕರೆದುಕೊಂಡು ಹೋಗುತ್ತಾಳೆ. ಅಲ್ಲಿದ್ದ ಆಳುಗಳಿಗೆ ''ಬೇಗ ಸಣ್ಣ ದೋಣಿ ತೆಗೆದುಕೊಂಡು ಬನ್ನಿ '' ಎಂದು ಆಜ್ಞೆ ಮಾಡುತ್ತಾಳೆ.

ಆಳುಗಳು ದೋಣಿಯನ್ನು ತೆಗೆದುಕೊಂಡು ಬಂದು ದಡಕ್ಕೆ ತಾಗಿಸಿ ನಿಲ್ಲಿಸಿಕೊಳ್ಳುತ್ತಾರೆ. ಆಗ ಆ ಮುದುಕಿ ದೋಣಿಯಲ್ಲಿ ಕುಳಿತು '' ಮೊಮ್ಮಗಳೇ ನೀನೂ ದೋಣಿ ಹತ್ತು ಹಾಗೆಯೇ ಇಳಿದು ಹೋಗಲಕ್ಕು ಅಂದಳು '' ಆಗಬಹುದು '' ಎಂದು ಹೇಳಿ ರಾಕ್ಷಸಿಯ ಮಗಳು ದೋಣಿಯನ್ನು ಹತ್ತಿದಳು. ಕಲಾಸಿಗಳ ಕೂಡ ಮುದುಕಿ '' ದೋಣಿಯನ್ನು ದೂಡಿ ದಂಡೆಯ ಹೊರಗೆ ದೂರ ತೆಗೆದುಕೊಂಡು ಬಂದು ಬಿಡಿ '' ಎಂದು ಹೇಳುತ್ತಾಳೆ. ಕಲಾಸಿಗಳು ದೋಣಿಯನ್ನು ಬೋಟಿಯ ಹತ್ತಿರ ತೆಗೆದುಕೊಂಡು ಹೋಗಿ ಅವರನ್ನೆಲ್ಲಾ ಬೋಟಿಗೆ ಹತ್ತಿಸಿ ಕೂಡಲೆ ಬೋಟಿಯನ್ನು ನಡೆಸುತ್ತಾರೆ.ನಾಲ್ಕೈದು ದಿನಗಳ ನಂತರ ಅವರು ರಾಜನ ಊರಿಗೆ ಬರುತ್ತಾರೆ. ಮುದುಕಿ ರಾಜನಿಗೆ ಚಿನ್ನದ ಕೂದಲಿನ ಹುಡುಗಿಯನ್ನು ಒಪ್ಪಿಸಿ ಆತನಿಂದ ಅರ್ಧ ರಾಜ್ಯ ಮತ್ತು ಅರ್ಧ ಭಂಡಾರವನ್ನು ತೆಗೆದುಕೊಳ್ಳುತ್ತಾಳೆ.

ಈ ಕತೆಯಲ್ಲಿ ಮೀನುಗಾರರು ಬಳಸುವ '' ಬೋಟಿ '' ಎಂಬ ಶಬ್ದವು '' ಬೋಟ್ '' ಎನ್ನುವ ಇಂಗ್ಲೀಷ್ ಶಬ್ಧದ ರೂಪಾಂತರವಾಗಿದೆ. ಈ ದೃಷ್ಟಿಯಿಂದ ಇದು ಇತ್ತೀಚಿನ ಜನಪದ ಕತೆಯಾಗಿದೆ. ಈ ಕತೆಯಲ್ಲಿ ದೋಣಿಯ ಪಾತ್ರವು ಪ್ರಮುಖವಾಗಿದೆ. ಚಿನ್ನದ ಕೂದಲು ಬರುವುದು ಆ ಹುಡುಗಿಯನ್ನು ಹುಡುಕುವುದು, ಕೊನೆಗೆ ಅವಳು ರಾಜಕುಮಾರನಿಗೆ ಮದುವೆಯಗಲು ಬರುವುದು ದೋಣಿಯ ಸಹಾಯದಿಂದಲೇ, ದೋಣಿಯ ಸಹಾಯದಿಂದ ಸಮುದ್ರದ ಸಂಪತ್ತನ್ನು ತರುವ ಮೀನುಗಾರರು ತಾವು ಹೆಣೆಯುವ ಕತೆಯ ಸಾಗುವಿಕೆಗೆ ದೋಣಿಯ ಪಾತ್ರ ಮುಖ್ಯವಾಗುತ್ತದೆ.

ಪು. ತಿ. ನ .

ತಾವು ಹೆಣೆಯುವ ಕತೆಯ ಮುಂದುವರಿಕೆಗೆ ದೋಣಿಯ ಸಹಾಯವನ್ನು ಪಡೆಯುತ್ತಾರೆ. ಚಿನ್ನದ ಕೂದಲಿನ ಹುಡುಗಿಯನ್ನು ಸಮುದ್ರದಾಚೆಯಿಂದ ತರುವುದನ್ನು ಗಮನಿಸಿದರೆ ಕತೆಗಾರ ಇಂಗ್ಲೆಂಡಿನಿಂದ ಬಂದ ಬ್ರಿಟೀಷರ ಹೆಣ್ಣನ್ನು ದೃಷ್ಟಿಯಲ್ಲಿ ಟ್ಟುಕೊಂಡು ಕತೆರಚಿಸಿದಂತೆ ಕಂಡುಬರುತ್ತದೆ. ಪಾಶ್ಚಿಮಾತ್ಯರ ಯಂತ್ರಕ್ರಾಂತಿಯನ್ನು ಕಂಡು ಆಕರ್ಷಿಸಲ್ಪಡುತ್ತಿದ್ದ ಭಾರತೀಯರ ಭಾವನೆಯನ್ನು ಕತೆಯಲ್ಲಿ ಮಾರ್ಮಿಕವಾಗಿ ತಿಳಿಸಲಾಗಿದೆ. ಇದೇ ಆಶಯದ ಮತ್ತೊಂದು ಕತೆ. '' ಯುಕ್ತಿರಾಜ ಮೈನಾವತಿ '' ಎಂಬುದು.

ಕತೆಯಲ್ಲಿ ರಾಜನ ನಂತರ ಅವನ ಮೂರು ಜನ ಮಕ್ಕಳಿಗೆ ರಾಜ್ಯಭಾರ ನೀಡದೇ ತನ್ನ ಮಗನಿಗೆ ರಾಜನನ್ನಾಗಿಸುವ ಉದ್ದೇಶವನ್ನು ಹೊಂದಿದ. ಮಂತ್ರಿಯು ಉಪಾಯ ಒಂದನ್ನು ಹುಡುಕುತ್ತಾನೆ. ರಾಜನ ಮಕ್ಕಳನ್ನು ಕರೆದು ''ಏಳು ಸಮುದ್ರಗಳ ಆಚೆಗೆ ಇರುವ ಕೀಳು ಸಮುದ್ರದಲ್ಲಿ ಮೂರು ಲೋಕಗಳಲ್ಲಿಯೂ ಅಪ್ರತಿಮ ಸುಂದರಿಯಾದ ಮೈನಾವತಿ ಇದ್ದಾಳೆ ಅವಳನ್ನು ಯಾರು ಗೆದ್ದು ತರುವರೋ ಅವರು ರಾಜನಾಗಲಿ'' ಎಂದು ಹೇಳುತ್ತಾನೆ.

ಮಂತ್ರಿಯ ಮಾತಿನಂತೆ ರಾಜನ ಇಬ್ಬರು ಮಕ್ಕಳು ಕೀಳುಸಮುದ್ರಕ್ಕೆ ಹೋಗಿ ಮೈನಾವತಿಯ ರಾಜ್ಯದ ಒಳಹೋಗುವ ಹಾಗೂ ಆ ಸಂದರ್ಭದಲ್ಲಿ ಎದುರಾಗುವ ಕಷ್ಟಗಳನ್ನು ಎದುರಿಸುವ ದಾರಿ ತಿಳಿಯದೆ ಅವಳ ಮನೆಯಾಳಾಗಿ ದುಡಿಯುತ್ತಾರೆ. ಕೊನೆಯ ಮಗ ಯುಕ್ತಿರಾಜ ಹಡಗಿನಲ್ಲಿ ಪ್ರಯಾಣ ಮಾಡುವಾಗ ಹಡಗು ಬಿರುಗಾಳಿಗೆ ಸಿಕ್ಕಿ ಅವನು ಬೇರೆಡೆಯ ಒಂದು ದ್ವೀಪಕ್ಕೆ ಹೋಗುತ್ತಾನೆ. ಅಲ್ಲಿದ್ದ ಕುರುಡನ ಸಹಾಯದಿಂದ ಮೈನಾವತಿಯನ್ನು ಗೆಲ್ಲುವ ಉಪಾಯವನ್ನರಿಯುತ್ತಾನೆ. ಅವನ ಮಾರ್ಗದರ್ಶನದ ಮೇರೆಗೆ ಕೀಳುಸಮುದ್ರಕ್ಕೆ ಹೋಗಿ ಮೈನಾವತಿ ಮತ್ತು ಅವಳ ಮಗಳು ಪದ್ಮಾವತಿಯನ್ನು ಗೆದ್ದು ಹಡಗಿನಲ್ಲಿ ಕುಳಿತು ತನ್ನೂರು ಸೇರಿ ಸುಖವಾಗಿರುತ್ತಾರೆ.

ಈ ಕತೆಯಲ್ಲಿ ಸಮುದ್ರದಾಚೆಯ ಅಪರೂಪದ ಹೆಣ್ಣನ್ನು ಗಳಿಸುವ ಉದ್ದೇಶವೇ ಕಥಾನಾಯಕನದ್ದಾಗಿದೆ. ಕಡಲಿಗರು ಸಮುದ್ರ ಸಂಚಾರಿಗಳಾಗಿರುವುದರಿಂದ ಅವರಿಗೆ ಸಮುದ್ರಗಳೆಷ್ಟಿವೆ ಎಂಬುದು ಚೆನ್ನಾಗಿ ಗೊತ್ತು ಅಷ್ಟೇ ಅಲ್ಲದೇ ತಮ್ಮ ಸಮಾಜದಲ್ಲಿರುವ ಮೇಲು ಕೀಳು ಎಂಬ ಭೇದ ಭಾವನೆಯನ್ನು ಸಮುದ್ರದಲ್ಲೂ ಕಾಣಲು ಪ್ರಯತ್ನಿಸಿರುವುದು ಗಮನಾರ್ಹವಾಗಿದೆ. ಸಮುದ್ರದಾಚೆಗೆ ವಿಶಿಷ್ಟವಾದದ್ದು ದೊರೆಯುತ್ತದೆಂಬ ಅವರ ನಂಬಿಕೆಯು ಹಲವಾರು ಕತೆಗಳಲ್ಲಿ ಕಂಡುಬರುತ್ತದೆ. ಸಮುದ್ರದಾಚೆಗಿರುವ ಮಹತ್ವವಸ್ತು ಹಾಗೂ ಅಪರೂಪದ ಹೆಣ್ಣನ್ನು ಗಳಿಸಿಕೊಂಡು ಬರುವುದು ಒಂದು ಸಾಹಸದ ಕೆಲಸವೆಂದು ಭಾವಿಸಿರುವ ಕಡಲಿಗರು ತಮ್ಮ ಕಥಾನಾಯಕನು ಸಮುದ್ರದಲ್ಲಿ ಸಾಹಸ ಪ್ರದರ್ಶಿಸಿ ಚಾಣಾಕ್ಷ ತನದಿಂದ ಕಾರ್ಯ ಸಾಧಿಸಿದರೆ ಆತನು ಎಲ್ಲರಿಗಿಂತ ಶ್ರೇಷ್ಠನೆಂದು ಭಾವಿಸುತ್ತಾರೆ. ಆದ್ದರಿಂದ ಅವರು ವ್ಯಕ್ತಿಯ ಶ್ರೇಷ್ಠತೆಯನ್ನು ನಿರ್ಧರಿಸಲು ಸಮುದ್ರ ಸಂಚಾರದ ಮತ್ತು ಸಮುದ್ರದಾಚೆಯಿರುವ ವಿಶಿಷ್ಠವಾದದ್ದನ್ನು ತರುವಂತಹ ಪರೀಕ್ಷೆಗೆ ಒಳಪಡಿಸುತ್ತಾರೆ. ಅದರಲ್ಲಿ ಉತ್ತೀರ್ಣನಾದರೆ ಮಾತ್ರ ಅವನನ್ನು ತನ್ನ ನಾಯಕನಾಗಿ ಆಯ್ಕೆ ಮಾಡಿಕೊಳ್ಳುತ್ತಾರೆ. ಈ ಕತೆಯಲ್ಲಿ ಕಡಲಿಗರಿಗೆ ಬದುಕಲು ಅವಶ್ಯಕವಾದ ಧೈರ್ಯ ಮತ್ತು ಚಾಣಾಕ್ಷತನವನ್ನು ತಿಳಿಸಲಾಗಿದೆ. ಇದೇ ಬಗೆಯ ವಸ್ತುಗಳನ್ನೊಳಗೊಂಡ ಹಲವಾರು ಕತೆಗಳು ಕಡಲಿಗರ ಸಾಹಿತ್ಯದಲ್ಲಿ ಸಿಗುತ್ತದೆ.

ಇ. ರಮ್ಯ ಕತೆಗಳು

ಪ್ರಾದೇಶಿಕ ಜೀವನದ ವಿಷಯಗಳನ್ನೊಳಗೊಂಡ ರಮ್ಯಕತೆಗಳಲ್ಲಿ ಕಥಾನಾಯಕ ತನ್ನ ಬುದ್ಧಿಬಲದಿಂದ ಕಷ್ಟಗಳನ್ನು ಎದುರಿಸಿ ಜಯಗಳಿಸುವ ಉದ್ದೇಶ ಹೊಂದಿರುತ್ತಾನೆ. ಇಲ್ಲವೆ ಕಷ್ಟಗಳನ್ನು ಸಹಿಸಿ ತಾಳ್ಮೆಯನ್ನು ಪ್ರದರ್ಶಿಸಿ ಕೊನೆಗೆ ಸುಖಪಡೆಯುತ್ತಾನೆ. ತಾನು ಹುಟ್ಟಿ ಬೆಳೆದ ಸ್ಥಳವನ್ನು ಬಿಟ್ಟು ಸಮುದ್ರದಾಚೆ ಹೋಗಿ ಅಮೂಲ್ಯ ಹಾಗೂ ಮಹತ್ವವಾದುದನ್ನು ಗಳಿಸಿಕೊಂಡು ತನ್ನೂರಿಗೆ ಮರಳಿ ಸುಖವಾಗಿರುವ ವಸ್ತುವನ್ನು ಕತೆ ಒಳಗೊಂಡಿರುತ್ತದೆ. ಡಾ. ಕೆ.ಆರ್. ಸಂಧ್ಯಾರೆಡ್ಡಿಯವರು ರಮ್ಯ ಕತೆಗಳ ಲಕ್ಷಣಗಳ ಬಗ್ಗೆ ಸ್ಟಿತ್ ಥಾಮ್ಸನ ಅಭಿಪ್ರಾಯವನ್ನು ಉಲ್ಲೇಖಿಸುತ್ತಾ "ಈ ಕಥೆಗಳು ಅದ್ಭುತ ಎನ್ನುವುದಕ್ಕಿಂತ ಹೆಚ್ಚಾಗಿ ಸಾಹಸಮಯ, ದಾರುಣ ಹಾಗೂ ಭಾವನಾತ್ಮಕ, ಮಾನವೀಯ ಗುಣಗಳ ಮೇಲೆ ಹೆಚ್ಚು ಕೇಂದ್ರಿಕೃತ. ಸಾಂಸಾರಿಕ ವಿಷಯಗಳನ್ನೇ ಹೆಚ್ಚಾಗಿ ಒಳಗೊಂಡ ಈ ಕಥೆಗಳು ಸಾಹಿತ್ಯಕ ಗ್ರಂಥಗಳಲ್ಲಿ ಬಳಕೆಯಾಗಿರುವುದು ಕಡಿಮೆ" ಎಂದು ತಿಳಿಸಿದ್ದಾರೆ. ಈ ಲಕ್ಷಣಗಳನ್ನು ಕತೆಗಳು ಯಾವ ರೀತಿ ಬಿಂಬಿಸುತ್ತವೆ ಎಂಬುದನ್ನು ನೋಡಬಹುದು.

"ಆಚಾರಿಯ ಮರದ ಕುದುರೆ" ಎಂಬ ಕತೆಯಲ್ಲಿ ಮದುವೆಯ ಸಂದರ್ಭದಲ್ಲಿ ವೀರವರ್ಮನಿಗೆ ಆಚಾರಿ ಮರದ ಕುದುರೆಯನ್ನು ಕಾಣಿಕೆಯನ್ನಾಗಿ ಕೊಟ್ಟಿರುತ್ತಾನೆ. ಅದರ ವಿಶೇಷವೆಂದರೆ ಹಣೆಯ ನಡುವಿನ ಗುಂಡಿ ಒತ್ತಿದರೆ ಅದು ಆಕಾಶದಲ್ಲಿ ಹಾರಿಹೋಗುತ್ತದೆ. ಸವಾರಿ ಮಾಡುವವ ತನ್ನ ಬಲಗಾಲಿನಿಂದ ಕುದುರೆಯ ಮುಂಗಾಲಿನ ಕಂಕುಳದ ಒಳ ಭಾಗವನ್ನು ಒತ್ತಿದರೆ ಅದು ನೆಲಕ್ಕಿಳಿಯುತ್ತಿತ್ತು. ಒಮ್ಮೆ ವೀರವರ್ಮನು ಅದನ್ನು ಪರೀಕ್ಷಿಸುವ ಸಲುವಾಗಿ ಕುದುರೆ ಹತ್ತುತ್ತಾನೆ. ಆದರೆ ಇಳಿಯುವುದು ಹೇಗೆಂದು ತಿಳಿಯದೆ ಕೊನೆಗೆ ಅನಿರೀಕ್ಷಿತವಾಗಿ ಕುದುರೆಯ ಕಂಕುಳದ ಒಳಭಾಗಕ್ಕೆ ಕಾಲುತಾಗಿ ಕುಂಬಾರನ ಮನೆಯಲ್ಲಿ ಹೋಗಿ ಇಳಿಯುತ್ತಾನೆ. ಅಲ್ಲಿ ರಾಜಕುಮಾರಿಯ ಪರಿಚಯವಾಗಿ ಅವಳನ್ನು ಪ್ರೀತಿಸುತ್ತಾನೆ. ಅವಳು ಗರ್ಭಿಣಿಯಾದದ್ದು ರಾಜನಿಗೆ ತಿಳಿದಾಗ ಅದಕ್ಕೆ ಕಾರಣವಾದವನನ್ನು ಹಿಡಿಯುವ ಸಿದ್ಧತೆ ಮಾಡಿಕೊಳ್ಳುವಷ್ಟರಲ್ಲಿ ರಾಜಕುಮಾರಿಯನ್ನು ವೀರವರ್ಮ ಮರದ ಕುದುರೆಯ ಮೇಲೆ ಕೂಡಿಸಿಕೊಂಡು ತನ್ನೂರಾದ ರತ್ನಗಿರಿಗೆ ಬಂದನು. ಅಲ್ಲಿ ತೋಟದಲ್ಲಿ ರಾಜಕುಮಾರಿಯನ್ನಿಟ್ಟು ಮನೆಗೆ ಹೋಗಿ ತಂದೆ-ತಾಯಿಗೆ ಸುದ್ದಿ ತಿಳಿಸಬೇಕೆಂದು ತನ್ನ ಮನೆಗೆ ಹೋದಾಗ ಆಚಾರಿಯು ತೋಟಕ್ಕೆ ಬಂದು ರಾಜಕುಮಾರಿಯನ್ನು ಮೋಸದಿಂದ ಕುದುರೆಯ ಮೇಲೆ ಕೂಡಿಸಿಕೊಂಡು ರತ್ನಗಿರಿಯಿಂದ ನೀಲಗಿರಿಗೆ ಹೋಗುತ್ತಾನೆ. ರಾಜಕುಮಾರಿ ಆಚಾರಿಯಿಂದ ತಪ್ಪಿಸಿಕೊಂಡು ಬರುವಾಗ ವೀರವರ್ಮನು ಅವಳನ್ನು ಭೇಟಿಯಾಗಿ ಮರದ ಕುದುರೆಯ ಮೇಲೆ ಅವಳನ್ನು ಕೂಡಿಸಿಕೊಂಡು ಬರುತ್ತಾನೆ. ದಾರಿಯಲ್ಲಿ ಅವಳಿಗೆ ಹೊಟ್ಟೆ ಬೇನೆ ಪ್ರಾರಂಭವಾಗುತ್ತದೆ. ಆಗ ವೀರವರ್ಮನು ಕುದುರೆಯನ್ನು ಸಮುದ್ರದ ನಡುಗಡ್ಡೆಯಲ್ಲಿಳಿಸಿದಾಗ ಅಲ್ಲಿ ಅವಳು ಗಂಡು ಮಗುವಿಗೆ ಜನ್ಮ ಕೊಡುತ್ತಾಳೆ. ವೀರವರ್ಮ ಬಾಣಂತಿಗೆ ಬೇಕಾದ ಸಾಮಾನು ತರಲು ಕುದುರೆ ಏರಿ ಹಾರಿಹೋದಾಗ ಅದು ಸಮುದ್ರದಲ್ಲಿ ಬೀಳುತ್ತದೆ.

ರಾಜಕುಮಾರಿ ಕುಮುದ್ವತಿಯು ವೀರವರ್ಮ ಮರಳಿ ಬಾರದ್ದರಿಂದ ಮಗುವನ್ನು ತೆಗೆದುಕೊಂಡು ಸಮುದ್ರ ತೀರಕ್ಕೆ ಬರುತ್ತಾಳೆ. ಸಮುದ್ರದ ದಡದ ಮೇಲೆ ಒಂದು ಒಡೆದ ಹಡಗಿನ ಹಲಗೆಯ ಮೇಲೆ ಮಗುವನ್ನು ಮಲಗಿಸಿ ಅವಳು ಬಟ್ಟೆ ತೊಳೆಯುವುದಕ್ಕೆ ಹೋಗುತ್ತಾಳೆ. ಸಮುದ್ರಕ್ಕೆ "ಭರತಿ" ಬಂದು ಶಿಶುವಿದ್ದ ಹಲಗೆಯನ್ನು ಅದು ಸೆಳೆದುಕೊಂಡು ಸಮುದ್ರಕ್ಕೆ ಹೋಗುತ್ತದೆ. ಕುಮುದ್ವತಿಯು ಇನ್ನೊಂದು ಹಲಗೆಯನ್ನು ಹಿಡಿದುಕೊಂಡು ನೀರಿನಲ್ಲಿ ಈಜಾಡುತ್ತಾ ಮಗುವಿನ ಹಲಗೆ ಹಿಡಿಯಲು ಹೋಗುತ್ತಾಳೆ. ಆದರೆ ಮಗುವಿದ್ದ ಹಲಗೆ ಅವಳಿಗೆ ಸಿಗದೆ ಕುಮಟೆಯ ಊರಿನ ಸಮುದ್ರ ದಡಕ್ಕೆ ಹೋಗುತ್ತದೆ.

ಅಲ್ಲಿಗೆ ಮೀನು ಹಿಡಿಯಲು ದೋಣಿ ತೆಗೆದುಕೊಂಡು ಹೋಗಲು ಬಂದ ಅಂಬಿಗನು ಆ ಹಲಗೆಯನ್ನು ಕಂಡು ಅದರ ಮೇಲಿದ್ದ ಮಗುವನ್ನು ಎತ್ತಿಕೊಂಡು ಅರಮನೆಗೆ ಬರುತ್ತಾನೆ. ರಾಜನಿಗೆ ಆ ಮುದ್ದಾದ ಮಗುವನ್ನು ನೋಡಿ ಬಹಳ ಸಂತೋಷವಾಯಿತು. ಅವನಿಗೆ ಮಕ್ಕಳಿರಲಿಲ್ಲದ್ದರಿಂದ ಅಂಬಿಗನಿಗೆ ಬಹುಮಾನ ಕೊಟ್ಟು ಆ ಮಗುವನ್ನು ಕೊಂಡು ಅದಕ್ಕೆ "ಸಮುದ್ರದತ್ತ" ಎಂದು ಹೆಸರಿಡುತ್ತಾನೆ.

ಕೊನೆಗೆ ಕುಮುದ್ವತಿ ರಾಜಕುಮಾರಿ ತನ್ನ ಸೀರೆಯ ಸೆರಗನ್ನು ಹರಿದು ಹಲಗೆಯ ಮೇಲೆ ಹಾಸಿ ಮಗುವನ್ನು ಮಲಗಿಸಿದ್ದರಿಂದ ಆ ಬಟ್ಟೆಯ ಗುರುತಿನ ಮೂಲಕ ತನ್ನ ಮಗುವನ್ನು ಹುಡುಕಿಕೊಂಡು ಬಂದು ಗುರುತು ಹಿಡಿಯುತ್ತಾಳೆ. ವೀರವರ್ಮನು ಈಜುತ್ತಾ ಬಂದು ಕುಮುಟೆಯನ್ನು ಸೇರುತ್ತಾನೆ. ಅಲ್ಲಿ ತಾಯಿ-ತಂದೆ-ಮಗ ಈ ಮೂವರೂ ಪರಸ್ಪರ ಭೇಟಿಯಾಗಿ ಸುಖವಾಗಿರುತ್ತಾರೆ.

ಈ ಕತೆಯಲ್ಲಿನ ಮರದ ಕುದುರೆಯು ಕೀಲು ಕುದುರೆಯನ್ನು ಹೋಲುತ್ತದೆ. "ಆಕಾಶದಲ್ಲಿ ಹಾರುವ ಕುದುರೆಗಳ ಉಲ್ಲೇಖಕ ಅನೇಕ ಗ್ರೀಕ್ ಟ್ಯೂಟನ್ ಮತ್ತು ಇತರ ಪುರಾಣ ಕಥೆಗಳಲ್ಲಿ ಬರುತ್ತದೆ." ಘಟನೆಗಳು ಸರದಿಯಂತೆ ಹೆಣೆದುಕೊಂಡಿರುವ ಈ ಕಥೆಯಲ್ಲಿ ಸಮುದ್ರದಲ್ಲಿ ಸಿಕ್ಕಿದ ಮಗುವಿಗೆ "ಸಮುದ್ರದತ್ತ" ಎಂದು ಹೆಸರಿಡುವುದು ಗಮನಾರ್ಹವಾಗಿದೆ. ನೆಲದಿಂದ ಜಲದ ಕಡೆಗೆ ಸಾಗುವ ಕಥೆಯಲ್ಲಿ ಸಮುದ್ರವು ಕಥೆಗೆ ತಿರುವು ಕೊಡುತ್ತದೆ. ಪತಿ-ಪತ್ನಿ-ಮಗ ಇವರ ಅಗಲುವಿಕೆಗೆ ಮತ್ತು ಕೂಡುವಿಕೆಗೆ ಸಮುದ್ರವೇ ಕಾರಣವಾಗುವುದು ಕಥೆಗಾರನ ಚಾಣಾಕ್ಷತನವನ್ನು ತಿಳಿಸುತ್ತದೆ. ಸಮುದ್ರದ ಬಗ್ಗೆ ಇರುವ ಕಥೆಗಾರನ ಒಲವನ್ನು ಕಥೆ ಪರಿಚಯಿಸುತ್ತದೆ. ಕಥೆಯಲ್ಲಿ ಕರ್ನಾಟಕ ಕರಾವಳಿಯಲ್ಲಿರುವ ಕುಮಟಾ ನಗರವನ್ನು ತಂದಿರುವುದನ್ನು ಗಮನಿಸಿದರೆ ಕಥೆಗಾರ ಅದೇ ಸ್ಥಳದವನಿರಬೇಕೆಂಬುದನ್ನು ಊಹಿಸಲು ಸಾಧ್ಯವಾಗುತ್ತದೆ. ಕುತೂಹಲ ಕೆರಳಿಸಿ ಮನರಂಜನೆ ನೀಡುವ ಈ ರಮ್ಯಕತೆಯು ಸ್ಟಿತ್ ಥಾರ್ಮಸನ್ನರ ಎನ್ 451 ವರ್ಗಕ್ಕೆ ಸೇರುತ್ತದೆ.

ಇದೇ ರೀತಿ ರಮ್ಯ ಕಥೆಗೆ ಹಲವಾರು ನಿದರ್ಶನಗಳು ದೊರೆಯುತ್ತವೆ. ಅವುಗಳನ್ನೆಲ್ಲಾ ಇಲ್ಲಿ ಸಂಗ್ರಹಿಸಿ ಕೊಡುವುದು ಸೂಕ್ತವೆನಿಸದ ಕಾರಣದಿಂದ ಕೆಲವು ಕಥೆಗಳನ್ನು ಮಾತ್ರ ಇಲ್ಲಿ ಕೊಡಲಾಗಿದೆ. "ಕುರಸೂರ ಹೆಣ್ಣನ್ನು ತಂದ್ದ" ಮತ್ತು "ಅಂಬಿಗರು ಸಾಕಿದ ಮಕ್ಕಳು" ಎಂಬ ಕತೆಗಳು ರಮ್ಯಕಥೆಯ ಲಕ್ಷಣಗಳನ್ನು ಹೊಂದಿರುವುದನ್ನು ಗಮನಿಸಬಹುದು.

ಪ್ರ.ತಿ.ನ್ಯೊ.

ಈರಸೂರ ಹೆಣ್ಣನ್ನು ತಂದ

ರಮ್ಯ ಕಥೆಯ ಲಕ್ಷಣದ ಮತ್ತೊಂದು ಕತೆ ಇದಾಗಿದೆ.ಈ ಕಥೆಯ ಪ್ರಾರಂಭವೆಂದರೆ,
ಒಂದಾನೊಂದು ಊರಿನಲ್ಲಿ ಈರಸೂರನೆಂಬ ಒಬ್ಬ ಹುಡುಗನಿದ್ದನು. ಅವನು ಹತ್ತು ವರ್ಷದವನಾಗಿದ್ದಾಗ ಅವನ ತಂದೆ–ತಾಯಿ ಇಬ್ಬರೂ ಪಿಡುಗಿನ ರೂಪದಲ್ಲಿ ಬಂದ ಗಾಣಗುದಿಗೆ (ಇನ್‌ಫ್ಲುಯೆಂಜಾ) ಜ್ವರದಿಂದ ತೀರಿಕೊಂಡರು. ಈರಸೂರನು ಆಗೀಗ ಬೇಟೆಮಾಡಿಕೊಂಡು ಬಂದು ಕಷ್ಟದಲ್ಲಿ ಜೀವನ ಮಾಡುತ್ತಿದ್ದನು.

ಅವನು ಬಹಳ ಶಕ್ತಿವಂತನಾಗಿದ್ದನು. ಮೇಲಸೀಮೆಯ ರಾಜ್ಯದ ಅವನ ಗೆಳೆಯರ ಸಂಗಡ ಆಡಿದ ಅನೇಕ ಆಟಗಳನ್ನು ಅವನು ಸುಲಭವಾಗಿ ಗೆಲ್ಲುತ್ತಿದ್ದನು. ಆದುದರಿಂದ ಅವರು ಶರೀರ ಬಲವನ್ನು ಅವಲಂಬಿಸುವ ಆಟಗಳಲ್ಲಿ ಅವನನ್ನು ಸೋಲಿಸಲಾಗುವುದಿಲ್ಲ ಎಂದು ತಿಳಿದು ಪಗಡೆ ಆಟ ಆಡೋಣವೆಂದು ಅವನನ್ನು ಕರೆದರು. ಅವರಲ್ಲಿ ಒಬ್ಬ ಗೆಳೆಯನ ಮನೆಯಲ್ಲಿ ಅವರು ಶ್ರೀ ಗಂಧವನ್ನೂ ಪುನುಗನ್ನೂ ತೆಗೆದುಕೊಂಡು ನೆಲದ ಮೇಲೆ ಪಗಡೆಯ ಮನೆಯನ್ನೂ ಬರೆದುಕೊಂಡು , ಕಾಯಿಗಳನ್ನು ಇಟ್ಟು ಪಗಡೆಯ ಆಟಗಳನ್ನು ಆಡಲು ಪ್ರಾರಂಭಿಸಿದರು. ಈರಸೂರನು ಪಗಡೆಯ ಆಟದಲ್ಲಿಯೂ ಅವರನ್ನು ಒಬ್ಬೊಬ್ಬರನ್ನಾಗಿ ತನ್ನ ಎದುರು ಕೂರಿಸಿಕೊಂಡು ಎಲ್ಲರನ್ನೂ ಸೋಲಿಸಿದನು.

ಅವರಿಗೆ ಈರಸೂರನ ಬಗ್ಗೆ ರಚ್ಚು (ಈರ್ಷ್ಯೆ) ಬಂತು. ಆದರಿಂದ ಅವರು , ಈರಸೂರಾ, ನೀನು ಆಟಗಳಲ್ಲಿ ವೀರನೂ ಹೌದು ಶೂರನೂ ಹೌದು, ಆದರೆ ಈ ಆಟಗಳನ್ನೂ ಪಗಡೆ ಆಟಗಳನ್ನೂ ಗೆದ್ದರೆ ಮಹಾಕಾರ್ಯವಲ್ಲ . ಆದರೆ ಏಳು ಸಮುದ್ರಗಳ ಆಚೆಗೆ ಕೀಳು ಸಮುದ್ರದಲ್ಲಿ ಮಹಾಶೇಷನ ಅಂಕೆ (ವಶ) ಯಲ್ಲಿ ಒಬ್ಬಳು ಬಹಳ ಅಂದ ಚೆಂದದ ಹೆಣ್ಣುಂಟು . ಅವಳನ್ನು ಗೆದ್ದುಕೊಂಡು ಬಂದರೆ ಮಾತ್ರ ನೀನು ನಿಜವಾಗ ವೀರ– ಶೂರ ನೀನೇ ಭೂಮಿಯ ಮೇಲಿನ ಜನರಲ್ಲೆಲ್ಲಾ ಶೂರ'' ಎಂದು ಹೇಳಿದರು.

ಈರಸೂರನಿಗೂ ರಚ್ಚು ಬಂತು. ''ನೀವು ಹೇಳಿದ ಹಾಗೆ ಏಳು ಸಮುದ್ರಗಳ ಆಚೆ ಕೀಳು ಸಮುದ್ರದ ನಡುಗಡ್ಡೆಯಲ್ಲಿ ಮಹಾಶೇಷನ ಅಂಕೆಯಲ್ಲಿ ಸುಂದರ ಹೆಣ್ಣು ಇದ್ದದ್ದೇ ಹೌದಾದರೆ ಆ ಹೆಣ್ಣನ್ನು ಗೆದ್ದುಕೊಂಡು ಬಂದು ನಿಮಗೆ ತೋರಿಸುತ್ತೇನೆ. ಇದೇ ನನ್ನ ಪಂಥ ಎಂದು ಹೇಳಿದನು. ಗೆಳೆಯರು, 'ಅಲ್ಲಿಯ ತನಕ ಬದುಕಿದ್ದರೆ , ನೀನು ತರುವ ಹೆಣ್ಣು ಯಾವ ನಮೂನೆಯವಳು ಅಂತ ನೋಡುತ್ತೇವೆ' ಎಂದು ಹೇಳಿದರು.

ಈರಸೂರ ಮನೆಗೆ ತಿರುಗಿ ಬರುವಾಗ ಬೆಟ್ಟದಲ್ಲಿ ಹಾದು ಬರಬೇಕು. ದಾರಿಯಲ್ಲಿ ಕೆಲವು ಹಾಲಕ್ಕಿ ಒಕ್ಕಲು ಬಲೆ ಕಟ್ಟಿಕೊಂಡು ಬೇಟೆಗೆ ಕುಳಿತಿದ್ದರು. ಒಂದು ಬಲೆಯಲ್ಲಿ ಮುಗುಲಿ ಮರಿಯು ಬಿದ್ದು ಒದ್ದಾಡ ಹತ್ತಿತು. ಕೂಡಲೆ ಒಬ್ಬನು ಓಡಿ ಹೋಗಿ ಅದನ್ನು ಬಲೆಯ ಹಗ್ಗ ಸಮೇತ ಎತ್ತಿದನು. ಅದು ಈರಸೂರ ದಾರಿಯಲ್ಲಿ ಬರುವುದನ್ನು ನೋಡಿ ಗೋಗರೆಯಿತು. ' ಈರಸೂರಣ್ಣಾ , ನಾನು ಸಣ್ಣ ಮರಿ , ನನ್ನನ್ನು ಕೊಂದರೆ ಎಷ್ಟು ಮಾಂಸ ಸಿಕ್ಕೀತು ಈ ಬೇಟೆಗಾರರಿಗೆ? ದಯಮಾಡಿ ಅವರಿಂದ ನನ್ನನ್ನು ಕೊಂಡು ಬಿಡಿಸಿಕೊಂಡು ನನಗೆ ಜೀವದಾನ ಮಾಡು . ನಿನ್ನ ಇಷ್ಟ ಕಾಲದಲ್ಲಿ ನೀನು ನೆನೆದಾಗ ಒಮ್ಮೆ ಬಂದು ನಿನಗೆ ಸಹಾಯ ಮಾಡುತ್ತೇನೆ. ನನ್ನ ಜೀವವನ್ನು ಕಾಯಿ' ಎಂದು ಹೇಳಿತು.

ಈರಸೂರನ ಹತ್ತರ ಪಗಡೆ ಆಟ ಗೆದ್ದ ಹಣವಿತ್ತು. ಅವನು ಬೇಟೆಗಾರರು ಹೇಳಿದ ಹತ್ತು ರೂಪಾಯಿ ಬೆಲೆ ತೆತ್ತು ಮುಂಗುಲಿ ಮರಿಯನ್ನು ಬಿಡಿಸಿಕೊಂಡು , ಅದನ್ನು ಅವನು ಬೆಟ್ಟದಲ್ಲಿ ಬಿಡುವಾಗ ಅದು ಹೇಳಿತು. 'ಕೇಳೋ ನರಮನುಷ್ಯಾ, ನೀನು ಈಗ ನನ್ನ ಜೀವ ಕಾದು ಬಿಟ್ಟಿದಕ್ಕೆ ಪ್ರತಿಯಾಗಿ ನಿನ್ನ ಜೀವಕ್ಕೆ ಗಂಡಾಂತರ ಬಂದಾಗ ನೀನು ನೆನೆದರೆ ಒಮ್ಮೆ ಬಂದು ನಿನ್ನ ಪ್ರಾಣ ಕಾಯುತ್ತೇನೆ' ಎಂದು ಹೇಳಿ ಅಡವಿಯಲ್ಲಿ ಓಡಿಹೋಯಿತು.

ಈರಸೂರನು ಮುಂದೆ ಹೋದನು. ಅಲ್ಲಿ ಕೆಲವು ಹಾಲಕ್ಕಿ ಒಕ್ಕಲು ಬಲೆ ಕಟ್ಟಿಕೊಂಡು ಕೂತಿದ್ದರು. ಒಂದು ಮೊಲದ ಮರಿಯು ಬಲೆಯಲ್ಲಿ ಬಿದ್ದು ಒದ್ದಾಡುವ ಸಮಯದಲ್ಲಿ ಈರಸೂರ ಹೋದನು. ಮೊಲದ ಮರಿ, ' ಈರಸೂರಣ್ಣಾ , ನನ್ನನ್ನು ಈ ಬಲೆಗಾರರಿಂದ ತಪ್ಪಿಸಿ ಉಳಿಸಿದರೆ ನಾನು ನೀನು ಎಣಿಸಿದಾಗ ಎಲ್ಲಿದ್ದರೂ ಬಂದು ನಿನಗೆ ಸಹಾಯ ಮಾಡುತ್ತೇನೆ. ಎಂದು ಹೇಳಿತು. ಈರಸೂರನು ಗೌಡರ ತಂಡದ ಮುಖ್ಯಸ್ಥನಿಗೆ ಹೇಳಿದನು . 'ಯಜಮಾನ ಗೌಡಾ, ಈ ಮೊಲದ ಮರಿಯನ್ನು ನನಗೆ ಕೊಡು, ನೀನು ಕೇಳಿದಷ್ಟು ಹಣವನ್ನು ಕೊಡುತ್ತೇನೆ.

ಯಜಮಾನ ಗೌಡ ಕೇಳಿದಷ್ಟು ಹಣ ತೆತ್ತು ಮೊಲದ ಮರಿಯನ್ನು ತೆಗೆದು ಕೊಂಡು ಈರಸೂರ ಮುಂದೆ ಹೋಗಿ ಅದನ್ನು ಅಡವಿಯಲ್ಲಿ ಬಿಟ್ಟನು. ಮೊಲದ ಮರಿಯು 'ಈರಸೂಣ್ಣಾ, ಮಹಾಶೇಷನ ಹೆಣ್ಣನ್ನು ನೀನು ಊರಿಗೆ ತಂದ ಮೇಲೆ ನಿನಗೆ ಜೀವದ ಗಂಡಾಂತರ ಬಂದಾಗ ನನ್ನನ್ನು ನೆನೆದಲ್ಲಿ ನಾನು ಬಂದು ನಿನ್ನನ್ನು ಪಾರು ಮಾಡುತ್ತೇನೆ. ' ಎಂದು ಹೇಳಿ ಅಡವಿ ಸೇರಿತು.

ಈರಸೂರ ಬೆಟ್ಟದ ಹಣ್ಣು ಹಂಪಲು ತಿಂದು, ನೀರಡಿಕೆಯಾದ್ದರಿಂದ ನೀರನ್ನು ಅರಸುತ್ತ ಹೋದನು. ಮುಂದೆ ಒಂದು ಬಾವಿ ಕಂಡಿತು

ಮಹಾಶೇಷನು ಹಾಳು ಮಾಡಿದ ಜಲಂಧರ ದ್ವೀಪದ ರಾಜನ ಜನರಲ್ಲಿ ಕೆಲವರು ತಪ್ಪಿಸಿಕೊಂಡು ಸಮುದ್ರದಲ್ಲಿ ಹಡಗಿನ ಮೇಲೆ ಬಂದು ಬದುಕಿ ಉಳಿದವರು ಈ ಸುದ್ಧಿಯನ್ನು ಹೇಳಿದರೆಂದು ಅವರು ಹೇಳುತ್ತಿದ್ದರು. ಆದರೆ, ಅವಳು ಈಗ ಬದುಕಿ ಇದ್ದಾಳೆಯೋ ಇಲ್ಲವೋ ಯಾರಿಗೆ ಗೊತ್ತು ? ಒಂದು ವೇಳೆ ಅವಳು ಬದುಕಿದ್ದರೂ ಏಳುಸಮುದ್ರ ದಾಟಿಹೋಗಿ ಮಹಾಶೇಷನನ್ನು ಕೊಂದು ಅವಳನ್ನು ತರುವುದು ಮನುಷ್ಯಮಾತ್ರರಿಂದ ಸಾಧ್ಯವಿಲ್ಲ. ಏಳುಸಮುದ್ರಗಳನ್ನು ನೀನು ದಾಟಿಹೋಗುವುದು ಹೌದೋ ? ಸಮುದ್ರದಾಚೆ ಇದ್ದ ಮಹಾದೊಡ್ಡ ಬಂಡೆಗಲ್ಲಿನ ಪರ್ವತದ ದುರ್ಗದಲ್ಲಿ ಮಹಾಶೇಷನು ಆ ಹೆಣ್ಣನ್ನು ಕಾಯುತ್ತ ಇರುತ್ತಾನೆ. ಆ ಏಳು ಹೆಡೆಗಳ ಮಹಾಶೇಷನನ್ನು ಕೊಂದು ನೀನು ಆ ಹೆಣ್ಣನ್ನು ತರುವದು ಹೌದೋ ? ಇದೆಲ್ಲ ಆಗದ ಕಾರ್ಯ, ಸಮುದ್ರಗಳನ್ನು ದಾಟಿಸುವ ದೋಣಿಯೆಲ್ಲಿದೆ ? ದಾಟಿಸುವ ತಾರಿಯ ಜನರಿಲ್ಲ. ಹೇಗೆ ಹೋಗಿ ಹೆಣ್ಣನ್ನು ತರುತ್ತಿಯೋ ಮಗನೇ ? ಆ ಆಶೆಯನ್ನು ಬಿಟ್ಟು ಬಿಡು' ಎಂದು ಹೇಳಿದಳು. ' ರಾತ್ರಿ ಹೊತ್ತು ಆಲೋಚನೆ ಮಾಡಬಾರದು ಎಂದು ಹೇಳುತ್ತಾರೆ. ಬೆಳಗಾದ ಮೇಲೆ ಈ ವಿಷಯ ವಿಚಾರಮಾಡೋಣ' ಎಂದು ಹೇಳಿ ಈರಸೂರ ನಿದ್ದೆ ಮಾಡಿದನು.

ಮರುದಿನ ಬೆಳಗಾಗುವಾಗ ಈರಸೂರ ಎದ್ದನು. ' ಅಜ್ಜಮ್ಮಾ ನಾನು ರಾತ್ರಿಯಲ್ಲಿ ಏಳು ಸಮುದ್ರ ದಾಟಿಹೋಗಿ ಮಹಾಶೇಷನ ಹೆಣ್ಣನ್ನು ನೋಡಿದ ಹಾಗೆ ಕನಸನ್ನು ಕಂಡೆನು. ಅವಳು ಈಗ ಪ್ರಾಯಬಂದ ಸುಂದರ ತರುಣೆಯಾಗಿದ್ದಾಳೆ. ಅಂಥ ಸುಂದರ ಹೆಣ್ಣಿಗಾಗಿ ಏಳು ಸಮುದ್ರಗಳನ್ನೇ ಯಾಕೆ, ಏಳುನೂರಾ ಎಪ್ಪತ್ತೇಳು ಸಮುದ್ರಗಳನ್ನೂ ದಾಟಿಹೋಗಿ, ಸಾವಿರ ಹೆಡೆಗಳುಳ್ಳ ಮಹಾಶೇಷನ ಸಂಗಡವಾದರೂ ಹೋರಾಟಮಾಡಿ ಬದುಕಿದ್ದರೆ ಹೆಣ್ಣನ್ನು ತಂದೇನು, ಇಲ್ಲವಾದರೆ ಪ್ರಾಣವನ್ನು ಬಿಟ್ಟೇನು. ಈಗಲೇ ನಾನು ಹೆಣ್ಣಿನ ಕಾರ್ಯಕ್ಕಾಗಿ ಹೊರಟೆ ' ಎಂದು ಹೇಳಿ ಆವೇಶ ಬಂದವನ ಹಾಗೆ ಎದ್ದನು. ಅಜ್ಜಿ ಎಷ್ಟು ಬೇಡವೆಂದರೂ ಕೇಳದೇ ಹೊರಟೇ ಬಿಟ್ಟನು.

ಹಾಗೇ ಸಮುದ್ರದ ದಂಡೆಗೆ ಬಂದನು. ಬಂದವನು ಕೂರ್ಮವನ್ನು ನೆನೆದನು. ನದಿಯ ಮುಖದಲ್ಲಿದ್ದ ಕೂರ್ಮನು ಈರಸೂರನ ಕಡೆಗೆ ಈಸುತ್ತ ಬಂತು. ಈರಸೂರ ತಡಮಾಡದೇ ಕೂರ್ಮನ ಮೇಲೆ ಹತ್ತಿ ಕೂತನು. ಕೂರ್ಮ ಈರಸೂರನನ್ನು ಹೊತ್ತುಕೊಂಡು ಸಮುದ್ರದ ಮೇಲೆ ಈಸುತ್ತ ಹೋಯಿತು. ಈರಸೂರನು ಕೂರ್ಮ ಸವಾರಿ ಮಾಡುತ್ತ ಸಮುದ್ರದ ಮೇಲೆ ಹೋಗುತ್ತಿರುವಾಗ, ಬಣ್ಣ ಬಣ್ಣ ಮೀನುಗಳು ಸಮುದ್ರದ ಲ್ಲಿ ತೇಲಿ ಮುಳುಗುತ್ತಿರುವುದನ್ನು ನೋಡಿದನು. ದೊಡ್ಡ ದೊಡ್ಡ ಹಾಯಿ ದೋಣಿಗಳು ದೂರದಿಂದ ಹಕ್ಕಿಗಳು ರೆಕ್ಕೆಗಳನ್ನು ಬಿಡಿಸಿಕೊಂಡು ನೀರಿನ ಮೇಲೆ ತೇಲುತ್ತ ಹೋಗುವುದನ್ನು ನೋಡಿದನು. ಹಡಗುಗಳ ಹಾಗೆ ಕಾಣುವ ತಿಮಿಂಗಲಗಳೆಂಬ ದೈತ್ಯಾಕಾರದ ಮೀನುಗಳನ್ನು ಕೂರ್ಮವು ಈರಸೂರನಿಗೆ ತೋರಿಸಿತು. ಅವನು ಚಿಕ್ಕವನಿದ್ದಾಗ ಅವನ ಅಜ್ಜಿಯು ದೋಣಿಗಳನ್ನು ನುಂಗುವ ಬೋಟಗಳನ್ನು ಬುಡಮೇಲು ಮಾಡುವ ದೊಡ್ಡ ಮೀನುಗಳಿವೆಯೆಂದು ಹೇಳಿದ್ದನ್ನು ಕೇಳಿದ್ದನು. ದೋಣಿಗಳನ್ನು ನುಂಗುವದೇ ಹೌದಾದರೆ ನಮ್ಮನ್ನು ಅಟ್ಟಿಸಿಕೊಂಡು ಯಾಕೆ ಬರುವುದಿಲ್ಲ, ಎಂದು ಅವನು ಕೂರ್ಮವನ್ನು ಕೇಳಿದನು. ಅದು 'ಸಮುದ್ರದಷ್ಟು ಆಶ್ಚರ್ಯ ಭೂಮಿಯ ಮೇಲಿಲ್ಲ. ಈ ತಿಮಿಂಗಿಲಗಳು ತಾವಾಗಿ ಮನುಷ್ಯರನ್ನು ನುಂಗುವುದಕ್ಕೆ ಬರುವದಿಲ್ಲ' ತಮ್ಮ ದಾರಿಯಲ್ಲಿ ಅಡ್ಡವಾಗಿ ಬರುವ ವಸ್ತುಗಳನ್ನು ನುಂಗುವ ಚಟ ಅವುಗಳಿಗೆ ಇದೆ. ಅವು ನೀರಿನ ಕಡೆಗೇ ಬರುತ್ತಿರುವಾಗ ಬೋಟಿಗಳ ಕೆಳಗೆ ಮೈಯನ್ನು ಮುರಿದುಕೊಳ್ಳುವಾಗ ಬೋಟಿ ಬುಡಮೇಲಾಗುತ್ತದೆ ಅಷ್ಟೇ ? ಬೋಟಿಗಳನ್ನು ಅವು ತಾವಾಗಿ ಮುಳುಗಿಸುವದಿಲ್ಲ. ನಾನು ಈ ಹುಲಿಮೀನು, ತಿಮಿಂಗಿಲ ಮುಂತಾದ ಎಲ್ಲ ಪ್ರಾಣಿಗಳಿಗಿಂತಲೂ ವೇಗವಾಗಿ ಈಸಿ ಹೋಗಬಲ್ಲೆ ಅಲ್ಲದೇ, ಯಾವದೇ ದೊಡ್ಡ ಪ್ರಾಣಿ ನನ್ನ ಕಡೆಗೆ ನೂರು ಮಾರು ದೂರ ಬರುವಾಗಲೇ ನನ್ನ ಕಾಲುಗಳಿಗೆ ಅವುಗಳ ಸುಳಿವು ಸಿಕ್ಕುತ್ತದೆ. ನಾನು ಅವುಗಳಿಂದ ತಪ್ಪಿಸಿಕೊಂಡು ಈ ವಿಶಾಲ ಸಮುದ್ರದಲ್ಲಿ ಈಸಿಕೊಂಡು ಸುರಕ್ಷಿತ ಹೋಗಬಲ್ಲೆ ' ಎಂದು ಕೂರ್ಮ ಹೇಳಿತು.

ದಾರಿಯಲ್ಲಿ ಬಂದ ಒಂದು ದ್ವೀಪದಲ್ಲಿ ಕೂರ್ಮವು ವಿಶ್ರಾಂತಿಯ ಸಲುವಾಗಿ ಅವನನ್ನು ಇಳಿಸಿತು. ಆ ದ್ವೀಪದಲ್ಲಿ ಹನೆಮರಗಳು ದಟ್ಟವಾಗಿ ಬೆಳೆದಿದ್ದವು. ಈರಸೂರನಿಗೆ ತುಂಬ ನೀರಡಿಕೆಯಾದದ್ದರಿಂದ ಅವನು ತೆಂಗಿನ ಮರಗಳಂತೆ ಕಾಣುವ ಹನೆಮರಗಳನ್ನು ಹತ್ತಿ ಅವುಗಳ ಕೊನೆಗಳನ್ನು ತನ್ನ ವೀಳ್ಯದ ಸಂಚಿಯಲ್ಲಿದ್ದ ಚೂರಿಯಯಿಂದ ಕೊಯ್ದು ನೆಲಕ್ಕೆ ಒಗೆದನು. ಹನೆಕಾಯಿಗಳು ಸುಲಿದ ತೆಂಗಿನ ಕಾಯಿಯ ಗಾತ್ರದಲ್ಲಿದ್ದವು. ಅವುಗಳಿಗೂ ತೆಂಗಿನ ಕಾಯಿಗಳಿಗಿರುವಂತೆ ಮೂರು ಕಣ್ಣುಗಳುಂಟು. ಕಾಯಿಗಳನ್ನು ಒಡೆದುಕೊಂಡು ಅವುಗಳ ಒಳಗಿರುವ ಸಿಹಿ ನೀರನ್ನು ಈರಸೂರ ಕುಡಿದನು. ' ಈ ದ್ವೀಪದಲ್ಲಿ ಮನುಷ್ಯರಿಲ್ಲ. ಇರುವದೂ ಶಕ್ಯವಿಲ್ಲ. ಮನುಷ್ಯ ಕಂಡು ಕೇಳದಿರುವ ವಿಚಿತ್ರ ಪ್ರಾಣಿಗಳು ಇಲ್ಲುಂಟು. ಮನುಷ್ಯರನ್ನು ಬೇಟೆಮಾಡಿ ತಿನ್ನುವ ಒಂದು ಜಾತಿಯ ದೊಡ್ಡ ಮಂಗಗಳು ಇಲ್ಲುಂಟು. ಇಲ್ಲಿಂದ ಬೇಗನೆ ನೀನು ಮುಂದಿನ ಪಯಣಕ್ಕೆ ಹೊರಡು ' ಎಂದು ಹೇಳಿ ಕೂರ್ಮವು ಅವನನ್ನು ಹೊತ್ತುಕೊಂಡು ಮುಂದೆ ಹೊರಟಿತು. ಈರಸೂರನನ್ನು ಹೊತ್ತು ಆ ಸಮುದ್ರ, ಈ ಸಮುದ್ರ, ಮರು ಸಮುದ್ರಗಳನ್ನು ದಾಟಿ, ಏಳು ಸಮುದ್ರಗಳಾಚೆ ಇರುವ ಕೀಳು ಸಮುದ್ರದಲ್ಲಿನ

ಜಲಂಧರದ್ವೀಪಕ್ಕೆ ಹೋಗಿ ಇಳಿಸಿತು. ' ಈರಸೂರಾ, ಈ ದ್ವೀಪದ ಬಂಡೆಗಲ್ಲುಗಳ ಕಡಿದಾದ ಭೂಭಾಗಗಳನ್ನು ಬಿಟ್ಟು ಸುತ್ತುಹಾಕಿಕೊಂಡು , ಮಹಾಶೇಷನು ಕೋಟೆಯಿಂದ ಸಮುದ್ರಕ್ಕೆ ಇಳಿದು ಜಾರಿ ಬರಲು ಮಾಡಿಕೊಂಡು, ಸೀಳುದಾರಿಯನ್ನು ಹುಡುಕೊಂಡು ಹೋದರೆ, ನೀನು ಸುಲಭವಾಗಿ ಪರ್ವತದ ಬಾಗಿಲಿಗೇ ಹೋಗಿ ತಲುಪುವೆ. ಮಹಾಶೇಷನು ಬರುವುದಕ್ಕೆ ಒಂದು ತಾಸು ಮುಂಚಿತವಾಗಿ ನೀನು ಹಾರೈಸುವ ಹೆಣ್ಣು ಜಲದೇವಿ ಎಂಬವಳು ಕೋಟೆಯ ಬಾಗಿಲನ್ನು ತೆರೆದು ಮಹಾಶೇಷನ ಸಲುವಾಗಿ ಹಾಲು–ಹಣ್ಣು ಇಟ್ಟುಕೊಂಡು ದಾರಿ ಕಾಯುತ್ತಿರುತ್ತಾಳೆ. ಮುಂದಿನ ಸಂಗತಿಗಳ ಬಗ್ಗೆ, ಅವಳೇ ನಿನಗೆ ದಾರಿ ತೋರಿಸುತ್ತಾಳೆ. ನಾನು ಇನ್ನು ಹಿಂದಿರುಗುತ್ತೇನೆ. ನೀನು ಮನಸ್ಸಿನಲ್ಲಿ ನೆನೆದರೆ ಸಾಕು. ಮತ್ತೆ ಬಂದು ಪುನಃ ನಿನ್ನನ್ನು ಸಮುದ್ರದಾಟಿಸಿ ಬಿಡುತ್ತೇನೆ.' ಎಂದು ಹೇಳಿ ಕೂರ್ಮವು ಹಿಂತಿರುಗಿ ಈಸುತ್ತ ಹೋಯಿತು.

ಈರಸೂರನು ನಡುಗಡ್ಡೆಯ ಮೇಲೆ ಕುಳಿತು , ದೇವರ ಸ್ಮರಣೆ ಮಾಡಿ , ತನ್ನ ಕಾರ್ಯದಲ್ಲಿ ಜಯವನ್ನು ತಂದು ಕೊಡುವ ಹಾಗೆ ಪ್ರಾರ್ಥನೆ ಮಾಡಿದನು. ಪರ್ವತವನ್ನು ಸುತ್ತು ಹಾಕಿ ಕೂರ್ಮ ಹೇಳಿದ ಸೀಳು ದಾರಿಗೆ ಹೋದನು. ಅದು ಬಂಡೆ ಕಲ್ಲುಗಳ ಮೇಲೆ ಮಣ್ಣು ಗುಪ್ಪೆಗಳನ್ನು ಸುರುವಿ ಮಾಡಿದ ಏರು ಪೇರಾದ ಕಾಲು ದಾರಿಯಾಗಿತ್ತು. ಅದನ್ನು ಏರಿ ಹೋಗಿ ಕೋಟೆಯ ಬಾಗಿಲಿಗೆ ಹೋದನು . ಬಾಗಿಲು ತೆರೆದಿತ್ತು. ಬಾಗಿಲಲ್ಲಿಯೇ ಪ್ರವೇಶ ಮಾಡಿದಾಗ ದ್ವಾರಪಾಲಕರ ಸುಳಿವೂ ಇರಲಿಲ್ಲ. ಮುಂದೆ ಅರಮನೆಗೆ ಹೋಗಿ ನೋಡಿದನು. ಜಲದೇವಿಯು ಅವನು ದೂರದಿಂದ ಬರುತ್ತಿರುವಾಗಲೇ ಮಾಳಿಗೆಯ ಮೇಲಿಂದ ನೋಡಿದ್ದಳು. ಏಳುಪ್ಪರಿಗೆ ಮಾಳಿಗೆಯಿಂದ ಕೆಳಗಿಳಿದು ಬಂದು ಅವಳು 'ಅರಸರೇ ನೀವು ಎಲ್ಲಿಂದ ಬಂದಿರಿ? ಈ ಸಮುದ್ರಕ್ಕೆ ಬರುವದಕ್ಕೆ ಏಳು ಸಮುದ್ರಗಳಲ್ಲೆಲ್ಲೂ ದಾರಿಯಿಲ್ಲ. ದೋಣಿಯಿಲ್ಲ. ನನ್ನ ಒಡೆಯನು ನಿಮ್ಮನ್ನು ಕಂಡರೆ ನಿನ್ನ ಜೀವವನ್ನೆ ಇಡುವವನಲ್ಲ. ಅವನು ಬರುವ ಸಮಯವಾಯಿತು. ಅವನು ಏಳನೆಯ ಮಾಳಿಗೆಗೆ ಬಂದು ಅಲ್ಲಿ ನನ್ನ ಕೈಯಿಂದ ಆಹಾರ ತೆಗೆದುಕೊಳ್ಳುತ್ತಾನೆ. ಅದರಿಂದ ನೀವು ಈಗಲೇ ಮಾಳಿಗೆ ಹತ್ತಿ ಬನ್ನಿರಿ, ಏಳನೆಯ ಮಾಳಿಗೆಯ ಒಂದು ಕಂಬದ ಹಿಂದೆ ಈ ಪಟ್ಟಕತ್ತಿಯನ್ನು ಹಿಡಿದುಕೊಂಡು ಅಡಗಿ ನಿಲ್ಲಿರಿ, ಅವನಿಗೆ ನಾನು ಹಾಲು –ಹಣ್ಣು ನೀಡುತ್ತೇನೆ. ಅವನು ಹಾಲನ್ನು ಕುಡಿಯಲಿಕ್ಕೆ ಬಗ್ಗಿದಾಗ ಈ ಪಟ್ಟಿಕತ್ತಿಯಿಂದ ಅವನ ಏಳೂ ಹೆಡೆಗಳನ್ನು ಒಮ್ಮೆಲೇ ಸೀಳಿ ಅವನನ್ನು ಕೊಲ್ಲಬೇಕು. ಅಧೈರ್ಯದಿಂದ ಸ್ವಲ್ಪ ಕಡಿಮೆ ಶಕ್ತಿ ಹಾಕಿದ ಒಂದು ಕಡೆ ಉಳಿದರೂ ಸಾಕು , ಅವನು ಸಾಯದೇ ನಿನ್ನನ್ನು ಕೊಲ್ಲುತ್ತಾನೆ. ಅವನನ್ನು ಕೊಂದ ಮೇಲೆ ನಾನು ನಿಮ್ಮವಳು. ಅಲ್ಲಿಯ ತನಕ ಅಲ್ಲ ಎಂದಳು.

ಅವರಿಬ್ಬರೂ ಮಾಳಿಗೆಯನ್ನು ಹತ್ತಿ ಏಳನೆಯ ಉಪ್ಪರಿಗೆ ಕೋಣೆಗೆ ಹೋದರು. ಈರಸೂರನು, ' ಇಲ್ಲಿ ಬೇರೆ ಯಾವ ಜನವಸತಿಯೂ ಇದ್ದಹಾಗೆ ಕಾಣುವದಿಲ್ಲ. ಆದರೆ ಈ ಕೋಟೆ, ಅರಮನೆ, ಬಾಳೆಗಳು, ಹಣ್ಣಿನತೋಟ, ತೆಂಗಿನಮರಗಳು ಇವನ್ನೆಲ್ಲ ಯಾರು ಮಾಡಿಸಿದರು ಮಹಾಶೇಷನೆ ಮಾಡಿಸಿದನೋ ಎಂದು ಹೇಳಿದನು. 'ಮಹಾಶೇಷನು ಇಲ್ಲಿಗೆ ಬರುವ ಮೊದಲು ಈ ದ್ವೀಪದಲ್ಲಿ ಜನಸಂಖ್ಯೆ ಬಹಳವಿತ್ತು. ಇಲ್ಲಿ ಹಿಂದಕ್ಕೆ ಆಳಿದ ಜಲಂಧರ ಎಂಬ ರಾಜನು ಇಲ್ಲಿಯ ಕೋಟೆಯನ್ನು ಕಟ್ಟಿಸಿದ್ದನಂತೆ ಅದರಿಂದ ಈ ದ್ವೀಪಕ್ಕೆ ಜಲಂಧರ ದ್ವೀಪ ಎಂದು ಹೆಸರು ಬಂತು. ಮಹಾಶೇಷನು ನನ್ನನ್ನು ಕರೆತಂದಾಗ ಇಲ್ಲಿ ಸಮುದ್ರಸೂರ ಎಂಬ ರಾಜನಿದ್ದನಂತೆ . ಮಹಾಶೇಷನು ಇಲ್ಲಿಯ ಜನರ ಮೇಲೆ ಬಿದ್ದು ಬಹಳ ಜನರನ್ನು ವಿಷದ ಫೂತ್ಕಾರದಿಂದಲೂ ಹೆಡೆಯ ಬಡಿತಗಳಿಂದಲೂ ಕೊಂದನಂತೆ. ಹಡಗಿನ ಮೇಲೆ ಹೋಗಿ ಕೆಲವರು ಪಾರಾಗಿ ಬೇರೆ ಬೇರೆ ರಾಜ್ಯಗಳಿಗೆ ಹೋಗಿ ಸೇರಿದರು.

'ಮಹಾಶೇಷನು ಇಲ್ಲಿಯ ಕಾಡಿನಲ್ಲಿದ್ದ ಕರಡಿ, ಹುಲಿ ಮುಂತಾದ ಕ್ರೂರ ಪ್ರಾಣಿಗಳನ್ನೆಲ್ಲ ಕೊಂದು ಹಾಕಿದನು. ಎಷ್ಟೋ ಪ್ರಾಣಿಗಳನ್ನು ಆಹಾರದಂತೆ ತಿಂದು ಮುಗಿಸಿದನು. ಈಗ ಇಲ್ಲಿ ಚಿಗರೆಗಳೂ, ಕೆಲವು ಕ್ಷುದ್ರ ಪ್ರಾಣಿಗಳೂ ಉಂಟು. ಮಹಾಶೇಷನು ನನ್ನನ್ನು ಸಾಕಿದ್ದರಿಂದ ಅವನು ನನ್ನ ತಂದೆಯ ಸಮಾನ . ನಾನು ಅವನ ಮಡದಿಯಾಗುವುದಿಲ್ಲ ಎಂದು ಹೇಳುತ್ತ ಬಂದರೂ ಅವನು ನನ್ನ ಆಶೆ ಬಿಡಲಿಲ್ಲ. ಅವನು ಬರುವ ವೈಶಾಖ ಶುದ್ಧ ಅಕ್ಷತ ತದಿಗೆಯ ಗಡುವನ್ನು ಹಾಕಿದ್ದನು. ಆಗಲೂ ಅವನ ಮದುವೆಯಾಗದಿದ್ದರೆ ನನ್ನನ್ನು ಕೊಲ್ಲುತ್ತೇನೆಂದು ಬೆದರಿಕೆ ಹಾಕಿದ್ದಾನೆ, ನನಗೆ ಇಲ್ಲಿ ಬಹಳ ಬೇಸರ ಬಂದಿದೆ. ಮನುಷ್ಯರ ಅಸ್ಥಿ ಪಂಜರ – ತಲೆಬುರುಡೆಗಳನ್ನು ನೋಡಿದ್ದೇನೆಯೇ ಹೊರತು ಜೀವಂತ ಮನುಷ್ಯನನ್ನು ನೋಡಿದ್ದೆಂದರೆ ನೀವೇ ಸರಿ. ಮಹಾಶೇಷನು ಮಾತನಾಡುವದರಿಂದ ಅವನನ್ನು ನಾವು ಮನುಷ್ಯ ವರ್ಗಕ್ಕೆ ಸೇರಿಸಿಕೊಳ್ಳಬೇಕು ಅಷ್ಟೆ.

ನಾನು ಹಗಲಿನಲ್ಲಿ ಹೇಗಾದರೂ ಹೊತ್ತು ಕಳೆಯುತ್ತೇನೆ. ಅಡವಿಯ ಚಿಗರೆಗಳಿಗೆ ನನ್ನ ಗುರುತು ಚೆನ್ನಾಗಿ ಆಗಿದೆ. ಅವುಗಳ ಹಾಲು ಕರೆದುಕೊಂಡು ಇಲ್ಲಿನ ಹಣ್ಣು ಹಂಪಲು ತಿಂದುಕೊಂಡಿದ್ದೇನೆ. ರಾತ್ರಿ ಕಳೆಯುವದೇ ಕಷ್ಟ.ಜೀವ ತೆಗೆದುಕೊಳ್ಳುವ ಹೆದರಿಕೆ ಹಾಕಿದ್ದರಿಂದ ಮಹಾಶೇಷ ನನ್ನ ಬಲಾತ್ಕಾರ ಮಾಡುವದಕ್ಕೆ ಬರುವದಿಲ್ಲ.

ನೀವು ಈಗ ಬಂದದ್ದು ದೇವರು ಬಂದ ಹಾಗಾಯಿತು. ಎನ್ನುವ ಹೊತ್ತಿಗೆ ಮಹಾಶೇಷ ದೂರದಿಂದ ಬರುವ ಉಸಿರಿನ 'ಬೋರ್ ಬೋರ್ ' ಶಬ್ದವು ಕೇಳಿಸ ಹತ್ತಿತು. ' ಈಗ ಮಹಾಶೇಷ ಬರುತ್ತಿದ್ದಾನೆ. ಈಗ ಮನೆಯ ಹತ್ತಿರ ಬಂದ. ಈಗ ಮೇಲೆ ಬರುತ್ತಾನೆ. ಸುಮ್ಮನೆ

ಸದ್ದು ಮಾಡದೇ ಇದ್ದು ಹೇಳಿದಷ್ಟು ಕೆಲಸ ಮಾಡಿರಿ' ಎಂದು ಹೇಳಿದಳು.

ಈರಸೂರ ಕಂಬದ ಮರೆಯಲ್ಲಿ ನಿಂತು ಸಿದ್ಧನಾಗಿದ್ದನು. ಮಹಾಶೇಷ ಮೆಟ್ಟಿಲುಗಳ ಮೇಲೆ ಬೇಗ ಬೇಗನೆ ತೆವಳಿಕೊಂಡು ಹತ್ತಿರಬಂದು 'ಮಡದೀ. ನರಮನುಷ್ಯರ ಪರಿಮಳ ಬರುತ್ತದೆಯಲ್ಲ. ಬಂದವರು ಯಾರು ? ಯಾರು ಬಂದರು ಈ ಯಮಲೋಕಕ್ಕೆ ? ಎಂದು ಸಿಟ್ಟಿನಿಂದ ಕೇಳಿದನು, ಯಾರು ಬರಬೇಕು ಈ ಕೀಳು ಸಮುದ್ರದ ದ್ವೀಪಕ್ಕೆ? ಯಾರೂ ಬರಲಿಲ್ಲ' ಎಂದು ಜಲದೇವಿ ಹೇಳಿದಳು. ' ಥೇ ನಿನ್ನ ಶರೀರದ ಕಮಲದ ಸುವಾಸನೆ ಮಾತ್ರವಲ್ಲ. ಸಮುದ್ರದ ನೀರು ತಾಗಿದ ಮನುಷ್ಯರ ಪರಿಮಳ' ಎಂದ ಮಹಾಶೇಷ. 'ನೀನೆ ಸಮುದ್ರಸ್ನಾನ ಮಾಡಿ ಬಂದದ್ದಾಗಿರಬೇಕು. ಮತ್ತೆಯಾರಿಲ್ಲ. ಹಾಲು ಆರಿಹೋಗುತ್ತದೆ ಬೇಗಕುಡಿ' ಎಂದಾಗ ಬಹಳ ನೀರಡಿಕೆಯಾಗಿದ್ದ ಮಹಾಶೇಷ ಅಗಲವಾದ ಹಾಲಿನ ಪಾತ್ರೆಗೆ ತನ್ನ ಹೆಡೆಗಳನ್ನು ಬಗ್ಗಿಸಿದ್ದನು. ಆಗ ಈರಸೂರನು ತಡಮಾಡದೆ ಆ ಏಳು ಹೆಡೆಗಳ ಮಣಿನಾಗವನ್ನು ಒಂದೇ ಸಲಕ್ಕೆ ಏಳು ತುಂಡಾಗಿ ಬೀಳುವಂತೆ ಪಟ್ಟಗತ್ತಿಯಿಂದ ಹೊಡೆದು ಅದನ್ನು ತುಂಡು ಮಾಡಿದನು. ಸರ್ಪವು ಹೊರಳಿಬಿದ್ದು ಕೆಲವುಹೊತ್ತು ಮಿಡುಕಾಡಿ ಸತ್ತು ಹೋಯಿತು. ಅದನ್ನು ಕೆಳಗೆ ತೆಗೆದುಕೊಂಡು ಬಂದು ಶ್ರೀಗಂಧ, ಚಂದನ ಅಶ್ವತ್ಥ ಚಕ್ಕೆಗಳನ್ನು ಕೂಡಿಸಿ ದೊಡ್ಡ ಈಡನ್ನು ಮಾಡಿ ಅದರ ಶವವನ್ನು ಇಟ್ಟು ಬೆಂಕಿ ಹಚ್ಚಿ ಸುಟ್ಟು ಭಸ್ಮಮಾಡಿದನು.

ಆ ಮೇಲೆ ಜಲದೇವಿಯು, 'ಮಹಾಪುರುಷಾ, ನನ್ನ ಹೆಸರು ಜಲದೇವಿ. ನಿನ್ನನ್ನು ಏನಂತ ಕರೆಯಲಿ?'. ಎಂದು ಕೇಳಿದಳು. 'ಸದ್ಯಕ್ಕೆ ಈರಸೂರ ಎಂತಲೇ ಕರೆ. ಆ ಮೇಲೆ ನಿನಗೆ ತೋರಿದ ಹಾಗೆ ಕರೆಯಬಹುದು' ಎಂದು ಹೇಳಿ ನಕ್ಕನು. ಜಲದೇವಿಯು, 'ನೀವು ಸಮುದ್ರವನ್ನು ದಾಟಿ ಹೇಗೆ ಬಂದಿರಿ? ತಿರುಗಿ ಹೋಗುವಾಗ ನನ್ನನ್ನು ಹೇಗೆ ಕರೆದುಕೊಂಡು ಹೋಗುತ್ತೀರಿ?' ಎಂದು ಕೇಳಿದಳು. 'ಸಮುದ್ರದ ದಡಕ್ಕೆ ಹೋದ ಮೇಲೆ ನೀನೇ ನೋಡುವಿ. ಈ ಸತ್ತ ಮನೆಯಲ್ಲಿ ನೀರನ್ನೂ ಮುಟ್ಟುವ ಹಾಗಿಲ್ಲ. ಸ್ನಾನ ತೀರಿಸಿ ಏನನ್ನಾದರೂ ಸೇವಿಸಬೇಕು.' ಎಂದು ಹೇಳಿ ಸ್ನಾನ ಮಾಡಲು ಬಚ್ಚಲಿಗೆ ಹೋದನು. ಅವನ ಸ್ನಾನ ಆದ ಮೇಲೆ ಜಲದೇವಿಯೂ ಮಿಂದಳು. ಹತ್ತು ವರ್ಷಗಳ ಹಿಂದಿನ ಪಟ್ಟೆ - ಪೀತಾಂಬರವನ್ನುಟ್ಟಳು. ಈರಸೂರನಿಗೆ ತನ್ನ ಮತ್ತೊಂದು ಪಟ್ಟೆಯನ್ನು ಕೊಟ್ಟು ಬಟ್ಟೆಯನ್ನು ಒಣಗಿಸಿಕೊಳ್ಳಲಿಕ್ಕೆ ಹೇಳಿದಳು. ಆ ಮೇಲೆ ಜಲದೇವಿ ಸಮುದ್ರಶೂರನ ಭಂಡಾರದಲ್ಲಿದ್ದ ಮುತ್ತು-ಮಾಣಿಕ್ಯವನ್ನು ತೆಗೆದುಕೊಂಡಳು. ಸೀಳುದಾರಿಯನ್ನು ಹಿಡಿದು ಅವರು ಸಮುದ್ರತೀರಕ್ಕೆ ಬಂದರು. ಸಮುದ್ರತೀರದಲ್ಲಿ ಅವಳು ಮಹಾಶೇಷನ ಏಳು ಮೊಟ್ಟೆಗಳನ್ನು ತನ್ನ ಗಂಟಿನಲ್ಲಿ ಸೇರಿಸಿ ಕಟ್ಟಿ ಕೊಂಡಳು.

ಈರಸೂರನು ನೆಲದ ಮೇಲೆಯೇ ಕೊನೆಗಳನ್ನು ಬಿಟ್ಟ ತೆಂಗಿನ ಮರಗಳ ಕಾಯಿಗಳನ್ನು ಕೊಯ್ದು ಜಲದೇವಿಗೂ ಕೊಟ್ಟು ತಾನೂ ಎಳನೀರು ಕುಡಿದು, ಕಾಯಿಭಾಗಗಳನ್ನು ತಿಂದನು. ಆ ಮೇಲೆ ಮನಸ್ಸಿನಲ್ಲಿ ಕೂರ್ಮನನ್ನು ನೆನೆದನು. ಕೂರ್ಮ ಈಸುತ್ತ ಬಂದು ಈರಸೂರನಿದ್ದ ಸಮುದ್ರದಂಡೆಯ ಹತ್ತಿರ ಬಂದು ನಿಂತಿತು. ಜಲದೇವಿಗೆ ಈರಸೂರ ಹೇಳಿದನು, ' ಇದೇ ನನ್ನ ಪ್ರಾಣಮಿತ್ರನ ಸಹಾಯ ದಿಂದ ನಾನು ಏಳು ಸಮುದ್ರ ದ್ವೀಪಕ್ಕೆ ಬಂದು ನಿನ್ನನ್ನು ಪಡೆದು ಕೊಂಡೆನು. ನೀನೂ ಈ ಚಿಪ್ಪಿನ ದೋಣಿಯನ್ನು ಏರು' ಎಂದು ಹೇಳಿ ಹೆದರುತ್ತಿದ್ದ ಅವಳ ಕೈ ಹಿಡಿದುಕೊಂಡು, ತಾನು ಮೊದಲು ಏರಿಕೊಂಡು ಅವಳನ್ನು ತನ್ನ ಹಿಂದೆ ಕೂಡ್ರಿಸಿಕೊಂಡನು. ಅವಳು ಅವನ ಬೆನ್ನ ಗುಂಟ ಕೈಗಳನ್ನು ಬಳಸಿ ಸುತ್ತು ಹಾಕಿ ಗಟ್ಟಿಯಾಗಿ ಹಿಡಿದುಕೊಂಡಳು. ' ನಾನು ಅರಸರ ಕೋಟೆಯನ್ನು ಗೆದ್ದು ನಿನ್ನನ್ನು ತಂದು ಕುದುರೆಯ ಮೇಲೆ ಕೂರಿಸಿಕೊಂಡು ಬರಬೇಕಾಗಿತ್ತು. ಈಗ ಈ ನೀರ್ಗುದುರೆಯ ಮೇಲೆ ಸವಾರಿ ಮಾಡುವ ಅನುಭವ ನಿನಗೆ ಹೊಸದು' ಎಂದ.

ಕೂರ್ಮನನ್ನು ಹತ್ತಿ ಅರ್ಧದಾರಿ ಕಳೆದ ಮೇಲೆ ಅವಳಿಗೆ ತಾನು ಗಂಟಿನಲ್ಲಿ ಸೇರಿಸಿ ಕಟ್ಟಿಕೊಂಡಿದ್ದ ಮೊಟ್ಟೆಗಳ ನೆನಪಾಯಿತು. ಅವಳು , ' ನಾನು ಜಲಂಧರ ದ್ವೀಪದಿಂದ ಹೊರಟು ಬರುವಾಗ ಮಹಾಶೇಷನ ಏಳು ಮೊಟ್ಟೆಗಳನ್ನು ಗಂಟಿನಲ್ಲಿ ಕಟ್ಟಿಕೊಂಡು ಬಂದೆ. ಅವುಗಳನ್ನೆಲ್ಲ ಒಡೆದು ನೀವು ಸಮುದ್ರದಲ್ಲಿ ಒಗೆಯಬೇಕು. ಅವುಗಳಲ್ಲಿ ಒಂದನ್ನುಳಿಸಿದರೂ ನಮಗೆ ಗಂಡಾಂತರ' ಎಂದು ಹೇಳಿದಳು. ' ಮಹಾಶೇಷನಿಗೆ ಹೆಂಡತಿ ಬೇರೆ ಇತ್ತೇನು ? ' ಎಂದು ಕೇಳಿದ ಈರಸೂರ. ' ಜಲಂಧರ ದ್ವೀಪದಿಂದ ಬಹಳ ದೂರ , ಅಂದರೆ ನೂರು ಯೋಜನೆಗಳ ಆಚೆಯಲ್ಲಿ ಲಕ್ಷದ್ವೀಪ ಎಂಬ ದ್ವೀಪವಿದೆ. ಅಲ್ಲಿ ಅವನಿಗೆ ಒಂದು ಹೆಂಡತಿಯಾದ ಶೇಷ ಉಂಟು. ಎಂದು ಅವನೇ ಹೇಳಿದ್ದನು. ಅವನು, 'ತನ್ನ ಹೆಂಡತಿ ಸಾಕಿದ ಮೊಟ್ಟೆಗಳಲ್ಲಿ ಏಳು ಮೊಟ್ಟೆಗಳನ್ನು ಜಲಂಧರ ದ್ವೀಪಕ್ಕೆ ತರುತ್ತೇನೆ. ಅವು ಒಡೆದು ಮರಿಗಳಾಗಿ ನಿನ್ನ ಬೇಸರ ಪರಿಹಾರ ಮಾಡುತ್ತವೆ. ನಿನ್ನನ್ನು ತಾಯಿಯ ಹಾಗೆ ನೋಡಿಕೊಳ್ಳುತ್ತವೆ. ಎಂದು ಹೇಳಿದ್ದನು. ನಾನು ಆ ಮೊಟ್ಟೆಗಳನ್ನು ನಾಶ ಮಾಡುವೆನೆಂದು ಹೆದರಿದನೋ ಏನೋ, ನನ್ನ ಬಳಿಗೆ ಅವನ್ನು ತರದೆ ಸಮುದ್ರ ತೀರದಲ್ಲಿಯೇ ಇಟ್ಟಿರಬೇಕು. ಅವುಗಳಲ್ಲಿ ಒಂದೂ ಉಳಿಯದ ಹಾಗೆ ನಾಶ ಮಾಡಬೇಕು ಎಂದು ಹೇಳಿ ಅವನ್ನು ಈರಸೂರನಿಗೆ ಕೊಟ್ಟಳು.

ಈರಸೂರನು ಗಂಟು ಬಿಡಿಸಿ, ಒಂದೊಂದನ್ನಾಗಿ ತೆಗೆದು ಹತ್ತೊತ್ತಿ ಒಡೆಯುತ್ತ ಸಮುದ್ರದಲ್ಲಿ ಒಗೆಯುತ್ತ ಬರುವಾಗ, ಅವನಿಗೆ ತಿಳಿಯದ ಹಾಗೆ ಎರಡು ಮೊಟ್ಟೆಗಳು ಜಾರಿ ಸಮುದ್ರದಲ್ಲಿ ಬಿದ್ದವು.

ಮೇಲಸೀಮೆಯ ಸಮುದ್ರತೀರಕ್ಕೆ ಅವರನ್ನು ತಂದು ಕೂರ್ಮನು ಈರಸೂರನ ಅಪ್ಪಣೆ ಪಡೆದು ಹೊಳೆಯ ಅಳವೆಗೆ (ಮುಖ) ಈಸಿ ಹೋಯಿತು. ಈರಸೂರ ಜಲದೇವಿಯನ್ನು ಕರೆದುಕೊಂಡು ತನ್ನ ಹಳ್ಳಿಗೆ ನಡೆದನು.

ಇತ್ತ ಸಮುದ್ರದಲ್ಲಿ ಬಿದ್ದ ಮಹಾಶೇಷನ ಮೊಟ್ಟೆಗಳಲ್ಲಿ ಒಂದು ಮೊಟ್ಟೆಯೊಡೆದು ಮಹಾಶೇಷನ ಮರಿಹೊರ ಬಂದು ಈಸಹತ್ತಿತು. ಅದು ಸಮುದ್ರದಲ್ಲಿ ಸಿಕ್ಕಸುಂಗಟ (ದೊಡ್ಡ ಸಿಗಡಿ) ಗಳನ್ನು ತಿನ್ನುತ್ತ ಬರುತ್ತಿತ್ತು. ಆಗ ಒಂದು ಮುದಿ ಸುಂಗಟ ಹೇಳಿತು ' ಎಲಾ ಮಹಾಶೇಷನ ಮರಿಯೇ, ನಿನ್ನ ತಂದೆಯನ್ನು ಕೊಂದು ನಿನ್ನ ಚಿಕ್ಕತಾಯಿಯನ್ನು ಕರೆದುಕೊಂಡು ಹೋದ ಈರಸೂರನನ್ನು ಕೊಲ್ಲುವದನ್ನು ಬಿಟ್ಟು ಕ್ಷುದ್ರ ಪ್ರಾಣಿಗಳಾದ ನಮ್ಮನ್ನು ತಿನ್ನುತ್ತೀಯಲ್ಲ ನಿನ್ನ ಅಜ್ಞಾನಕ್ಕೆ ಏನು ಹೇಳಲಿ.?

ಆಗ ಮಹಾಶೇಷನ ಮರಿಯು ಬಹಳ ಸಿಟ್ಟಿನಿಂದ ಈರಸೂರನನ್ನು ಅರಸುತ್ತ ಮುಂದೆ ಬಂತು ಸಮುದ್ರವನ್ನು ಗಳಿದು '(ದಾಟಿ) ಬೇಲೆಯ ಮೇಲೆ ಇಳಿದು ಮುಂದೆ ಬಂದು ಜಲದೇವಿಯ ಸಂಗಡ ಹೋಗುವ ಈರಸೂರನನ್ನು ತಡೆದು , ' ನೀನು ಯಾರು? ಅವಳು ಯಾರು ? ಎಂದು ಕೇಳಿತು. ಈರಸೂರನು ' ಎಲಾ ಶೇಷನ ಮರಿಯೇ ನಾನು ಯಾರೆಂದು ತಿಳಿದೆ? ನಾನು ಏಳು ಸಮುದ್ರಗಳನ್ನು ದಾಟಿ ಹೋಗಿ ಬಂದವನು. ಏಳು ಹೆಡೆಗಳ ಮಣಿನಾಗವನ್ನು ನಾಶ ಮಾಡಿ ಬಂದವನು, ಈರಸೂರ. ಆ ಮಹಾಶೇಷನು ಮದುವೆಯಾಲಿಕ್ಕೆ ಇಟ್ಟುಕೊಂಡ ಈ ಜಲದೇವಿಯನ್ನು ಗೆದ್ದುಕೊಂಡು ಅವಳನ್ನು ಕರೆದುಕೊಂಡು ಬಂದ ಮಹಾಸಾಹಸಿ ನಾನು. ಜಗತ್ತಿನಲ್ಲೆ ಮಹಾಸೂರ. ಇವಳು ಜಗತ್ತಿನಲ್ಲೇ ಶ್ರೇಷ್ಠ ಸುಂದರಿ ' ಎಂದು ಹೊಗಳಿಕೊಂಡನು. ' ನನ್ನ ತಂದೆಯನ್ನು ಕೊಂದ ದುಷ್ಟ ಮನುಷ್ಯನೆಂದರೆ ನೀನೆ ಎಂದು ನೀನೇ ಒಪ್ಪಿದೆ. ನಾನು ನಿನ್ನನ್ನು ನನ್ನ ಹೆಡೆಗಳ ಬಡಿತದಿಂದಲೇ ಕೊಂದು ಹಾಕುತ್ತೇನೆ. ಅಥವಾ ನನ್ನ ಹದಿನಾಲ್ಕು ಮೂಗುಗಳ ಸೊರಳೆಗಳಿಂದಲೂ ಘೋರ ವಿಷವನ್ನು ಫೂತ್ಕರಿಸಿ ನಿನ್ನನ್ನು ಜೀವಂತ ವಿಷದ ದ್ವೇಷದ ಅಗ್ನಿಯಲ್ಲಿ ಸುಟ್ಟು ಹಾಕಲೇ ? ' ಎಂದು ಏಳು ಹೆಡೆ ಬಿಡಿಸಿಕೊಂಡು ವಿಷವನ್ನು ಫೂತ್ಕರಿಸುತ್ತ ಬಂತು. ಈರಸೂರ ಅಷ್ಟರಲ್ಲಿ ಮುಂಗುಲಿಯನ್ನು ನೆನೆದಿದ್ದನು.

ಮುಂಗುಲಿಯು, ಹೆದರಿ ಈರಸೂರನನ್ನು ಅಪ್ಪಿದ ಜಲದೇವಿಗೆ ಧೈರ್ಯ ಕೊಟ್ಟು, ಕೂಡಲೇ ಮಹಾಶೇಷನ ಮೇಲೆ ಎರಗಿ, ಅದರ ಸಂಗಡ ಹೊಡೆದಾಟವನ್ನು ಸುರುಮಾಡಿ, ಅದರ ಹೆಡೆಗಳನ್ನು ತನ್ನ ಮುಂಗೈಚೋಟಿನ ಉಗುರುಗಳ ಬಡಿತದಿಂದ ಹೊಡೆದು ಚಿದ್ರ ಚಿದ್ರ ಮಾಡಿ ಕೊಂದು ಹಾಕಿತು. ಈರಸೂರನು ಕಟ್ಟಿಗೆಯನ್ನೂ, ಅಶ್ವತ್ಥ ಚಕ್ಕೆಯನ್ನು ಕೂಡಿಸಿ ಬೆಂಕಿ ಮಾಡಿ ಅದನ್ನು ಬೆಂಕಿಯಲ್ಲಿ ಒಗೆಯುವ ತಯಾರಿ ಮಾಡುತ್ತಿದ್ದಾಗ ಜಲದೇವಿ ಹೇಳಿದಳು. ' ನಾನು ಕೊಟ್ಟಿದ್ದ ಮಹಾಶೇಷನ ಏಳು ಮೊಟ್ಟೆಗಳಲ್ಲಿ ನೀವು ಒಂದು ಮೊಟ್ಟೆಯನ್ನು ಲಕ್ಷವಿಲ್ಲದೇ ಸಮುದ್ರದಲ್ಲಿ ಚೆಲ್ಲಿಕೊಟ್ಟಿದ್ದಿರಬೇಕು. ಅದು ಸರ್ಪವೈರವನ್ನು ಸಾಧಿಸುತ್ತ ನಿಮ್ಮನ್ನು ಕೊಲ್ಲಲಿಕ್ಕೆ ಅಟ್ಟಿಕೊಂಡು ಬಂದಿತ್ತು. ನಿಮಗೆ ಪ್ರಾಣಿಗಳ ಸಹಾಯವಿದೆ ! ಬದುಕಿದೆವು ' ಎಂದಳು.

ಮಹಾಶೇಷನ ಮರಿಯನ್ನು ಭಸ್ಮಮಾಡಿ ಈರಸೂರನು ಜಲದೇವಿಯ ಸಂಗಡ ಊರಿಗೆ ಬಂದನು. ಜಲಂಧರದ್ವೀಪದಿಂದ ತಂದ ರತ್ನಗಳಲ್ಲಿ ಒಂದನ್ನು ಈರಸೂರನು ಮೇಲು ಸೀಮೆಯ ಒಬ್ಬ ರತ್ನ ವ್ಯಾಪಾರಿಗೆ ಮಾರಿ ಬಂದ ಹಣದಿಂದ ದೊಡ್ಡಮನೆಯನ್ನು ಕೊಂಡುಕೊಂಡನು. ಮೇಲು ಸೀಮೆಯ ಗೆಳೆಯರಿಗೆ, ತಾನು ಏಳು ಸಮುದ್ರ ದಾಟಿ ಕೀಳು ಸಮುದ್ರ ದ್ವೀಪಕ್ಕೆ ಹೋಗಿ ಮಹಾಶೇಷನನ್ನು ಕೊಂದು, ಅವನ ಹೆಣ್ಣನ್ನು ತಂದ ವರ್ತಮಾನವನ್ನು ಕಳಿಸಿ, ತನ್ನ ಮದುವೆಯನ್ನು ನಿಶ್ಚಯಿಸಿದ ದಿನಕ್ಕೆ ಬಂದು ಪ್ರತ್ಯಕ್ಷ ನೋಡಬೇಕೆಂದು ಹೇಳಿ ಕಳಿಸಿದನು.

ಮೇಲು ಸೀಮೆಯ ಗೆಳೆಯರು ಮದುವೆಯ ದಿನ ಬಂದು ಮುಟ್ಟಿದರು. ಈರಸೂರನು ಅವರಿಗೆ ಯೋಗ್ಯ ಸತ್ಕಾರ ಮಾಡಿ, ' ನನ್ನಲ್ಲಿ ರಚ್ಚನ್ನು ಹುಟ್ಟಿಸಿ ನಾನು ಮಹಾಸಮುದ್ರಗಳನ್ನು ದಾಟಿಹೋಗಿ ಜಗತ್ತಿನಲ್ಲಿ ಶ್ರೇಷ್ಠವಾದ ಸ್ತ್ರೀ ರತ್ನವನ್ನು ಕೀಳುಸಮುದ್ರ ದ್ವೀಪದಿಂದ ತರುವುದಕ್ಕೆ ನೀವು ಕಾರಣರಾದಿರಿ. ನೀವೇ ನನ್ನ ನಿಜವಾದ ಹಿತ ಚಿಂತಕರು ನನ್ನಲ್ಲಿ ಮಹಾಸಾಹಸದ ಆಶೆಯನ್ನು ಮೂಡಿಸಿ ನನ್ನ ಗೆಲುವಿಗೆ ಮೊದಲು ಪಾಯ ಹಾಕಿದವರು ನೀವು ' ಎಂದು ಗೆಳೆಯರನ್ನು ವಿಶ್ವಾಸದಿಂದ ಹೊಗಳಿದನು. ಅವರು ಈರಸೂರನ ಬಾಯಿಯಿಂದಲೂ ಜಲದೇವಿಯ ಬಾಯಿಯಿಂದಲೂ ಅವರ ಕಥೆಯನ್ನು ಕೇಳಿ ತಿಳಿದು ' ಸಾಬಾಸ್, ಈರಸೂರಾ, ನೀನೇ ದೊಡ್ಡ ಶೂರ, ಆಟವಾಡುವಾಗ ನಾನು ಕುಶಾಲಿಗೆ (ಹಾಸ್ಯಕ್ಕೆ) ಪಂಥ ಹಾಕಿ ಇಟ್ಟಾಗ ನೀನು ಅದನ್ನು ಹಿಡಿದುಕೊಂಡು, ಹಟದಿಂದ ಜೀವದ ಹಂಗುದೊರೆದು ಹೋಗಿ ಸಾಹಸ ಮಾಡಿ ಮಹಾಶೇಷನನ್ನು ಹೊಡೆದು ಹಾಕಿದ್ದು ಸಾಮಾನ್ಯ ಸಾಹಸವಲ್ಲ. ಇದರಿಂದ ಮಹಾಶೇಷನ ಹೆಡೆಯ ಮೇಲಿಂದ ಅಪೂರ್ವ ಕನ್ಯಾಮಣಿಯನ್ನು ಸೆಳೆದು ತಂದು ನೀನು ನಮಗೆಲ್ಲ ನಿನ್ನಂಥ ಮಹಾವೀರನ ಗೆಳೆಯರೆಂಬ ಅಭಿಮಾನವನ್ನು ಹುಟ್ಟಿಸಿ ನಮಗೆಲ್ಲ ಅಪಾರ ಸಂತೋಷವನ್ನುಂಟುಮಾಡಿದೆ.' ಎಂದು ಮದುವೆಯ ಊಟದ ಹಾಲು ಪಾಯಸವನ್ನುಣ್ಣುತ್ತ, ಅವನ ಜತೆಗೆ ಅನೇಕ ಗೆಳೆಯರು ಮಾತಾಡುತ್ತ ಪುನಃ ಪುನಃ ಅವನನ್ನು ಕೊಂಡಾಡಿದರು.

ಇತ್ತ ಈರಸೂರನ ಕೈತಪ್ಪಿನಿಂದ ಸಮುದ್ರದಲ್ಲಿ ಕೆಡವಿದ್ದ ಎರಡು ಮೊಟ್ಟೆಗಳಲ್ಲಿ ಎರಡನೆಯ ಮೊಟ್ಟೆಯೊಡೆದು, ಅದರಿಂದ ಮಹಾಶೇಷನ ಮರಿಯು ಹೊರಬಿದ್ದು ಸಮುದ್ರದಲ್ಲಿ ಈಸುತ್ತ ತನ್ನ ಆಹಾರವನ್ನು ತಿನ್ನುತ್ತ ತಿರುಗುತ್ತಿತ್ತು. ಅದು ದಿನದಿನಕ್ಕೆ ದೊಡ್ಡದಾಗಿ ಬೆಳೆದು ದೊಡ್ಡ ಮೀನಗಳನ್ನೂ ನುಂಗಹತ್ತಿತು. ಅದು ಹುಟ್ಟಿ ಎಂಟು ದಿನಗಳಲ್ಲಿ ಹೆಬ್ಬಾವಿನ ಗಾತ್ರಕ್ಕೆ ಬೆಳೆದು ಹೋಯಿತು. ಅದು ಒಂದು ದಿನ ಒಂದು ಹೆಮ್ಮಲಗ (ಸರ್ಪದ ಆಕಾರದಲ್ಲಿ ಒಂದು ಅಡಿಯಷ್ಟು ಉದ್ದವಾದ ಮೀನ) ವನ್ನು ತಿನ್ನಲಿಕ್ಕೆ ಬಂತು. ಆಗ ಆ ಹೆಮ್ಮಲಗವು, ಸುಂಗಟವು ಮಹಾಶೇಷನ ಹಿಂದಿನ ಮರಿಗೆ ಹೇಳಿದ ಹಾಗೆಯೇ ಹೇಳಿ, ತನ್ನಂಥಹ ಕ್ಷುದ್ರ ಪ್ರಾಣಿಯನ್ನು ತಿನ್ನಬೇಡವೆಂದು ಛೀ ಹಾಕಿತು.

ಅದನ್ನು ಕೇಳಿದ ಮಹಾಶೇಷನ ಮರಿಯು ರೌದ್ರರೂಪವಾಗಿ ಏಳೂ ಹೆಡೆಗಳನ್ನು ಬಿಡಿಸಿ ಎತ್ತಿಕೊಂಡು ಈಸುತ್ತ ಮೇಲುಸೀಮೆ ನಾಡಿನ ಸಮುದ್ರತೀರಕ್ಕೆ ಬಂತು. ಅಲ್ಲಿಂದ ಅದು ಈರಸೂರನನ್ನು ಹುಡುಕುವುದಕ್ಕೆ ಬೆಟ್ಟದ ದಾರಿಯನ್ನು ಹಿಡಿಯಿತು. ಈರಸೂರ ಅಜ್ಜಿಯ ಮನೆಯ ಕಡೆಗೆ ಹೊರಟವನು ಅದನ್ನು ದೂರದಿಂದ ನೋಡಿದನು. ಅವನಿಗೆ ಅದರ ಉಗ್ರ ಕೋಪವನ್ನೂ ರಭಸವನ್ನೂ ನೋಡಿ ಬಹಳ ಗಾಬರಿಯಾಯಿತು. ಇದು ತಾನು ಲಕ್ಷವಿಲ್ಲದೆ ಸಮುದ್ರದಲ್ಲಿ ಒಡೆಯದೆ ಬೀಳಿಸಿದ ಮಹಾಶೇಷನ ಇನ್ನೊಂದು ತತ್ತಿಯ ಮರಿಯಾಗಿರಬೇಕೆಂದು ಅವನಿಗೆ ತಿಳಿಯಿತು. ಮುಂಗುಲಿ ಒಮ್ಮೆ ತನ್ನ ಪ್ರಾಣ ರಕ್ಷಣೆ ಮಾಡಿತು. ಮತ್ತೆ ಅದು ಬರುವಂತಿಲ್ಲ. ಈ ರೌದ್ರಸರ್ಪವನ್ನು ಯುಕ್ತಿಯಿಂದಲೇ ಗೆಲ್ಲಬೇಕು. ಶಕ್ತಿಯಿಂದ ಸಾಧ್ಯವಿಲ್ಲ. ಉಪಾಯದಿಂದ ಪಾರಾಗಬೇಕು. ' ಎಂದು ಅವನು ನಿಶ್ಚಯ ಮಾಡಿ, ಅದನ್ನು ಕಂಡರೂ ಹೆದರದೆ ಮುಂದೆ ಬಂದವನ ಹಾಗೆ ಮುಂದೆ ಬಂದನು. 'ಎಲಾ ನರಮನುಷ್ಯ, ಈರಸೂರ ಎಂಬ ಮನುಷ್ಯನನ್ನು ತೋರಿಸಿ ಕೊಡು , ಇಲ್ಲದಿದ್ದರೆ ಹೆಡೆಯಲ್ಲಿ ಬಡಿದು ಕೊಂದು ನಿನ್ನನ್ನು ನುಂಗುತ್ತೇನೆ. ' ಎಂದು ಹೆದರಿಕೆ ಹಾಕಿತು. – ಏಳು ಹೆಡೆಗಳ ಮಹಾಶೇಷಾ, ನೀನು ಬರುವುದಕ್ಕೆ ಎಂಟು ದಿನ ಮೊದಲು ಬಂದ ಸಣ್ಣ ಮಹಾಶೇಷ ಬಂದು , ಈರಸೂರನನ್ನೂ ಅವನ ಹೆಂಡತಿಯನ್ನೂ ಕೊಂದು ಹಾಕಿ ಹೋಯಿತು' ಎಂದನು. ಮಹಾಶೇಷನು,' ನೀನು ಸುಳ್ಳು ಹೇಳಿದೆ. ಅವನನ್ನು ಸುಟ್ಟ ಜಾಗವನ್ನು ತೋರಿಸಿಕೊಡು 'ಎಂದು ಹೇಳಿತು. ಆಗ ಈರಸೂರನು, ' ಅವನು ನನ್ನ ಗೆಳೆಯ . ನಾನೇ ನನ್ನ ಗೆಳೆಯರ ಸಹಾಯದಿಂದ ಕಟ್ಟಿಗೆ ಕಡಿದು ರಾಶಿ ಹಾಕಿ ಅವನನ್ನೂ ಅವನ ಹೆಂಡತಿ ಜಲದೇವಿಯನ್ನೂ ಸುಟ್ಟು ಭಸ್ಮ ಮಾಡಿ ಬಂದಿದ್ದೇನೆ. ಅವಳನ್ನು ಸುಟ್ಟ ಜಾಗವನ್ನು ತೋರಿಸುತ್ತೇನೆ. ಎಂದು ಮಹಾಶೇಷನನ್ನು ಸುಟ್ಟ ಸಮುದ್ರ ತೀರಕ್ಕೆ ಅದನ್ನು ಕರೆದುಕೊಂಡು ಹೋದನು. ಮಹಾಶೇಷನಿಗೆ ಸುಟ್ಟು ಬೂದಿ ಹರಡಿದ ದೊಡ್ಡ ಜಾಗವನ್ನು ನೋಡಿ ಅರ್ಧ ಸಿಟ್ಟು ಇಳಿಯಿತು. ಅದರ ಉಳಿದ ಅರ್ಧ ಸಿಟ್ಟಿನಿಂದ, 'ನೀನು ಅವನನ್ನು ಸುಟ್ಟು ಹಾಕಿ, ನಾನು ಅವನ ಹೆಣವನ್ನು ಹದ್ದು ಕಾಗೆಗಳು ತಿನ್ನಬೇಕಾಗಿತ್ತು. ಅವನನ್ನು ಯಾಕೆ ಸುಟ್ಟೆ ? ನೀನು ಅವನ ಗೆಳೆಯನಾದ್ದರಿಂದ ಅವನ ಬದಲು ನಿನ್ನ ಮೇಲೆಯೇ ನನ್ನ ಸಿಟ್ಟು ತೀರಿಸಿಕೊಳ್ಳುತ್ತೇನೆ. ಎಂದು ಹೆಡೆಗಳನ್ನು ಎತ್ತಿಕೊಂಡು ಸಿಟ್ಟಿನಿಂದ ಮುಂದೆ ಬಂತು. ಜೀವದ ಗಾಬರಿಯಿಂದ ಅವನು ತನ್ನ ಮಿತ್ರನಾದ ಮೊಲವನ್ನು ನೆನೆದನು. ಅದು ತಡಮಾಡದೇ ಅಡವಿಯಿಂದ ಓಡಿ ಬಂತು. ಮಹಾಶೇಷ ಮೊಲವನ್ನು ನೋಡಿ ಈರಸೂರನನ್ನು ಬಿಟ್ಟು ಅದನ್ನು ತಿನ್ನಬೇಕೆಂದು ಅಟ್ಟಿಕೊಂಡು ಹೋಯಿತು. ಮೊಲವು ಬೆಟ್ಟಗುಡ್ಡಗಳಲ್ಲಿ ಹತ್ತಿ ಇಳಿದು ಓಡಿತು. ಅದು ಓಡಿದಲ್ಲೆಲ್ಲ ಮಹಾಶೇಷವು ಭೋರ್ ಭೋರ್ ಎಂದು ಶಬ್ದ ಮಾಡುತ್ತ ಓಡಿ ಬಂತು. ಮೊಲವು ಜೀವದ ಗಾಬರಿಯಲ್ಲಿ ತಡಮಾಡದೆ ಆಕಾಶದಲ್ಲಿ ಹಾರಿ ಚಂದ್ರನನ್ನು ಸೇರಿಕೊಂಡಿತು. ಚಂದ್ರನು ಅದಕ್ಕೆ ಆಶ್ರಯ ಕೊಟ್ಟು ತನ್ನ ಮೈ ಮೇಲೆ ಅದನ್ನು ಕೂಡ್ರಿಸಿಕೊಂಡು ಗಟ್ಟಿಯಾಗಿ ಹಿಡಿದುಕೊಂಡನು. ಮಹಾಶೇಷನೂ ಆಕಾಶಕ್ಕೆ ಹಾರಿ ಚಂದ್ರನು ಹಿಡಿದಿದ್ದ ಮೊಲವನ್ನು ಸೆಳೆದುಕೊಳ್ಳಲಿಕ್ಕೆ ಹೆಡೆ ಹಾಕಿತು. ಆದರೆ ಸೆಳೆಯಲಿಕ್ಕೆ ಆಗದೆ ಸಿಟ್ಟಿನಿಂದ ಚಂದ್ರನನ್ನೇ ನುಂಗಲಿಕ್ಕೆ ಸುರು ಮಾಡಿತು. ಆದರೆ ಅರ್ಧ ನುಂಗಿ ಗಂಟಲು ಕಟ್ಟಿ ಸ್ವಲ್ಪ ಹೊತ್ತಿನಲ್ಲಿ ಚಂದ್ರನನ್ನು ಬಿಟ್ಟಿತು.

ಚಂದ್ರಲೋಕಕ್ಕೆ ಮೊಲವು ಹೋಗಿ ಸೇರಿದ್ದನ್ನೂ ಸರ್ಪವೂ ಹಾರಿ ಹೋಗಿ ಚಂದ್ರನನ್ನು ನುಂಗಿದ್ದನ್ನು ಈರಸೂರ ನೋಡಿ , 'ನನ್ನ ಸಲುವಾಗಿ ನನ್ನ ಮಿತ್ರ ಮೊಲಕ್ಕೂ ಚಂದ್ರನಿಗೂ ಗಂಡಾಂತರ ಬಂತು. ಇದಕ್ಕೆ ದೇವರೇ ಪರಿಹಾರ ನೀಡಬೇಕು. ಎಂದು ಅವಸರದಿಂದ ಮನೆಗೆ ಹೋಗಿ ಭಟ್ಟರನ್ನು ಕರೆಸಿ, ದೇವರ ಅರ್ಚನ ಮಾಡಿ, 'ದೇವರು ಚಂದ್ರನನ್ನು ಸರ್ಪದಿಂದ ಬಿಡುಗಡೆ ಮಾಡಿ ಕಾಪಾಡಲಿ ' ಎಂದು ಬೇಡಿಕೊಂಡನು. ಆಗ ಸರ್ಪವು ಚಂದ್ರನನ್ನು ನುಂಗಿದ ಸಂಕಟವನ್ನು ತಾಳಲಾರದೇ ಬಿಟ್ಟುಹೋಯಿತು.

ಚಂದ್ರನ ಮೇಲಿನ ಸಿಟ್ಟಿನಿಂದ ಮಹಾಶೇಷವು ವರ್ಷ ವರ್ಷವೂ ಅವನನ್ನು ನುಂಗಲಿಕ್ಕೆ ಪ್ರಯತ್ನ ಮಾಡಿತು. ಈರಸೂರನು ಚಂದ್ರನನ್ನು ಸರ್ಪವು ನುಂಗಿದಾಲೆಲ್ಲ ಗ್ರಹಣದ ಧಾರ್ಮಿಕ ವಿಧಿಗಳನ್ನು ಹೀಗೆಯೇ ಮಾಡಬೇಕೆಂದು ಜನರಿಗೆ ತಿಳಿವಳಿಕೆ ಕೊಟ್ಟನು.

ಸ್ಟಿಥಾಂಸನ್ನರ ಆಶಯಸೂಚಿಯ ಬಿ 360 ರ ವರ್ಗಕ್ಕೆ ಸೇರುವ ಈ ಕಥೆಯಲ್ಲಿ ಪ್ರಾಣಿಗಳಿಗೆ ಮಾಡಿದ ಉಪಕಾರಕ್ಕೆ ಪ್ರತ್ಯುಪಕಾರ ಮಾಡುವ ಪ್ರಾಣಿಗಳ ಸಹಾಯದಿಂದ ಈರಸೂರನು ಕಡಲಾಚೆಯ ಹೆಣ್ಣನ್ನು ತಂದು ತನ್ನ ಧೈರ್ಯ, ಸಾಹಸಗಳನ್ನು ಪ್ರದರ್ಶಿಸುವುದು ಮುಖ್ಯವಾಗಿದೆ. ಜನಪದರು ಪ್ರಾಣಿ ಪ್ರಪಂಚದೊಡನೆ ಸಂಬಂಧ ಬೆಳೆಸಿಕೊಂಡು ಬದುಕುವಂತಹವರು. ಅವರ ಮನೆಗಳಲ್ಲಿ ಸಾಕು ಮಕ್ಕಳಂತೆ ಸಾಕು ಪ್ರಾಣಿಗಳಿರುತ್ತದೆ. ಅದೇ ರೀತಿ ಅವರು ಕಾಡು ಪ್ರಾಣಿಗಳ ಹಾಗೂ ಜಲಚರಗಳ ಕಷ್ಟ ಕಂಡು ಮರುಗುವಂತಹವರು. ಅವುಗಳನ್ನು ಕಷ್ಟದಿಂದ ಪಾರುಮಾಡಲು ಪ್ರಯತ್ನಿಸುವಂತಹವರು. ಅದಕ್ಕೆ ಪ್ರತಿಯಾಗಿ ಉಪಕಾರ ಪಡೆದ ಪ್ರಾಣಿಯಿಂದ ತಮ್ಮ ಕಷ್ಟಗಳನ್ನು ದೂರಮಾಡಿಕೊಳ್ಳುವಂತಹವರು. ಅಂತಹ ನಿದರ್ಶನ ಒಂದನ್ನು ಈ ಕತೆ ನೀಡುತ್ತದೆ.

ಅಂಬಿಗರು ಸಾಕಿದ ಮಕ್ಕಳು

ರಮ್ಯಕಥೆಗಳ ಗುಂಪಿಗೆ ಸೇರುವ ಮತ್ತೊಂದು ಕಥೆ '' ಅಂಬಿಗರು ಸಾಕಿದ ಮಕ್ಕಳು ''ಇದರ ಮುಖ್ಯ ಸಾರವೆಂದರೆ,

ಒಂದು ಊರಿನಲ್ಲಿ ಒಬ್ಬ ರಾಜನಿದ್ದನು. ಅವನಿಗೆ ಇಬ್ಬರು ಮಕ್ಕಳು. ಆ ರಾಜನ ಮಕ್ಕಳಿಗೆ ಯಾವ ಕೆಲಸವೂ ಗೊತ್ತಿರಲಿಲ್ಲ. ರಾಜನಿಗೆ ರಾಜ್ಯದಲ್ಲಿ ಬರಗಾಲ ಪರಿಸ್ಥಿತಿ ಬಂತು. ಮನೆ ಮಾರೆಲ್ಲಾ ಮಾರಾಟವಾಗಿ ರಾಜನಿಗೆ ಏನು ಸಂಪತ್ತು ಉಳಿಯದಾಯಿತು. ರಾಜ, ರಾಣಿ ಮಕ್ಕಳನ್ನು ಕರೆದುಕೊಂಡು ದೇಶಾಂತರಕ್ಕೆ ಹೋದರು. ಪರದೇಶಕ್ಕೆ ಹೋಗಿ ಉಳಿದರು.

ಅಂಬಿಗರು ಬಹಳ ದೊಡ್ಡ ಮಚವೆಯನ್ನು ತೆಗೆದುಕೊಂಡು ಬಂದರು. ಆ ಮಚವೆಯಲ್ಲಿ ಎಲ್ಲಾ ತರದ ಧಾನ್ಯದ ಚೀಲಗಳಿದ್ದವು. ಧಾನ್ಯವನ್ನು ಸ್ವಚ್ಛ ಮಾಡುವದಕ್ಕೆ ರಾಜನ ಹೆಂಡತಿ ಕೂಲಿಮಾಳಿನ ಹಾಗೆ ಹೋದಳು.

ಅವಳು ಒಳಗೆ ಅಕ್ಕಿಯನ್ನು ಸ್ವಚ್ಛ ಮಾಡುತ್ತಿದ್ದಾಗಲೇ ಅಂಬಿಗರು ದೋಣಿಯನ್ನು ಬಿಟ್ಟುಕೊಂಡು ರಾಜನ ಹೆಂಡತಿಯ ಸಮೇತ ನಡೆದರು. '' ಈಗ ತಿರುಗಿ ಬರಬಹುದು : ಈಗ ತಿರುಗಿ ಬರಬಹುದು '' ಅಂತ ರಾಜನು ಕಾದನು. ಆದರೆ, ಸಂಜೆಯವರೆಗೆ ಅವಳು ಬರುವದನ್ನು ಕಾದರೂ , ಅವಳು ಬರಲೇ ಇಲ್ಲ.

ಅಂಬಿಗರು ಅವಳನ್ನು ದೂರ ದೇಶಕ್ಕೆ ಕರೆದುಕೊಂಡು ಹೋದರು.

'' ಹರಹರಾ ! ಹೆಂಡತಿಯೂ ಇಲ್ಲವಾದಳು. ಒಳಗೆ ಅಕ್ಕಿಕಾಳೂ ಇಲ್ಲ. ನನಗೆ ಅಡಿಗೆ ಮಾಡಲಿಕ್ಕೂ ಬರುವದಿಲ್ಲ. ಏನು ಊಟ ಮಾಡಲಿ ? '' ಅಂತ ರಾಜನು ದುಖಃ ಮಾಡಿದನು.

ಮಕ್ಕಳಿಬ್ಬರೂ ಅಳ ಹತ್ತಿದರು. ರಾಜನಿಗೆ ಒಂದು ತಂಬಿಗೆ ನೀರು ತರಲೂ ತಿಳಿಯುತ್ತಿಲ್ಲ. ಅಡಿಗೆ ಮಾಡಲು ಬರುತ್ತಿರಲಿಲ್ಲ.

ಆ ಊರನ್ನೆ ಬಿಟ್ಟು ದೇಶಾಂತರಕ್ಕೆ , ರಾಜನ ಮಕ್ಕಳ ಸಮೇತ ಉಪವಾಸದಿಂದ ಹೊರಟನು. ದಾರಿಯಲ್ಲಿ ಹೋಗುವಾಗ ದೊಡ್ಡ ಹಳ್ಳ ಸಿಕ್ಕಿತು. '' ನಾನು ಒಬ್ಬ ಹುಡುಗನನ್ನು ತೆಗೆದುಕೊಂಡು ಆಚೆ ಹೋದರೆ, ಈಚೆ ಇರುವ ಹುಡುಗ ಹಳ್ಳದಲ್ಲಿ ಬಿದ್ದು ಸತ್ತು ಹೋಗುತ್ತಾನೆ.'' ಎಂತ ಹೇಳಿ ರಾಜನು ಈಚೆ ಬದಿಗೆ ಒಂದು ಗೂಟು ಹುಗಿದು, ಒಬ್ಬ ಹುಡುಗನನ್ನು ಕಟ್ಟಿ ಹಾಕಿದನು. ಒಬ್ಬ ಮಗನನ್ನು ತಕ್ಕೊಂಡು ಹೋಗಿ, ಅವನನ್ನೂ ಅಲ್ಲಿ ಒಂದು ಗೂಟು ಹುಗಿದು ಕಟ್ಟಿ ಹಾಕಿದನು.

ಈಚೆ ಕಡೆ ಇದ್ದ ಮಗನನ್ನು ತೆಗೆದುಕೊಂಡು ಹೊಗಲಿಕ್ಕೆ ಹೊಳೆಯಲ್ಲಿ ಹಿಂದೆಯೇ ಬರಬೇಕಾದರೆ ನೀರಿನ ಪ್ರವಾಹ ಬಂದು , ನೀರಿನಲ್ಲಿ ಬಳಿದುಕೊಂಡು ಹೋಗಿ ಮುಳುಗಿ ಸತ್ತು ಹೋದನು.

ಆಚೆ ಒಂದು ಮಗನು ಅಳುತ್ತಿದ್ದನು. ಈಚೆ ಒಬ್ಬ ಮಗನು ಅಳುತ್ತಿದ್ದನು. ಅವರನ್ನು ಗೂಟಕ್ಕೆ ಕಟ್ಟಿ ಹಾಕಿದ್ದು ಹಾಗೆಯೇ ಇತ್ತು. ಬಿಟ್ಟು ಹಾಕಿರಲಿಲ್ಲ.

ಇಬ್ಬರು ಮಕ್ಕಳೂ ಅತ್ತು ಅತ್ತು ಅವರ ಗಂಟಲು ಬಿದ್ದು ಹೋಯಿತು. ರಣ ಬಿಸಿಲಾಗಿತ್ತು.

ಅಲ್ಲಿ ಒಬ್ಬ ಅಂಬಿಗರ ಸಾವುಕಾರನಿದ್ದನು. ಅವನಿಗೆ ಮಕ್ಕಳಿರಲಿಲ್ಲ. ಅವನು ದೋಣಿ ತಕ್ಕೊಂಡು ಹೋಗಿ ದುಡಿಯಬೇಕಾಗಿರಲಿಲ್ಲ. ಆದರೆ, ಅವನು ಒಂದು ದಿನ ಹೆಂಡತಿಯ ಹತ್ತರ ಹೀಗೆ ಹೇಳಿದನು. '' ನಾನು ಒಂದು ದಿನವಾದರೂ ಹೀಗೆಯೇ ದೋಣಿ ಬಿಟ್ಟುಕೊಂಡು ತೆಗೆದುಕೊಂಡು ಹೋಗಿ ಬರುತ್ತೇನೆ. '' ಎಂದು ಹೇಳಿ ದೋಣಿ ಬಿಟ್ಟುಕೊಂಡು ಬಂದನು. ಅವನು ಬರಬೇಕಾದರೆ ಈ ಮಕ್ಕಳು ಅಳುವದು ಕೇಳಿಸಿತು. ಅಲ್ಲಿ ಬಂದು ಹುಡುಗರ ಕೂಡ ಕೇಳಿದನು : '' ಏನು ಮಕ್ಕಳೇ ? ನಿಮಗೆ ಅಪ್ಪ –ಅವ್ವ ಇಲ್ಲವೋ ? '' ಅಂತ ಕೇಳಿದನು. '' ಇಲ್ಲ! ಅಪ್ಪ – ಅವ್ವ ಸತ್ತು ಹೋದರು'' ಅಂದರು ಅವರು. ಅಷ್ಟು ಮಾತನ್ನು ಕೇಳಿಕೊಂಡು ಅವನು ಆಚೆ–ಈಚೆ ಇದ್ದ ಇಬ್ಬರು ಮಕ್ಕಳ ಕಟ್ಟನ್ನು ಬಿಡಿಸಿದನು. ಅವರನ್ನು ತನ್ನ' ದೋಣಿಯ ಮೇಲೆ ಹಾಕಿಕೊಂಡು ತನ್ನ ಮನೆಯ ಹತ್ತರ ದೋಣಿ ತಕ್ಕೊಂಡು ಹೋದನು. ಮನೆಗೆ ಬಂದು ಹೆಂಡತಿಯ ಕೂಡ ಕೇಳಿದನು: '' ನಾನು ಮಕ್ಕಳಿಲ್ಲ ಎಂದು ಹೇಳಿ ಅಳುತ್ತಿದ್ದೆನು. ನಾನು ಈ ಮಕ್ಕಳನ್ನು ತಂದೆನು. ನೀನು ಇವರನ್ನು ಚೆನ್ನಾಗಿ ಸಾಕಬೇಕು. '' ಆಗ ಹೆಂಡತಿ ಹೇಳಿದಳು. '' ಈ ಮಕ್ಕಳು ಬ್ರಾಹ್ಮಣರ ಮಕ್ಕಳ ಹಾಗೆ ಕಾಣುತ್ತಾರೆ. ನಮ್ಮ ಜಾತಿಯ ಮಕ್ಕಳಲ್ಲ . ಈ ಮಕ್ಕಳಿಗೆ ನಾವು ಅನ್ನ ಮಾಡಿ ಹಾಕಿದರೆ ದೇವರಲ್ಲಿ ಅಪರಾಧ ಮಾಡಿದ ಹಾಗೆ ಆಗುತ್ತದೆ.'' ಅಂದಳು. ಆಮೇಲೆ, ಬ್ರಾಹ್ಮಣರ ಒಬ್ಬ ಹೆಂಗಸನ್ನು ತಂದುಕೊಂಡು ಮನೆಯಲ್ಲಿ ಇಟ್ಟುಕೊಂಡನು ಅಂಬಿಗ. ಅವಳು ಅಡಿಗೆ ಮಾಡಿ, ಆ ಮಕ್ಕಳಿಗೆ ಬಡಿಸ ಹತ್ತಿದಳು. ಹೀಗೆ ಮಾಡಿ ಆ ಹುಡುಗರನ್ನು ಸಾಕಿ ದೊಡ್ಡವರನ್ನಾಗಿ ಮಾಡಿದರು. '' ಹೀಗೆಯೇ ಅವರನ್ನು ಬೆಳೆಸಿದರೆ ಏನು ಫಲವಿದೆ ? ಅವರನ್ನು ಶಾಲೆಗೆ ಹಾಕಿ ಅವರಿಗೆ ಬರಹ ಕಲಿಸಬೇಕು. '' ಅಂತ ಆಲೋಚನೆ ಮಾಡಿದನು.

ಮಕ್ಕಳಿಗೆ ಇಂಗ್ಲೀಷ್ ಬರಹ (ವಿದ್ಯೆ) ಸಹ ಬರಬೇಕೆಂದು ಅವನ ಹೇಳಿಕೆ.

ಆಮೇಲೆ ಬರಹ ಸರಹ ಕಲಿತು ಹುಡುಗರು ಬುದ್ಧಿವಂತರಾದರು. ಅವರು ಅಂಬಿಗನ ಹತ್ತರ, '' ಅಪ್ಪಾ, ನಾವು ಊರು, ದೇಶ ಎಲ್ಲಾ ತಿರುಗಿ ಬರಬೇಕು.'' ಅಂತ ಇಬ್ಬರೂ ಹೇಳಿದರು. ಬಟ್ಟೆ-ಬರೆ, ದುಡ್ಡು ಎಲ್ಲಾ ತೆಗೆದುಕೊಂಡು ದೇಶಾಂತರಕ್ಕೆ ಹೋದರು.

ಅವರು ಹೋಗುತ್ತಿರಬೇಕಾದರೆ ಒಬ್ಬ ರಾಜನ ಮನೆ ಸಿಕ್ಕಿತು. ಹೊಳೆಯಲ್ಲಿ ಬಳಿದು ಹೋಗಿ, ಮುಳುಗಿ ಸತ್ತ ರಾಜನು, ಅವರ ತಂದೆ, ಅಲ್ಲಿಯ ರಾಜನ ಮನೆಯಲ್ಲಿ ಹುಟ್ಟಿ, ಬೆಳೆದು, ಅಲ್ಲಿ ಅರಸುತನ ಮಾಡಿಕೊಂಡು ಉಳಿದಿದ್ದನು. ಈ ಮಕ್ಕಳು ಅಲ್ಲಿ ಹೋಗಿ, ಅರಮನೆಯ ಬಾಗಿಲಿನಲ್ಲಿ ಹಾಜರಾದರು. ಅವರಿಗೆ ರಾಜನು ತಮ್ಮ ಅಪ್ಪ ಎಂದು ಗೊತ್ತಿರಲಿಲ್ಲ.

ಅವರ ಅಪ್ಪನು ''ಮಕ್ಕಳೇ, ಎಲ್ಲಿಗೆ ಹೊಗುತ್ತೀರಿ ? '' ಅಂತ ಕೇಳಿದನು . '' ಯಾರದಾದರೂ ಮನೆಯಲ್ಲಿ ಕೂಲಿ ಕೆಲಸ ಮಾಡಿಕೊಂಡು ಹೊಟ್ಟೆಹೊರೆದುಕೊಳ್ಳಬೇಕೆಂದು ಬಂದಿದ್ದೇವೆ. '' ಎಂದು ಹೇಳಿದರು.

''ನಿಮಗೆ ಒಂದು ದಿವಸಕ್ಕೆ ಸಂಬಳ ಏನು ? '' ಅಂತ ರಾಜನು ಕೇಳಿದನು. ''ದಿವಸಕ್ಕೆ ಒಂದು ಸಾವಿರ ರೂಪಾಯಿ '' ಎಂದರು.

ಆಗ, ''ಅಡ್ಡಿಯಿಲ್ಲ ಕೊಡುತ್ತೇನೆ. '' ಅಂತ ಹೇಳಿದನು. ಅದೇ ದಿನ ರಾತ್ರಿಯಲ್ಲಿ ಮಹಾದೊಡ್ಡ ಯಕ್ಷಗಾನದ ಆಟವನ್ನು ಆಡಿಸಬೇಕು ಎಂದು ರಾಜನು ಪಾರ್ಟು ಮಾಡುವವರನ್ನೆಲ್ಲಾ ಒಟ್ಟುಗೂಡಿಸಿದನು. ಆಟ ಮಾಡಲು ಹಣುಕಿದರು. (ಪ್ರಾರಂಭ ಮಾಡಿದರು).

ಆಟ ನಡೆಯುತ್ತಿರಬೇಕಾದರೆ – ನೋಡಿರಿ, ಅಂಬಿಗರು ಆ ಹೆಂಗಸನ್ನು ಕರೆದುಕೊಂಡು ಹೋಗಿದ್ದರು ಮಚವೆಯಲ್ಲಿ, ಅದೇ ಮಚವೆ ಬಂತು. ಆ ಅಂಬಿಗರು ರಾಜನ ಮನೆಯ ಹತ್ತರ ಆಟ ನೋಡಬೇಕೆಂದು ಹೋದರು. '' ತಾವು ಆಟ ನೋಡಬೇಕಾದರೆ ದೋಣಿ ಕಾಯಲಿಕ್ಕೆ ಯಾರೂ ಇಲ್ಲ '' ಅಂದರು. 'ರಾಜನು, '' ನಾನು ದೋಣಿ ಕಾಯಲಿಕ್ಕೆ ಜನರನ್ನು ಕಳಿಸಿಕೊಡುತ್ತೇನೆ '' ಅಂತ ಹೇಳಿದನು.

ಈ ಎರಡು ಜನ ಮಕ್ಕಳನ್ನು ದೋಣಿ ಕಾಯಲಿಕ್ಕೆ ಕಳಿಸಿದನು. ಅವರು ಕಾಯಲಿಕ್ಕೆ ಹೋದರು. ಅಲ್ಲಿಗೆ ಹೋದ ಮೇಲೆ ತಮ್ಮನು ''ಅಣ್ಣಾ, ಹೊತ್ತು ಕಳೆವ ಹಾಗೆ ಒಂದು ಕತೆ ಹೇಳು '' ಅಂದನು.

ಅದೇ ರಾಜನ ಹೆಂಡತಿಯನ್ನು ದೋಣಿಯ ಕೋಣೆಯ ಒಳಗೆ ಹಾಕಿ ಬಾಗಿಲಿಗೆ ಬೀಗ ಹಾಕಿದ್ದರು. ಅವಳು ಯಾರಿಗಟ ಕಾಣದ ಹಾಗೆ, ಓಡಿ ಹೋಗದ ಹಾಗೆ ಅಷ್ಟು ಬಂದೋಬಸ್ತು ಮಾಡಿದ್ದರು.

ಅಣ್ಣನು ಕತೆ ಹೇಳಲು ಹತ್ತಿದನು. '' ಒಂದು ಊರಲ್ಲಿ ಒಬ್ಬ ರಾಜನಿದ್ದ. ಅವನಿಗೆ ಒಬ್ಬ ಹೆಂಡತಿ, ಎರಡು ಜನ ಮಕ್ಕಳಿದ್ದರು. ಊಟಕ್ಕೆ ಗತಿಯಿಲ್ಲವೆಂದು ಊರು ಬಿಟ್ಟು ದೇಶಾಂತರಕ್ಕೆ ಹೋದರು.

ಅಂಬಿಗರು ದೋಣಿ ತೆಗೆದುಕೊಂಡು, ಅಕ್ಕಿ – ಗೋದಿ ಮತ್ತು ಬೇರೆಸಾಮಾನುಗಳನ್ನು ಹಾಕಿಕೊಂಡು ಬಂದರು. ''ಅಕ್ಕಿ – ಬೇಳೆ ಇವನ್ನೆಲ್ಲ ಚೊಕ್ಕ ಮಾಡಿ ಗೇರಲಿಕ್ಕೆ ಯಾರೂ ಇಲ್ಲ . ಊಟಕ್ಕೆ ಇಲ್ಲದ ಜನರು ಇಲ್ಲಿಗೆ ಬಂದು ಗೇರಿ ಸಂಬಳ ಕೊಡುತ್ತೇವೆ. ಸಂಬಳ ತೆಗೆದುಕೊಂಡು ಹೋಗಲು ಬನ್ನಿ . ಸಾಮಾನುಗಳನ್ನು ಚೊಕ್ಕಟ ಮಾಡಿ '' ಅಂತ ಹೇಳಿದರು.

ಈ ರಾಜನ ಹೆಂಡತಿ ಅಲ್ಲಿ ಸಾಮಾನು ಚೊಕ್ಕಟ ಮಾಡಲಿಕ್ಕೆ ಹೋದಳು. ಆದರೆ, ಆ ಅಂಬಿಗರು ಅವಳ ಸಮೇತ ದೋಣಿ ಬಿಟ್ಟುಕೊಂಡು ಪರದೇಶಕ್ಕೆ ಹೋದರು.

ಹುಡುಗನು ಕತೆ ಮುಂದುವರಿಸಿದನು. ''ನಾನೂ ನನ್ನ ತಮ್ಮನೂ ಬಳಿದು ಹೋಗಬಾರದೆಂದು ಈಚೆಯ ದಡಕ್ಕೆ ಒಂದು ಗೂಟ ಹುಗಿದು ಒಬ್ಬ ಮಗನನ್ನು ಕಟ್ಟಿ ಹಾಕಿದನು. ಆಚೆ ಇನ್ನೊಬ್ಬ ಮಗನನ್ನು ತೆಗೆದುಕೊಂಡು ಹೋಗಿ ಕಟ್ಟಿ ಹಾಕಿದನು. ಈಚೆ ದಡದಲ್ಲಿದ್ದ ಮಗನನ್ನು ತೆಗೆದುಕೊಂಡು ಬರಬೇಕೆಂದು ಹಿಂದೆ ತಿರುಗಿ ಬಂದವನು ನಡು ಹೊಳೆಯಲ್ಲಿ ಕಂತಿ (ಮುಳುಗಿ) ಹೋದ. ಆಗ ನಾವು ತೀಡ (ಅಳ) ಲಿಕ್ಕೆ ಹತ್ತಿದೆವು. ಒಬ್ಬ ಅಂಬಿಗರವನು ಬಂದು ನಮ್ಮಿಬ್ಬರನ್ನು ತೆಗೆದುಕೊಂಡು ಹೋದನು. ನಮ್ಮನ್ನು ಸಾಕಿ ದೊಡ್ಡವರನ್ನಾಗಿ ಮಾಡಿದನು. ''

ಅಷ್ಟು ಮಾತು ಕೇಳುವಷ್ಟರಲ್ಲಿ ಆ ಹೆಂಗಸು '' ಇವರು ತನ್ನ ಮಕ್ಕಳು '' ಎಂದು ಹೇಳಿ ಅಳ ಹತ್ತಿದಳು.

ಈ ಮಕ್ಕಳು ಏನು ಮಾಡಿದರೆಂದರೆ, '' ಒಬ್ಬ ದೆವ್ವ ಬಂದು ನಮ್ಮನ್ನು ಈಗ ಹೆದರಿಸುತ್ತದೆ. '' ಅಂತ ಅಳ ಹತ್ತಿದರು.

ಹೀಗೆ ಬೆಳಗುವರೆಗೂ ಅವರು ರಾಜನ ಮನೆಗೆ ಓಡಿ ಹೋದರು. ಅಂಬಿಗರು ಆಟ ನೋಡಿಕೊಂಡು ದೋಣಿಗೆ ಬಂದರು. ಆ ಹೆಂಗಸು ಇಬ್ಬರ ಮಕ್ಕಳು ಬಂದು ತನ್ನ ಮಾನಭಂಗ ಮಾಡಿದರು ಎಂದು ಅಂಬಿಗನ ಹತ್ತರ ಹೇಳಿದಳು.

'ಅವನು ಅವಳನ್ನು ಕರೆದುಕೊಂಡು ರಾಜನ ಮನೆಗೆ ಹೋದನು. '' ಮಕ್ಕಳೇ, ನೀವು ನ್ನ ಹೆಂಡತಿಯ ಮಾನಭಂಗ ಮಾಡಿದರಂತೆ ನೀವು. ಹೌದೋ ಹೇಗೊ ? '' ಅಂತ ಅಂಬಿಗನು ಅವರನ್ನು ಕೇಳಿದನು.

ಆ ಮಕ್ಕಳು , '' ಆ ಹೆಂಗಸು ದೋಣಿಯ ಒಳಗೆ ಇದ್ದಳೋ ಇರಲಿಲ್ಲವೋ ಎಂಬುದು ನಮಗೆ ಗೊತ್ತಿಲ್ಲ. ನಾವು ಕತೆ ಹೇಳಿಕೊಳ್ಳಬೇಕಾದರೆ ಒಳಗೆ ಒಬ್ಬ ಹೆಂಗಸು ಅಳಲಿಕ್ಕೆ ಹತ್ತಿದಳು. ನಾವು ಹೆಣ್ಣು ದೆವ್ವ ಅಂತ ಹೆದರಿ, ಅಳುತ್ತಿದ್ದು ಹೆದರಿಕೊಂಡು, ಬೆಳಗಾಗಬೇಕಾದರೆ ಹೆದರಿ ಓಡಿ ಬಂದೆವು '' ಅಂದರು.

ರಾಜನು, '' ಹಾಗಾದರೆ ನೀವು ಯಾವ ಕತೆ ಹೇಳಿದ್ದು '' ಅಂತ ಕೇಳಿದನು. ಆಗ ಅದೇ ಕತೆಯನ್ನು ಹೇಳಿದನು ಹುಡುಗ. ಆಗ ನನ್ನ ಹೆಂಡತಿ, ತನ್ನ ಮಕ್ಕಳು ಇವರು ಎಂಬು ರಾಜನಿಗೆ ಗೊತ್ತಾಯಿತು. ಆ ಅಂಬಿಗನ ತಲೆ ಹೊಡೆಯಿಸಿ , ಮಕ್ಕಳನ್ನೂ ಹೆಂಡತಿಯನ್ನೂ ತನ್ನ ಹತ್ತರ ಇಟ್ಟುಕೊಂಡು ರಾಜನು ಸುಖದಲ್ಲಿ ಉಳಿದನು.

ಸ್ಟಿಥಾಂಸನ್ನರ ಆಶಯ ಸೂಚಿಯ ಎಸ್ ೭೪೧ ನೇ ವರ್ಗಕ್ಕೆ ಸೇರುವ ಈ ಕಥೆಯಲ್ಲಿ ಬಹುಕಾಲದವರೆಗೆ ರಾಜ, ರಾಣಿ - ಹಾಗೂ ಮಕ್ಕಳು ಅಗಲಿದ್ದು ಪುನಃ ಒಂದುಗೂಡುವ ಆಶಯವು ಅಭಿವ್ಯಕ್ತಗೊಂಡಿದೆ. ಕಡಲಿಗರು ರಾಜನ ಕುಟುಂಬವನ್ನು ಅವರಾರೆಂಬುದನ್ನರಿಯದೇ ಸಾಕುವುದು ಕೊನೆಗೆ ತಮ್ಮ ಪಾಸರಣವನ್ನೆ ರಾಜನಿಗೆ ಬಲಿಕೊಡುವುದು ಕಥೆಯ ಮುಖ್ಯ ವಸ್ತುವಾಗಿದೆ. ಕಡಲಿಗರ ಪರೋಪಕಾರದ ಗುಣವನ್ನು ಕತೆ ತಿಳಿಸುತ್ತದೆ.

ಈ. ಅತಿಮಾನುಷ ಕತೆಗಳು

ಮನುಷ್ಯರು ಅತಿಮಾನುಷರ ವಿರುದ್ಧ ಹೋರಾಟ ನಡೆಸಿ ಜಯಗಳಿಸುವಂತಹ ಕತೆಗಳು ಅತಿಮಾನುಷ ಕತೆಗಳಾಗುತ್ತವೆ. ಮಾನವ ಶಕ್ತಿಯ ಶ್ರೇಷ್ಠತೆಯನ್ನು ಸಾರುವ ಈ ಕತೆಗಳಲ್ಲಿ ದೇಹಬಲ ಮತ್ತು ಬುದ್ಧಿಬಲಗಳೆರಡೂ ಪ್ರಮುಖವಾಗಿರುತ್ತವೆ. ಗಾತ್ರದಲ್ಲಿ ದೈತ್ಯರಾದವರನ್ನು ಬುದ್ಧಿಬಲದಿಂದ ಸೋಲಿಸಿ ಮಾನವ ರಾಕ್ಷಸರಿಗಿಂತ ಶ್ರೇಷ್ಠವೆಂಬ ಉದ್ದೇಶವನ್ನು ಸಾಧಿಸುವೆಡೆಗೆ ಕತೆ ಸಾಗುತ್ತದೆ. ಪುರಾಣಗಳನುಸಾರ ತೊಂದರೆ ಕೊಡುವ ಸಲುವಾಗಿಯೆ ಸೃಷ್ಟಿಯಾಗಿರುವ ರಾಕ್ಷಸರನ್ನು ಸಂಹಾರ ಮಾಡುವುದಕ್ಕಾಗಿ ಜನಪದ ಕತೆಗಾರ ತನ್ನ ನಾಯಕರನ್ನು ಸೃಷ್ಟಿಸಿಕೊಳ್ಳುತ್ತಾನೆ. ಅವನ ಉದ್ದೇಶ ಕೆಟ್ಟದ್ದನ್ನು ನಾಶಗೊಳಿಸಿ ಒಳ್ಳೆಯದನ್ನು ರಕ್ಷಿಸುವುದು. ಇದೇ ನೆಲೆಯ ಮೇಲೆ ಅತಿಮಾನುಷ ಕತೆಗಳ ಉದ್ದೇಶ ನಿಲ್ಲುತ್ತದೆ.

ಅಂತಹ ಕತೆಗಳಲ್ಲಿ "ರಾಕ್ಷಸನ ಮಗಳು" ಒಂದು. ಇದರಲ್ಲಿ ರಾಜನ ಮಗನಾದ ಗಟ್ಟಿಬೀರ ಬಾಲ್ಯದಲ್ಲಿಯೇ ತನ್ನ ತಂದೆ ತಾಯಿಗಳನ್ನು ಕಳೆದುಕೊಂಡು ಅಜ್ಜಿಯ ಆಶ್ರಯದಲ್ಲಿ ಬೆಳೆದಂತಹವನು. ಆಡಿನ ಹಾಲು ಕುಡಿದು ಬಲಶಾಲಿಯಾಗಿದ್ದ ಕಾರಣದಿಂದ ಅವನನ್ನು ಗಟ್ಟಿಬೀರ ಎಂದು ಕರೆಯುತ್ತಿದ್ದರು. ಅವನು ಎರಡು ಖಂದುಗ (ಮೂರು ಬಂಗಾಲಿ ಮಣ) ದಷ್ಟು ತೂಕದ "ಹಾಣೆ" (ಚಿಣಫಣ ಆಟದ ಕೋಲು) ಯನ್ನು ಅರ್ಧಖಂಡಗದಷ್ಟು ತೂಕದ "ಗೆಡ್ಡೆ"ಯನ್ನು ಮಾಡಿಕೊಂಡು ಹಾಣೆ ಆಟ ಆಡುತ್ತಿದ್ದನು. ಇವನ ಶಕ್ತಿಯ ಬಗ್ಗೆ ಜನರು ಆಶ್ಚರ್ಯಪಟ್ಟುಕೊಂಡು ಮಾತಾಡುತ್ತಿದ್ದರು. ಹೀಗಿರುವಾಗ ಗಟ್ಟಿಬೀರ ಒಮ್ಮೆ ನದಿಯ ದಂಡೆಯ ಮೇಲೆ ಕುಳಿತ ಮೀನುಗಾರನನ್ನು ನೋಡುತ್ತಾನೆ. ಅವನು ಆನೆಯನ್ನು ಗಾಳಕ್ಕೆ ಸಿಕ್ಕಿಸಿ ಮೀನು ಹಿಡಿಯುತ್ತಿದ್ದು, ಆರು ಆನೆಗಳನ್ನು ಸೊಂಟಕ್ಕೆ ಸುತ್ತಿಕೊಂಡಿದ್ದನು. ಅದನ್ನು ಕಂಡ ಗಟ್ಟಿಬೀರ ಆಶ್ಚರ್ಯದಿಂದ ಆರು ಆನೆ ಸುತ್ತಿರುವ "ನಿನ್ನ ಸೊಂಟ ಎಷ್ಟು ದೊಡ್ಡದಿರಬಹುದೆಂದು?" ಕೇಳುತ್ತಾನೆ. ಅವನು "ನನ್ನ ಕಸುವು ಯಾವ ಲೆಕ್ಕ?.... ಎರಡು ಖಂಡಗ ತೂಕದ ಕಬ್ಬಿಣದಿಂದ ಹಾಣೆ ಮಾಡಿಕೊಂಡು ಅರ್ಧ ಖಂಡುಗ ತೂಕದ ಕಬ್ಬಿಣದ ಗಡ್ಡೆ ಮಾಡಿಕೊಂಡು ಹಾಣೆ ಆಟವಾಡುವ ಗಟ್ಟಿಬೀರನ ಕಸುವೆಷ್ಟಿರಬೇಕು?" ಎಂದು ಹೇಳಿದಾಗ ಆ ಗಟ್ಟಿಬೀರ ನಾನೇ ಎಂದು ಪರಿಚಯ ಮಾಡಿಕೊಂಡು ಅಂದಿನ ಅವರಿಬ್ಬರೂ ಸ್ನೇಹಿತರಾಗುತ್ತಾರೆ. ಅವರೊಡನೆ ದಾರಿಯಲ್ಲಿ ಮತ್ತೊಬ್ಬ ಗಾಳಕ್ಕೆ ಆನೆಕಟ್ಟಿ ಮೀನು ಹಿಡಿಯುತ್ತಿದ್ದ ಬಲಶಾಲಿ ಸೇರಿಕೊಳ್ಳುತ್ತಾನೆ.

ಆನೆ ಸಿಕ್ಕಿಸಿದ ಗಾಳದಿಂದ ಒಂದು ಗುಡಿಸಿನಷ್ಟು ದೊಡ್ಡ ಮೀನು ಹಿಡಿದು ಅದನ್ನು ಮಾರಾಟ ಮಾಡಿ ಅವರಿಬ್ಬರೂ ದೇಶಾಂತರ ಹೋಗುತ್ತಾರೆ. ಆಗ ನೂರು ಮೈಲಿಯ ಸಮುದ್ರವನ್ನು ಈಜಿ ಆಚೆಯ ದಡ ಸೇರುತ್ತಾರೆ. ಆ ಸಂದರ್ಭದಲ್ಲಿ ಅಡ್ಡಬಂದ ತಿಮಿಂಗಿಲವನ್ನು ಗಟ್ಟಿಬೀರ ತನ್ನ ಹಾಣೆಯಿಂದ ಹೊಡೆದು ಕೊಂದು ಒಂದು ಕೈಯಲ್ಲಿ ಎಳೆದುಕೊಂಡು ಬರುತ್ತಾನೆ. ಅದನ್ನು ಸುಟ್ಟು ತಿಂದು ಹಸಿವಾರಿಸಿಕೊಳ್ಳಲು ತನ್ನ ಇಬ್ಬರು ಸ್ನೇಹಿತರನ್ನು ಬೆಂಕಿ ತರಲು ಕಳುಹಿಸುತ್ತಾನೆ. ಅಷ್ಟರಲ್ಲಿ ರಾಕ್ಷಸನ ಮಗಳು ಭೂದಂಡಿ ಗಟ್ಟಿಬೀರನನ್ನು ಕಂಡು ತನ್ನನ್ನು ಮದುವೆಯಾಗಲು ಒತ್ತಾಯಿಸುತ್ತಾಳೆ. ಆಗ ಅವನು ನೀನು ರಾಕ್ಷಸ ಸ್ವರೂಪ ಬಿಟ್ಟು ಸಾಧು ಸ್ವಭಾವದವಳಾದರೆ ಮದುವೆಯಾಗುವೆನೆಂದು ಹೇಳುತ್ತಾನೆ. ಅದಕ್ಕೆ ಒಪ್ಪಿ, ಮೊದಲು ತನ್ನ ಸ್ನೇಹಿತರಿಬ್ಬರನ್ನು ಹುಡುಕಿದ ನಂತರ ಮದುವೆಯಾಗುವೆನೆಂದು ಮಾತುಕೊಡುತ್ತಾನೆ. ಅದಕ್ಕೆ ಒಪ್ಪಿದ ಭೂದಂಡಿ ಸ್ತ್ರೀಜಾತಿಯ ಶತ್ರುವಾಗಿದ್ದ ತನ್ನ ತಂದೆ ತುಂಡಾಕನು ತನ್ನ ರಾಜ್ಯದಲ್ಲಿ ಸ್ತ್ರೀಯರನ್ನು ಮತ್ತು ಹೆಣ್ಣುಮಕ್ಕಳನ್ನು ಕೊಲ್ಲುತ್ತಿದ್ದು ಹೆಂಡತಿಯ ಪ್ರೀತಿಯಿಂದ ತನ್ನನ್ನು ಮಾತ್ರ ಉಳಿಸಿದ್ದಾನೆ. ಅವನು ನರಮನುಷ್ಯರನ್ನು ವಾಸನೆಯಿಂದಲೇ

ಕಂಡು ಹಿಡಿದು ದೂರದಿಂದ ಬಂಡೆ ಉರುಳಿಸಿ ಕೊಲ್ಲುತ್ತಾನೆ. ಆದ್ದರಿಂದ ನರಮನುಷ್ಯರ ವಾಸನೆ ಬಾರದಂತೆ ತಡೆಯಲು ಈ ತಿಮಿಂಗಿಲವನ್ನು ಸುಟ್ಟು ತಿನ್ನುತಿರಿ ಎಂದು ಹೇಳಿ, ತಿಮಿಂಗಿಲವನ್ನು ತನ್ನ ಕೋರೆ ಹಲ್ಲಿನಿಂದ ಎರಡು ಭಾಗಮಾಡಿ ಒಂದು ಭಾಗವನ್ನು ಗಟ್ಟಿಬೀರನಿಗೆ ಕೊಟ್ಟು ಕಳುಹಿಸಿ ಉಳಿದ ಅರ್ಧಭಾಗವನ್ನು ತನ್ನಲ್ಲಿಟ್ಟುಕೊಂಡು ತಿನ್ನತೊಡಗಿದಳು.

ತುಂಡಾಕ ರಾಕ್ಷಸನು ಮನುಷ್ಯರ ಹೆಜ್ಜೆ ಗುರುತನ್ನು ಕಂಡು ತನ್ನ ಮಗಳಿಗೆ ನರಮನುಷ್ಯರು ಇಲ್ಲಿಗೆ ಬಂದಿದ್ದರೇ? ಹೇಳು, ಇಲ್ಲದಿದ್ದರೆ ನಿನಗೆ ಯಮಪುರಕ್ಕೆ ಕಳುಹಿಸುತ್ತೇನೆ ಎಂದು ಹೆದರಿಸುತ್ತಾನೆ. ಅವಳು ಮೂರು ಜನ ನರಮನುಷ್ಯರು ಬಂದಿದ್ದು ಅವರನ್ನು ನಾನು ಸುಟ್ಟು ತಿಂದಿದ್ದೇನೆ ಎಂದು ತಿಳಿಸುತ್ತಾಳೆ. ಆಗ ಅವನು ಮರಹತ್ತಿ ಟೊಂಗೆಯ ರಸಹೀರಿ ಮತ್ತಿನ ಗುಂಗಿನಲ್ಲಿರುವಾಗ ಗಟ್ಟಿಬೀರ ಅವನನ್ನು ತನ್ನ ಹಾಣೆಯಿಂದ ಹೊಡೆದು ಸಾಯಿಸುತ್ತಾನೆ. ಅನಂತರ ಅವರೆಲ್ಲಾ ಸಮುದ್ರದಲ್ಲಿ ಈಜಿಕೊಂಡು ಗಟ್ಟಿಬೀರನ ಊರು ಸೇರುತ್ತಾರೆ. ರಾಜನು ಗಟ್ಟಿಬೀರನ ಪರಾಕ್ರಮವನ್ನು ಕಂಡು ಅವನನ್ನು ರಾಜನನ್ನಾಗಿ ಮಾಡಿ ತನ್ನ ಕುಂಟ ಮಗನನ್ನು ಪ್ರಾಧಾನಿಯನ್ನಾಗಿ ಮಾಡುತ್ತಾನೆ.

ಕತೆಯು ಪಾರಂಪರಿಕ ಶೈಲಿಯಲ್ಲಿದೆ. ಕಥಾನಾಯಕ ಪ್ರಾರಂಭದಲ್ಲಿ ತನ್ನ ಸ್ಥಾನಮಾನವನ್ನು ಕಳೆದುಕೊಂಡು ಸಾಮಾನ್ಯನ ಮಟ್ಟಕ್ಕೆ ಇಳಿದರೂ ಅವನಲ್ಲಿದ್ದ ವಿಶೇಷಶಕ್ತಿಯಿಂದ ಕೊನೆಯಲ್ಲಿ ಅವನ ಸ್ಥಾನಮಾನ ಅವನಿಗೆ ಮರುಕಳಿಸುತ್ತದೆ. ಕತೆಯ ಪ್ರಾರಂಭ ಮತ್ತು ಮುಕ್ತಾಯಗಳ ನಡುವೆ ಕಥಾನಾಯಕ ಅತಿಮಾನುಷರೊಡನೆ ಹೋರಾಟಮಾಡಿ ಜಯಗಳಿಸುವುದು ಮಾತ್ರ ಮುಖ್ಯವಾಗದೆ ರಾಕ್ಷಸೀಯ ಸ್ವಭಾವದವಳಾದ ಭೂದಂಡಿಯನ್ನು ಸಾಧು ಸ್ವಭಾವದವಳನ್ನಾಗಿ ಪರಿವರ್ತಿಸುವುದು ಗಮನಾರ್ಹವಾಗಿದೆ. ಕುತೂಹಲ ಕೆರಳಿಸುತ್ತಾ ಸಾಗುವ ಜನಪದ ಕತೆಗಳ ಸಾಮಾನ್ಯ ಲಕ್ಷಣವು ಇದರಲ್ಲಿ ಓದುಗರನ್ನು ಆಕರ್ಷಿಸುತ್ತದೆ. ಈ ಕತೆಯ ಸ್ಟಿತ್ ಥಾಮ್ಸನ್ನರ ಜಿ 510.1ನೇ ವರ್ಗಕ್ಕೆ ಸೇರುವಂತಹದಾಗಿದೆ.

ಅತಿಮಾನುಷರ ಶಕ್ತಿ ಪ್ರದರ್ಶನದ ಫಲಿತಾಂಶವನ್ನು ಪರಿಚಯಿಸುವ ಮತ್ತೊಂದು ಕತೆ "ಸಮುದ್ರದಲ್ಲಿ ಅಲೆಗಳೇಳಲು ಕಾರಣ" ಎಂಬುದು.

ಪ್ರ. ತಿ. ಸೊ.

ಸಮುದ್ರದಲ್ಲಿ ಅಲೆಗಳೇಳಲು ಕಾರಣ

ಜನಪದರು ಪ್ರಕೃತಿಗೆ ಹತ್ತಿರವಾಗಿ ಬದುಕುವಂತಹರು ಅಲ್ಲಿ ನಡೆಯುವ ಬದಲಾವಣೆಯನ್ನು ಆಸಕ್ತಿಯಿಂದ ಗಮನಿಸುವವರು. ಆ ಬದಲಾವಣೆಗೆ ಕಾರಣವಾಗುವದನ್ನು ಕತೆಯ ಮೂಲಕ ತಿಳಿಸುವವರು. ಇದಕ್ಕೊಂದು ಉತ್ತಮ ನಿದರ್ಶನ '' ಸಮುದ್ರದಲ್ಲಿ ಅಲೆಗಳೇಳಲು ಕಾರಣ'' ಎಂಬ ಅತಿಮಾನುಷ ಕತೆ. ನೀರಿನ ಮೇಲೆ ಪರ್ವತದಂತೆ ಬರುವ ಅಲೆಗಳನ್ನು ಕಂಡ ಜನಪದರು ಅದರ ಹಿಂದೆ ದೈತ್ಯಶಕ್ತಿಯ ಕೈವಾಡವಿದೆ ಎಂದು ನಂಬಿ ಕತೆ ಕಟ್ಟುತ್ತಾರೆ . ಅದರಲ್ಲಿ ಕಾಲ್ಪನಿಕ ಘಟನೆಗಳನ್ನು ತುಂಬಿ ಆಸಕ್ತಿ ಕೆರಳಿಸುತ್ತಾರೆ. ಆಶ್ಚರ್ಯ ಮೂಡಿಸುವ ಅವರ ಕಥಾಶೈಲಿ ಓದುಗರನ್ನು ಹೇಗೆ ಸೆರೆಹಿಡಿಯಬಲ್ಲದೆಂಬುದನ್ನು ಗಮನಿಸಬಹುದು.

ಒಂದಾನೊಂದು ಕಾಲದಲ್ಲಿ ಆಕಾಶಕ್ಕೆ ರಾಜನಾಗಿದ್ದ ಇಂದ್ರನೇ ಭೂಮಿಗೂ ರಾಜನಾಗಿದ್ದನು. ಶ್ರೀಮಂತನಾಗಿದ್ದ ಅವನಿಗೆ ಮೋಡಗಳೇ ಅವನ ದನ ಕರುಗಳಾಗಿದ್ದವು. ಆ ಮೋಡಗಳೆಂಬ ದನಕರುಗಳು ಆಕಾಶದಲ್ಲಿ ಸಂತೋಷದಿಂದ ಓಡಾಡುತ್ತ ಭೂಮಿಗೆ ಮಳೆಯನ್ನು ಕೊಡುತ್ತಿದ್ದವು. ಆಗ ನದಿಗಳೆಲ್ಲ ತುಂಬಿ ಹರಿಯುತ್ತಿದ್ದವು. ಭತ್ತ,ಗೋಧಿ, ರಾಗಿಯ ಹೊಲಗದ್ದೆಗಳೆಲ್ಲ ಸಿಹಿ ನೀರು ಕುಡಿದು ಜನರಿಗೆ ಆಹಾರವನ್ನು ಕೊಡುತ್ತಿದ್ದವು ಇದರಿಂದ ಜನರೂ, ದೇವತೆಗಳೂ ಸಂತೋಷದಿಂದಿದ್ದರು.

ಭಾರೀ ಗಾತ್ರದ ಒಂದು ಕರಿಯ ಪರ್ವತವನ್ನೇ ತನ್ನ ಅಭೇದ್ಯ ಕೋಟೆಯನ್ನಾಗಿ ಮಾಡಿಕೊಂಡಿದ್ದ ಭಯಂಕರ ರಾಕ್ಷಸನೊಬ್ಬನಿದ್ದನು. ಅವನ ಹೆಸರು ವೃತ್ರ . ಇವನು ಊರಿನಲ್ಲೆಲ್ಲಾ ಕ್ಷಾಮಡಾಮರಗಳನ್ನು ಉಂಟುಮಾಡುತ್ತಿದ್ದನು. ಉಳಿದವರು ಸಂತೋಷವಾಗಿದ್ದರೆ ಆ ರಾಕ್ಷಸನಿಗೆ ಹೊಟ್ಟೆ ಉರಿ . ಬಹಳ ಕುತಂತ್ರಿಯಾಗಿದ್ದ ಆ ರಾಕ್ಷಸನು ಒಂದು ಸಲ ಇಂದ್ರನ ದನಕರುಗಳಾದ ಮೋಡಗಳನ್ನು ತನ್ನ ಪರ್ವತಕ್ಕೆ ಅಟ್ಟಿಕೊಂಡು ಹೋಗಿ ಅಲ್ಲಿ ಅವುಗಳನ್ನು ಬಂಧಿಸಿಟ್ಟ. ಆಗ ಆಕಾಶದಲ್ಲಿ ಮೋಡಗಳೇ ಇರಲಿಲ್ಲ. ಆದ್ದರಿಂದ ಮಳೆಯೇ ಇರಲಿಲ್ಲ .ಹೊಲಗದ್ದೆಗಳೆಲ್ಲಾ ಮಳೆ ಇಲ್ಲದೇ ಒಣಗಿ ನಿಂತವು. ನದಿಗಳು ಬತ್ತಿ ಹೋದವು. ಜನರಿಗೆ ತಿನ್ನಲು ಆಹಾರ ಇಲ್ಲದಾಯಿತು. ಕುಡಿಯಲು ನೀರಿಲ್ಲದಾಯಿತು. ಇಡೀ ಭೂಮಿಯಲ್ಲಿ ಕ್ಷಾಮ ಆವರಿಸಿ ಬಿಟ್ಟಿತು. ಆಗ ಜನರು ತಮಗೆ ಸಹಾಯ ಮಾಡಬೇಕೆಂದು ಮಂಡಿಯೂರಿ ದೇವರಿಗೆ ಮೊರೆಯಿಟ್ಟರು. ಹಸಿವು, ಬಾಯಾರಿಕೆಗಳಿಂದ ಮಳೆಯನ್ನು ಸುರಿಸಿ ತಮ್ಮನ್ನು ಕಾಪಾಡಬೇಕೆಂದು ಇಂದ್ರನಲ್ಲಿ ಮೊರೆ ಇಟ್ಟರು. ಅವರ ಮೊರೆಯನ್ನು ಕೇಳಿಸಿಕೊಂಡ ಇಂದ್ರ ತನ್ನ ಸಿಂಹಾಸನ ಬಿಟ್ಟು ಮೇಲೆದ್ದ . ಈ ರಾಕ್ಷಸನಿಗೆ ತಕ್ಕ ಪಾಠ ಕಲಿಸುತ್ತೇನೆ ಆತನನ್ನು ಕೊಂದು ಅವನು ಸೆರೆಹಿಡಿದಿರುವ ತನ್ನ ದನಕರುಗಳನ್ನು ತರುತ್ತೇನೆ ಎಂದು ಗುಡುಗಿದ. ಬಲಶಾಲಿಯಾದ ಸೈನ್ಯದೊಡನೆ ವೃತ್ರಾಸುರನಿದ್ದ ಕೋಟೆಗೆ ಮುತ್ತಿಗೆ ಹಾಕಿದ. ಆದರೆ ಇಂದ್ರನಿಗೆ ವೃತ್ರನನ್ನು ಸೋಲಿಸಲು ಸಾಧ್ಯವಾಗಲಿಲ್ಲ. ವೃತ್ರ ನಿಜಕ್ಕೂ ಬಲಿಷ್ಠ ದೈತ್ಯನೇ ಆಗಿದ್ದ. ಇಂದ್ರ ಬಲಿಷ್ಠ ಆನೆಯಾದ ಐರಾವತಕ್ಕೂ ಕೂಡ ವೃತ್ರನ ಕೋಟೆಯ ಬಾಗಿಲುಗಳನ್ನು ಒಡೆಯಲು ಸಾಧ್ಯವಾಗಲಿಲ್ಲ. ವೃತ್ರ ಬೆಟ್ಟದ ತುದಿಯಲ್ಲಿ ಕುಳಿತು ಇಂದ್ರ ಮತ್ತು ಆತನ ಸೈನ್ಯ ತಿಣುಕುತ್ತಿರುವುದನ್ನು ನೋಡಿ ಹಾಸ್ಯ ಮಾಡುತ್ತಿದ್ದ ಅದನ್ನು ನೋಡಿ ಇಂದ್ರನಿಗೆ ಕೋಪ ಉಕ್ಕೇರಿತು ಆದರೆ ಅವನು ಏನೂ ಮಾಡಲು ಆಗದೇ ಹಿಮ್ಮೆಟ್ಟಿದ.

ತನಗಾದ ಅವಮಾನವನ್ನು ತಡೆಯಲಾರದೇ ಇಂದ್ರನು ಬ್ರಹ್ಮನಲ್ಲಿ ಮೊರೆ ಇಟ್ಟ. ನೀನು ಭೂಮಿಗೆ ಹೋಗಿ, ಅಲ್ಲಿ ವಿವೇಕಿಗಳಾದ ಋಷಿಗಳ ಸಹಾಯವನ್ನು ಕೋರು ವೃತ್ರನ ಬಲದ ಗುಟ್ಟನ್ನು ಅವರು ಮಾತ್ರ ತಿಳಿಸಲು ಸಾಧ್ಯ, ಎಂದು ಬ್ರಹ್ಮನು ಇಂದ್ರನಿಗೆ ಹೇಳಿ ಕಳಿಸಿದನು. ಅದರಂತೆ ಇಂದ್ರನು ಭೂಲೋಕಕ್ಕೆ ಬಂದು ವಿವೇಕಶಾಲಿಗಳಾದ ಋಷಿಗಳ ಬಳಿ ಹೋದ ಅವರ ಮುಂದೆ ಇದ್ದ ವಿಷಯವನ್ನು ಹೇಳಿದ. ಅದನ್ನು ಕೇಳಿ ಋಷಿಗಳು ಮೌನವಾಗಿ ಚಿಂತಿಸಲು ತೊಡಗಿದರು. ವೃತ್ರನನ್ನು ಕೊಲ್ಲುವುದು ಸುಲಭವಲ್ಲ ಒಂದೇ ಒಂದು ಅಸ್ತ್ರದಿಂದ ಆತನನ್ನು ಕೊಲ್ಲಲು ಸಾಧ್ಯ ಆ ಅಸ್ತ್ರವೆಂದರೆ ವಜ್ರಾಯುಧ ಎಂದು ಋಷಿಗಳು ತಿಳಿಸಿದರು. ಇಂದ್ರನು ''ವಜ್ರಾಯುಧ ಎಂದರೇನು ? ಅದು ನನಗೆ ಎಲ್ಲಿ ಸಿಗುತ್ತದೆ.'' ಎಂದು ಕೇಳಿದನು. ಋಷಿಗಳು ಅತ್ಯಂತ ದೊಡ್ಡ ತಪಸ್ವಿಯೊಬ್ಬನ ಎಲುಬುಗಳಿಂದ ಮಾತ್ರ ಆ ವಜ್ರಾಯುಧವನ್ನು ಮಾಡಲು ಸಾಧ್ಯ ಎಂದರು. ಋಷಿಗಳ ಮಾತುಗಳನ್ನು ಕೇಳಿ ಜನರು ಕಂಗಾಲಾದರು ಅಂಥ ಅಸ್ತ್ರ ಅವರಿಗೆ ಸಿಕ್ಕುವುದಾದರೂ ಎಲ್ಲಿ? ಯಾವ ಋಷಿಯನ್ನು ''ನಿನ್ನ ಎಲುಬು ಕೊಡು '' ಎಂದು ಕೇಳುವುದು ? ಆಯುಧವಿಲ್ಲದೇ ವೃತ್ರನ ಹತ್ಯೆ ಸಾಧ್ಯವಿಲ್ಲ ಅಂದರೆ ಇನ್ನು ಮಳೆ ಬರುವುದೇ ಇಲ್ಲ ಜನರೆಲ್ಲ ಹಸಿವು ಬಾಯಾರಿಕೆಯಿಂದ ಸಾಯುವುದು ಖಚಿತ ಎಂದು ಎಲ್ಲರೂ ಚಿಂತಿಸತೊಡಗಿದರು. ಆಗ ತೀರಾ ವಯೋವೃದ್ಧರೂ ಜ್ಞಾನವೃದ್ಧರೂ ಆದ ದಧೀಚಿ ಮಹರ್ಷಿಯು, '' ಮಕ್ಕಳೇ ಚಿಂತಿಸಬೇಡಿ ನಾನು ನಿಮಗಾಗಿ ನನ್ನ ಪ್ರಾಣ ಕೊಡುತ್ತೇನೆ. ನೀವು ನನ್ನ ಎಲುಬಿನಿಂದ ವಜ್ರಾಯುಧ ಮಾಡಿಕೊಳ್ಳಬಹುದು. ಈ ಆಯುಧದಿಂದ ಇಂದ್ರ ವೃತ್ರನನ್ನು ಕೊಲ್ಲಬಲ್ಲನು . ಅನಂತರ ಮಳೆ ಸುರಿದು ನೀವು ಸುರಕ್ಷಿತವಾಗಿರುವಿರಿ '' ಎಂದು ಜನರನ್ನು ಸಮಾಧಾನ ಪಡಿಸಿದರು. ಈ ಋಷಿಯ ಒಳ್ಳೆತನವನ್ನು ಕಂಡು ಜನರು ಆತನಿಗೆ ಕೈಯೆತ್ತಿ ನಮಸ್ಕರಿಸಿ ಆತನ ಗುಣಗಾನ ಮಾಡಿದರು.

ದಧೀಚಿಯು ತಾನು ಹೇಳಿದಂತೆಯೇ ಪ್ರಾಣತ್ಯಾಗ ಮಾಡಿದನು. ಆತನ ಸಾವಿನ ನಂತರ ಜನರು ಆತನ ದೇಹವನ್ನು ಸುಟ್ಟು ಎಲುಬುಗಳನ್ನು ತೆಗೆದುಕೊಂಡು ಬಂದರು. ಆ ಎಲುಬುಗಳನ್ನು ತ್ವಷ್ಟೃ ಎನ್ನುವವನ ಬಳಿಗೆ ಒಯ್ದರು. ತ್ವಷ್ಟೃ ದೇವತೆಗಳಿಗೆ ಆಯುಧಗಳನ್ನು ಮಾಡಿಕೊಡುವವನು. ದಧೀಚಿಯ ಎಲುಬುಗಳಿಂದ ತ್ವಷ್ಟೃ ವಜ್ರಾಯುಧ ತಯಾರಿಸಿ ಇಂದ್ರನಿಗೆ ಕೊಟ್ಟ ಅಂದಿನಿಂದ ಇಂದ್ರನ ಆಯುಧ ವಜ್ರಾಯುಧವಾಯಿತು. ಇಂದ್ರ ವಜ್ರಾಯುಧವನ್ನು ಬೀಸಿ ಒಗೆದರಾಯಿತು. ಅದು ಗುರಿ ತಪ್ಪದೇ ಅವನ ಶತ್ರುಗಳನ್ನು ಸದೆ ಬಡಿದು ತಿರುಗಿ ಬಂದು ಇಂದ್ರನ ಕೈ ಸೇರುತ್ತಿತ್ತು. ತ್ವಷ್ಟೃ ಕೊಟ್ಟ ವಜ್ರಾಯುಧವನ್ನು ತೆಗೆದುಕೊಂಡು ವೃತ್ರಾಸುರನ ಜೊತೆ ಹೋರಾಡಲು ಇಂದ್ರನು ಹೊರಟ ಇಂದ್ರನ ಕೈಯಲ್ಲಿನ ವಜ್ರಾಯುಧವನ್ನು ಕಂಡಾಗ ವೃತ್ರನಿಗೆ ಭಯವಾಯಿತು. '' ಓ ವೃತ್ರ ! ಈಗ ನೀನು ನನ್ನ ಜೊತೆ ಹೋರಾಡಲು ಸಿದ್ಧನಾಗು'' ಎಂದು ಇಂದ್ರನು ಗಟ್ಟಿಯಾಗಿ ಕೂಗಿ ಹೇಳಿದ . ಆದರೆ ವೃತ್ರ ಹೆದರಿಕೊಂಡು ತನ್ನ ಕೋಟೆಯಲ್ಲೇ ಅಡಗಿ ಕುಳಿತಿದ್ದ . ಆಗ ಇಂದ್ರನು ವಜ್ರಾಯುಧವನ್ನು ಎಸೆದ ಅದು ಕೋಟೆಯ ಗೋಡೆಯನ್ನು ಛಿದ್ರಗೊಳಿಸಿ ಒಳಹೊಕ್ಕು ವೃತ್ರನನ್ನು ಕೊಂದು ಹಾಕಿತು. ನಂತರ ಇಂದ್ರನ ಸೈನಿಕರು ಕೋಟೆಯೊಳಗೆ ನುಗ್ಗಿ ಮೋಡಗಳನ್ನು ಬಿಡಿಸಿ ತಂದರು. ಅವು ಆಕಾಶ ಸೇರಿ ತೇಲಾಡಲು ಪ್ರಾರಂಭಿಸಿದವು. ಆನಂತರ ಎಂದಿನಂತೆ ಮಳೆ ಬೆಳೆಯಾಗಿ ಜನರು ಸಂತುಷ್ಠರಾಗಿ ಇಂದ್ರನಿಗೆ ಕೈಯೆತ್ತಿ ನಮಸ್ಕರಿಸಿದರು.

ವೃತ್ರನ ಸಾವು ಪ್ರತಿಯೊಬ್ಬ ರಾಕ್ಷಸನ ಎದೆಯಲ್ಲೂ ಹೆದರಿಕೆಯನ್ನುಂಟುಮಾಡಿತು. ಅವರು ದಿಕ್ಕು ದಿಕ್ಕಿಗೆ ಓಡಲು ಪ್ರಾರಂಭಿಸಿದರು. ಆಗ ಇಂದ್ರನ ಸೈನ್ಯವು ಅವರಲ್ಲಿ ಕೆಲವರನ್ನು ಕೊಂದಿತು. ಕೆಲವು ರಾಕ್ಷಸರು ಆಕಾಶಕ್ಕೆ ಓಡಿ ಹೋದಾಗ ದೇವತೆಗಳು ಅವರನ್ನು ಅಲ್ಲಿಂದ ಓಡಿಸಿದರು. ಆಗ ಅವರು ಮತ್ತೆ ಭೂಲೋಕಕ್ಕೆ ಬಂದರು. ಅಲ್ಲಿಯೂ ಇಂದ್ರನ ಸೈನಿಕರು ಅವರನ್ನು ಓಡಿಸಿದರು. ಕೊನೆಗೆ ಆ ರಾಕ್ಷಸರು ಸಮುದ್ರದ ಆಳಕ್ಕೆ ಹೋಗಿ ಅಲ್ಲಿ ಅಡಗಿಕೊಂಡರು. ಅಲ್ಲಿ ತಾವು ಸುರಕ್ಷಿತವಾಗಿರಬಹುದೆಂದು ತಿಳಿದು ಅಂದಿನಿಂದ ಸಮುದ್ರದ ತಳದಲ್ಲಿ ವಾಸ ಮಾಡಲು ಪ್ರಾರಂಭಿಸಿದರು.

ಸಾಮಾನ್ಯವಾಗಿ ರಾಕ್ಷಸರಿಗೆ ದೇವತೆಗಳನ್ನು ಮತ್ತು ಮನುಷ್ಯರನ್ನು ಕಂಡರೆ ದ್ವೇಷ. ಅವರು ತಮಗಾದ ಸೋಲನ್ನು ಮರೆಯಲು ಇಚ್ಛಿಸಲಿಲ್ಲ. ಆಗ ಅವರು ತಮ್ಮ ಕೋಪ ಆರಿಸಿಕೊಳ್ಳಲು ಜೋರಾಗಿ ಕಾಲು ಬಡಿದುಕೊಳ್ಳುತ್ತಿದ್ದರು. ಅದರಿಂದ ಅಲೆಗಳು ಏಳುತ್ತಿದ್ದವು. ಈಗಲೂ ಸಮುದ್ರದಾಳದಲ್ಲಿರುವ ರಾಕ್ಷಸರು ಕೋಪದಿಂದ ಕಾಲು ಹೊಡೆಯುವಾಗ ಅಲೆಗಳು ಏಳುತ್ತವೆ.

ಕತೆಯಲ್ಲಿ ಅತಿಮಾನುಷರಾದ ದೇವತೆ ಮತ್ತು ರಾಕ್ಷಸರ ನಡುವೆ ನಡೆಯುವ ಯುದ್ಧದಲ್ಲಿ ದೇವತೆಗಳ ಗೆಲುವಿಗೆ ಋಷಿಗಳು ಸಹಾಯಕರಾಗುವುದು ಗಮನಾರ್ಹವಾದುದು. ಪೌರಾಣಿಕ ಕತೆಗಳಲ್ಲಿ ಸಾಮಾನ್ಯವಾಗಿ ಋಷಿಗಳು ರಾಕ್ಷಸರ ತೊಂದರೆಯಿಂದ ರಕ್ಷಿಸಲ್ಪಡಲು ದೇವತೆಗಳ ಸಹಾಯವನ್ನು ಪಡೆಯುವುದು ರೂಢಿ ಆದರೆ ಈ ಕಥೆಯ ನಿಯಮ ವಿರುದ್ದವಾಗಿದೆ. ಜನಪದ ಕತೆಗಾರನು ದೇವತೆಗಳನ್ನು ಕಂಡಿಲ್ಲ ಅವನ ಕಣ್ಮನಕ್ಕೆ ಹತ್ತಿರವಾದ ದೈವೀಶಕ್ತಿಯನ್ನು ಪಡೆದ ಮಾನವ ಶ್ರೇಷ್ಠರೆಂದರೆ ಋಷಿಗಳು. ಜನಪದರ ದೃಷ್ಠಿಯಲ್ಲಿ ಅವರು ದೇವತೆಗಳಿಗೂ ಮಾರ್ಗದರ್ಶನ ಮಾಡುವಂತಹ ವಿಶಿಷ್ಟ ಜ್ಞಾನ ಪಡೆದಂತಹವರು.

ಸಮುದ್ರದ ಆಶ್ರಯ ಪಡೆವ ರಾಕ್ಷಸರಲ್ಲಿ ದೇವತೆಗಳ ಬಗ್ಗೆ ಇರುವ ದ್ವೇಷವನ್ನು ಕತೆಗಾರ ಅಲೆಗಳ ಮೂಲಕ ಪರಿಚಯಿಸಿರುವುದು ವಿಶಿಷ್ಟವಾಗಿದೆ. ಅಲೆಗಳ ಗಾತ್ರ, ಅಬ್ಬರವನ್ನು ಗಮನಿಸುವ ಕಡಲಿಗರು ಅದರಲ್ಲಿ ದೈತ್ಯಶಕ್ತಿಯನ್ನು ಕಾಣುತ್ತಾರೆ. ಅವರ ಕಲ್ಪನೆಯಲ್ಲಿ ಅವರು ದೈನಂದಿಕ ಜೀವನದಲ್ಲಿ ಅಲೆಗಳೆದುರು ಹೋರಾಟ ನಡೆಸುತ್ತಿದ್ದ ಅನುಭವವು ಅಂತರ್ಗತಗೊಂಡಿದೆ. ಅತಿಮಾನುಷರಂತೆ ಎದುರಾಗುತ್ತಿದ್ದ ಬೃಹದಾಕಾರದ ಅಲೆಗಳ ಶಕ್ತಿಯ ಕಾರಣವನ್ನು ತಿಳಿಸುವ ಉದ್ದೇಶಕ್ಕಾಗಿಯೇ ಈ ಜನಪದ ಕತೆ ಹುಟ್ಟಿಕೊಂಡಿದೆ. ಅತಿಮಾನುಷ ಕತೆಗಳ ಗುಂಪಿಗೆ ಸೇರುವ ಈ ಕತೆಯ ವಸ್ತು, ತಂತ್ರ ಹಾಗೂ ವಿನ್ಯಾಸಗಳು ಕತೆಗಾರನ ಕಥಾಶಿಲ್ಪದ ಪರಿಣತೆಯನ್ನು ಪರಿಚಯಿಸುತ್ತವೆ.

ಬೊಬ್ಬರ್ಯ ಇದೇ ಲಕ್ಷಣವನ್ನು ಹೊಂದಿರುವ ಮತ್ತೊಂದು ಅತಿಮಾನುಷ ಕಥೆ ತುಳು ಪಾಡ್ದನದಲ್ಲಿ ದೊರೆಯುತ್ತದೆ. ಬೊಬ್ಬರ್ಯ ಭೂತನಿಗೆ ಸಂಬಂಧಿಸಿದ ಈ ಕಥೆಯ ಸಾರಾಂಶ ಹೀಗಿದೆ. ''ಸುಲಿಕಲ್ಲ ಮಾದವ ಬ್ಯಾರಿ ಕಡಲ ಬದಿಯಲ್ಲಿ ಮಡಲಿನ ಚಿಕ್ಕ ಅಂಗಡಿಯೊಂದನ್ನು ಇಟ್ಟುಕೊಂಡು ಬೆಲ್ಲ, ಮೆಣಸು ಮತ್ತು ಉಪ್ಪಿನ ವ್ಯಾಪಾರ ಮಾಡುತ್ತಿದ್ದ. ಆದರೆ ದುರ್ದೈವ ಅವನಿಗೆ ನೆಮ್ಮದಿಯಿಂದ ಬಾಳಲಿಕ್ಕೆ ಬಿಡಲಿಲ್ಲ. ಕಡಲಿನ ಗಂಗಮ್ಮ ದೇವಿ ನೆರೆ ಮತ್ತು ಗಾಳಿಯ ಮೂಲಕ ಅವನ ಮಡಲಿನ ಅಂಗಡಿಯನ್ನು ನೀರು ಪಾಲು ಮಾಡಿದಳು. ಮುಂದೇನು ಮಾಡುವುದು ? ಕುಳಿತುಕೊಂಡು ತಿಂದರೆ ಮಾಡಿದ ಪುಣ್ಯ ನಶಿಸುತ್ತದೆ. ಬೇಡಿ ತಿಂದರೆ ಮೈ ಬೊಜ್ಜು ಬೆಳೆಯುತ್ತದೆ ಎಂದುಕೊಂಡು ತಲೆಯ ಮೇಲೆ ಸಾಮಾನು ಹೊತ್ತುಕೊಂಡು ಮನೆಮನೆಗೆ ಹೋಗಿ ಮಾರಾಟ ಮಾಡತೊಡಗಿದ. ಮಕ್ಕ ಮಕಾಯ ದೇಶಕ್ಕೆ ಹೋಗಿ ಅಲ್ಲಿಂದ ಮಾಲ್ಯಾಯ ದೇಶಕ್ಕೆ ಹೋದ. ಅಲ್ಲಿ ಮುತ್ತು ಸೆಟ್ಟಿ, ರತ್ನ ಸೆಟ್ಟಿ, ವಜ್ರ ಸೆಟ್ಟಿಯೇ ಮೊದಲಾದ ಏಳು ಜನ ಸೆಟ್ಟಿಗಳು ಚಿನ್ನ ರತ್ನಾದಿಗಳ ವ್ಯಾಪಾರ ಮಾಡುತ್ತಿದ್ದರು.

ಅವರಿಗೆ ಒಬ್ಬಳೇ ತಂಗಿ . ಅವಳ ಹೆಸರು ಮುತ್ತು ಸೆಟ್‌ದಿ. ಅವರ ಮನೆಗೆ ಹೋಗಿ ತನ್ನ ಮೂಟೆಯನ್ನೆ ಕೆಳಗಿಳಿಸಿ ವ್ಯಾಪಾರಕ್ಕೆ ಕುಳಿತುಕೊಂಡ. ಆಗ ಅವರು ನೋಡಪ್ಪ ನಮಗೆ ನಿನ್ನ ಉಪ್ಪೂ ಬೇಡ, ಮೆಣಸೂ ಬೇಡ, ನಿನ್ನ ಬೆಲ್ಲವಂತೂ ಬೇಡವೇ ಬೇಡ. ನಾವು ನಮ್ಮ ನಮ್ಮ ತಾಪತ್ರಯಗಳಲ್ಲಿ ಮುಳುಗಿದ್ದೇವೆ. ಎಂದರು. ನಿರಾಶೆಗೊಂಡ ಬ್ಯಾರಿ ಮುಂದೆ ಹೋದರೂ ಅವನ ಕಾಲುಗಳು ಹಿಂದಕ್ಕೆಳೆಯಲ್ಪಟ್ಟವು. ''ನಿಮ್ಮ ಕಷ್ಟಗಳನ್ನು ನನ್ನಲ್ಲಿ ಹೇಳುವಿರಾ ? ನನ್ನಿಂದ ಸಾಧ್ಯವಾದರೆ ಅದನ್ನು ಬಗೆಹರಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ'' ಎಂದ ಬ್ಯಾರಿ. ಅದಕ್ಕೆ ಸೆಟ್ಟಿಗಳು ''ನಮಗೆ ಇರುವವಳು ಒಬ್ಬಳೇ ತಂಗಿ ಆದರೆ ಇಪ್ಪತ್ತೊಂಬತ್ತು ಮದುವೆ ಮಾಡಿಸಿದರೂ ಬೆಳಿಗ್ಗೆ ಮದುವೆಯಾದರೆ ಗಂಡ ರಾತ್ರಿ ಉಳಿಯುವುದಿಲ್ಲ''ಎಂದರು.'' ಓಹೋ ಹೀಗೂ ಉಂಟೆ ?ನಾನು ನಿಮ್ಮ ಕಷ್ಟವನ್ನು ಬಗೆಹರಿಸಿದರೆ ನನಗೆ ಏನು ಕೊಡುವಿರಿ ?'' ಎಂದು ಕೇಳಿದಾಗ ''ನಮ್ಮ ಆಸ್ತಿಗಳಲ್ಲಿ ಅರ್ಧ, ಹಣಕಾಸುಗಳಲ್ಲಿ ಅರ್ಧ, ಎಮ್ಮೆ ಕೋಣ ಬೀಜಗಳಲ್ಲ ಅರ್ಧ, ಹೀಗೆ ಎಲ್ಲದರಲ್ಲೂ ಅರ್ಧ ಭಾಗ ನಿನಗೆ'' ಎಂದರು.'' ನನಗೆ ಅದೆಲ್ಲ ಬೇಡ ಅವಳನ್ನೇ ಕೊಡುವಿರಾ ?'' ಎಂದು ಕೇಳಿದ. ಅಣ್ಣಂದಿರು ಮುಖ ಮುಖ ನೋಡಿಕೊಳ್ಳುತ್ತಿದ್ದಾಗ ಕೊನೆಯ ತಮ್ಮ ಹೇಳಿದ ಒಪ್ಪಿಗೆ ಕೊಡೋಣ ಅವಳು ಸತ್ತರೆ ನಾವೇನು ಮಾಡುವುದು ? ಬದುಕಿ ಉಳಿದರೆ ಅವಳ ಹೊಟ್ಟೆ ನೋಡಲಿಕ್ಕಾಗದಿದ್ದರೂ ಬೆನ್ನನ್ನಾದರೂ ನೋಡಬಹುದಲ್ಲಾ ಎಂದರು. ಬ್ಯಾರಿ ''ನಾನು ಊರಿಗೆ ಹೋಗಿ ಬರುತ್ತೇನೆ. ಬರುವಷ್ಟರಲ್ಲಿ ಒಂದು ಕಲಸಿಗೆ ಅಕ್ಕಿಯ ಹಿಟ್ಟು ಕಲಸಿ ಇಡಿ.,'' ಒಂದು ಮುಗ್ಗಣ್ ಬಟ್ಟೆತುಂಡನ್ನು ತಯಾರು ಮಾಡಿ ಇಡಿ ಎಂದು ಹೇಳಿ ಹೊರಟು ಹೋದ. ಬ್ಯಾರಿ ಮಕ್ಕ ಮಕಿಯದ ಪಳ್ಳಿ (ಮಸೀದಿ) ಗೆ ಹೋದ. ದೇವ ಅಲ್ಲಾನಲ್ಲಿ ಬೇಡಿದ. ನಾನು ಒಂದು ಹೆಣ್ಣನ್ನು ತರುವೆನು. ಮನಸ್ಸಿನಲ್ಲಿ ಸಂಕಲ್ಪ ಮಾಡಿದ್ದು ಪಲಿಸಬೇಕು. ಮಸೀದಿಯ ಬಾಗಿಲು ತೆಗೆಸಿ ಬೊಲ್ಯ ಬೀಬಿ ಫಾತಿಮಾ ಎಂದು ಹೆಸರಿಡುವೆನು. ಸಾವಿರ ಜನರಿಗೆ ತುಪ್ಪವನ್ನು ಬಡಿಸುವೆನು. ಹೀಗೆ ಪ್ರಾರ್ಥಿಸಿ ಮಾಲಾಯ ದೇಶಕ್ಕೆ ಹೋದ. ಅಕ್ಕಿ ಹಿಟ್ಟನಿಂದ ಮನುಷ್ಯ ರೂಪವನ್ನು ಮಾಡಿ ಮುಗ್ಗಣ್ ಬಟ್ಟೆ ಹೊದಿಸಿ ಮುತ್ತು ಸೆಟ್‌ದಿಯ ಪಕ್ಕದಲ್ಲಿ ಮಲಗಿಸಿದ. ತನ್ನ ಕೈಯಲ್ಲಿ ಕೈದು ಎಂಬ ಕತ್ತಿಯನ್ನು ಹಿಡಿದುಕೊಂಡು ಕೋಣೆಯ ಮೂಲೆಯಲ್ಲಿ ಅಡಗಿ ಕುಳಿತ. ಮಧ್ಯರಾತ್ರಿಯಾದಾಗ ಅವಳ ಮೂಗಿನಿಂದ ಬಿಳಿ ಸಂಕಮಾಲ ಎನ್ನುವ ಹಾವು ಹೊರಗೆ ಬಂತು. ಮಾದವ ಬ್ಯಾರಿ ಅದನ್ನು ಅಲ್ಲಿಯೇ ಕಡಿದು ಹಾಕಿದ . ಸೆಟ್ಟಿಗಳನ್ನು ಕರೆದು ತುಳು ಸಂಪ್ರದಾಯ ಪ್ರಕಾರ ಹಾವಿನ ಹೆಣಕ್ಕೆ ಶವಸಂಸ್ಕಾರ ಇತ್ಯಾದಿ ಕ್ರಿಯೆಗಳನ್ನು ಮಾಡಲಿಕ್ಕೆ ಹೇಳಿದ. ತಂಗಿಯನ್ನು ಅವನಿಗೆ ಇಡಬೇಕಾಗುತ್ತದಲ್ಲ ಎಂದು ಸೆಟ್ಟಿಗಳಿಗೆ ಚಿಂತೆ. ಆದರೆ ಕೊಟ್ಟ ಮಾತಿಗೆ ತಪ್ಪಲಿಲ್ಲ. ಒಂದು ವರ್ಷ ಆರು ತಿಂಗಳು ಮಾತ್ರ ಅವಳ ಸಂಗ ಮಾಡಬಾರದು. ಎಂದು ಹೇಳಿ ಹುಡುಗಿಯನ್ನು ಅವನ ಜೊತೆ ಕಳುಹಿಸಿದರು.

ಬ್ಯಾರಿ ಹುಡುಗಿಯನ್ನು ಕರೆದುಕೊಂಡು ಮಕ್ಕ ಮಕಯದ ಮಸೀದಿಗೆ ಬಂದ. ಅಲ್ಲಿ ಮಸೀದಿಯ ಬಾಗಿಲು ತೆಗೆಸಿ ಅವಳನ್ನು ಬೊಲ್ಲ ಬೀಬಿ ಫಾತಿಮಾ ಎಂದು ಹೆಸರಿಟ್ಟ. ಸಾವಿರ ಜನರಿಗೆ ತುಪ್ಪದನ್ನ ಕೊಟ್ಟು ಹರಕೆ ಪೂರೈಸಿದ . ಮನೆಗೆ ಹಿಂದಿರುಗಿ ಬರುವಾಗಲೇ ಇವಳು ಏಳು ತಿಂಗಳು ಗರ್ಭಿಣಿಯಾಗಿರುವುದು ಕಂಡು ಬಂತು. ತಿಂಗಳು ಒಂಬತ್ತು ತುಂಬಿತು. ಒಂಬತ್ತು ತಿಂಗಳು ಒಂಬತ್ತು ದಿನ ಒಂಬತ್ತು ಗಳಿಗೆ ಆದಾಗ ಹೆರಿಗೆ ನೋವು ಕಾಣಿಸಿತು. ಹೊಟ್ಟೆಯೊಳಗಿನ ಶಿಶು ಬ್ಯಾರಿ, ನಾನು ಯಾವ ದಾರಿಯಿಂದ ಬರಲಿ ಎಂದು ಕೇಳಿತು. ಅದಕ್ಕೆ ಭಗವಂತ ಕೊಟ್ಟದಾರಿ ಇದೆಯಲ್ಲ ಆದರಿಂದಲೇ ಬಾ ಎಂದು ಹೇಳಿದಾಗ ಇಲ್ಲ ನಾನು ಹೊಟ್ಟೆಯನ್ನು ಸೀಳಿ ಹೊರಗೆ ಬರುತ್ತೇನೆ ಎಂದಿತು. ಹೊಟ್ಟೆಯನ್ನು ಸೀಳಿ ಬಂದರೆ ತಂದೆಯನ್ನು ಕೊಂದ ಕೆಂಗುಡ ಎನ್ನುವರು ಎಂದು ಬ್ಯಾರಿ ಹೇಳಿದಾಗ ಆ ಮಾಯದ ಮಗು ನಾನು ನರಕಕ್ಕೆ ಚಾಚಲಾರೆ. ಎಂದು ಹೇಳಿ ಬಂಗಾರದ ದುಂಬಿಯಾಗಿ ತಾಯಿಯ ಬಲ ಎದೆಯನ್ನು ಸೀಳಿಕೊಂಡು ಹೊರಗೆ ಬಂತು. ಆ ಜೋಗದ ಮಗುವಿಗೆ ನೆತ್ತಿಯಲ್ಲಿ ಸುರಿಯ , ಬೆನ್ನಿನಲ್ಲಿ ಬ್ರಹ್ಮದೇವರ ಚಿಹ್ನೆ, ಹೊಟ್ಟೆಯಲ್ಲಿ ಬಾಸಿಲಿಂಗ ದೇವರ ಚಿಹ್ನೆ, ಮುಡಿಯಲ್ಲಿ ಕೂಜಿಲಿಂಗ ದೇವರ , ಮೊಣಕಾಲಿನಲ್ಲಿ ಮೊರಂಪುಲಿಂಗ ದೇವರ, ಪಾದದಲ್ಲಿ ಪಾದಲಿಂಗ ದೇವರ ಚಿಹ್ನೆಗಳು ಕಾಣಿಸಿದವು. ಒಂದು ದಿನದಲ್ಲೆ ಮಗು ಒಂದು ವರ್ಷದ ಮಗುವಿನಷ್ಟು ಬೆಳೆಯಿತು. ಬ್ಯಾರಿ ಮಗುವನ್ನು ಮಕ್ಕ ಮಕಯದ ಮಸೀದಿಗೆ ತೆಗೆದುಕೊಂಡು ಹೋಗಿ '' ಬಪ್ಪ'' ಎಂದು ನಾಮಕರಣ ಮಾಡಿದ. ಮಗು ದೊಡ್ಡದಾಗಿ ಆರು ವರ್ಷಗಳಾದಾಗ ಸಹಪಾಠಿಗಳ ಜೊತೆಯಲ್ಲಿ ಆಡತೊಡಗಿತು. ಜಿಬಿಲು ಆಟ ಆಡುವಾಗ ಮಗು ಇತರ ಮಕ್ಕಳನ್ನು ಸೋಲಿಸಿತು. ಸೋತುಹೋದ ಮಕ್ಕಳು '' ತುಳುವೇ ಹಲಸಿನ ಹಣ್ಣಿನ ಬೀಜ ಒಳ್ಳೆಯದು.'' ಸೂಳೆಗೆ ಹುಟ್ಟಿದ ಮಗು ಒಳ್ಳೆಯದು ಎಂದು ಗೇಲಿ ಮಾಡಿದರು. ಮಗು ತಾಯಿಯ ಹತ್ತಿರ ಬಂದು ಅಳುತ್ತಾ ತನ್ನ ತಾಯಿಯ ಹತ್ತಿರ ಪ್ರಶ್ನೆ ಮಾಡಿತು. ಆಗ ತಾಯಿ ''ನೀನು ಮಾಯದ ಮಗು ಬಂಗಾರದ ದುಂಬಿಯಾಗಿ ನನ್ನ ಬಲ ಎದೆಯಿಂದ ಹುಟ್ಟಿ ಬಂದಿದ್ದಿ ''ಎಂದು ಹೇಳಿದಳು.

ಮಗುವಿಗೆ ತನ್ನ ಅತಿಮಾನುಷ ಶಕ್ತಿಯ ಅರಿವಾಗಿ ಅಲ್ಲಿಂದ ಹೊರಟು ಮಕ್ಕ ಮಕಾಯಕ್ಕೆ ಹೋಯಿತು. ಅಲ್ಲಿ ಕೋಟೆಯೊಂದನ್ನು ತನ್ನ ಮಾಯದಿಂದ ನಿರ್ಮಿಸಿ ಅನಂತರ ಅದನ್ನು ಮಾಯಕ ಮಾಡಿ ಹೊರಡುವಾಗ ಪಕ್ಕದ ಮಾಲಾಯ ದೇಶ ಕಂಡು ಬಂತು. ಅಲ್ಲಿ ಬಿಳಿ ಬಣ್ಣದ 'ಸಾಂತಿ' ಗೋಚರಿಸಿತು. ಅದರ ತಲೆ ಹೋಗಿ ಸಾವಿರ ವರ್ಷ , ಬುಡ ಹೋಗಿ ಮುನ್ನೂರು ವರ್ಷ ಆಗಿತ್ತು. ಈ ಮರ ಹಡಗು ಮಾಡಲಿಕ್ಕೆ ಸರಿಯಾಗಿದೆ ಎಂದು ಯೋಚಿಸಿ ಹತ್ತು ಜನ ಮಲೆನಾಡ ಆಚಾರಿಗಳನ್ನು ಹತ್ತು ಜನ ತುಳುನಾಡ ತಚ್ಚರುಗಳನ್ನು ಮರಕಡಿಯಲು

ಹೇಳಿದಾಗ ಅವರು ' ಗಳಿಗೆ ಸಂಖ್ಯೆ' ನೋಡಿ ಶುಭ ಮುಹೂರ್ತದಲ್ಲಿ ಮರ ಕಡಿಯತೊಡಗಿದರು. ಕಡಿಯತೊಡಗಿದಾಗ ಆನೆಯ ಗಾತ್ರದಷ್ಟಾಯಿತು. ಹಡಗಿನ ನಿರ್ಮಾಣವಾಯಿತು. ಅದಕ್ಕೆ 'ದಡ' 'ಕೊಂಬಿಮರ' ಇತ್ಯಾದಿಗಳು ಸಿದ್ದವಾದವು. ಮಂಗಳವಾರ ದಿನ ಸಿಂಹರಾಶಿಯಲ್ಲಿ ಅದಕ್ಕೆ ಕುತ್ತಿ ಪೂಜೆಯೂ ನಡೆಯಿತು. ಆ ಪೂಜೆಗೆ ಸಾವಿರ ಮುಡಿ ''ಹುರಿಯಕ್ಕಿ'' (ಪೊದ್ದೊಲು) ಸಾವಿರ ಕಂದಲ್ ((ಕೊಡ) ನಲ್ಲಿ ''ಕುರುದಿ ನೀರು'' ಇತ್ಯಾದಿಗಳೂ ಬಳಸಲ್ಪಟ್ಟವು. ಹಡಗನ್ನು ಸಮುದ್ರಕ್ಕೆ ತಳ್ಳಲಿಕ್ಕೆ ಅಲ್ಲಿ ಮರಕಲ , ದೇವು ಮರಕಲ ಮುಂತಾದವರನ್ನು ಕರೆಯಲಾಯಿತು. ಕಲಾಶಿಗಳನ್ನು 'ಪಡವಿ' ಗೆ ದೊಡ್ಡ ತಂಡೆಲ ಅಥವಾ ನಾಯಕನಾಗಲಿಕ್ಕೆ ಸಾವಿರ ಒಕ್ಕಲಿನಿಂದ ಒಬ್ಬ ಮರಕಲನನ್ನು ಕರೆಸಿದನು.

ಸಮುದ್ರಕ್ಕೆ ''ಪಡವು ''ಇಳಿಸುವುದಕ್ಕೆ ಮೊದಲು ತಾಯಿಯನ್ನು ಕರೆಸಿ ಇಂದಿನವರೆಗೆ ನಾನು ನಿಮ್ಮ ಮಗನಾಗಿದ್ದೆ ಈಗ 'ಜೋಗ' ಬಿಟ್ಟು 'ಮಾಯ' ಆಗಿದ್ದೇನೆ. ಎಂದು ಹೇಳಿ ಹಡಗನ್ನು ನೀರಿಗೆ ಇಳಿಸಿ ಮುಂದುವರಿದನು. ಹಡಗು ಮುಂದೆ ಹೋಗುತ್ತಾ ಹೋಗುತ್ತಾ ಉಪ್ಪುನೀರಿನ ಕಡಲು , ತಣ್ಣೀರ ಕಡಲು, ಅಲ್ಲಿ ಕಡಲು , ತುಲ್ಲಿ ಕಡಲು, ಬೆಂದರ್ ಕಡಲು, ಚಂಡೀರ್ ಕಡಲು, ಬೆಪ್ಪುರಿ ಕಡಲು, ಬೇವುರಿ ಕಡಲು, ಇತ್ಯಾದಿ ಏಳು ಸಮುದ್ರ ದಾಟಿತು. ಸಮುದ್ರದ ಅಧಿದೇವತೆಯಾದ ಸಿರಿ ಗಂಗಮ್ಮನಿಗೆ ಇವನ ಅಲೌಕಿಕ ಶಕ್ತಿಯನ್ನು ನೋಡಿ ಮತ್ಸರವುಂಟಾಯಿತು. ಅವಳು ಕತ್ತರಿಗಾಳಿ. ಕುಂಕುಮದ ಹನಿ ನೀರಿನ ಮಳೆ ಮುಂತಾದವುಗಳನ್ನು ಕಳುಹಿಸಿದಳು. ಹಡಗಿನ ಕೊಂಬಿಮರ ಮುರಿಯಿತು. ಕೋಪಗೊಂಡ ಬೊಬ್ಬರ್ಯ ಹಡಗಿನ ಕಲಾಸಿಗಳನ್ನೆಲ್ಲ ಮಾಯಾಕದಿಂದ ಮರೆಮಾಡಿ ತಾನೊಬ್ಬನೇ ಹೊರಟ . ಹಡಗಿ ಮರವನ್ನು ಹಿಡಿದುಕೊಂಡು ಮೂಲೂರಿನ ಬಳಿ ದಡ ಸೇರಿದ ಈ ಹಡಗನ್ನು ನೋಡಿ ಸಾವಿರ ಸಂಖ್ಯೆಯಲ್ಲಿ ಜನ ಸೇರಿದರು. ಇದು ನಮ್ಮ ತಾತ ಮುತ್ತಾತನ ಕಾಲದ ಹಡಗೇ ಇರಬೇಕು. ಅವರು ಆ ಕಾಲದಲ್ಲಿ ಚಿನ್ನ ಬೆಳ್ಳಿ ತುಂಬಿಸಿ ಈ ಹಡಗನ್ನು ನಮ್ಮಲ್ಲಿಗೆ ಕಳುಹಿಸಿರಬೇಕು ಎಂದುಕೊಂಡರು. ನಾವು ಈಗ ಇದನ್ನು ' ಒಯ್ಯ ಕಯ್ಯ' ಎಂದು ದಡಕ್ಕೆ ಎಳೆದು ಹಾಕಬೇಕು ಎಂದು ಪ್ರಶ್ನಿಸಿದರು. ಆದರೆ ಅವರು ಗೇಣುದ್ದ ನೀರಿಗೆ ಇಳಿಯುವಾಗ ಹಡಗು ಆಳುದ್ದ ನೀರಿಗೆ ಸರಿಯಿತು. ಕಣ್ಣಿಗೆ ಅದು ಕಾಣಿಸಿಕೊಂಡರೂ ಕೈಗೆ ಸಿಕ್ಕದಂತಾಯ್ತು . ಮೂಲೂರಿನ ಮುನ್ನೂರು ಮಂದಿಗಳೂ ಕಾಪುವಿನ ಸಾವಿರ ಮಂದಿಗಳೂ ನಾಳೆ ಬರೋಣ ಎಂದುಕೊಂಡು ಹಿಂದಿರುಗಿದರು ಹಡಗು ಕಾಪುವಿನ 'ಗರ್ಗಲ್ಲ ಕೋಟೆ'ಯ ಹತ್ತಿರ ಬಂತು. ಅಲ್ಲಿ ಹಡಗನ್ನು ಮಾಯಕ ಮಾಡಿ ಆತ ಬೊಬ್ಬರ್ಯ ದೈವನಾದ.

ಅಂದು ರಾತ್ರಿ ಬೊಬ್ಬರ್ಯ ಮೂಲೂರಿನ ಅಯ್ಯಂಗಲ ಕಟ್ಟೆಯಲ್ಲಿ ಕುಳಿತು ಒಡ್ಡೋಲಗ ನಡೆಸಿದ. ಮರುದಿನ ಬೆಳಿಗ್ಗೆ ಅಂಗದರ ಪೊಂಗದರ ಎಂಬ ಬೈದ್ಯ 'ಮೂರ್ತೆಗೆ ಅಂಡೆ ತರ್ಕತ್ತಿ' ಹಿಡಿದುಕೊಂಡು ಬರುವಾಗ ಬೊಬ್ಬರ್ಯನನ್ನು ನೋಡಿದ. ಹೊಸ ದೈವಕ್ಕೆ ವಂದಿಸಿ ಅಯ್ಯಂಗಲ ದೈವ ಬಂದಿದೆ ಎಂದು ಎಣಿಸಿದ. ಅದಕ್ಕೆ ತಾನು ಬೊಬ್ಬರ್ಯ ದೈವವೆಂದೂ ತನ್ನನ್ನು ನೋಡಿದ ವಿಚಾರ ಬೇರೆಯವರಿಗೆ ತಿಳಿಸಬಾರದೆಂದೂ ಯಾವಾಗಲೂ ಬಿಂದು ಬಿಂದುವಾಗಿ ಹರಿದು ಬೀಳುವ ಕಳ್ಳು ಆ ದಿನ ಧಾರಾಕಾರವಾಗಿ ಪ್ರವಹಿಸುವಂತೆ ತಾನು ಅನುಗ್ರಹಿಸುತ್ತೇನೆಂದೂ ಅಭಯ ಕೊಟ್ಟ. ಆದರೆ ಬೈದ್ಯನ ಹೆಂಡತಿ ಕುಜ್ಞ ಬೈದ್ಯರಿಗೆ ಈ ವಿಷಯ ತಿಳಿಸಲೇಬಾರದು ಎಂದು ಕಟ್ಟಾಜ್ಞೆಯಿಟ್ಟ. ಆ ದಿನ ಬೊಬ್ಬರ್ಯನ ಅನುಗ್ರಹದಂತೆ ಬೈದ್ಯನಿಗೆ ಬೇಕಾದಷ್ಟು ಮೂರ್ತೆ ಸಿಕ್ಕಿತು. ಬೈದ್ಯನಿಗೆ ಮೂರ್ತೆ ಕೊಯ್ದು ಕೊಯ್ದು ಸಾಕಾಯಿತು. ಹೆಂಡತಿಗೆ ಅದನ್ನು ಮಾರಿ ಮಾರಿ ಸಾಕಾಯಿತು. ಆದರೆ ಇದರ ಗುಟ್ಟು ಏನಾಗಿರಬಹುದು ಎಂಬ ಕುತೂಹಲ ಹೆಂಡತಿ ಕುಜ್ಞಗೆ ಮರುದಿನ ಅವಳು , ಇದರ ಗುಟ್ಟು ತಾವು ಹೇಳದಿದ್ದರೆ ನೀವು ನನ್ನ ಗಂಡನಲ್ಲ , ನಾನು ನಿಮ್ಮ ಹೆಂಡತಿಯೂ ಅಲ್ಲ, ಎಂದು ಗಂಡನೊಡನೆ ಜಗಳವಾಡಿದಳು. ಬೈದ್ಯ, ಬೊಬ್ಬರ್ಯ ದೈವವನ್ನು ಕಂಡ ವಿಚಾರ ಬಾಯಿಬಿಟ್ಟ.

ಮರುದಿನ ಮೂರ್ತೆಗೆ ಹೋದಾಗ ಬೈದ್ಯನಿಗೆ ಏನೂ ಸಿಕ್ಕಲಿಲ್ಲ ತನ್ನ ತಪ್ಪಿನ ಅರಿವಾಗಿ ನಿರಾಶೆಯಿಂದ ಅಂಡೆ ಮತ್ತು ತರ್ಕತ್ತಿ ತೊಳೆಯಲು ಅಯ್ಯಂಗಲ ಕಟ್ಟೆಯ ಹತ್ತಿರದ ತಾವರೆ ಕೊಳಕ್ಕಿಳಿದ ಇಳಿದ ಬೈದ್ಯನನ್ನು ಬೊಬ್ಬರ್ಯ ನೀರಿನಲ್ಲಿ ಮುಳುಗಿಸಿಟ್ಟ. ಗಂಡ ಬಾರದಿದ್ದುದನ್ನು ಕಂಡು ಕುಜ್ಞ ಬೈದ್ಯದಿ ದುಃಖಿತಳಾಗಿ ಅವನನ್ನು ಹುಡುಕಿಕೊಂಡು ತಾವರೆ ಕೊಳದ ದಾರಿಯಾಗಿ ಬಂದಳು. ಕೆರೆಗೆ ಇಳಿದ ಹೆಜ್ಜೆ ಕಾಣಿಸಿತು. ಆದರೆ ಮೇಲೆ ಬಂದ ಹೆಜ್ಜೆ ಕಾಣಲಿಲ್ಲ.ಕಾಪಿನ ಸಾವಿರ ಮಂದಿಗಳನ್ನು ಮೂಲೂರಿನ ಮುನ್ನೂರಾಳುಗಳನ್ನು ಕೂಡಿಸಿ ಹುಡುಕಾಡಿಸಿದಳು. ಬೈದ್ಯನ ತಲೆಯ ಮುಟ್ಟಾಲೆ ಮಾತ್ರ ಸಿಕ್ಕಿತು. ದೇವರಲ್ಲಿ ಮೊರೆ ಇಟ್ಟಳು. ದೇವರಿಗೆ ದೇವಸ್ಥಾನ ಕಟ್ಟಿಸುತ್ತೇನೆ ಭೂತಕ್ಕೆ ಗುಂಡ ಮಾಡ ಕಟ್ಟಿಸುತ್ತೇನೆ. ಎಂದು ಹೇಳುತ್ತಿರುವಾಗ, ಹೇಳಿದ ನಾಲಗೆ ದೊಂಡೆಯೊಳಗೆ ಹೋಗುವ ಮೊದಲೇ ಬೈದ್ಯ ನೀರಿನಿಂದ ಮೇಲಕ್ಕೆ ಬಂದ. ಜೋಯಿಸರ ಹತ್ತಿರ ನಿಮಿತ್ತ ಕೇಳಿದಾಗ ಹೊಸ ದೈವವೊಂದು ಅಲ್ಲಿಗೆ ಬಂದಿದೆ ಅದಕ್ಕೆ ಗುಡಿಮಾಡ ಕಟ್ಟಬೇಕೆಂದು ತೋರಿಬಂತು. ಹಾಗೆಯೇ ಗುಡಿ ಕಟ್ಟಿಸಿದಳು. ನೇಮ ವಿಜೃಂಭಣೆಯಿಂದ ನಡೆಯಿತು. ಬೊಬ್ಬರ್ಯ ಅಲ್ಲಿ ನೆಲೆಯಾದ . ಆದರೆ ತೆಂಕು ದಿಕ್ಕಿಗೆ ಮುಖ ಮಾಡಿ ನೋಡಿದಾಗ ಅಲ್ಲಿ ಎರ್ಮಾಳು ದೇವಸ್ಥಾನದ ಜನಾರ್ಧನ ದೇವರು ಕಾಣಿಸಿಕೊಂಡರು. ನಿನ್ನ ಮೋಹದ ಪಟ್ಟಣದಲ್ಲಿ ನನಗೂ ಒಂದು ಜಾಗ ಕೊಡು ಎಂದು ಕೇಳಿ ಅಲ್ಲಿಯೂ ಒಂದು ಗುಡಿ ಕಟ್ಟಿಸಿಕೊಂಡು ಕಾಲಕಾಲದ ನೇಮ ನಡಾವಳಿಗಳನ್ನು

ಪಡೆದ. ಅಲ್ಲಿಂದ ಮುಂದೆ ನೋಡಿದಾಗ ಕಾಡು ಪಟ್ಟಣ , ನಾಡು ಪಟ್ಟಣ ಕಾಣಸಿಕ್ಕಿತು. ಮಾಲಿಂಗ ದೇವರಿಂದಲೂ ಒಂದು ಸಣ್ಣಗಿರುವ ಜಾಗ ಪಡೆದು ಅಲ್ಲಿಯೇ ನೆಲೆಸಿದ.

ಅಂದು ಪವಾಡದಿಂದ ಪ್ರಸಿದ್ಧತೆ ಪಡೆದ ಬೊಬ್ಬರ್ಯ ತನ್ನ ಮಹಿಮೆಯನ್ನು ಇಂದಿಗೂ ಉಳಿಸಿಕೊಂಡಿದ್ದಾನೆ. ಮೊಗವೀರರು ಬೊಬ್ಬರ್ಯನನ್ನು ತನ್ನ ಕುಲದೇವರೆಂದು ನಂಬಿರುವುದರಿಂದ ಅದಕ್ಕೆ ಕೋಲ, ನೇಮ, ತಂಬಿಲಗಳನ್ನು ಅರ್ಪಿಸಿ ತೃಪ್ತಿಪಡಿಸುತ್ತಾರೆ. ಮೀನು ಹಿಡಿಯಲು ಹೋಗುವಾಗ ತಮಗೆ ಯಾವ ತೊಂದರೆಯಾಗಬಾರದೆಂದು ಹಾಗೂ ಹೆಚ್ಚು ಮೀನು ಸಿಗಲೆಂದು ಹರಕೆ ಹೊರುತ್ತಾರೆ. ಮುಸ್ಲಿಂ ವೀರ ತನ್ನ ಪವಾಡದ ಮೂಲಕ ಹಿಂದೂ ಸಮಾಜದಲ್ಲಿ ಸ್ಥಾನ ಪಡೆದು ಹಿಂದು ಮುಸ್ಲಿಮರ ಬಾಂಧವ್ಯಕ್ಕೆ ದಾರಿ ಮಾಡಿದ್ದಾನೆ. ಕಥೆಯಲ್ಲಿ ಏಳು ಸಮುದ್ರಗಳಾವವು ಎಂಬುದನ್ನು ತಿಳಿಸಿರುವುದು ಗಮನಾರ್ಹವಾದುದು. ಕಥನ ಗೀತೆಗಳಲ್ಲಿ ಬೊಬ್ಬರ್ಯನ ಗೀತೆಯ ಉಲ್ಲೇಖವಿರುವುದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬಹುದು.

ಸಾಮಾನ್ಯವಾಗಿ ಅತಿಮಾನುಷ ಸಮುದ್ರ ಕಥೆಗಳಲ್ಲಿ ಅತಿಮಾನುಷರು ಮತ್ತು ಕಥಾನಾಯಕರ ನಡುವೆ ಹೋರಾಟ ನಡೆದು ಕಥಾನಾಯಕನನ್ನು ಯಶಸ್ವಿಗೊಳಿಸುವುದು ಮುಖ್ಯವಾಗಿದೆ. ಕಥೆಯ ಪ್ರಾರಂಭ ಆಶ್ಚರ್ಯ ಮೂಡಿಸುವಂತಿದ್ದು ಅದು ಮುಂದುವರಿಯುತ್ತಾ ಹೋದಂತೆ ಕುತೂಹಲ ಕೆರಳಿಸುತ್ತಾ ಹೋಗುತ್ತದೆ. ಕಾಲ್ಪನಿಕ ಸನ್ನಿವೇಶಗಳು ಕಥೆಯಲ್ಲಿ ಪ್ರಧಾನವಾಗಿ ಕಾಣಿಸಿಕೊಳ್ಳುತ್ತವೆ. ಸಮುದ್ರದ ಒಂದು ದಡದಲ್ಲಿ ಕಥಾನಾಯಕನಿರುವುದು ಮತ್ತೊಂದು ದಡದಲ್ಲಿ ಅತಿಮಾನುಷರಿರುವುದನ್ನು ಈ ಕಥೆಗಳಲ್ಲಿ ಸಾಮಾನ್ಯವಾಗಿದೆ.

ಕತೆಯಲ್ಲಿ ಬರುವ ಉಪ್ಪು ನೀರ ಕಡಲು, ತಣ್ಣೀರ ಕಡಲು, ಅಲ್ಲಿ ಕಡಲು, ತುಲ್ಲಿ ಕಡಲು, ಬೆಂದರ್ ಚಂಡೀರ್ ಕಡಲು, ಬೇವುರಿ ಕಡಲು, ಮೊದಲಾದವು ಕಡಲಿಗರು ಕಡಲಿನ ಗುಣಲಕ್ಷಣಕ್ಕನುಸಾರವಾಗಿ ಕಡಲನ್ನು ವಿಭಾಗಿಸಿಕೊಂಡು ಗುರುತಿಸಲು ಸುಲಭವಾಗುವಂತೆ ಮಾಡಿಕೊಂಡಿರುವುದು ಕಂಡುಬರುತ್ತದೆ. ತುಳು ಭಾಷೆಯ ಹಲವಾರು ಪದಗಳು ಕನ್ನಡದಲ್ಲಿ ತನ್ನತನವನ್ನುಳಿಸಿಕೊಂಡಿರುವುದು ಕಥೆಯಲ್ಲಿ ಕಾಣುತ್ತದೆ. ತುಳುನಾಡಿನ ಸಂಸ್ಕೃತಿಯಲ್ಲೊಂದಾದ ಭೂತಾರಾಧನೆಯ ಸಂಪ್ರದಾಯವನ್ನು ಪರಿಚಯಿಸುವ ಉದ್ದೇಶವನ್ನು ಈ ಕಥೆ ಹೊಂದಿದೆ. ಸ್ಟಿತ್ ಥಾಮ್ಸನ್ನರ ಎಫ್ ೪೦೬ ನೇ ವರ್ಗಕ್ಕೆ ಸೇರುವ ಬೊಬ್ಬರ್ಯನ ಕಥೆಯು ತುಳುನಾಡಿನಲ್ಲಿ ಇಂದಿಗೂ ಪ್ರಸಿದ್ದತೆ ಪಡೆದಿರುವ ಬೊಬ್ಬರ್ಯನ ಪವಾಡವನ್ನು ತಿಳಿಸಿ ಭಕ್ತರನ್ನು ಆಕರ್ಷಿಸುವ ಆಶಯವನ್ನು ಹೊಂದಿದೆ.

ನೀತಿ ಕತೆಗಳು

ಜನಪದರ ಸಮಾಜದಲ್ಲಿ ನೀತಿಗೆಟ್ಟವನಿಗೆ ಬೆಲೆಯಿಲ್ಲ. ಹಣಕ್ಕಿಂತ ಗುಣವೇ ಮನುಷ್ಯನ ಸಂಪತ್ತು. ಗುಣಶಾಲಿಗಳನ್ನು ಮಾತ್ರ ಗೌರವಿಸುವ ಅವರ ಸಾಮಾಜಿಕ ವ್ಯವಸ್ಥೆ ಮಾನವೀಯ ಮೌಲ್ಯಗಳ ರಕ್ಷಣೆಯ ಉದ್ದೇಶವನ್ನು ಹೊಂದಿರುವಂತಹದು. ಇಂತಹ ಸಮಾಜದಲ್ಲಿ ನೀತಿಯ ನೆಲೆಗಟ್ಟನ್ನು ಭದ್ರಗೊಳಿಸುವ ಸಲುವಾಗಿ ಜನಪದರು ನೀತಿ ಕಥೆಗಳನ್ನು ಕಟ್ಟಿ ಜನರಿಗೆ ನೈತಿಕತೆಯ ಮಹತ್ವದ ಪರಿಚಯ ಮಾಡಿದರು. ಅನೈತಿಕವಾಗಿ ನಡೆಯುವವರ ಗತಿ ಏನಾಗುತ್ತದೆಂಬುದನ್ನು ಕತೆಗಳ ಮೂಲಕ ತಿಳಿಸಿ ಕೆಟ್ಟ ಮಾರ್ಗ ಹಿಡಿಯುವವರನ್ನು ಸರಿಯಾದ ಮಾರ್ಗದೆಡೆಗೆ ಕೊಂಡೊಯ್ದರು. ಈ ಕಾರಣದಿಂದ ನೀತಿ ಪ್ರಧಾನ ಕತೆಗಳು ಜನಪದ ಸಮಾಜದಲ್ಲಿ ಪವಿತ್ರತೆ ಕಾಪಾಡುವ ಸಲುವಾಗಿ ಹುಟ್ಟಿಕೊಂಡವು. ಅಂತವುಗಳಲ್ಲಿ ಸಮುದ್ರ ಸಂಬಂಧಿ ನೀತಿ ಕತೆಗಳನ್ನು ಮಾತ್ರ ಇಲ್ಲಿ ಗಮನಿಸಲಾಗಿದೆ.

ಜನಪದರು ಕತೆಗಳನ್ನು ರಚಿಸಲು ಇಟ್ಟುಕೊಂಡಿದ್ದ ಉದ್ದೇಶಗಳಲ್ಲಿ ಸಮಾಜವನ್ನು ಸರಿಯಾದ ಮಾರ್ಗದಲ್ಲಿ ಕೊಂಡೊಯ್ಯುವುದು ಒಂದಾಗಿತ್ತು. ಅವರಿಗೆ ಮನುಷ್ಯ ನೀತಿವಂತನಾದಷ್ಟೂ ಮಹಾತ್ಮನ ಮಟ್ಟಕ್ಕೆ ಮುಟ್ಟಬಲ್ಲನೆಂಬುದು ಚೆನ್ನಾಗಿ ತಿಳಿದಿತ್ತು. ಈ ಕಾರಣದಿಂದಲೇ ಅವರು ಕಥೆಗಳ ಮೂಲಕ ಮಾನವನನ್ನು ತಿದ್ದಿ ನೀತಿಯೆಡೆಗೆ ಕೊಂಡೊಯ್ಯಲು ಪ್ರಯತ್ನಿಸಿದರು.

ಸಮುದ್ರದ ಮದುವೆ ಅಧಿಕಾರ ಮತ್ತು ಜ್ಞಾನ ಇವೆರಡು ಮಾನವನನ್ನು ತಾನು ಎಲ್ಲರಿಗಿಂತಲೂ ಶ್ರೇಷ್ಠವೆಂಬ ಭಾವನೆಯನ್ನು ತುಂಬುತ್ತವೆ. ಅಂತಹ ಸಂದರ್ಭದಲ್ಲಿ ಅವನ ಅಧಿಕಾರವು ಹೇಗೆ ಮುರಿಯಲ್ಪಡುತ್ತದೆ. ಎಂಬುದನ್ನು '' ಸಮುದ್ರದ ಮದುವೆ '' ಎಂಬ ಕತೆ ತಿಳಿಸುತ್ತದೆ. ಒಂದೂರಲ್ಲಿದ್ದ ರಾಜನು ತನ್ನ ಜ್ಞಾನದ ಬಲದಿಂದ ಉಳಿದ ರಾಜರುಗಳನ್ನು ಸೋಲಿಸುವ ಕಾರಣದಿಂದ ಸುತ್ತ ಮುತ್ತಲಿನ ರಾಜರುಗಳಿಗೆ ನಮ್ಮಲ್ಲಿ ಸಮುದ್ರದ ಮದುವೆ ನಡೆಯಲಿದೆ ನಿಮ್ಮ ನಿಮ್ಮ ರಾಜ್ಯದಲ್ಲಿ ಹರಿವ ನದಿಗಳನ್ನು ಕಳುಹಿಸಿಕೊಡಬೇಕೆಂದು ಪತ್ರ ಬರೆದ. ಅದಕ್ಕೆ ಎಲ್ಲ ರಾಜರು ಆಶ್ಚರ್ಯಗೊಂಡು ಏನು ಮಾಡಬೇಕೆಂದು ಯೋಚಿಸಲು ತೊಡಗಿದರು. ಕೊನೆಗೆ ಒಬ್ಬ ಸೇನಾಪತಿ ತನ್ನ ರಾಜನಿಗೆ ಹೀಗೆ ಉತ್ತರ ಬರೆಯಲು ಸೂಚಿಸಿದನು. '' ಮಹಾಪ್ರಭು ತಮ್ಮ ಅಪ್ಪಣೆಯಂತೆ ನಮ್ಮ ರಾಜ್ಯದ ನದಿಗಳನ್ನು ಕಳುಹಿಸಲು ಒಪ್ಪಿದ್ದೇವೆ, ಆದರೆ ಅವುಗಳನ್ನು ಕರೆದೊಯ್ಯಲು ನಿಮ್ಮ ರಾಜ್ಯದ ಬಾವಿಗಳನ್ನು ಕಳುಹಿಸಿ ಕೊಡಿ '' ಎಂದು ಉತ್ತರ ಬರೆದು ಈ ಸಲಹೆಯನ್ನು ನಮ್ಮ ಸೇನಾಪತಿ ನನಗೆ ನೀಡಿದ ಎಂದು ಕೆಳಗಡೆ ಬರೆದ

ಈ ಉತ್ತರವನ್ನೋದಿದ ರಾಜನು ತನಗಿಂತ ಬುದ್ಧಿವಂತರು ಇದ್ದಾರೆಂದು ತಿಳಿದು ನಿರಹಾಂಕಾರಿಯಾದನು.

ಈ ಕಥೆಯು ಮರಕ್ಕಿಂತ ಮರ ದೊಡ್ಡದಿರುತ್ತದೆ ಎಂಬ ನೀತಿಯನ್ನು ತಿಳಿಸುವ ಉದ್ದೇಶವನ್ನು ಹೊಂದಿದ್ದು ರಾಜನಾದ ಪಕ್ಷಕ್ಕೆ ಆತ ತನಗಿಂತ ದೊಡ್ಡ ಜ್ಞಾನಿ ಬೇರಾರೂ ಇಲ್ಲವೆಂದು ತಿಳಿಯುವುದು ಆತನ ಮೂರ್ಖತನ . ಜ್ಞಾನ, ಪ್ರಯತ್ನ ಪಟ್ಟವನ ಸೊತ್ತು ಎಂಬ ಮಾರ್ಮಿಕ ಉಪದೇಶವನ್ನು ಸಾರುತ್ತದೆ. ಇಲ್ಲಿ ಸಾಮಾನ್ಯನಾದ ಸೇನಾಪತಿಯ ಜ್ಞಾನ ರಾಜನ ಜ್ಞಾನವನ್ನು ಸೋಲಿಸುವುದು ಅರ್ಥಪೂರ್ಣವಾಗಿದೆ.

ಯಾರನ್ನೇ ಆಗಲಿ ಸಮುದ್ರದಲ್ಲಿ ಸೇತುವೆ ಕಟ್ಟಿದ ಅಳಿಲು ಕನಿಷ್ಟರೆಂದು ಭಾವಿಸುವುದು ತಪ್ಪು. ಕೆಲವು ಸಂದರ್ಭಗಳಲ್ಲಿ ಕನಿಷ್ಠರಲ್ಲೂ ಶ್ರೇಷ್ಠತನವನ್ನು ಕಾಣಬಹುದು ಎಂಬ ಅಂತರಾರ್ಥವನ್ನು ಹೊರಹೊಮ್ಮಿಸುವ ಮತ್ತೊಂದು ನೀತಿಕಥೆ ''ಸಮುದ್ರದಲ್ಲಿ ಸೇತುವೆ ಕಟ್ಟಿದ ಅಳಿಲು'' ಎಂಬುದು. ಇದರಲ್ಲಿ ರಾಮಾಯಣದ ನಾಯಕ ನಾಯಕಿಯರನ್ನು ಕತೆಗಾರ ಬಳಸಿಕೊಂಡಿದ್ದಾನೆ. ರಾಮನ ಪ್ರಯತ್ನಕ್ಕೆ ನೆರವಾದ ಅಳಿಲು ಆತನ ಸೇವಕರಾದ ಕಪಿಗಳಿಗಿಂತ ಶ್ರೇಷ್ಠವೆನಿಸಿಕೊಳ್ಳುವುದನ್ನು ತಿಳಿಸುವುದರ ಮೂಲಕ ದೇಹಕ್ಕಿಂತ ಮನಸ್ಸು ಬಹಳ ಮುಖ್ಯ. ದೇಹಕ್ಕೆ ಗೌರವ ತಂದು ಕೊಡುವ ಕೆಲಸದ ಬಗ್ಗೆ ನಿರ್ಧಾರ ಕೈಗೊಳ್ಳುವಂತಹದು ಮನಸ್ಸು . ಎಂಬ ಧ್ವನಿಯನ್ನು ಅದು ಅಭಿವ್ಯಕ್ತಪಡಿಸುತ್ತದೆ. ಕಥೆಯ ವಿವರವೇನೆಂದರೆ, ಒಮ್ಮೆ ಸೀತೆಯನ್ನು ಹುಡುಕುತ್ತಾ ರಾಮಲಕ್ಷ್ಮಣರು ದಂಡಕಾರಣ್ಯದಲ್ಲಿ ನಡೆದು ಹೋಗುತ್ತಿದ್ದರು. ಅವರು ನೀಲಪರ್ವತವನ್ನು ತಲುಪಿದಾಗ ವಾನರ ರಾಜನಾದ ಸುಗ್ರೀವ ಅಲ್ಲಿ ವಾಸವಾಗಿದ್ದ. ರಾಮಲಕ್ಷ್ಮಣರನ್ನು ಅವನು ಕಂಡು, ಬಂದ ವಿಷಯವೇನೆಂದು ಕೇಳಿದನು. ಅವರು ತಾವು ಸೀತೆಯನ್ನು ಹುಡುಕಿಕೊಂಡು ಬಂದೆವೆಂದು ಅವರು ಹೇಳಿದಾಗ ಸುಗ್ರೀವನು '' ಲಂಕೆಯ ದೊರೆ ರಾವಣನು ತನ್ನ ಪುಷ್ಪಕ ವಿಮಾನದಲ್ಲಿ ಸುಂದರ ಸ್ತ್ರೀ ಒಬ್ಬಳನ್ನು ಕರೆದೊಯ್ಯುತ್ತಿದ್ದನು ಅದನ್ನು ನಾ ನೋಡಿದೆ. ಪುಷ್ಪಕವಿಮಾನದಲ್ಲಿದ್ದ ಆ ಸ್ತ್ರೀಯ ರೋಧನ ಭೂಮಿಯ ಮೆಲಿದ್ದ ನಮಗೆ ಕೇಳುತ್ತಿತ್ತು. ಈ ಕಡೆಯಿಂದ ಹಾದು ಹೋದಾಗ ಸ್ತ್ರೀ ತನ್ನೆಲ್ಲ ಒಡವೆಗಳನ್ನು ಒಂದೊಂದಾಗಿ ಕೆಳಗೆ ಎಸೆಯುತ್ತಾ ಹೋಗುತ್ತಿದ್ದಳು. ಅವುಗಳನ್ನೆಲ್ಲಾ ನಾವು ಎತ್ತಿಟ್ಟಿದ್ದೇವೆ '' ಎಂದು ಹೇಳಿ ಇಟ್ಟಿದ್ದ ಒಡವೆಗಳನ್ನು ತೋರಿಸಿದನು. ಅವು ಸೀತೆಯ ಒಡವೆಯೆಂಬುದು ರಾಮನಿಗೆ ಖಚಿತವಾದಾಗ ಅವನ ಕಣ್ಣುಗಳು ತೇವಗೊಂಡವು.

ಇದು ಖಂಡಿತ ಲಂಕಾಧಿಪತಿ ರಾವಣನ ಕೆಲಸ. ಅವನೇ ಸೀತೆಯನ್ನು ಲಂಕೆಗೆ ಕೊಂಡೊಯ್ದಿದ್ದಾನೆ. ಲಂಕೆಗೆ ಹೋಗಿ ರಾವಣನೊಡನೆ ಹೋರಾಡಿ ಕೂಡಲೇ ಸೀತೆಯನ್ನು ಬಿಡಿಸಿಕೊಂಡು ಬರಬೇಕೆಂದು ರಾಮ ನಿರ್ಧರಿಸಲು ಆಗ ಸುಗ್ರೀವನು '' ಈ ಹೋರಾಟದಲ್ಲಿ ನಾನೂ ನನ್ನ ವಾನರ ಸೈನ್ಯವು ನಿನಗೆ ಸಹಾಯ ಮಾಡುತ್ತೇವೆ.'' ಎಂದು ರಾಮನಿಗೆ ಭರವಸೆ ಇತ್ತನು. ತಕ್ಷಣ ಹೋರಾಟಕ್ಕೆ ಅವರು ಸಿದ್ದತೆ ಮಾಡಿಕೊಂಡರು. ಹನುಮಂತನ ನಾಯಕತ್ವದಲ್ಲಿ ವಾನರ ಸೇನೆ ಸಮುದ್ರದತ್ತ ಧಾವಿಸಿತು.

ಆದರೆ ಸಮುದ್ರವನ್ನು ದಾಟುವುದು ಹೇಗೆ ? ಲಂಕೆ ತಲುಪಲು ಸಮುದ್ರ ದಾಟುವುದು ಅನಿವಾರ್ಯವಾಗಿತ್ತು. ಎಲ್ಲರೂ ಯೋಚಿಸುತ್ತಿರಬೇಕಾದರೆ ಶ್ರೀರಾಮ ಸಮುದ್ರಕ್ಕೆ ಒಂದು ಬಾಣ ಹೊಡೆದನು. ಆ ಕೂಡಲೇ ಸಮುದ್ರ ದೇವತೆಯು ಪ್ರತ್ಯಕ್ಷಳಾಗಿ '' ಅಯೋಧ್ಯೆಯ ರಾಜಕುಮಾರನೇ ಇನ್ನು ಬಾಣಗಳನ್ನು ಬಿಡಬೇಡ. ಈ ಸಮುದ್ರದ ಮೇಲೆ ಒಂದು ಸೇತುವೆ ಕಟ್ಟಿ ಅದರ ಮೇಲೆ ನಿನ್ನ ಸೈನ್ಯ ನಡೆಸು'' ಎಂದು ಹೇಳಿ ಅಲೆಗಳಲ್ಲಿ ಅವಳು ಮರೆಯಾದಳು.

ಶ್ರೀರಾಮ ಸಮುದ್ರದ ಮೇಲೆ ಸೇತುವು ಕಟ್ಟಲು ವಾನರ ಸೈನ್ಯಕ್ಕೆ ಹೇಳಿದ ತಕ್ಷಣವೇ ಕಲ್ಲಿನ ಸೇತುವೆಯ ಕೆಲಸ ಪ್ರಾರಂಭವಾಯಿತು. ಕಪಿ ಸೈನ್ಯ ಪರ್ವತದಿಂದ ದೊಡ್ಡ ದೊಡ್ಡ ಬಂಡೆಗಳನ್ನು ಎತ್ತಿಕೊಂಡು ಬಂದು ಸೇತುವೆಯನ್ನು ಕಟ್ಟಲಾಗುತ್ತಿತ್ತು. ಹೆಚ್ಚು ಕಾಲ ತೆಗೆದುಕೊಳ್ಳುವ ಈ ಕೆಲಸದಲ್ಲಿ ಸಾವಿರಾರು ಕಪಿಗಳು ಹಗಲಿರುಳು ದುಡಿದವು. ರಾಮನಿಗೆ ಕಪಿಗಳ ಸೇವೆ ಕಂಡು ತುಂಬಾ ಸಂತೋಷವಾಯಿತು. ಇವು ತನಗಾಗಿ ಎಷ್ಟು ಕಷ್ಟ ಪಟ್ಟು ಕೆಲಸ ಮಾಡುತ್ತಿವೆಯಲ್ಲಾ'' ಎಂದು ಮನಸ್ಸಿನಲ್ಲೆ ಮೆಚ್ಚುಗೆ ವ್ಯಕ್ತಪಡಿಸಿದನು.

ಕೆಲಸದಲ್ಲಿ ನಿರತರಾಗಿದ್ದವರಲ್ಲಿ ಕಂದು ಬಣ್ಣದ ಅಳಿಲನ್ನು ಶ್ರೀರಾಮನು ಕಂಡನು. ಅದು ತನ್ನ ಬಾಯಲ್ಲಿ ಚಿಕ್ಕ ಚಿಕ್ಕ ಕಲ್ಲುಗಳನ್ನು ಕಚ್ಚಿಕೊಂಡು ಬಂದು ಸಮುದ್ರಕ್ಕೆ ಹಾಕುತ್ತಿತ್ತು. ಒಂದು ಕಪಿ ಭಾರೀ ಬಂಡೆಯೊಂದನ್ನು ತನ್ನ ಬೆನ್ನ ಮೇಲೆ ಹೊತ್ತುಕೊಂಡು ಬರುವಾಗ ಸಣ್ಣ ಕಲ್ಲಿನ ಚೂರೊಂದನ್ನು ಬಾಯಲ್ಲಿ ಕಚ್ಚಿಕೊಂಡ ಅಳಿಲು ಅದಕ್ಕೆ ಅಡ್ಡ ಬಂತು, ತಕ್ಷಣ ಕಪಿಯು ಹಿಂದೆ ಜಿಗಿದು ''ಏ ಪುಟಾಣಿಯೇ ನೀನು ಇಲ್ಲೇನು ಮಾಡುತ್ತಿದ್ದಿಯೇ ... ನನ್ನ ಕಾಲಿನಿಂದ ಇಂದು ಬದುಕಿಕೊಂಡೆ '' ಎಂದು ಗುಡುಗಿತು. ಆ ದೊಡ್ಡ ಕಪಿಯನ್ನು ಪುಟ್ಟ ಅಳಿಲು ತಲೆಯನ್ನೆತ್ತಿ ನೋಡಿ '' ಅಣ್ಣಾ ನಿನ್ನ ದಾರಿಗೆ ನಾನು ಅಡ್ಡ ಬಂದದ್ದರಿಂದ ನೀನು ಬೀಳುವುದರಲ್ಲಿದ್ದೆ ಅದಕ್ಕಾಗಿ ನನ್ನನ್ನು ಕ್ಷಮಿಸು '' ಎಂದು ತನ್ನ ಚಿಕ್ಕ ಧ್ವನಿಯಲ್ಲಿ ಕಪಿಯನ್ನು ಅಳಿಲು ಕೇಳಿಕೊಂಡಿತು. ಅನಂತರ '' ಇನ್ನು ಮುಂದೆ ನೀನು ನಡೆದಾಗ ಮುಂದೆ ನೋಡಿಕೊಂಡು ಹೋಗಲು ಮರೆಯಬೇಡ. ಸೇತುವೆ ಕಟ್ಟಲು ನಾನು ರಾಮನಿಗೆ ಸಹಾಯ ಮಾಡುತ್ತಿದ್ದೇನೆ. ಅವನಿಗಾಗಿ ಕಷ್ಟಪಟ್ಟು ದುಡಿಯಬೇಕೆಂಬುದೇ ನನ್ನ ಆಸೆ '' ಎಂದು ತನ್ನ ಮಾತನ್ನು ಅದು ಮುಂದುವರಿಸಿತು. ಇದನ್ನು ಕೇಳಿ ಕಪಿಗೆ ನಗು ತಡೆಯಲಾಗಲಿಲ್ಲ. ಅದು ದೊಡ್ಡದಾಗಿ ನಗುತ್ತ ಉಳಿದ ಕಪಿಗಳನ್ನು ಕರೆದು '' ಈ ಪುಟಾಣಿಯ ಮಾತು ಕೇಳಿದಿರಾ ? ಚಿಕ್ಕ ಚಿಕ್ಕ ಕಲ್ಲುಗಳಿಂದ ಈ ಅಳಿಲು ಸೇತುವೆ ಕಟ್ಟುತ್ತದೆಯಂತೆ ! ಹ್ಹ ಹ್ಹ ಹ್ಹ !! ಇಂಥ ತಮಾಸೆಯ ಮಾತನ್ನು ನಾನು ಇದುವರೆಗೂ ಕೇಳಿಲ್ಲ '' ಎಂದು ಗಹಗಹಿಸಿ ನಕ್ಕಿತು. ಅದರೊಡನೆ ಉಳಿದ ಕಪಿಗಳೂ ಧ್ವನಿ ಗೂಡಿಸಿದವು.

ಪುಟ್ಟ ಅಳಿಲಿಗೆ ತನ್ನ ಮಾತಿನಲ್ಲಿ ಅಂಥ ತಮಾಸೆ ಏನಿದೆಯೆಂಬುದು ತಿಳಿಯಲಿಲ್ಲ. '' ನೋಡಿರಣ್ಣ , ನನಗೆ ಪರ್ವತಗಳನ್ನೂ, ಬಂಡುಗಳನ್ನು ಹೊತ್ತು ತರುವ ಶಕ್ತಿ ಇಲ್ಲ. ದೇವರು ನನಗೆ ಕೊಟ್ಟ ಶಕ್ತಿಯೇ ಇಷ್ಟು. ನನ್ನ ಬಲದಿಂದ ಚಿಕ್ಕ ಚಿಕ್ಕ ಚೂರುಗಳನ್ನು ನಾನು ಒಯ್ಯಬಲ್ಲೆ ರಾಮನ ಸೇವೆಯನ್ನು ನನ್ನ ಶಕ್ತಿಗೆ ತಕ್ಕ ಹಾಗೆ ಮಾಡಬಲ್ಲೆ '' ಎಂದು ಅಳಿಲು ವಿನಯದಿಂದ ಹೇಳಿತು. '' ಮೂರ್ಖನ ಹಾಗೆ ಮಾತಾಡಬೇಡ. ರಾಮನಿಗೆ ನೀನು ಸಹಾಯ ಮಾಡಬಹುದು ಎಂದು ತಿಳಿದಿದ್ದಿಯಾ ? ನೀನು ತರುವ ಕಲ್ಲಿನ ತುಣುಕಿನಿಂದ ಸೇತುವೆ ಕಟ್ಟಲು ಸಾಧ್ಯವೇ ? ಸಮುದ್ರಕ್ಕೆ ಸೇತುವೆ ಕಟ್ಟಲು ನಮ್ಮಂತಹ ಬಲಿಷ್ಠರಿಂದ ಮಾತ್ರ ಸಾಧ್ಯ. ಹೋಗು ಹೋಗು ಕಾಲಿಗೆ ಸಿಕ್ಕಿ ಕೆಲಸಕ್ಕೆ ತೊಂದರೆ ಕೊಡಬೇಡ'' ಎಂದು ಕಪಿಗಳು ಅಳಿಲನ್ನು ಹಂಗಿಸಿದವು. ಆದರೆ ಅಳಿಲು ಕಪಿಗಳ ಮಾತಿಗೆ ಕಿವಿಗೊಡಲಿಲ್ಲ. '' ನಾನು ರಾಮನ ಸೇವೆ ಮಾಡಲೇಬೇಕು '' ಎಂದು ಹಟ ಹಿಡಿಯಿತು. ಸಣ್ಣ ಸಣ್ಣ ಕಲ್ಲುಗಳನ್ನು ತರುವುದನ್ನು ಮುಂದುವರಿಸಿತು. ಇದರಿಂದ ಕಪಿಗಳು ಕೋಪಗೊಂಡವು. ಒಂದು ಕಪಿ ಅಳಿಲಿನ ಬಾಲವನ್ನು ಹಿಡಿದು ದೂರಕ್ಕೆಸೆಯಿತು. ಆಗ ಅಳಿಲು ರಾಮನ ಹೆಸರನ್ನು ಗಟ್ಟಿಯಾಗಿ ಕೂಗಿತು. ಆ ತಕ್ಷಣ ರಾಮನು ಕೈಯೊಡ್ಡಿ ಕೆಳಕ್ಕೆ ಬೀಳದಂತೆ ಅಳಿಲನ್ನು ಹಿಡಿದನು. ಕಪಿಗಳಿಗೆ '' ಚಿಕ್ಕವರು ದುರ್ಬಲರು ಅಂತಹವರನ್ನು ಪ್ರಬಲರಾದ ನೀವು ಗೇಲಿ ಮಾಡದಿರಿ. ನಿಮ್ಮ ಬಲಕ್ಕಿಂತ , ನೀವು ನನಗಾಗಿ ಮಾಡುತ್ತಿರುವ ಕೆಲಸಕ್ಕಿಂತ ಮೇಲಾಗಿ ನಿಮ್ಮ ಪ್ರೀತಿ ಮುಖ್ಯ . ಈ ಚಿಕ್ಕ ಅಳಿಲಿನ ಕೆಲಸಕ್ಕಿಂತ ಅದರ ಎದೆಯಲ್ಲೂ ನನ್ನ ಬಗ್ಗೆ ಇರುವ ಪ್ರೀತಿ ದೊಡ್ಡದು'' ಎಂದು ರಾಮನು ಕಪಿಗಳಿಗೆ ಬುದ್ಧಿವಾದ ಹೇಳಿ ಅಳಿಲನ್ನು ತನ್ನ ಎದೆಗೆ ಒತ್ತಿಹಿಡಿದುಕೊಂಡು '' ಆತಂಕ ಪಡಬೇಡ ಮರಿಯೇ ನಿನ್ನ ಪ್ರೀತಿ ನನ್ನ ಹೃದಯವನ್ನು ತಟ್ಟಿದೆ '' ಎನ್ನುತ್ತ ರಾಮನು ತನ್ನ ಬೆರಳನ್ನು ಅಳಿಲಿನ ಬೆನ್ನಿನ ಮೇಲೆ ಮೆಲ್ಲನೆ ಆಡಿಸಿದನು. ಆ ತಕ್ಷಣ ಅಳಿಲಿನ ಬೆನ್ನಿನ ಮೇಲೆ ಮೂರು ಬಿಳಿಯ ಪಟ್ಟಿಗಳು ಮೂಡಿದವು. ಅಂದಿನಿಂದ ಅಳಿಲಿನ ಬೆನ್ನಿನ ಮೇಲೆ ಮೂರು ಪಟ್ಟಿಗಳು ಅಚ್ಚಳಿಯದೇ ನಿಂತವು. ಅಂದಿನಿಂದ ಕಿರು ಸೇವೆಯನ್ನು 'ಅಳಿಲು ಸೇವೆ' ಎಂದು ಕರೆಯಲಾಯಿತು

ಸ್ಮಿತ್ ಥಾಮ್ಸನ್‌ರ ಬಿ ೫೫೧ ನೇ ವರ್ಗಕ್ಕೆ ಸೇರುವ ಈ ಕತೆಯಲ್ಲಿ ಪೌರಾಣಿಕ ಪ್ರಸಂಗವನ್ನು ಕತೆಗಾರ ಬಳಸಿಕೊಂಡಿದ್ದಾನೆ. ಸಮುದ್ರ ರಾಮನ ದಾರಿಗೆ ಅಡ್ಡವಾಗಿದ್ದರಿಂದ ಅದರ ಮೇಲೆ ಸೇತುವೆ ನಿರ್ಮಾಣದ ಸಾಹಸ ಕಾರ್ಯಕ್ಕೆ ತೊಡಗುವ ಕಪಿ ಸಮೂಹದ ಶ್ರಮದೊಡನೆ ಕೈಗೂಡಿಸಲು ಬಂದ ಅಳಿಲು ಅವುಗಳಿಂದ ತಿರಸ್ಕಾರಕ್ಕೊಳಗಾದರೂ ಅದರ ಮನದಲ್ಲಿದ್ದ ರಾಮನ ಭಕ್ತಿಯ ಕಾರಣದಿಂದ ಅದು ಕಪಿಗಳಿಗಿಂತ ರಾಮನಿಗೆ ಪ್ರಿಯವಾದದ್ದು ಕಥೆಯ ವಸ್ತುವಾಗುತ್ತದೆ. ಇದರ ಮೂಲಕ ಕತೆಗಾರ ಗಾತ್ರದಲ್ಲಿ ಕಿರಿದಾದರೂ ಪ್ರೀತಿಯಲ್ಲಿ ಹಿರಿದಾದ ಅಳಿಲಿನ ಪಾತ್ರದಲ್ಲಿ ದೇವರಿಗೆ ಪ್ರಿಯವಾದದ್ದು ವಿನಯಶೀಲ ವರ್ತನೆ. ಕಿರಿದಾದ ಸೇವೆಯನ್ನು ಕಡೆಗಣಿಸಿ ತನ್ನ ಸೇವೆಯೇ ಹಿರಿದೆಂದು ಭಾವಿಸುವುದನ್ನು ದೇವರೆಂದೂ ಒಪ್ಪುವುದಿಲ್ಲ. ಈ ನೀತಿಯನ್ನು ಬಿತ್ತರಿಸುವ ಉದ್ದೇಶದಿಂದಲೇ ಈ ಕತೆ ಹುಟ್ಟಿಕೊಂಡಿದೆ. ಸಮುದ್ರವು ಕತೆಯ ಸಾಗುವಿಕೆಗೆ ಪೂರಕವಾಗಿ ಬಂದಿದ್ದರು ಸಾಗರದಲ್ಲಿನ ಸಾಹಸ ಪ್ರದರ್ಶನವು ಕತೆಯಲ್ಲಿ ಪ್ರಮುಖವಾಗಿದೆ.

2:4 ಸಮುದ್ರ ಗಾದೆಗಳು

ಜನಪದರ ಆಡುಭಾಷೆಯ ಆಕರ್ಷಣೆಗೆ ಅವರು ಬಳಸುವ ಗಾದೆಗಳೇ ಕಾರಣ. ಆಡುಮಾತಿನಲ್ಲಿ ಅಂತರ್ಗತಗೊಂಡು ಹೊರಹೊಮ್ಮುವ ಗಾದೆಗಳು ಮಾತಾಡುವವನ ವಿಷಯ ಸಮರ್ಥನೆಗೆ ನೆರವಾಗುವುದಲ್ಲದೆ ಅವನ ವಾಕ್ ಚಾತುರ್ಯವನ್ನೂ ಹಾಗೂ ಕೇಳುವವನ ಮನಸ್ಸಿಗೆ ಆನಂದವನ್ನು ನೀಡುತ್ತವೆ. ಭಾಷೆಗೆ ಬಲ ನೀಡುವ ಗಾದೆಗಳ ಬಗ್ಗೆ ಕೆಲವು ವಿದ್ವಾಂಸರು ಅವು ಆಡುಮಾತಿನ ಜೀವಸತ್ವಗಳೆಂದು ಅಭಿಪ್ರಾಯ ಪಡುತ್ತಾರೆ. ಮಾತಿಗೆ ಮೆರಗುಕೊಟ್ಟು ಕೇಳುವವರನ್ನು ಆಯಸ್ಕಾಂತದಂತೆ ಸೆಳೆಯುವ ಗಾದೆಗಳ ಸೃಷ್ಟಿಕರ್ತರಾರೆಂದು ಹೇಳಲಾಗದು. ಅನುಭವದ ಗಣಿಯಿಂದ ಹೆಕ್ಕಿ ತೆಗೆದಿರುವ ಗಾದೆಗಳು ಜನಪದ ಸಂಸ್ಕೃತಿಯಷ್ಟೇ ಹಳೆಯವು. ಹಲವರ ಅನಿಸಿಕೆ ಮತ್ತು ಜ್ಞಾನಾನುಭವಗಳು ಒಬ್ಬನ ಸೃಷ್ಟಿವಿವೇಕದಲ್ಲಿ ಮೂಡಿ ಗಾದೆಯಾಗಿರಬಹುದು. ವಿದ್ವಾಂಸರ ಪ್ರಕಾರ ಅವು ''ಜನಪದ ಸಂಸ್ಕೃತಿಯಲ್ಲಿ ಹುಟ್ಟಿ ಬೆಳೆದುದು''. ಸಮಾಜದಷ್ಟು ಹಳೆಯದು. ಒಂದು ಕಡೆ ಗಾದೆ ಯಾರೊಬ್ಬ ಜನ್ಮದಾತನೂ ಇಲ್ಲದೇ ಕ್ರಮೇಣ ಜನತೆಯ ನಡುವೆ ಜನತೆಯದಾಗಿ ವಿಕಾಸವಾದುದಾಗಿರಬೇಕು. ಇನ್ನೊಂದು ಕಡೆ ಸುತ್ತ ಮುತ್ತಲ ಜಗತ್ತಿನೊಡನೆ ಸಂಪರ್ಕ ಕಲ್ಪಿಸಿಕೊಳ್ಳುವಾಗ ಸಂದರ್ಭ ಸೂತ್ರವಾಗಿ ಬುದ್ಧಿವಂತನೊಬ್ಬರಿಂದ ಜಿಗಿದಿರಬೇಕು.. ....ಸಂಪ್ರದಾಯ ಇದನ್ನು ಕೈಗೆತ್ತಿಕೊಳ್ಳುವ ತನಕ ಇದು ಕೇವಲ ವಸ್ತುಸ್ಥಿತಿಯೊಂದರ ಸೂತ್ರಮಯ ಹೇಳಿಕೆಯಾಗಿತ್ತು. ಅಥವಾ ಬೋಧಪ್ರದ ದೃಷ್ಟಾಂತವಾಗಿತ್ತು. ಸಂಪ್ರದಾಯ ಸ್ವೀಕರಿಸಿದಾಗ ಅನುಕರಿಸಲಾಗದ ರೀತಿಯಲ್ಲಿ ಅದನ್ನು ಹೊಂದಿಸಿಕೊಂಡಿತ್ತು. ಮಾರ್ಪಡಿಸಿಕೊಂಡಿತ್ತು ಆದ್ದರಿಂದ ಸೃಷ್ಟಿ ಮತ್ತು ಸ್ವೀಕಾರಗಳೆರಡೂ ಗಾದೆಯೊಂದು ರೂಪ ತಾಳುವುದಕ್ಕೆ ಅವಶ್ಯಾಂಶಗಳಾಗುತ್ತವೆ . ಈ ಕ್ರಿಯೆಯಲ್ಲಿ ಮೂಲ ಮರೆತು ಹೋಗುತ್ತದೆ. ಒಂದೇ ವಸ್ತು ಹಾಗೂ ಒಂದೇ ಸೂತ್ರ ರೂಪ ಒಬ್ಬನಿಗಿಂತ ಹೆಚ್ಚಿನವರಲ್ಲಿ ದೊರೆಯುವುದರಿಂದ ಗಾದೆಗಳ ಮೂಲ ತೊಡಕಾಗಿದೆ. ಆದ್ದರಿಂದ ವೈಯಕ್ತಿಕತೆಯನ್ನು ಒಟ್ಟುಗೂಡಿಕೊಂಡ ಸಾಮೂಹಿಕ ಸೃಷ್ಟಿ ಇದೆಂದು ಹೇಳಬಹುದು. ಹೀಗೆ ಗಾದೆ ಸಮಷ್ಟಿಯ ಸ್ವತ್ತಾದ ಮೇಲೆ ಅದು ಬಾಯಿಂದ ಬಾಯಿಗೆ ತಲೆಮಾರಿನಿಂದ ತಲೆಮಾರಿಗೆ ಬೆಳೆಯಿತು. ರೂಪಾಂತರಗಳನ್ನು ಪಡೆಯಿತು. ಸಾರ್ವತ್ರಿಕ ಜನಪ್ರಿಯತೆಯ ಮುದ್ರೆಯೊಂದು ಅದರ ಮೇಲೆ ಬಿತ್ತು. ಈ ಅಭಿಪ್ರಾಯವು ಗಾದೆಯ ಬಗ್ಗೆ ಮಹತ್ವಪೂರ್ಣವಾದ ವಿಶ್ಲೇಷಣೆ ನೀಡಿದೆ. ಅನುಭವ ಜ್ಞಾನದ ಆಧಾರದ ಮೇಲೆ ಸೃಷ್ಟಿಯಾದ ಗಾದೆ ಜನಪದ ಸಾಹಿತ್ಯ ಪ್ರಕಾರಗಳಲ್ಲೆ ಅತಿ ಹೆಚ್ಚಿನ ಜನಪ್ರಿಯತೆ ಗಳಿಸಿದ ಪ್ರಕಾರವಾಗಿ ಬೆಳೆಯಿತು. ಇದಕ್ಕೆ ಕಾರಣ ಅದರ ಲಕ್ಷಣಗಳು. ಕೆ.ಎ.ಕೆಲ್ಲೊ ಎಂಬವರು ಗಾದೆಯ ಲಕ್ಷಣಗಳನ್ನು ಸಂಕ್ಷಿಪ್ತತೆ, ವಿವೇಕಪೂರ್ಣತೆ, ತೀಕ್ಷ್ಣತೆ ಮತ್ತು ಜನಪ್ರಿಯತೆಗಳೆಂದು ತಿಳಿಸಿದ್ದಾರೆ. ''ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು'' ಎಂಬ ನಾಣ್ಣುಡಿಯಂತೆ ಗಾದೆ ಕೆಲವೇ ಪದಗಳಿಂದ ರಚಿಸಲ್ಪಟ್ಟಿದ್ದರೂ ಅರ್ಥ ವ್ಯಾಪ್ತಿಯನ್ನು ಪಡೆದಿರುವಂತಹುದು. ಅದನ್ನು ಜನರು ಎಷ್ಟು ಮಹತ್ವದೆಂದು ಭಾವಿಸಿದರೆಂಬುದನ್ನು ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಗಾದೆಯೇ ತಿಳಿಸುತ್ತದೆ. ಆಧುನಿಕ ಯುಗದಲ್ಲೂ ಇದು ತನ್ನ ಮಹತ್ವವನ್ನು ಉಳಿಸಿಕೊಂಡು ಬೆಳೆಯುತ್ತಿರುವುದು ಗಮನಾರ್ಹವಾದುದು.

ಸಮುದ್ರ ಜಾನಪದದಲ್ಲಿನ ಗಾದೆಗಳನ್ನು ಪ್ರಮುಖವಾಗಿ ಈ ಕೆಳಕಂಡಂತೆ ವಿಭಾಗಿಸಬಹುದು.

1. ಸಮುದ್ರದ ಗಾದೆಗಳು
2. ನೀರಿನ ಗಾದೆಗಳು
3. ಮೀನಿನ ಗಾದೆಗಳು
4. ಉಪ್ಪಿನ ಗಾದೆಗಳು
5. ಆಮೆಯ ಗಾದೆಗಳು
6. ಗಾಳದ ಗಾದೆಗಳು
7. ಬಲೆಯ ಗಾದೆಗಳು
8. ಏಡಿಯ ಗಾದೆಗಳು
9. ಮುತ್ತಿನ ಗಾದೆಗಳು
10. ದೋಣಿ - ಹಡಗಿನ ಗಾದೆಗಳು
11. ಸಮುದ್ರದಾಶ್ರಯ ಪಡೆದವರಿಗೆ ಸಂಬಂಧಿಸಿದ ಗಾದೆಗಳು

ವಿಶಾಲವಾದ ಸಮುದ್ರ ಕಿರಿದಾದ ಗಾದೆಗಳಲ್ಲಿ ಅಂತರ್ಗತಗೊಂಡು ಹೊರಹೊಮ್ಮಿರುವುದಕ್ಕೇ ಜನಪದರು ಪಡೆದಿರುವ ಸಮುದ್ರದ ಆಗಾಧ ಅನುಭವವೇ ಕಾರಣ. ಸಮುದ್ರದ ಗುಣಲಕ್ಷಣಗಳನ್ನೆಲ್ಲಾ ಕಂಡನುಭವಿಸಿದ ಅವರು ಅದನ್ನು ಗಾದೆಗಳಿಗೆ ವಸ್ತುವನ್ನಾಗಿ ಆಯ್ಕೆಮಾಡಿಕೊಂಡರು.

ಕೆಲವು ವ್ಯಕ್ತಿಗಳಿಗೆ ಚಾವಟಿಯ ಪೆಟ್ಟು ಕೊಡಲು ಸಮುದ್ರದ ಗಾದೆಗಳನ್ನು ಜನಪದರು ಬಳಸಿಕೊಂಡರು. ಮಳ್ಳಿಯಂತಿರುವ ಮಂದಿಗಳ ಗುಣವನ್ನು ''ಗಡಗಡ ಅಂದವ್ರು ಗಡಗಿ ನುಂಗಾರ ಸುಮ್ಮನ ಇದ್ದವ್ರು ಸಮುದ್ರ ನುಂಗಾರ'' ಎನ್ನುವ ಗಾದೆಮಾತಿನ ಮೂಲಕ ಪರಿಚಯಿಸಿದರು.

'ಸಮುದ್ರದಲ್ಲಿ ಮುಳುಗಿದವನಿಗೆ ಚಳಿಯುಂಟೇ ?' ಎಂಬ ಮತ್ತೊಂದು ಗಾದೆಯು ಸಂದರ್ಭಕ್ಕೆ ತಕ್ಕ ಹಾಗೆ ಅರ್ಥ ನೀಡುವಂತಹುದು. ಮಾನ ಮರ್ಯಾದೆ ಕಳೆದುಕೊಂಡು ವರ್ತಿಸುವ ವ್ಯಕ್ತಿಯನ್ನು ಟೀಕಿಸುವಾಗಲೂ ಈ ಗಾದೆಯನ್ನು ಬಳಸುತ್ತಾರೆ. ಪರಿಪೂರ್ಣವಾಗಿ ನಷ್ಟ ಅನುಭವಿಸಿದ ವ್ಯಕ್ತಿಯನ್ನು ಪರಿಚಯಿಸಲು ಸಹ ಈ ಗಾದೆಯ ಬಳಕೆ ರೂಡಿಯಲ್ಲಿದೆ. ಇದರಂತೆಯೇ ಸಂದರ್ಭಕ್ಕೆ ಸರಿ ಹೊಂದಿಸಿಕೊಂಡು ಈ ಗಾದೆಯನ್ನು ಬಳಸುವ ಜಾಣ್ಮೆ ಜನಪದರದಲ್ಲಿದೆ.

'ಪಾಪಿ ಸಮುದ್ರಕ್ಕೆ ಹೋದರೂ ಮೊಳಕಾಲುದ್ದದ ನೀರು' ಎನ್ನುವ ಗಾದೆ ಪಾಪಿಗೆ ಪ್ರಕೃತಿ ಸಹ ವಿರೋಧವಾಗುತ್ತದೆ ಎಂಬ ಅರ್ಥವನ್ನು ಹೊರಹಾಕಿದರೂ ಮತ್ತೊಂದು ಅರ್ಥದಲ್ಲಿ ಈ ಗಾದೆ ಗ್ರೀಕ್ ಮೂಲದ್ದೆಂದು ತಿಳಿದುಬರುತ್ತದೆ. ಟಾಂಟಲಸ್ ಎಂಬ ಗ್ರೀಕಿನ ರಾಜ ಮಾಡಿದ ಕೊಲೆಯ ಕೃತ್ಯಕ್ಕಾಗಿ ಅವನಿಗೆ ಶಾಪವಿರುತ್ತದೆ. ಅವನು ಒಮ್ಮೆ ನೀರಡಿಕೆಯಿಂದ ಬಳಲಿ ನೀರಿಗಾಗಿ ಅವನೆಲ್ಲಿ ಹೋದರೂ ಅವನ ತುಟಿಯವರೆಗೆ ನೀರು ಬರುವುದೇ ಇಲ್ಲ. ಕೊನೆಗೆ ಸಮುದ್ರಕ್ಕೆ ಹೋದಾಗ ಅಲ್ಲಿಯೂ ಸಹ ನೀರು ಮೊಣಕಾಲುದ್ದಕ್ಕೇ ಮಾತ್ರ ನಿಲ್ಲುತ್ತದೆ. ಈ ಕಾರಣದಿಂದ ಮೇಲಿನ ಗಾದೆ ಹುಟ್ಟಿತೆಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಎಷ್ಟೋ ಸಂದರ್ಭದಲ್ಲಿ ಜನರ ಓಡಾಟ ಜೊತೆಯಲ್ಲಿ ಗಾದೆಗಳು ಸಹ ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಪ್ರಯಾಣ ಬೆಳೆಸುವ ಸಾಧ್ಯತೆಗಳೂ ಉಂಟು. ಹೀಗೆ ಪ್ರದೇಶದಿಂದ ಪ್ರದೇಶಕ್ಕೆ ಸಂಚಾರ ಮಾಡುವಾಗ ಅವುಗಳ ಸ್ವರೂಪ ಮತ್ತೂ ಅರ್ಥಗಳೂ ಸಹ ಬದಲಾಗುತ್ತದೆ. ಮೇಲಿನ ಗಾದೆಯೇ 'ಪಾಪಿ ಸಮುದ್ರಕ್ಕೋಗಿ ಬಾಯೊರಿ ಮನೆಗೆ ಬಂದ' ಎಂಬ ರೂಪದಲ್ಲಿ ಸಹ ಬಳಕೆಯಲ್ಲಿದೆ. ಈ ಗಾದೆಗಳೆರಡೂ ಪಾಪ ಮಾಡಿದವನಿಗೆ ಭೂಲೋಕದಲ್ಲಿ ಸಿಗುವ ಶಿಕ್ಷೆಯನ್ನು ತಿಳಿಸುತ್ತದೆ. ಉಪ್ಪು ನೀರಿನಿಂದಾದರೂ ಬಾಯಾರಿಕೆಯನ್ನು ಈಡೇರಿಸಿಕೊಳ್ಳಲು ತವಕಪಡುವ ಪಾಪಿಯ ಪ್ರಯತ್ನದ ವಿಫಲತೆಯನ್ನು ತಿಳಿಸುವುದು ಅವುಗಳ ಉದ್ದೇಶವಾಗಿದೆ.

'ಸಾಯೋನಿಗೆ ಸಮುದ್ರ ಮೊಣಕಾಲುದ್ದ' ಜೀವದ ಹಂಗು ತೊರೆದವನಿಗೆ ಯಾವ ಹೆದರಿಕೆಯೂ ಇಲ್ಲ. ಅವನಿಗೆ ಆಳವಾದ ಸಮುದ್ರವೂ ಸಹ ಮೊಣಕಾಲುದ್ದ ನೀರಿನ ಹಾಗೆಯೇ ಕಾಣುತ್ತದೆ.

ಅದೃಷ್ಟದಲ್ಲಿದ್ದಷ್ಟು ಮಾತ್ರ ತಮ್ಮದಾಗಬಲ್ಲದೆಂಬುದನ್ನು 'ಸಮುದ್ರ ದೊಡ್ಡದಾದರೂ ಪಾತ್ರೆ ಇದ್ದಷ್ಟೇ ನೀರು ಸಿಕ್ಕೀತು' ಎಂಬ ಗಾದೆ ತಿಳಿಸುತ್ತದೆ.

ವ್ಯರ್ಥ ಕೆಲಸಕ್ಕೆ ಕೈಹಾಕಿದವನನ್ನು 'ಸಮುದ್ರದಲ್ಲಿ ಕೊಳ್ಳಿ ಇಟ್ಟ ಹಾಗೆ' ಎಂಬ ಗಾದೆ ಎಚ್ಚರಿಸುತ್ತದೆ.

ಪ್ರಕೃತಿಯೇ ಮುನಿಸಿಕೊಂಡಾಗ ಮಾನವ ಅಸಹಾಯಕ ಎನ್ನುವುದನ್ನು 'ಸಮುದ್ರ ಮೇರೆ ತಪ್ಪಿದರೆ ಯಾರೂ ಮಾಡೋದೇನಾ'? ಎಂಬ ನಾಣ್ಣುಡಿ ತಿಳಿಸಿದರೆ ಮನೆತುಂಬಾ ಮಂದಿ ಇದ್ದರೂ ಅವಶ್ಯಕತೆ ಬಿದ್ದಾಗ ಯಾರೂ ಇಲ್ಲದ್ದನ್ನು 'ಸಂಸಾರಕ್ಕೆ ಸಾಗರ ಅವಸರಕ್ಕೆ ಯಾರೂ ಇಲ್ಲ' ಎಂಬ ಗಾದೆ ತಿಳಿಸುತ್ತದೆ. ಇದೇ ಅರ್ಥವನ್ನು ಬೇರೊಂದು ರೂಪದಲ್ಲಿ 'ಸಮುದ್ರದ ನಂಟು, ಉಪ್ಪಿಗೆ ಮಾತ್ರ ಬಡತನ' ಎಂಬ ಗಾದೆ ವ್ಯಕ್ತಪಡಿಸುತ್ತದೆ.

ಅಸಾಧ್ಯವಾದದ್ದನ್ನು ಸಾಧ್ಯಗೊಳಿಸುವ ರೀತಿಯನ್ನು ಕಾಡಿನ ನೆಲ್ಲಿಕಾಯಿ ಸಮುದ್ರದ ಉಪ್ಪಿನ ಸಂಬಂಧದ ಹಾಗೆ' ಎಂಬ ಗಾದೆ ತಿಳಿಸಿದರೆ ಯೋಗಿ ಮತ್ತು ಸಾಗರದ ಗುಣಗಳೆರಡನ್ನೂ 'ಯೋಗಿಗೆ ಕುಲವಿಲ್ಲ ಸಾಗರಕ್ಕೆ ನೆಲೆಯಿಲ್ಲ' ಎಂಬ ಗಾದೆ ವ್ಯಕ್ತಪಡಿಸುತ್ತದೆ.

ತುಳುನಾಡು ಕಡಲ ಅಂಚಿನ ನಾಡು. ಆದ್ದರಿಂದ ಕಡಲಿನ ಗಾದೆಗಳು ತುಳುಭಾಷೆಯಲ್ಲೂ ಹಲವಿದೆ. ಅವುಗಳಲ್ಲಿ ವ್ಯರ್ಥ ಪ್ರಯತ್ನವನ್ನು 'ಕಡಲ್‌ಗೆ ಅರೆಪ್ಪು ಪಾಡ್ಯೆರ ಪೋತೆಗೆ (ಕಡಲಿಗೆ ಮಸಾಲೆ ಬೆರೆಸಲು ಹೋಗಿದ್ದಾನಂತೆ)' 'ಕಡಲ್‌ಗೆ ಉಪ್ಪು ಪಾಡ್ಯೆರ ತೂಯೆರ್‌ಗೆ (ಕಡಲಿಗೆ ಉಪ್ಪು ಹಾಕಲು ನೋಡಿದ್ದಾರಂತೆ)' ಎಂಬ ಗಾದೆಗಳು ಪರಿಚಯಿಸಿದರೆ ಮೀನುಗಾರರಿಗೆ ಬಾನು ಕರಪೇರಿದರೆ ಎಲ್ಲಿಲ್ಲದ ಸಂತೋಷ . ಆ ಸಂದರ್ಭದಲ್ಲಿ ಮೀನು ಹೆಚ್ಚು ಸಿಗುತ್ತದೆ ಎಂಬ ನಂಬಿಕೆ ಅದನ್ನು 'ಕಡಲ್‌ಗ್ ಸೂ ಬೂರುಂಡ ಬಡಲ್ ಗೀತ್ ಉಣ್ಪು ಸೇರು' (ಕಡಲಿಗೆ ಬೆಂಕಿ ಬಿದ್ದರೆ ಬೇಕ್ಕಿಷ್ಟು ಅನ್ನ ಸೇರಿತು) ಎಂಬ ಗಾದೆಯಲ್ಲಿ ತಿಳಿಸಲಾಗಿದೆ.

ಜಿಪುಣನ ಸಂಪತ್ತಿನ ಆಸೆ ಉಳ್ಳವನಿಗೆ 'ಕಡಲ್‌ಡ್ ಎತ್‌ನೀರ ಇತ್ತಂಡ್ ದಾನೆ ಅಂಗದ್‌ನೆಗೀತ್ ಪರ್‌ಡ್‌ರೊಲಿಯೊ?'(ಕಡಲಿನಲ್ಲಿ ಎಷ್ಟು ನೀರಿದ್ದರೇನು ಬಾಯಾರಿಕೆಗೆ ಇಷ್ಟು ನೀರು ಕುಡಿಯಬಹುದೇ?) ಎಂಬ ಗಾದೆಯ ಮೂಲಕ ಉಪದೇಶ ಮಾಡಲಾಗಿದೆ. ಇದೇ ರೀತಿ ಗಾದೆ ಮಾತಿನ ಮೂಲಕ ಜನರನ್ನು ತಿದ್ದಲು, ಟೀಕಿಸಲು, ಉಪದೇಶ ಮಾಡಲು, ಮನಸ್ಸರಳಿಸಲು, ಜನಪದರು ಪ್ರಯತ್ನಿಸಿರುವುದು ಈ ಕೆಳಕಂಡ ತುಳುಗಾದೆಗಳಲ್ಲಿ ಗಮನಿಸಬಹುದು.

1. ತೋಡು ನೀಂದ್‌ದೆಂದು ಕಡಲ್‌ದತ್

(ಈಜುವ ಗರ್ವ ಕಡಲಿನಲ್ಲಲ್ಲ)

2. ನೀಂದ್‌ಬ ಗರ್ವೊ ಕಡಲ್‌ದತ್

(ಈಜುವ ಗರ್ವ ಕಡಲಿನಲ್ಲಲ್ಲ)

3. ಮಡಲ್‌ದಾಯಗ್ ಕಡಲ್‌ದಾಯ ಜಾಗ್ರತೆ ಪಂಡಿಲೆಕ್ಕೊ

(ಮಡಲಿನವನಿಗೆ (ಮೂರ್ತೆಯವನಿಗೆ) ಕಡಲಿನವನು (ಮೀನುಗಾರ) ಜಾಗ್ರತೆ ಹೇಳಿದಂತೆ)

4. ಸುದೆತ್ತ ಪುದರ್ ಕಡಲ್ ಸೇರ್‌ನಾಟ

(ಹೊಳೆಯ ಹೆಸರು ಕಡಲು ಸೇರುವವರೆಗೆ)

5. ಗಟ್ಟ ಬಡ್ತ್ಯೆಂಡ ಎರು ಆವೆಯೆ ಕಡಲ್ ಜತ್ತೆಂಡ ಮೀನಾವಯೆ

(ಗಟ್ಟ ಹತ್ತಿದನಾದರೆ ಎತ್ತಾಗಲಾರ, ಕಡಲಿಗಿಳಿದರೆ ಮೀನಾಗಲಾರ)

6. ತೆರೆ ಹಾಕುನೆ ಕರೆ ಬರಿಕ್

(ತೆರೆ ಬಡಿಯುವುದು ದಡದ ಕಡೆಗೆ)

7. ವಾಸುದೆತ ನೀರ್‌ಲ ಕಡಲ್‌ಗೆ ಹೆಚ್ಚ ಆತ್‌ನೆಂದಿದ್ದಿ

(ಯಾವ ಹೊಳೆಯ ನೀರೂ ಸಮುದ್ರಕ್ಕೆ ಹೆಚ್ಚಾದದ್ದಿಲ್ಲ)

8. ಸೊರ್ಕು ಸಿಕ್ಕೆ ಕಡಲ್‌ಗಲ ಉಂಡು

(ಸೊಕ್ಕು ಸೊರಗು ಕಡಲಿಗು ಉಂಟು)

9. ಅಯೋಗ್ಯನ ಗುಣ ನಾಡುನಿ ಪಂಡ, ಸಮುದ್ರದ ಚೀಪನೀರ ನಾಡಲೆಕ್ಕ

(ಅಯೋಗ್ಯನ ಗುಣ ಹುಡುಕುವುದು ಅಂದರೆ ಸಮುದ್ರದಲ್ಲಿ ಸಿಹಿನೀರು ಹುಡುಕಿದ ಹಾಗೆ)

10. ಸಮುದ್ರದ ಓಲೆನೀರ ಪರ್‌ಂಡಲಾ ಉಪ್ಪು

(ಸಮುದ್ರದ ನೀರು ಎಲ್ಲಿ ಕುಡಿದರೂ ಉಪ್ಪು)

11. ಸಮುದ್ರಗ್ ಕಟ್ಟೆಕಟ್ಟರೆ ಸಾಧ್ಯ ಉಂಡಾ?

(ಸಮುದ್ರಕ್ಕೆ ಕಟ್ಟೆಕಟ್ಟಲು ಸಾಧ್ಯ ಉಂಟಾ?)

12. ಉಡಲಡ್ ಪುಟ್ಪೋಡು ಬುದ್ದಿ , ಕಡಲ್‌ಡ್ ಪುಟ್ಪೋಡು ಗಾಳಿ

ಮೇಯಿಟ್ ಪುಟ್ಪೋಡಡು ಬೆಗರ್, ನೆಲಟ್ ಪುಟ್ಪೋಡು ಒಸರ್

(ಒಡಲಿನಲ್ಲಿ ಹುಟ್ಟುಬೇಕು ಬುದ್ಧಿ , ಕಡಲಿನಲ್ಲಿ ಹುಟ್ಟಬೇಕು ಗಾಳಿ,

ದೇಹದಲ್ಲಿ ಹುಟ್ಟಬೇಕು ಬೆವರು, ಭೂಮಿಯಲ್ಲಿ ಹುಟ್ಟುಬೇಕು ಒರತೆ)

13. ಕಡಲ್‌ಡ್ ಪೋಪ್ಪನಕಳೆ ಕರೆ ಬುಡಿಯರಾವಂದ್‌ಗೆ

(ಸಮುದ್ರದಲ್ಲಿ ಪ್ರಯಾಣ ಮಾಡುವವರು ದಡದಿಂದ ಹೆಚ್ಚು ದೂರವಿರಲಾರದಂತೆ)

14. ಕಡಲ್‍ದ ಕಟ್ಟಗ್ ಕುಂಡಚ್ಚ ಸಾಯೋ

(ಸಮುದ್ರದ ಸೇತುವೆಗೆ ಅಳಲಿನ ಸಹಾಯ)

15. ಕಡಲ್ ಪೋದುವೆ ಉಪ್ಪುಗು ತತ್ತಾವರೊ

(ಸಮುದ್ರದ ನಂಟು ಉಪ್ಪಿಗೆ ಬಡತನ)

16. ಕಡಲ ನೀರ್ ಕರಟ್ಟೇ ಉರುಡುನೆ

(ಕಡಲಿನ ನೀರು ಕರೆಯಲ್ಲೇ ಸೆಣಸುವುದು)

17. ಕಡಲ್ ನೀರ್‍ಡ ಕಜವಿದ್ದಿ ಮುಳಿತ್ತ ಪಡ್ಡುಡು ಬಜವಿದ್ದಿ

(ಕಡಲಿನ ನೀರಿನಲ್ಲಿ ಕಸವಿಲ್ಲ ಮುಳಿ ಹುಲ್ಲಿನ ಬಯಲಿನಲ್ಲಿ ತರಗೆಲೆಯಿಲ್ಲ)

18. ಕರೆತ್ತ ಕಪ್ಪೆನ್ ಕಡಲ್‍ಡ್ ಬುಡಿಲೆಕ್ಕ್ಯಾಂಡ್

(ಕೆರೆಯ ಕಪ್ಪೆಯನ್ನು ಕಡಲಲ್ಲಿ ಬಿಟ್ಟಂತಾಯಿತು)

ಕಡಲಿನ ಮೇಲೆ ಸದಾ ತೇಲಾಡುವ ಮೀನುಗಾರರ ಭವಿಷ್ಯ ನುಡಿವ ಗಾದೆಗಳು ಗಮನಾರ್ಹವಾದುದು.

19. ಕಡಲ್‍ದಾಯಗ್‍ಲ ಮಡಲ್‍ದಾಯಗ್‍ಲ ಗಂಜಿಗ್ ಅರಿಪಾಡುಜಿ

(ಕಡಲಲ್ಲಿ ಮೀನು ಹಿಡಿಯುವವನಿಗೂ ತಾಳೆ ಮರದಿಂದ ಕಳ್ಳು ತೆಗೆಯುವವನಿಗೂ ಅನ್ನ ಬೇಯಿಸಿ ಇಡಬೇಕಾಗಿಲ್ಲ)

ಏಕೆಂದರೆ :

20. ಕಡಲ್‍ದಾಯೆ ಮುರಕ್ಕೆಂಡ ಪೋಯ್ ಮಡಲ್‍ದಾಯೆ ಜಾರ್‍ಯೆಂಡ ಪೋಯೆ

(ಕಡಲಿನವನು ಮುಗಿದರೆ ಹೋದ , ಕಳ್ಳು ಇಳಿಸುವವ ಜಾರಿದರೆ ಹೋದ)

21. ಕಡಲಾಯೆರ್‍ನಲ ಮಡಲಾಯೆರ್‍ನಲ ನಪ್ಪು ನಿಜೋ ಅತ್ತ್

(ಕಡಲಾಯರದ್ದು (ಬೆಸ್ತರು) ಬಿಲ್ಲವರದ್ದು ಅನ್ನ ಶಾಶ್ವತವಾದುದಲ್ಲ)

ಇದೇ ರೀತಿ ವಿಶಾಲವಾದ ಕಡಲನ್ನು ಮಾತಿನ ತುಣುಕುಗಳಲ್ಲಿ ಅಡಗಿಸಿಕೊಂಡ ಗಾದೆಗಳು ಜನಪದರ ಕಡಲನುಭವದ ವಿವಿಧ ಮುಖಗಳನ್ನು ಪರಿಚಯಿಸುತ್ತದೆ.

2. ನೀರಿನ ಗಾದೆಗಳು

ಕಡಲು ಎಂದ ತಕ್ಷಣ ಕಣ್ಮುಂದೆ ನಿಲ್ಲುವುದು ಕೊನೆಗಾಣದೆ ನಿಂತಿರುವ ನೀರು. ಇಂತಹ ನೀರಿನ ಬಗ್ಗೆ ಮಡುಗಟ್ಟಿದ ಅನುಭವವು ಗಾದೆಗಳಲ್ಲಿ ಕಾಣಬಹುದು. ತುಳು ಭಾಷೆಯಲ್ಲಿ ಸಿಗುವ ಅಂತಹ ಗಾದೆಗಳನ್ನು ಗಮನಿಸಬಹುದು.

1. ಅಂಗದ್‌ನೆಗ್ ಉಪ್ಪು ನೀರೋ ?
   (ಬಾಯಾರಿಕೆಗೆ ಉಪ್ಪು ನೀರೋ ?)
2. ಅಂಗದ್‌ನೆಗ್ ನೀರ್ ಕೊರಂದಿನವೊಲು ಇಳಿಪಾಡೊಂದು ಕುಳ್ಳುದೆಗೆ
   (ನೀರಡಿಕೆಗೆ ನೀರು ಕೊಡದಲ್ಲಿ ಎಲೆ ಹಾಕಿಕೊಂಡು ಕುಳಿತಿದ್ದನಂತೆ (ಊಟಕ್ಕೆ)
3. ಉರಿನಾಡೆ ಉಪ್ಪುನೀರ್ ಬರಿನಾಡೆ ಮಣ್ಣಿನೀರ್
   (ಉರಿಯುವದಲ್ಲಿಗೆ ಉಪ್ಪು ನೀರು , ಸಿಗಿದಲ್ಲಿಗೆ ಮೆಣಸುನೀರು)
4. ಎರ್ಕಿ ನೀರ್‌ಗ ನುರ್ಕು ಹೆಚ್ಚು
   (ಉಕ್ಕಿದ ನೀರಿಗೆ ಸೊಕ್ಕು ಹೆಚ್ಚು)
5. ಕಣಿನ ಪೆಟ್ಟಿಗ್ ಉಪ್ಪುನೀರ್ ಮುಟ್ಟಿಯಿನ ಗಾದೆ
   (ಜಜ್ಜಿ ಕಪ್ಪಾದ ಏಟಿಗೆ ಉಪ್ಪು ನೀರು ಮುಟ್ಟಿಸಿದ ಗಾದೆ)
6. ಕಳಂಕಿ ನೀರ್‌ಗ ಬಲೆ ಪಾಡೋನೋಡು
   (ಕದಡಿದ ನೀರಿಗೇ ಬಲೆ ಹಾಕಬೇಕು)

   ಪರಿಸ್ಥಿತಿಯನ್ನು ಅನುಕೂಲಕ್ಕೆ ಬಳಸಿಕೊಳ್ಳುವಿಕೆ.

   ಕದಡಿದ ನೀರಿನಲ್ಲಿ ಮೀನಿನ ಕಣ್ಣು ಮಸುಕಾಗುತ್ತದೆ.
7. ಕೋಲು ಕಡ್ತ್ಂಡ ರಡ್ಡಾವು ನೀರ್ ಕಡ್ತ್‌ಡ್ ರಡ್ಡಾವಂದ್
   (ಕೊಲು ಕಡಿದರೆ ಎರಡಾದೀತು ನೀರು ಕಡಿದರೆ ಎರಡಾಗದು.)

   ರಕ್ತ ಸಂಭಂದ ಕಡಿಯದು
8. ಚೆಂಬುಂಡು ಈತ ನೀರ್ ದಿಡೊಂದು ಗಂಗೆ ಇಲ್ಲಲ್ ಉಳ್ಳೆಲೆಂದಿಲೆಕ್ಕೊ
   (ತಂಬಿಗೆಯಲ್ಲಿ ಇಷ್ಟು ನೀರು ಇಟ್ಟುಕೊಂಡು ಗಂಗೆ ಮನೆಯಲ್ಲಿ ಇದ್ದಾಳೆಂದ ಹಾಗೆ)
9. ನಿರೆಳ್ ತೂದು ನೀರ್‌ಗ್ ಲಾಯ್ತ ನಾಯಿದ ಗಾದೆ
   (ತನ್ನ) ನೆರಳು ನೋಡಿ ನೀರಿಗೆ ಹಾರಿದ ನಾಯಿಯ ಗಾದೆ)
10. ನಿಲೆ ತತ್ತೊಂಡು ತಳ್ಗೆ ಪತ್ತೊಂಡು
    (ನೆಲೆ ನೋಡಿ ನೀರ ದಾಟಬೇಕು)
11. ನೀಂದ್ಯೆರ ಕಲ್ಪೊಡಾಂಡ ನೀರ್‌ಗೇ ಜಪ್ಪೋಡು
    (ಈಜಲು ಕಲಿಯಬೇಕಾದರೆ ನೀರಿಗೆ ಇಳಿಯಬೇಕು)
12. ನೀಂದ್ಯೆರ ಜತ್ತಂಡ ರಡ್ಡ್ ಮುಕ್ಕಳಿ ನೀರಾಂಡಲ ಪರ್‌ಡ್ಡೋವು
    (ಈಜಲಿಕ್ಕೆ ಇಳಿದರೆ ಎರಡು ಗುಟುಕು ನೀರಾದರೂ ಕುಡಿದು ಹೋದೀತು)
13. ನೀಂದ್ಯೆರ ತೆರಿಂಡ ನೀರ್‌ದ ದಾನೆ ಪೋಡಿಗೆ?
    (ಈಜಲು ತಿಳಿದರೆ ನೀರಿನ ಹೆದರಿಕೆಯೇಕೆ ?)
14. ನೀಂದ್ಯೆರ ತೆರಿಯಂದಿನಾಯೆ ನೀರ್‌ಗ ಜತ್ತಿಲೆಕ್ಕಾಂಡ್
    (ಈಜಲು ತಿಳಿಯದವ ನೀರಿಗಿಳಿದಂತಾಯಿತು)
15. ನೀಂದ್ಯೆರ ತೆರಿಯಂದಿನಾಯೆ ಪತ್ತ್‌ನಾಯನ್‌ಲ ಮುರುಕ್ಕವೆ
    (ಈಜಲು ತಿಳಿಯದವನು ಹಿಡಿದವನನ್ನೂ ಮುಳುಗಿಸುವ)
16. ನೀಂದ್ಯೆರ ಬರ್ಪುನಾಯೆ ಮುರ್ಕು ಸಯ್ಯೆರ ಪೋತೆಗೆ
    (ಈಜಲು ತಿಳಿದವನು ಮುಳುಗಿ ಸಾಯಲಿಕ್ಕೆ ಹೋಗಿದ್ದಾನಂತೆ)

17. ನೀಂದ್ಯೆರ ಬಚ್ಚಿಂಡ್ ನೀರ್ ಪರೋಡೆ
(ಈಜಲು ಆಯಾಸವಾದರೆ ನೀರು ಕುಡಿಯಲೇ ಬೇಕು)
18. ನೀರ್‌ಗ್‌ಲ ಸೂಕುಲ ಮದಿಮೆ ಮಳ್ವೆರೆ ತೂತೆರ್‌ಗೆ
(ನೀರಿಗೂ ಬೆಂಕಿಗೂ ಮದುವೆ ಮಾಡಲು ನೋಡಿದ್ದಾರಂತೆ)
19. ನೀರ್‌ಡ್ ನೀಂದುವ ಮುಳಿಕ್ಕಡ್ಡಿದ ಲೆಕ್ಕೊ ನೀರೇರ್ನಗೆ ಮಿತ್ತ್ ತಗ್ಗನಗೆ ತಿರ್ತ್
(ನೀರಿನಲ್ಲಿ ಈಸುವ ಹುಲ್ಲುಕಡ್ಡಿಯ ಹಾಗೆ ನೀರು ಏರಿದಾಗ ಮೇಲೆ ತಗ್ಗಿದಾಗ ಕೆಳಗೆ)
20. ನೀರ್‌ಡ್ ಬರೆಯಿನ ತೊಜಂದ್ ಪಾದೆಡ್ ಬರೆಯಿನ ಮಾಜಂದ್
(ನೀರಿನಲ್ಲಿ ಬರೆದುದು ಕಾಣದು ಬಂಡೆಯಲ್ಲಿ ಬರೆದುದು ಮಾಸದು)
21. ನೀರಡ್ ಅಂಜುನ ನೀರೆಳ್‌ದ ಲೆಕ್ಕೊ
(ನೀರಲ್ಲಿ ಹೊಯ್ದಾಡುವ ನೆರಳಿನಂತೆ)
22. ನೀರಡ್ ಬರೆಯಿ ಬರವು
(ನೀರಿನಲ್ಲಿ ಬರೆದ ಬರಹ)
23. ನೀರ್ ತಿಕ್ಕನವುಲು ಮಿಯೊನೋಡು ಒಣಸ್ ತಿಕ್ಕನವುಲು ಉಂಡೊನೋಡು
(ನೀರು ಸಿಕ್ಕಿದಲ್ಲಿ ಮಿಯಬೇಕು, ಊಟ ಸಿಕ್ಕಿದಲ್ಲಿ ಉಣ್ಣಬೇಕು)
24. ನೀರ್‌ದ ಉಳಯಿದೆ ಪಾದೆದ ಲೆಕ್ಕೊ
(ನೀರಿನ ಒಳಗಣ ಹಾಸು ಬಂಡೆಯ ಹಾಗೆ) ನಿಶ್ಚಲ ಹಾಗೂ ನಿಗೂಡ ವ್ಯಕ್ತಿಯನ್ನು ಕುರಿತಂತೆ
25. ನೀರ್‌ದ ಪಾಮಜ ಒಟ್ಟುಗು ಬರು
(ನೀರಿನ ಹಾವಸೆ ಜೊತೆಗೆ ಬಂದಿತು)
ಬಿಡಲಾರದ ನಂಟು
26. ನೀರ್‌ದ ಮುಗುಳಿ ಏಪೊ ನರಿಪುಂಡುಂದು ಪಣಿಯೆರ ಬಲ್ಲಿ
(ನೀರಿನ ಗುಳ್ಳೆ ಯಾವಾಗ ಒಡೆಯುತ್ತದೆಂದು ಹೇಳಲು ಬಾರದು.)
27. ನೀರ್ ನೀರ್ ಒಂಜಾವು ಎಣ್ಣೆ ನೀರ ಒಂಜಾವಂದ್
(ನೀರು ನೀರು ಒಂದಾದೀತು, ಎಣ್ಣೆ ನೀರು ಒಂದಾಗದು.)
28. ನೀರ ಕಯೋತ್ತ ಮೇಲ್ ನಿರ್ಮಲೊ
(ಆಳದ ನೀರಿನ ಮೇಲು (ಭಾಗ) ನಿರ್ಮಲ)
ನಿಗೂಢ ವ್ಯಕ್ತಿಗಳ ತೋರಿಕೆಯ ಸಂಭಾವಿತನ.
29. ನೀರ ನೆಲೆ ಜತ್ತ ತೂವೊಡುಗೆ ನರಮಾನ್ಯ ಗುಣೋ ಪತ್ತ್ ತೂವೊಡುಗೆ
(ನೀರಿನ ನೆಲೆ ಇಳಿದು ನೋಡಬೇಕಂತೆ, ಮನುಷ್ಯನ ಗುಣ ಹಿಡಿದು ನೋಡಬೇಕಂತೆ)
30. ಪಾಮಜಿದಡಿತ ನೀರ್ ಪರಿಪುನ ತೆರಿಯಂದ್
(ಹಾವಸೆಯಡಿಯ ನೀರು ಹರಿಯುವುದು ತಿಳಿಯದು)
31. ಪಿಜಿನ್‌ದ ಕುಡೆಕ್ ನೀರ್ ಪೊಗ್ಗಿಲೆಕ್ಕಾಂಡ್
(ಇರುವೆಯ ಬಿರುಕಿಗೆ ನೀರು ಹೊಕ್ಕಂತಾಯಿತು)
32. ಬತ್ತಿ ನೀರ್ ಕಳಾಕಾಂಡ ಇತ್ತಿ ನೀರ್‌ಲ ಕಳಂಕೆ
(ಬಂದ ನೀರು ಕಲಕಾದರೆ ಇರುವ ನೀರೂ ಕಲಕೇ)
33. ಬದ್‌ಕಾಬಿ ನೀರ್ ಮುರ್ಕಾಡ್‌ಲ ಕೆರುಡು
(ಬದುಕಿಸುವ ನೀರು ಮಳುಗಿಸಿಯೂ ಕೊಂದು ಬಿಟ್ಟೀತು)
34. ಮರ್ಳ್ ನೀರ್‌ಗೆ ಕರ್ಳ್ ಇಜ್ಜಿ
(ಮರುಳು ನೀರಿಗೆ (ನೆರೆ ನೀರು) ಕರುಣೆ ಇಲ್ಲ (ಕನಿಕರವಿಲ್ಲ)

35. ಮರ್ಳ್ ನೀರ್‌ಗ ಉಬರ್ ಬಡ್ತಿ ಮೀನ್‌ದ ಗಾದೆ

(ಮರುಳು (ನೆರೆ) ನೀರಿಗೆ ಉಬರು ಹತ್ತಿದ ಮೀನಿನ ಗಾದೆ)

ಉದ್ವೇಗ , ಮಂಕುತನಕ್ಕೆ ಒಳಗಾಗಿ ವಶವಾಗುವುದು

ನೆರೆ ನೀರಿನ ವಿರುದ್ಧ ಈಸಿ ಹುಚ್ಚುಗಟ್ಟಿದಂತೆ ಓಡುವ ಮೀನುಗಳು ಗದ್ದೆಗಳಿಗೆ ಓಡುವುದು ಇದೆ ಇದನ್ನು ಉಬರು ಹತ್ತುವುದು ಎನ್ನುತ್ತಾರೆ.

36. ಮುಗುಳಿ ಲಕ್ಕುನೆ ನೀರ್‌ದ ಉಳಯಿಡ್‌ದ

(ಗುಳ್ಳೆ ಏಳುವುದು ನೀರಿನ ಒಳಗಿನಿಂದ)

37. ಮುರ್ಕುಡು ಪೋಪುನೆನ್ ತರ್ಕಡ್ ಪತ್ತಡ

(ಮುಳುಗಿ ಹೋಗುವುದನ್ನು ತಬ್ಬಿ ಹಿಡಿಯಬೇಡ)

38. ಮುರುಂಗುದು ಉರ್ಚಿಂಡಲ ಗುಳ್ಳೊ ಮಿತ್ತೆ ಬರು

(ಮುಳುಗಿ ಹೇತರೂ ಗುಳ್ಳೆ ಮೇಲೆ ಬಂದೀತು)

39. ಮುರುಂಗುನಾಯ ಲಕ್ವೆ ಮುರುಕ್ಕುನಾಯೆ ಸಯ್ಪೆ

(ಮುಳುಕು ಹಾಕುವುದು ಎದ್ದಾನು ಮುಳುಗುವವನು ಸತ್ತಾನು)

40. ಮುರುಕ್ಕುನಾಯಗ್ ಮುಳಿಗ್ಗಡ್ಡಿಲ ಮಲ್ಲೆಗೆ

(ಮುಳುಗುವವನಿಗೆ ಮುಳಿ ಹುಲ್ಲಿನ ಕಡ್ಡಿಯೂ ಹಿರಿದು)

41. ಮುರುಕ್ಕುನಾಯೆ ಮುರುಂಗವೆ

(ಮುಳುಗುವವನು ಮುಳುಗಿಸಿಯಾನು)

42. ಮೂಂಕು ಮುರ್ಕಿ ಬುಕ್ಕೊ ಎಕ್ಕದ್ ಆಸೆ ಬುಡೊಡು

(ಮೂಗು ಮುಳುಗಿದ ಮೇಲೆ ಉಸರಿನ ಆಸೆ ಬಿಡಬೇಕು)

43. ಸಾರೋ ಮುರ್ಕುದು ಒಂಜಿ ಅಂಡಲ ನೀಂದುಗೆ

(ಸಾವಿರ ಮುಳುಗಿ ಒಂದಾದರೂ ತೇಲಬಹುದಂತೆ)

ಹತ್ತಾರು ಸಂಕಷ್ಟಗಳು ಬಂದಾಗ ಒಂದಾದರೂ ಒಳ್ಳೆಯ ಸುದ್ದಿ ಬರಬಹುದು.

ಇದೇ ಬಗೆಯ ನೀರಿನ ಗಾದೆಗಳು ಜನಪದರು ನೀರಲ್ಲಿ ಮುಳುಗಿ ತೇಲಿ ಈಜಾಡಿ ಚೆಲ್ಲಾಟವಾಡಿ ಪ್ರತ್ಯೇಕವಾಗಿ ಅನುಭವಿಸಿದ ಜ್ಞಾನವನ್ನು ಪರಿಚಯಿಸುತ್ತವೆ.

3. ಮೀನಿನ ಗಾದೆಗಳು

ಕರ್ನಾಟಕ ಕರಾವಳಿಯ ಜನರಿಗೆ ಮೀನು ಹೆಚ್ಚು ಪ್ರಿಯವಾದದ್ದು. ಜಲದ ಮೇಲೆ ತೇಲಾಡುತ್ತಲೇ ಅದರೊಳಗೆ ಆಡುತ್ತಿರುವ ಮೀನಿನ ಚಲನವಲನವನ್ನು ಗ್ರಹಿಸುವ ಆ ಜನರು ಕಡಲಲ್ಲಿ ಅಡಗಿರುವ ಮೀನಿನ ಪ್ರತಿಯೊಂದು ವಿಧವನ್ನು ಅರಿತಂತಹವರು ಮೀನಿನ ಬಗ್ಗೆ ಗಳಿಸಿಕೊಂಡ ಜ್ಞಾನವನ್ನು ಮೀನಿನ ಗಾದೆಗಳು ಪರಿಚಯಿಸುತ್ತವೆ. ಅವರಾಡುವ ಮಾತಿನ ನಡುವೆ ಮೀನಿನ ಗಾದೆಗಳನ್ನು ಬಳಸುತ್ತಿರುವುದನ್ನು ಕೇಳುತ್ತಿದ್ದರೆ ಮೀನು ಅವರಿಗೆಷ್ಟು ಹತ್ತಿರವಾದ ಜಲಚರಪ್ರಾಣಿ ಎಂಬುದು ತಿಳಿಯುತ್ತದೆ ಅಲ್ಲದೆ ಕರಾವಳಿ ಸಂಸ್ಕೃತಿಯಲ್ಲಿ ಮೀನಿನ ವಾಸನೆ ಸಾಮಾನ್ಯವೆನಿಸುತ್ತದೆ. ಗಾದೆಗಳನ್ನು ಗಮನಿಸಿದರೆ ಅದರ ಅರಿವಾಗುತ್ತದೆ.

1. ನನಗೂ ನಿನಗೂ ವಿಶ್ವಾಸ ಮೀನ ಕುಕ್ಕೇಲಿ ಕೈ ಹಾಕಬೇಡ
2. ಪಕ್ಷಿಗೆ ಆಕಾಶವೇ ಬಲ ಮತ್ಸ್ಯಕ್ಕೆ ನೀರೇ ಬಲ.
3. ಪರೀಕ್ಷೆಗೆಂದು ಮೀನು ತಿಂದರೂ ಬಾಯಿ ನಾರದೇ ಇದ್ದೀತೆ?
4. ಮೀನು ನೀರಿನಲ್ಲಿ ಮುಳುಗಿದರೆ ಸ್ನಾನದ ಫಲ ಬಂದೀತೆ?
5. ಮೀನಿನ ಹೆಜ್ಜೆ ಬೇಕಾದರೂ ಹುಡುಕಬಹುದು, ಹೆಣ್ಣಿನ ಮನಸ್ಸು ಅರಿಯಾಕಾಗೊಲ್ಲ.
6. ಅತಿಥಿ, ಮೀನು ಎರಡೂ ಮೂರು ದಿನಕ್ಕೆ ನಾರುತ್ತೆ.
7. ಆನೆ ನೀರಾಟದಾಗ ಮೀನು ಕಂಡಂಜುತ್ತಾ
8. ಉಚ್ಚೇಲಿ ಮೀನು ಹಿಡಿದಂತೆ.
9. ನೀರಲ್ಲಿರೋ ಮೀನಿನ್ನು ದಡಕ್ಕೆ ಹಾಕಿದ ಹಾಗೆ
10. ಮೀನಿನ ಮರಿಗೆ ಈಜು ಕಲಸಿದಂತೆ
11. ಮೀನು ತಂದ್ರೆ ಮನೆಯೆಲ್ಲ ಹೊಲಸು
12. ಮೀನುಹುಳಿ ಕುಡ್ದು ಮಿಡಿಮಿಡಿದೆದ್ದ
13. ಕುಚ್ಚಲು ಮೀನು ಕುಣೀತಾದ, ಜೇಣಿ ಮೀನು ನಗೀತಾದೆ ಎನ್ನುವಂತೆ
14. ಸುಟ್ಟ ಮೀನು ಸುಟ್ಟರೆ ಪರಿಮಳವಿಲ್ಲ

ತುಳುಭಾಷೆಯಲ್ಲಿ ಇದೇ ಬಗೆಯ ಗಾದೆಗಳನ್ನು ಗಮನಿಸಬಹುದು.

1. ನೀರ್ ಬೊಂಟೆ ನಿಜೊ, ಕಾಡ್ ಬೊಂಟೆ ಕಳು
   (ನೀರಿನ ಬೇಟೆ (ಮೀನು ಬೇಟೆ) ನಿಜ. ಕಾಡು ಬೇಟೆ ಸುಳ್ಳು)
2. ಏರಿ ತಿಂದಿನಾಯ ಬೋರಿ ಮಾರುವೆ
   (ಏರಿ ಮೀನು ತಿಂದವನು ಹೋರಿ ಮಾರಿಯಾನು)
3. ಕೂರಿಡಿತ್ತಿ ಕೊಡ್ಯಾನ್‌ಗ್ ದಾನೆಗೊತ್ತು.
   (ಬಲೆಯಲ್ಲಿದ್ದ ಮೀನಿಗೆ ಹೊರಗಿನ ವಿಚಾರ ಏನುಗೊತ್ತು)
4. ನಕ್ರ ಪಾಡ್ದ್ ಏರಿ ಒಯಿಲೆಕ್ಕೊ
   (ಎರೆಹುಳು ಹಾಕಿ ಎರಿ ಮೀನು ಎಳೆದ ಹಾಗೆ)
5. ಅಂಗಡಿ ಮರ್ದ್ ಬಂಗುಡೆ ಪತ್ಯೊ
   (ಅಂಗಡಿ ಮದ್ದು, ಬಂಗುಡೆ ಪಥ್ಯ)
   ಆಯುರ್ವೇದ ಔಷಧಿ ಪ್ರಕಾರ ಬಂಗುಡೆಯಂತ ಮೀನು ಪಥ್ಯಕ್ಕೆ ವಿರೋಧವಾಗುತ್ತದೆ.
6. ಅಕಳಕಳ್ ತೂವೊಣುಂಬೆರ್ ನಿಕ್ಕೇತ್ ಮೀನ್ ಕೇಣ್‌ದಳಗೆ
   (ಅವರವರು ನೋಡಿಕೊಂಡಾರು, ನಿನಗೆಷ್ಟು ಮೀನು ಎಂದು ಕೇಳಿದ್ದಾಳಂತೆ)

★ ಮೀನು ಮಾರುವವಳಲ್ಲಿ ಮೀನಿಗೆ ಕ್ರಯ ಮಾಡುವ ನೆಪದಲ್ಲಿ ಕಾಮುಕ ಗಂಡಸೊಬ್ಬ ತನ್ನ ಗುಪ್ತೇಂದ್ರಿಯವು ಕಾಣುವಂತೆ ಅವಳ ಇದಿರು ಕುಳಿತಾಗ ಅವಳು ಅದಕ್ಕೆ ಅದೇ ರೀತಿಯಲ್ಲಿ ಪ್ರತಿಕ್ರಿಯೆ ತೋರಿ ಕುಳಿತ ಹೆಂಗಸು ಈ ಮಾತನ್ನು ಹೇಳಿದಳಂತೆ.

7. ಅರುವತ್ತೆ ತರು ಪತ್ಯೆಂಡ ಸಮ್ಮಲೆ ಮೊರಂಟೆ ಪತ್ವೆ

(ಅಳಿಯ ಕಿರು ಮೀನು ಹಿಡಿದರೆ ಮಾವ ಮೊರಂಟೆ ಮೀನು ಹಿಡಿದಾನು)

8. ಇನಿತವೊಂಜಿ ಕರಿಂಡ ಎಲ್ಲೆ ಕೋರಿ ಮೀನ್‌ಡ್ ಒಣಸ್ ಪಾಡ್‌ಗೊ ಪಣ್ತಿಗೆ

(ಈ ದಿನವೊಂದು ಕಳೆದರೆ ನಾಳೆ ಕೋಳಿ ಮೀನಿನಲ್ಲಿ ಊಟ ಹಾಕುವ ಎಂದಿದ್ದಾನಂತೆ)

★ಸದ್ಯದ ಸಮಸ್ಯೆಯ ಪರಿಹಾರ ನಾಳೆಯ ಬಗ್ಗೆ ನಿಶ್ಚಿಂತೆ.

9. ಈ ಕೈನ್ ಬುಡುದೇನ್ ನಾ ಬೇಲೆಲ ಬೆಣ್ತಿಜಿಂದ್ ಅಡ್ಯದಾಳ್ ಪ್ರಮಾಣೊ ಮಲ್ತಿಗಾದೆ.

(ಈ ಕೈಯನ್ನು ಬಿಟ್ಟು ನಾನು ಯಾವ ಕೆಲಸವನ್ನೂ ಮಾಡಲಿಲ್ಲ ಎಂದು ಮೀನು ಮಾರುವವಳು ಪ್ರಮಾಣ ಮಾಡಿದ ಗಾದೆ.)

★ಮೀನು ಮಾರುವ ಹೆಂಗಸೊಬ್ಬಳು ಮೀನಿನ ಬುಟ್ಟಿಯ ಕೈಯನ್ನು ಹಿಡಿದುಕೊಂಡು ಗಂಡನಲ್ಲಿ ಹೇಳಿದ ಮೋಸದ ಮಾತು)

10. ಉಬರ್ ಬಡ್ತಿ ಮೀನಿಗ್ ಅಬುರು ಇದ್ದಿ

(ಉಬರು ಹತ್ತಿದ ಮೀನಿಗೆ ಮರ್ಯಾದೆ ಇಲ್ಲ)

★ನೆರೆಯ ನೀರಿಗೆ ಎದುರಾಗಿ ಈಜಿ, ತೋಡುಗದ್ದೆಗಳಿಗೆ ಗುಂಪಾಗಿ ಹುಚ್ಚುಗಟ್ಟಿದಂತೆ ಹಾಯುವ ಮೀನುಗಳನ್ನು ಉಬರು ಹತ್ತುವುದೆನ್ನುತ್ತಾರೆ.

11. ಎಣ್ಣೆ ಕಸಂಟ್‌ಂಡ ಪೋಂಡು , ಮೀನ್ ಕುಮೇಂಡ ಪೋಂಡು

(ಎಣ್ಣೆ ಕಮಟಾದರೆ ಹೋಯಿತು , ಮೀನು ಕೊಳೆತರೆ ಹೋಯಿತು)

12. ಏರಿ ತಿಂದ ರುಚಿಕೆ ಬೋರಿ ಮಾರ್‌ಡೆಗೆ

(ಏರಿ ಮೀನನ್ನು ತಿಂದ ರುಚಿಗೆ (ಮಾರುಹೋಗಿ) ಹೋರಿಯನ್ನು ಮಾರಿದನಂತೆ)

★ಏರಿ ರುಚಿಯಾದ ಮೃದು ಮಾಂಸದ ಮೀನು

★ಬಾಯಿ ಚಾಪಲ್ಯಕ್ಕೆ ಸೋತು ಸೊತ್ತನ್ನು ಕಳೆದುಕೊಳ್ಳುವುದು

13. ಎರೆ ಸಂಗೋಲ ಮಲ್ಪೊಲಿ ಮೀನ್ ಮಾರುನಾಳೆ ಸಂಗೊ ಸಲ್ಲ

(ಯಾರ ಸಂಗವನ್ನು ಮಾಡಬಹುದು ಮೀನುಮಾರುವವಳ ಸಂಗ ಸಲ್ಲದು)

★ಮೀನಿನ ವಾಸನೆ ಮೈಗೆ ಹತ್ತಿಕೊಳ್ಳುತ್ತದೆ.

14. ಓಟೆದೆ ಪುರಳ್‌ಡ್ ನಾದೋ ಬರು ಮೀನ್‌ದ ಪುರಳ್‌ಡ್ ನಾತೋ ಬರು

(ಬಿದಿರಿನ ಕೊರಳಲ್ಲಿ ನಾದ ಬಂದೀತು ಮೀನಿನ ಹೊಲಸಲ್ಲಿ ವಾಸನೆ ಬಂದಿತು)

15. ಕುಡ್‌ಕ್ ಪಾಡ್‌ನ ಕೈಲ ಇದ್ದಿ ಕಲ್‌ಂಬುರೊಲ ಇದ್ದಿ

((ನೀರಿನೊಳಗಿನ) ಬಲಕ್ಕೆ ಹಾಕಿದ ಕೈಯೂ ಇಲ್ಲ ಕುಲುಂಬುರು ಕೂಡಾ ಇಲ್ಲಾ)

★ ಕುಲುಂಬುರು - ಒಂದು ಜಾತಿಯ ಮೀನು

★ ಇಕ್ಕಟ್ಟಿನಲ್ಲಿ ಸಿಲುಕಿಕೊಂಡು ನಷ್ಟವಾಗುವುದು

16. ಕೆರೆ ಉಣುಂಗ್‌ಂಡ್ ಮೀನ್ ಸಯ್ತ್ಂಡ್

(ಕೆರೆ ಒಣಗಿತು ಮೀನು ಸತ್ತಿತು.)

★ ಆಶ್ರಯ ತಪ್ಪಿದಾಗ ಆಗುವ ಅನಾಹುತ

17. ಕೊಡ್ಯಣ ತರುಕ್ಕು ನೆಗೆತ್ತ್‌ದೆ ಉಪ್ಪೊಡುಗೆ

(ಕೊಡ್ಯಣ ಮೀನಿಗೆ ತೇಲುತ್ತಲೇ ಇರಬೇಕಂತೆ)

★ ಕೊಡ್ಯಣ ಎಂಬ ಕಿರು ಮೀನು ಹೆಚ್ಚಾಗಿ ನೀರಿನ ಮೇಲು ಪದರಿನಲ್ಲೇ ಓಡಾಡುತ್ತಿರುತ್ತದೆ.

★ ಸದಾ ತೋರಿಸಿಕೊಳ್ಳುವ ಪ್ರವೃತ್ತಿ

18. ಗಾವಟೆ ಮುಳ್ಳು ಮುಳ್ ಅತ್ತ್ ಚಿಕೋಟೆ ಮೀನ್ ಮೀನತ್ತ್

(ಗಾವಟೆ ಮುಳ್ಳು ಮುಳ್ಳಲ್ಲ ಚಿಕೋಟೆ ಮೀನು ಮೀನಲ್ಲ)

★ಗಾವಟೆ ಎಂಬುದು ತೊಗಟೆಯಲ್ಲಿ ಮುಳ್ಳಿನಂತಹ ರಚನೆಗಳಿರುವ ಮರ

★ ಚಿಕೊಟೆ ಎಂಬುದು ಬೆಳವಣಿಗೆ ಇಲ್ಲದ ಕಿರು ಮೀನು

19. ಚಾಪೆದ ಮೀನ್‌ಲ ಕುಂಬಾವುಂಡು
(ದಾಸ್ತಾನು ಮನೆಯ ಮೀನು ಲಡ್ಡಾಗುತ್ತದೆ)
ಚಾಪೆ : ಉಪ್ಪು ಹಾಕಿ ಒಣಗಿಸಿದ ಮೀನನ್ನು ದಾಸ್ತಾನು ಮಾಡುವ ಮನೆ

20. ಚಾರ್‌ಗಾವುನ ಪತ್ ತರುಡ್ದ್ ಪೂಳುಗಾವುನ ಒಂಜಿ ಕಿಜನೆಡ್ಡೆಗೆ
(ಸಾರಿಗಾಗುವ ಹತ್ತು ಕಿರು ಮೀನುಗಳಿಗಿಂತ ತುಂಡಿಗಾಗುವ ಒಂದು ಕಿಜನು ಮೀನುಲೇಸಂತೆ)

21. ಜಬರ್‌ದಸ್ತಿಡ್ ಉಬರ್ ಬಡ್ತಂದ್
(ಬಲಾತ್ಕಾರದಿಂದ ಮೀನು ಏರು ನೀರು ಹತ್ತದು)
★ ಮೊದಲ ನೆರೆ ನೀರಿನ ಪ್ರವಾಹಕ್ಕೆ ಇದಿರಾಗಿ ಮೀನುಗಳು ಈಸುವುದನ್ನು 'ಉಬರ ಬುಡ್ಪುನೆ' ಎನ್ನುತ್ತಾರೆ

22. ಜಲಕ್ಕೊದ ಗುಂಡಿಡ್ ಮಲಕೊದ ಮೀನ್
(ಜಳಕದ ಹೊಂಡದಲ್ಲಿ ತುಳುಕುವ ಮೀನು)

23. ಸೌತೆಗೆ ಕುದ್ಕೆ ಕಾವೆಲ್, ಮೀನ್‌ಗ್ ಪುಚ್ಚೆ ಕಾವೆಲ್
(ಸೌತೆಕಾಯಿಗೆ ನರಿ ಕಾವಲು , ಮೀನಿಗೆ ಬೆಕ್ಕು ಕಾವಲು)

24. ದೊಡ್ಡವುದಡ್ಯೆಗೆ ಬಡ್ಡುಕುರ್ಜಿದ ರೇಸೋ ಇತ್ತಿಲೆಕ್ಕಾಂಡ್
(ಅಕ್ಕಿರೊಟ್ಟಿಗೆ ಬಡ್ಡುಕುರ್ಜಿ ಮೀನಿನ ಸಾರು ಇದ್ದ ಹಾಗಾಯಿತು)
★ ಅನುಕೂಲ ಸಂಬಂಧ

25. ನಂಗ್ ಮೀನ್ ಪುಡಿಕ್ಕೆನೊ ಅಯೆರಂದುಂಡೊ?
ನಂಗು ಮೀನು ಪುಷ್ಟಿ ಆಗುವುದೆಂದುಂಟೆ?
ನಂಗು ಚಪ್ಪಟೆಯಾಗಿರುವ ಒಂದು ಬಗೆಯ ಮೀನು

26. ನೀರ್‌ಡ್ದ್ ದೆತ್ತನ್ ಮೀನ್‌ದ ಲೆಕ್ಕೊ
(ನೀರಿನಿಂದ ತೆಗೆದ ಮೀನಿನಂತೆ)

27. ನೀರ್ ಪಂದಂಡ ಮೀನ್ ಉಂಡು
(ನೀರು ಅಲುಗಾಡಿದರೆ ಮೀನು ಉಂಟು)
★ ಅನುಮಾನ ಪ್ರಮಾಣ

28. ನೂಲು ಕಡಿಂಡಲ ಗಾಲೊ ನಿಂಗಿ ಮೀನ್ ಬದ್‌ಕಂದ್
(ನೂಲು ತುಂಡಾದರೂ ಗಾಳ ನುಂಗಿದ ಮೀನು ಬದುಕದು)

29. ಪಾಚೆಲ್ ತರು ಏತ್ ಪುಡಿಕೆನೊ ಅವು ?
ಪಾಚೆಲು ತರು - ಬೆಳವಣಿಗೆಯಿಲ್ಲದ ಸಣ್ಣ ಜಾತಿಯ ಮೀನು
(ಪಾಚಲು ಮೀನು (ಶಿರು ಮೀನು) ಎಷ್ಟು ಪುಷ್ಟಿ ಆದೀತು?)

30. ಪೂತಾಳೆಗ್ ಪೂ ಪರಿಮಳೊ ಮೀನ್‌ದಾಳೆಗ್ ಮೀನ ಪರಿಮಳೊ
(ಹೂವಿನವಳಿಗೆ ಹೂವು ಪರಿಮಳ ಮೀನಿನವಳಿಗೆ ಮೀನು ಪರಿಮಳ)

31. ಬಳ್ಚಟ್ಟಗ್ ರೇಸೊ ಬೇಕೊ ಬಯ್ಪಂದ್
(ಬಳ್ಚಟ್ಟು ಮೀನು (ಪಲ್ಲದ) ರಸ ಬೇಗ ಎಳೆದುಕೊಳ್ಳದು)
★ ಬಳ್ಚಟ್ಟು ಎಂಬುದು ಚಪ್ಪಟೆಯಾದ ಚಪ್ಪೆ ರುಚಿಯ ಮೀನು

32. ಬಾಲೆ ಪೋದು ಬಬ್ಬರ್ಯೆ ಆಯಿ ಗಾದೆ
(ಮಗು ಹೋಗಿ ಬಬ್ಬರ್ಯ ಭೂತವಾದ ಗಾದೆ)

★ ಮೀನು ಮಾರಲು ಮೂರು ಸೀಮೆಗೆ ಹೋದ ಹೆಂಗಸೊಬ್ಬಳು ಪರಿಚಿತರ ಮನೆಯ ಚಾವಡಿಯಲ್ಲಿ ರಾತ್ರಿ ಮಲಗಿಕೊಳ್ಳವಾಗ ಮನೆಯ ಹುಡುಗನೂ ಅಲ್ಲಿಯೇ ಮಲಗಿದ್ದ . 'ಮಗುವಲ್ಲವೇ ಮಲಗಿಕೊಳ್ಳಲಿ' ಎಂದಿದ್ದರು ಮನೆಯವರು . ನುಡುವಿರುಳು ಹುಡುಗ ಮೆಲ್ಲನೆ ಹೆಂಗಸನ್ನು ಆಕ್ರಮಿಸಿದ. ಆಕೆ ಆಗ ಪ್ರತಿಭಟಿಸಲಿಲ್ಲ . ಬೆಳಿಗ್ಗೆ ಮನೆಯವರೊಡನೆ ಅವಳು ಮೇಲಿನ ಮಾತು ಹೇಳಿದಂತೆ ಬಬ್ಬರ್ಯ ಬೃಹದಾಕಾರ ತಾಳಲಿಲ್ಲ ಒಂದು ಭೂತವೆಂದೂ ಘಟ್ಟಕೊಂದು ಕಾಲು ಸಮುದ್ರಕೊಂದು ಕಾಲು ಇಟ್ಟುಕೊಂಡು ನಿಂತಿದ್ದನೆಂದೂ ಪ್ರತೀತಿ.

33. ಮಡೆಂಜಿ ಪೊಯಿನವುಲೆ ಕಳಂಕ್ ತಪ್ಪಂದ್
(ಮಡೆಂಜಿ ಮೀನು ಹೋದಲ್ಲಿ ಕಳಂಕ್ ತಪ್ಪದು)
★ವಿನಾ ಕಾರಣ ತೊಂದರೆ ಕೊಡುವವರು.

34. ಮಾಂತ ಮೀನುಲಾ ಉರ್ಚುನೆ ನಂಗ್‌ದ ಮಿತ್ತ್‌ಗೆ
ಎಲ್ಲಾ ಮೀನುಗಳೂ ಹೇಲುವುದು ನಂಗು ಮೀನಿನ ಮೇಲಂತೆ
★ ನಂಗು ಎಂಬುದು ಚಪ್ಪಟೆಯಾಕಾರದ ದಡ್ಡತನಕ್ಕೆ ಪ್ರತೀಕವಾದ ಒಂದು ಜಾತಿಯ ಮೀನು

35. ಮೀನ್‌ದ ಪರಿಮಳೊ ಬರಂದೆ ಅಡ್ಕದಾಳೆಗ್ ನಿದ್ರೆ ಬತ್ತೀಜಿಗೆ
(ಮೀನಿನ ಪರಿಮಳ ಬಾರದೆ ಮೀನುಗಾರ್ತಿಗೆ ನಿದ್ದೆ ಬರಲಿಲ್ಲವಂತೆ)

36. ಮುಗುಡುಗು ಪೋಡಿತ್ತೀಂಡತ್ತೊ ಮಗ ವೂರಂಟಿಗೆ ಪೊಡಿಪ್ಪೆರ?
ಮುಗುಡು ಮೀನಿಗೆ ಹೆದರಿದರಲ್ಲವೇ ಮಗ ವೊರಂಟಿ ಮೀನಿಗೆ ಹೆದರುವುದು?
★ದೊಡ್ಡ ವಿಷಯಗಳಿಗೆ ಅಂಜದವನು ಚಿಕ್ಕ ವಿಷಯಗಳಿಗೆ ಅಂಜಲಾರ
★ ಮುಗುಡು ಮೀನು ವೂರಂಟೆಗಿಂತ ದೊಡ್ಡದಾದ ಮತ್ತು ಮುಳ್ಳುಗಳಿರುವ ಮೀನು

37. ವೊರಂಟಿಗ್ ಮೀಸೆ ಇದ್ದಿ
'ವೊರಂಟಿ' ಮೀನಿಗೆ ಮೀಸೆ ಇಲ್ಲ
★ಸಿಹಿನೀರಿನಲ್ಲಿರುವ ಒಂದು ಜಾತಿಯ ಮೀನು

38. ಸೂಟಿದ ಮೀನ್‌ಗೆ ಭಾರಿ ರುಚಿಗೆ
(ಸೂಟಿಯ ಮೀನಿಗೆ ಭಾರೀ ರುಚಿಯಂತೆ)

★ರಾತ್ರಿಯ ವೇಳೆ ಪಂಜು ಹೊತ್ತಿಸಿಕೊಂಡು ಹೊಳೆಯ ನೀರಿನಲ್ಲಿ ನಡೆಯುವಾಗ ಪಂಜಿನ ಬೆಳಕಿಗೆ ಮೀನುಗಳು ಮೇಲೆ ಬರುತ್ತವೆ. ಆಗ ಅವುಗಳನ್ನು ಕತ್ತಿಯಿಂದ ಕಡಿದು ಕೊಲ್ಲುತ್ತಾರೆ. ಇಂತಹ ಬೇಟೆಯ ಮೀನು ರುಚಿಕರವೆಂದು ಪ್ರತೀತಿ.

39. ಸೈಪಿ ಕಾಲೊಗು ಮಾಳಪ್ಪಯ್ಯೆ ಮೀನ್ ತಿಂದ್ರಿಯಗೆ
(ಸಾಯುವ ಕಾಲಕ್ಕೆ ಮಾಳಪ್ಪಯ್ಯ ಮೀನು ತಿಂದುಬಿಟ್ಟನಂತೆ)

40. ಹಂಗ್ ಬೆಂಗ್‌ದ ಸಮ್ಮಾನೊಡ್ದು ನಂಗೆ ಚಟ್ಲಿದ ತಂಞಾಣೊ ಎಡ್ಡೆಗೆ
(ಹಂಗಿನ ಔತಣದ ಊಟಕ್ಕಿಂತ ನಂಗು ಮೀನಿನ ಚಟ್ನಿಯ ಜೊತೆಗಿನ ತಂಗಳನ್ನ ಲೇಸು)

41. ಮೀನ್‌ಗ್ ನೀಂದೆರೆ ಕಲ್ಪಾಯಿಲೆಕ್ಕ
(ಮೀನಿಗೆ ಈಜಲು ಕಲಿಸಿದ ಹಾಗೆ)

42. ಮಲ್ಲ ಮೀನ್ ಎಲ್ಯ ಮೀನ್‌ನ ನೀಂಗ್‌ದೇ ಬುಲೆಪುನಿ
(ದೊಡ್ಡ ಮೀನು ಸಣ್ಣ ಮೀನನ್ನು ನುಂಗದೇ ಬಿಡುತ್ತದೆಯೇ?

43. ಪೂವಕ್ಕೆ ಅವಂದ್ ಪೂವಕ್ಕನ ಪೂಮೀನ್‌ದ ಕಜಿಪು ಆಪು
(ಪೂವಕ್ಕ ಅಗದು ಪೂವಕ್ಕನ ಪೂ ಮೀನಿನ ಪಲ್ಯ ಆದೀತು)

44. ಬಂಗಾರ್ ಎಮುರಿಗೆಗ್ ಕರಿಜಿನ ಬೋಡು , ಬಂಗುಡೆ ದಿಂಜಿಯರೆ ಕಾಂಟ್ಯ ಬೋಡು
(ಬಂಗಾರ ಜತನವಾಗಿಡಲು ಕರಡಿಗೆ ಬೇಕು , ಬಂಗಡೆ ಮೀನು ತುಂಬಿಸಲು ಬುಟ್ಟಿಬೇಕು)

45. ಬೊಳಂತೆ ಅರಿತ ಉಣುಪ್ಪುಲಾ ಅವೊಡು ಬೊಳ್ಳಂಜಿರ್‌ದ ಕಜಿಪ್ಪುಲಾ ಅವೊಡು
(ಬೆಳ್ತಿಗೆ ಅಕ್ಕಿಯ ಅಕ್ಕಿಯ ಅನ್ನವೂ ಆಗಬೇಕು, ಬೊಳೆಂಜಿರಿ ಮೀನಿನ (ಬಿಳಿಯ ಚಿಕ್ಕಮೀನು) ಪಲ್ಯವೂ ಆಗಬೇಕು.

46. ಮಡಂಜಿಗ್ ದೀಯಿ ಮಕ್ಕೇರಿಗ್ ಮುಗುಡು ಬೂರುಂಡ್
(ಮಡೆಂಜಿ ಮೀನಿಗೆ ಇಟ್ಟ ಮಕ್ಕೆರಿಗೂಡಿನಲ್ಲಿ ಮಗುಡು ಮೀನು ಬಿತ್ತು)

47. ಮುಗುಡು ಜಾರದ್ ಪೋಂಡು , ಮೊರಂಟಿ ನೂರುದು ಪೋಂಡು
(ಮುಗುಡು ಮೀನು ಜಾರಿ ಹೋಯಿತು ಮೊರಂಟಿ ಮೀನು ನುಸುಳಿಹೊಯಿತು)

48. ಮೊರಂಟಿ ತಿಕ್ಕಂದಿನ್‌ಕ್ ಪರಂಟ್ ಪತ್ತೆ
(ಮೊರಂಟಿ ಮೀನು ಸಿಕ್ಕದುದಕ್ಕೆ ದೊಡ್ಡ ಕಪ್ಪೆ ಹಿಡಿದ)

49. ನೀರ್ ಇದ್ಯಂದ್ ಮೀನ್ ಇಜ್ಜಿ
(ನೀರಿಲ್ಲದೆ ಮೀನಿಲ್ಲ)

50. ಪಕ್ಕಿಗ್ ಆಕಾಶದ ಬಲ, ಮೀನ್‌ಗ್ ನೀರದ ಬಲ
(ಹಕ್ಕಿಗೆ ಆಕಾಶದ ಬಲ, ಮೀನಿಗೆ ನೀರಿನ ಬಲ)

51. ಪುಚ್ಚೆದ ಕೈಟ್ ಮೀನ್ ಸೂಟ್ ಪಾಡೆರೆ ಕೊರಿಲೆಕೊ
(ಬೆಕ್ಕಿನ ಕೈಯಲ್ಲಿ ಮೀನು ಸುಡಲು ಕೊಟ್ಟ ಹಾಗೆ)

52. ಮಡಂಜಿ ಪೊಯಿನವುಳು ಕಲಂಕ್ ತಪ್ಪಂದ್ ಒಕ್ಕೆಲ್ಮೆ ಪೋಯಿನವುಳು ನ್ಯಾಯ ತಪ್ಪಂದ್
(ಮಡೆಂಜಿ ಮೀನು ಹೋದಲ್ಲಿ ಕಲುಕು ತಪ್ಪದು, ಒಕ್ಕಲಿಗ ಹೋದಲ್ಲಿ ವಿವಾದ ತಪ್ಪದು.)

53. ಕೂರಿಡಿತ್ತಿ ಕೊಡ್ಯಾನಗ್ ದಾನೆಗೊಂತೆ
(ಕೂರಿಯಲ್ಲಿದ್ದ ಮೀನಿಗೆ ಹೊರಗಿನ ವಿಚಾರ ಏನು ಗೊತ್ತು.)

4. ಉಪ್ಪಿನ ಗಾದೆ

ಸಮುದ್ರಕ್ಕೊಗಿ ಬಾಯಾರಿ ಬಂದ ಎಂಬ ಗಾದೆಯೇ ಉಪ್ಪಿಗೂ ಕಡಲಿಗೂ ಇರುವ ನೆಂಟಸ್ತಿಕೆಯನ್ನು ತಿಳಿಸುತ್ತದೆ. ಸಮುದ್ರದ ಸತ್ವವಾದ ಉಪ್ಪು ಮನುಷ್ಯನಿಗೆ ಎಷ್ಟು ಮಹತ್ವವಾದದ್ದು ಎಂಬುದಕ್ಕೆ ಉಪ್ಪಿಗಿಂತ ರುಚಿಯಿಲ್ಲ ತಾಯಿಗಿಂತ ಬಂಧುವಿಲ್ಲ ಎಂಬ ಗಾದೆಯೇ ಪರಿಚಯಿಸುತ್ತದೆ. ಜನರ ಬಾಯಿಗೆ ರುಚಿಕೊಡುವ ಉಪ್ಪು ಕೇವಲ ಆಹಾರದ ವಸ್ತು ಮಾತ್ರವಲ್ಲ ಅದು ದೇಹಕ್ಕೆ ಔಷಧಿಯಂತೆ ಉಪ್ಪಿನ ಗಾದೆಗಳು ಆಡುವ ಮಾತಿಗೆ ಬೆಲೆಕೊಡುವಂತಹವು.

1. ಉಪ್ಪರಿಗೆ ಮನೆಯವನಾದರೂ ಉಪ್ಪಿಲ್ಲದೆ ಆಗದು
2. ಉಪ್ಪಾರನ ಮಗನಾದರೂ ಉಪ್ಪಿಲ್ಲದೆ ಉಂಡಾನೆ?
3. ಉಪ್ಪಿನಲ್ಲೇ ಮುಪ್ಪು ಬಂದರೂ ಉಪ್ಪು ತಿಂದ ವಿನಹ ಬದುಕಲಾಗದು.
4. ಸಂತೇಲಿ ಮಳೆ ಬಂದಿದ್ದಕ್ಕೆ ಉಪ್ಪಿನವ ಅತ್ತರೆ ತೆಂಗಿನಕಾಯಿಯವ ಬಿದ್ದು ಬಿದ್ದು ಅತ್ತನಂತೆ
5. ಉಪ್ಪಿಟ್ಟವರನ್ನು ಮುಪ್ಪಿನ ತನಕ ಮರೆಯಬಾರದು : ಉಪ್ಪುಂಡ ಮನೆಯ ತಪ್ಪುದೆನೆಗೆ
6. ಉಪ್ಪು ತಿಂದವ ನೀರು ಕುಡಿಯಲೇ ಬೇಕು
7. ಉಪ್ಪು ಸಪ್ಪೆಯಾದರೂ ಕಾರ ಬಿಡದು
8. ಸಮುದ್ರದ ಉಪ್ಪು ಕಾನನದ ಬೆಳದಿಂಗಳು
   (ಇದ್ದಕ್ಕಿದ್ದಂತೆ ಎರಡೂ ಯಾರಿಗೂ ಉಪಯೋಗವಿಲ್ಲ)
9. ಒಬ್ಬರ ಉಪ್ಪಿನಲ್ಲೇ ಇರು
10. ಉಚ್ಚೆ ಕುಡಿಯಲಿಕ್ಕೆ ಉಪ್ಪು ಕೇಳಿದ ಹಾಗೆ
11. ಹದ್ದಿಗೂ ಕಾಗೆಗೂ ಸರಿಯೇ ಸಕ್ಕರೆಗೂ ಉಪ್ಪಿಗೂ ಸರಿಯೇ
12. ಉಪ್ಪು ತಿಂದವನ ಮನಸ್ಸು ತುಪ್ಪದಂಗೆ
13. ಉಪ್ಪುಕಾರ ಹಾಕಿದರೆ ಅಪ್ಪನ ತರಡು ಚೆಂದ
14. ಉಪ್ಪು ಹೋಯ್ತು ಉಪ್ಪಿನ ಹರಬೆಯೂ ಹೋಯ್ತು
15. ಉಪ್ಪಿನ ಹೇರಿನವ್ನು ಕೆಟ್ಟೆ ಅಂದ್ರೆ ಎಲೆ ಹೇರಿನವ್ನು ಕೆಟ್ಟೆ ಅಂದಂಗೆ
16. ಉಪ್ಪಿನ ಮಡಕೆ ನೆಪ್ಪು ಕಂಡ ಹಾಗೆ
17. ಉಪ್ಪಿನಂತಹ ರುಚಿಯಿಲ್ಲ , ಕಂಬಳಿಯಂತಹ ಹೊದುವಿಲ್ಲ
18. ತುಪ್ಪದ ಗಡಿಗೆ ತಾ ಅನ್ನೊವೊತ್ತಿಗೆ ಉಪ್ಪಿನ ಗಡಿಗೆ ತಂದ್ಲು

ತುಳು ಭಾಷೆಯಲ್ಲಿನ ಉಪ್ಪಿನ ಗಾದೆಗಳು

1. ಅಳೆತ್ತ ಸೀತೊ ಉಪ್ಪುಡು ಪೋಂಡು
   (ಮಜ್ಜಿಗೆಯ ಶೀತ ಉಪ್ಪಿನಲ್ಲಿ ಹೋಯಿತು)
2. ಆಟೋ ಎಂಚ? ಕೇಂಡಿನೆಕ್ 'ಉಪ್ಪುಪ್ಪು' ಪಂಡಿಗಾದೆ
   (ಆಟ ಹೇಗೆ ಎಂದು ಕೇಳಿದ್ದಕ್ಕೆ 'ಉಪ್ಪುಪ್ಪು' ಎಂದ ಗಾದೆ)
   ★ ಅಸಂಗತ ಉತ್ತರ.

(ಒಬ್ಬಾತ ಆಟ ನೋಡಲು ಹೋಗಿ ನಿದ್ರಿಸಿದಾಗ ಪಕ್ಕದಲ್ಲಿದ್ದ ಮಗು ಉಚ್ಚೆಯೋಯ್ದುದು ಅವನ ಬಾಯಿಗೆ ಬಿದ್ದಿತಂತೆ. ಆ ಅನುಭವ ಮಾತ್ರ ಅವನಿಗೆ ನೆನಪಿತ್ತಂತೆ)

3. ಉಪ್ಪರಿಗೆ ಇಲ್ಲ್‌ದಾಯಗ್‌ಲ ಉಪ್ಪು ಇದ್ಯಂದೆ ಕರಿಯಂದ್
(ಉಪ್ಪರಿಗೆಯ ಮನೆಯವನಿಗೂ ಉಪ್ಪು ಇಲ್ಲದೆ ಆಗದು)

4. ಉಪ್ಪುಡ್‌ಲ ಇದ್ಯೆ ಮಣ್ಣಿಡಲ ಇದ್ಯೆ
((ಆತ) ಉಪ್ಪಿನಲ್ಲೂ ಇಲ್ಲ ಮೆಣಸಿನಲ್ಲೂ ಇಲ್ಲ)
★ ತಪ್ಪಿಸಿಕೊಳ್ಳುವ ಸ್ವಭಾವ)

5. ಉಪ್ಪುಣ್ಣು ಕೊರ್ನಾಕ್‌ಳ್ ಅಪ್ಪೆಮ್ಮೆಗೆ ಸಮೊ
(ಉಪ್ಪನ್ನ ವಿತ್ತವರು ತಾಯಿ ತಂದೆಗೆ ಸಮ)

6. ಉಪ್ಪು ತೂದೆ ಕಜಿಪು ಮುಗಿನ ಗಾದೆ
(ಉಪ್ಪು ನೋಡಿಯೇ (ರುಚಿ) ಪಲ್ಯ ಮುಗಿದ ಗಾದೆ)

7. ಉಪ್ಪು ತೂಪನೆ ಕೊರತೆ ಪಣ್ಣುನೆ
(ಉಪ್ಪು (ಪಲ್ಯ ಪದಾರ್ಥಗಳಿಗೆ ಉಪ್ಪಿನಹದ) ನೋಡುವುದು ಕೊರತೆ ಹೇಳುವುದು)
★ ಕೆಲವರಿಗೆ ಪ್ರತಿಯೊಂದಕ್ಕೂ ಕೊರತೆ ಹೇಳುವ ಅಭ್ಯಾಸ

8. ಉಪ್ಪುದ ಬೊಂಬೆನ್ ಮಿಪಾಯೆರೆ ಪೋಯಿಲೆಕ್ಕೊ
(ಉಪ್ಪಿನ ಬೊಂಬೆಯನ್ನು ಮಿಯಿಸಲು ಹೋದ ಹಾಗೆ)

9. ಉಪ್ಪುದ ಸಾಲೊ ದಿಡೊಣ್ಣರೆ ಅವಂದ್‌ಗೆ
(ಉಪ್ಪಿನ ಸಾಲ ಇಟ್ಟುಕೊಳ್ಳಲು ಆಗದಂತೆ)

10. ಉಪ್ಪು ಮುಣ್ಣಿಡ್ ಪೊತ್ರಗಂಜಿ ಉಂಡಿಲೆಕ್ಕಾಂಡ್
(ಉಪ್ಪು ಮೆಣಸಿನಲ್ಲಿ ಬಿಸಿಗಂಜಿ ಉಂಡ ಹಾಗಾಯಿತು)

11. ಉರಿನಾಡಗ್ ಉಪ್ಪು ದಿಡ್‌ಪುನೆ
(ಉರಿಯುವಲ್ಲಗೆ ಉಪ್ಪು ಇಡುವುದು)

12. ಕಜಿಪುಗು ಪಾಡಿ ಉಪ್ಪುನಾಂಡಲ ದೆಪ್ಪೊಲಿ ನಾಂಯಿಡ್ಜ್ ಬೂರಿ ಪಾತೆರೂ ದೆಪ್ಪೆರೆ ಬಲ್ಲಿಗೆ
(ಪಲ್ಯಕ್ಕೆ ಹಾಕಿದ ಉಪ್ಪನ್ನಾದರೂ ತೆಗೆಯಬಹುದು , ನಾಲಗೆಯಿಂದ ಬಿದ್ದ ಮಾತನ್ನು ಹೆಕ್ಕಲು ಸಾಧ್ಯವಿಲ್ಲವಂತೆ)

13. ಕಳಿಕ್ಕ್ ಪುಳಿ ಕೂಟಗೊ ತೆಳಿಕ್ಕ್ ಉಪ್ಪು ಕೂಟಗೊ
(ಕಳ್ಳಿಗೆ ಹುಳಿ ಜತೆ ಗಂಜಿಗಿಳಿಗೆ ಉಪ್ಪು ಜತೆ)

14. ಗಾಯೊಗು ಉಪ್ಪು ಮುಟ್ಟಾಲೆಕ್ಕೊ ಆಂಡ್
(ಗಾಯಕ್ಕೆ ಉಪ್ಪು ತಾಗಿದಂತಾಯಿತು)

15. ಪಾಡಿ ಉಪ್ಪಾಂಡಲ ದೆಪ್ಪೊಲಿ ಪಂಡಿ ಪಾತೆರೊ ದೆಪ್ಪೆರೆ ಬಲ್ಲಿ
(ಇಕ್ಕಿದ ಉಪ್ಪನ್ನಾದರೂ ತೆಗೆಯಬಹುದು ಹೇಳಿದ ಮಾತನ್ನು ತೆಗೆಯಲಾಗದು)

16. ಪೋಜೆಂಗರಿಡ್ ಉಪ್ಪುಂಡುಂದು ಕಜಿಪುಗಾವಂದ್
(ಅಡುಗೆ ಮನೆಯ 'ಸಿಕ್ಕ'ದ ಮಸಿಯಲ್ಲಿ ಉಪ್ಪು ಇದೆಯೆಂದು ಪಲ್ಯಕ್ಕೆ ಆಗದು)
★ ಮಸಿಯಲ್ಲಿ ಸ್ವಲ್ಪವೇ ಉಪ್ಪಿನ ರುಚಿ ಇರುತ್ತದೆ

17. ಬೆಯ್ಯೆರೆ ದುಂಬು ಉಪ್ಪು ಪಾಡಡ, ಕೊಯ್ಯೆರೆ ದುಂಬು ಕುರಳ್ ಬಯ್ಪಡ
(ಬೇಯುವ ಮೊದಲು ಉಪ್ಪು ಹಾಕಬೇಡ, ಕೊಯ್ಯುವ ಮೊದಲು ಕದಿರು ಎಳೆದು ತೆಗೆಯಬೇಡ.)

18. ಸಪ್ಪೆ ಬಾರೆದಂಡ್‌ಗ್‌ಲ ಉಪ್ಪೊಯ್ತುಂಡ ಬೆಲೆ ಉಂಡು
(ಸಪ್ಪೆಗೆಯ ಬಾಳದಿಂಡಿಗೂ ಉಪ್ಪು ಹಾಕಿದರೆ ಬೆಲೆ ಉಂಟು)

19. ಇಲ್ಲೆನಿಲೇ ಜೋಕುಲು ಇತ್ತಂಡಲ ಸಾರ್‌ಗ್ ಉಪ್ಪು ಪಾಡುನಾಕ್ಲು ಇತ್ತಿಜ್ಯರ್
(ಮನೆ ತುಂಬಾ ಮಕ್ಕಳಿದ್ದರೂ ಪದಾರ್ಥ ಉಪ್ಪು ಹಾಕುವವರು ಇರಲಿಲ್ಲ)

20. ಉಪ್ಪು ತಿಂತಿನಾಯೆ ಮನಸ್ಸ್ ನೆಯಿತ ಲೆಕ್ಕ
(ಉಪ್ಪು ತಿಂದವನ ಮನಸ್ಸು ತುಪ್ಪದ ಹಾಗೆ)

21. ಉಪ್ಪು ತಿಂದಿ ಸಾಲ್ಲಾಯಿಡ್ ತಪ್ಪುವಪ್ಪುವಾ
(ಉಪ್ಪು ತಿಂದ ನಾಲಗೆಯಲ್ಲಿ ತಪ್ಪು ಬರದೇ ಇರುತ್ತದೆಯೇ?)

22. ಅಪ್ಪಯೆ ಉಪ್ಪು ಕೊಂಡ್ರಯೆ ಚಪ್ಪೆ ಉಂಡ್ರಯೆ
(ಅಪ್ಪಯ್ಯ ಉಪ್ಪು ತರುವುದಿಲ್ಲ, ಚಪ್ಪೆ ಊಟ ಮಾಡುವುದೂ ಇಲ್ಲ)

23. ಅಪ್ಪೆ ಸತ್ತಿ ಬೊಕ್ಕ ತೆರಿಯು, ಉಪ್ಪು ಮುಗಿ ಬೊಕ್ಕ ತೆರಿಯು
(ತಾಯಿ ಸತ್ತ ಮೇಲೆ ತಿಳಿಯುತ್ತದೆ, ಉಪ್ಪು ಮುಗಿದ ಮೇಲೆ ತಿಳಿಯುತ್ತದೆ)

24. ಉಪ್ಪು ಕಂಡೊನ್‌ನಾಯೆ ಉಪ್ಪು ಕರಯಿಲ್‌ಕೊನೇ ಅಳಿದ ಪೋಪೆಗೇ
(ಉಪ್ಪು ಕದ್ದವನು ಉಪ್ಪು ಕರಗಿದಂತೆಯೆ ಅಳಿದು ಹೋಗುತ್ತಾನಂತೆ)

25. ಅಂಗದ್ನೆಗೆ ಉಪ್ಪು ನೀರ್ ಪರ್ಪುನೆ
(ಬಾಯಾರಿಕೆ ಉಪ್ಪು ನೀರು ಕುಡಿಯುವುದು)

26. ಉಪ್ಪುದ ಸಾಲೊ ಇಪ್ಪರನೆ ಬಲ್ಲೆ
(ಉಪ್ಪಿನ ರುಣ ಇರಲೇ ಬಾರದು)

27. ಉರಿಪ್ಪಿ ಪುರಿಕ್ಕ್ ಉಪ್ಪು ಪಾಡಿಲೆಕ್ಕೊ
(ಉರಿವ ಹುಣ್ಣಿಗೆ ಉಪ್ಪು ಹಾಕಿದಂತೆ)

28. ಕಡ್ತಿ ಕೈಕ್ ಉಪ್ಪು ಪಾಡಯ
(ಕಡಿದ ಕೈಗೆ ಉಪ್ಪು ಹಾಕಲಾರ)

5. ಆಮೆಯ ಗಾದೆಗಳು

ಆಮೆ ಭೂಮಿಯ ಭಾರವನ್ನು ಹೊತ್ತಿರುವ ಪ್ರಾಣಿ ಎಂದು ನಂಬಿರುವ ಜನಪದರು ಅದು ನೆಲವಾಸಿ ಮಾತ್ರವಲ್ಲ ಜಲವಾಸಿಯೂ ಹೌದು ಎಂದು ಅರಿತು ಅದರ ರೂಪ, ಗುಣ, ಚಲನವಲನವನ್ನೆಲ್ಲಾ ಸೂಕ್ಷ್ಮವಾಗಿ ಗಮನಿಸಿ ಗಾದೆಗೆ ಅದನ್ನು ವಸ್ತುವಾಗಿ ಬಳಸಿಕೊಂಡರು. ಜನರ ಬದುಕಿಗೆ ಕನ್ನಡಿ ಹಿಡಿಯಲು ಆಮೆ ಮಾಧ್ಯಮವಾಯಿತು. ಅದನ್ನು ಈ ಕೆಳಗಿನ ಗಾದೆಗಳು ತಿಳಿಸುತ್ತವೆ.

1. ಆಮೆ ನಡೆದ ಹಾಗೆ
2. ಅವನ ಬೆನ್ನು ಆಮೆ ಚಿಪ್ಪೇ?
3. ಆಮೆ ಅಂಗಾತ ಬಿದ್ದ ಹಾಗೆ

ತುಳುವಿನಲ್ಲಿ ಕಾಣುವ ಆಮೆಗಾದೆಗಳು

1. ಎಮೆ ಅಂಚಿ ನೀರ್‌ಡಲ ಬದುಕು ಇಂಚಿ ನೆಲಟಲ ಬದುಕು
(ಆಮೆ ಇತ್ತ ನೀರಲ್ಲೂ ಬದುಕೀತು ಇತ್ತ ನೆಲದಲ್ಲೂ ಬದುಕೀತು)
2. ಎಮೆ ತುಚ್ಚಿನ ಕೋಲುಡು ಬಾಯಿ ಬುಡಿಕ್ಕಾಂಡ್
(ಆಮೆ ಕಚ್ಚಿ ಹಿಡಿದ ಕೋಲಿನಿಂದ ಬಾಯಿ ಬಿಟ್ಟ ಹಾಗಾಯಿತು)

★ಕೊಕ್ಕರೆಯೊಂದು ಕೊಲಿನ ಸಹಾಯದಿಂದ ಆಮೆಯನ್ನು ಇನ್ನೊಂದು ಕಡೆಗೆ ಸಾಗಿಸುತ್ತಿದ್ದಾಗ ನಡುವೆ ಆಮೆಯು ಅಚಾತುರ್ಯದಿಂದ ಕೊಲನ್ನು ಕಚ್ಚಿದ್ದ ಬಾಯಿಯನ್ನು ಬಿಟ್ಟು ಕೆಳಗೆ ಉರುಳಿದಂತೆ)

3. ಎಮೆದ ಗಾದೆ ತಾನೆ ಸುತ್ ತೊವೊಲಿ ತನನ್ ಎರ್ಲ ತೂಯರಾವಂದ್
(ಆಮೆಯ ಗಾದೆ - ತಾನು ಸುತ್ತಲೂ ನೋಡಬಹುದು ತನ್ನನ್ನು ಯಾರೂ ನೋಡಬಾರದು)
4. ಎಮೆದ ಬೆರಿಟ್ ಅಡಿಯೆರ ಪೋಯಿನಕಳೆ ಗಾದೆ
(ಆಮೆಯ ಬೆನ್ನಿನಲ್ಲಿ ಅಡುಗೆ ಮಾಡಲು ಹೋದವರ ಹಾಗೆ)

★ಆಮೆಯನ್ನು ಕಲ್ಲೆಂದು ಭ್ರಮಿಸಿ ಒಲೆಯನ್ನು ಹೂಡಿ ಅಡುಗೆಗೆ ತೊಡಗಲು ಬೆಂಕಿಯ ಬಿಸಿಗೆ ಆಮೆಚಡಪಡಿಸಿತು. ಆಗ ಅದರ ಬೆನ್ನಿನಲ್ಲಿಟ್ಟ ಪಾತ್ರೆ ಮಗುಚಿ ಬಿದ್ದು ಅಡುಗೆ ಅಸ್ತವ್ಯಸ್ತವಾಯಿತು)

5. ಎಮೆನ್ ಬೊದ್‌ಲಿಯೆರ ಪಾಡಿ ಗಾದೆ
(ಆಮೆಯನ್ನು ನೆನೆಯಲು ಹಾಕಿದ ಗಾದೆ)
6. ಎಮೆದ ಲೆಕ್ಕೊ ಮಾಂತಲ ಉಳಯಿಗ್ ಒಯ್ತೊನ್ಯನೆ
(ಆಮೆಯಂತೆಲ್ಲವನ್ನೂ ಒಳಗೆ ಎಳೆದುಕೊಳ್ಳುವುದು)
7. ಎಮೆ ನಿಂಗುನ ಕೇರಿದ ಗಾದೆ
(ಆಮೆಯನ್ನು ನುಂಗುವ ಕೇರೆ ಹಾವಿನ ಗಾದೆ)

★ಸಂದಿಗ್ಧತೆ, ಸಂಕಟ

8. ಎಮೆ ಮಲಂಕನೆ ಅಂಡ ಪೋಂಡು ತಡ್ಪೆ ಕಂಕಣೆ ಅಂಡ ಪೊಂಡು
(ಆಮೆ ಅಂಗಾತ ಆದರೆ ಹೋಯಿತು ಗೆರಸೆ ಬೋರಲಾದರೆ ಹೋಯಿತು)
9. ಓಡುವ ಉಳಯಿ ಇತ್ತ್‌ಂಡ್ಲ ಎಮೆ ನಾಡ್‌ದ ಸುದ್ದಿ ಪಿಂದೋಣು
(ಚಿಪ್ಪಿನ ಒಳಗೆ ಇದ್ದರೂ ಆಮೆ ನಾಡಿನ ಸುದ್ದಿ)

★ ಏನೂ ಅರಿಯದಂತೆ ಮುದುಡಿಕೊಂಡಿದ್ದರೂ ಕೆಲವರು ಲೋಕ ವಿಚಾರಗಳನ್ನು ತಿಳಿದಿರುತ್ತಾರೆ.

10. ಸುಳೆಗ್ ಗುರ್ತೊ ಉಪ್ಪುಂದ್ ಎಮೆಗ್ ತುರ್ತೊ ತೆರಿಯಂದ್
(ಸೂಳೆ (ಬಂದವರ) ಪರಿಚಯ ಇರಲಾರದು, ಆಮೆಗೆ ವೇಗ ತಿಳಿಯದು.)

6, 7 ಗಾಳ ಮತ್ತು ಬಲೆಯ ಗಾದೆಗಳು

ಕಡಲಿಗರಿಗೆ ಬೇಟೆಯಾಡಲು ಪ್ರಮುಖ ಸಾಧನೆಗಳೆಂದರೆ ಗಾಳ ಮತ್ತು ಬಲೆಗಳು . ಸಮುದ್ರದ ಸಂಪತ್ತನ್ನೆಲ್ಲಾ ಇವೆರಡು ಸಾಧನಗಳಿಂದ ಬಹುಸುಲಭವಾಗಿ ಅವರು ಸೆರೆ ಹಿಡಿಯಬಲ್ಲರು. ಅಂತಹ ಸಾಧನಗಳನ್ನು ಬಳಸಿಕೊಂಡು ರೂಪಿಸಿದ ಕೆಲವು ಗಾದೆಗಳನ್ನು ಗಮನಿಸಬಹುದು.

1. ಎರೆ ಹುಳ ಎರಿ ಮೀನು ಎಳೆದ ಹಾಗೆ
2. ಎಲ್ಲರೂ ಗೋಕರ್ಣಕ್ಕೆ ಹೋದರೆ ಗೋಕರ್ಣದವರು ಗಾಳ ಹಾಕಾಕೆ ಹೋದರು
3. ಓದೋದು ಶಾಸ್ತ್ರ ಹಾಕ್ಕೊದು ಗಾಳ
4. ಅಪ್ಪಗುಟ್ಟದವರು ಗಾಳ ಹಾಕದ್ರು ಹಾದರ್ಕುಟ್ಟವರು ಹಡಗಗೈಸದ್ರು

ತುಳು ಭಾಷೆಯಲ್ಲಿನ ಗಾದೆಗಳು

1. ಗಾಳೋಡು ಪತ್ತಿ ಮೀನನ್ ಗಾಳೋಡೆಬಚ್ಚವೊಡು
   (ಗಾಳದಲ್ಲಿ ಹಿಡಿದ ಮೀನನ್ನು ಗಾಳದಲ್ಲಿ ಬಳಲಿಸಬೇಕು)
2. ಗಾಳೊ ನಿಂಗ್‌ದ ಮೀನ್‌ಗ್ ಮರಣೊ
   (ಗಾಳ ನುಂಗಿ ಮೀನಿಗೆ ಮರಣ)
3. ಪಣ್ಣೆಪಾರಿ ಇದ್ಯಂಡ್‌ನವು ಕಣ್ಣಿಕಡಿನ ಬಲಿಕ್‌ಸಮೊ
   (ಹೇಳಿಕೆ ಕೇಳಿಕೆ ಇಲ್ಲದೆ ಇರುವಂತಹದು ದಾರ ಕಡಿದ ಬಲೆಗೆಸಮ)
4. ಬಲೆಡ್ದ್ ರಟ್ಟಿ ಮೀನ್ ಬಲೆಕ್ಕೆ ಬೂರಿಲೆಕ್ಕಾಂಡ್
   (ಬಲೆಯಿಂದ ನೆಗೆದ ಮೀನು ಬಲೆಯೊಳಗೇ ಬಿದ್ದಂತಾಯಿತು)
5. ಬಲೆಡ್ದ್ ತಪ್ಪುಯಿನ ಕರ್ಪುಗು ಬೂರ್‌ದಂಡ್‌ಗೆ
   (ಬಲೆಯಿಂದ ತಪ್ಪಿಸಿಕೊಂಡದು ಹೊಂಡಕ್ಕೆ ಬಿತ್ತಂತೆ)
6. ಮಾರಿ ಬಲೆಕ್ ಬೂರ್‌ಂದ್‌ನವಿದ್ದಿ
   (ಮಾರಿ ಬಲೆಗೆ ಬೀಳದವು ಯಾವುದೂ ಇಲ್ಲ)

8. ಏಡಿಯ ಗಾದೆಗಳು

ಕಡಲ ಏಡಿಗಳ ಬಗ್ಗೆ ತುಳು ಭಾಷೆಯಲ್ಲಿ ಕೆಲವು ಗಾದೆಗಳನ್ನು ಗಮನಿಸಬಹುದು.

1. ಕೊಂಬಾರ ಉಪ್ಪುನೆಟ ದೆಂಜಿಗ್ ಗರ್ವೊ
   (ದೊಡ್ಡ (ಕೊಂಬು) ಕಾಲು ಇರುವವರೆಗೆ ಏಡಿಗೆ ಗರ್ವ)
2. ದೆಂಜಿಡ್ ನಂಜಿದ್ದಿ ಬಂಜಿಡ್ ಕೂಳಿದ್ದಿ
   (ಏಡಿಯಲ್ಲಿ ನಂಜು ಇಲ್ಲ , ಹೊಟ್ಟೆಯಲ್ಲಿ ಹಲ್ಲು ಇಲ್ಲ)
   ★ ಏಡಿಯನ್ನು ತಿನ್ನುವುದರಿಂದ ದೇಹದಲ್ಲಿ ನಂಜು ಉಂಟಾಗುವುದಿಲ್ಲ ಎನ್ನಲಾಗಿದೆ.
3. ಡೆಂಜಿದ ಕಾರ್ ಡೆಂಜಿದ ತಿಗಲೆಗ್
   (ಏಡಿಯ ಕಾಲು ಏಡಿಯ ಎದೆಗೆ)
   ★ ಏಡಿಯು ಕಚ್ಚದಂತೆ ಅದರ ಕಾಲಿನ ಮುಳ್ಳನ್ನೇ ಅದರ ಎದೆಗೆ ಚುಚ್ಚುತ್ತಾರೆ
4. ಡೆಂಜಿದ ಕೆಲಸೊ ಕುಡೆ ತೋಡುವ
   (ಏಡಿಯ ಕೆಲಸ ಬಿಲ ತೋಡುವುದು)
5. ಡೆಂಜಿದ ಲೆಕ್ಕೊ ಬೆನ್ಪುನ ಕಾರೊಂಜಿ ತಿನ್ಪುನ ಕಾರೊಂಜಿ
   (ಏಡಿಯಂತೆ ದುಡಿಯುವ ಕಾಲೊಂದು ತಿನ್ನುವ ಕಾಲೊಂದು)
   ★ ದುಡಿಯುವನೊಬ್ಬ ತಿನ್ನುವವ ಇನ್ನೊಬ್ಬ
6. ಡೆಂಜಿದ ಲೆಕ್ಕೊ ತೂಪುನ ಒಂಜಿ ದಿಕ್ಕಗ್ ಪೋಪುನ ನನೊಂಜಿ ದಿಕ್ಕಗ್
   (ಏಡಿಯ ಹಾಗೆ - ನೋಡುವುದು ಒಂದೆಡೆಗೆ ಹೋಗುವುದು ಇನ್ನೊಂದೆಡೆ)
7. ಡೆಂಜಿನ್ ದೆತ್ತ್‌ದ್ ಪುಣಿ ಪೊಜೋಡು
   (ಏಡಿಯನ್ನು ಹೊರತೆಗೆದು ಗದ್ದೆಯ ಅಂಚನ್ನು ಸವರಬೇಕು)
   ★ ಗದ್ದೆಯ ಅಂಚು ಅಥವಾ ಹುಣಿಯನ್ನು ಎಡಿಯು ಕೊರೆದು ಹಾಳು ಮಾಡುತ್ತದೆ
8. ಡೆಂಜಿ ಪುತ್ತುನ ಗೌಜಿಡ್ ಕಟ್ಟ ಕಡಿನ ಗೊಂತೇ ಇದ್ದಿ
   (ಏಡಿ ಹಿಡಿವ ಸಡಗರದಲ್ಲಿ ನೀರ ಅಣೆಕಟ್ಟೆ ಕಡಿದದ್ದು ತಿಳಿಯಲೇ ಇಲ್ಲ.)
9. ಡೆಂಜಿಲ ಇದ್ದಿ ಡೆಂಜಿಗ್ ಪಾಡಿ ಕೈ ಇದ್ದಿ
   (ಏಡಿಯೂ ಇಲ್ಲ ಎಡಿಗೆ ಹಾಕಿದ ಕೈಯೂ ಇಲ್ಲ)
10. ಲಳ್ಳಿದ ಸೇರ್‌ನ ನೀರ್ ಕಟ್ಟ ಅರಿಪ್ಪೆ ಕಟ್ಟನೆ
   (ಏಡಿ ಸೇರಿದ ಅಣೆಕಟ್ಟು ನೀರು ಜಿನುಗುವ ಅಣೆಕಟ್ಟೇ)
   ★ ಅಣೆಕಟ್ಟು ಸೇರಿದ ಎಡಿ ಅದನ್ನು ತೂತು ಮಾಡುತ್ತದೆ
11. ಲಳ್ಳಿದ ಕೊಂಬುಕಾರ್ ಲಳ್ಳಿಗೆ ಮಾಟೊ
   (ಏಡಿಯ ಕೊಂಬುಕಾಲು ಎಡಿಗೇ ಮಾಟ)
12. ಡೆಂಜಿ ಇತ್ತನ ಭೂಮಿ ಹಾಳು, ಮಂಗ ಇತ್ತನ ಕಾಡ್ ಹಾಳ್
   (ಏಡಿ ಇದ್ದ ಭೂಮಿ ಹಾಳು , ಮಂಗ ಇದ್ದ ಕಾಡು ಹಾಳು)

9. ಮುತ್ತಿನ ಗಾದೆಗಳು

ಮುತ್ತು ಹೇಗಾಗುತ್ತದೆ ಎಂಬುದಕ್ಕೆ ತಜ್ಞರು ವಿವಿಧ ಮೃದ್ವಂಗಿಗಳ ಚಿಪ್ಪಿನಲ್ಲಿ ಒಂದು ಕೇಂದ್ರದ ಸುತ್ತ ಪದರು ಪದರಾಗಿ ಶೇಖರವಾಗುವ ಹೊಳೆಯುವ ಸುಣ್ಣದ ಸಮಿಶ್ರಣದ ಮುದ್ದೆಯೇ ಮುತ್ತು ಎನ್ನುತ್ತಾರೆ.

ಸ್ವಾತಿ ನಕ್ಷತ್ರದಲ್ಲಿ ಬಿದ್ದ ಮಳೆಹನಿ ಕಪ್ಪೆ ಚಿಪ್ಪಿನೊಳಕ್ಕೆ ಹೋದರೆ ಮುತ್ತಾಗುತ್ತದೆ ಎಂಬ ನಂಬಿಕೆ ಇದೆ. ಜನಪದರು ನಂಬಿಕೆಯಂತೆ ಆನೆಗಳ ಮಿದುಳು , ಹಣೆ ಹಾಗೂ ಹೊಟ್ಟೆಯಲ್ಲಿ ಮುತ್ತುಗಳು ದೊರೆಯುತ್ತವೆ ಎಂದು ಹೇಳಲಾಗುತ್ತದೆ.

ಮುಸ್ಲಿಮರು ಮೂರನೆಯ ಸ್ವರ್ಗವು ಮುತ್ತಿನದೆಂದು ನಂಬಿದರೆ , ಚೀನಾದವರು ಮುತ್ತು ಬೆಂಕಿಯ ವಿರುದ್ಧದ ರಕ್ಷಣೆಗಾಗಿ ಬಳಸಲಾಗುತ್ತದೆ.

ಹೀಗೆ ಜನರ ಮನವನ್ನು ಆಕರ್ಷಿಸುವ ಮುತ್ತು ಗಾದೆಗಳ ಮೂಲಕ ಮಾತನ್ನು ಸಹ ಆಯಸ್ಕಾಂತವನ್ನಾಗಿಸುತ್ತದೆ. ಅವುಗಳನ್ನು ಗಮನಿಸಬಹುದು.

1. ಜೋಳ ಹೊಸದಾದರೆ ಮುತ್ತು ಆದೀತೆ?
2. ಮುತ್ತಿನ ಚವು ಕತ್ತೆಗೆ ತಿಳಿದೀತೆ?
3. ಮುತ್ತಿನಂಥ ಗಂಡ ಇದ್ದರೆ ಬೆಟ್ಟದಷ್ಟು ಮಕ್ಕಳು ಹೆರುವೆನು
4. ಮುತ್ತಿನಂಥ ಗಂಡ ಇರಬೇಕು ಕತ್ತೆಯಂಥ ಅತ್ತೆ ಇರಬೇಕು
5. ಮುತ್ತು ಕೆಟ್ಟರೆ ಬತ್ತಕ್ಕಿಂತ ಕಡೆಯಾದೀತು
6. ಮುತ್ತು ಹುಟ್ಟೋದು ಚಿಪ್ಪಿನಲ್ಲೇ
7. ಮಾತು ಆಡಿದರೆ ಹೋಯಿತು ಮುತ್ತು ಒಡೆದರೆ ಹೋಯಿತು
8. ಹತ್ತು ಹಡೆಯುವುದಕ್ಕಿಂತ ಒಂದು ಮುತ್ತು ಹಡೆಯಬೇಕು
9. ಹತ್ತು ಜನ ಎಂಬೋದು ಮುತ್ತಿನ ಸಮಾನ
10. ಮುತ್ತಿಗಿಂತ ಉತ್ತಮ ಹೊತ್ತು
11. ಮುತ್ತು ಕಳಕೊಂಡರೆ ತರಬಹುದು ಹೊತ್ತು ಕಳಕೊಂಡರೆ ತರೊಕಾಗೊಲ್ಲ

ತುಳು ಭಾಷೆಯಲ್ಲಿನ ಗಾದೆಗಳು

1. ಪತ್ತ್ ಕೂಡ್‌ನವುಲು ಮುತ್ತು
(ಹತ್ತು ಗಣ್ಯರು ಕೂಡಿದಲ್ಲಿ ಮುತ್ತು)
2. ಮುತ್ತೂಗು ಮಾರುನೆನ್ ಉಪ್ಪುಗು ಮಾರುನೆ
(ಮುತ್ತಿನ ಬೆಲೆಗೆ ಮಾರುವುದನ್ನು ಉಪ್ಪಿನ ಬೆಲೆಗೆ ಮಾರುವುದು)
3. ಪಂಜಿದ ಎದರ್ ಮುತ್ತು ಪಾಡಿಲೆಕ್ಕ
(ಹಂದಿಯ ಎದುರು ಮುತ್ತು ಹಾಕಿದಂತೆ)

10. ದೋಣಿ ಹಡಗಿನ ಗಾದೆಗಳು

ದೋಣಿ ಬಡವರ ಬೇಟೆ ವಾಹನವಾದರೆ ಹಡಗು ಶ್ರೀಮಂತರ ಬೇಟೆ ವಾಹನ. ಇವೆರಡು ಗಾದೆಗಳಲ್ಲಿಗೆ ವಸ್ತುವಾಗಿ ಬಳಕೆಯಾಗಿರುವುದನ್ನು ನೋಡಬಹುದು.

1. ಒಡಕು ದೋಣಿಗೆ ಗಿಡ್ಡ ಜಲ್ಲು
   ★ ಜಲ್ಲು - ದೋಣಿಯ ಕಂಬ
2. ಕಡ ಸಿಕ್ಕೂದಾದರೆ ಹಡಗು ನನಗಿರಲಿ ಎಂದ
3. ನಾವೆಲ್ಲ ಒಂದೇ ಹರಿಗೋಲ ಮೇಲೆ ಕುಳಿತಿದ್ದೇವೆ
4. ನಾವೆಲ್ಲ ಒಂದೇ ದೋಣಿಯ ಯಾತ್ರಿಕರು
5. ನಾನು ನಾಯಕ , ನೀನು ನಾಯಕ , ದೋಣಿ ಒತ್ತುವವ ದೊಣ್ಣಪ್ಪ ನಾಯಕನೋ
6. ಹಡಗ ಮುರಿದುಹೋಯಿತು
7. ಹಡಗ ಹಡಪಲ್ಲ ಮಡದಿ ರಾಣಿಯಲ್ಲ (ಹಡಪ - ಸಣ್ಣ ಚೀಲ)
8. ಹಡಗದ ಮೇಲೆ ತೆಗೆದ ಉಪವಾಸ ಏಕಾದಶಿಗೆ ಸಂದಾಯ
9. ದೋಣಿ ದಾಟಿದ ಮೇಲೆ ಅಂಬಿಗನ ಮಿಂಡ
10. ಆಯುಷ್ಯ ತೀರಿದವನ ಕೂಡ ದೋಣಿ ಏರಿದರೆ ಉಳಿದವರ ಮೈಯೆಲ್ಲ ಒದ್ದೆ
11. ಒಂದೇ ದೋಣಿಯ ಕಳ್ಳರಿದ್ದ ಹಾಗೆ
12. ದೋಣೀಲಿ ಒಂದು ಹೆಜ್ಜೆ ನೀರಿನ ಮೇಲೆ ಒಂದು ಹೆಜ್ಜೆ
13. ದೋಣಿ ಮುಳುಗಿದರೂ ತಳಸೇರಲಿಲ್ಲ ಎಂದ ಹಾಗೆ
14. ದೋಣಿಯವನಿಗೆ ದೋಣಿ ಚಿಂತೆಯಾದರೆ ಪ್ರಯಾಣಿಕನಿಗೆ ಪ್ರಾಣದ ಚಿಂತೆ
15. ದೋಣಿ ನೀರಿನಲ್ಲಿ ತೇಲಿ ಒಡೆಯನ್ನು ಮೀನಲ್ಲಿ ತೇಲಿಸ್ತು
    (ಮೀನುಗಾರರಿಗೆ ದೋಣಿ ಮೀನು ಹಿಡಿದುಕೊಟ್ಟು ಆದಾಯಮಾಡಿಸಿದ್ರು)
16. ಕಂಡ್ರ ಮಾಣಿ ಉಂಡ್ರ ದೋಣಿ

ತುಳು ಭಾಷೆಯ ದೋಣಿ ಹಡಗಿನ ಗಾದೆಗಳು

1. ಅಯೆರೆ ಈಯೆರ ಮೀಂದು ನಾಯೆ ಓಡೊಗಾದ್ ಕಾಪಯೆ
   (ಆ ದಡದಿಂದ ಈ ದಡಕ್ಕೆ ಈಜುವವ ದೋಣಿಗೆ ಕಾಯಲಾರ)
2. ಒಟ್ಟೆ ಓಡೊಡು ಕಡವು ಕಡಪಡ
   (ತೂತು (ಬಿದ್ದ) ದೋಣಿಯಲ್ಲಿ ಹೊಳೆ ದಾಟದಿರು)
3. ಒರಿ ಕೊಟಿಂದ್ ಪಂಡೆಂಡ ಬುಕ್ಕೊರಿ ಪಾಂಡಿಂದ್ ಪಣೆಂಬೆ
   (ಒಬ್ಬ ಕೊಟಿ ಎಂದು ಹೇಳಿದರೆ ಮತ್ತೊಬ್ಬ ಪಾಂಡಿ ಎಂದು ಹೇಳುತ್ತಾರೆ)
   ★ ಅರ್ಥ - ಒಬ್ಬೊಬ್ಬರ ಹೇಳಿಕೆ ಒಂದೊಂದು ರೀತಿ
   ★ ಕೊಟಿ ಮತ್ತು ಪಾಂಡಿ ಎಂಬುದು ವೃತ್ತಿನಾಮಗಳಾಗಿದ್ದಂತೆಯೇ ಎರಡು ಬರೆಯಲು ಹಾಯಿ ನೌಕೆಯ ಹೆಸರುಗಳೂ ಆಗಿವೆ.
4. ಓಡೊನು ಗಿರಿಪಂದೆ ಒಚ್ಚಿನಾಯನ ಗಾದೆ
   (ದೋಣಿಯನ್ನು ಬಿಚ್ಚದೆ ಹುಟ್ಟುಹಾಕಿದವನ ಗಾದೆ)
5. ಓಡೊ ಒಚ್ಚಿಂಡನೆ ಯಾರಂದ್ ಅಟ್ಟೆಲ ಪತೊಣೊಡು
   (ದೋಣಿಯ ಹುಟ್ಟು ಹಾಕಿದರೆ ಸಾಲದು, ಅಟ್ಟೆಯನ್ನು (ಚುಕ್ಕಾಣಿ) ಹಿಡಿದುಕೊಳ್ಳಬೇಕು)
   ★ ಶ್ರಮದ ಜೊತೆಗೆ ನಿಯಂತ್ರಣವೂ ಅಗತ್ಯ

6. ಓಡೊಗು ಅಪಿ ಮರ ಕೀಲ್‌ಗೆಲ ಅವಂದ್
(ದೋಣಿಗೆ ಆಗುವ ಮರ ಕೀಲಿಗೂ ಆಗದು)
★ಮೂರ್ಖನೊಬ್ಬ ಹಾರೆಯ ಕೀಲಿಗೊಸ್ಕರ ದೊಡ್ಡದೊಂದು ಮರವನ್ನು ಕಡಿದು ಕೆತ್ತಿ ಬರಿಯ ಕೀಲಿಗಾಗಿ ಉಪಯೋಗಿಸಿಕೊಂಡನಂತೆ.

7. ಓಡೊದ ಅಡಿತ್ತ ಒಟ್ಟೆ ಪಕ್ಕ ತರಿಯಂದ್
(ದೋಣಿಯ ಅಡಿಯ ತೂತು ಪಕ್ಕನೆ ತಿಳಿಯದು)

8. ಓಡೋ ನೀಂದ್‌ಂಡಲ ನಡಪಯೆರೆ ಅಟ್ಟೆ ಬೋಡು
(ದೋಣಿ ತೇಲಿದರೂ ವಡೆಸಲು ಚುಕ್ಕಾಣಿ ಬೇಕು)

9. ಓಡೊನು ಅಡಿತ್ತ ನೀರ್ ನೀಂದವು ಉಳಯದ ನೀರ ಮುರ್ಕವು
(ದೋಣಿಯನ್ನು ಕೆಳಗಿನ ನೀರು ತೇಲಿಸುತ್ತದೆ ಒಳಗಿನ ನೀರು ಮುಳುಗಿಸುತ್ತದೆ)

10. ಕಡಲ್‌ಗ್ ಜಪ್ಪುಡಿ ಓಡೋ ಜಡೆಗ್ ಒಂದುಂದು ಎರೆಗ್ ಗೊಂತು
(ಕಡಲಿಗೆ ಇಳಿಸಿದ ದೋಣಿ ಎಲ್ಲಿಗೆ ಸೇರುವುದೆಂದು ಯಾರಿಗೆ ಗೊತ್ತು)

11. ಕಪ್ಪಲ್ ಕೊಂಡೊಯಿನಾಯೆ ದಿಂಜಾದ್ ಬತ್ತದೆಗೆ ಬಂಜಿ ಕೊಂಡೊಯಿನಾಯಗ್ ಆತಜಿಗೆ.
(ಹಡಗು ತುಂಬಲು ಹೋದವ ತುಂಬಿಸಿಕೊಂಡು ಬಂದನಂತೆ, ಹೊಟ್ಟೆ ತುಂಬಲು ಹೋದವನಿಗೆ ತುಂಬಿಸಲಿಕ್ಕಾಗಲಿಲ್ಲವಂತೆ)

12. ಕಪ್ಪಲ್ ದಿಂಜೆಯೆರೆಸಿಅತ್‌ಂಡ್‌ಗೆ ಬಂಜಿ ಎಂಜಯೆರ ಅತ್‌ಜಿಗೆ
(ಹಡಗು ತುಂಬಿಸಲು ಆಗಿದೆಯಂತೆ, ಹೊಟ್ಟೆ ತುಂಬಿಸಲು ಆಗಿಲ್ಲವಂತೆ)
★ಮುಗಿಯಲಾರದ ಸಮಸ್ಯೆ

13. ಕಪ್ಪಲ್ ಪೋಪುನವುಲೆ ಅಂಡಲ ಓಡೋ ಪೋವು, ಓಡೋ ಪೋಪುನವುಲೆ ಕಪ್ಪಲ್‌ಗ್ ತೀರಂದ್
(ಹಡಗು ಹೋಗುವವಲ್ಲಾದರೂ ದೋಣಿ ಹೋದಿತು, ದೋಣಿ ಹೋಗುವಲ್ಲಿ ಹಡಗಿಗೆ ಹೋಗಲಾರದು)

14. ಕಪ್ಪಲ್‌ಡ್ ಕಡಪುನೆನ್ ಓಡೋಡು ಕಡಪ್ಯೆರ ತುಯಲೆಕ್ಕಾಂಡ್
(ಹಡಗಿನಲ್ಲಿ ದಾಟುವುದನ್ನು ದೋಣಿಯಲ್ಲಿ ದಾಟಲು ನೋಡಿದಂತಾಯಿತು)

15. ಕಪ್ಪುದ ಮಾಂತ ಕಪ್ಪಲ್ ಅತ್ತ್
(ಕಪ್ಪಿನದೆಲ್ಲಾ ಹಡಗಲ್ಲ)
★ ಒಂದೇ ಗುಣದಿಂದಲೇ ವಸ್ತುವಿನ ಸ್ವರೂಪ ನಿಷ್ಕರ್ಷೆ ಅಶಕ್ಯ

16. ಕಾಸ್ ಇದ್ಯಂದಿನಾಯೆ ಓಡೋಗು ದುಂಬುಕಾರ ದಿಡೋಡುಗೆ
(ಕಾಸ್ ಇಲ್ಲದವನು ಕಡವಿನ ದೋಣಿಗೆ ಮೊದಲು ಕಾಲು ಇರಿಸಬೇಕು)
★ ಬಂಡವಾಳ ಇಲ್ಲದ ವ್ಯಕ್ತಿ ನಿರಾಂತಕವಾಗಿ ಸಾಹಸಕ್ಕೆ ಮುನ್ನುಗ್ಗುತ್ತಾನೆ

17. ಕುಡ್ತ ಮುಗೆರ್‌ಡ್ ಪುಣ ತಿಕ್ಕನೆ ಪಡ್ತ ಮುಗೆರ್‌ಡ್ ಓಡೋ ಮಗ್ದ್‌ನೆ
(ಕುಡ್ತ ಮುಗೆರಲ್ಲಿ ಹೆಣ ಸಿಕ್ಕಿದ್ದು ಸಹ ಮುಗೆರಲ್ಲಿ ದೋಣಿ ಮುಗುಚಿದ್ದು)
★ ಒಂದಕ್ಕೊಂದು ಸಂಬಂದವಿಲ್ಲದ ಸ್ಥಿತಿ

18. ನೀಂಡ್‌ಬಿ ಓಡೊಗು ನೀರ್ ಪೊಗ್ಗ್‌ಂಡ್
(ತೇಲುವ ದೋಣಿಗೆ ನೀರು ಹೊಕ್ಕಿತು)

19. ಮಂಜಿದಾಯ ಓಡೋದಾಯಗ್ ಸಾದಿ ಬುಡಯೆ
(ಹಾಯಿ ನೌಕೆಯವನು ದೋಣಿಯವನಿಗೆ ದಾರಿ ಬಿಡನು)

20. ರಡ್ಡ್ ಓಡೋಗು ಕಾರ್ ದಿಡಿಲೆಕ್ಕಾಂಡ್
(ಎರಡು ದೋಣಿಗೆ ಕಾಲು ಇಟ್ಟಂತೆ ಆಯಿತು)

21. ಲಂಗರ್ ಇದ್ಯಂಡ ಕಪ್ಪಲ್ ಉಂತಂದ್
(ಲಂಗರು ಇಲ್ಲದೆ ಹಡಗು ನಿಲ್ಲದು)

22. ಸುಂಕೊಲ ಕೊರೊಡು ಓಡೊಲ ಹೆಚ್ಚೊಡು
(ಸುಂಕವೂ ಕೊಡಬೇಕು, ದೋಣಿಯನ್ನು ನಡೆಸಬೇಕು)

23. ಒಟ್ಟೆ ಓಡೋಗು ಮೊಂಟು ಜಲ್ಲ
(ಒಡಕು ದೋಣಿಗೆ ಮೋಟು ಹುಟ್ಟು)

ಕಡಲಿನಾಶ್ರಯ ಪಡೆದವರಿಗೆ ಸಂಬಂಧಿಸಿದ ಗಾದೆಗಳು

ಕಡಲಿನಾಶ್ರಯ ಪಡೆದವರನ್ನು ಟೀಕಿಸುವ ಸಲುವಾಗಿಯೇ ಕೆಲವು ಗಾದೆಗಳು ಹುಟ್ಟಿಕೊಂಡವು. ಅವು ಸಂಬಂಧ ಪಟ್ಟವರನಲ್ಲಿ ರೇಗಿಸುವುದರ ಜೊತೆಗೆ ಪರಜಾತಿಯವರನಲ್ಲಿ ಸಂತೋಷ ಪಡಿಸುವ ಕೆಲಸ ಮಾಡುತ್ತವೆ. ಅಂತಹ ಗಾದೆಗಳಲ್ಲಿ 'ಮೀನು ಮಾರೋಳಿಗೆ ಮಲ್ಲಿಗೆ ಮಾರೋಳ ಮನೇಲಿ ನಿದ್ದೆ ಬರಲಿಲ್ಲವಂತೆ' 'ಮೀನವಳು ಗಂಧದಲ್ಲಿ ಹೊರಳಾಡಿದ್ರೂ ಮೀನುವಾಸನೆ ಹೋಗದು' ಎನ್ನುವ ಗಾದೆಗಳು ಮೀನುಗಾರರನ್ನು ಟೀಕಿಸಿದರೆ ಬ್ಯಾರಿಗಳನ್ನು ಟೀಕಿಸುವ ಸಲುವಾಗಿಯೇ ಈ ಕೆಳಗಿನ ಗಾದೆಗಳು ಹುಟ್ಟಿಕೊಂಡಿರುವಂತೆ ಕಾಣುತ್ತದೆ.

1. ಬ್ಯಾರಿ ತಲೆಕ್ಕ್ ನೀರ ಮಯ್ತಿಲೆಕ್ಕೊ
(ಬ್ಯಾರಿಯ ತಲೆಗೆ ನೀರು ಹೊಯ್ದ ಹಾಗೆ)

2. ಬ್ಯಾರಿ ಸಾಕಿ ನಾಯಿ ಟೊಪ್ಪಿ ದೀಡ್‌ನಾಯನ ಒಟ್ಟಿಗ್ ಪೊಪುಂಡು
(ಬ್ಯಾರಿ ಸಾಕಿದ ನಾಯಿ ಟೊಪ್ಪಿ ಇಟ್ಟವನ ಜೊತೆಗೆ ಹೋಗುತ್ತದೆ)

3. ಬ್ಯಾರಿ ಸೊತಂಡ ವಾಸನೆ, ಬ್ರಾಣಿ ಸೊತ್‌ಂಡ ಪರಿಮಳೊ
(ಬ್ಯಾರಿ ಸೋತರೆ ವಾಸನೆ, ಬ್ರಾಹ್ಮಣ ಸೋತರೆ ಪರಿಮಳ)

4. ಬ್ಯಾರಿ ಭೂತೋ ಕಟ್ಟಿಲೆಕೊ
(ಬ್ಯಾರಿ ಭೂತ ಕಟ್ಟಿದ ಹಾಗೆ)

5. ಲಾಭೂ ಇದ್ದಂತೆ ಬ್ಯಾರಿ ಬೊಳೋಗ್ ಪೋದಯೆ
(ಲಾಭ ಇಲ್ಲದೆ ಬ್ಯಾರಿ ಪ್ರವಾಹದಲ್ಲಿ ಹೋಗಲಾರ)

ಬ್ಯಾರಿ : ತುಳುನಾಡಿನಲ್ಲಿ ಮುಸಲ್ಮಾನರು ತಮ್ಮ ವಿಭಿನ್ನ ಧರ್ಮ ಸಂಸ್ಕೃತಿಯ ಕಾರಣದಿಂದ ಇಲ್ಲಿನ ಸಮಾಜದಲ್ಲಿ ತಮ್ಮ ಪ್ರತ್ಯೇಕತೆಯನ್ನು ಉಳಿಸಿಕೊಂಡು ಬಂದಿದ್ದಾರೆ. ವ್ಯಾಪಾರ ಅವರ ಪ್ರಧಾನ ಕಸುಬು, (ಬೇಹಾರಿ (ವ್ಯಾಪಾರಿ) ಬ್ಯಾರಿ) ಸಾಮಾನ್ಯವಾಗಿ ತುಳುನಾಡಿನ ಎಲ್ಲಾ ಮುಸಲ್ಮಾನರನ್ನು ' ಬ್ಯಾರಿಗಳು' ಎಂದೇ ಕರೆಯುತ್ತಾರೆ. ಈ ಬ್ಯಾರಿಗಳು ತಮ್ಮ ತಲೆಯನ್ನು ಸಂಪೂರ್ಣವಾಗಿ ಬೋಳಿಸಿಕೊಂಡಿರುತ್ತಾರೆ. ಇದು ಇವರ ಸಂಸ್ಕೃತಿಯವರಿಗೆ ತಮಾಷೆಯಾಗಿ ಕಾಣಿಸುತ್ತದೆ. ಆದ್ದರಿಂದಲೇ ' ಬ್ಯಾರಿಗಳು ತಲೆಗೆ ನೀರು ಹೊಯ್ದಂತೆ' ಎನ್ನುವ ಒಂದನೇ ಗಾದೆ ಹುಟ್ಟಿಕೊಂಡಿರಬೇಕು. ಬ್ಯಾರಿಯ ತಲೆಗೆ ನೀರು ಹೊಯ್ದರೆ ತಲೆಯ ನೀರೆಲ್ಲಾ ಕೆಳಗೆ ಬರುತ್ತದೆ. ಕೆಲವು ಸಂದರ್ಭಗಳಲ್ಲಿ ಈ ಬ್ಯಾರಿಗಳು ತಮ್ಮ ಬೋಳು ತಲೆಯ ಮೇಲೆ ತಮ್ಮದೇ ಸಂಸ್ಕೃತಿಯ ಉರುಟು ಟೊಪ್ಪಿಗಳನ್ನು ಇಟ್ಟುಕೊಳ್ಳುತ್ತಾರೆ. ಈ ಟೊಪ್ಪಿ ಧರಿಸಿದವರೆಲ್ಲಾ ಬ್ಯಾರಿಗಳೇ ಎನ್ನುವಷ್ಟು ಮಟ್ಟಿಗೆ ಅದಕ್ಕೂ ಅವರಿಗೂ ಸಂಬಂಧವಿದೆ. ಇದನ್ನು ದೃಷ್ಟಿಯಲ್ಲಿ ಇಟ್ಟುಕೊಂಡ ಎರಡನೇ ಗಾದೆ ನವುರಾಗಿ ಅವರನ್ನು ಹಾಸ್ಯ ಮಾಡುತ್ತದೆ . ಬ್ಯಾರಿಗಳ ಪ್ರಧಾನ ಕಸುಬು ವ್ಯಾಪಾರ ಅವರು ತಮ್ಮ ಬದುಕಿನಲ್ಲಿ ಎಲ್ಲವನ್ನೂ ಕಳೆದುಕೊಂಡರೆ ಕೊನೆಗೆ ಒಣಮೀನು ವ್ಯಾಪಾರ ಮಾಡುತ್ತಾರೆ. ಒಣಮೀನು ವ್ಯಾಪಾರ ಬಹಳ ಬಡಬ್ಯಾರಿಗಳು ಮಾತ್ರ ಮಾಡುವುದು ಎನ್ನುವ ರೂಢಿ ಇದೆ. ಈ ಒಣ ಮೀನಿನ ವಾಸನೆ ಬರುವ ಕಾರಣ 'ಬ್ಯಾರಿ ಸೋತರೆ ವಾಸನೆ' ಎನ್ನುವ ಮೂರನೆಯ ಗಾದೆ ಜನಿಸಿದೆ. ಬ್ಯಾರಿ ಯಾವುದೇ ವ್ಯಾಪಾರ ಮಾಡಲಿ ಲಾಭದ ಅಂಶ ಜಾಸ್ತಿಯಾಗಿ ಇಟ್ಟು ಕೊಂಡಿರುತ್ತಾರೆ ಎನ್ನುವುದು ಸಾಮಾನ್ಯ ಜನರ ನಂಬಿಕೆ ಆ ಕಾರಣದಿಂದ ಹುಟ್ಟಿದ್ದು ಐದನೆಯ ಗಾದೆ. ಇದಕ್ಕೆ ಒಂದು ಹಿನ್ನೆಲೆ ಇದೆ ತುಳುನಾಡಿನ ಹೊಳೆ ತೋಡುಗಳಲ್ಲಿ ಮಳೆಗಾಲದಲ್ಲಿ ನೀರು ಉಕ್ಕೇರಿ ಪ್ರವಾಹ ಬರುತ್ತದೆ. ಆಗ ಹೊಳೆಯ ಅಕ್ಕಪಕ್ಕದಲ್ಲಿದ್ದ ತೆಂಗಿನ ಮರದಿಂದ ತೆಂಗಿನಕಾಯಿಗಳು ಪ್ರವಾಹದ ನೀರಿಗೆ ಬೀಳುತ್ತವೆ.

ಧರ್ಮಾರ್ಥವಾಗಿ ಸಿಕ್ಕುವ ಈ ತೆಂಗಿನಕಾಯಿಗಳ ಲಾಭದ ಆಸೆಯಿಂದ ಬ್ಯಾರಿಯು ಪ್ರಾಣದ ಆಸೆಯನ್ನು ತೊರೆದು ಪ್ರವಾಹದಲ್ಲಿ ಧುಮುಕುತ್ತಾನೆ. ಬ್ಯಾರಿಯು ಮುಸ್ಲಿಂ ಸಂಸ್ಕೃತಿಯ ಭೂತ ಕಟ್ಟುವ ಸಂಸ್ಕೃತಿಗಿಂತ ಬಹಳ ಭಿನ್ನ. ಅದರ ಆಚಾರ ವಿಚಾರಗಳು ಅವನಿಗೆ ಗೊತ್ತಿರುವುದಿಲ್ಲ. ಆದ್ದರಿಂದ ಆತ ಭೂತ ಕಟ್ಟಿದರೆ ಅದು ಹಾಸ್ಯಾಸ್ಪದವಾಗುತ್ತದೆ. ಇದನ್ನು ನಾಲ್ಕನೆಯ ಗಾದೆಯಲ್ಲಿ ವ್ಯಂಗ್ಯವಾಗಿ ಸೂಚಿಸಲಾಗಿದೆ. ತನಗೆ ಪರಿಚಯವಲ್ಲದ ಕೆಲಸವನ್ನು ಯಾರಾದರೂ ಮಾಡಿ ನಗೆ ಪಾಟಲಿಗೆ ಗುರಿಯಾದರೆ ಈ ಗಾದೆಯನ್ನು ಬಳಸುತ್ತಾರೆ.

(ತುಳು ಜನಪದ ಸಾಹಿತ್ಯ : ಡಾ . ಬಿ. ಸಿ. ವಿವೇಕ ರೈ ಪು. 481)

ಈ ಮೇಲಿನ ಗಾದೆಗಳು ವಿವಿಧ ವಸ್ತುಗಳನ್ನು ಒಳಗೊಂಡು ರೂಪಿತಗೊಂಡಿದ್ದರೂ ಒಟ್ಟಾರೆ ಕಡಲಿಗರ ಸಂಸ್ಕೃತಿಯನ್ನು ವಿವಿಧ ಮುಖಗಳಲ್ಲಿ ಬಿಂಬಿಸಲು ಪ್ರಯತ್ನಿಸಿವೆ.

2:5 ಸಮುದ್ರ ಒಗಟುಗಳು

ಒಗಟುಗಳಲ್ಲಿ ಒಂಟಿ ಅರ್ಥದ ಒಗಟುಗಳು , ಹಲವರ್ಥದ ಒಗಟುಗಳು ಮತ್ತು ಒಗಟು ಕತೆಗಳೆಂದು ವಿಭಾಗಿಸಿ ಕೊಳ್ಳಲಾಗಿದೆ. ಹಲವರ್ಥದ ಒಗಟುಗಳಲ್ಲಿ ಬರುವ ಎಲ್ಲಾ ಅರ್ಥವೂ ಸಮುದ್ರ ಸಂಬಂಧಿಸಿ ಇದ್ದು ಅರ್ಥವಾಗದಿದ್ದರೂ ಅವುಗಳೆಲ್ಲ ಒಂದೆರಡು ಅರ್ಥಗಳು ಸಮುದ್ರ ಸಂಬಂಧಿಸಿದ ಅರ್ಥವನ್ನು ತಿಳಿಸುವವು.

ಸಾಮಾನ್ಯವಾಗಿ ದೋಣಿ ನಡೆಸುವಾಗ ಬಲೆಬೀಸಿ , ಗಾಳ ಹಾಕಿ ಮೀನಿಗಾಗಿ ಕಾಯುತ್ತಾ ಕುಳಿತಾಗ ಒಗಟು ಹೇಳಿ ಬಿಡಿಸುವುದರ ಮೂಲಕ ಕಾಲ ದೂಡುವ ಕೆಲಸ ನಡೆಯುತ್ತದೆ. ಮೀನುಗಾರರಲ್ಲಿನ ಚಾಣಾಕ್ಷತನಕ್ಕೆ ಒಗಟುಗಳು ಅಳೆಗೋಲಾಗಿ ನಿಲ್ಲುತ್ತವೆ.

8. ಸಮುದ್ರ

1. ಅಮ್ಮನ ಸೀರೆ ಭಾರೀ ಸೀರೆ
ನೀಲಿ ನೀಲಿ ಸೀರೆ
ನೀರಿಗ ಎಣಿಸೋಕೆ ನಾರಾಯಣನಿಗೂ ಆಗೋಲ್ಲ

2. ನಮ್ಮಮ್ಮ ಹುಟ್ಟಿಹಳು
ಬಲು ಸುಂದರದ ನೀಲಿಸೀರೆಯುಟ್ಟಿಹಳು
ಅದರ ನೆರಿಗೆಯ ಸುಂದರ ಸಂಪತ್ತು ಬಣ್ಣಿಸೋರು ಜಗದಲ್ಲಿಲ್ಲ.

3. ಕಾಲಿಲ್ಲದ ಹರಿಗು ತೋಳಿಲ್ಲದೆ ಹೊರಂಗು
ನಾಲಿಗೆಲ್ಲದ ಉಲಿವದು ಬೆಡಗೀನ
ಕನ್ನಡದ ಹೆಳ್ವಾಲೆ ಇನ್ನು ಜೊದಿಗವೇನೆ
ಪನ್ನಂಗದವನು ಶಿವಬಲ್ಲ , ನಾರೋರು ಕಂಡ
ಸಮುದ್ರದವಲ್ವೇನೆ ಹಸಿಯಷ್ಟೆ

4. ಸುತ್ತಲ ಸಮುಂದರ ನಡುವೆ ನೀರುಳಿದರು
ಹೂಗಾದರೇನೇ ಚೆಲುವಿಲ್ಲ , ದೊಂಬರ ಚೆನ್ನಿ
ಕಾಯಾದರೇನೇ ಫಲವಿಲ್ಲ

5. ನೀರಿಲ್ಲದ ಕೆರೆಯಲ್ಲಿ ಬೇರಿಲ್ಲದ ಗಿಡ ಹುಟ್ಟಿ: ಉಗುಲಿಲ್ಲದ ಹೊಗು ಕೊಯ್ದಳು ಗಂಗಮ್ಮ
ಬಳ್ಳಿಲ್ಲದೆ ಹೂವ ಸುರಿದಾಳು ಗಂಗಮ್ಮ
ಜೆಡಿಯಿಲ್ಲದೆ ಜಿಲ್ಲಿ ಬಿಟ್ಟಾಳು.

9. ಉಪ್ಪು

1. ಕೊಬ್ಬಿಂದ ಮೇಟಿ, ಹುಟ್ಟಿಲ್ಲದ ರಾಶಿ
2. ನೀನಿಲ್ಲದ ಊಟವಿಲ್ಲ
3. ಸಾಗರ ಪುತ್ರ ಸಾರಿನ ಮಿತ್ರ
4. ನೀರಲ್ಲಿ ಹುಟ್ಟೋದು, ನೀರಲ್ಲಿ ಬೆಳೆಯೋದು,
   ನೀರು ತಾಗಿದರೆ ಕರಗೋದು
   ಈ ವಗಟು ಹೇಳಿದವರಿಗೆ ಆರು ಹೊಳಿಗೆ ಸೇರು ತುಪ್ಪ
5. ಗಿಡ ಕೊಡಲಾರದು, ಮರ ಬೆಳಸಲಾರದು
   ಇದಿಲ್ಲದೆ ಊಟ ಸೇರದು
6. ನೀರಲ್ಲಿ ಹುಟ್ಟಿ ನೀರಿಗೆ ಬಿದ್ರೆ ಸಾಯ್ತದೆ; ನೀರಿನಲ್ಲಿ ಹುಟ್ಟಿ; ನೀರಿನಲ್ಲಿ ಬೆಳೆದು ನೀರು ತಟ್ಟಿದರೆ ಮಾಯ
7. ನೀರಲ್ಲಿ ಹುಟ್ಟುವುದು
   ನೀರಲ್ಲಿ ಬೆಳೆವುದು
   ನೀರ ಕಂಡರೆ ಜರಗುವುದು
8. ಸೋಲ ಇಲ್ಲದೆ ಸಾರಿಗೆ ಹಾಕ್ತಾರೆ
9. ಕಣ ಮಾಡಲಿಲ್ಲ ರಾಶಿ ಒಕ್ಕಲಿಲ್ಲ
   ಜಳು ಹಿಡಿಯಲಿಲ್ಲ ತಟ್ಟಲಿಲ್ಲ
   ವೆಟ್ಟು ಹತ್ತಲಿಲ್ಲ ತೂರಲಿಲ್ಲ
   ಪುಟ್ಟಿ ಹೊತ್ತ ಮಾಡಿದರೆ ಹಿಡಿತುಂಬ ಹೊನ್ನು

10. ನೀರು

1. ಕಡಿದರೂ ತುಂಡಾಗುವುದಿಲ್ಲ
2. ಕಡಿದರೆ ಕಚ್ಚಲ್ಲ, ಹಿಡಿದರೆ ಹಿಡಿಯೋಲ್ಲ
3. ಅಗಿದರೆ ಹಲ್ಲಿಗೆ ಸಿಗೋಲ್ಲ, ಹಿಂಡಿದರೆ ಕೈಗೆ ಸಿಗೋಲ್ಲ
   ಬಚ್ಚಿಟ್ಟರೆ ಬಿದ್ದೋಡ್ತದೆ
4. ಹಿಡಿದರೆ ಹಿಡಿಯೋಕಾಗಲ್ಲ, ಕಚ್ಚಿದರೆ ಕಚ್ಚೊಕಾಗಲ್ಲ
5. ಕೈಗೆ ಸಿಕ್ಕೊಲ್ಲ ಹಲ್ಲಿಗೆ ದಕ್ಕೊಲ್ಲ

11. ಮುತ್ತು

1. ಅಟ್ರ ಅನ್ನಲ್ಲ, ಕುಟ್ಟಿದ್ರ ತಾಡಲ್ಲ, ಬಡದ್ರು ಬೆಲೆ ಇಲ್ಲ

12. ಮೀನು ಹಿಡಿದ ಕುಳಿ

1. ಅಪ್ಪಯ್ಯನ ತೋಟಕ್ಕೆ ಇಪ್ಪತ್ತೊಂದು ಬೀಗ
   ಹೊಗೋಕೆ ಸದರ ಬರೋಕೆ ಬಂಡಾಟ
2. ಇನ್ನೂರು ಮುನ್ನೂರು ಗೂಟ ಯಂಕಪ್ಪನ ತೋಟ
   ಒಳಕ್ಕೆ ಹೋದ್ರೆ ಹೊರಕ್ಕೆ ಬರೋಶಂಕರಿಲ್ಲ

13. ಗಾಳದ ಮುಳ್ಳು

1. ಸುತ್ತಿ ಸುತ್ತಿ ಬರಬೇಡ ನನಗಾಗಿ
ಮೇಲೊಬ್ಬ ಕುಳಿತವ್ನೆ ನಿನಗಾಗಿ
2. ಮೇಲೊಬ್ಬ ಕುಳಿತವನೆ ನಿನಗಾಗಿ
ಎಕ ಪಟ್ಟಣ ಶತದ್ವಾರ

ಕೆಲವರು ಒಗಟಿನರ್ಥದಲ್ಲಿ ಸಮುದ್ರಕ್ಕೆ ಸಂಬಂಧಿಸಿದ ವಿಷಯಗಳನ್ನು ಹೇಳದೆ ಒಗಟಿನ ಸ್ವರೂಪದಲೆಲ್ಲ ಸಮುದ್ರಕ್ಕೆ ಸಂಬಂಧಿಸಿದ ವಿಷಯಗಳನ್ನು ಅಳವಡಿಸಿರುತ್ತಾರೆ. ಅಂತಹ ಕೆಲವು ಒಗಟುಗಳನ್ನು ಗಮನಿಸಬಹುದು.

ಮೀನಿನೊಗಟು

1. ಒಂಟಿ ಅರ್ಥ:-

1. ಓಳೆ ಪೊಂಡಲ ಪಜ್ಜೆ ತೆರಿಯಂದ್ (ಎಲ್ಲಿ ಹೋದರೂ ಹೆಜ್ಜೆ ತಿಳಿಯದು)
2. ಸತ್ತ ಮುದುಕೀನ ಸಂತೆಗೆ ಹೊತ್ಕೊಂಡು ಹೋದರು
3. ಸತ್ತರೂ ಮಿಣಿ ಮಿಣಿ ಇದ್ರೂ ಮಿಣಿ ಮಿಣಿ
4. ಸತ್ತರೂ ಸಂತೆ ಬಿಡ ಪೊಟರೆಗಣ್ಣಿನ ವೀತ್ತಪ್ಪ
5. ಹೋದ ಪುಟ್ಟ ಬಂದ ಪುಟ್ಟ ಪುಟ್ಟನ ಹೆಜ್ಜೆ ಕಾಂಬೋದಿಲ್ಲ
6. ಸತ್ತ ಮುದುಕೀನ ಸಂತೇಲೆ ಮಾರ್ತಾರೆ
7. ನೀರಲ್ಲಿದ್ದರೆ ಗಿಲಿ ಗಿಲಿ ನೀರಿನ ಹೊರಗಿದ್ದರೆ ವಿಲಿ ವಿಲಿ
8. ಚಿಕ್ಕ ಹುಡುಗಿ ಚಿಣಿಮಿಣಿ
ರೆಕ್ಕೆ ಉಂಟು ರಾಮಾ ಬಾಣ
9. ಸತ್ಥೆಣ ಸಂತೆಗೋಯ್ರ್ತದೆ
10. ಮಲಿ ಇಲ್ದ ಪೋರಿ
11. ಹಳ್ಳಿದಾಗ ಹಾದರಗಿತ್ತಿ
12. ನೀರಿನ ಒಳಗೆ ಬಾಲ್ದ ಹನುಮ
13. ಅಂತರ ಗಂಗೆ ಚಿಂತರ ಮೂತಿ
ಬೆಸ್ತ ಬತ್ತಾನೆ ಹಿಂದಿರುಗಿ
14. ಇಂಗಲು ಗಣ್ಣಿನವಳು ಸಂತೆಗೆ ಹೊಗ್ತಾಳೆ
15. ಬೈಲಡ್ ಒರಿ ನಾಮೊ ಪಾಡ್ದ್ ಉಂತ್‌ದೆ (ಬೈಲಿನಲ್ಲಿ ಒಬ್ಬ ನಾಮಹಾಕಿ ನಿಂತಿದ್ದಾನೆ)
(ಕೊಡ್ಯಾಣಿ ಎಂಬ ಮೀನು)
16. ಎಲ್ಲೇ ಹೋದರೂ ಹೆಜ್ಜೆ ಗುರುತು ಬಿಡದೆ ಹೊಗೋದು
17. ತಾತಾಗರಿ, ತಾಮ್ರದಗರಿ
ನೀರಲ್ಲಿ ಬಿಟ್ಟರೆ ತೇಲದ ಗರಿ

2. ಸಿಗಡಿಯೊಗಟು

1. ಜನೊ ಕುಟ್ಪಿ ಅಂಡಲ ಮೊಸೆ ಗಟ್ಪಿ (ವ್ಯಕ್ತಿ ಚಿಕ್ಕದಾದರೂ ಮೊಸೆ ಗಟ್ಪಿ)
2. ಸೊಂಟ ಮುರುಡಿ ಸಂತೀಗೆ ಹೋದ್ಲು
3. ನೋಡ್ಕೆ ಚಿಕ್ಕೋನು ಮೀಸೀಲಿ ದೊಡ್ಡೋನು
4. ಜನ ಚಿಕ್ಕದಾದರು ಮೊಸೆ ದೊಡ್ಡದು

3. ಎಡಿಯೊಗಟು

1. ಎರಡು ಕಡ್ಪ ಕತ್ತಿಯಲ್ಲಿ ಎಂಟು ಹೆಲ್ಗೆತ್ತಿ
2. ನನ್ನಜ್ಜನಿಗೆ ಒಂದು ಹೊರೆ ಕಟ್ಟಿಗೆ
3. ತೆಲಿ ಇಲ್ದ ಪಾರ
4. ಹತ್ ಕಾಲ ಆತ , ಗೆಂಟಿ ಬೂತ
   ನೆಂಟ್ರ ಬಂದ್ರ ವಳ ಅಡ್ ಹೋತ
5. ಎರಡು ಬಾಯ್ಗತ್ತಿ , ಯೆಂಟ ಹಲ್‌ಗತ್ತಿ
6. ಒಂದು ಎತ್ತು ಮೊಡದ ಬದಿ ಹೊಗೋದಿಲ್ಲ ಅಡ್ಡಡ್ಡ
7. ಬೇಟೆಗೆ ಹೋದವರು ಮೂವತ್ತು ಜನ
   ಹೊಡೆದವು ಮೂರು ಮಿಕ
   ಅಳಿಗೆ ಒಂದೊಂದು ತೊಡೆ ಬರಬೇಕು
   ಅವು ಯಾವ ಮಿಕ
8. ದೇವರು ಒಳಗೆ ಗಂಧ ಹೊರಗೆ
9. ಕಳ್ಳಿಲ್ಲದಾತ ಅಂಗ್ಳಿಲ್ಲದೆ ಮಾತಾಡುತ್ತೆ
10. ದೇವರ ಉಳಯಿ, ಗಂದೋ ಪಿದಯಿ (ದೇವರು ವಳಗೆ ಗಂಧ ಹೊರಗೆ)

4. ಕಪ್ಪೆ

1. ಕುಳಿತರೆ ಮುನಿ , ಕೂಗಿದರೆ ಹುಲಿ, ಹಾರಿದರೆ ಹನುಮ
2. ಹಾಳ್ ಬಾವಿಲಿ ಮಾಳ್ಳೊಗ್ತು
3. ಕುಂತ್ರೆ ಮುರ್ಡೇಶ್ವರ ಹಾರಿದ್ರೆ ಹನುಮ
4. ಹಾರಿದ್ರೆ ಹನುಮಂತ ಕೂಗಿದ್ರೆ ರಾವಣ
5. ಗುಗ್ಗುರಿ ಮೈಯಾಗಿ ಗುಲಗುಂಜಿ ಕಣ್ಣಾರೆ, ಕೆಸ್ರಾಗ ಹಾಕಾರೆ
6. ಹಾರ್ತಾ ಇಲಿ, ಜಿಗಿತ ಇಲಿ, ಭಪ್ಪರೆ ಹುಲಿಗೆ ಬಲಾನೆ ಇಲ್ಲ

5. ಆಮೆ

1. ಆಡಿ ಚಕ್ಕಣ ಮೇಲೆ ಚಕ್ಕಣ ಬೇಟೀಗಿ ಹೊಂಟ್ರು ಸಂಜಿವ ಶೆಟ್ರು
2. ಅಡಿಕ್ಕ್ ಚಕ್ಕಣೋ ಮೇಲೆ ಚಕ್ಕಣೋ (ಅಡಿಗೆ ಚಿಕ್ಕ ಚಾಪೆ ಮೇಲೆ ಚಿಕ್ಕ ಚಾಪೆ ದೇವರು ಬೇಟೆಗೆ ಹೋಗಿದ್ದಾರೆ)
   ಚಕ್ಕಣೋ ದೇವೆರ್ ಬೊಂಟಗ್ ಪೊತೆರ್

6. ದೋಣಿ

1. ಹೋತ್ಯ ಪುಟ್ಪಾ ಬಂತ್ಯ ಪುಟ್ಪಾ
ಪುಟ್ನ ಹೆಜ್ಜೆ ಕಾಂಬುದಿಲ್ಲ
2. ನೀರಾಗೆ ನಡೆಯುವುದು ಮೃಗವು ತಾನಲ್ಲ
ಹಾರಲರಿಯದು ಹಾದಿನಡೆಯುವುದಿಲ್ಲ
3. ಗಬ್ಬದ ಎಮ್ಮೆ ಉಬ್ಬು ಹತ್ತೊತ್ತೆ
4. ನೀರಿನಲ್ಲಿ ಹೊಗುವೆನು ಮೀನು ನಾನಲ್ಲ
ಮಾನವನ ಸೇವಕನು ನನಗೆ ಜೀವವಿಲ್ಲ
ನೀರಿನಲ್ಲಿ ಹೋದರೂ ಹೆಜ್ಜೆ ಕಾಣುವುದಿಲ್ಲ
5. ಸತ್ತ ಮರ ನೀರಲ್ಲಿ ಓಡುತ್ತೆ
6. ಹದಿನಾರು ಹಗ್ಗ ಮೂವತ್ತೆರಡು ಬಿಗಿತ
ಹೇಳದೆ ಕೇಳದೆ ನಮ್ಮ ಬಸವಣ್ಣ ಗುಟ್ರಹೊಡೀತಾನೆ
7. ಹುಲಿಲ್ಲದ ಹೋಳೀಲೆ ಹಲ್ಲಿಲ್ಲದ ಆಕಳು ಮೆಯ್ತದೆ
8. ಅಂಗೈ ಅರಗದ್ದೆ ಮುಂಗೈ ಅರಬದ (ಆರು - ಎರು, ಬದ - ಬದು (ಗದ್ದೆ ಬದು)
ಹನ್ನೆರಡು ಆರು ಹೂಡೊದು ಒಬ್ಬನೆ
9. ಕಡಲಲ್ಲಿ ಒಬ್ಬ ಕಂಬಳಿ ಹೊದ್ಕೊಂಡು ಹೋತ

7. ಮೀನ ಬಲೆ

1. ಗಂಟು ಗಂಟು ಒಡಕಿನ ಗಂಟು
ಗೆಜ್ಜೆ ನಳ್ಳಿ ನುಗ್ಗೆ ಮರ
2. ಗಂಟು ನೂರು ಗಜ್ಜುಗ ನೂರು
ಬಡಚಿ ಕೊಟ್ಟವನೇ ಜಾಣ
3. ಗಿಡ್ಡ ಹುಡುಗ ಗಿದ್ನರೆ ಹೊರ್ತಾನೆ
4. ನುಲಿ ಮಲಿ ತಕ್ಕೊಂಡು ಗಲಿಬಿಲಿಗೆ ಹೋದ
5. ಹಿಡಿದರೆ ಮುದ್ದೆಯಾಗುವುದು ಬಿಟ್ಟರೆ ನೂರಡಿಯಾಗುವುದು
ಪಾತಾಳಕ್ಕೆ ಹೋಗುವುದು ಪಕ್ಷಿಯನ್ನು ತರುವುದು
ತಾನೂ ತಿನ್ನದೆ ಪಾರಿಗೆ ಕೊಡುವುದು
6. ಹಲ್ಲು ನಾಲಿಗೆ ಇಲ್ಲ, ಬಲ್ಲಿದ ಕೈಗಳಿಲ್ಲ
ಕೊಲ್ಲದೆ ಪ್ರಾಣಿ ಹಿಡಿಯ ಬಲ್ಲದು
7. ಹೊಗ್ವಾಗೆ ಸುಮ್ನೆ ಹೋಗ್ತಿಯ ಬರ್ವಾಗೆ ತೀಡ್ತೆ ಬರ್ತಿಯ
8. ಹಿಡಿದ್ರೆ ಮುಷ್ಟಿ ಬಿಟ್ರೆ ರಾಜಾಂಗಳ
9. ಯಂಕಪಜ್ನ ತೋಟಾ ನೂರಾರ್ಗು ಟ್ಪಾ ಹೊಕ್ಕದ್ರೆ ಹೆರಂಗ್ಬರೂದಾಗ್ತಿಲ್ಲೆ
10. ಗಂಟು ನೂರು ಗಜನೂರು
ಮಂಟಪನೂರು ಮನೆ ನೂರು
ಬಂಟ ನೀನಾದರೆ ತಿಳಿದೇಳು

11. ಪಾತಾಳಕೊಗುತ್ತೆ
ಪಾಪಿ ತರುತ್ತೆ
ತಾನ್ ತಿನ್ನಾಕಿಲ್ಲ
ಅರಸನಿಗೆ ಕೊಡ್ತದೆ

12. ಹಿಡಿದರೆ ಹಿಡಿಯಾಯ್ತು
ಬಿಟ್ಟರೆ ಜಲ್ಲಂತು
ಪಾತಾಳಕೋಯ್ತು
ಪಾಪಿ ತಂತು
ತಾ ತಿನ್ನಲಾರದೆ
ಪಾಲಿಗೆ ಕೊಡ್ತು

13. ಹಿಡಿದರೆ ಮುಷ್ಟಿ ಬಿಟ್ಟರೆ ಕೊಟಿ (ಬೀಸುಬಲೆ)

14. ತಾನ್ ತಿನ್ನ ಪರರಿಗೆ ಬಿಟ್ಟುಕೊಡ

ಹಲವರ್ಥದ ಒಗಟುಗಳು :

1. ಒಂದು ಆಡತ್ತೈತಿ
ಒಂದು ಓಡುತ್ತೈತಿ
ಒಂದು ನಿಂತು ನೋಡುತ್ತೈತಿ — ಮೀನು - ನೀರು - ಕಲ್ಲು

2. ಅಂಗಾಲು ಮೇಲಾಗಿ ನೀರು ಕುಡಿಯಾಲ್
ಇಂದು ನಿಮ್ಮೂರಲ್ಲಿ ಹಬ್ಬಕ್ಕೆ ನಾತ
ನಿನಗ್ಯಾರ ಹೇಳಿದರು ತಲೆಯಿಲ್ಲದಾತ
ನನಗೊಬ್ಬರು ಹೇಳಿದರು ಕರುಳಿಲ್ಲದಾತ — ಹೋತ - ಎಡಿ - ಊದುವ ಕೊಂಬು

3. ಕಲ್ಲ ಕಳಮಾಡಿ
ಕಬ್ಬಿಣದ ಮೇಲೆ ಮೊಡಿ
ಇಲ್ಲದ ನಾಯಿ ಹಿಡಿಕೊಂಡು
ಶಿರಸವಿಲ್ಲದ ಕುದುರೆ ತಕ್ಕೊಂಡು
ಇಲ್ಲದ ಮಿಕ ತರೋದಕ್ಕೆ ಅಡವಿಗ್ಹೋದ — ಒಳಕಲ್ಲು - ಒನಕೆ - ಗುದ್ದಲಿ - ಕೊಡಬೆ ಮೀನು

4. ಎ) ಒಂದು ಓಡ್ತಾದ
ಒಂದು ಆಡ್ತಾದ
ಒಂದು ಕೂಡ್ತಾದ — ನೀರು - ಮೀನು - ಉಸುಕು

ಬಿ)ಇಲಿ ಇಲ್ದ ಗಿಡದ ಬುಡಕ
ತೆಲಿ ಇಲ್ದ ಪಾರ
ಮಲಿ ಇಲ್ದ ಪೊರಿಗೆ ಮಾಡಿಕೊಂಡ್ತು — ಹಾಲ್ಗಳ್ಳಿ - ಏಡಿ - ಮೀನು

5. ಅಣ್ಣಪ್ಪ ಶೆಟ್ರಿಗೆ ಮಣ್ಣ ಕೆಲಸ
ಚಿಣಿ ಚಿಣಿ ಹಕ್ಕಿಗೆ ನೀರ ಕೆಲಸ — ಏಡಿ - ಕಪ್ಪೆ

6. ಹೊಟ್ಟೆಲ್ಲದ ರಾಶಿ
ಕಬ್ಬಿಣದ ಮೇಣಿ — ಉಪ್ಪು - ಅಳತೆಯ ಸೇರು

7. ಸಮುದ್ರಕ್ಕೊಂದ್ ಮೀನಿಗೆ ಕರುಳಿಲ್ಲ
ಕಾನಕ್ಕೊಂದ್ ಮಂಕೆ ಚಿರ್ಲ್ಲ
(ಚಿರ್ಲ್ - ತಿರುಬು) — ಸಿಗಡಿ - ಬಿದಿರು

8. ಅಪ್ಪ ಅಪ್ಪ ಮರನೋಡು
ಮರದಾಗಳ ಎಲೆನೋಡು
ಮಾತೋಗಿ ತೂಕಾದೊ
ಮಳ್ಯಾಗ್ಯದಾಗಳ ಸೂಳೆ
ಮರದ ಮೇಲೆ ವಿಂಡ್‌ಗಾರ — ಪುಸ್ತಕ-ಹಾಳೆ-ಅಕ್ಷರ-ಮಳೆ-ಮೀನು-ಹುಣಸೆಕಾಯಿ

1(ಸಿ) ಆಡುವುದು ಒಂದು
ಓಡುವುದು ಇನ್ನೊಂದ
ನಿಂತು ನೋಡುವುದು ಮತ್ತೊಂದು — ಮೀನು - ನೀರು - ಮೀನುಹಿಡಿಯುವಕೂಳಿ

8. ಎಲ್ಲಾ ಉಂಟು ಮೂರಿಲ್ಲ — ಆಕಾಶಕ್ಕೆ ಏಣಿಯಿಲ್ಲ
ಸಮುದ್ರಕ್ಕೆ ಸೇತುವೆಯಿಲ್ಲ
ಅಂಗೈಯಲ್ಲಿ ರೋಮವಿಲ್ಲ

9. ಕಬ್ಬಿಣದ ಕಣಬೆ ಕಂಚಿನ ಮೇಟಿ ಹುಲ್ಲಾರ ಪೇಟೆ
ನಲ್ಲೂರಕ್ಕೆ ನಿನ್ನ ಗಂಡ ಎಲ್ಲಿಗೆ ಹೊಗ್ಯಾನೆ?
ನನ್ನ ಗಂಡ ನಾಲಿಗಿಲ್ಲದ ನಾಯಿ ತಕ್ಕೊಂಡು
ತೋಡಿಲ್ಲದ ಕುದುರೆ ತಕ್ಕೊಂಡು
ಗಿಡವಿಲ್ಲದ ಬಾರೆಗೆ ಮಿಕ ಹೊಡಿಯೋಗೆ ಹೊಗ್ಯಾನ — ಕೂಳಿ - ಕೂಳಿಗೂಟ - ನೀರು - ಮೀನು

10. ದೇವರು ಒಳಗೆ
ಗಂಧ ಹೊರಗೆ — ಏಡಿ - ಏಡಿಕುಣಿ - ಮಣ್ಣು

11. ಸುತ್ತಿ ಸುತ್ತಿ ಬರುತ್ತೀಯ ನನಗಾಗಿ
ಮೇಲೊಬ್ಬ ಕೂತವ್ನೆ ನಿನಗಾಗಿ
ನನ್ನಿಂದ ನಿನ್ನ ಪ್ರಾಣ ಹತವಾಗಿ — ಗಾಣದ ಹುಳು - ಮೀನು

12. ಹತ್ತು ಕಾಲು ತಗಡಿ ಬಿಗಡಿ ಸತ್ತು ಬಿದ್ದಿದೆ
ನಾಲ್ಕು ಕಾಲು ತಗಡಿ ಬಿಗಡಿ ಕಾದು ಕೂತಿದೆ
ಎರಡು ಕಾಲು ತಗಡಿ ಬಿಗಡಿ ನೊಡ್ತಾ ಕುಳ್ತಿದೆ — ಏಡಿ - ನಾಯಿ - ಹದ್ದು

13. ನಿನ್ ನುಂಗಾಗ್ ಬರತಾನ್ ಉದ್ ಮೂಗಿನಾತ
ನಿನಗ್ಯಾರ್ ಹೇಳಿದ್ದು ? ನಾಕ್ ಕಾಲಾತ
ನನಗೊಬ್ಬ ಹೇಳ್ದ ಕರುಳಿಲ್ಲದಾತ
ಮತ್ತೊಬ್ಬ ಬರತಾನೆ ಶಿರವಿಲ್ಲದಾತ
ಇನ್ನೊಬ್ಬ ಬರತಾನೆ ಅಂಗಾಲ ಮೇಲ್ ಮಾಡಿ ನೀರ್ ಕುಡಿದಾತ
ಆನೆ- ಬಸವ - ಆನೆಕುತ್ತಿಗೆ ಗಂಟೆ - ಏಡಿ

14. ಮಾಸೂರ್ ಹತ್‌ಕಾಲು
ಕಾಗಾಲ್ ಬಣ್ಣದ ಗುಡ್ಡೆ
ತದಡಿ ಯೊಳ್ಳಿದ ಮೊಕೆ (ಅರಳಿಯ) ಏಡಿ - ಯೇಳ್ಳಿ -ಕಮಲ - ಶಟ್ಲ (ಶಿಗಡಿ)

15. ಕಾವೇರಿ ಕತ್ತುರಿ ಪನ್ಪಿ ಕಾಡ್,
ಚೀವುರಿ ಚಿಪ್ಪುರಿ ಫನ್ಪಿ ಲೂರು,
ಎಂಡ್ ತನ್ಸ್ಕ ಪನ್ಪರ್ ನಾಲೆ
ಕಾವೇರಿ ಕತ್ತೂರಿ ಅನ್ನೊ ಕಾಡು,
ಚೀವುರಿ ಚಿಪ್ಪುರಿ ಅನ್ನೋ ಊರು,
ನನಗೆ ನಿನಗೆ ಅನ್ನುವರು ನಾಲ್ವರು ಕಡಲು - ದೋಣಿ - ಬಲೆ ಮತ್ತು ಬೆಸ್ತರು

16. ಗುಜುಗುಜು ಗುಮ್ಮಣ್ಣ ಮೀಸೆ ರಂಗಣ್ಣ ಬೆಳಗಲ್ ಪುಟ್ಟಣ್ಣ
(ಉರಿ, ಸಮುದ್ರದಲ್ಲಿನ ಒಂದು ಗುಂಪು ಜೀವಿ , ಸಿಗಡಿ , ಬಿಳಿಯ ಮೊಟ್ಟೆ)

ಹಲವರ್ಥದ ಒಗಟುಗಳಲ್ಲಿನ ಅರ್ಥವೆಲ್ಲಾ ಸಮುದ್ರಕ್ಕೆ ಸಂಬಂದಿಸಿದ ವಿಷಯವನ್ನೆ ಸೂಚಿಸದೇ ಇದ್ದರೂ ಅವುಗಳಲ್ಲಿ ಒಂದರ್ಥವಾದರೂ ಸಮುದ್ರಕ್ಕೆ ಸಂಬಂಧಿಸಿದ್ದಾಗಿರುವುದು ಗಮನಾರ್ಹವಾದುದು. ಒಗಟು ರಚಿಸುವವರು ತಮಗೆ ತೋಚಿದ್ದನ್ನೆಲ್ಲಾ ಒಂದೆಡೆ ಕಲೆಹಾಕಲು ಪ್ರಯತ್ನಿಸುತ್ತಿರುವ ಕಾರಣದಿಂದ ಒಗಟಿನಲ್ಲಡಗಿರುವ ಅರ್ಥಗಳೆಲ್ಲಾ ಒಂದಕ್ಕೊಂದು ಸಂಬಂಧ ಪಟ್ಟ ವಿಷಯವನ್ನು ರಚನೆಕಾರ ತನ್ನೊಗಟಿನಲ್ಲಿಟ್ಟು ತನ್ನರಿವಿನ ವಿವಿಧ ಮುಖಗಳನ್ನು ವ್ಯಕ್ತಪಡಿಸಲು ಬಯಸಿದ್ದಾನೆ.

ಒಂದೇ ಒಗಟು ಬೇರೆ ಬೇರೆ ಸ್ಥಳಗಳಲ್ಲಿ ಪ್ರಾದೇಶಿಕ ಭಿನ್ನತೆ ಪಡೆದು ಬಳಕೆಯಾಗುವಾಗ ಬಿಂಬಿಸುವ ಅರ್ಥದಲ್ಲಿ ಒಗಟುಗಾರನ ಒಲವಿನ ವಿಷಯಗಳು ಅಭಿವ್ಯಕ್ತವಾಗುತ್ತದೆ. ನಿದರ್ಶನಕ್ಕೆ ಒಂದನೇ ಒಗಟಿನಲ್ಲಿ ಮೀನು - ನೀರು - ಕಲ್ಲೆಂದು ಅರ್ಥೈಸಿದ ಒಗಟುಗಾರ 1(ಬಿ) ಒಗಟಿನಲ್ಲಿ ಕಲ್ಲಿಗೆ ಬದಲಾಗಿ ನೀರಿನಲ್ಲಿರುವ ಉಸುಕು ಅವನರ್ಥಕ್ಕೆ ಎಡೆಮಾಡಿದೆ. ಇದೇ ಒಗಟು ದಕ್ಷಿಣ ಕನ್ನಡದ ಕರಾವಳಿಯ ಜನರಲ್ಲಿ ಬೇರೊಂದು ಅರ್ಥವನ್ನು ಪಡೆಯುತ್ತದೆ. ಕಲ್ಲು - ಉಸುಕಿನ ಅರ್ಥವನ್ನು ಹೊಂದಿದ್ದ ಒಗಟಿಗೆ ಸರಿಯಾದ ಮತ್ತು ಒಗಟಿನಲ್ಲಿರುವ ಅರ್ಥಗಳಿಗೆ ಸರಿ ಹೊಂದುವಂತಹ 'ಮೀನು ಹಿಡಿವ ಕೂಳಿ' ಎಂಬ ಅರ್ಥವನ್ನು ಸೂಚಿಸಿರುವುದನ್ನು ಗಮನಿಸಿದಾಗ ಮೀನುಗಾರಿಕೆಯ ಪರಿಪೂರ್ಣ ಜ್ಞಾನ ಇರುವುದರಿಂದ ಈ ಒಗಟಿನ ರಚನೆಯಾಗಿದೆ ಎಂಬುದು ತಿಳಿಯುತ್ತದೆ. ಮೊದಲೆರಡು ಒಗಟುಗಳ ಅರ್ಥಕ್ಕಿಂತ ಮೂರನೆಯ ಒಗಟಿನ ಅರ್ಥ ಸಮಂಜಸವೆನಿಸುತ್ತದೆ.

ಒಗಟು ಕತೆ

ಚಾಣಾಕ್ಷತನದ ಪರೀಕ್ಷೆ ಉದ್ದೇಶವನ್ನು ಹೊಂದಿ ಮನರಂಜನೆಯನ್ನು ಮಡಿಲಲ್ಲಡಗಿಸಿಕೊಂಡು ಹುಟ್ಟಿಕೊಂಡ ಒಗಟು ಪ್ರಾರಂಭದಲ್ಲಿ ಒಂಟಿ ವಾಕ್ಯದ ಸ್ವರೂಪ ತಾಳಿ ಕಾಲಕ್ರಮೇಣ ದ್ವಿಪದಿ, ತ್ರಿಪದಿ, ಚೌಪದಿಯಾಗಿ ಮುಂದುವರಿಯುತ್ತಾ ಕೊನೆಗೆ ಚಿಕ್ಕ ಚಿಕ್ಕ ಕಥಾ ರೂಪ ತಾಳಿತು. ಕಥಾ ವಸ್ತುವನ್ನೇ ಒಗಟಿನ ವಸ್ತುವನ್ನಾಗಿಸಿಕೊಂಡು ಸಾಗುವ ಕಥೆಯು ಕೊನೆಯಲ್ಲಿ ಕೇಳುಗನಿಗೆ ಸವಾಲನ್ನೆಸೆಯುವಂತಾಗುತ್ತದೆ. ಸಾಮಾನ್ಯ ಕಥೆಗೂ ಒಗಟಿನ ಕಥೆಗೂ ಇರುವ ವ್ಯತ್ಯಾಸವೆಂದರೆ ಮನರಂಜನೆ, ನೀತಿ ಮೊದಲಾದ ಲಕ್ಷಣಗಳಿಂದ ಮೈತಾಳಿದ ಸಾಮಾನ್ಯ ಕಥೆಯು ಕಥೆ ಹೇಳುವವನನ್ನು ಹೆಚ್ಚು ಕ್ರಿಯಾಶೀಲನನ್ನಾಗಿಸಿ ಕೇಳುಗನನ್ನು ಮೌನವಾಗಿಸುತ್ತದೆ. ಆದರೆ ಒಗಟಿನ ಕಥೆಯಲ್ಲಿ ಇಬ್ಬರೂ ಸಹ ಕ್ರಿಯಾಶೀಲರಾಗಿಯೇ ಇರುತ್ತಾರೆ. ಇಬ್ಬರ ನಡುವೆ ಸ್ಪರ್ಧಾತ್ಮಕ ಮನೋಭಾವನೆಯನ್ನು ಕಥೆ ಉಂಟುಮಾಡುತ್ತದೆ. ಅಲ್ಲದೆ ಚಾಣಾಕ್ಷತನದ ಪ್ರದರ್ಶನ ಇಲ್ಲಿ ಮುಖ್ಯವಾಗಿದ್ದು ಸೋಲು ಗೆಲುವಿನ ಅಂತರ ಅವರ ನಡುವೆ ಏರ್ಪಡುತ್ತದೆ. ಕಥೆಯು ಮೊದಲು ಒಬ್ಬನಿಂದ ಪ್ರಾರಂಭವಾಗಿ ಒಗಟಿಗೆ ಅರ್ಥ ಸೂಚಿಸುವವನಿಂದ ಮುಕ್ತಾಯಗೊಳ್ಳುತ್ತದೆ. ಕಥೆಯ ಸ್ವರೂಪ ಕಿರಿದಾಗಿದ್ದರೂ ಬುದ್ಧಿಯ ಕಸರತ್ತಿಗೆ ಎಡೆಮಾಡಿಕೊಡುವುದರ ಮೂಲಕ ಅದು ಸರಣ ಕಥೆಯಾಗದೆ ಸಂಕೀರ್ಣಕಥೆಯಾಗುತ್ತದೆ. ಒಗಟು ಕಥೆ ಜನಪದರ ಕಥಾ ಕೌಶಲ್ಯತೆಯನ್ನು ಪರಿಚಯಿಸುವುದರ ಜೊತೆಗೆ ಕೇಳುಗರ ಚಾಣಾಕ್ಷತನವನ್ನು ಪ್ರದರ್ಶಿಸುತ್ತದೆ. ಅಂತಹ ಕತೆಗಳಲ್ಲಿ ರಮ್ಯ ಕಥೆಗಳ ವರ್ಗ ಸೇರುವ ಒಂದು ಒಗಟು ಕಥೆಯನ್ನು ನೋಡಬಹುದು.

ಒಂದೂರಲ್ಲಿ ಗಂಡ - ಹೆಂಡತಿಯರಿಬ್ಬರು ಇರುತ್ತಾರೆ. ಹೆಂಡತಿ ಗಂಡನಿಗೆ ಮೋಸಮಾಡಿ ಅವನಿಲ್ಲಾದಾಗ ಪರಪುರುಷನ ಜೊತೆಯಲ್ಲಿ ಸಂಬಂಧವನ್ನಿಟ್ಟುಕೊಂಡಿರುತ್ತಾಳೆ. ಹೆಂಡತಿಯ ಗುಣದ ಬಗ್ಗೆ ಸಂಶಯ ಮೂಡಿದ್ದರಿಂದ ಗಂಡನು ಪರೀಕ್ಷಿಸುವ ಸಲುವಾಗಿ ಅಟ್ಟವೇರಿ ಕುಳಿತುಕೊಳ್ಳುತ್ತಾನೆ. ಗಂಡ ಅಟ್ಟದ ಮೇಲಿರುವಾಗ ಪರಪುರುಷ ಮನೆಗೆ ಬರುತ್ತಾನೆ. ಹೆಂಡತಿಯು ಗಂಡನ ಹೊಂಚನ್ನು ಅರ್ಥಮಾಡಿಕೊಂಡು ಆ ಪರಪುರುಷನಿಗೆ ಊಟ ಬಡಿಸುತ್ತಾಳೆ. ಆಗ ಗಂಡನಿರುವುದನ್ನು ಆ ಪುರುಷನಿಗೆ ನೇರವಾಗಿ ತಿಳಿಸಲು ಸಾಧ್ಯವಾಗದ ಆ ಹೆಂಗಸು ಅದನ್ನು ಒಗಟಿನ ಮೂಲಕ ತಿಳಿಸಲು ಪ್ರಯತ್ನಿಸುತ್ತಾ ಹೀಗೆನ್ನುತ್ತಾಳೆ.

'ಸುತ್ತುತ್ತಾ ಇದೆ ನಿನಗಾಗಿ
ಮೇಲೊಬ್ಬ ಕುಳಿತುಕೊಂಡಿದ್ದಾನೆ ನನಗಾಗಿ
ಸುತ್ತುತ್ತಾ ಮೀನು ಬೀಳುತ್ತದೆ ಗಾಳಕ್ಕೆ
ಮೇಲೆ ಕುಳಿತವನಿಗೆ ಗೊತ್ತಾಯಿತು'

ಮಿಂಡನಿಗೆ ಇವಳು ಹೇಳುತ್ತಿರುವ ಪದ್ಯದ ಅರ್ಥ ತಿಳಿಯಲಿಲ್ಲ ಆಗ ಆತನು ಇದು ಯಾವ ಪದ್ಯವೆಂದು ಕೇಳುತ್ತಾನೆ. ಆಗ ಅವಳು 'ಇದು ನನಗೆ ತಂದೆ ಕಲಿಸಿದ್ದು ಮೀನು ಗಾಳಕ್ಕೆ ಬೀಳುವ ಪದ್ಯ' ಎನ್ನುತ್ತಾಳೆ.

ಇಲ್ಲಿ ಒಂದು ಒಗಟು ಘಟನೆಯೊಂದರ ರೂಪದಲ್ಲಿ ವ್ಯಕ್ತವಾಗಿದೆ. ಅದು ಘಟನಾರೂಪದ ಒಗಟಿಗೂ ಉದಾಹರಣೆಯಾಗಿದೆ. ಹೆಚ್ಚಿನ ಜಾಣತನಕ್ಕೆ ಸಂಬಂಧಿಸಿದ ವಸ್ತುವನ್ನು ಹೊಂದಿರುವ ಈ ಕಿರುಗತೆಯಲ್ಲಿ ಜಾಣತನ ಪ್ರಧಾನವಾಗಿದೆ. ಗಂಡ - ಹೆಂಡತಿ ಮಿಂಡ ಈ ಮೂವರನ್ನು ಸುತ್ತುವರಿದಿರುವ ಈ ಒಗಟು ಮಾತಿನಲ್ಲಿ ಮನೋರಂಜನೆ ಗುಣ ಅಡಗಿದೆ.

ಇಲ್ಲಿ ಮೀನು ಮತ್ತು ಗಾಳದ ಕಲ್ಪನೆಯಲ್ಲಿ ಮೀನುಗಾರರ ಸಂಸ್ಕೃತಿಯ ಜೊತೆಗೆ ಒಗಟಿನ ಸಾಂಕೇತಿಕ ಗುಣದ ಸಮರ್ಥ ನಿರೂಪಣೆ ಇದೆ.

ಪಾಠಾಂತರ

ಮೇಲಿನ ಒಗಟು ಕಥೆಯು ಬೇರೊಂದು ಸ್ಥಳದಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸಗೊಂಡು ಪ್ರಯೋಗವಾಗುತ್ತದೆ. ಅದರ ಸ್ವರೂಪ ಹೀಗಿದೆ:

ವಂದಲ್ಲಾ ವಂದೂರಲ್ಲಿ ವಂದ್ ಬಟ್ಟಿದ್ದ . ಇದ್ರೆ ಅವನ ಅಡ್ಡ ಚಾಳಿ ಹೆಂಗಸು. ವಂದಿಸುವ ಅದ್ರ ಗಂಡ ಕುಂತಿದ್ದಾಗ ಮಿಂಡಗಾರ ಬಂದು, ಆ ಗಂಡಾಗ್ ಕಂಡಿನಿಲ್ಲೆ ಅವ. ಇದು ಕಂಡ್ ಬಿಟ್ರು ಅವ್ನ ಹಾಡ್ ಹೇಳ್ತ ಕುಂತ್‌ತು ಮನ್ಯಲ್ಲಿ -

ಸುತ್ತಿ ಸುತ್ತಿ ಬರುತ್ತಿದೆ ನನಗಾಗಿ
ಮೇಲೊಬ್ಬ ಕೂತಾನೆ ನಿನಗಾಗಿ
ಬಂದರೆ ಸಾಯುತ್ತಿ ನನಗಾಗಿ
ಅರ್ಧ ಸತ್ತಿದ್ದೆ ನಿನಗಾಗಿ

ಗಂಡ ಅದ್ರ ಹಾಡೆಲ್ಲಾ ಕೇಳಿ 'ಎ ರಂಡೆ ಯಾರ ಮಿಂಡ್ನ ಇಟ್ಕಂಡಿ ಈ ಹಾಡ ಹೇಳ್ತೆ ? ಈ ಹಾಡ್ನ ಅರ್ಥ ಏನು ? ಹೇಳ್ ಎಂದ್ ದಾಬಾಯ್ಸದ ಅದ್ನೆ ಅವಾಗ್ ಅದ್ ಹೇಳ್ತು ಅಯ್ಯೋ ನನ್ನಂಥ ಪತಿವೃತೆ ನಿಮ್ಗ ಹುಡ್ಕಿದ್ರೆ ಇನ್ನೊಂದು ಸಿಗಲಾರದು. ತಾಹೇಳ್ದಿ ಹಾಡ್ನ ಅರ್ಥಾದ್ರೂ ಮಾಡಿ ಇಚಾರ ಮಾಡ್ಕೊಂಡು ಹೇಳಿ ' ಎಂದ್ ಹೇಳ್ತು.

ಹಂಗಾದ್ರೆ ಎನ್ ಅದ್ರ ಅರ್ಥ ಹೇಳು? ಯಾರೋ ನಿನ್ ದೊಸ್ತಿ ಮನ್ಯ ಇಲ್ಲಿ ಬರ್ತಿದ್ದ ಅದ್‌ಕಾಗ್ ನೀ ಹಾಗೆ ಹೇಳ್ತ' ಅರ್ಥವೇನು ಹೇಳು ಅಂದ.

ಅಷ್ಟೂ ತಿಳಿತಿಲ್ಲೊ ನಿಮಗೆ ? ನೀವು ದಡ್ಡರು, ಸೊತ್ರಿ 'ಹಿಂಗ್ ಹೇಳಿ ಗಂಡ್ನ ದಡ್ನ ಮಾಡ್ತು ಅದು.

ಹಾಂಗಾದ್ರೆ ನೀ ಹೇಳ್ದ ಹಾಡ್ನ ಅರ್ತ ಸರಿಮಾಡ್ ಹೇಳ' ಎಂದ ಅವ ಹೇಳ್ತಿ ಕೇಳಿ ಒಬ್ಬ ಜಲಗಾರಿ ಗರಿ ಹಚ್ಕಂಡ ಗಾಳ ಹಾಕು ಬಗ್ಗೆ ದಂಡೆ ಮೇಲೆ ಕುಂತಿದ್ದ, ಆ ಗಾಳಕ್ ನಂಜುಳ್ಳೆ ಹುಳ ಸಿಕ್ಕಿ ನೀರಲ್ ಬಿಟ್ಟಿದ್ದ ಆ ನಂಜುಳ್ಳೆ ತಿಂಬೋಕೆ ಮೀನು ಸುತ್ತಿ ಸುತ್ತಿ ಬಸ್ತ ಇದ್ದೊ ಆವಾಗ ನಂಜುಳ್ಳೆ ಹುಳ ಹೇಳ್ತು ತನ್ ತಿಂಬೋ ನೀ ಸುತ್ತಿ ಸುತ್ತಿ ಬತ್ತೆ ನನಗಾಗಿ , ನಿನ್ ತಿನ್ನುವ ಮೇಲ್ ಕಾಯ್ತಾ ಕೂತಾನೆ, ತನ್ನ ತಿಂಬ್ಲ್ ಬಂದ್ರ ನೀ ಸಾಯ್ತೆ. ಅರ್ಧ ಸತ್ತಿದ್ದೆ ತಾ ನೀನ್ ಬಗ್ಗಾಗಿ ಅರ್ಧ ಸತ್ತಂತೆ ಇದ್ದೆ ನೀ ತಿಂದ್ರೆ ದೊಡ್‌ದಲ್ಲ ಆದ್ರೆ ನಿನ್ ತಿಂಬವ ಬೇರೊಬ್ಬ ಮೇಲಿದ್ದ ಎಂದು ಹೇಳ್ತು.

ಆಗ ಗಂಡ ಸಮಾಧಾನವಾಗಿ ಸುಮ್ಮನಾದ. ಈ ಕಥೆಯು ಮೊದಲಿನ ಕಥೆಗಿಂತ ಹೆಚ್ಚಿನ ವಿವರವನ್ನು ನೀಡುವುದಲ್ಲದೆ ಜಾಣೆ ಹೆಂಡತಿ ಜಾರೆಯಾಗಿದ್ದರೂ ಒಗಟು ಕಥೆಯಲ್ಲಿ ಗಂಡ ತನ್ನ ಬಗ್ಗೆ ತಾಳಿದ್ದ ಸಂಶಯಕ್ಕೆ ಮದ್ದಾಕುತ್ತಾಳೆ. ಸಾಂಕೇತಿಕವಾಗಿ ಗಂಡ ಮತ್ತು ಮಿಂಡರಿಬ್ಬರೂ ಸಮಾಧಾನ ಮಾಡುವಂತಹ ಅವಳ ಒಗಟು ಕಥೆ ಅವಳನ್ನು ಸಹಕರಿಸುತ್ತದೆ. ಇಲ್ಲಿ ಒಗಟಿನ ಬಳಕೆಯ ಮುಖ್ಯ ಉದ್ದೇಶ ತಪ್ಪನ್ನು ಮರೆಮಾಡುವುದರ ಜೊತೆಗೆ ಗಂಡ ಮಿಂಡರಿಬ್ರನ್ನು ಉಳಿಸಿಕೊಳ್ಳುವ ಮನೋಭಾವನೆಯನ್ನು ಕಾಯ್ದು ಕೊಳ್ಳುವುದು. ಸಾಮಾನ್ಯವಾಗಿ ಮಾತಿನ ನಡುವೆ ಒಗಟುರೂಪದ ವಾಕ್ಯಗಳನ್ನಾಡುವ ಚಾಣಾಕ್ಷತನದಲ್ಲಿ ತಪ್ಪು ಮರೆ ಮಾಡುವ ಉದ್ದೇಶವೂ ಒಂದಾಗಿರುವುದು ತಿಳಿಯುತ್ತದೆ.

ಒಗಟು ಚಾಣಾಕ್ಷತನದ ಪ್ರದರ್ಶನಕ್ಕೆ ಮಾಧ್ಯಮವಾಗುವುದು ಮಾತ್ರವಲ್ಲದೆ ಕೆಟ್ಟ ಸುದ್ದಿಯನ್ನು ಮರೆಮಾಡಿ ವ್ಯಕ್ತಪಡಿಸುವ ಉದ್ದೇಶಕ್ಕೂ ಬಳಕೆಯಾಗಿದೆ. ಕೆಟ್ಟ ವಿಷಯ ಮನಸ್ಸಿನ ಮೇಲೆ ತೀವ್ರ ಪರಿಣಾಮ ಬೀರಿ ಆಘಾತವನ್ನುಂಟು ಮಾಡಬಹುದೆಂಬ ಪರಿಜ್ಞಾನ ಈ ಬಗೆಯ ಒಗಟಿನ ರಚನೆಗೆ ಮಾರ್ಗಮಾಡಿದೆ. ಇದಕ್ಕೆ ನಿದರ್ಶನವಾಗಿ ಗಂಗೆ - ಗೌರಿ ಕಥನ ಗೀತೆಯಲ್ಲಿ ಒಗಟಿನ ಮಾತು ಬಳಕೆಯಾಗಿರುವುದನ್ನು ಗಮನಿಸಬಹುದು. ಶಿವನು ಗಂಗೆಯನ್ನೊಲಿದು ತನ್ನ ಮಡಿಲಲ್ಲಿ ಅವಳನ್ನಿಟ್ಟುಕೊಂಡು ಬರುತ್ತಿದ್ದಾನೆಂಬ ಸುದ್ದಿಯನ್ನು ಗಿಳಿಯು ಗೌರಿಗೆ ತಿಳಿಸಿದಾಗ ಅವಳು ಆ ಸುದ್ದಿಯನ್ನು ನೇರವಾಗಿ ತನ್ನ ಅಣ್ಣಗೆ ತಿಳಿಸದೆ ತಾನೊಂದು ಕೆಟ್ಟ ಕನಸು ಕಂಡೆ

ಅದು:

" ನಡುಗ್ಯೆರೆ ವಳಗೆ ಆನೆ ಬರುವ ಕಂಡೆ
ಸೊಂಡಲದಲ್ಲಿ ನೀರ ತಿರವೋದ ಕಂಡೆ"

ಎಂದು ಹೇಳಿದ ಅವಳಿಗೆ ಅಣ್ಣ ಅರ್ಥೈಸುವುದು ಹೀಗೆ:

ಆನೆ ಅಂಬೋದು ಶಿವ ನೀರು ಅಂಬೋದು ಗಂಗೆ
ಸೊಂಡಲಂಬೋದು ಕಿರಿ ಜಡೆ

ಜನಪದ ಕವಿಯ ಸಾಂಕೇತಿಕ ಪ್ರಜ್ಞೆ ಇಲ್ಲಿ ಕೆಲಸ ಮಾಡಿರುವುದಕ್ಕೆ ಕಾರಣ: ಶಿವ ಶ್ರೇಷ್ಠ ಸಾಮಾನ್ಯವಾಗಿ ದೊಡ್ಡವರು ಮಾಡುವ ತಪ್ಪನ್ನು ಮರೆಮಾಚಿಡುವುದರ ಮೂಲಕ ಅವರ ಗೌರವ ಕಾಪಾಡುವುದು ಜನಪದ ಸಮಾಜದ ವ್ಯವಸ್ಥೆಗಳಲ್ಲೊಂದು ಮಾಡಿರುವ ತಪ್ಪನ್ನು ಮರೆಮಾಚಿಕೊಂಡು ಬರುವ ಗಂಡನ ಬಗ್ಗೆ ನೇರವಾಗಿ ಹೇಳುವುದು ಸಹ ಗಂಡನಿಗೆ ಅವಮಾನ ಮಾಡಿದಂತಾಗುತ್ತದೆಂಬ ಸೂಕ್ಷ್ಮ ಪ್ರಜ್ಞೆ ಕವಿಯಲ್ಲಿ ಕೆಲಸ ಮಾಡಿದೆ ಆದ್ದರಿಂದಲೇ ಈ ಸಂದರ್ಭದಲ್ಲಿ ಒಗಟೊಂದನ್ನು ಬಳಸಿರುವುದು.

3. ಸಮುದ್ರ ಮತ್ತು ಜನರ ನಡುವಿನ ಸಂಬಂಧ

ಮಾನವ ತನ್ನ ಅವಶ್ಯಕತೆಗಳ ಪೂರ್ರೈಕೆಗೆ ಕಡಲು ನೆರವಾಗಬಲ್ಲದು ಎಂಬ ಪ್ರಜ್ಞೆ ಎಂದಿನಿಂದ ಅವನಲ್ಲಿ ಮೂಡಿತೊ ಅಂದಿನಿಂದ ಮಾನವ ಮತ್ತು ಕಡಲ ನಡುವಿನ ಸಂಬಂಧ ಪ್ರಾರಂಭವಾಯಿತು. ಕಡಲ ಮಡಿಲಲ್ಲಿನ ಸಂಪತ್ತಿನ ಶೋಧನೆಯು ಆ ಸಂಬಂಧವನ್ನು ಮತ್ತಷ್ಟು ಬಲಪಡಿಸಿತು. ಸೌಂದರ್ಯದ ಆಸ್ವಾದನೆ, ಆಹಾರದ ಗಳಿಕೆ ಈ ಮೊದಲಾದ ಉದ್ದೇಶದಿಂದ ಮಾನವ ಸಮುದ್ರದ ಜೊತೆ ಸಂಬಂಧ ಬೆಳೆಸಿಕೊಂಡ. ಕಾಲಕ್ರಮೇಣ ಅದು ತನ್ನಲ್ಲಡಗಿರುವ ಸಂಪತ್ತಿನಿಂದ ಮಾನವನ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸಿತು. ಅದನ್ನು ಆಶ್ರಯಿಸಿದವರ ಬದುಕಿಗೆ ಅದು ಆಧಾರವಾಯಿತು. ಹೀಗೆ ಸಮುದ್ರವನ್ನು ವಿವಿಧ ಉದ್ದೇಶಗಳಿಗಾಗಿ ಬಳಸಿಕೊಂಡ ಜನರು ಅದರೊಡನೆ ಸಂಬಂಧವನ್ನು ಹೇಗೆ ಕಾಪಾಡಿಕೊಂಡಿದ್ದಾರೆಂಬುದನ್ನು ನೋಡಬಹುದು.

3. ಸಾಮಾಜಿಕ

ಜನರ ಅವಶ್ಯಕತೆಗಳಲ್ಲಿ ಪ್ರಧಾನವಾದದ್ದು ಆಹಾರ. ಇದನ್ನು ಪೂರೈಸಿಕೊಳ್ಳಲು ಸಮುದ್ರದೊಡನೆ ಸಾಮಾಜಿಕ ಸಂಬಂಧವನ್ನು ಜನರು ಬೆಳೆಸಿಕೊಂಡರು.

ಅ. ಸಮುದ್ರದಾಹಾರ

ಮನುಷ್ಯ ಮತ್ತು ಆಹಾರದ ಸಂಬಂಧ ಜೈವಿಕವಾದದ್ದು. ಭ್ರೂಣಾವಸ್ಥೆಯಲ್ಲೇ ಮಾನವ ಆಹಾರದೊಡನೆ ಸಂಬಂಧವನ್ನಿಟ್ಟುಕೊಂಡು ಬೆಳೆದ. ಪ್ರಾರಂಭದಲ್ಲಿ ಹಸಿವಾರಿಸಿಕೊಳ್ಳುವ ಉದ್ದೇಶದಿಂದ ಆಹಾರ ಸ್ವೀಕರಿಸುತ್ತಿದ್ದ ಅವನು ಅರಿವು ಮೂಡಿದಂತೆಲ್ಲಾ ಆಹಾರದಲ್ಲಿ ನಾಲಿಗೆ ರುಚಿ ಪ್ರಮುಖವಾಯಿತು. ರುಚಿಗೆ ಮಾರುಹೋಗಿ ಆರೋಗ್ಯ ಮರೆತು ಆಹಾರ ಸ್ವೀಕರಿಸಿದ ಆತ ''ನಾಲಿಗೆ ರುಚಿಗೋಸ್ಕರ ಹೊಟ್ಟೆ ಕೆಡಿಸಿಕೊಂಡೆ'' ಎಂದು ಪಶ್ಚಾತ್ತಾಪ ಪಟ್ಟ. ಆಗ ಆಹಾರ ಮತ್ತು ಆರೋಗ್ಯದ ಸಂಬಂಧದ ಅರಿವಾಯಿತು. ಅದರ ಪರಿಣಾಮವಾಗಿ ''ತುತ್ತು ತಪ್ಪಿದರೆ ತೂಕ ತಪ್ಪೀತು'', ''ಊಟ ಬಲ್ಲವನಿಗೆ ರೋಗವಿಲ್ಲ'' ಎಂಬ ನಾಣ್ಣುಡಿಗಳು ಹುಟ್ಟಿದವು. ಹೀಗೆ ಪ್ರಾರಂಭದಿಂದಲೂ ಆಹಾರ ಮತ್ತು ಆರೋಗ್ಯಗಳ ಬಗ್ಗೆ ಸಂಶೋಧನೆ ಮಾಡುತ್ತಾ ಬಂದಿರುವ ಮಾನವ ಅದನ್ನು ಮುಂದುವರಿಸುತ್ತಲೇ ಹೋಗುತ್ತಿದ್ದಾನೆ.

ಸಾಮಾನ್ಯವಾಗಿ ಆಹಾರದ ಮೇಲೆ ಪರಿಸರದ ಪ್ರಭಾವ ಇದ್ದೇ ಇರುತ್ತದೆ. ಮಾನವ ಪರಿಸರದ ಕೈಗೊಂಬೆ. ಹೀಗಿರುವಾಗ ಆತ ತನ್ನ ಪರಿಸರದಲ್ಲಿನ ಆಹಾರಕ್ಕೆ ಹೊಂದಿಕೊಂಡು ಬದುಕಲೇಬೇಕಾಗುತ್ತದೆ. ಒಂದು ಪ್ರದೇಶದ ಆಹಾರ ಮತ್ತೊಂದು ಪ್ರದೇಶದವರಿಗೆ ಮೆಚ್ಚುಗೆಯಾಗದೇ ಇದ್ದುದಕ್ಕೂ ಸಹ ಪರಿಸರವೇ ಕಾರಣ. ಕರಾವಳಿಯ ಜನರಿಗೆ ಮೀನು ಪ್ರಿಯವಾದ ಆಹಾರವಾದರೆ ಬಯಲು ಸೀಮೆಯ ಜನರಿಗೆ ಅದು ಅಪ್ರಿಯ ಆಹಾರವಾಯಿತು. ಈ ದೃಷ್ಟಿಯಿಂದಲೇ ''ಒಬ್ಬನ ಆಹಾರವು ಮತ್ತೊಬ್ಬನಿಗೆ ವಿಷ'' ಎಂಬ ಗಾದೆ ಹುಟ್ಟಿರುವುದು. ಯಾವುದು ತನ್ನ ಪರಿಸರದಲ್ಲಿ ದೊರೆಯುವ ಆಹಾರವಾಗಿತ್ತೋ ಅದನ್ನೇ ಆತ ಆರೋಗ್ಯಕರ ಆಹಾರವೆಂದು ಒಪ್ಪಿಕೊಂಡ. ಅದನ್ನು ತಾನು ಅಪ್ಪಿಕೊಂಡ ದೇವರಿಗೂ ಪ್ರಿಯವೆಂದು ನಂಬಿದ.

ಸಾಮಾನ್ಯವಾಗಿ ಆಹಾರದ ಹಿಂದೆ ಮಾನವನ ಮನೋಧರ್ಮ ಪ್ರಮುಖವಾಗಿ ನಿಲ್ಲುತ್ತದೆ. ಮನಸ್ಸು ಒಪ್ಪಿಕೊಂಡರೆ ಅಪ್ರಿಯ ಆಹಾರವೂ ಪ್ರಿಯವಾಗುತ್ತದೆ. ಆದರೂ ಆಹಾರ ಕೇವಲ ಹಸಿವನ್ನಾರಿಸುವ ವಸ್ತು ಮದ್ದು ಮಾತ್ರವಾಗದೆ ಮನುಷ್ಯನ ಸ್ಥಾನಮಾನ ನಿರ್ಧರಿಸಲು ಸಹಾಯಕವಾಯಿತು. ಸಸ್ಯಾಹಾರಿಗಳು ಮೇಲ್ವರ್ಗದವರೆಂದು ಮತ್ತು ಮಾಂಸಾಹಾರಿಗಳು ಕೆಳವರ್ಗದವರೆಂದು ಪರಿಗಣಿಸಲು ಆಹಾರವೇ ಕಾರಣ. ಇಲ್ಲೂ ಸಹ ಸಸ್ಯಾಹಾರಿ ಸಂಸ್ಕೃತಿ ತನ್ನ ಪ್ರಭುತ್ವವನ್ನುಳಿಸಿಕೊಳ್ಳಲು ಪ್ರಯತ್ನಿಸಿದೆ.

ನಾಗರೀಕತೆಯ ಪ್ರಭಾವದಿಂದ ಇಂದು ಸಸ್ಯಾಹಾರಿ ಸಂಸ್ಕೃತಿ ತನ್ನ ಮಹತ್ವವನ್ನು ಕಳೆದುಕೊಳ್ಳುತ್ತಿದೆ. ಅಲ್ಲದೆ ಪರಿಸರದ ಮಗುವಾದ ಮಾನವ ತನ್ನ ಪರಿಸರ ನೀಡುವ ಕೊಡುಗೆಯನ್ನು ಸ್ವೀಕರಿಸುವುದು ಅನಿವಾರ್ಯವಾಗುತ್ತದೆ. ಈ ಕಾರಣದಿಂದ ಕರ್ನಾಟಕ

ಕರಾವಳಿಯ ಸಸ್ಯಾಹಾರಿ ಸಂಸ್ಕೃತಿಯ ಜನರೂ ಸಹ ಸಮುದ್ರದಾಹಾರವನ್ನು ಶ್ರೇಷ್ಠ ಆಹಾರವೆಂದು ಒಪ್ಪಿಕೊಂಡಿದ್ದಾರೆ. ಆರೋಗ್ಯಕರವಾದ ಸಮುದ್ರದಾಹಾರ ದಿನಗಳೆದಂತೆ ಹೆಚ್ಚು ಹೆಚ್ಚು ಜನಪ್ರಿಯವಾಗುತ್ತಿದೆ. ಆರೋಗ್ಯಶಾಸ್ತ್ರವು ಮೀನು, ಸೀಗಡಿ ಮೊದಲಾದ ಜಲಚರಗಳು ಹೆಚ್ಚು ಸತ್ವಾಂಶವುಳ್ಳವು ಎಂಬ ತಿಳುವಳಿಕೆ ನೀಡಿದೆ. ಇದಕ್ಕೆ ಪೂರಕವಾಗಿ ಮೀನು ಬುದ್ಧಿಶಕ್ತಿಯ ಬೆಳವಣಿಗೆಗೆ ಕಾರಣವಾಗುವುದೆಂಬ ನಂಬಿಕೆಯು ಸಮುದ್ರದ ಆಹಾರಕ್ಕೆ ಹೆಚ್ಚು ಬೇಡಿಕೆ ಸಿಗಲು ಸಹಕರಿಸಿತು.

ಆಹಾರ ತಜ್ಞರು ಮೀನು 'ಬಿ' ಜೀವಸತ್ವವನ್ನು ಹೊಂದಿರುವ ಆಹಾರವಾಗಿದ್ದು ಇದು ಮಾನವನಿಗೆ ಕೊಬ್ಬು, ಖನಿಜ, ಕಾರ್ಬೋಹೈಡ್ರೇಟ್ ಮೊದಲಾದ ಸತ್ವಾಂಶಗಳನ್ನು ಪೂರೈಸುತ್ತದೆ ಎಂದು ತಿಳಿಸಿದ್ದಾರೆ. ಆಹಾರದಲ್ಲಿ ಮೀನನ್ನು ಬಳಸುವುದರಿಂದ 'ಸಮತೋಲನ ಆಹಾರ' ಲಭ್ಯವಾಗುತ್ತದೆ. ಅದರಲ್ಲಿ ಉತ್ತಮ ಹಾಗೂ ಸುಲಭವಾಗಿ ಜೀರ್ಣವಾಗಬಲ್ಲ ಸಸಾರಜನಕ, ಅನ್ನಾಂಗಗಳು, ಖನಿಜಾಂಶಗಳು ಮೊದಲಾದ ಪೋಷಕಾಂಶಗಳು ಹೆಚ್ಚಿನ ಪ್ರಮಾಣದಲ್ಲಿ ಇರುವುದರಿಂದ ಅದನ್ನು ಆಹಾರವಾಗಿ ಬಳಸುವುದರಿಂದ ಸಾಮಾನ್ಯ''ರೋಗನಿರೋಧಕ ಶಕ್ತಿ'' ಹೆಚ್ಚುತ್ತದೆ. ಈ ಪೋಷಕಾಂಶಗಳ ಕೊರತೆಯಿಂದ ಉಂಟಾಗುವ ದೃಷ್ಟಿದೋಷಗಳು, ಬಲಹಿದನತೆ, ಮೂಳೆಗಳ ವಿರೂಪ, ಚರ್ಮ ಸೀಳುವಿಕೆ, ಕೂದಲಿನ ಉದುರುವಿಕೆ ಮುಂತಾದ ಕಾಯಿಲೆಗಳನ್ನು ದೂರವಿಡಲು ಸಾಧ್ಯವೆಂದು ತಿಳಿಸಲಾಗಿದೆ. ಮೀನು ಮತ್ತು ಮೀನಿನ ಎಣ್ಣೆಯನ್ನು ಔಷಧಿ ರೂಪದಲ್ಲಿ ಬಳಸುವುದು ಬಹಳ ಹಿಂದಿನಿಂದಲೂ ರೂಢಿಯಲ್ಲಿದೆ. ಮೀನು ಮತ್ತು ಸೀಗಡಿಗಳನ್ನು ಬಳಸುವುದರಿಂದ ವಿವಿಧ ಹೃದ್ರೋಗಗಳನ್ನು ತಡೆಗಟ್ಟುವುದು ಸಾಧ್ಯ ಎಂಬುದು ಇತ್ತೀಚಿನ ವೈಜ್ಞಾನಿಕ ಸಂಶೋಧನೆಗಳಿಂದ ತಿಳಿಯುತ್ತದೆ. ವಿದೇಶದ ಆಹಾರ ತಜ್ಞರ ಸಂಶೋಧನೆಯಿಂದ ಯುವಕನಿಗೆ ಪ್ರತಿ ದಿನಕ್ಕೆ 2,800 ಕ್ಯಾಲೋರಿಯು ಗರ್ಭಿಣಿಗೆ 3300 ರಿಂದ 3700 ಕ್ಯಾಲೋರಿ ಸತ್ವಾಂಶದ ಅವಶ್ಯಕತೆ ಇದೆ. ಹಸಿ ಮೀನಿನಿಂದ ಮಾನವ ಪ್ರತಿ 100 ಗ್ರಾಂಗೆ 105 ಕ್ಯಾಲೋರಿ ಸತ್ವಾಂಶವನ್ನು ಒಣಮೀನಿನಿಂದ ಪ್ರತಿ 100 ಗ್ರಾಂ ಗೆ 300 ಕ್ಯಾಲೋರಿ ಸತ್ವಾಂಶವನ್ನು ಪಡೆಯಬಹುದೆಂದು ತಿಳಿಸಿದ್ದಾರೆ. ಹಸಿ ಮೀನು ಒಣಗಿದಾಗ ತನ್ನ ತೂಕದಲ್ಲಿ ಅದು ಶೇಕಡಾ 60 ರಷ್ಟನ್ನು ಕಳೆದುಕೊಂಡರು, ಸತ್ವಂಶದ ಪ್ರಮಾಣದಲ್ಲಿ ಯಾವ ನಷ್ಟವೂ ಆಗದೆಂದು ಹೇಳಲಾಗುತ್ತದೆ. ಈ ಕಾರಣದಿಂದ ಮಳೆಗಾಲದಲ್ಲಿ ಒಣಮೀನಿಗೆ ಉಳಿದ ಕಾಲದಲ್ಲಿ ಹಸಿಮೀನಿಗೆ ಹೆಚ್ಚಿನ ಬೇಡಿಕೆ ಇರುವುದು. ಅಲ್ಲದೆ ಇತರೆ ಪ್ರಾಣಿಗಳ' ಮಾಂಸದೊಡನೆ ಹೋಲಿಸಿದರೆ ಕಡಿಮೆ ದರದಲ್ಲಿ ಹೆಚ್ಚು ಸತ್ವಾಂಶ ದೊರೆಯುವುದು ಮೀನಿನಿಂದ ಮಾತ್ರ. ಸಾಮಾನ್ಯನೂ ಸಹ ಕಡಿಮೆ ದರದಲ್ಲಿ ಮೀನು, ಏಡಿ, ಸಿಗಡಿ ಮೊದಲಾದ ಜಲಚರಗಳನ್ನು ಪಡೆಯಬಹುದು. ಆದ್ದರಿಂದಲೇ ಪ್ರಪಂಚದಲ್ಲಿ ಇತರೆ ಪ್ರಾಣಿಗಳ ಮಾಂಸಹಾರಕ್ಕಿಂತ ತಿನ್ನುವವರಿಗಿಂತ ಸಮುದ್ರದಾಹಾರ ಸ್ವೀಕರಿಸುವವರ ಸಂಖ್ಯೆ ಹೆಚ್ಚಾಗಿದೆ. ಚೀನಾ ದೇಶದಲ್ಲಿನ ಒಂದು ನಾಣ್ಣುಡಿಯು ''ನೀವು ಒಬ್ಬ ಮನುಷ್ಯನಿಗೆ ಒಂದು ಮೀನನ್ನು ಕೊಟ್ಟರೆ ಅವನಿಗೆ ನೀವು ಒಂದು ದಿವಸದ ಊಟ ಕೊಟ್ಟಂತೆ'' ಎಂದು ತಿಳಿಸುವುದನ್ನು ಗಮನಿಸಿದರೆ ಒಂದು ಊಟದ ಸತ್ಯಾಂಶ ಒಂದು ಮೀನಿನಲ್ಲಿದು ಎಂಬ ಅರ್ಥದಲ್ಲಿ ಅಲ್ಲಿನ ಜಾನಪದಿರು ಈ ಗಾದೆ ಕಟ್ಟಿದ್ದಾರೆ.

ಮಾನವ ಶಾಸ್ತ್ರಜ್ಞರ ಸಂಶೋಧನೆಯ ಪ್ರಕಾರ ಮೀನುಗಾರನೊಬ್ಬ ಏಳು ಪತ್ನಿಯರನ್ನು ಹೊಂದಿದ್ದು ಒಬ್ಬೊಬ್ಬರಿಗೂ ಹತ್ತು ಹದಿನೈದು ಮಕ್ಕಳಾಗಿ ಆತನಿಗೆ ಒಟ್ಟು 105 ಮಕ್ಕಳಾದವು. ಇದಕ್ಕೆ ಕಾಮೋತ್ಪಾದಕವಾದ ಮೀನಿನ ಆಹಾರವೇ ಕಾರಣವೆಂದು ನಿರ್ಧರಿಸಿದ್ದಾರೆ. ಹೀಗೆ ಮೀನು ಮಾನವನಲ್ಲಿ ವಿವಿಧ ಬಗೆಯ ಶಕ್ತಿ ತುಂಬುವ ಆಹಾರವಾಗಿರುವುದರಿಂದ ಕರ್ನಾಟಕ ರಾಜ್ಯದಲ್ಲಿ ಶೇಕಡಾ 55 ರಷ್ಟು ಜನರು ಮೀನನ್ನು ಆಹಾರವನ್ನಾಗಿ ಬಳಸುತ್ತಿದ್ದಾರೆ. ಎಲ್ಲಕ್ಕಿಂತ ಹೆಚ್ಚಾಗಿ ಮೀನು ಬಳಸುವವರ ಸಂಖ್ಯೆ ಹಳ್ಳಿಗಳಲ್ಲಿದೆ. ಪ್ರಪಂಚದಲ್ಲಿ ಅತಿ ಹೆಚ್ಚು ಮೀನು ಬಳಸುವ ದೇಶಗಳೆಂದರೆ ಜಪಾನ್ ಮತ್ತು ಪೋರ್ಚುಗಲ್. ಎಲ್ಲಕ್ಕಿಂತ ಕಡಿಮೆ ಪ್ರಮಾಣದಲ್ಲಿ ಮೀನು ಬಳಸುವ ದೇಶ ಭಾರತವಾಗಿದೆ. ಈ ಕಾರಣದಿಂದಲೇ ಜಪಾನಿಯರು ಅತಿ ಬುದ್ಧಿವಂತರೆನಿಸಿಕೊಂಡಿರುವುದು.

ಕರ್ನಾಟಕ ಕರಾವಳಿಯಲ್ಲಿ ಆಹಾರಕ್ಕಾಗಿ ಬಳಸುವ ಸಮುದ್ರ ಪ್ರಾಣಿಗಳು ಒಂದಲ್ಲ ಎರಡಲ್ಲ. ಅವುಗಳ ವಿವಿಧ ಬಗೆಗಳು ಆಶ್ಚರ್ಯ ಮೂಡಿಸುತ್ತವೆ. ಮೀನುಗಾರಿಕೆ ಇಲಾಖೆಯವರಿಗೂ ಸಹ ಮೀನುಗಳಲ್ಲಿರುವ ಎಲ್ಲಾ ವಿಧಗಳು ತಿಳಿದಿದೆಯೋ ಇಲ್ಲವೋ? ಆದರೆ ಕರಾವಳಿಯ ಮೀನುಗಾರರಿಗೆ ಮೀನಿನಲ್ಲಿ ಎಲ್ಲಾ ಬಗೆಗಳು ತಿಳಿದಿವೆ. ಅವುಗಳ ಹೆಸರುಗಳು ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಬೇರೆ ಬೇರೆಯಾಗಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತುಳು ಭಾಷೆಯ ಪ್ರಭಾವ ಮೀನಿನ ಹೆಸರಿನ ಮೇಲೂ ಆಗಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಮೀನಿನ ಹೆಸರಿನ ಮೇಲೆ ಕೊಂಕಣಿ ಭಾಷೆಯ ಪ್ರಭಾವವಾಗಿದೆ. ಆದ್ದರಿಂದ ಒಂದೇ ಮೀನು ಕನ್ನಡ - ತುಳು - ಕೊಂಕಣಿ ಭಾಷೆಗಳಲ್ಲಿ ಬೇರೆ ಬೇರೆ ಹೆಸರುಗಳನ್ನು ಪಡೆದಿರುತ್ತದೆ. ಕರ್ನಾಟಕ ಕರಾವಳಿಯ ಮೀನುಗಾರರಲ್ಲಿ ಪ್ರಚಲಿತವಿರುವ ಹೆಸರುಗಳನ್ನು ಗಸನಿಸಿದರೆ ಮೀನು , ಏಡಿ, ಸೀಗಡಿಗಳಲ್ಲಿ ಎಷ್ಟು ವಿಧಗಳಿವೆ ಎಂಬುದರ ಪರಿಚಯವಾಗುತ್ತದೆ.

ಕು. ಶಿ. ಹ.

1. ಮೊಗ್ರಾ (ಶಾರ್ಕ್)
2. ಬಡಕನ್ನಿ
3. ಸನ್ಯಾಸಿ
4. ಕೊಂಬುಗ
5. ಸೊರ
6. ಚಾಟಿ
7. ಕಪ್ಪಳಿಕ
8. ಕೋಡುತೊರ್ಕೆ
9. ಕೆಂದೊರ್ಕೆ
10. ಕೆಡಿನ ತೊರ್ಕೆ
11. ಚಾರ್ಲ ತೊರ್ಕೆ
12. ಬೋಡನ ತೊರ್ಕೆ
13. ಹುಲ್ಲು ತೊರ್ಕೆ
14. ಹಕ್ ತೊರ್ಕೆ
15. ಮೊಗ್ರ ಸ್ಯಾಡೆ
16. ಹೆಜಡಿ ಸ್ಯಾಡೆ
17. ಕಗ್ಲಿ
18. ಹಕ್ಕಿ ಸ್ಯಾಡೆ
19. ಬಿಳಿ ಸ್ಯಾಡೆ
20. ಹುಳು ಸ್ಯಾಡೆ
21. ಕೊಕ್ರಿ
22. ಮುಜಬ
23. ಲಾಲಬಿ
24. ಕೋಜಿನ ಹಾಂಕ್ಟಿ
25. ಹಾಂಕ್ಟಿ
26. ಡಿಸ್ಕೊ ಗುರ್ಕ
27. ಹಾಲು ಗುರ್ಕ
28. ಬೆಣ್ಣೆ ಗುರ್ಕು
29. ಗಂಟು ಗುರ್ಕ
30. ಚೋಣ ಗುರ್ಕ
31. ಗ್ವೊಂಡಿ
32. ಗ್ಯಾದರೆ
33. ಚೌರಗಿ
34. ಅರ್ಕುಳಿ
35. ಅಂಜಲೆ
36. ಸಳಕ
37. ಹಲಗೆ ಮೀನು
38. ಚಂದಕ
39. ಚೌರದ ಮೀನು
40. ಬಣ್ಣದ ಮೀನು
41. ಬಳುವ
42. ಗ್ವೋರಿ
43. ಕಳ್ಳಿಗ್ವೋಂ
44. ಗೋಲಿ
45. ಕೇಂಬೇರಿ
46. ಕೆಮ್ಸಿಯ
47. ಕುಯ್ದ ಬರ್ಗಿ
48. ಹಾಯಿ ಮೀನು
49. ಬರ್ಗಿ
50. ಬಾವುಕ
51. ಅಡಗ
52. ಯೇರಿ
53. ಮೊಗ
54. ಹಂದಿ ಮೀನು
55. ಬೋಳ್ಕ
56. ಆಮೆ
57. ಕಟ್ರಿ
58. ಅಲ್ಕಿನಂಗು
59. ನಂಗು
60. ಗೆರ್ಟೆನಂಗು
61. ಹಲ್ಲುಕಾಂಡಿ
62. ಬೋಳಿನ ಕಾಂಡಿ
63. ಮುಳ್ಳುಬಾಳೆ
64. ಹಾಂಬಳ
65. ಅರೋಲಿ
66. ಯರನೇ ಮೀನು
67. ಮದುಮಗಳ ಮೀನು
68. ಹೋಟ್ಲ
69. ಬಿಳಿ ಮಾಂಜು
70. ಕಪ್ಪು ಮಾಂಜು
71. ಬರ್ಡೆ
72. ಕಂಡಿಕೆ
73. ನರ್ಸನ್ ಮಾಲು
74. ಕೊಡುವಾಯಿ
75. ಕುಯ್ಣಿ
76. ಬಾಂಗಡಿ
77. ಬೈಗೆ (ಬೂತಾಯಿ)
78. ಹಾರು ಚಟ್ಲಿ
79. ಕಾಣ್ ಚಟ್ಲಿ
80. ಕಂಕಡಿ
81. ತೇಮ್ಲಿ
82. ಮಂಡೆ
83. ಬಿಳಿ ಚಟ್ಲಿ
84. ಬೊಂಬಾಯಿ ಬಂಗ್ಡೆ
85. ತಿರ್ಗಣ
86. ಹನ್ನೀರ ಹೆಸಿಡಿ
87. ಚಟನ್ನ ಹೆಸಿಡಿ
88. ಹುಂಡೆಸಿಡಿ
89. ಅಂಬರಿಕೆ
90. ಮೈಕಣ
91. ಮಣಗು
92. ಆಡು ಮೀನು
93. ಕೊಳೆ ಹೆಸಿಡಿ
94. ದುರ್ಗನ ಹೆಸಿಡಿ
95. ಬಾಲ ಮಣಗು
96. ಬಿಳಿ ಜಬ್ಬು
97. ಅಟ್ಟಿ ಜಗ್ಗು
98. ಗ್ವೊಲಾಯಿ
99. ಹಕ್ಕಿ ಮೀನು
100. ನಟ್ಕ
101. ಬ್ಯಾಟ್ ಮೀನು
102. ಬೋಂದೆ
103. ಹಾವಿನ ಚಟ್ಲಿ
104. ಸಿಂಕಟ
105. ಯೆತ್ತು ಮೀನು
106. ಕಾಳಸಿ
107. ಉಳಿಯಾ
108. ಮಣ್ಣುಳಿಯಾ

109. ಗವಳಿ
110. ಹೊಕ್ಕಣ
111. ಬೊಂಡಾಸ್
112. ಕಪ್ಪೆಬೆಂಡಾಸ್
113. ಕಾಕ್ ಮೀನು
114. ಕರೆಂಟುಮೀನು
115. ಮುತ್ತಳಿ
116. ಐರ್‌ಮೀನು
117. ಸಿಲೋಫ್
118. ಬಿಳಿಮಾಲು
119. ತಟ್ಟೆಮಾಲು
120. ಕಲ್ಲ್‌ಕಾಳಸಿ
121. ಜಾಳಬೆಕ್ಕನ ಮಾಲು
122. ಮಂಡಿನ ಮಾಲು
123. ಅಂಬಾಯಿ
124. ಕಲ್ ಅರೋಲಿ
125. ಅಪ್ಪರಿಯಾ
126. ಕೆಸರ್‌ಬಳುವ
127. ಬಾರ್ಸನಂಗು
128. ಜಳ್ಳಿ
129. ಕಣ್‌ಜಳ್ಳಿ
130. ಕಲ್‌ಹಸಡಿ
131. ಚುಂಗೇರಿ
132. ಹೂಮೀನು
133. ರಾಮ್ಸಿ
134. ನರ್ಲಿ
135. ಕ್ರಿಶ್ಚಿನ್‌ಜಳ್ಳಿ
136. ಬೊಬ್ಸಿ
137. ಕುರ್ಲಿ
138. ನೇತ್ರಕಾಂಡಿ
139. ಸುರ್ಲಿಕಾಂಡಿ
140. ಗೊರಗೋಟಿ
141. ಬರ್ಕಳ
142. ಗುಡ್ಡೆಟ್ಟಿ
143. ಡೆಸ್ಕೊಮಾಳ್ಳಿ
144. ಗ್ರಾಡ್‌ಪಿವರ್
145. ಕುದುರುಮೀನು
146. ಹುಮ್ಸಿ
147. ನಕ್ಷತ್ರಮೀನು
148. ಕೊಡ್ಸ
149. ಬಾಲಾಮೆ
150. ಯೆಳಸಿರ್
151. ಗಿಜಕನ್ನಿ
152. ಗೊಡ್ಸ
153. ಮುರಗೋಡಾ
154. ಕಾಂಡಿ
155. ಎರಬಾಯಿ
156. ಬಟ್ಟೆ ಎರಬಾಯಿ
157. ಸರಕಾರಿಮೀನು
158. ತಿದಂಬ್
159. ಮಲ್ಲಾಸ್ತ
160. ಸೀಮೆ ಎಟ್ಟಿ
161. ಕಾಜ ಎಟ್ಟಿ
162. ಮಂಡ ಎಟ್ಟಿ
163. ಕರ್ಕಾಡಿ
164. ತೇಡೆ
165. ಕರ್ಗಿತೇಡೆ
166. ಗಲಾಯಿತೇಡೆ
167. ಪರಿಯಾಡೆ
168. ಕೆಚ್ಚಿತಾಟೆ\
169. ಪರಿಯಾಡೆ
170. ಕೆಚ್ಚಿತಾಟೆ ।
171. ಕುರ್ಲೆತಾಟೆ
172. ಗುಮ್ಮತಾಟೆ
173. ಪುಬ್ಬೆ ಮೀನು
174. ಮರು ಮೀನು
175. ಬಲುಮೀನು
176. ಕಲ್ಲೂರು
177. ಕೊರಣ್
178. ಕೊಡ್ದೆಯಿ
179. ಬಲ್ದೆ
180. ಮುಡುಪು
181. ಕೊಲೆಜ
182. ಪಲಾಯಿಮೀನು
183. ಬೊಗರಿಮೀನು
184. ಅರ್ಣಮೀನು
185. ಬೊಲ್ದು ಮೀಂಜ
186. ಪಾನ್
187. ಕಿಡ
188. ಅಟ್ಟಿ
189. ಮೆಲುಗು
190. ಬೊಲ್ ಗುತ್ತಲ್
191. ಬೊಲ್ಯಾಡೆ
192. ಮುಂಗುಲಿ ತೇಡೆ
193. ತಾಟೆ
194. ಲಾವು ತಾಟೆ
195. ನಾಯಿ ತಾಟೆ
196. ಇಂದ್ರ ಬಾಳೆ
197. ಪಾಂಬೊಲ್
198. ಚೆಂಜಿರಿ
199. ಕಣ್‌ಕುರ್ಚಿ
200. ಪಯ್ಯ
201. ಅಬ್ರೋಣ
202. ಲೆಮ್ಮೀನು
203. ಕೂಲಿ ನಂಗು
204. ಬಾರೆ ಮಣಂಗ್
205. ವಾಲೆ ಮಣಂಗ್
206. ಕುರ್ಚಿ
207. ಬೊಗ್ಗಿ ಕುರ್ಚಿ
208. ರಬ್ಬಾಯಿ
209. ಕೊಲ್ಲತರು
210. ಮುರ್ಲಿತರು

ಕಡಲಂಗರ ಸಂಪತ್ರದ ಮೀನುಗಳು







ಸಮುದ್ರದ ಏಡಿ ಮತ್ತು ಹುಳಗಳು(ಗೊಬ್ಬರಕ್ಕಾಗಿ)







ಮೀನುಗಾರರ ಬಂಗಾರವಾದ ಸೀಗಡಿಯನ್ನು ತೂಕಮಾಡಿ ಸಾಗಿಸುತ್ತಿರುವುದು.







ಹೀಗೆಯೆ ಇನ್ನೂ ಹಲವು ಬಗೆಯ ಜಲಚರಗಳು ಸಮುದ್ರದೊಳಗಿರಬಹುದು. ಇಲ್ಲಿನ ಇಟ್ಟ ಹಲವು ಹೆಸರುಗಳು ಮೀನಿನ ಸ್ವರೂಪ ಗುಣಕ್ಕೆ ತಕ್ಕ ಹಾಗೆ ಇರುವಂತಹವು. ಕುದುರೆ ಮೀನು ಕುದುರೆಯಂತೆ ಮುಖವುಳ್ಳಂತಹದು. ಹಂದಿ ಮೀನು ಹಂದಿಯ ಸ್ವರೂಪದಲ್ಲಿರುವಂತಹದು, ಡಿಸ್ಕೋ ಗುರ್ಕು ವಿವಿಧ ಬಣ್ಣಗಳಿಂದ ಕೂಡಿರುವಂತಹದು, ಮದುಮಗಳ ಮೀನು ಕೆಂಪು-ಬಿಳಿ ಬಣ್ಣದಿಂದ ನೋಡಲು ಸುಂದರವಾಗಿರುವಂತಹದು. ಬಿಳಿ ಬಣ್ಣ ಹೊಂದಿರುವ ಮಾಂಜಿನ ಜಾತಿಯ ಮೀನಿಗೆ ಬಿಳಿ ಮಾಂಜು ಎಂದು ಕರೆದರೆ ಕಪ್ಪು ಬಣ್ಣ ಹೊಂದಿರುವ ಮಾಂಜಿಗೆ ಕಪ್ಪು ಮಾಂಜಿ ಎನ್ನುತ್ತಾರೆ. ಇದೇ ರೀತಿ ಮೀನುಗಾರರು ಇಟ್ಟ ಹೆಸರುಗಳಲ್ಲಿ ಪ್ರಾದೇಶಿಕ ಭಾಷೆಯ ಪ್ರಭಾವ ಗುರುತಿಸಬಹುದು. ದಕ್ಷಿಣ ಕನ್ನಡದಲ್ಲಿ ಸಾಮಾನ್ಯವಾಗಿರುವ ಪಾಂಬೋಲ್, ಬೊಲ್ದು ಮಾಂಜು, ಅರ್ಣೆ ಮೀನು, ಮಂಡ ಎಟ್ಟಿ, ಗಲಾಯಿ ತೇಡೆ ಮೊದಲಾದ ಮೀನುಗಳ ಹೆಸರುಗಳು ತುಳುಭಾಷೆಯ ಪ್ರಭಾವಕ್ಕೆ ಒಳಪಟ್ಟಿವೆ.

ಸಮುದ್ರದಾಹಾರ ಹೆಚ್ಚು ಪುಷ್ಟಿದಾಯಕವೆಂದು ನಂಬಿದ ಜನರು ತಾವು ಸಾಕುವ ಪ್ರಾಣಿ ಮತ್ತು ಸಸ್ಯಗಳಿಗೂ ಸಹ ಅದು ಉತ್ತಮ ಆಹಾರವಾಗಬಲ್ಲದು ಎಂದು ನಂಬುತ್ತಾರೆ. ಈ ಕಾರಣದಿಂದ ಸಮುದ್ರದಾಹಾರಕ್ಕೆ ದಿನಗಳೆದಂತೆ ಬೇಡಿಕೆ ಹೆಚ್ಚಾಗುತ್ತಿದೆ. ಸಮುದ್ರದಲ್ಲಿ ಸಿಗುವ ಶ್ರೇಷ್ಠ ಜಲಚರಗಳನ್ನು ಮನುಷ್ಯರು ಆಹಾರಕ್ಕಾಗಿ ಬಳಸಿದರೆ ವ್ಯರ್ಥವಾದ ಜಲಚರಗಳನ್ನು ಸಸ್ಯಗಳಿಗೆ ಹಾಗೂ ಕೋಳಿ ಮತ್ತು ದನಕರುಗಳಿಗೆ ಆಹಾರವಾಗಿ ಉಪಯೋಗಿಸಲಾಗುತ್ತಿದೆ. ಆದ್ದರಿಂದ ಸಮುದ್ರದಲ್ಲಿ ಸಿಗುವ ಸಂಪತ್ತು ಯಾವ ದೃಷ್ಟಿಯಿಂದಲೂ ವ್ಯರ್ಥವಾಗುವುದಿಲ್ಲ.

ಸಿಹಿನೀರಿನ ಮೀನಿನ ರುಚಿಗೂ ಉಪ್ಪುನೀರಿನ ಮೀನಿನ ರುಚಿಗೂ ಇರುವ ವ್ಯತ್ಯಾಸವನ್ನು ಗಮನಿಸಿದ ಜನ ಉಪ್ಪುನೀರಿನ ಮೀನು ಹೆಚ್ಚು ರುಚಿಯಾಗಿರುವುದೆಂದು ತಿಳಿಯುತ್ತಾರೆ. ಅಲ್ಲದೇ ಸಮುದ್ರದ ಮೀನು ನದಿ ಮೀನಿಗಿಂತ ವಾಸನೆ ಕಡಿಮೆ. ಹೊಳೆಮೀನು ಮನೆಗೆ ತಂದರೆ ಮನೆಯಲ್ಲಿ ನಾಲ್ಕೈದು ದಿನಗಳವರೆಗೂ ಮೀನಿನ ವಾಸನೆ ಹೋಗುವುದಿಲ್ಲ ಎಂದು ಹೇಳುತ್ತಾರೆ. ಈ ದೃಷ್ಟಿಯಿಂದಲೂ ಸಹ ಸಮುದ್ರದ ಮೀನನ್ನು ಜನ ಹೆಚ್ಚು ಇಷ್ಟಪಡುತ್ತಾರೆ. ರುಚಿಯಿಂದ ಮತ್ತು ವಾಸನೆಯಿಂದ ತನ್ನ ಗುಣಮಟ್ಟವನ್ನು ಕಾಯ್ದುಕೊಂಡಿರುವ ಕಡಲ ಪ್ರಾಣಿಗಳಾದ ಮೀನು ಸಿಗಡಿ ಮೊದಲಾದವು ಕೇವಲ ಕರಾವಳಿಯ ಜನರಿಗೆ ಮಾತ್ರ ಪ್ರಿಯವಾಗದೆ ವಿದೇಶಿಯರಿಗೂ ಸಹ ಹೆಚ್ಚು ಮೆಚ್ಚುಗೆಯಾಗಿವೆ. ಆದ್ದರಿಂದಲೇ ಕರಾವಳಿಯ ಜನತೆಗೆ ತಾವು ಹಿಡಿಯುವ ಅಮೂಲ್ಯವಾದ ಮೀನು ಮತ್ತು ಸೀಗಡಿ ಅವರಿಗೇ ತಿನ್ನಲು ಸಿಗದಂತಾಗಿದೆ. ಬಡವರಿಗಂತೂ ಅದು ಕನಸಿನ ಆಹಾರವಾಗಿದೆ. ಹೊರದೇಶಕ್ಕೆ ರಫ್ತು ಮಾಡುವ ಮೀನಿನ ವ್ಯಾಪಾರಿಗಳು ಮುಂಗಡವಾಗಿ ಹಣಕೊಟ್ಟು ಹಿಡಿದ ಮೀನನ್ನು ತಮಗೇ ಕೊಡುವಂತೆ ಒಪ್ಪಂದ ಮಾಡಿ ಕೊಂಡಿರುತ್ತಾರೆ. ಇಂತಹ ಸಂದರ್ಭದಲ್ಲಿ ಹಿಡಿದವರಿಗೂ ಸಹ ಅದು ಲಭ್ಯವಾಗುವುದು ಕಷ್ಟವಾಗುತ್ತದೆ.

ಸಮುದ್ರದಾಹಾರದ ಸಂರಕ್ಷಣೆ

ಮೀನು ನೀರಿನಲ್ಲಿದ್ದಾಗ ಅದು ನೀರಿನೊಳಗಡೆ ಸ್ವೇಚ್ಛೆಯಾಗಿ ಓಡಾಡಬಲ್ಲದು. ಆದರೆ ಅದು ಎಷ್ಟೇ ದೊಡ್ಡ ಗಾತ್ರದ ಮೀನಾದರೂ ರೋಗಕ್ಕೆ ತುತ್ತಾದಾಗ ಇಲ್ಲವೆ ಸತ್ತಾಗ ಸಮುದ್ರ ಅದನ್ನು ಒಳಗಿಟ್ಟುಕೊಳ್ಳದೇ ಹೊರಹಾಕುತ್ತದೆ. ನೀರಿನಿಂದ ಹೊರಬಿದ್ದ ಮೀನು ಕೆಲವೇ ಗಂಟೆಗಳಲ್ಲಿ ಕೆಟ್ಟು ಹೋಗುತ್ತದೆ. ಆದ್ದರಿಂದ ಅದರ ಗುಣಮಟ್ಟವನ್ನು ಕಾದಿರಿಸಲು ಹಲವು ವಿಧಾನಗಳನ್ನು ಬಳಸಲಾಗುತ್ತದೆ. ಎಲ್ಲಕ್ಕಿಂತ ಪ್ರಾಚೀನ ವಿಧಾನವೆಂದರೆ ಮೀನಿನ ಹೊಟ್ಟೆಯೊಳಗಿನ ಹೊಲಸನ್ನೆಲ್ಲಾ ತೆಗೆದು ಉಪ್ಪು ಹಾಕಿಡುವುದು . ಇಂದಿಗೂ ಈ ವಿಧಾನ ಹೆಚ್ಚು ಜನಪ್ರಿಯವಾಗಿದೆ.

1. **ಉಪ್ಪು ಹಾಕಿಡುವುದು :**

ಹಿಡಿದ ಮೀನನ್ನು ಸೀಳಿ ಹೊಟ್ಟೆಯೊಳಗಿನ ಕರುಳನ್ನೆಲ್ಲಾ ತೆಗೆದು ನೀರಿನಲ್ಲಿ ತೊಳೆಯುತ್ತಾರೆ. ಮರದ ಇಲ್ಲವೇ ಸಿಮೆಂಟಿನ ತೊಟ್ಟಿಗಳಲ್ಲಿ ಅವುಗಳನು ಸಾಲಾಗಿ ಜೋಡಿಸಿ ಅದರ ಮೇಲೆ ಒಣ ಉಪ್ಪು ಹಾಕುತ್ತಾರೆ. ಉಪ್ಪಿನ ಪದರಿನ ಮೇಲೆ ಒಂದು ಪದರು ಮೀನು ಜೋಡಿಸಿ ಅದರ ಮೇಲೆ ಉಪ್ಪು ಹಾಕುತ್ತಾರೆ. ಹೀಗೆ ಹಲವು ಪದರುಗಳು ತೊಟ್ಟಿಯಲ್ಲಿರುತ್ತವೆ. ಸಾಮಾನ್ಯವಾಗಿ ಉಪ್ಪು ಮತ್ತು ಮೀನಿನ

ಪ್ರಮಾಣ 1:3 ಅಥವಾ 1:8 ಇರುತ್ತದೆ. ಅದು ಮೀನಿನ ಜಾತಿಗನುಗುಣವಾಗಿ ವ್ಯತ್ಯಾಸವಾಗುತ್ತಾ ಹೋಗುತ್ತದೆ. ಈ ರೀತಿ ಸಂರಕ್ಷಿಸಿಟ್ಟ ಮೀನು ಎರಡರಿಂದ ನಾಲ್ಕಾರು ತಿಂಗಳುಗಳವರೆಗೆ ಕೆಡದಂತಿರುತ್ತದೆ. ಇಸ್ವಾನ್, ಬಾಂಗ್ಡೆ, ಮೀನಾದರೆ ಆರು ತಿಂಗಳವರೆಗೆ ಕೆಡದಂತಿರುತ್ತದೆ. ಗೇದರ್, ಚಾಟಿ ಮೊದಲಾದ ಮೀನುಗಳು ಎರಡು ತಿಂಗಳೊಳಗೇ ತೊಟ್ಟಿಯಿಂದ ಹೊರತೆಗೆಯುತ್ತಾರೆ . ದೊಡ್ಡ ಮೀನುಗಳಿದ್ದರೆ ಅವುಗಳನ್ನು ಸಿಗಿದು ಕರುಳು ತೆಗೆದು ಉಪ್ಪು ಹೊಟ್ಟೆಯಲ್ಲಿ ತುಂಬಿಡುವ ವಿಧಾನವನ್ನು ಅನುಸರಿಸಿದರೆ ಚಿಕ್ಕ ಮೀನುಗಳಿಗೆ ಇಡಿಯಾಗಿಯೇ ತೊಟ್ಟಿಯಲ್ಲಿ ಉಪ್ಪು ಹಾಕಿ ರಕ್ಷಿಸಿಡುತ್ತಾರೆ.

ಸಿಗಿದು ಉಪ್ಪು ಹಾಕುವ ಮೀನುಗಳೆಂದರೆ ಚಾಟಿ, ಮೊಗ್ರಾ, ಬಾಂಗಡಿ, ಕೊಡುವಾಯಿ, ಕೊಂಬಗ, ಸೊರ, ಅಂಜಲ್, ಅವ್ವಗಿ, ಗ್ಯಾದ್ರಿ, ಸ್ಯಾಡಿ, ಕೊಕ್ರಿ, ತೋಕ್ರಿ, ಹಲಗೆಮೀನು, ಬಿಳಿಯಾ, ಸನ್ಯಾಸಿ, ಹಾಯಿಮೀನು ಗೋಲಿ ಮೀನು ಮೊದಲಾದವು ಮೀನು ಸಿಗಿಯುವುದಕ್ಕೆ ಮೀನುಗಾರರು '' ಬಲೆ'' ಎಳೆಯುವುದು ಎನ್ನುತ್ತಾರೆ. ಈ ಕೆಲಸವನ್ನು ಹೆಂಗಸರು ಮಾಡುತ್ತಾರೆ. ಬಾಂಗಡಿ, ಗೇದರ್ ಮೀನಾದರೆ ನೂರಕ್ಕೆ ಹತ್ತು ಹದಿನೈದು ರೂಪಾಯಿಯಂತೆ ಸಿಗಿಯುತ್ತಾರೆ. ದೊಡ್ಡ ಮೀನಾದರೆ ಒಂದು ಮೀನಿಗೆ ಇಷ್ಟು ಎಂದು ಬೆಲೆ ಕಟ್ಟುತ್ತಾರೆ. ಮೀನು ಸಿಗಿಯುವ ದೃಶ್ಯ ಆಕರ್ಷಣೀಯವಾಗಿರುತ್ತದೆ. ಸಮುದ್ರದ ಬದಿಯಲ್ಲಿ ಮೀನಿನ ರಾಶಿ ಹಾಕಿಕೊಂಡು ಕೈಯೆಲ್ಲಾ ರಕ್ತಮಯ ಮಾಡಿಕೊಂಡು ಸಿಗಿಯುವ ಹೆಂಗಸರು, ಅಲ್ಲಿನ ರಕ್ತ , ಮಾಂಸ ಕಂಡು ಸ್ವಲ್ಪವೂ ಅಸಹ್ಯ ಪಡುವುದಿಲ್ಲ. ಸಿಗಿದ ನಂತರ ಮೀನನ್ನು ಬುಟ್ಟಿಯಲ್ಲಿ ತುಂಬಿಕೊಂಡು ಹೋಗಿ ಸಮುದ್ರದ ನೀರಿನಲ್ಲಿ ಒಂದಡೆರಡು ಬಾರಿ ಚೆನ್ನಾಗಿ ಜಾಲಾಡಿಸುತ್ತಾರೆ. ಅನಂತರ ಅದನ್ನು ತಂದು ಉಪ್ಪಿನ ತೊಟ್ಟಿಗಳಲ್ಲಿ ಸುರಿಯುತ್ತಾರೆ. ಅನಂತರದ ಕೆಲಸ ಗಂಡಸರದ್ದು. ಸಮುದ್ರ ತೀರದಲ್ಲಿ ಉಪ್ಪಿನ ತೊಟ್ಟಿಗಳ ದೃಶ್ಯ ಸಾಮಾನ್ಯವಾಗಿರುತ್ತದೆ. ಹಿಂದೆ ಮರದ ತೊಟ್ಟಿಗಳನ್ನು ಬಳಸುತ್ತಿದ್ದು ಮರದ ಬೆಲೆ ಹೆಚ್ಚಿರುವ ಕಾರಣದಿಂದ ಈಗ ಸಿಮೆಂಟಿನ ತೊಟ್ಟಿಗಳನ್ನು ಬಳಸುತ್ತಿದ್ದಾರೆ. ತೊಟ್ಟಿಯ ಮೇಲೆ ತೆಂಗಿನಗರಿಯ ಚಪ್ಪರವಿರುತ್ತದೆ. ಆ ಗುಡಿಸಲಿಗೆ ಬಾಗಿಲ ಹೊರತು ಕಿಟಕಿಗಳು ಇರುವುದಿಲ್ಲ. ಗಾಳಿ, ಬಿಸಿಲು, ಮಳೆಯಿಂದ , ಆ ಚಪ್ಪರವು ತೊಟ್ಟಿಯನ್ನು ರಕ್ಷಿಸುತ್ತದೆ. ಒಂದೊಂದು ತೊಟ್ಟಿ ಹತ್ತು ಅಡಿ ಉದ್ದವಿದ್ದು ನಾಲ್ಕು ಅಡಿ ಅಗಲವಿರುತ್ತದೆ. ಕೆಲವರು ಇದಕ್ಕಿಂತ ದೊಡ್ಡ ಗಾತ್ರದ ತೊಟ್ಟಿಗಳನ್ನು ಕಟ್ಟಿಸಿರುತ್ತಾರೆ. ಹಸಿ ಮೀನಿಗೆ ಉಪ್ಪು ಹಾಕಿಡುವ ವಿಧಾನದಿಂದ ಮೀನುಗಾರರಿಗೆ ಪ್ರಯೋಜನವೆಂದರೆ, ಮಾರುಕಟ್ಟೆಯಲ್ಲಿ ಮೀನಿಗೆ ಹೆಚ್ಚು ಬೇಡಿಕೆ ಬಂದಾಗ ಮೀನನ್ನು ತೊಟ್ಟಿಯಿಂದ ಹೊರತೆಗೆದು ತೊಳೆದು ಮಾರಾಟ ಮಾಡುತ್ತಾರೆ.

ಉಪ್ಪಿನ ತೊಟ್ಟಿಗಳಲ್ಲಿ ಮೀನನ್ನು ರಕ್ಷಿಸಿಡುವುದು ಅಷ್ಟು ಸುಲಭದ ಕೆಲಸವಲ್ಲ. ಅನುಭವಿಗಳು ಮಾತ್ರ ಆ ಕಾರ್ಯ ನಿರ್ವಹಿಸಲು ಸಾಧ್ಯ. ಒಂದು ವೇಳೆ ಉಪ್ಪಿನ ಪ್ರಮಾಣ ಕಡಿಮೆಯಾದರೆ ಮೀನು ಕೆಂಪು ಬಣ್ಣಕ್ಕೆ ತಿರುಗುತ್ತದೆ. ಆ ತಕ್ಷಣ ಮೇಲಿನಿಂದ ಸ್ವಲ್ಪ ಉಪ್ಪು ಸುರಿಯುತ್ತಾರೆ. ಕೆಲವು ಸಂದರ್ಭಗಳಲ್ಲಿ ಅಡಿಯಲ್ಲಿನ ಮೀನಿಗೆ ಉಪ್ಪಿನ ಪ್ರಮಾಣ ಕಡಿಮೆಯಾದರೆ ಆಗ ಮೀನಿಗೆ ಹುಳ ಬೀಳುತ್ತದೆ. ಆ ಸಂದರ್ಭದಲ್ಲಿ ಮೀನು ಹೊರ ತೆಗೆದರೆ ಅದು ಹಾಳಾಗಿ ಮಾಲೀಕರು ನಷ್ಟ ಅನುಭವಿಸಬೇಕಾಗುತ್ತದೆ. ಆದ್ದರಿಂದ ಮೀನಿಗೆ ಉಪ್ಪು ಹಾಕುವಾಗ ಅವರು ಬಹಳ ಎಚ್ಚರವಹಿಸುತ್ತಾರೆ. ಉಪ್ಪು ಹಾಕಿದ ಹಸಿಮೀನನ್ನು '' ಉಪ್ಪು ಮೀನು '' ಎಂದು ಕರೆಯುತ್ತಾರೆ.

ಚಿಕ್ಕ ಚಿಕ್ಕ ಮೀನನ್ನು ಸಿಗಿಯದೆ ಬುಟ್ಟಿಯಲ್ಲಿ ತುಂಬಿ ಒಬ್ಬರು ತೊಟ್ಟಿಯಲ್ಲಿ ಸುರಿಯುತ್ತಿದ್ದರೆ ಮತ್ತೊಬ್ಬರು ಅದರ ಮೇಲೆ ಉಪ್ಪು ಸುರಿಯುತ್ತಾರೆ. ಒಂದು ಬುಟ್ಟಿ ಮೀನಿಗೆ 1/4 ಬುಟ್ಟಿ ಉಪ್ಪನ್ನು ತೊಟ್ಟಿಯಲ್ಲಿ ಹರಡುತ್ತಾ ಹೋಗುತ್ತಾರೆ ಇಂತಹ ಮೀನನ್ನು ನಾಲ್ಕೈದು ತಿಂಗಳವರೆ ಮಾತ್ರ ಇಡಬಹುದು. ದೊಡ್ಡ ಗಾತ್ರದ ಮೀನಾದರೆ ಒಂದು ವರ್ಷದವರೆಗೆ ಕೆಡದಂತೆ ತೊಟ್ಟಿಗಳಲ್ಲಿಟ್ಟರೆ ಅದು ತೆಗೆಯುವಾಗ ಪುಡಿ ಪುಡಿಯಾಗುತ್ತದೆ. ಅಲ್ಲದೆ ಬೆಂಡಾಗಿ ತೂಕದಲ್ಲಿ ಕಡಿಮೆಯಾಗುತ್ತಾ ಹೋಗುತ್ತದೆ.

ಒಣ ಉಪ್ಪಿನಲ್ಲಿ ಮೀನನ್ನು ರಕ್ಷಿಸಿಡಲು ಕಡಿಮೆ ಖರ್ಚಾಗುವುದರಿಂದ ಸಾಮಾನ್ಯ ಮೀನುಗಾರರೂ ಸಹ ತಮ್ಮ ಶ್ರಮ ವ್ಯರ್ಥ ಮಾಡಿಕೊಳ್ಳದೆ ಹಿಡಿದ ಮೀನನ್ನು ಸಂರಕ್ಷಿಸಿಟ್ಟುಕೊಳ್ಳುತ್ತಾರೆ. ಸಿಮೆಂಟಿನ ತೊಟ್ಟಿಗಳಿಲ್ಲದ ಮೀನುಗಾರರು ಸಿಗಿದ ಮೀನಿನೊಳಗಡೆ ಉಪ್ಪು ತುಂಬಿ ನೆಲದ ಮೇಲೆ ಹರಡಿ ಇಡುತ್ತಾರೆ. ಕೆಲವರು ಬುಟ್ಟಿಯಲ್ಲಿ ತುಂಬಿ ಇಡುತ್ತಾರೆ. ನೆಲದ ಮೇಲೆ ಹರಡಿಟ್ಟ ಮೀನಿನಿಂದ ನೀರು ಹರಿದು ಹೊರಹೋಗಲು ಚಿಕ್ಕ ಕಾಲುವೆಯಂತೆ ಮಾಡಿರುತ್ತಾರೆ. ಹೀಗಿಟ್ಟ ಮೀನನ್ನು ಮಾರನೇಯ ದಿನ ತಳದಲ್ಲಿನ ಮೀನನ್ನು

ಮೇಲ್ಭಾಗಕ್ಕೆ ಮೇಲಿನ ಮೀನನ್ನು ಕೆಳಭಾಗಕ್ಕೆ ಸ್ಥಾನಪಲ್ಲಟಗೊಳಿಸಲಾಗುತ್ತದೆ. ಈ ವಿಧಾನದಿಂದ ರಕ್ಷಿಸಿಡುವ ಮೀನನ್ನು ಒಂದೆರಡು ತಿಂಗಳುಗಳು ಮಾತ್ರ ಇಡಬಹುದಾಗಿದೆ.

೨. ಉಪ್ಪಿನ ನೀರಿನಲ್ಲಿ ಮೀನನ್ನು ರಕ್ಷಿಸಿಡುವುದು.:

ಕರಳು ಮತ್ತು ತಲೆ ತೆಗೆದು ಮೀನನ್ನು ಚೆನ್ನಾಗಿ ತೊಳೆದು ಅದರಲ್ಲಿನ ನೀರಿನ ಅಂಶ ಹೋಗುವವರೆಗೆ ನೆಲದ ಮೇಲೆ ಹರಡಿಟ್ಟು ಅನಂತರ ಅದನ್ನು ಉಪ್ಪಿನ ನೀರಿರುವ ಮರದ ತೊಟ್ಟಿ ಅಥವಾ ಪಿಪಾಯಿಗಳಲ್ಲಿ ಹಾಕಿ ಕೋಲಿನಿಂದ ಚೆನ್ನಾಗಿ ಕಲಕಿ ಉಪ್ಪಿನ ನೀರಿನಲ್ಲಿ ಪರಿಪೂರ್ಣವಾಗಿ ಮೀನು ಮುಳುಗುವಂತೆ ಎಚ್ಚರಿಕೆ ವಹಿಸುತ್ತಾರೆ. ಅ ನಂತರ ಅದನ್ನು ಕೆಲವು ಗಂಟೆಗಳವರೆಗೆ ನೀರಿನಲ್ಲಿಟ್ಟು ಹೊರತೆಗೆದು ತೊಳೆದು ಮಾರೆಕಟ್ಟೆಗೆ ಮಾರಾಟಾಕ್ಕಾಗಿ ಕಳುಹಿಸುತ್ತಾರೆ. ಈ ವಿಧಾನದಲ್ಲಿ ಉಪ್ಪಿನ ನೀರಲ್ಲಿ ಉಪ್ಪಿನ ಪ್ರಮಾಣ ಎಷ್ಟಿದೆ ಎಂದಬುದನ್ನು ಆಗಾಗ್ಗೆ ಪರೀಕ್ಷಿಸಬೇಕಾಗುತ್ತದೆ. ಎಕೆಂದರೆ ಒಮ್ಮೆ ಮೀನನ್ನು ತೊಟ್ಟಿಯಲ್ಲಿ ಹಾಕಿ ತೆಗೆದ ತಕ್ಷಣ ಉಪ್ಪಿನ ಪ್ರಮಾಣ ಕಡಿಮೆಯಾಗುತ್ತಾ ಹೋಗುತ್ತಿರುತ್ತದೆ.

ಹಸಿ ಮೀನು ಸಂರಕ್ಷಣೆಯ ಈ ಎರಡು ಪ್ರಾಚೀನ ವಿಧಾನಗಳು ಇತ್ತೀಚೆಗೆ ತಮ್ಮ ಮಹತ್ವವನ್ನು ಕಳೆದುಕೊಳ್ಳುತ್ತಿದೆ. ಎಕೆಂದರೆ ಉಪ್ಪಿನ ಮೀನು ಕೆಡದಂತೆ ಇದ್ದರು ಅದು ''ಹೆಲುಫಿಲ್'' ಎಂಬ ಬ್ಯಾಕ್ಟೀರಿಯಾದ ಕಾರಣ ಬಣ್ಣಗೆಟ್ಟು ಕೆಂಪು ಇಲ್ಲವೇ ಹಸಿರು ಛಾಯೆಯನ್ನು ಹೊಂದಿರುತ್ತದೆ. ಆದ್ದರಿಂದ ಈಚೆಗೆ ಮೀನನ್ನು ಸಂಸ್ಕರಿಸಲು ಅನೇಕ ರಾಸಾಯನಿಕ ವಸ್ತುಗಳನ್ನು ಹಾಗೂ ಪ್ರತಿ ಜೀವಕಗಳನ್ನು ಬಹುಸುಲಭವಾಗಿ ಕೈಗೆಟುಕುವಂತಹವು. ಆದ್ದರಿಂದ ಇಂದಿಗೂ ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಕಡಲ ತೀರಗಳಲ್ಲಿ ಹೆಚ್ಚು ಪ್ರಸಿದ್ಧಿಯಾಗಿವೆ. ಈ ವಿಧಾನಗಳಿಂದ ರಕ್ಷಿಸಿಟ್ಟ ಮೀನನ್ನು ಕೇರಳಾ, ಶ್ರೀಲಂಕಾ ಮೊದಲಾದ ಸ್ಥಳಗಳಿಗೆ ಕಳುಹಿಸಲಾಗುತ್ತದೆ.

ಉಪ್ಪಿನ ತೊಟ್ಟಿಯಲ್ಲಿ ಸಂರಕ್ಷಿಸಿರುವ ಡೆಕಳ (ಇಷ್ಟಾನ) ಮೀನು





ಉಪ್ಪಿನ ತೊಟ್ಟಿಯಿಂದ
ತೆಗೆದ ಮೀನನ್ನು
ಮುಡಿಕಟ್ಟಿರುವುದು.



ಉಪ್ಪಿನ ತೊಟ್ಟಿಯ
ಮೀನನ್ನು ತೂಕಮಾಡುವ
ಮಣಾದ ಕಲ್ಲು.

ಘನೀಭವಿಸುವಿಕೆ ಮತ್ತು ಶೀತಗೊಳಿಸುವಿಕೆಯಿಂದ ಮೀನನ್ನು ಸಂರಕ್ಷಿಸಿಡುವುದು.

19 ನೇ ಶತಮಾನದಲ್ಲೆ ಘನೀಭವಿಸುವುದರ ಮೂಲಕ ಮೀನಿನ ಸಂರಕ್ಷಣೆಯ ಕಾರ್ಯ ಪ್ರಾರಂಭವಾಗಿತ್ತೆಂದು ತಿಳಿದು ಬರುತ್ತದೆ. 1861ರಲ್ಲಿ ಇನೋಕ್ ಫೈಪರ್ ಮೊದಲಿಗೆ ಮೀನನ್ನು ಕೃತಕವಾಗಿ ಘನೀಭವಿಸುವುದಕ್ಕಾಗಿ ಕೊಠಡಿಯೊಂದರಲ್ಲಿ ಮಂಜುಗಡ್ಡೆಯ ಪುಡಿ ಮತ್ತು ಉಪ್ಪು ಇವೆರಡರ ಮಿಶ್ರಣದಲ್ಲಿ ಮೀನನ್ನು ಸಂರಕ್ಷಿಸುವ ಕಾರ್ಯವನ್ನು ಪ್ರಾರಂಭಿಸಿದರು. ಅದರ ನಂತರ 1892 ರಲ್ಲಿ ಅಮೋನಿಯ ಅನಿಲವನ್ನು ಘನೀಭವಿಸಲು ಮತ್ತು ಶೀತಾಗಾರಗಳ ನಿರ್ಮಾಣದಲ್ಲಿ ಬಳಸುವುದು ಆರಂಭವಾಯಿತು. ಕಾಲ ಕಳೆದಂತೆ ಹಲವು ಬಗೆಯ ಘನೀಭವಿಸುವ ಮತ್ತು ಶೀತಲಗೊಳಿಸುವ ಯಂತ್ರಗಳನ್ನು ಮೀನು ಸಂಸ್ಕರಣೆಗಾಗಿ ಬಳಸಲಾಯಿತು. ಮೀನು ಸಾಗಾಣಿಕೆಯಲ್ಲೂ ಶೀತಲ ಡಬ್ಬಿಗಳು ಮತ್ತು ಶೀತಲ ವ್ಯಾಗನ್ನುಗಳು ಬಳಕೆಗೆ ಬಂದವು.

ಮೀನನ್ನು ಘನೀಭವಿಸುವಾಗ ಅದರಲ್ಲಿಯ ಎಣ್ಣೆಯ ಪ್ರಮಾಣವನ್ನು ಮೊದಲು ಗಮನಿಸಬೇಕಾಗುತ್ತದೆ. ಏಕೆಂದರೆ ಹೆಚ್ಚು ಎಣ್ಣೆಯಿಂದ ಕೂಡಿದ ಮೀನು ಘನೀಭವಿಸಿದಾಗ ಅದರ ಬಣ್ಣ ಬದಲಾಗಿ ಮುಗ್ಗು ಗಟ್ಟುವುದುಂಟು. ಆದ್ದರಿಂದ ಕಡಿಮೆ ಪ್ರಮಾಣದ ಎಣ್ಣೆ ಅಂಶದ ಮೀನನ್ನು ಘನೀಭವಿಸಲು ಉಪಯೋಗಿಸುವುದು ಹೆಚ್ಚು. ಘನೀಭವಿಸುವುದರಲ್ಲಿ ಎರಡು ವಿಧಗಳಿವೆ. ನಿಧಾನವಾಗಿ ಘನೀಭವಿಸುವುದು ಮತ್ತು ತೀವ್ರಗತಿಯಿಂದ ಘನೀಭವಿಸುವುದು. ನಿಧಾನವಾಗಿ ಘನೀಭವಿಸುವುದರಿಂದ ಮೀನಿನ ಮೇಲೆ ಮಂಜುಗಡ್ಡೆಯ ದೊಡ್ಡ ಹರಳುಗಳು ಮಾರ್ಪಡುತ್ತವೆ. ತೀವ್ರಗತಿಯಿಂದ ಘನೀಭವಿಸಿದರೆ ಚಿಕ್ಕ ಚಿಕ್ಕ ಹರಳುಗಳು ರೂಪುಗೊಳ್ಳುತ್ತವೆ. ಸಾಮಾನ್ಯವಾಗಿ ತೀವ್ರಗತಿಯಿಂದ ಘನೀಭವಿಸುವುದಿಂದ ಮೀನನ್ನು ಹೆಚ್ಚು ಕಾಲ ರಕ್ಷಿಸಿಡಬಹುದು. ತೀವ್ರಗತಿಯಿಂದ ಘನೀಭವಿಸುವುದರ ಮೂಲಕ ಮೀನನ್ನು ಹೆಚ್ಚು ಕಾಲ ಸಂರಕ್ಷಿತವಾಗಿ ರಕ್ಷಿಸಿಡುವುದು ಕಷ್ಟವೆಂದು ಹೇಳಲಾಗುತ್ತದೆ. ಏಕೆಂದರೆ ಮೀನಿನ ಮೇಲೆ ತೀವ್ರ ಘನೀಭವಿಸುವುದರಿಂದ ಒತ್ತಡ ಹೆಚ್ಚಾಗಿ ಅದು ಅತಿಯಾಗಿ ನಿರ್ಜಲೀಕರಣಗೊಂಡು ಅದರ ಮೇಲೆ ಸುಟ್ಟ ಗಾಯಗಳಾಗುವ ಸಂಭವ ಹೆಚ್ಚೆಂದು ಹೇಳುತ್ತಾರೆ.

ಘನೀಭವಿಸುವಾಗ ಮೀನು ಸಂಗ್ರಹಣಾ ಕೊಠಡಿಯ ತಾಪಮಾನವು ಕಡಿಮೆ ಇರುವಂತೆ ಎಚ್ಚರಿಕೆ ವಹಿಸುತ್ತಾರೆ. ಅಲ್ಲದೆ ಮೀನಿನ ಜಾತಿಗನುಗುಣವಾಗಿ ಈ ತಾಪಮಾನವನ್ನು ಹೆಚ್ಚು ಕಡಿಮೆ ಮಾಡಲಾಗುತ್ತದೆ. ಕೆಲವು ಮೀನುಗಳನ್ನು 1 ಫ್ಯಾರನ್ ಹೀಟ್‌ನಲ್ಲಿಟ್ಟು ಎಂಟು ತಿಂಗಳ ವರೆಗೆ ರಕ್ಷಿಸಿಟ್ಟರೆ ಕೆಲವೆ ಮೀನುಗಳನ್ನು 15 ಫ್ಯಾರನ್ ಹೀಟ್‌ನಲ್ಲಿಟ್ಟಾಗ ಹಾಳಾದ ಕೇವಲ ಎರಡು ವಾರಗಳಲ್ಲಿ ಹಾಳಾದ ಪ್ರಕರಣಗಳಿವೆ. ಈ ದೃಷ್ಟಿಯಿಂದ ಘನೀಭವಿಸಲು ಮೀನಿನ ಜಾತಿ ಮತ್ತು ಗುಣದ ಬಗ್ಗೆ ಪರಿಪೂರ್ಣ ತಿಳುವಳಿಕೆ ಅಗತ್ಯ. ಮೀನನ್ನು ಘನೀಭವಿಸಲು ಮೂರು ಹಂತಗಳನ್ನು ಬಳಸಲಾಗುತ್ತದೆ. ಮೊದಲು ಮೀನಿನಲ್ಲಿ ಉಷ್ಣಾಂಶವನ್ನು ಕಳೆಯಲಾಗುತ್ತದೆ. ಅನಂತರ ಮೀನಿನಲ್ಲಿನ ತೇವಾಂಶವನ್ನು ಹೆಪ್ಪುಗಟ್ಟುವಂತೆ ಮಾಡುತ್ತಾರೆ. ಕೊನೆಯಲ್ಲಿ ಅದರ ತಾಪಮಾನವನ್ನು ಹೆಪ್ಪುಗಟ್ಟು ಮಟ್ಟಕ್ಕಂತ ಕೆಳಗೆ ಇಳಿಸುತ್ತಾರೆ. ಹೀಗೆ ಸಮುದ್ರಾಹಾರವನ್ನು ಘನೀಭವಿಸುವುದರ ಮೂಲಕ ಸಂರಕ್ಷಿಸಿಟ್ಟು ಬೇಡಿಕೆ ಹೆಚ್ಚಿದಾಗ ಅದನ್ನು ಹೆಚ್ಚಿನ ಬೆಲೆಗೆ ಮರಾಟ ಮಾಡುವುದು ರೂಢಿಯಲ್ಲಿದೆ .

ಪು . ತಿ . ನ್ಯ.

ಕರ್ನಾಟಕ ಕರಾವಳಿಯಲ್ಲಿ ಬಿರುಸಿನಿಂದ ತಂಪುಗಾಳಿಯನ್ನು ಕೊಠಡಿಯಲ್ಲಿ ಹರಿಸುವುದರ ಮೂಲಕ ಸಮುದ್ರ-ದಾಹರವನ್ನು ಸಂರಕ್ಷಿಸುವ ವಿಧಾನ ಹೆಚ್ಚಾಗಿ ಜಾರಿಯಲ್ಲಿದೆ. ಇದರಲ್ಲಿ ಮೊದಲು ಘನೀಭವಿಸುವ ಕೊಠಡಿಯಲ್ಲಿನ ಉಷ್ಣಾಂಶವನ್ನು ತೆಗೆದು ಶೀತಲಗೊಳಿಸಲಾಗುತ್ತದೆ. ನಂತರ ಮೀನನ್ನು ಕೊಠಡಿಯಲ್ಲಿ ತುಂಬಿ ಅಮೋನಿಯ ಮತ್ತು ಉಪ್ಪಿನ ದ್ರಾವಣದಿಂದ ಅದನ್ನು ತಂಪುಗೊಳಿಸಲಾಗುತ್ತದೆ. 30 ಫ್ಯಾರನ್ ಹೀಟ್‌ಗಿಂತ ಕಡಿಮೆ ಇರುವ ಗಾಳಿಯನ್ನು ನಿಮಿಷಕ್ಕೆ 150 ರಿಂದ 300 ಮೀಟರುಗಳ ವೇಗದಲ್ಲಿ ಬಿಟ್ಟಾಗ ಕೊಠಡಿಯ ಒಳಮೈ ಶೀತಲಗೊಂಡು ಮಂಜುಗಡ್ಡೆಯ ಹರಳುಗಳು ರೂಪುಗೊಳ್ಳುತ್ತವೆ. ಈ ವಿಧಾನದಿಂದ ಸಮುದ್ರ ದಾಹಾರವು ತನ್ನ ಗುಣಮಟ್ಟವನ್ನು ಕಾಪಾಡಿಕೊಳ್ಳುತ್ತದೆ. ಹೀಗೆ ಘನೀಭವಿಸಿದ ಮೀನು, ಸಿಗಡಿ ಮದಲಾದ ಬೆಲೆಬಾಳುವ ಜಲಚರಗಳನ್ನು ಹೊರದೇಶಕ್ಕೆ ರಫ್ತು ಮಾಡಲಾಗುತ್ತದೆ.

ಕ್ಯಾನಿಂಗ್ ಅಥವಾ ಡಬ್ಬೀಕರಣ ವಿಧಾನದಿಂದ ಸಮುದ್ರದಾಹಾರದ ರಕ್ಷಣೆ

ನಮ್ಮ ದೇಶವು ನಾನಾ ಸಮಸ್ಯೆಗಳನ್ನು ಎದುರಿಸುತ್ತಿದೆ. ಹೆಚ್ಚುತ್ತಿರುವ ಜನಸಂಖ್ಯೆಗೆ ಆಹಾರ ಪೂರೈಸುವುದು ಒಂದು ಸಮಸ್ಯೆಯಾದರೆ, ಪೌಷ್ಟಿಕಾಂಶಗಳಿಂದ ಕೂಡಿದ ಮತ್ತು ಕಡಿಮೆ ವೆಚ್ಚದಲ್ಲಿ ಸಮತೋಲನ ಆಹಾರವನ್ನು ಎಲ್ಲರಿಗೂ ದೊರೆಯುವಂತೆ ಮಾಡುವುದು ಮತ್ತೊಂದು ಸಮಸ್ಯೆಯಾಗಿದೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಜನರು ಒಂದಲ್ಲೊಂದು ರೀತಿಯ ಪೌಷ್ಟಿಕಾಂಶದ ಕೊರತೆಯಿಂದ ನರಳುತ್ತಿದ್ದಾರೆ. ಒಂದು ಅಂದಾಜಿನ ಪ್ರಕಾರ, ಭಾರತದ ಹಳ್ಳಿಗಾಡು ಪ್ರದೇಶಗಳಲ್ಲಿ ವಾಸಿಸುವ ಜನಸಂಖ್ಯೆಯ ಶೇಕಡಾ 83 ರಷ್ಟು ಜನ ಸಮತೋಲನದ ಆಹಾರದಿಂದ ವಂಚಿತರಾಗಿ ಹಲವು ತೆರನಾದ ಅನಾರೋಗ್ಯದಿಂದ ಬಳಲುತ್ತಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಹಾಲು ಮತ್ತು ಮಾಂಸ ಹೆಚ್ಚು ದುಬಾರಿಯಾಗುತ್ತಿರುವುದರಿಂದ ಆರ್ಥಿಕವಾಗಿ ಹಿಂದುಳಿದ ವರ್ಗದ ಜನರಿಗೆ ಪೌಷ್ಟಿಕಾಂಶದಿಂದ ಕೂಡಿರುವ ಸಮತೋಲನದ ಆಹಾರವನ್ನು ಪಡೆಯುವುದು ಕನಸಿನ ಮಾತಾಗಿದೆ. ಈ ಸಮಸ್ಯೆಯನ್ನು ನಿವಾರಿಸಲು ಮೀನನ್ನು ಆಹಾರವಾಗಿ ಸೇವಿಸುವುದರಿಂದ, ಇದರಲ್ಲಿ ನಾನಾ ವಿಧವಾದ ಪೌಷ್ಟಿಕಾಂಶವಿದ್ದು, ಸಮತೋಲನದ ಆಹಾರ ಪಡೆಯಬಹುದು ಮತ್ತು ಮೀನು ಅತಿ ಕಡಿಮೆ ಬೆಲೆಗೆ ಸಿಗುತ್ತದೆ. ಮೀನು ಅತೀ ಬೇಗನೆ ತನ್ನ ತಾಜಾತನ ಕಳೆದುಕೊಳ್ಳುವುದರಿಂದ, ಹಿಡಿದ ತಕ್ಷಣವೇ ಉಪಯೋಗಿಸುವುದು ಅಸಾಧ್ಯವಾದವಾಗ ಅವು ಕೆಡದಂತೆ ಜೋಪಾನವಾಗಿಡಲು ಅನೇಕ ವಿಧಾನಗಳು ಬಳಕೆಯಲ್ಲಿವೆ. ಸಂಸ್ಕರಿಸಿದ ಮೀನುಗಳನ್ನು ಲೋಹದ ಡಬ್ಬಿಗಳಲ್ಲಿ ತುಂಬಿಸಿ ಜೋಪಾಸನೆ ಮಾಡುವುದು ಒಂದು ಉತ್ತಮ ವಿಧಾನವಾಗಿದೆ.

ಫ್ರಾನ್ಸ್ ದೇಶದಲ್ಲಿ 19 ನೇ ಶತಮನದ ವರ್ಷಗಳಲ್ಲಿ ಡಬ್ಬಿ ಅಥವಾ ಗಾಜಿನ ಭರಣಿಗಳಲ್ಲಿಟ್ಟು ಶಾಖದಿಂದ ಆಹಾರವನ್ನು ಕೆಡದಂತೆ ಜೋಪಾಸನೆ ಮಾಡುವ ಡಬ್ಬೀಕರಣ 'ಕ್ಯಾನಿಂಗ್' ವಿಧಾನವು ಮೊತ್ತಮೊದಲು ಕಂಡುಹಿಡಿಯಲ್ಪಟ್ಟಿತು. ಆಗಿನ ಕಾಲದಲ್ಲಿ ನೆಪೋಲಿಯನ್ನನ ಮುಂದಾಳುತನದಲ್ಲಿ ಫ್ರೆಂಚರು ಯುರೋಪಿನಲ್ಲಿ ಮಾತ್ರವಲ್ಲದೆ, ಭಾರತ, ಇಂಡೋಚೈನಗಳಿಂದ ಹಿಡಿದು ವೆಸ್ಟ್‌ಇಂಡೀಸ್ ದ್ವೀಪಗಳವರೆಗೂ ಅನೇಕ ಯುದ್ಧಗಳನ್ನು ನಡೆಸಿ ತನ್ನ ಸಾಮ್ರಾಜ್ಯವನ್ನು ವಿಸ್ತರಿಸುವುದರಲ್ಲಿ ಮಗ್ನರಾಗಿದ್ದರು. ಆದರೆ ಆ ಸೈನಿಕರು ತಿಂಗಳುಗಟ್ಟಲೆ ಸಮುದ್ರಯಾನ ಮಾಡುವಾಗ ಒಳ್ಳೆಯ ಪೋಷಕಾಂಶಗಳಿಂದ ಹಾಗೂ ಜೀವ, ಆತು(ವಿಟಮಿನ್)ಗಳಿಂದ ಕೂಡಿದ ಆಹಾರ ಪದಾರ್ಥಗಳನ್ನು ಪಡೆಯಲಾರದೆ 'ಸ್ಕರ್ವಿ' ಎಂಬ ರೋಗಗಳಿಗೆ ಬಲಿಯಾಗುತ್ತಿದ್ದರು. ಈ ರೀತಿಯ ಸೈನಿಕರ ಸಾವಿನಿಂದ ಕಂಗೆಟ್ಟ ಫ್ರೆಂಚ್ ಸರಕಾರವು ಒಂದು ಯೋಜನೆಯನ್ನು ತಯಾರಿಸಿ, ಇದರಂತೆ ಎಲ್ಲಾ ವಿಧದ ಆಹಾರ ಪದಾರ್ಥಗಳನ್ನು ಅವುಗಳ ಪೌಷ್ಟಿಕ ಗುಣಾಂಶಗಳು ಕುಂದದಂತೆ ದೀರ್ಘಕಾಲ ಜೋಪಾಸನೆ ಮಾಡುವ ವಿಧಾನವನ್ನು ಕಂಡುಹಿಡಿದವರಿಗೆ 12,000 ಫ್ರಾಂಕ್ (ಅಲ್ಲಿಯ ರೂಪಾಯಿಮೌಲ್ಯ) ಬಹುಮಾನ ಕೊಡುವುದಾಗಿ ಘೋಷಣೆ ಮಾಡಿತು. ಇದೇ ಸಮಯದಲ್ಲಿ ಫ್ರಾನ್ಸ್ ದೇಶದವನೇ ಆದ ನಿಕೋಲಸ್ ಅಪರ್ಟ್ ಎಂಬ ವಿಜ್ಞಾನಿ ಮೀನು, ಮಾಂಸ, ಹಣ್ಣು ಹಂಪಲು, ತರಕಾರಿ ಮೊದಲಾದ ಅನೇಕ ಬಗೆಯ ಆಹಾರ ಪದಾರ್ಥಗಳನ್ನು ಗಾಜಿನ ಭರಣಿಗಳಲ್ಲಿ ತುಂಬಿ, ವಾಯು ಸೇರದಂತೆ ಮುಚ್ಚಳ ಹಾಕಿ, ಸಾಕಷ್ಟು ಕಾಲ ಯೋಗ್ಯ ಉಷ್ಣತಾಮಾನಕ್ಕೆ ಬಿಸಿ ಮಾಡಿ, ಕೂಡಲೇ ತಣಿಸಿದರೆ, ಅಂತಹ ಆಹಾರ ಪದಾರ್ಥಗಳು ದೀರ್ಘಕಾಲ ಕೆಡದೆ ಉಳಿಯುತ್ತವೆಂದು ತನ್ನ ಪ್ರಯೋಗಗಳ ಮೂಲಕ ತೋರಿಸಿಕೊಟ್ಟು, 12,000 ಫ್ರಾಂಕ್ ಬಹುಮಾನ ಗಳಿಸಿದನು. ಈ ವಿಧಾನವನ್ನು ಅನುಸರಿಸಿ ಇಂಗ್ಲೆಂಡಿನ ಪೀಟರ್ ಡ್ಯುರಾಂಡ್ ಎಂಬವನು, ತಗಡಿನ ಡಬ್ಬಿಗಳಲ್ಲಿ ಆಹಾರ ಜೋಪಾಸನೆ ಮಾಡುವ ಕ್ರಮವು ಪ್ರಚಾರವಾಗಿ

ಡಬ್ಬಿ ಜೋಪಾಸನೆ ಉದಯವಾಯಿತು. ಈ ವಿಧಾನವು 1810ನೇ ಇಸವಿಯಲ್ಲಿ ಪ್ರಕಟಗೊಂಡು ಈಗ ಜಗತ್ತಿನ ಎಲ್ಲಾ ದೇಶಗಳಲ್ಲಿ ಆಹಾರ ಜೋಪಾಸನೆಯ ಒಂದು ಮುಖ್ಯ ವಿಧಾನವಾಗಿ ದೊಡ್ಡ ಕೈಗಾರಿಕೆಗಳಿಗೆ ಆಧಾರವಾಗಿದೆ. ನಮ್ಮ ದೇಶದಲ್ಲಿಯೂ ಈ ಉದ್ಯಮ ಪ್ರಾರಂಭವಾಗಿ, ಈಗ ಹೆಚ್ಚು ಲಾಭದಾಯಕವಾಗಿ ಮುಂದುವರಿಯುತ್ತಿಲ್ಲ. ಈ ವಿಧಾನದಲ್ಲಿ ತಯಾರಿಸಿ ಆಹಾರವನ್ನು ಮಿಲಿಟರಿ ಪಡೆಗಳಿಗೆ ಮಾತ್ರ ಮಾರಲಾಗುತ್ತಿದೆ. ರಫ್ತು ಮಾಡುವ ಸ್ಥಿತಿಗೆ ಇನ್ನೂ ಬರಬೇಕಾಗಿದೆ.

ಅನೇಕ ಜಾತಿಯ ಸೂಕ್ಷ್ಮ ಅಣುಜೀವಿಗಳ ಚಟುವಟಿಕೆ, ಬೆಳವಣಿಗೆ ಹಾಗೂ ಸಂಖ್ಯಾಭಿವೃದ್ಧಿಯಿಂದಾಗಿ ಆಹಾರ ಕೆಟ್ಟು ಹೋಗುವುದಕ್ಕೆ ಮುಖ್ಯ ಕಾರಣ, ಈ ಅಣುಜೀವಿಗಳನ್ನು ಯೋಗ್ಯ ತಾಪಮಾನದಿಂದ ಸಂಪೂರ್ಣವಾಗಿ ನಾಶಪಡಿಸುವುದರಿಂದ ಆಹಾರವನ್ನು ಜೋಪಾಸನೆ ಮಾಡಬಹುದು. ಪ್ರಸಿದ್ಧ ವಿಜ್ಞಾನಿಯಾದ ಲೂಯೀ ಪ್ಯಾಶ್ಚರನು ಸುಮಾರು 1860ರಲ್ಲಿ ಪ್ರಾಯೋಗಿಕವಾಗಿ ಸಿದ್ಧಪಡಿಸಿ ಶಾಖ ಅಥವಾ ಉಷ್ಣ ಸಂಸ್ಕರಣ ತತ್ವವೇ ' ಕ್ಯಾನಿಂಗ್' ವಿಧವಾದ ತಿರುಳು ಎಂದು ಸಾರಿದನು. ಆಹಾರ ಪದಾರ್ಥದಲ್ಲಿರುವ ಅತಿ ಇಚ್ಚು ಉಷ್ಣ ಸಹಿಸುವ ಅಣುಜೀವಿಯನ್ನು ನಾಶಪಡಿಸುವಷ್ಟು ಹೆಚ್ಚಿನ ಉಷ್ಣತಾಮಾನಕ್ಕೆ ಆಹಾರವನ್ನು ಕೊಡದಿರುವುದೇ ಕ್ಯಾನಿಂಗ್ ವಿಧಾನದ ಮೂಲತತ್ವ, ಇದೇ ಶಾಖವು ಕಿಣ್ವಗಳನ್ನು ಸಹ ವಿಭಜಿಸಿ ಅವು ನಿಷ್ಕ್ರಿಯವಾಗುವಂತೆ ಮಾಡುವುದರಿಂದಾಗಿ ಕಿಣ್ವಗಳಿಂದಾಗಿ ಆಹಾರ ಹಾಳಾಗುವುದು ತಡೆಗಟ್ಟಲ್ಪಡುತ್ತದೆ. ಈ ವಿಧಾನದಲ್ಲಿ ಆಹಾರ ತುಂಬಿದ ಡಬ್ಬಿಗಳಿಂದ ವಾಯುವನ್ನು ಹೊರತೆಗೆದು ನಿರ್ವಾತವನ್ನು ಏರ್ಪಡಿಸುವುದರಿಂದಾಗಿ ಆಮ್ಲಜನಕ ಪ್ರೇರಿತ ರಾಸಾಯನಿಕ ಬದಲಾವಣೆಗಳು ಸಹ ನಿಲ್ಲುತ್ತವೆ. ಕ್ಯಾನಿಂಗ್ ವಿಧಾನದಿಂದ ಜೋಪಾಸನೆ ಮಾಡಲ್ಪಟ್ಟ ಆಹಾರ ವಸ್ತುಗಳು ಅತೀ ದೀರ್ಘಕಾಲ, ಅಂದರೆ ನಾಲ್ಕು ವರ್ಷ ಹಾಳಾಗದೇ ಉಳಿಯುತ್ತವೆ.

ಈ ವಿಧಾನಕ್ಕೆ ಉಪಯೋಗಿಸುವ ಮೀನು ತುಂಬ ತಾಜಾತನದಿಂದ ಕೂಡಿರಬೇಕಾಗುತ್ತದೆ. ಈ ವಿಧದಲ್ಲಿ ಮೀನುಗಳ ಹುರುಪು, ತಲೆ ಮತ್ತು ಕರುಳು ಭಾಗವನ್ನು ಮಾತ್ರ ತೆಗೆದು, ಶುದ್ಧ ನೀರಿನಿಂದ ಚೆನ್ನಾಗಿ ತೊಳೆದು ಉಪ್ಪು ನೀರಿನಲ್ಲಿ ಮುಳುಗಿಸಿ, ಸ್ವಲ್ಪ ಸಮಯದ ನಂತರ ಡಬ್ಬಗಳಿಗೆ ತುಂಬಬೇಕು. ಕೇದಾರ ಮೀನುಗಳನ್ನು ಉಪಯೋಗಿಸುವಾಗ ಚರ್ಮ, ಮೂಳೆ ಮತ್ತು ಕಪ್ಪು ಬಣ್ಣದ ಮಾಂಸ, ತಿನ್ನಲು ಯೋಗ್ಯವಲ್ಲದ ಕಾರಣ ಅವುಗಳನ್ನು ಡಬ್ಬೀಕರಣದಿಂದ ಜೋಪಾಸನೆ ಮಾಡಲು, ಎಣ್ಣೆಯಲ್ಲಿ ಹುರಿದು ಅಥವಾ ಕುದಿ ನೀರಿನಲ್ಲಿ ಬೇಯಿಸಿ ಅವುಗಳಲ್ಲಿರುವ ಜಲಾಂಶವನ್ನು ಕಡಿಮೆ ಮಾಡಿ ಈ ಮೀನುಗಳ ಜೊತೆಗೆ ಉಪ್ಪಿನ ದ್ರಾವಣ, ನೆಲಗಡಲೆ ಎಣ್ಣೆ, ಟೊಮೆಟೊ ರಸ, ಸಾಂಬಾರನ್ನು ಡಬ್ಬಿಗಳಿಗೆ ಸೇರಿಸಬಹುದು.

ಸಿಗಡಿ ಮೀನನ್ನು ತಯಾರಿಸುವಾಗ ಅದರ ತಲೆ, ಸಿಪ್ಪೆ ಸುಲಿದು ಕರುಳನ್ನು ಕತ್ತರಿಸಿ, ತೊಳೆದು, ಕುದಿಯುವ ಉಪ್ಪು ನೀರಿನಲ್ಲಿ ನಾಲ್ಕು ನಿಮಿಷ ಬೇಯಿಸಿ, ಡಬ್ಬಿಗಳಿಗೆ ತುಂಬಬೇಕು. ಇದರ ಜೊತೆಗೆ ಉಪ್ಪಿನ ದ್ರಾವಣವನ್ನು ಉಪಯೋಗಿಸಬಹುದು, ಏಡಿ ಮೊದಲಾದ ಚಿಪ್ಪು ಮೀನನ್ನು ಇಡಿಯಾಗಿಯೇ ಕುದಿಯುವ ನೀರಿನಲ್ಲಿ ಕೆಲ ನಿಮಿಷ ಬೇಯಿಸಿ, ಚಿಪ್ಪನ್ನು ತೆಗೆದು ಒಳಗಿರುವ ಮಾಂಸವನ್ನು ಸಂಗ್ರಹಿಸಿ, ಸಾಕಷ್ಟು ಉಪ್ಪು ನೀರಿನೊಂದಿಗೆ ಡಬ್ಬಿಗಳಿಗೆ ತುಂಬಿಸಬೇಕಾಗುತ್ತದೆ.

ಹಸಿ ಮೀನನ್ನು ಒಣಗಿಸುವುದರ ಮೂಲಕ ರಕ್ಷಿಸುವುದು

ಹಿಡಿದ ಮೀನಿಗೆ ಸರಿಯಾದ ಬೆಲೆ ಸಿಕ್ಕದೇ ಇದ್ದಾಗ ಬೆಲೆ ಬಾಳುವ ಮೀನು ಮತ್ತು ಸಿಗಡಿಯನ್ನು ಘನೀಕರಿಸುವಿಕೆ ಮತ್ತು ಕ್ಯಾನಿಂಗ್ ವಿಧಾನದಿಂದ ರಕ್ಷಿಸಿದರೆ ಉಳಿದ ಜಾತಿಯ ಮೀನು, ಚಿಕ್ಕ ಸೀಗಡಿ ಮೊದಲಾದ ಸಮುದ್ರದಾಹಾರವನ್ನು ಒಣಗಿಸುವುದರ ಮೂಲಕ ರಕ್ಷಿಸಿ ಬೆಲೆ ಸಿಕ್ಕಾಗ ಮಾರಾಟ ಮಾಡುತ್ತಾರೆ. ಇದರಲ್ಲಿ ಉಪ್ಪು ಹಾಕದೆ ಒಣಗಿಸುವ ಮತ್ತು ಉಪ್ಪು ಹಾಕಿ ಮೀನು ಒಣಗಿಸುವ ಎರಡು ವಿಧಾನಗಳು ಜಾರಿಯಲ್ಲಿವೆ. ಕಡಿಮೆ ಬೆಲೆಯ ಮೀನನ್ನು ಹಿಡಿದ ತಕ್ಷಣ ತೀರ ಪ್ರದೇಶದ ಮರಳಿನ ಮೇಲೆ ಒಣಗಿಸುತ್ತಾರೆ. ಇದು ಬಹು ಪ್ರಾಚೀನ ವಿಧಾನ. ಶೇಕಡಾ 35 ರಷ್ಟು ಚಿಕ್ಕಪುಟ್ಟ ಮೀನನ್ನು ಇದೇ ವಿಧಾನದಿಂದ ಒಣಗಿಸಲಾಗುತ್ತದೆ. ಹೀಗೆ ಒಣಗಿಸಿದ ಮೀನಿನಲ್ಲಿ ಮರಳು ಧೂಳು ಅಂಟಿಕೊಂಡಿರುತ್ತದೆ. ಬಳಸುವಾಗ ಅದನ್ನು ನೀರಿನಲ್ಲಿ ನೆನೆಹಾಕಿ ಉಪಯೋಗಿಸಬೇಕಾಗುತ್ತದೆ. ಇತ್ತೀಚೆಗೆ ಯಂತ್ರದಿಂದ ಒಣಗಿಸುವ ವಿಧಾನ ಬಳಕೆಗೆ ಬಂದಿರುವುದರಿಂದ ಮೀನು ಸಮ ಪ್ರಮಾಣದಲ್ಲಿ ಒಣಗುವುದು ಮಾತ್ರವಲ್ಲದೆ ತನ್ನ ಶುದ್ಧತೆಯನ್ನು ಕಾಪಾಡಿಕೊಂಡಿರುತ್ತದೆ. ಅಂತಹ ಮೀನನ್ನು ನೀರಿನಲ್ಲಿ ನೆನೆಸಿ ಉಪಯೋಗಿಸಿದರೆ ಅದು ತನ್ನ ಮೊದಲಿನ ಸಂಯೋಜನೆಯನ್ನು ಪುನ: ಪಡೆಯುತ್ತದೆ.

ಉಪ್ಪು ಹಾಕಿದ ಮೀನನ್ನು ಒಣಗಿಸುವ ಪದ್ಧತಿಯೂ ಬಹಳ ಹಿಂದಿನಿಂದಲೂ ರೂಢಿಯಲ್ಲಿದೆ. ಮೀನಿಗೆ ಉಪ್ಪು ಹಾಕುವುದರಿಂದ ಮೀನಿನ ಅಂಗಾಂಶಗಳಲ್ಲಿನ ತೇವಾಂಶ ಕಡಿಮೆಯಾಗಿ ಅದು ಬಹಳ ಕಾಲ ಕೆಡದಂತಿರುತ್ತದೆ. ಚಿಕ್ಕ ಮೀನನ್ನು ಉಪ್ಪಿನ ರಾಶಿಯಲ್ಲಿ ಸುರಿದು ಸಮ ಪ್ರಮಾಣದಲ್ಲಿ ಮಿಶ್ರಣ ಮಾಡಲಾಗುತ್ತದೆ. ದೊಡ್ಡ ಮೀನಾದರೆ ಕರುಳು ತೆಗೆದು ಅದರ ಹೊಟ್ಟೆ ಮತ್ತು ಹೊರಮೈ ಮೇಲೆ ಉಪ್ಪು ಸವರಿ ಬಿಸಿಲಲ್ಲಿ ಒಣಗಿಸುತ್ತಾರೆ. ಉಪ್ಪು ಹಾಕಿ ಒಣಗಿಸಿದ ಮೀನನ್ನು ಹೆಚ್ಚು ಕಾಲ ಇಟ್ಟಾಗ ಮೀನಿನ ವಾಸನೆ ಹೆಚ್ಚಾಗುತ್ತದೆ. ಅದು ಉಪ್ಪು ಹಾಕಿ ಸಂಸ್ಕರಿಸಿದ ಮೀನಿನ ವಿಶೇಷ ಗುಣವೆಂದು ಪರಿಗಣಿಸಲಾಗುವುದು. ಇತ್ತೀಚೆಗೆ ಈ ವಾಸನೆಯನ್ನು ಕಡಿಮೆ ಮಾಡಲು ಉಪ್ಪಿನೊಡನೆ ಕೆಲವು ರಾಸಾಯನಿಕ ವಸ್ತುಗಳನ್ನು ಬಳಸಲಾಗುತ್ತದೆ.

ಹಸಿಮೀನು ಕೆಡದಂತಿಡಲು ಒಣಗಿಸುವ ವಿಧಾನವನ್ನು ಅನುಸರಿಸಿದರೆ ಒಣಮೀನಿಗೆ ಹುಳ ಬೀಳದಂತೆ ರಕ್ಷಿಸುವುದು ಅದರ ಮುಂದಿನ ಹಂತವಾಗಿದೆ. ಸಾಮಾನ್ಯವಾಗಿ ಒಣ ಮೀನಿಗೆ ಖಾಪ್ರ ಜೀರುಂಡೆ ಎಂಬ ಹುಳುಗಳ ಕಾಟ ಹೆಚ್ಚು. ಆ ಕೀಟಗಳು ಒಣಮೀನನ್ನು ತಿಂದು ಹಾಳು ಮಾಡುತ್ತದೆ. ಇಂತಹ ಕೀಟಗಳಿಂದ ಮೀನನ್ನು ರಕ್ಷಿಸಲು ಆ ಸ್ಥಳದಲ್ಲಿ ಅಂಡೇನ್ ಮತ್ತು ಮಾಲಥೈಯಸ್ ಎಂಬ ಕೀಟನಾಶಕಗಳನ್ನು ಸಿಂಪಡಿಸುತ್ತಾರೆ. ಸಾಗಾಣಿಕೆಯ ಸಂದರ್ಭದಲ್ಲಿ ಸಹ ಚೀಲಗಳಲ್ಲಿ ಮೊದಲು ಈ ಕೀಟನಾಶಕ ದ್ರವವನ್ನು ಸಿಂಪಡಿಸಿ ಅನಂತರ ಅದರಲ್ಲಿ ಮೀನು ತುಂಬುತ್ತಾರೆ.

ಮೀನುಗಾರರಿಗೆ ಮೀನು ಹಿಡಿಯುವುದು ಅಷ್ಟು ಪರಿಶ್ರಮದ ಕೆಲಸವೆನಿಸದಿದ್ದರೂ ಅದು ಮಾರಾಟವಾಗುವವರೆಗೂ ರಕ್ಷಿಸಿಡುವುದು ಬಹುದೊಡ್ಡ ಸಮಸ್ಯೆಯಾಗುತ್ತದೆ. ಮನೆಯಲ್ಲಿ ಸರಿಯಾದ ಸ್ಥಳಾವಕಾಶವಿಲ್ಲದಿದ್ದರೆ ಒಣಮೀನು ಇರುವೆ, ಜಿರಳೆ, ಜೀರುಂಡೆ, ಬೆಕ್ಕು ಮೊದಲಾದ ಪ್ರಾಣಿಗಳಿಗೆ ತುತ್ತಾಗುತ್ತದೆ. ಬೆಕ್ಕಿನಿಂದ ರಕ್ಷಿಸಿಡಲು ಬುಟ್ಟಿಗಳನ್ನು ಅವರು ಬಳಸುತ್ತಾರೆ. ಆದರೆ ಇರುವೆ, ಜಿರಳೆಗಳಿಂದ ರಕ್ಷಿಸಿಡಲು ಕೀಟನಾಶಕಗಳನ್ನು ಬಳಸಬೇಕಾಗುತ್ತದೆ. ಅದು ಕಾಲಕ್ಕೆ ಸರಿಯಾಗಿ ಸಿಗದಿದ್ದರೆ ಅವರ ಪರಿಶ್ರಮವೆಲ್ಲ ನೀರು ಪಾಲಾಗುತ್ತದೆ.

ಸಾಮಾನ್ಯವಾಗಿ ಒಣಮೀನಿಗೆ ಬೇಡಿಕೆ ಹೆಚ್ಚಾಗುವುದು ಮಳೆಗಾಲದಲ್ಲಿ ಮಾತ್ರ. ಆಗ ಸಮುದ್ರ ಉಗ್ರವಾಗಿರುವುದರಿಂದ ಮೀನುಗಾರರು ಕಡಲಲ್ಲಿ ಪ್ರವೇಶಿಸದಂತೆ ಹವಾಮಾನ ಇಲಾಖೆಯವರು ಎಚ್ಚರಿಕೆ ಕೊಟ್ಟಿರುತ್ತಾರೆ. ಆಗ ಒಣಮೀನಿನ ಕಾಲ. ಆದರೆ ಮಳೆಯ ಕಾರಣದಿಂದ ಗಾಳಿಯಲ್ಲಿ ತೇವಾಂಶ ಹೆಚ್ಚಾಗಿ ಒಣ ಮೀನಿನಲ್ಲಿ ಅಂಟುದ್ರವ ರೂಪಗೊಳ್ಳಲು ಪ್ರಾರಂಭವಾಗಿ ಕಾಲಕ್ರಮೇಣ ಮೀನಿನ ಹೊಟ್ಟೆಯ ಭಾಗದಲ್ಲಿ ಮುಗ್ಗುಗಟ್ಟುತ್ತಾ ಬರುತ್ತದೆ. ಇದರ ಪರಿಣಾಮದಿಂದ ಮೀನು ಕೆಡುತ್ತದೆ. ಇದರಿಂದ ಉಳಿಸಬೇಕಾದರೆ ಮೀನನ್ನು ಬಿಸಿಲಲ್ಲಿ ಒಣಗಿಸಬೇಕಾಗುವುದು. ಆದರೆ ಮಳೆಗಾಲದಲ್ಲಿ ತೀರ ಪ್ರದೇಶದ ಜನ ಬಿಸಿಲು ಕಾಣುವುದೇ ಅಪರೂಪವಾಗಿರುತ್ತದೆ. ಇಂತಹ ಇಕ್ಕಟ್ಟಿನ ಸಂದರ್ಭದಲ್ಲಿ ಮೀನನ್ನು ಕಡಿಮೆ ಬೆಲೆಗೆ ಮಾರಾಟ ಮಾಡುವುದು ಅನಿವಾರ್ಯವಾಗುತ್ತದೆ. ಹೀಗೆ ಮೀನುಗಾರರು ಸಮುದ್ರದಾಹಾರವನ್ನು ಹುಡುಕಿ ತರಲು ತಮ್ಮ ಸಾಹಸ ಪ್ರದರ್ಶಿಸಿದರೆ ಅದನ್ನು ರಕ್ಷಿಸಿಟ್ಟು ಮಾರಾಟ ಮಾಡಲು ತಮ್ಮ ಚಾಣಾಕ್ಷತನವನ್ನು ಪ್ರದರ್ಶಿಸಬೇಕಾಗುತ್ತದೆ.

ಉಪ್ಪು ಹಾಕಿ ಒಣಗಿಸಲು ಮೀನನ್ನು ಕೊಚ್ಚಿ ಶುದ್ಧಮಾಡುತ್ತಿರುವುದು.







ವಿವಿಧ ರೀತಿಯ ಮೀನಿನ ಉತ್ಪನ್ನಗಳು

ಮಾನವ ಬದುಕಲು ಬಹು ಮುಖ್ಯವಾಗಿ ಬೇಕಾಗಿರುವುದು ಆಹಾರ ನಾವು ಸೇವಿಸುವ ಆಹಾರವು ಪೌಷ್ಠಿಕಾಂಶದಿಂದ ಕೂಡಿದ್ದು ಮತ್ತು ಸ್ವಚ್ಛ ಹಾಗೂ ಸುರಕ್ಷಿತವಾಗಿರಬೇಕು. ಅನಾದಿ ಕಾಲದಿಂದಲೂ ಮೀನು ಮತ್ತು ಮೀನಿನ ಉತ್ಪನ್ನಗಳು ಮಾನವನ ಆಹಾರದಲ್ಲಿ ವಿಶಿಷ್ಟ ಸ್ಥಾನ ಪಡೆದಿವೆ. ಮೀನಿನ ಮಾಂಸಖಂಡದ ಹೊರತು ಉಳಿದ ಭಾಗಗಳಾದ ತಲೆ, ಪಚನಾಂಗ, ಈಜು ರೆಕ್ಕೆಗಳು ಹಾಗೂ ಇನ್ನಿತರ ಭಾಗಗಳು ತಿನ್ನಲು ಯೋಗ್ಯವಾಗಿಲ್ಲದ ಕಾರಣ ಇವುಗಳನ್ನು ತ್ಯಾಜ್ಯವಸ್ತುಗಳೆಂದುಪರಿಗಣಿಸಲಾಗುತ್ತದೆ. ಈ ತ್ಯಾಜ್ಯ ವಸ್ತುಗಳನ್ನು ಯೋಗ್ಯ ರೀತಿಯಲ್ಲಿ ಬಳಸಿ ನಮ್ಮ ಹಾಗೂ ನಮ್ಮ ದೇಶದ ಆದಾಯವನ್ನು ಹೆಚ್ಚಿಸಬಹುದು.

ಆದರೆ ತಾಜಾ ಮೀನುಗಳನ್ನೇ ನಮ್ಮ ಮನೆಗಳಲ್ಲಿ ಆಹಾರಕ್ಕಾಗಿ ಬಳಸುವಾಗ, ಈ ತ್ಯಾಜ್ಯ ವಸ್ತುಗಳ ಸಂಗ್ರಹಣೆ ಮತ್ತುಅವುಗಳ ಬಳಕೆ ಕಠಿಣವಾಗುತ್ತದೆ. ಹಾಗೂ ಆರ್ಥಿಕ ದೃಷ್ಟಿಯಿಂದ ಈ ವ್ಯವಹಾರ ಲಾಭದಾಯಕವಾಗಲಾರದು. ಇತ್ತೀಚಿನ ದಿನಗಳಲ್ಲಿ ತಾಂತ್ರಿಕತೆಯ ಬೆಳವಣಿಗೆಯಿಂದ ಮೀನಿನ ಸಂರಕ್ಷಣೆಯನ್ನು ಶೈತ್ಯ ಘನೀಕರಿಸುವುದು, ಒಣಗಿಸುವುದು, ಉಪ್ಪು ಹಾಕಿ ಒಣಗಿಸುವುದು, ಡಬ್ಬೀಕರಿಸುವುದು, ಸಾಸೇಜು, ಕಟ್ಲೇಟ್, ಉಂಡೆ, ಚಕ್ಕುಲಿ, ಉಪ್ಪಿನಕಾಯಿ ತಯಾರಿಸಿ ಇನ್ನೂ ಮುಂತಾದ ವಿಧಾನಗಳಿಂದ ಈ ತ್ಯಾಜ್ಯವಸ್ತುಗಳಿಂದ ಹಲವಾರು ಉಪಯುಕ್ತ ಪದಾರ್ಥಗಳನ್ನು ತಯಾರಿಸಬಹುದು. ಇಂತಹ ಪದಾರ್ಥಗಳನ್ನು ಮೀನಿನ ಉಪ ಉತ್ಪನ್ನಗಳೆಂದು ಕರೆಯುತ್ತಾರೆ. ಕೆಲವೆ ವಿಶಿಷ್ಟ ಸನ್ನಿವೇಷದಲ್ಲಿ ಮಾರುಕಟ್ಟೆಗೆ ಅತಿ ಹೆಚ್ಚಿನ ಪ್ರಮಾಣದಲ್ಲಿ ಮೀನು ಬಂದಾಗ ಅಥವಾ ಮಾರುಕಟ್ಟೆಯಲ್ಲಿ ಬೇಡಿಕೆ ಇಲ್ಲದಂತಹ ಮೀನು ಬಂದಾಗ, ಮೀನಿನ ತ್ಯಾಜ್ಯ ವಸ್ತುಗಳಿಂದ ಉತ್ಪನ್ನಗಳನ್ನು ತಯಾರಿಸಬಹುದು.

ಮೀನಿನ ತ್ಯಾಜ್ಯವಸ್ತುಗಳಿಂದ ಉಪ ಉತ್ಪನ್ನಗಳ ತಯಾರಿಕೆ ಬಹಳ ರೀತಿಯಲ್ಲಿ ಉಪಯೋಗಕಾರಿ. ಮೊದಲನೆಯದಾಗಿ ಸಾಗರೋತ್ಪನ್ನಗಳನ್ನು ತಯಾರಿಸುವ ದೊಡ್ಡ ಘಟಕಗಳಲ್ಲಿ ಈ ತ್ಯಾಜ್ಯವಸ್ತುಗಳ ವಿಲೇವಾರಿ ಒಂದು ದೊಡ್ಡ ಸಮಸ್ಯೆಯಾಗಿದೆ. ಸಾಗರೋತ್ಪನ್ನಗಳನ್ನು ಸಂಸ್ಕರಿಸುವ ಇಂತಹ ಘಟಕಗಳಿಂದ ತ್ಯಾಜ್ಯ ವಸ್ತುಗಳ ವಿಲೇವಾರಿಯನ್ನು ತಕ್ಷಣ ಮಾಡದಿದ್ದರೆ ಇಂತಹ ಘಟಕಗಳ ಹಾಗೂ ಅವುಗಳ ಸುತ್ತಮುತ್ತಲಿನ ಪ್ರದೇಶ ಪರಿಸರ ಮಾಲಿನ್ಯಕ್ಕೆ ಕಾರಣವಾಗಬಹುದು. ಈ ರೀತಿಯ ಉತ್ಪನ್ನಗಳನ್ನು ತಯಾರಿಸುವುದರಿಂದ ಈ ಸಮಸ್ಯೆಗೆ ಪರಿಹಾರ ದೊರಕಿದಂತಾಗುತ್ತದೆ. ಎರಡನೆಯದಾಗಿ ಮೀನಿನ ತ್ಯಾಜ್ಯವಸ್ತುಗಳಿಂದ ಉಪ ಉತ್ಪನ್ನಗಳನ್ನು ತಯಾರಿಸುವುದರಿಂದ ಮೀನನ್ನು ಸಂಸ್ಕರಿಸುವ ಘಟಕಗಳ ಆರ್ಥಿಕ ಸ್ಥಿತಿಯೂ ಸುಧಾರಿಸಲ್ಪಡುತ್ತದೆ. ಮತ್ತು ಸಾಗರೋತ್ಪನ್ನದ ಬಳಕೆಯಾಗುತ್ತದೆ.

ಮೀನಿನ ಹಿಂಡಿ : ಮೀನು ಮನುಷ್ಯನಿಗೆ ಹೇಗೆ ಪುಷ್ಟಿದಾಯಕ ಆಹಾರವೋ ಮೀನು ಹಿಂಡಿ ಪ್ರಾಣಿಗಳಿಗೆ ಅಷ್ಟೇ ಉತ್ತಮ ಆಹಾರವಾಗಿದೆ. ರೈಸಿನ್ ಮತ್ತು ಮಿಥೆಗ್ರನೀನ್ ಅಮಿನೋ ಎಂಬ ಆಮ್ಲಗಳು ಮೀನು ಹಿಂಡಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಇರುವ ಇದ್ದು ಅದರ ಸಾಕು ಪ್ರಾಣಿಗಳಿಗೆ ಪುಷ್ಠಿದಾಯಕ ಆಹಾರಬಲ್ಲದೆಂದು ನಮ್ಮ ಜನಪದರಿಗೆ ತಿಳಿದಿಲ್ಲ. ಆದರೂ ಅವರು ಇಮ್ಮ ಅನುಭವಜ್ಞಾನದಿಂದ ಮೀನುಹಿಂಡಿ ಪ್ರಾಣಿಗಳಿಗೆ ಉತ್ತಮ ಆಹಾರವಾಗಬಲ್ಲದೆಂಬುಂದು ಮಾತ್ರ ತಿಳಿದಿದೆ.

ಮೀನುಗಾರರು ಸಮುದ್ರಕ್ಕೆ ಮೀನು ಹಿಡಿಯಲು ಬಲೆ ಬೀಸಿದಾಗ, ಅದರಲ್ಲಿ ಮೀನಿನೊಡನೆ ಹಲವು ಬಗೆಯ ಜಲಚರಗಳು ಸಿಕ್ಕಿಕೊಳ್ಳುತ್ತವೆ. ಅಂತಹ ಜಲಚರಗಳನ್ನು ಅವರು ಒಣಗಿಸಿಡುತ್ತಾರೆ. ಜೊತೆಗೆ ಉಪ್ಪಿನ ತೊಟ್ಟಿಗಳಲ್ಲಿ ಮೀನನ್ನು ಸಂರಕ್ಷಿಸಿಡುವಾಗ ಮೀನಿನ ಕರುಳುಗಳನ್ನೆಲ್ಲಾ ಪ್ರತ್ಯೇಕಿಸಲಾಗುತ್ತದೆ. ಅಂತಹ ವ್ಯರ್ಥ ಭಾಗಗಳನ್ನು ಒಣಗಿಸಲಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಅಧಿಕವಾಗಿ ಮೀನು ಸಿಕ್ಕಾಗ. ಅದನ್ನು ರಕ್ಷಿಸಿಡಲು ಶೈತ್ಯಾಗಾರಗಳಲ್ಲಿ ಸ್ಥಳ ಸಿಗುವುದಿಲ್ಲ. ಆಗ ಮೀನು ಕೆಡುತ್ತದೆ. ಆ ಮೀನನ್ನು ಹಿಂಡಿಯ ತಯಾರಿಕೆಯಲ್ಲಿ ಬಳಸಲಾಗುತ್ತದೆ.

ಮೀನಿನ ಹಿಂಡಿಯನ್ನು ಮೂರು ವಿಧಗಳಿಂದ ತಯಾರಿಸಬಹುದೆಂದು ಜಿ. ಆರ್. ರಂಗಸ್ವಾಮಿಯವರು ತಿಳಿಸುತ್ತಾರೆ.

(1) ಒಣಗಿಸಿ ಪುಡಿ ಮಾಡುವುದರಿಂದ,

(2) ಬೇಯಿಸುವುದರಿಂದ,

(3) ಲೀನಕಾರಿಗಳಿಂದ ಸಂಸ್ಕರಿಸುವುದರಿಂದ,

ಮೀನಿನಲ್ಲಿ ಮೇದಸ್ಸಿನ ಪ್ರಮಾಣ ಕಡಿಮೆ ಇದ್ದರೆ, ಅಂತಹ ಮೀನನ್ನು ಬಿಸಿಲಲ್ಲಿ ಒಣಗಿಸಿ ಪುಡಿಮಾಡಿ ಮೀನು ಹಿಂಡಿ ತಯಾರಿಸುತ್ತಾರೆ. ಇದು ಹಿಂಡಿ ತಯಾರಿಸುವ ಬಹು ಸುಲಭ ವಿಧಾನ.

ಎಣ್ಣೆ ಅಂಶ ಹೆಚ್ಚಾಗಿರುವ ಮೀನನ್ನು ನೀರಲ್ಲಿ ಬೇಯಿಸಿ, ಒತ್ತು ಯಂತ್ರದಲ್ಲಿ ಒತ್ತಿ ಅದರಲ್ಲಿನ ಎಣ್ಣೆ ಅಂಶವನ್ನು ಹೊರತೆಗೆದು ಬಿಸಿಲಲ್ಲಿ ಒಣಗಿಸಿ, ಪುಡಿಮಾಡಿ ಹಿಂಡಿ ಮಾಡಲಾಗುತ್ತದೆ.ಆದರೂ ಇದರಲ್ಲಿ ಶೇಕಡ 4ರಿಂದ 5ರಷ್ಟು ಎಣ್ಣೆಯ ಅಂಶ ಇದ್ದೇ ಇರುತ್ತದೆ.

ಮೀನು ಹಿಂಡಿಗೆ ಬಳಸಲಾಗುವ ಕಚ್ಚಾಪದಾರ್ಥದ ಗುಣಮಟ್ಟಕ್ಕನುಗುಣವಾಗಿ ಮೀನು ಹಿಂಡಿಯ ಶ್ರೇಷ್ಟತೆ ಮತ್ತು ಕನಿಷ್ಟತೆಗಳ ನಿರ್ಣಯವಾಗುತ್ತದೆ. ಶೀತಲಗೊಳಿಸುವ ಮತ್ತು ಕ್ಯಾನಿಂಗ್ ಮಾಡುವ ಸಂದರ್ಭದಲ್ಲಿ ಹೊರಹಾಕಲ್ಪಡುವ ವ್ಯರ್ಥ ಭಾಗಗಳಿಂದ ತಯಾರಿಸುವ ಮೀನಿನ ಹಿಂಡಿಗಿಂತ ಇಡಿಯಾದ ಮೀನಿನಿಂದ ತಯಾರಿಸುವ ಮೀನು ಹಿಂಡಿಯಲ್ಲಿ ಹೆಚ್ಚು ಸತ್ವಾಂಶ ಇರುತ್ತದೆಂದು ಹೇಳಲಾಗುತ್ತದೆ. ಮೀನಿನಲ್ಲಿ ಮೇದಸ್ಸಿನ ಪ್ರಮಾಣ ಹೆಚ್ಚಾಗಿದ್ದರೆ ಅಂತಹ ಮೀನು ಹಿಂಡಿ ಉತ್ತಮವಾದದ್ದೆಂದು ಭಾವಿಸಲಾಗುತ್ತದೆ. ಉಪ್ಪಿನ ಮೀನಿನಿಂದ ತಯಾರಿಸುವ ಮೀನು ಹಿಂಡಿಯಲ್ಲಿ ಉಪ್ಪಿನ ಅಂಶ ಹೆಚ್ಚಾಗುವುದರಿಂದ ಅದು ಅಷ್ಟೊಂದು ಉತ್ತಮ ಗುಣಮಟ್ಟವನ್ನು ಹೊಂದಿರುವುದಿಲ್ಲ. ಹಿಂಡಿ ಕೆಡದಂತೆ ರಕ್ಷಿಸಲು ಕಡಿಮೆ ಪ್ರಮಾಣದಲ್ಲಿ ಸೋಡಿಯಂ ನೈಟ್ರೇಟನ್ನು ಸೇರಿಸುತ್ತಾರೆ. ಹೀಗೆ ತಯಾರಿಸಸಿದ ಹಿಂಡಿಯನ್ನು ಯಂತ್ರಗಳಿಂದ ಒಣಗಿಸಲಾಗುತ್ತದೆ. ಜ್ವಾಲೆಯಿಂದ, ಹಬೆಯಿಂದ, ಮತ್ತು ನಿರ್ವಾತ ಪ್ರದೇಶದಲ್ಲಿ ಒಣಗಿಸಲು 4ರಿಂದ 6 ಗಂಟೆಗಳ ಅವಧಿ ಬೇಕಾಗುತ್ತದೆ. ವಿರ್ವಾತ ಪ್ರದೇಶದಲ್ಲಿ ಒಣಗಿಸಿದ ಹಿಂಡಿಯಲ್ಲಿ ಹೆಚ್ಚಿನ ಸತ್ವಾಂಶವಿರುತ್ತದೆಂದು ಹೇಳುತ್ತಾರೆ. ಹಿಂಡಿಯಲ್ಲಿ ಸಾಮಾನ್ಯವಾಗಿ ಶೇ.10 ರಿಂದ 12 ರಷ್ಟು ತೇವಾಂಶ ಇದ್ದೇ ಇರುತ್ತದೆ. ಇದಕ್ಕಿಂತ ಹೆಚ್ಚಿನ ತೇವಾಂಶವಿದ್ದರೆ ಅದು ಕೆಡುವ ಸಂಭವ ಉಂಟು. ಅಲ್ಲದೇ ಕಾಲಕ್ರಮೇಣ ಅದು ಗಂಟು ಕಟ್ಟುತ್ತದೆ. ಆದ್ದರಿಂದ ಮೀನು ಹಿಂಡಿ ತಯಾರಿಕೆಯಲ್ಲಿ ಎಣ್ಣೆ ಮತ್ತು ತೇವಾಂಶದ ಪ್ರಮಾಣವನ್ನು ಎಚ್ಚರಿಕೆಯಿಂದ ಗಮನಿಸುತ್ತಾರೆ.

ಒಣಗಿಸುವ ಬಗೆಗಳು ತೇವ ಶೇಕಡಾ ಸತ್ವಾಂಶ ಶೇಕಡಾ ಎಣ್ಣೆ ಶೇಕಡಾ

1) ಹಬೆಯಿಂದ 10.58 62.31.7.77

2) ಜ್ವಾಲೆಯಿಂದ 9.25 61.25 7.14

3) ನಿರ್ವಾತ ಪ್ರದೇಶದಲ್ಲಿ 12.52 67.88 1.90

ಕರ್ನಾಟಕ ಕರಾವಳಿಯಲ್ಲಿನ ಮೀನು ಹಿಂಡಿ ತಯಾರಿಸುವ ಕಾರ್ಯಾಗಾರಗಳು

ಕ್ರಮ ನಂ.	ಜಿಲ್ಲೆ	ಸಂಖ್ಯೆ	ಸಾಮರ್ಥ್ಯ
1)	ದಕ್ಷಿಣ ಕನ್ನಡ	13	150.5 ಮೆ.ಟನ್ನುಗಳು
2)	ಉತ್ತರ ಕನ್ನಡ	1	30.00 ಮೆ.ಟನ್ನುಗಳು
	ಒಟ್ಟು	**14**	**180.5**

ಇದು ಮೀನಿನ ಜಾತಿಗನುಗುಣವಾಗಿ ವ್ಯತ್ಯಾಸವಾಗುತ್ತಾ ಹೋಗುತ್ತದೆ.

ತಯಾರಿಸಿದ ಮೀನು - ಹಿಂಡಿಯಲ್ಲಿನ ಕಲ್ಲು ಮತ್ತು ಮರದ ತುಂಡುಗಳನ್ನು ಜರಡಿ ಹಿಡಿದು ಹೊರ ತೆಗೆಯುತ್ತಾರ. ಅದರ ನಂತರ ಅದನ್ನು ಒಣವರಣದಲ್ಲಿ ಶೇಖರಿಸಿಡುತ್ತಾರೆ.

ಪ್ರಾಣಿಗಳ ಆರೋಗ್ಯಕ್ಕೆ ಅಗತ್ಯವಾದ ಕ್ಯಾಲ್ಸಿಯಂ, ರಂಜಕ, ಕಬ್ಬಿಣ, ಐಯೋಡಿನ್, ಸತು, ಮ್ಯಾಂಗನೀಸ್, ಮೊದಲಾದ ಖನಿಜಾಂಶಗಳು ಮೀನುಹಿಂಡಿಯಲ್ಲಿ ಇರುವುದರಿಂದ ಹಾಲು ಕೊಡುವ ಹಸು, ಮಾಂಸ ಮತ್ತು ಮೊಟ್ಟೆಯ ಕೋಳಿ, ಹಂದಿ ಮೊದಲಾದವುಗಳ ಆಹಾರವಾಗಿ ಅದನ್ನು ಹೆಚ್ಚಿನ ಪ್ರಮಾಣದಲ್ಲಿ ಅದನ್ನು ಬಳಸಲಾಗುತ್ತದೆ. ಮೀನು ಹಿಂಡಿ ತಿಂದ ಕೋಳಿಯ ಮೊಟ್ಟೆಯ ಕವಚ ಗಟ್ಟಿಯಾಗಿರುವುದರ ಜೊತೆಗೆ ಅದರ ಗಾತ್ರ ಸಹ ದೊಡ್ಡದಾಗಿರುತ್ತದೆಂದು ಅನುಭವಿಗಳ ಅನಿಸಿಕೆಯಾಗಿದೆ.

ಮೀನುಗೊಬ್ಬರ :

ಮೀನುಗಳನ್ನು ಪ್ರಾಣಿಗಳ ಆಹಾರವನ್ನಾಗಿ ಮಾತ್ರ ಉಪಯೋಗಿಸದೆ ತಾನು ಸಾಕುವ ಸಸ್ಯಗಳಿಗೂ ಆಹಾರವನ್ನಾಗಿ ಬಳಸುವುದರ ಮೂಲಕ ಅವುಗಳಿಂದ ಹೆಚ್ಚು ಫಲಪಡೆಯುವ ರಹಸ್ಯವನ್ನು ಕರಾವಳಿಯ ಜನರು ಅರಿತಿದ್ದಾರೆ. ಶೀತಗೊಳಿಸುವ ಹಾಗೂ ಡಬ್ಬೀಕರಣದ ಸಂದರ್ಭಗಳಲ್ಲಿ ಹೊರಹಾಕುವ ಮೀನಿನ ವ್ಯರ್ಥಭಾಗಗಳನ್ನು ಮತ್ತು ಮೀನು ಬೇಟೆ ಹೆಚ್ಚಾದಾಗ ಮಾರಾಟವಾಗದೇ ಉಳಿಯುವ ಮೀನು ಹಾಳಾದಾಗ ಅವುಗಳನ್ನು ಗೊಬ್ಬರ ಮಾಡಲು ಉಪಯೋಗಿಸಲಾಗುತ್ತದೆ. ಅದರಲ್ಲಿ ಉಪ್ಪು ಮತ್ತು ಸಸ್ಯಗಳಿಗೆ ಅವಶ್ಯಕವಾದ ರಾಸಾಯನಿಕ ವಸ್ತುಗಳನ್ನು ಮಿಶ್ರಣ ಮಾಡಿ ಮೀನುಗೊಬ್ಬರ ತಯಾರಿಸುತ್ತಾರೆ. ಇದರಲ್ಲಿ ತೇವಾಂಶ ಶೇಕಡಾ ೧೦ ರಿಂದ ೧೫ ರಷ್ಟು ಇರುತ್ತದೆ. ಸಿಮೆಂಟಿನ ಚೀಲದಲ್ಲಿ ತುಂಬಿದ ಗೊಬ್ಬರವನ್ನು ಒಂದು ಚೀಲಕ್ಕೆ ರೂ. 100 ರಿಂದ 200 ರಂತೆ ಮಾರಾಟ ಮಾಡುತ್ತಾರೆ. ತೆಂಗಿನಗಿಡಗಳಿಗೆ ಮೀನುಗೊಬ್ಬರ ಹಾಕಿದರೆ ಅದರ ಬೆಳವಣಿಗೆ ಮತ್ತು ಫಲಾಭಿವೃದ್ಧಿಗಳೆರಡೂ ತೀವ್ರಗತಿಯಲ್ಲಿ ಸಾಗುತ್ತದೆಂದು ಹೇಳುತ್ತಾರೆ. ಕರಾವಳಿಯ ಹೊರತು ಮೀನುಗೊಬ್ಬರ ಅಷ್ಟಾಗಿ ಬಳಕೆಯಲ್ಲಿಲ್ಲ.

ಮೀನುಗೊಬ್ಬರ ತಯಾರಿಕೆ (ಮೆಟ್ರಿಕ್ ಟನ್ನುಗಳಲ್ಲಿ)

1.	1979-80	-	3841
2.	80-81	-	9421
3.	81-82	-	18865
4.	82-83	-	6515
5.	83-84	-	7012
6.	84-85	-	6672
7.	85-86	-	17837
8.	86-87	-	13598
9.	87-88	-	11905
10.	88-89	-	16948
11.	89-90	-	12734
12.	90-91	-	17532

ಆಧಾರ : ಸ್ಟ್ಯಾಟಿಸ್ಟಿಕ್ ಬುಲೆಟಿನ್ ಆಫ್ ಫಿಶರೀಸ್.

ಆಹಾರಗಳಲ್ಲಿ ಜಲಚರಗಳನ್ನು ಬಳಸುವ ವಿಧಾನಗಳು

ಕರ್ನಾಟಕ ಕರಾವಳಿಯ ಜನರು ಅನ್ನಕ್ಕಿಂತ ಮೀನನ್ನು ಪ್ರಮುಖ ಆಹಾರವೆಂದು ಭಾವಿಸಿರುವಂತವರು. ಬರಿಯ ಮೀನು ಬೇಕಾದರೂ ತಿಂದು ಹೊಟ್ಟೆ ತುಂಬಿಸಿಕೊಳ್ಳಬಲ್ಲ ಈ ಜನ ಮೀನಿನಿಂದ ವಿವಿಧ ಬಗೆಯ ''ಪದಾರ್ಥಗಳನ್ನು'' ತಯಾರಿಸುತ್ತಾರೆ. ಉಪ್ಪು ಹುಳಿ, ಮೆಣಸು ಹಚ್ಚಿದ ಮೀನನ್ನು ಎಣ್ಣೆಯಲ್ಲಿ ಫ್ರೈ ಮಾಡಿದರೆ ಸಾಕು ಅದಕ್ಕೊಂದು ವಿಶೇಷ ರುಚಿ ಬರುತ್ತದೆ. ಮೀನು ಹಿಡಿಯಲು ಹೋದವರು ದೋಣಿಯಲ್ಲೇ ಉಪ್ಪು, ಹುಳಿ, ತೆಂಗಿನ ಕಾಯಿ ಮತ್ತು ಒಣಮೆಣಸು ಹಾಕಿ ತಯಾರಿಸಿ ಮೀನಿನ ಹುಳಿ ಜೊತೆಗೆ ಕುಸುಬಲಕ್ಕಿ ಅನ್ನ ಬೇಯಿಸಿ ಊಟ ಮಾಡುತ್ತಾರೆ. ಅದೇ ಅವರಿಗೆ ಪ್ರಿಯ ಆಹಾರ. ಆದ್ದರಿಂದಲೇ ಅವರು ''ಮೀನಿಲ್ಲದ ಊಟ, ಹುಟ್ಟಿಲ್ಲದ ದೋಣಿ ಎರಡೂ ಒಂದೇ ''ಎಂದು ನಾಣ್ಣುಡಿ ಕಟ್ಟಿರುವುದು. ಊಟದೊಡನೆ ತುಂಡು ಮೀನು ಇದ್ದರೆ ಒಂದು ತುತ್ತು ಅನ್ನ ಹೆಚ್ಚಿಗೆ ಸೇರುತ್ತೆ ಎನ್ನುತ್ತಾರೆ. ವಾರದ ಏಳು ದಿನಗಳು ಮೀನು ಊಟ ಮಾಡಿದರೂ ಅವರಿಗೆ ಬೇಸರಿಕೆಯಾಗದು. ಇಲ್ಲಿನ ಜನರಿಗೆ ಊಟ ಸೇರದೇ ಇರುವುದು ಮಳೆಗಾಲದಲ್ಲಿ . ಆಗ ಅವರು ಒಣಮೀನಿನಿಂದಲೇ ತಮ್ಮ ಊಟಕ್ಕೆ ರುಚಿ ತಂದು ಕೊಳ್ಳಬೇಕಾಗುತ್ತದೆ. ಶ್ರೀಮಂತರು ನೂರು ರೂಪಾಯಿಗೆ ನಾಲ್ಕು ಪಾಂಪ್ಲೇಟ್ ಇಲ್ಲವೇ ನಲವತ್ತು ರೂಪಾಯಿಗೆ ಒಂದು ಕೆ.ಜಿ. ಬಾಂಗ್ಡೆ ಕೊಂಡು ಒಂದೆರಡು ದಿನ ಚಿಂತೆಯಿಲ್ಲದಂತೆ ಊಟ ಮಾಡುತ್ತಾರೆ. ಸಾಮಾನ್ಯವಾಗಿ ಮೀನು ಸಿಗದೇ ಇದ್ದಾಗ ಚಿಪ್ಪು ಮೀನಿಗೆ ಬೇಡಿಕೆ ಹೆಚ್ಚು. ಅದು ಸಮುದ್ರದ ಬಂಡೆಗಳಿರುವಲ್ಲಿ ಸಿಗುತ್ತದೆ. ಕಪ್ಪೆ ಚಿಪ್ಪಿನಂತಹ ಚಿಪ್ಪಿನೊಳಗೆ ಜೀವವಿರುವ ಮಾಂಸದ ತುಂಡೊಂದು ಇರುತ್ತದೆ. ಅದನ್ನು ಚಿಪ್ಪಿನ ಸಹಿತ ಕೊಂಡು ತಂದು ಮೊದಲು ನೀರಲ್ಲಿ ಬೇಯಿಸುತ್ತಾರೆ. ಆಗ ಚಿಪ್ಪು ಇಭ್ಭಾಗವಾಗಿ ಬಾಯಿ ಬಿಡುತ್ತದೆ. ಅದರ ಒಳಗಿನ ಮಾಂಸ ತೆಗೆದು ''ಹುಳಿ'' ಮಾಡುತ್ತಾರೆ.

ಕೆಲವರು ಉಪ್ಪು, ಹುಳಿ, ಮೆಣಸು ಹಾಕಿ ''ಸುಕ್ಕಾ'' ಮಾಡುತ್ತಾರೆ. ಮುಸ್ಲಿಮರು ಆ ಮಾಂಸದ ತುಂಡನ್ನು ಅಕ್ಕಿ ಹಿಟ್ಟಿನ ಒಳಗಡೆ ಇಟ್ಟು ಸಣ್ಣ ಸಣ್ಣ ಗೋಲಿಯಾಕಾರದ ಉಂಡೆ ಮಾಡಿ ಗರಂಮಸಾಲೆ ಕೊಟ್ಟು ಬೇಯಿಸಿ ತಿನ್ನುತ್ತಾರೆ. ಹಸಿ ಸಿಗಡಿ ಸಿಕ್ಕಾಗಲು ಇದೇ ಬಗೆಯ ಉಂಡೆ ಮಾಡಿ ಬೇಯಿಸುತ್ತಾರೆ. ಸಿಗಡಿ, ಪಾಪ್ಲೇಟ್ ಹಾಗೂ ಇಸ್ವಾನ್ ಮೀನಿನಿಂದ ಬಿರ್ಯಾನಿ ಸಹ ಮಾಡುತ್ತಾರೆ. ಮೀನಿನ ಪದಾರ್ಥದಲ್ಲೆಲ್ಲಾ ಕರಾವಳಿಯ ಜನತೆಗೆ ಹೆಚ್ಚು ಪ್ರಿಯವಾದುದೆಂದರೆ ಒಣಮೆಣಸು, ಹುಳಿ, ಈರುಳ್ಳಿ, ಹಾಕಿ ಮಾಡಿದ ಉಪ್ಪು ಮೆಣಸಿನ ''ಮೀನು ಹುಳಿ'' ಕುಸುಬಲಕ್ಕಿ ಅನ್ನಕ್ಕೂ ''ಉಪ್ಪು ಮೆಣಸಿನ ಮೀನು ಹುಳಿ''ಗೂ ಸರಿಯಾದ ಹೊಂದಿಕೆ ಎನ್ನುತ್ತಾರೆ. ಒಟ್ಟಿನಲ್ಲಿ ಕರಾವಳಿಯ ಜನ ಮೀನು, ಸಿಗಡಿ ಮೊದಲಾದ ಜಲಚರಗಳಿಂದ ಯಾವುದೇ ಪದಾರ್ಥ ತಯಾರಿಸಲಿ ಅದು ಅವರಿಗೆ ರುಚಿಕರವಾಗಿಯೇ ಇರುವುದರಿಂದ ಸಮುದ್ರದಾಹಾರ ಅವರಿಗೆ ಹೆಚ್ಚು ತೃಪ್ತಿ ಕೊಡುವ ಶ್ರೇಷ್ಠ ಆಹಾರವಾಗಿದೆ.

ಆ) ಜಲಚರ ಪ್ರಾಣಿ ಬೇಟೆ – ವಿಧ – ವಿಧಾನಗಳು

ಮಾನವ ಶಾಸ್ತ್ರಜ್ಞರ ಪ್ರಕಾರ ಮೀನು ಬೇಟೆ 20 - 25 ಸಾವಿರ ವರ್ಷಗಳ ಹಿಂದೆ ಪ್ರಾರಂಭವಾಯಿತೆಂದು ತಿಳಿದು ಬರುತ್ತದೆ. ಅದಕ್ಕಿಂತ ಹಿಂದೆ ಗುಹೆಗಳಲ್ಲಿ ವಾಸವಾಗಿದ್ದ ಮಾನವ ಗೆಡ್ಡೆ - ಗೆಣಸು, ಹಣ್ಣು - ಹಂಪಲು ಹಾಗೂ ಬೇಟೆಯಾಡಿದ ಮಾಂಸ ತಿಂದು ಬದುಕುತ್ತಿದ್ದು. ನೀರಿನ ಮತ್ತು ಸಮುದ್ರದ ಪರಿಚಯವಾದ ನಂತರ ತೀರಪ್ರದೇಶದಲ್ಲಿ ಸತ್ತು ಬಿದ್ದ ಮೀನುಗಳನ್ನು ಆರಿಸಿ ತಿನ್ನುವ ಆಸಕ್ತಿ ಮೂಡಿದಾಗಲೇ ಅವನಿಗೆ ಮೀನು ಆಹಾರವಾಗಬಲ್ಲದೆಂಬ ಅರಿವಾದದ್ದು. ಆಗ ಮೀನನ್ನು ಹುಡುಕುತ್ತಾ ಹೋಗಿ ಕೈಗಳಿಂದ ತಡಕಾಡಿ ಮೀನು ಹಿಡಿಲು ಹಿಡಿಯಲು ಪ್ರಾರಂಭಿಸಿದ. ಕಾಲಕ್ರಮೇಣ ಕಲ್ಲು, ಬಿಲ್ಲು, ಬಾಣ, ಕೋಲುಗಳನ್ನು ಮೀನು ಬೇಟೆಯ ಆಯುಧವನ್ನಾಗಿಸಿಕೊಂಡ. ಇದು ಮೀನು ಬೇಟೆಯ ಪ್ರಾಥಮಿಕ ಹಂತ. ಈ ಹಂತದಲ್ಲಿ ಆಯುಧಗಳ ಬಳಕೆಯಲ್ಲಿ ಬೆಳವಣಿಗೆ ಕಂಡು ಬರುತ್ತದೆ. ಕಲ್ಲು ಮತ್ತು ಕೋಲಿನ ಆಯುಧಗಳು ಮರೆಯಾಗಿ ಎಲುಬಿನ ಮೊನೆಯ ಭರ್ಜಿಗಳು ಬಳಕೆಗೆ ಬಂದವು. ಕಬ್ಬಿಣದ ಭರ್ಜಿಗಳು ಮೀನು ಬೇಟೆಗೆ ಸಹಾಯಕವಾದವು. ಕಬ್ಬಿಣದ ಬಳಕೆ ಪ್ರಾರಂಭವಾದಾಗ ಗಾಳವು ಮೀನು ಬೇಟೆಯ ಪ್ರಮುಖ ಸಾಧನವಾಯಿತು.

ಕೆಲವು ದೇಶಗಳಲ್ಲಿ ಮೀನು ಬೇಟೆಗೆ ಪಕ್ಷಿಗಳನ್ನು ಬಳಸುತ್ತಿದ್ದುದು ತಿಳಿದು ಬರುತ್ತದೆ. ಮಲೇಶಿಯಾದ ನಡುಗಡ್ಡೆಗಳಲ್ಲಿ ಬಹಳ ಹಿಂದೆ ''ಕಾರ್ಮಾರಂಟ'' ಎಂಬ ಪಕ್ಷಿಯನ್ನು ಮೀನು ಹಿಡಿಯಲು ಬಳಸಲಾಗುತ್ತಿದ್ದರೆಂದು ತಿಳಿಯುತ್ತದೆ. ಮೊದಲು ಕಾರ್ಮಾರಂಟ ಪಕ್ಷಿಗೆ ಮೀನು ಹಿಡಿವ ತರಬೇತಿಯನ್ನು ಕೊಡುತ್ತಿದ್ದರು. ಇದರ ವಿಶೇಷ ಗುಣವೆಂದರೆ ಸಹಜವಾಗಿ ಅದು ಎಳು ಮೀನುಗಳನ್ನು ಮಾತ್ರ ಹಿಡಿದು ತರಬಲ್ಲ ಪಕ್ಷಿಯಾಗಿತ್ತು. ಇದರ ಕೊರಳಿಗೆ ಉಂಗುರ ಹಾಕಿ ಮೀನು ಹಿಡಿಯಲು ಬಿಡುತ್ತಿದ್ದರು. ಹಿಡಿದ ಮೀನನ್ನು ಆ ಪಕ್ಷಿ ನುಂಗಲು ಹೋದರೆ ಉಂಗುರ ಕುತ್ತಿಗೆಯನ್ನು ಒತ್ತುತ್ತಿತ್ತು. ಆಗ ಅದು ನುಂಗದೇ ಮೀನನ್ನು ತನ್ನ ಮಾಲೀಕನಿಗೆ ಒಪ್ಪಿಸಲು ಹಿಂದಿರುತ್ತಿತ್ತು. ಹೀಗೆಯೇ ಅದು ಏಳು ಮೀನು ಹಿಡಿದ ನಂತರ ಎಂಟನೆಯ ಮೀನನ್ನು ತನ್ನ ಆಹಾರವನ್ನಾಗಿಸಿಕೊಳ್ಳಲೆಂದು ಕುತ್ತಿಗೆಯಲ್ಲಿನ ಉಂಗುರವನ್ನು ತೆಗೆದು ಬಿಟ್ಟಾಗ ಅದು ಎಂಟನೇ ಮೀನನ್ನು ಹಿಡಿಯದೇ ಹಾರಿಹೋಯಿತೆಂದು ಆಗ ಮಾತ್ರ ಈ ಪಕ್ಷಿ ಏಳು ಮೀನನ್ನು ಮಾತ್ರ ಹಿಡಿಯಬಲ್ಲದೆಂದು ತಿಳಿಯಿತು. ಹೀಗೆಯೇ ನಾಯಿಯನ್ನು ಸಹ ಮೀನು ಬೇಟೆಗಾಗಿ ಬಳಸಿಕೊಂಡಿರುವ ನಿದರ್ಶನಗಳು ಸಿಗುತ್ತವೆ.

ಯೂರೋಪಿನಲ್ಲಿ ನೀರುನಾಯಿ ಅಥವಾ ನೀರು ಬೆಕ್ಕುಗಳನ್ನು ಮೀನು ಹಿಡಿಯಲು ಉಪಯೋಗಿಸುತ್ತಿದ್ದ. ಉಷ್ಣವಲಯದ ಸಮುದ್ರಗಳಲ್ಲಿ ''ರೆಮೋರಾ'' ಎಂಬ ಮೀನುಗಳನ್ನು ಸಮುದ್ರದ ಆಮೆ ಹಿಡಿಯಲು ಬಳಸಲಾಗುತ್ತಿತ್ತು. ಮೀನಿನ ಮೇಲಿರುವ ಈಜುರೆಕ್ಕೆಯೊಂದು ಮಾರ್ಪಾಡು ಹೊಂದಿ ಅಂಗವಾಗುತ್ತಿತ್ತು. ಈ ಹೀರು ಅಂಗಕ್ಕೆ ಆಮೆ ಸಿಕ್ಕಿಕೊಳ್ಳುತ್ತದೆ. ''ರಮೋರಾ'' ಕ್ಕೆ ದಾರ ಕಟ್ಟಿ ಸಮುದ್ರದಲ್ಲಿ ಬಿಟ್ಟು ಅದು ಆಮೆ ಹಿಡಿದ ನಂತರ ಅದನ್ನು ಮೇಲೆಳೆದುಕೊಳ್ಳುತ್ತಿದ್ದರು.

ಮೀನು ಬೇಟೆಗೆ ಚೀನಾದ ಜನ ಎಷ್ಟು ಮಹತ್ವ ನೀಡಿದ್ದಾರೆಂಬುದನ್ನು ಅವರಲ್ಲಿ ಬಳಕೆಯಲ್ಲಿರುವ ''ನೀವು ಅವ-ನಿಗೆ ಹೇಗೆ ಮೀನು ಹಿಡಿಯಬೇಕೆಂಬುದನ್ನು ಕಲಿಸಿದರೆ ಅವನಿಗೆ ಇಡೀ ಜೀವನಕ್ಕೆ ಊಟದ ವ್ಯವಸ್ಥೆ ಮಾಡಿದಂತೆ'' ಎಂಬ ನಾಣ್ಣುಡಿಯಿಂದ ಅರ್ಥ ವಾಗುತ್ತದೆ. ಇತ್ತೀಚಿಗೆ ಭಾರತದಲ್ಲೂ ಮೀನು ಬೇಟೆಗೆ ಹೆಚ್ಚಿನ ಪ್ರೋತ್ಸಾಹ ಕೊಡಲಾಗುತ್ತಿದೆ. ಅದೊಂದು ಉದ್ದಿಮೆ ಎಂದು ಪರಿಗಣಿಸಲಾಗಿದೆ.

ಕಡಲ ತೀರದ ಮೀನು ಬೇಟೆಯನ್ನು ಪ್ರಮುಖವಾಗಿ ನಾಲ್ಕು ಭಾಗಗಳಾಗಿ ವಿಂಗಡಿಸಲಾಗಿದೆ.

1. **ಕಡಲ ತೀರದ ಕೆಸರಿನಲ್ಲಿನ ಮೀನು ಬೇಟೆ :** ಕಡಲಂಚಿನ ಕೆಸರಿನಲ್ಲಿ ಮೀನುಗಳು ಆಹಾರ ಹುಡುಕುತ್ತಾ ಬರುವ ಸಂಭವವಿರುವುದರಿಂದ ಆ ಸ್ಥಳದಲ್ಲಿನ ಮೀನು ಬೇಟೆ ಕೆಲವು ಸಂದರ್ಭಗಳಲ್ಲಿ ಲಾಭದಾಯಕವಾಗಬಲ್ಲದು. ಅದೇ ರೀತಿ ಅಪಾಯಕಾರಿಯೂ ಹೌದು. ಏಕೆಂದರೆ ಕೆಸರಿನಲ್ಲಿ ಮೀನು ಹಿಡಿಯಲು ಹೋದವರು ಗಂಡಾಂತರವನ್ನು ಎದುರಿಸಬೇಕಾದ ಪ್ರಮೇಯ ಒದಗುತ್ತದೆ. ಈಗಲೂ ಸಮುದ್ರದಂಚಿನಲ್ಲಿ ಶೇಖರವಾಗಿರುವ ಕೆಸರಿನ ಪ್ರದೇಶವು ಮಳೆಗಾಲದಲ್ಲಿ ಮೀನು ಹಿಡಿಯಲು ಸುರಕ್ಷಿತ ಪ್ರದೇಶವೆಂದು ಮೀನುಗಾರರು ಭಾವಿಸುತ್ತಾರೆ. ಆ ಪ್ರದೇಶವನ್ನು ''ಮಡಿ'' ಪ್ರದೇಶವೆಂದು ಕರೆಯುತ್ತಾರೆ. ಸಮುದ್ರವು ಉಳಿದೆಡೆಗಳಲ್ಲೆಲ್ಲಾ ಉಗ್ರವಾಗಿದ್ದಾಗ ''ಮಡಿ'' (ಕೆಸರು) ಇರುವ ಪ್ರದೇಶದಲ್ಲಿ ಶಾಂತವಾಗಿರುತ್ತದೆ.

2. **ಸಮುದ್ರದ ಒತ್ತಡವಿರುವ ಪ್ರದೇಶದಲ್ಲಿನ ಮೀನು ಬೇಟೆ :** ಕೆಲವು ಸಂದರ್ಭಗಳಲ್ಲಿ ಸಮುದ್ರದ ಒತ್ತಡದಿಂದ ನದಿಗಳಲ್ಲಿ ನೀರು ಹಿಂದೆ ನುಗ್ಗುತ್ತದೆ. ಆ ಪ್ರದೇಶದಲ್ಲಿ ಮೀನು ಬೇಟೆ ಪ್ರಯೋಜನಕಾರಿಯಾದದ್ದು. ಸಮುದ್ರದ ಒತ್ತಡಕ್ಕೆ ಮೀನು ಒಳಗೆ ದೂಡಲ್ಪಡುತ್ತದೆ. ಆಗ ಆ ಪ್ರದೇಶವು ಮೀನಿನ ಪ್ರದೇಶವಾಗಬಲ್ಲದು. ಆದ್ದರಿಂದ ಅಲ್ಲಿ ಮೀನು ಹೆಚ್ಚು ಹಿಡಿಯಬಹುದೆಂದು ಮೀನುಗಾರರು ಭಾವಿಸುತ್ತಾರೆ.

3. **ಸಮುದ್ರ ತೀರದ ಮೀನು ಬೇಟೆ :** ಇದು ಪ್ರಾಚೀನ ಕಾಲದಿಂದಲೂ ನಡೆದು ಬಂದು ಬೇಟೆಯಾಗಿದೆ. ಮೊದಲು ಸಮುದ್ರದೊಳ ಹೊಕ್ಕುವ ದೊಡ್ಡ ದೊಡ್ಡ ನಾವೆಗಳು ಅಪರೂಪವಾಗಿದ್ದರಿಂದ ಚಿಕ್ಕ ಚಿಕ್ಕ ದೋಣಿಗಳ ಮೀನುಗಾರರು ಸಮುದ್ರ ತೀರದಲ್ಲಿ ಮಾತ್ರ ಬೇಟೆಯಾಡುತ್ತಿದ್ದರು. ಕೆಲವು ಸಂದರ್ಭಗಳಲ್ಲಿ ಇದೂ ಸಹ ಅಪಾಯಕಾರಿಯೇ ಆಗಿತ್ತು. ದೊಡ್ಡ ಮೀನು ಇಲ್ಲವೇ ಬಿರುಗಾಳಿ ದೋಣಿಯನ್ನು ಬುಡ ಮೇಲೆ ಮಾಡುವ ಸಂದರ್ಭ ಹೆಚ್ಚಿತ್ತು. ಇಂದಿಗೂ ಕಡಲ ತೀರದ ಮೀನು ಬೇಟೆ ಮೀನುಗಾರರ ಬದುಕಿಗೆ ಆಧಾರವಾಗಿದೆ. ಆದರೆ ಹಿಂದಿನಷ್ಟು ಇಂದು ಚಿಕ್ಕ ದೋಣಿಯ ಮೀನುಗಾರರಿಗೆ ಇದು ಪ್ರಯೋಜನಕಾರಿಯಾಗಿಲ್ಲ. ಏಕೆಂದರೆ ಯಾಂತ್ರಿಕ ದೋಣಿಗಳ ಶಬ್ದಕ್ಕೆ ಮತ್ತು ಹೊಸ ತಂತ್ರದ ಬಲೆಗೆ ಹೆದರುವ ಮೀನು ತೀರದೆಡೆ ಬರುವುದು ಕಡಿಮೆಯಾಗಿದೆ. ಕಲ್ಲು ಬಂಡೆಗಳಿರುವ ಸ್ಥಳಗಳಲ್ಲಿ ಮಾತ್ರ ಪಾತೀ ದೋಣಿಯವರ ಮೀನು ಬೇಟೆ ಸಾಗುತ್ತಿದೆ. ಹೋಲಿಕೆ ಮಾಡಿದರೆ ಸಮುದ್ರದೊಳ ಪ್ರದೇಶದ ಮೀನುಬೇಟೆಯು ತೀರಿ ಪ್ರದೇಶದ ಮೀನು ಬೇಟೆಗಿಂತ ಹೆಚ್ಚು ಪ್ರಯೋಜನಕಾರಿಯಾಗಿದೆ.

4. **ಸಮುದ್ರದೊಳ ಪ್ರದೇಶದ ಮೀನು ಬೇಟೆ :** ಈ ಮೀನುಗಾರಿಕೆ ಅತ್ಯಂತ ಕಠಿಣ, ಭಯಾನಕ ಮತ್ತು ಮಾರಕವಾದುದು. ಧೈರ್ಯವಿದ್ದವರಿಗೆ, ಚಾಣಾಕ್ಷತನವಿದ್ದವರಿಗೆ ಇದು ಹೆಚ್ಚು ಲಾಭದಾಯಕ. ಬಹಳ ಹಿಂದಿನಿಂದ ನಡೆದು ಬಂದ ಮೀನುಗಾರಿಕೆ ಇದಾಗಿದೆ. ಇದರಲ್ಲಿ ಎಲ್ಲಾ ವಿಧದ ಮೀನು ಬೇಟೆಗಳು ನಡೆಯುತ್ತವೆ. ಆದರೆ ದೊಡ್ಡ ಯಾಂತ್ರಿಕ ದೋಣಿ ಹಾಗೂ ಆಧುನಿಕ ತಂತ್ರದ ಬಲೆಗಳು ಈ ಬೇಟೆಗೆ ಅವಶ್ಯಕವೆನಿಸುತ್ತದೆ.

ಬೇಟೆಯ ವಿಧಗಳು

ಸಮುದ್ರದ ಪ್ರಾಣಿ ಬೇಟೆ ಸರಿಯಾದ ರೀತಿಯಲ್ಲಿ ಪ್ರಾರಂಭವಾದದ್ದು ಕಬ್ಬಿಣ ಕಂಡು ಹಿಡಿದ ನಂತರ. ಅದಕ್ಕಿಂತ ಮುಂಚೆ ಬೇಟೆಗೆ ಅಗತ್ಯವಾದ ಸಾಧನಗಳು ದೊರೆಯದೇ ಇದ್ದುದರಿಂದ ಜಲಚರ ಪ್ರಾಣಿಗಳ ಬೇಟೆ ಉದ್ಯೋಗ ಸ್ವರೂಪ ಪಡೆದಿರಲಿಲ್ಲ. ಮನರಂಜನೆ, ಹವ್ಯಾಸದ ಕಾರಣಕ್ಕಾಗಿ ರೂಪದಲ್ಲಿ ಆರಂಭಗೊಂಡ ಜಲಚರ ಪ್ರಾಣಿ ಬೇಟೆ ಕಾಲಕ್ರಮೇಣ ಉದ್ಯೋಗವಾಗಿ, ಉದ್ದಿಮೆಯ ರೂಪ ತಾಳುವಷ್ಟು ಪ್ರಸಿದ್ಧವಾಯಿತು.

ಕಡಲ ಬೇಟೆಯಲ್ಲಿ ಉರ್ಲು ಹಾಕುವುದು ಮತ್ತು ''ಅಡ್ಡ ಹಾಕುವುದು'' ಅತೀ ಪ್ರಾಚೀನವಾದ ಬೇಟೆಯ ವಿಧಾನಗಳಾಗಿವೆ.

1. '' ಉರ್ಲು '' ಹಾಕುವುದರಿಂದ ಮೀನು ಹಿಡಿಯುವ ಪದ್ಧತಿ ಇದ್ದಾಗ ಪ್ರಾರಂಭಿಸಿದಾಗ ಬೇಟೆಯಲ್ಲಿ ಕಬ್ಬಿಣದ ಉಪಯೋಗದ ಅರಿವು ಮಾನವನಲ್ಲಿರಲಿಲ್ಲ. '' ಉರ್ಲು '' ಹಾಕಿ ಮೀನು ಹಿಡಿವ ಪ್ರಯತ್ನವು ಮಾನವನ ಆರಂಭದ ಪ್ರಯತ್ನವೆನ್ನಬಹುದು. ದಾರದಿಂದ ಉರ್ಲು ತಯಾರಿಸಿ ಅದನ್ನು ಕಲ್ಲು ಬಂಡೆಯ ಬದಿಯಲ್ಲಿ ಇಲ್ಲವೆ ತೀರ ಪ್ರದೇಶದಲ್ಲಿ ಹಾಕಿ ಮೀನು ಬರುವುದನ್ನೇ ಕಾಯುತ್ತಾ ಕುಳಿತು ಮೀನು ಉರ್ಲಿನ ಮೂಲಕ ಹಾದು ಹೋಗುವಾಗ ಮೇಲಿನಿಂದ ದಾರವನ್ನು ಜಗ್ಗಿದ ತಕ್ಷಣ ಮೀನು ಉರುಲಿನಲ್ಲಿ ಸಿಕ್ಕಿ ಬೀಳುತ್ತಿತ್ತು. ರಿದರ ಮತ್ತೊಂದು ವಿಧದಲ್ಲಿ ಕೆಲವು ವೇಳೆ ಮೀನು ಕಟ್ಟಿ ಅದನ್ನು ತಿನ್ನಲು ಬಂದ ಮೀನಿಗೆ ಉರುಲು ಹಾಕಿ ಹಿಡಿಯುತ್ತಿದ್ದರು. ಇದರಿಂದ ಸಮುದ್ರದ ಮೇಲ್ಪದರದಲ್ಲಿ ಓಡಾಡುವ ಮೀನನ್ನು ಮಾತ್ರ ಹಿಡಿಯಲು ಸಾಧ್ಯವಾಗುತ್ತಿತ್ತು. ಇದು ಮೀನು ಬೇಟೆಯ ಸರಿಯಾದ ವಿಧಾನವಾಗಿರದೆ ಇದ್ದುದರಿಂದ ಉರ್ಲು ಹಾಕುವ ವಿಧಾನದ ಮೀನು ಬೇಟೆ ಅಷ್ಟೇನು ಪ್ರಯೋಜನಕಾರಿಯಾಗುತ್ತಿರಲಿಲ್ಲ.

2. **'' ಅಡ್ಡ ಹಾಕುವುದರಿಂದ '' ಮೀನು ಹಿಡಿಯುವುದು :** ಸಮುದ್ರಕ್ಕೆ ನದಿ ಸೇರುವ ಸ್ಥಳದಲ್ಲಿ ಕೆಲವೊಮ್ಮೆ ನೀರು ಏರುವುದು ಕೆಲವೊಮ್ಮೆ ಇಳಿಯುವುದನ್ನು ಗಮನಿಸಿದ ಮೀನುಗಾರರು ನದಿಗೆ ಅಡ್ಡಲಾಗಿ ಮರದ ಕೊಂಬೆ, ಸೊಪ್ಪು, ಬಳ್ಳಿ ಮೊದಲಾದವುಗಳನ್ನು ಹಾಕಿ ನದಿಯಲ್ಲಿ ನೀರು ಇಳಿದಾಗ ಅಲ್ಲಿ ಸಿಕ್ಕಬೀಳುವ ಮೀನನ್ನು ಹಿಡಿಯುತ್ತಿದ್ದರು . ಈ ವಿಧಾನವು ಮುಂದೆ ಬಲೆ ತಯಾರಿಸುವ ಜ್ಞಾನ ಮೂಡಿಸಲು ಸಹಕಾರಿಯಾಗಿರುವಂತೆ ಕಂಡು ಬರುತ್ತದೆ.

ಈ ಎರಡು ವಿಧಾನಗಳು ಮೀನು ಬೇಟೆಯ ಸರಿಯಾದ ವಿಧಾನಗಳಲ್ಲದ್ದರಿಂದ ಕಾಲಕ್ರಮೇಣ ಮರೆಯಾಗುತ್ತಾ ಹೋಗಿ ಆ ಸ್ಥಾನದಲ್ಲಿ ಆಧುನಿಕ ಬೇಟೆಯ ವಿಧಾನಗಳು ಜಾರಿಗೆ ಬಂದವು. ಈಗಿನ ಕಡಲ ಬೇಟೆಯನ್ನು ಪ್ರಮುಖವಾಗಿ ಮೂರು ವಿಧದಲ್ಲಿ ಕಾಣಬಹುದು.

1. ಗಾಳದ ಬೇಟೆ.
2. ಬಲೆ ಬೇಟೆ .
3. ಕುಳಿ ಬೇಟೆ.

1. **ಗಾಳದ ಬೇಟೆ :** ಮಾನವ ಕಡಲ ಬೇಟೆಗಾಗಿ ಉಪಯೋಗಿಸಿದ ಕಬ್ಬಿಣದ ಮೊದಲ ಸಾಧನವೆಂದರೆ ಗಾಳ. ಇದು ಬಹು ಪ್ರಾಚೀನವಾದ ಸಾಧನವಾಗಿರುವುದರ ಜೊತೆಗೆ ಮಾನವನಲ್ಲಿನ ತಾಂತ್ರಿಕ ಜ್ಞಾನದ ಪ್ರಾಥಮಿಕ ಹಂತವನ್ನು ಪರಿಚಯಿಸುತ್ತದೆ. ಕೊಕ್ಕೆಯಾಕಾರದ ಪ್ರಾರಂಭವಾದ ಒಂಟಿ ಗಾಳವು ಕಾಲಕಳೆದಂತೆ ಅನುಭವ ಜ್ಞಾನದಿಂದ ವಿವಿಧ ರೂಪ ಪಡೆಯಿತು. ಅಲ್ಲದೆ ಬಳಕೆಯಲ್ಲೂ ಸಹ ಬದಲಾವಣೆಯಾಯಿತು.

ಗಾಳದ ಬಗೆಗಳು :

1. ಈಟಿಗಾಳ
2. ಛಡಿಗಾಳ
3. ಲಾಂಬೋರಿಗಾಳ
4. ದಾಲಗಾಳ
5. ಚಮುಚೆ ಗಾಳ
6. ದೋರಿ ಓಡಿಸೋಗಾಳ
7. ಬೇಪ್ ಗಾಳ
8. ನಿಲ್ಸೊ ಗಾಳ
9. ರಂಪಣ ಗಾಳ
10. ಕಂಡಿಗೆ ಗಾಳ
11. ಮುರಿನ್ ಗಾಳ
12. ಹಾರ್ ಗಾಳ
13. ಲಾಂಗ್ ಲೈನ್ ಗಾಳ

1. ಈಟಿಗಾಳ : ಇದನ್ನು ಕತ್ತಿ ಮೀನು, ತಿಮಿಂಗಿಲ, ಕಡಲಹಂದಿ, ಮೊದಲಾದ ದೊಡ್ಡ ಗಾತ್ರದ ಜಲಚರ ಪ್ರಾಣಿಗಳನ್ನು ಬೇಟೆಯಾಡಲು ಬಳಸಲಾಗುತ್ತದೆ. ಇದು ಆರು ಅಡಿ ಉದ್ದವಿದು 600 ಕಿ. ಗ್ರಾಂ ತೂಕವಿರುತ್ತದೆ. ಈಟಿ ಗಾಳದ ಮೊನೆಗೆ ಸಿಡಿಮದ್ದು ಇಲ್ಲವೆ ವಿಷದಪೊಟ್ಟಣಗಳನ್ನು ಸಿಕ್ಕಿಸುತ್ತಾರೆ. ದೊಡ್ಡ ಮೀನುಗಳು ಗಾಳವನ್ನು ಬಾಯಲ್ಲಿ ಹಿಡಿದ ತಕ್ಷಣ ಸಿಡಿಮದ್ದು ಸಿಡಿಯುತ್ತದೆ. ವಿಷ ದಪೊಟ್ಟಣಗಳ ಸಹಿತ ಗಾಳ ನುಂಗಿದ ಮೀನು ಕೆಲವೇ ಕ್ಷಣಗಳಲ್ಲಿ ಸಾಯುತ್ತದೆ. ಅನಂತರ ಅದನ್ನು ಮೇಲೆಳೆದು ಕೊಳ್ಳುತ್ತಾರೆ. ಈಟಿಗಾಳದ ಬೇಟೆ ಸಮುದ್ರದ ಒಳ ಪ್ರದೇಶದಲ್ಲಿ ಮಾತ್ರ ನಡೆಯುವಂತಹದು.

2. ಛಡಿಗಾಳ : ಛಡಿಗಾಳ ಉಳಿದ ಗಾಳದಲ್ಲೆಲ್ಲಾ ಸರಳ ಹಾಗೂ ಕಡಿಮೆ ವೆಚ್ಚತಾಗುವಂತಹದು. ಇದು ಮೀನು ಬೇಟೆಯ ಪ್ರಾಚೀನ ಸಾಧನ. ಸಾಮಾನ್ಯನಿಗೂ ಬಹು ಸುಲಭವಾಗಿ ಕೈಗೆಟಕುವಂತಹದು. ಒಂದು ಬಿದಿರಿನ ಛಡಿಗೆ ಗಾಳದ ದಾರವನ್ನು ಕಟ್ಟಿ, ಗಾಳದ ತುದಿಗೆ ಚಿಕ್ಕ ಮೀನು ಇಲ್ಲವೆ ಮಾಂಸದ ತುಂಡನ್ನು ಸಿಕ್ಕಿಸಿ ನೀರಲ್ಲೆಸೆಯಲಾಗುತ್ತದೆ. ಗಾಳದಿಂದ ನಾಲ್ಕೈದು ಮಾರಿನ ಅಂತರದಲ್ಲಿ ಒಂದು ಉದ್ದನೆಯ ಬೆಂಡು ಕಟ್ಟಿರುತ್ತಾರೆ. ಆ ಬೆಂಡು ನೀರಿನ ಮೇಲೆ ಕುಣಿಯುತ್ತಾ ಮುಳುಗು ಹಾಕುವುದರ ಮೂಲಕ ಗಾಳವನ್ನು ಮೀನು ನುಂಗುತ್ತಿರುವುದನ್ನು ಬೇಟೆಗಾರ ತಿಳಿಯುತ್ತಾನೆ. ಬೆಂಡು ಪೂರ್ಣವಾಗಿ ನೀರಿನೊಳಗಡೆ ಮುಳುಗಿದರೆ ಮೀನು ಸಂಪೂರ್ಣವಾಗಿ ಗಾಳ ನುಂಗಿದೆ ಎಂದು ತಿಳಿದು ಛಡಿಯನ್ನು ಮೇಲೆತ್ತಲಾಗುತ್ತದೆ. ಛಡಿಗಾಳದ ಬೇಟೆಯು ಸಮುದ್ರದಲ್ಲಿರುವ ಬಂಡೆಗಳ ಸುತ್ತಮುತ್ತ ನಡೆಯುತ್ತದೆ. ಇಲ್ಲವೆ ನದಿ ಸಮುದ್ರಕ್ಕೆ ಸೇರುವ ಸ್ಥಳದಲ್ಲಿ ನಡೆಯುತ್ತದೆ. ಛಡಿಗಾಳದ ಮೀನುಬೇಟೆ ಉದ್ಯೋಗವಾಗುವುದಕ್ಕಿಂತ ಹೆಚ್ಚಾಗಿ ಹವ್ಯಾಸದ ಬೇಟೆ ಯಾಗಿದೆ.

3. ಲಂಬೋರಿಗಾಳ : ಲಂಬೋರಿ ಎಂಬ ಪದವು ಕೊಂಕಣ ಪದವಾದ ''ಲಾಂಚ್ ದೋರಿ'' ಎಂಬುದರಿಂದ ಬಂದಿದೆ ಎಂದು ವೈ. ಎಸ್. ದುರ್ಗೇಕರರು ಅಭಿಪ್ರಾಯ ಪಡುತ್ತಾರೆ. ಲಾಂಚ್ ಎಂದರೆ ಉದ್ದ, ದೋರಿ ಎಂದರೆ ದಾರ. ಉದ್ದದಾರದ ಗಾಳವು ಲಂಬೋರಿಗಾಳ ವೆಂದು ಹೆಸರು ಪಡೆದಿದೆ . ಇದರಲ್ಲಿನ ದಾರದ ಉದ್ದ ಸುಮಾರು 20 ರಿಂದ 30 ಗಜಗಳಿರುತ್ತವೆ. ಅದು ನೈಲಾನ್ ಇಲ್ಲವೇ ಗಟ್ಟಿ ನೂಲಿನದ್ದಾಗಿರುತ್ತದೆ. ದಾರದ ಒಂದು ತುದಿಯಲ್ಲಿ 1 ಇಂಚು ಉದ್ದದ ಸೀಸದ ತುಂಡಿರುತ್ತದೆ. ಇದರ ಮೇಲೆ ಮೂರು ಇಲ್ಲವೆ ನಾಲ್ಕು ಗಾಳಗಳನ್ನು ಕಟ್ಟಿರುತ್ತಾರೆ. ಗಾಳಕ್ಕೆ ಮೀನು ಇಲ್ಲವೆ ಮಾಂಸದ ತುಂಡುಗಳನ್ನು ಸಿಕ್ಕಿಸಿ ಸಮುದ್ರದಲ್ಲಿ ಎಸೆಯುತ್ತಾರೆ. ತಳದಲ್ಲಿ ಸೀಸದ ತುಂಡಿರುವುದರಿಂದ ಗಾಳವನ್ನು ಅದು ಸಮುದ್ರದಾಳಕ್ಕೆ ಕೊಂಡೊಯ್ಯುತ್ತದೆ. ಮೀನು ಗಾಳವನ್ನು ನುಂಗುವುದನ್ನರಿಯಲು ದಾರವನ್ನು ಕಿವಿಯ ಬದಿಯಲ್ಲಿ ಹಿಡಿದು ''ಕರ್ ಕರ್'' ಎಂದು ಶಬ್ದ ಬರುತ್ತಿರಬಹುದೇ ಎಂಬುದನ್ನು ಗಮನಿಸಲಾಗುವುದು. ಇಲ್ಲವೆ ಒಮ್ಮೆ ದಾರವನ್ನು ಸ್ವಲ್ಪ ಮೇಲಕ್ಕೆಳೆದು ಪರೀಕ್ಷಿಸಲಾಗುವುದು. ದಾರ ಭಾರವಾಗಿದ್ದರೆ ಮೀನು ಗಾಳ ನುಂಗಿದೆ ಎಂದು ಭಾವಿಸಿ ಅದನ್ನು ಮೆಲ್ಲನೆ ಮೇಲೆಳೆದುಕೊಳ್ಳುತ್ತಾರೆ. ಕಡಲ ತೀರದಲ್ಲಿ ನಿಂತು ಇಲ್ಲವೆ ಸಮುದ್ರದೊಳಗಡೆ ದೋಣಿಯಲ್ಲಿ ಹೋಗಿ ಲಂಬೋರಿಗಾಳದ ಬೇಟೆಯಾಡುತ್ತಾರೆ.

4. ವಾಲ್ ಗಾಳ : ವಾಲ್‌ಗಾಳದ ದಾರವನ್ನು ತಯಾರಿಸುವುದೇ ಒಂದು ದೊಡ್ಡ ಕೆಲಸ. ಹೇಗೆಂದರೆ ಇಪ್ಪತ್ತು ನಂಬರಿನ ನೂಲಿನ ಹದಿನೈದು ಇಪ್ಪತ್ತು ಎಳೆಗಳನ್ನು ಕೂಡಿಸಿ ಹೆಣೆದು ಎರಡು ಅಥವಾ ಮೂರು ಮಿಲಿಮೀಟರಿನಷ್ಟು ದಪ್ಪದ ಹುರಿ ಮಾಡುತ್ತಾರೆ. ಇದರ ಉದ್ದವು 55 ರಿಂದ 65 ಮೀಟರುಗಳಾಗಿರುತ್ತದೆ. ಇದಕ್ಕೆ ''ವಾಲ ಕಾಂಡ್'' ಎಂದು ಕರೆಯುತ್ತಾರೆ. ಈ ವಾಲಕಾಂಡವನ್ನು ಬಿಗಿಬರುವಂತೆ ಹೆಣೆದು ಅದನ್ನು ''ತೆಂಬರಿಕಾಯಿ'' ಯ ರಸದಲ್ಲಿ ಅದ್ದಿ ಒಣಗಿಸುತ್ತಾರೆ. ಇಂತಹ ನೂರಿನ್ನೂರು ವಾಲಕಾಂಡಗಳನ್ನು ಕೂಡಿಸಿ ಒಂದು ''ವಾಲ್'' ತಯಾರಿಸುತ್ತಾರೆ. ಇದರ ಉದ್ದ ಸಾಮಾನ್ಯವಾಗಿ 5500 ಮೀಟರುಗಳಿರುತ್ತದೆ. ಅದಕ್ಕೆ ಒಂದು ಸಾವಿರದಿಂದ ಐದು ಸಾವಿರ ಗಾಳಗಳನ್ನು ಕಟ್ಟುತ್ತಾರೆ. ಆ ಗಾಳಗಳಿಗೆ ''ಕೀಲಿಸಮೀನು'' ಇಲ್ಲವೆ ''ನುಚಕಿ'' ಮೀನುಗಳ ತುಂಡುಗಳನ್ನು ಸಿಕ್ಕಿಸಿ ಸಮುದ್ರದೊಳಗಡೆ ಬಿಟ್ಟು ಬರುತ್ತಾರೆ. ''ವಾಲ್ ''ದ ಎರಡೂ ತುದಿಗೂ ಕಲ್ಲು ಇಲ್ಲವೆ ಕಬ್ಬಿಣದ ತುಂಡುಗಳನ್ನು ಕಟ್ಟಿರುವುದರಿಂದ ಗಾಳಗಳನ್ನು ಅವು ಆಳಕ್ಕೆ ಕೊಂಡೊಯ್ಯುತ್ತವೆ. ಮೇಲ್ಭಾಗದಲ್ಲಿ ಮುಚ್ಚಳವನ್ನು ಸೀಲ್ ಮಾಡಿದ ಸೀಮೆ ಎಣ್ಣೆಯ ಡಬ್ಬಗಳನ್ನು ಕಟ್ಟಿರುತ್ತಾರೆ. ಸಾಮಾನ್ಯವಾಗಿ ವಾಲ್‌ಗಾಳವನ್ನು ಒಂದು ದಿನ ಮುಂಚಿತವಾಗಿ ಸಮುದ್ರದಲ್ಲಿ ಬಿಟ್ಟು ಮಾರನೇ ದಿನ ಹೋಗಿ ಅದರಲ್ಲಿ ಮೀನು ಸಿಕ್ಕರುವುದು, ಇಲ್ಲದ್ದನ್ನು ಪರೀಕ್ಷಿಸುತ್ತಾರೆ. ಕೆಲವು ಸಂದರ್ಭಗಳಲ್ಲಿ ಗಾಳ ನುಂಗಿದ ದೊಡ್ಡ ಮೀನುಗಳು ವಾಲ್‌ಗಾಳವನ್ನು ಎಳೆದುಕೊಂಡು ಹೋಗಿ ಸ್ಥಳ

ಬದಲಾವಣೆ ಮಾಡುವುದೂ ಉಂಟು. ಈ ಗಾಳದಿಂದ ಶೇಡೆ, ಗೋಬ್ರಾ, ಹೋಳ, ಸೊರಾ, ತೊರ್ಕೆ, ಕೂರ್ಮಾ, ಮೊದಲಾದ ಜಾತಿಯ ದೊಡ್ಡ ಮೀನುಗಳನ್ನು ಹಿಡಿಯುತ್ತಾರೆ. ವಾಲ್‌ಗಾಳದ ಬೇಟೆ ನಡೆದರೆ ಹೆಚ್ಚು ಲಾಭದಾಯಕ. ಸಮುದ್ರ ಶಾಂತವಾಗಿರುವಾಗ ಮಾತ್ರ ಈ ಬೇಟೆಗೆ ಅವಕಾಶವಿದೆ.

5. ಚಮಚ ಗಾಳ : ಇದು ವಿಶಿಷ್ಟ ರೂಪದ ಗಾಳ. ಸ್ಟೀಲಿನ ಹೊಳೆವ ಚಮಚದ ಕೆಳಗಡೆ ಮೂರು ಗಾಳಗಳನ್ನು ಸಿಕ್ಕಿಸಿರುತ್ತಾರೆ. ಮೇಲ್ಭಾಗದಲ್ಲಿನ ತಿರುಗಣೆಗೆ ಚಮಚ ಗಾಳವನ್ನು ಕಟ್ಟಿ, ತಿರುಗಣೆಯ ಮತ್ತೊಂದು ತುದಿಗೆ ದಾರವನ್ನು ಕಟ್ಟಿರುತ್ತಾರೆ. ದೋಣಿಯಲ್ಲಿ ಕುಳಿತು ಚಮಚ ಗಾಳವನ್ನು ಸಮುದ್ರದಾಳಕ್ಕೆ ಬಿಡುತ್ತಾರೆ. ಅದು ಸುಮಾರು ನೂರರಿಂದ ಇನ್ನೂರು ಅಡಿ ಆಳದ ವರೆಗೆ ಹೋಗುತ್ತದೆ. ಈ ಗಾಳದಲ್ಲಿ ಗಮನಾರ್ಹವಾದ ಅಂಶವೆಂದರೆ ಗಾಳಕ್ಕೆ ಮೀನು ಅಥವಾ ಮಾಂಸ ಸಿಕ್ಕಿಸದೇ ಬೇಟೆಯಾಡುವುದು . ದೋಣಿಯಿಂದ ಸಮುದ್ರದಾಳಕ್ಕೆ ಬಿಟ್ಟ ಚಮಚಗಾಳದ ದಾರದ ಮತ್ತೊಂದು ತುದಿಯನ್ನು ಕೈಯಲ್ಲಿ ಹಿಡಿದು ದೋಣಿ ನಡೆಸುತ್ತಾ ಬರುತ್ತಾರೆ. ಆಗ ಒಳಗಡೆ ಚಮಚವು ಗಿರಿಗಿಟಲಿಯಂತೆ ''ಗರ್'' ಎಂದು ತಿರುಗುತ್ತಾ ಬರುತ್ತದೆ. ಮೀನು ಹೊಳೆಯುವ ಚಮಚವನ್ನು ಆಹಾರವೆಂದು ಭಾವಿಸಿ ಗಾಳ ನುಂಗುತ್ತದೆ. ಹೊಟ್ಟೆಯಲ್ಲಿ ಗಾಳ ಚುಚ್ಚುವ ಕಾರಣದಿಂದ ಅದು ಗಾಬರಿಗೊಂಡು ಗಾಳವನ್ನು ಬೇರೆಡೆಗೆ ಎಳೆದೊಯ್ಯಲು ಪ್ರಯತ್ನಿಸುತ್ತದೆ. ಅದಕ್ಕೆ ವಿರುದ್ಧವಾಗಿ ಮೀನುಗಾರರು ದಾರವನ್ನು ಬಿಟ್ಟು ಬಿಟ್ಟು ಮೇಲಕ್ಕೆಳೆಯುತ್ತಾ ಮೀನಿಗೆ ಆಯಾಸ ಉಂಟಾಗುವಂತೆ ಮಾಡುತ್ತಾರೆ. ಕೊನೆಗೆ ದಣಿದ ಮೀನು ದಾರದ ಸೆಳೆತಕ್ಕೆ ಒಳಗಾಗಿ ಮೇಲೆ ಬರುತ್ತದೆ. ಮೀನುಗಾರರು ಚಮಚಗಾಳದಿಂದ ಬೇಟೆಯಾಡುವುದು ಸಪ್ಟೆಂಬರ್‌ನಿಂದ ಮಾರ್ಚ್‌ರ ವರೆಗೆ. ಇದರಿಂದ ಇಸ್ವಾನ್, ಗೋಬ್ರಾ, ಸೋರೆ, ದಾಯಣಿ, ರಾವುಸ್, ಘೋಳ ಮೊದಲಾದ ದೊಡ್ಡ ದೊಡ್ಡ ಮೀನುಗಳನ್ನು ಹಿಡಿಯುತ್ತಾರೆ. ಇತ್ತೀಚಿಗೆ ಚಮಚಗಾಳವನ್ನು ಮೀರಿಸುವಂತಹ ಗಾಳಗಳು ಬಂದಿರುವುದರಿಂದ ಚಮಚಗಾಳದ ಬೇಟೆ ತನ್ನ ಮಹತ್ವವನ್ನು ಕಳೆದುಕೊಳ್ಳುತ್ತಿದೆ.

6. ದೋರಿ ಓಡಿಸೋ ಗಾಳ : ಇದು ಚಮಚಗಾಳವನ್ನೇ ಹೋಲುತ್ತದೆ. ಆದರೆ ಇದರಲ್ಲಿ ಗಾಳದ ಮೇಲೆ ಚಮಚ ಇರದೆ ಕೇವಲ ತಿರುಗಣೆ ಮಾತ್ರ ಇರುತ್ತದೆ. ತಿರುಗಣೆಯ ಮೇಲೆ ಸೀಸದ ಗುಂಡಿರುತ್ತದೆ. ದೋಣಿಯಿಂದ ಗಾಳವನ್ನು ಸಮುದ್ರಕ್ಕೆಸೆದು ಅನಂತರ ದೋಣಿ ನಡೆಸುತ್ತಾ ಹೋಗುತ್ತಾರೆ. ಆಗ ಗಾಳವು ನೀರಿನ ಒಳಗಡೆ ತಿರುಗುತ್ತಾ ಬರುತ್ತದೆ. ಅದನ್ನು ಕಂಡ ಮೀನು ಯಾವುದೋ ಆಹಾರದ ಪ್ರಾಣಿಯೆಂದು ತಿಳಿದು ಗಾಳವನ್ನು ನುಂಗುತ್ತದೆ. ಆಗ ದಾರವನ್ನು ಸುತ್ತಿಕೊಳ್ಳುತ್ತಾ ಹೋಗಿ ಮೀನನ್ನು ದೋಣಿಯೊಳಗೆ ಎಳೆದು ಕೊಳ್ಳುತ್ತಾರೆ. ''ದೋರಿ ಓಡಿಸೋ ಗಾಳ'' ದ ಬೇಟೆಯು ಅಕ್ಟೋಬರ್ ಮಾಹೆಯಿಂದ ಮಾರ್ಚ್ ಮಾಹೆಯ ವರೆಗೆ ನಡೆಯುತ್ತದೆ. ಅದರಲ್ಲಿ ಮೊಗ್ಗು, ಇಸ್ವಾನ್, ಕೊಕ್ಕರೆ, ಚೇಳು, ಮೊದಲಾದ ಜಾತಿಯ ದೊಡ್ಡ ಮೀನುಗಳನ್ನು ಹಿಡಿಯುತ್ತಾರೆ. ಈ ಬೇಟೆಗೆ ನಾಡ ದೋಣಿಗಳನ್ನು ಬಳಸುವುದು ಹೆಚ್ಚು. ಆ ದೋಣಿಯಲ್ಲಿ ಒಬ್ಬಿಬ್ಬರು ಮಾತ್ರ ಬೇಟೆಗೆ ಹೋಗುತ್ತಾರೆ.

7. ಬೇಪ್ ಗಾಳ : ಈ ಗಾಳವು ಸಾಮಾನ್ಯವಾಗಿ ವಾಲ್ ಗಾಳವನ್ನು ಹೋಲುತ್ತದೆ. ಈ ಗಾಳದ ಸ್ವರೂಪವೆಂದರೆ ಸುಮಾರು 1000 ಮಾರಿನಷ್ಟು ನೈಲಾನ್ ಹಗ್ಗಕ್ಕೆ ಆರು ಮಾರಿನ ಅಂತರಕ್ಕೊಂದರಂತೆ 150 ಗಾಳಗಳನ್ನು ಕಟ್ಟುತ್ತಾರೆ. ಹಗ್ಗಕ್ಕೆ ಮೀನುಗಾರರು ''ರೋಪ್'' ಎಂಬ ಇಂಗ್ಲೀಷ್ ಶಬ್ದವನ್ನು ಬಳಸುತ್ತಾರೆ. ರೋಪಿನ ಎರಡೂ ತುದಿಗೂ ಕಲ್ಲು ಕಟ್ಟಿ ರೋಪಿಗೆ ಐದಾರು ಮಾರು ಉದ್ದದ ಹಗ್ಗ ಕಟ್ಟಿ ಅದಕ್ಕೆ ಬೆಂಡುಗಳನ್ನು ತೇಲು ಬಿಟ್ಟಿರುತ್ತಾರೆ. ಆಗ ರೋಪು ಸಮುದ್ರದೊಳಗಡೆ ಇದ್ದು ಅದರ ಕೆಳಗೆ ಗಾಳಗಳು ಇರುತ್ತವೆ. ಗಾಳಗಳಿಗೆ ಮಾಂಸದ ಇಲ್ಲವೆ ಮೀನಿನ ತುಂಡುಗಳನ್ನು ಸಿಕ್ಕಿಸುತ್ತಾರೆ. ಬೇಪ್ ಗಾಳವನ್ನು ಬಂಡೆಗಳಿರುವಲ್ಲಿ ಹಾಕಿರುತ್ತಾರೆ. ಏಕೆಂದರೆ ದೊಡ್ಡ ದೊಡ್ಡ ಮೀನುಗಳು ಬಂಡೆಗಳಿರುವಲ್ಲಿ ವಾಸಿಸುವುದು ಹೆಚ್ಚು. ಬಂಡೆಗಳ ಸುತ್ತ ಈ ಗಾಳಗಳನ್ನು ಹಾಕಿ ಸ್ವಲ್ಪ ಹೊತ್ತು ಕಾದು ಅನಂತರ ಅದನ್ನು ಮೇಲಕ್ಕೆತ್ತಿ ಸಿಕ್ಕಿಬಿದ್ದ ಮೀನನ್ನು ಬಿಡಿಸಿಕೊಳ್ಳುತ್ತಾರೆ. ಇದರಿಂದ ಮುರಿಯ, ಮೊಗ್ಗು, ಮೋಗಾರ, ಮೊದಲಾದ ದೊಡ್ಡ ಜಾತಿಯ ಮೀನುಗಳನ್ನು ಹಿಡಿಯುತ್ತಾರೆ. ಈ ಮೀನುಗಳ ಸಾಮಾನ್ಯ ತೂಕವು 10 ಕೆ.ಜಿಯಿಂದ 25 ಕೆ.ಜಿ. ಯ ವರೆಗೆ ಇರುತ್ತದೆ.

8. ನಿಲ್ಲೋ ಗಾಳ : ಇತ್ತೀಚಿನ ಸಂಶೋಧನೆಯ ಫಲದಿಂದ ಈ ಗಾಳವನ್ನು ಕಂಡುಹಿಡಿಯಲಾಗಿದೆ. ಇದರಲ್ಲಿ ಒಂದರ ಮೇಲೊಂದರಂತೆ ಮೂರು ಗಾಳಗಳು ಇರುತ್ತವೆ. ಅದರ ಮೇಲೆ ಬಣ್ಣ ಬಣ್ಣದ ನೈಲಾನ್ ದಾರದ ಗುಚ್ಛವನ್ನು ಕಟ್ಟಿದ್ದು ಅದರ ಮೇಲ್ಭಾಗದಲ್ಲಿ ಸುಮಾರು 150 ಗ್ರಾಂ ತೂಕದ ಸೀಸದ ಗುಂಡನ್ನು ದಾರದಲ್ಲಿ ಸಿಕ್ಕಿಸಿರುತ್ತಾರೆ. ಇದಕ್ಕೆ ಬಳಸುವ ''ರೋಪ್'' ಬಹಳ ಗಟ್ಟಿಯಿದ್ದು ಬಹು ಕಾಲದ ವರೆಗೆ ಬಾಳಿಕೆ ಬರುತ್ತದೆ. ಆದ್ದರಿಂದಲೇ ಅದರ ಬೆಲೆ ಒಂದು ಕೆ.ಜಿ..ಗೆ ಸುಮಾರು 1000 ರೂಪಾಯಿಗಳಾಗಿದೆ. ರೋಪಿನ ಉದ್ದ ಹದಿನೈದರಿಂದ ಇಪ್ಪತ್ತು ಮಾರು ಇರುತ್ತದೆ. ಗಾಳವನ್ನು ಸಮುದ್ರದಲ್ಲಿ ಬಿಡುವ ಮುಂಚೆ ''ಬೊಂಬಿಲ್'' ಎಂಬ ಮೀನಿನ ತುಂಡನ್ನು ಇಲ್ಲವೆ ಬೇರೆ ಯಾವುದೇ ಜಾತಿಯ ಮೀನಿನ ತುಂಡನ್ನಾಗಲೀ ಸಿಕ್ಕಿಸಿರುತ್ತಾರೆ. ಸಮುದ್ರದೊಳಗಡೆ ದೋಣಿಯಲ್ಲಿ ಹೋಗಿ ನಿಲ್ಲೋ ಗಾಳದಿಂದ ಬೇಟೆಯಾಡುತ್ತಾರೆ. ಈ ಗಾಳವನ್ನು ಸಮುದ್ರದಲ್ಲಿ ನೇರವಾಗಿ ನಿಲ್ಲಿಸುವುದರಿಂದ ಇದಕ್ಕೆ ನಿಲ್ಲೋ ಗಾಳ ಎಂದು ಹೆಸರು ಬಂದಿದೆ. ಗಾಳವನ್ನು ನಿಲ್ಲಿಸಿದಾಗ ಬಣ್ಣ ಬಣ್ಣದ ನೈಲಾನ್ ದಾರದ ಗುಚ್ಚವನ್ನು ಕಂಡ ಮೀನು ಅದು ಆಹಾರವೆಂದು ತಿಳಿದು ಗಾಳವನ್ನು ಒಂದೊಂದಾಗಿ ನುಂಗುತ್ತಾ ಹೋಗಿ ಸಿಕ್ಕಿ ಬೀಳುತ್ತದೆ . ಇದರಲ್ಲಿ ಮೊಗ್ಗು, ಇಸ್ವಾನ್, ಹಲಗೆ ಮೀನು ಮೊದಲಾದ ದೊಡ್ಡ ಜಾತಿಯ ಮೀನು ಹಿಡಿಯುತ್ತಾರೆ. ಈ ಗಾಳವನ್ನು ಕರ್ನಾಟಕ ಕರಾವಳಿಯಲ್ಲಿ ಇತ್ತೀಚೆಗೆ ಬಳಸಲಾಗುತ್ತಿದೆ. ಇದನ್ನು ಕೇರಳದವರು ಮೊದಲು ತಯಾರಿಸಿದರೆಂದು ಹೇಳಲಾಗುತ್ತದೆ. ಇದರಲ್ಲಿ ಗಾಳದಿಂದ ಸೀಸದ ಗುಂಡಿನ ಸ್ವಲ್ಪ ಮೇಲ್ಭಾಗದಲ್ಲಿ ತಂತಿಯಿಂದ ಗಾಳ ಕಟ್ಟಿರುತ್ತಾರೆ. ಅದರ ನಂತರ ನೈಲಾನ್ ದಾರವಿರುತ್ತದೆ. ನಾಡದೋಣಿಯನ್ನು ಈ ಗಾಳದ ಬೇಟೆಗೆ ಬಳಸುವುದು ಹೆಚ್ಚು. ಒಬ್ಬೊಬ್ಬರು ಮಾತ್ರ ನಿಲ್ಲೋ ಗಾಳದ ಬೇಟೆಗೆ ಹೋಗುತ್ತಾರೆ.


9. ರಂಪಣಿಗಾಳ : ರಂಪಣಿ ಗಾಳದ ''ರೋಪ್ '' 100 '' ಮಾರು'' ಉದ್ದವಿರುತ್ತದೆ. ಮೂರು ಮಾರಿನ ಅಂತರಕ್ಕೆ ಒಂದರಂತೆ ರೋಪಿನಲ್ಲಿ ಮೂವತ್ತು ಗಾಳಗಳಿರುತ್ತದೆ. ರೋಪಿನ ಒಂದು ತುದಿಗೆ ದೊಡ್ಡ ಕಲ್ಲು ಕಟ್ಟಿರುತ್ತಾರೆ ಗಾಳಗಳಿಗೆ ಮೀನು ಇಲ್ಲವೇ ಮಾಂಸದ ತುಂಡುಗಳನ್ನು ಸಿಕ್ಕಿಸಿ ಸಮುದ್ರದಲ್ಲಿ ಬಿಡುತ್ತಾರೆ. ರೋಪಿನ ಮತ್ತೊಂದು ತುದಿಯನ್ನು ಹಿಡಿದು ದೋಣಿ ನಡೆಸುತ್ತಾ ಹೋಗುತ್ತಾರೆ. ಆಗ ಗಾಳಗಳೆಲ್ಲವು ತಿರುಗುತ್ತಿರುತ್ತವೆ. ತಿರುಗುತ್ತಾ ಮುಂದುವರಿಯುವ ಗಾಳವನ್ನು ಮೀನು ಆಹಾರವೆಂದು ತಿಳಿದು ನುಂಗುತ್ತದೆ. ಇದರಲ್ಲಿ ಸ್ಯಾಡಿ, ಏರಿ, ಇಸ್ವಾನ್ ಮೊದಲಾದ ದೊಡ್ಡ ಜಾತಿಯ ಮೀನು ಹಿಡಿಯುತ್ತಾರೆ.

10. ಕಂಡಿಗೆ ಗಾಳ : ''ಕಂಡಿಗೆ ಮೀನು'' ಹಿಡಿಯಲು ಬಳಸುವ ಗಾಳವನ್ನು ಕಂಡಿಗೆ ಗಾಳವೆಂದು ಕರೆಯುತ್ತಾರೆ. ಇದರಲ್ಲಿ ಒಂದರ ಮೇಲೊಂದರಂತೆ ಎರಡು ಗಾಳಗಳಿರುತ್ತವೆ. ಮೇಲಿನ ಗಾಳ ಚಿಕ್ಕದಿದ್ದು ಕೆಳಗಿನ ಗಾಳ ದೊಡ್ಡದಾಗಿರುತ್ತದೆ. ಅವೆರಡನ್ನು ಒಂದು ತಂತಿಗೆ ಕಟ್ಟಿದ್ದು. ತಂತಿಯ ಮೇಲ್ಭಾಗದಲ್ಲಿ ಸೀಸದ ಗುಂಡಿರುತ್ತದೆ. ಈ ಗಾಳಗಳ ತಂತಿಯನ್ನು ರೋಪಿಗೆ ಕಟ್ಟಿದ್ದು ಗಾಳಕ್ಕೆ ಮೀನು ಇಲ್ಲವೇ ಮಾಂಸ ಸಿಕ್ಕಿಸಿ ಸಮುದ್ರದಲ್ಲಿ ಬಿಟ್ಟು ಎಳೆಯುತ್ತಾರೆ. ಆಗ ಗಾಳ ತಿರುಗುತ್ತಾ ಇರುತ್ತದೆ. ಅದನ್ನು ಆಹಾರವೆಂದು ಭಾವಿಸಿದ ಮೀನು ತಿನ್ನಲು ಬಂದು ಸಿಕ್ಕಿ ಬೀಳುತ್ತದೆ. ಈ ಗಾಳದಿಂದ ಕಂಡಿಗೆ, ಹೊರ್ಕಣಿ ಮೊದಲಾದ ದೊಡ್ಡ ಮೀನು ಹಿಡಿಯುತ್ತಾರೆ.


11. ಮುರಿಯನ ಗಾಳ : '' ಮುರಿಯ'' ಮೀನನ್ನು ಹಿಡಿಯಲು ವಿಶೇಷವಾಗಿ ತಯಾರಿಸಿದ ಈ ಗಾಳವನ್ನು ಮುರಿಯನ ಗಾಳ ಎಂದು ಕರೆಯುತ್ತಾರೆ. ಇದು ಕಂಡಿಗೆ ಗಾಳವನ್ನು ಹೋಲುತ್ತದೆ. ಆದರೆ ಗಾಳಗಳು ಅದಕ್ಕಿಂತ ದೊಡ್ಡದಾಗಿರುತ್ತವೆ.

12. ಹಾರ್ ಗಾಳ : ಸಮುದ್ರದೊಳಗಿನ ಕಲ್ಲಿನ ಬದಿಯಲ್ಲಿ ಈ ಗಾಳ ಹಾಕುತ್ತಾರೆ. ರೋಪಿನಲ್ಲಿ ಒಂದು ಗಾಳ ಮಾತ್ರ ಇದ್ದು ಅದಕ್ಕೆ ಚಿಪ್ಪು ಮೀನನ್ನು ಸಿಕ್ಕಿಸುತ್ತಾರೆ. ಗಾಳವು ಸುಮಾರು ಮೂರು ಅಂಗುಲ ಉದ್ದವಿರುತ್ತದೆ. ಗಾಳವನ್ನು ಕಲ್ಲಿನ ಪಕ್ಕದಲ್ಲಿ ಸ್ವಲ್ಪ ಹೊತ್ತು ಬಿಟ್ಟು ಅನಂತರ ಮೇಲಕ್ಕೆತ್ತುತ್ತಾರೆ. '' ಹಾರ್ '' ಎಂದರೆ ಕಲ್ಲು. ಕಲ್ಲಿನ ಬದಿಯಲ್ಲಿ ಬಿಡುವ ಗಾಳ, ಇದಾಗಿರುವುದರಿಂದ '' ಹಾರ್‌ಗಾಳ '' ಎನ್ನುತ್ತಾರೆ.


ಗಾಳದ ಬಗೆಗಳು








ಚಿತ್ರ ೩: ವಾಲ್‌ಗಾಳಗಳು



ಚಮಚೆ ಗಾಳಗಳು.

(i) ____________ (ii) ____________



పటము ౪

13. ಲಾಂಗ್ ಲೈನಗಾಳ: ಆಳ ಸಮುದ್ರದಲ್ಲಿನ ಮೀನು ಬೇಟೆಗಾಗಿ ಈ ಗಾಳವನ್ನು ಬಳಸುತ್ತಾರೆ. ಒಂದು ರೋಪ್‌ಗೆ ಒಂದೊಂದು ಮಾರಿನ ಅಂತರಕ್ಕೆ ಒಂದರಂತೆ ಸುಮಾರು ಐವತ್ತಕ್ಕಿಂತ ಹೆಚ್ಚು ಗಾಳಗಳನ್ನು ಕಟ್ಟಿರುತ್ತಾರೆ. ಇಪ್ಪತ್ತೈದು ಗಾಳಗಳ ನಂತರ ಒಂದು ಕಬ್ಬಿಣದ ಗುಂಡನ್ನು ತೂಗಿ ಬಿಡುತ್ತಾರೆ. ಅದೇ ಸ್ಥಳದಲ್ಲಿ ಒಂದು ಬೆಂಡನ್ನು ಕಟ್ಟಿರುತ್ತಾರೆ. ಅರವತ್ತು - ಎಪ್ಪತ್ತು ಮಾರಿನಷ್ಟು ರೋಪನ್ನು ಲಾಂಗ್ ಲೈನ್‌ಗಾಳದ ಎರಡೂ ತುದಿಗಳಿಗೆ ಕಟ್ಟಿ ರೋಪಿನ ಮತ್ತೊಂದು ತುದಿಗೆ ಬೆಂಡು ಮತ್ತು ಬಾವುಟಗಳನ್ನು ಕಟ್ಟಿರುತ್ತಾರೆ. ಗಾಳಗಳಿಗೆ '' ಕೊಳಹಾವು '' ಎಂಬ ಹುಳ ಸಿಕ್ಕಿಸುತ್ತಾರೆ. ಇದು ಹಸಿರು ಬಣ್ಣದ ಹಾವಿನಂತಿದ್ದು ಕೆಸರಿನಲ್ಲಿ ಸಿಗುತ್ತದೆ. ಈ ಗಾಳದಿಂದ ಶಾರ್ಕ್, ಮುರಿಯ,ಗೋಬ್ರ, ಇಸ್ವಾನ, ಮೊದಲಾದ ದೊಡ್ಡ ಮೀನುಗಳನ್ನು ಹಿಡಿಯುತ್ತಾರೆ.

ಹೀಗೆಯೇ ಗಾಳಗಳಲ್ಲಿ ಇನ್ನೂ ಹಲವು ವಿಧಗಳಿವೆ. ಆದರೆ ಅವುಗಳನ್ನು ಯಾರಿಗೂ ತಿಳಿಯದಂತೆ ರಹಸ್ಯವಾಗಿಟ್ಟುಕೊಂಡು ಮೀನು ಹಿಡಿಯುವಾಗ ಮಾತ್ರ ಬಳಸುವ ಜನರಿದ್ದಾರೆ. ತಮ್ಮ ಗಾಳದ ಸ್ವರೂಪ ಮತ್ತು ಅದನ್ನು ಉಪಯೋಗಿಸುವ ವಿಧಾನವನ್ನು ಬೇರೆಯವರುತಿಳಿದರೆ ಅವರು ಅದನ್ನು ಬಳಸಲು ಪ್ರಾರಂಭಿಸಿದಾಗ ತಮ್ಮ ಬೇಟೆಗೆ ಅಡ್ಡಿಯಾಗುತ್ತದೆ, ಎಂದು ಅವರು ಭಾವಿಸುತ್ತಾರೆ.

ಗಾಳದ ಮೀನು ಬೇಟೆಯು ಪ್ರಾಚೀನ ವಿಧಾನವಾಗಿದ್ದರೂ ಇಂದಿಗೂ ಸಹ ಅದು ಪ್ರಸಿದ್ಧವಾಗಿದೆ. ಬಲೆಗೆ ಸಿಗದ ದೊಡ್ಡ ಮೀನುಗಳನ್ನು ಹಿಡಿಯಲು ಗಾಳ ಬಳಸುತ್ತಾರೆ. ಕರ್ನಾಟಕ ಕರಾವಳಿಯ ಮೀನುಗಾರರ ಅಭಿಪ್ರಾಯದಂತೆ ಕೇರಳಾದ ಮೀನುಗಾರರು ಹೊಸ ಹೊಸ ತಂತ್ರಗಳನ್ನು ಬಳಸಿ ಗಾಳವನ್ನು ತಯಾರಿಸುವುದರಲ್ಲಿ ಚತುರರು. ಆದರೆ ತಯಾರಿಸಿದ ಗಾಳವನ್ನು ಬೇರೆ ಯಾರಿಗೂ ತೋರಿಸದೇ ರಹಸ್ಯವಾಗಿ ಅದನ್ನು ಬಳಸುತ್ತಾರೆ. ಬಹಳ ಹಿಂದೆ ಮೀನು ಹಿಡಿಯಲು ಛಡಿಯ ಸಹಾಯದಿಂದ ಮಾತ್ರ ಗಾಳದ ಬಳಕೆಯಾಗುತ್ತಿತ್ತು. ಗಾಳದ ಸ್ವರೂಪದಲ್ಲಿ ಯಾವ ಬದಲಾವಣೆ ಇಂದು ಕಾಣದಿದ್ದರೂ ಅದರ ಗಾತ್ರದಲ್ಲಿ ಹಾಗೂ ಬಳಸುವ ವಿಧಾನದಲ್ಲಿ ಮಹತ್ತರ ಬದಲಾವಣೆಯನ್ನು ಗುರುತಿಸಬಹುದು. ಮೀನುಗಾರರಿಗೆ ಕಡಿಮೆ ಬಂಡವಾಳದಲ್ಲಿ ಹೆಚ್ಚು ಲಾಭ ಮಾಡಿಕೊಡುವ ಏಕೈಕ ಮೀನು ಬೇಟೆಯ ವಿಧಾನವೆಂದರೆ ಗಾಳದ ಬೇಟೆ ಎಂಬುದನ್ನು ಅವರು ಒಪ್ಪಿಕೊಳ್ಳುತ್ತಾರೆ

ಬಲೆ

ಮಾನವ ಪ್ರಾಣಿಗಳನ್ನು ಸೆರೆ ಹಿಡಿಯಲು ಬಳಸಲಾದ ಸಾಧನಗಳಲ್ಲಿ ಬಲೆ ಸಹ ಒಂದಾಗಿದೆ. ನೆಲದ ಮೇಲಿನ ಹಾಗೂ ಜಲದೊಳಗಿನ ಪ್ರಾಣಿಗಳೆರಡನ್ನು ಬಲೆಯ ಸಹಾಯದಿಂದ ಬಹುಸುಲಭವಾಗಿ ಕೈಗೆಟಕುವಂತೆ ಮಾಡಿಕೊಂಡ. ಗಾಳದಿಂದ ಹೆಚ್ಚಿನ ಸಂಖ್ಯೆಯಲ್ಲಿ ಮೀನು ಹಿಡಿಯಲು ಸಾಧ್ಯವಾಗದೆಂದರಿತಾಗ ಬಲೆಯ ಸಂಶೋಧನೆ ಕಡೆಗೆ ಮಾನವನ ಆಸಕ್ತಿ ಹರಿಯಿತು. ಪ್ರಾರಂಭದಲ್ಲಿ ತೆಳುವಾದ ಗೋಣಿ ಚೀಲಗಳನ್ನು , ಬಟ್ಟೆಗಳನ್ನು ಬಲೆಯಾಗಿ ಬಳಸುತ್ತಿದ್ದು ಕಾಲಕ್ರಮೇಣ ಅದು ನೂಲಿನಿಂದ ಬಲೆ ಹೆಣೆಯಲು ನಾಂದಿಯಾಯಿತು. ಇತ್ತೀಚೆಗೆ ಬಲೆಯ ಕ್ಷೇತ್ರದಲ್ಲಿ ನಿರಂತರ ಬದಲಾವಣೆ ನಡೆದಿದೆ. 1956ರಂದು ಕರ್ನಾಟಕ ಕರಾವಳಿ ಅಸ್ತಿತ್ವಕ್ಕೆ ಬಂದು, ಮೀನುಗಾರಿಕೆ ಇಲಾಖೆಯ ಸ್ಥಾಪನೆ ಆದಾಗ ಮೀನು ಬೇಟೆಗೊಂದು ಮಹತ್ವದ ಸ್ಥಾನ ಸಿಕ್ಕಿತು. ಅದು ಕೇವಲ ಬೆಸ್ತರ ವೃತ್ತಿಯಾಗಿ ಮಾತ್ರ ನಿಲ್ಲದೆ ರಾಷ್ಟ್ರದ ಆರ್ಥಿಕ ವ್ಯವಸ್ಥೆಯ ಸುಧಾರಣೆಯಲ್ಲಿ ಮಹತ್ತರ ಪಾತ್ರವಹಿಸಿತು. ಆಗ ಮೀನು ಬೇಟೆಯ ಕ್ಷೇತ್ರದಲ್ಲಿ ಕ್ರಾಂತಿ ನಡೆಯಿತು. ಅದರ ಪರಿಣಾಮವಾಗಿ ಬಲೆಗಳಲ್ಲಿ ವಿವಿಧ ಬಗೆಗಳು ರೂಪಗೊಂಡವು. ದೋಣಿಗಳ ಸ್ವರೂಪದಲ್ಲಿ ಆಶ್ಚರ್ಯ ಎನಿಸುವಂತಹ ಬದಲಾವಣೆಗಳು ತಲೆದೋರಿದವು. ಹಳೆಯ ಬಲೆಗಳ ಮತ್ತು ದೋಣಿಗಳ ಉದ್ಯೋಗಕ್ಕೆ ಬಲವಾದ ಪೆಟ್ಟು ಬಿದ್ದಿತು. ಅವುಗಳಲ್ಲಿ ಕೆಲವು ಬಲೆಗಳುಬಾಯಲ್ಲಿ ಮಾತ್ರ ಉಳಿದುಕೊಂಡವು.

ಬಲೆಗಳ ವಿಧಗಳು :
ದಕ್ಷಿಣ ಕನ್ನಡದ ಕರಾವಳಿಯ ಬಲೆಗಳು

೧) ಇಡ ಬಲ
೨) ಎಲ್ಯಬಲೆ
೩) ಎಳಬಲೆ
೪) ಪಿರ್ಬಲೆ
೫) ಬೆಂಡುಬಲೆ
೬) ಕಂಡಟ್ಟಿ ಬಲೆ
೭) ಕಂತ ಬಲೆ
೮) ಕಾಂಡಯಿ ಬಲೆ
೯) ಕುಟ್ಟಿ ಬಲೆ
೧೦) ಕೂರಿ ಬಲೆ
೧೧) ಕೈರಂಪಣ
೧೨) ಗೂರ್ತಲೆ
೧೩) ಕೊಲ್ಲಿ ಬಲೆ
೧೪) ತಗ್ಗಲೆ
೧೫) ತರ್ಬಲೆ
೧೬) ತಾರಲೆ
೧೭) ತಿಕ್ಕಲೆ
೧೮) ತೂಲ್‌ದ ಬಲೆ
೧೯) ದೆಬ್ಬಲೆ
೨೦) ನಂಗುಬಲೆ
೨೧) ನೆಗರ್‌ಬಲೆ
೨೨) ಪಟ್ಟಿ ಬಲೆ
೨೩) ಪತ್ತಿರ್ಲೆ
೨೪) ಪಾರ್ಲೆ
೨೫) ಬೀಡಿನ ಬಲೆ
೨೬) ಬೀಸಣ (ಬೀಸು ಬಲೆ)
೨೭) ಬುಡ್ಡಲೆ
೨೮) ಬೂತಾಯಿ ಬಲೆ
೨೯) ಬೂಳಿಂಜಿಕ್ ಬಲೆ
೩೦) ಮರಿಗಿ ಬಲೆ
೩೧) ಮಾರ್ಟ್ ಬಲೆ(ಮಾಯಿಟ್ ಬಲೆ)
೩೨) ಮಾರಿ ಬಲೆ (ರಂಪಣ)
೩೩) ಮಾಂಜ ಬಲೆ
೩೪) ರಾಣಿ ಬಲೆ
೩೫) ಸೊರಕೆದ ಬಲೆ
೩೬) ಡಿಸ್ಕೊ ಬಲೆ
೩೭) ಟ್ರೋಲ್ ಬಲೆ
೩೮) ಜೋಡಿ ಟ್ರೋಲ್ ಬಲೆ
೩೯) ಪರ್ಸೀನ್ ಬಲೆ

ಉತ್ತರ ಕನ್ನಡ ಜಿಲ್ಲೆಯಲ್ಲಿ ಬಳಕೆಯಲ್ಲಿರುವ ಬಲೆಗಳು : -

ವೈ. ಎಸ್. ದುರ್ಗೇಕರರ ಪ್ರಕಾರ

೧) ಜಗ್ಗುವ ಬಲೆ
೨) ಗೋರುವ ಬಲೆ
೩) ರಂಪಣ ಬಲೆ
೪) ಬಾಕ್ಸಿ ಬಲೆ
೫) ಟ್ರಾಲ್ ಬಲೆ
೬) ಮೋಳ ಬಲೆ
೭) ತೇಲಾಡುವ ಬಲೆ
೮) ಮುಳುಗುವ ಬಲೆ
೯) ಕಾಂಟಲಿ ಬಲೆ
೧೦) ಮಡ್ಲೆ ಬಲೆ
೧೧) ಬಿಳಿ ಬಲೆ
೧೨) ಬಂಗಡೆ ಬಲೆ
೧೩) ಬುಡಿ ಬಲೆ
೧೪) ಬೀಸುವ ಬಲೆ
೧೫) ಹೊಂಗಿ ಬಲೆ
೧೬) ನಿಂಗಿ ಬಲೆ

ಕರ್ನಾಟಕ ಕರಾವಳಿಯಲ್ಲಿ ಕಾಣಿಸಿಕೊಳ್ಳುವ ಬಲೆಗಳು : -

೧) ತೊರ್ಕೆ ಬಲೆ
೨) ಬೆವರ್ ಬಲೆ
೩) ಮುಳುಕು ಬಲೆ
೪) ಚಟ್ಲಿ ಬಲೆ
೫) ಕಲ್ ಮಾಟ್ ಬಲೆ
೬) ತಂಗೀಸ್ ಬಲೆ
೭) ಚಿಕ್ಕಣ ಬಲೆ
೮) ಪಾಯಿಂಟ್ ಕಡಿಮೆ ಬಲೆ
೯) ಎಳಿಯ ಬಲೆ
೧೦) ಮರಣ ಬಲೆ
೧೧) ಕೈರಂಪಣ ಬಲೆ
೧೨) ಅತ್ತಿ ಬಲೆ
೧೩) ಮಾಂಡ ಬಲೆ
೧೪) ಚಿಕ್ಕ ಬಲೆ
೧೫) ಬಿಲಬು ಬಲೆ
೧೬) ದೋಣಿ ಬಲೆ
೧೭) ಎಳೆ ಬಲೆ
೧೮) ಗೋಡೆ ಬಲೆ
೧೯) ಹಂದಿ ಬಲೆ
೨೦) ಎಳೆಯುವ ಬಲೆ
೨೧) ಮಾಲ್ ಬಲೆ
೨೨) ಪಾಪ್ಲೆಟ್ ಬಲೆ
೨೩) ಗಿಲ್ ನೆಟ್ ಬಲೆ
೨೪) ಬೋಲಿಂಗರ್ ಬಲೆ
೨೫) ತೀರಂಡಿ ಬಲೆ
೨೬) ಯೆತ್ತಿ ಬಲೆ
೨೭) ಟ್ರಾಲ್ ಬಲೆ
೨೮) ಜಂಟಿ ಬಲೆ
೨೯) ಬೀಮ ಬಲೆ ಇತ್ಯಾದಿ


ಬಲೆಗಳಲ್ಲಿನ ವ್ಯತ್ಯಾಸವು ಅದರ ಕಣ್ಣು, ಉದ್ದ ಹಾಗೂ ಅಗಲಕ್ಕನುಸಾರ ಇರುತ್ತದೆ. ಬಲೆಗಳ ತಯಾರಿಕೆಯು ಮೀನುಗಾರರ ಕಲೆಗಾರಿಕೆಗೆ ಉತ್ತಮ ನಿದರ್ಶನ. ಬಲೆ ಹೆಣೆಯುವಾಗ ಹಾಕುವ ಗಂಟುಗಳು ಆಶ್ಚರ್ಯ ಮೂಡಿಸುವಂತಹವು. ಬಲೆಯ ಪ್ರತಿ ಕಣ್ಣಿಗೆ ಆಧಾರ ಹಾಕುವ ಗಂಟು. ಅದು ಇಡೀ ಬಲೆಗೊಂದು ಸುಂದರ ಸ್ವರೂಪ ಕೊಡುವಂತಹದು.

ಗಂಟು ಹಾಕಲು ಅವರು ಬಳಸುವ ಪ್ರಮುಖ ಸಾಧನಗಳೆಂದರೆ ಚಿಗಲಿ ಮತ್ತು ಹಗರು. ಇವುಗಳನ್ನು ಮೀನುಗಾರರು ತಾವೇ ಸ್ವತಃ ತಯಾರಿಸಿಕೊಳ್ಳುತ್ತಾರೆ. ಚಿಗಲಿ ಮತ್ತು ಹಗರು ತಯಾರಿಕೆಗೆ ಅತಿ ಅವಶ್ಯಕವಾಗಿ ಬೇಕಾದದ್ದು ಬಿದಿರಿನ ಸಿಗುರು.


ಚಿಗಲಿ: - ತೆಳುವಾದ ಬಿದುರಿನ ಸಿಗುರನ್ನು ಚಾಕುವಿನಿಂದ ಸವರಿ ನಯಗೊಳಿಸಲಾಗುತ್ತದೆ. ಅನಂತರ ಅದರ ಎರಡೂ ಬದಿಗೂ ''ಖ'' ಈ ಆಕಾರದಲ್ಲಿ ಕತ್ತರಿಸಲಾಗುತ್ತದೆ. ಇದು ದಾರವನ್ನು ಚಿಗಲಿಯಲ್ಲಿ ಸುತ್ತಿಕೊಳ್ಳಲು ಸಹಾಯಕವಾಗುತ್ತದೆ. ಪ್ರತಿಯೊಂದು ಸುತ್ತು ''ಯು'' ಆಕಾರದ ಕವಲಿನಿಂದ ಹಾದು ಹೋಗುತ್ತದೆ. ಈ ಕವಲಿನ ಎರಡು ತುದಿಯನ್ನು ಚಾಕುವಿನಿಂದ ನಯಗೊಳಿಸುತ್ತಾರೆ. ಏಕೆಂದರೆ ಗಂಟು ಹಾಕುವಾಗ ಅದು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸರಾಗವಾಗಿ ಹಾದು ಹೋಗಬೇಕಾಗಿದೆ. ಬಲೆಯ ಕಣ್ಣಿನ ಗಾತ್ರಕ್ಕನುಸಾರವಾಗಿ ಚಿಗಲಿಯ ಸ್ವರೂಪದಲ್ಲೂ ವ್ಯತ್ಯಾಸವಾಗುತ್ತಾ ಹೋಗುತ್ತದೆ. ಚಿಕ್ಕ ಕಣ್ಣುಗಳಿದ್ದರೆ ತೆಂಗಿನಗರಿಯ ಕಡ್ಡಿಯಷ್ಟು ಗಾತ್ರದ ಚಿಗಲಿಯನ್ನು ಬಳಸುತ್ತಾರೆ. ದೊಡ್ಡ ಕಣ್ಣಿನ ಬಲೆ ಹೆಣೆಯುವಾಗ ದೊಡ್ಡ ಗಾತ್ರದ ಚಿಗಲಿಯನ್ನು ಉಪಯೋಗಿಸುತ್ತಾರೆ. ರಂಪಣಿ ಬಲೆ ಹೆಣೆಯುವಾಗ ಬಳಸುವ ಚಿಗಲಿಯ ಉದ್ದ ಸುಮಾರು ಆರೇಳು ಅಂಗುಲವಿರುತ್ತದೆ. ಅಗಲ 0.3 ಇಲ್ಲವೆ 0.4 ಅಂಗುಲವಿರುತ್ತದೆ. ದಪ್ಪ 0.1 ಅಂಗುಲವಿರುತ್ತದೆ. ಬಲೆಯ ಕಣ್ಣು ಅಳತೆಗೆ ಸರಿಯಾಗಿರಲು ಮತ್ತು ಗಂಟು ಬಿಗಿಯಾಗಿರಲು ಚಿಗಲಿಯ ಕೆಲಸ ಮುಖ್ಯವಾಗುತ್ತದೆ. ಇತ್ತೀಚೆಗೆ ಬಿದುರಿನ ಚಿಗಲಿಗಳು ಹೋಗಿ ಕಬ್ಬಿಣದ ಇಲ್ಲವೆ ಅಲ್ಯುಮಿನಿಯಂನ ಚಿಗಲಿಗಳು ಬಳಕೆಗೆ ಬಂದಿವೆ.

ಹಗರು : - ಹಗರಿನ ಸ್ವರೂಪವು ಹಿಂದಿನ ಕಾಲದ ಮರದ ಬಾಚಣಿಗೆಯಂತಿರುತ್ತದೆ. ಬಿದಿರಿನ ಪಟ್ಟಿಯ ಎರಡು ಬದಿಗೆ ಇಳಿಜಾರಾಗಿ ಮಾಡಿರುತ್ತಾರೆ. ತುದಿ ಮತ್ತು ಮೊನೆಗಳೆರಡೂ ನಯವಾಗಿರುತ್ತವೆ. ಏಕೆಂದರೆ ಬಲೆ ಹೆಣೆಯುವಾಗ ಬಲೆಯ ಕಣ್ಣುಗಳ ಗಂಟುಗಳನ್ನು ಇದರ ಗಾತ್ರಕ್ಕೆ ಸರಿಯಾಗಿ ಹೊಂದಿಸಿ ಹೆಣೆಯಬೇಕಾಗುತ್ತದೆ. ಹಗರಿನ ಎರಡೂ ಅಂಚುಗಳನ್ನು ಒಂದೇ ರೀತಿಯಲ್ಲಿ ಕೆತ್ತಿ ನಯಗೊಳಿಸಿ, ಇಳಿಜಾರು ಮಾಡಿರುವುದರಿಂದ ಗಂಟನ್ನು ಬಹು ಸುಲಭವಾಗಿ ನುಸುಳಿಸಬಹುದಾಗಿದೆ. ಒಂದು ವೇಳೆ ಅದು ಒರಟಾಗಿದ್ದರೆ ಬಲೆಯ ಕಣ್ಣುಗಳ ಗಾತ್ರ ಹೆಚ್ಚ ಕಡಿಮೆಯಾಗುತ್ತಾ ಹೋಗುವುದಲ್ಲದೆ ಬಲೆಯ ಆಕಾರವು ವಿಕಾರಗೊಳ್ಳುತ್ತದೆ. ಈ ಕಾರಣದಿಂದ ಹಗರನ್ನು ತಯಾರಿಸುವಾಗ ನಡುವೆ ದಪ್ಪವಿಟ್ಟು ಎರಡೂ ಅಂಚನ್ನು ಇಳಿಜಾರಾಗಿ ಕೆತ್ತಿ ತೆಳುಗೊಳಿಸುತ್ತಾರೆ. ಹಗರಿನ ಗಾತ್ರವು ಬಲೆಯ ಕಣ್ಣಿನ ಗಾತ್ರಕ್ಕನುಸಾರವಿರುತ್ತದೆ. ಅದರ ಸಾವರಾನ್ಯ ಉದ್ದವೆಂದರೆ ನಾಲ್ಕೈದು ಅಂಗುಲ, ಅಗಲ ಏಳೆಂಟು ಅಂಗುಲ. ''ಬುಡಿಬಲೆ''ಯ ಹಗರು ಹತ್ತು ಅಂಗುಲ ಅಗಲ, ಆರು ಅಂಗುಲ ಉದ್ದ, ಮುಕ್ಕಾಲು ಅಂಗುಲ ದಪ್ಪವಿರುತ್ತದೆ. ಈಗ ಅಲ್ಯುಮಿನಿಯಂನ ಹಗರುಗಳು ಬಂದಿರುವುದರಿಂದ ಬಿದಿರಿನ ಹಗರುಗಳು ಮೂಲೆ ಸೇರಿವೆ. ಆದರೂ ಮೀನುಗಾರರು ಬಿದಿರಿನ ಹಗರನ್ನು ಮೆಚ್ಚುತ್ತಾರೆ. ಆದ್ದರಿಂದ ಕೆಲವರು ಈಗಲೂ ಬಿದಿರಿನ ಹಗರಿನಿಂದಲೇ ಬಲೆ ಹೆಣೆಯುತ್ತಿದ್ದಾರೆ.


ಚಿಗಲಿಯಲ್ಲಿ ದಾರವನ್ನು ಸುತ್ತಿಕೊಂಡು ಅದರ ತುದಿಯನ್ನು ಹಗರಿಗೆ ಎರಡು ಸುತ್ತು ಬರುವಂತೆ ಕಟ್ಟಿಕೊಳ್ಳುತ್ತಾರೆ. ನಂತರ ದಾರವನ್ನು ಹಗರಿನಿಂದ ಸರಿಸಿ ಕಳಚಿದಾಗ ಅದು ಚೌಕಾಕಾರದ ಮನೆಯಾಗುತ್ತದೆ. ಇದು ಬಲೆಯ ಮೊದಲ ಕಣ್ಣಾಗಿರುತ್ತದೆ. ಇದರಲ್ಲಿ ಚಿಗಲಿಯ ದಾರವನ್ನು ಪೋಣಿಸಿ '' ನಂಬರ್ ಒಂದರಲ್ಲಿ ಬರುವಂತೆ ಇಟ್ಟು ನಂಬರ್ ನಾಲ್ಕರಲ್ಲಿದ್ದ ಚಿಗಲಿಯ ದಾರವನ್ನು ಹಗರಿಗೆ ಸುತ್ತಿ ಈ ಕಣ್ಣುಗಳಲ್ಲಿ ಮತ್ತೊಮ್ಮೆ ಪೋಣಿಸಿ ನಂಬರ್ ಮೂರರಲ್ಲಿ ಹಗರಿನಿಂದ ಕಳಚಬೇಕು ಈ ರೀತಿ ಸರಿಸುತ್ತಾ ಮುಂದುವರಿಸುತ್ತಾ ಬೇಕಾದ ಕಣ್ಣನ್ನು ಹೆಣೆಯುತ್ತಾ ಹೋಗುತ್ತಾರೆ''. ತಮಗೆ ಬೇಕಾದಷ್ಟು ಕಣ್ಣುಗಳನ್ನು ಹೆಣೆದು ನಂತರ ಬಲೆಯ ಕಣ್ಣನ್ನು ಅಗಲ ಮಾಡುತ್ತಾ ಹೋಗುತ್ತಾರೆ. ಇದರಲ್ಲಿ ಚಿಗಲಿಯ ನೂಲು ಇದ್ದ ಭಾಗವನ್ನು ಕೆಳಕ್ಕೆ ಮಾಡಿ , ಅದರ ವಿರುದ್ಧ ಇರುವ ಭಾಗವನ್ನು ಮೇಲಕ್ಕೆ ಬರುವಂತೆ ಗಡುತರ ದಾರದಿಂದ ಮೇಲ್ಭಾಗದ ಕಣ್ಣನ್ನು ಪೋಣಿಸುತ್ತಾ ಹೋಗಿ ಅದು ಪೂರ್ಣವಾದ ತರುವಾಯ ತಯಾರಕನು ಅದನ್ನು ಕಾಲಿನ ಹೆಬ್ಬೆಟ್ಟಿಗೋ, ಕಂಬಕ್ಕೋ, ಇಲ್ಲವೇ ಗೂಟಕ್ಕೋ ಕಟ್ಟುತ್ತಾನೆ. ಈ ರೀತಿ ಹೆಣೆದ ಮೇಲೆ ಒಂದೊಂದೇ ಕಣ್ಣನ್ನು ಆರಿಸುತ್ತಾ ಹಗರಿನ



ದಾರತುಂಬಿದ ಚಿಗಲಿ



ಖಾಲಿ ಚಿಗಲಿ



ಎದುರು ನೋಟದ ಹಗರು



ಓರೆ ನೋಟದ ಹಗರು

ಸಹಾಯದಿಂದ ಹೆಣೆಯುತ್ತಾ ಹೋಗುತ್ತಾನೆ. ಕಣ್ಣು ಪೂರ್ಣ ಮುಗಿದ ನಂತರ ಮತ್ತೊಮ್ಮೆ ಹೆಣೆಯುತ್ತಾನೆ. ಇದೇ ಪ್ರಕಾರ ಮುಂದುವರಿಯುತ್ತಾ ತಮಗೆ ಬೇಕಾದಷ್ಟು ಉದ್ದ ಹೆಣೆಯುತ್ತಾ ಹೋಗುತ್ತಾರೆ. ಹೀಗೆ ಬಲೆ ಹೆಣೆಯುವ ಬಗೆಯನ್ನು ವೈ. ಎಸ್. ದುರ್ಗೇಕರರು 'ಕಡಲಿಗರು' ಕೃತಿಯಲ್ಲಿ ವಿವರವಾಗಿ ತಿಳಿಸಿದ್ದಾರೆ.

ಬಲೆಯ ಕಣ್ಣು ಬಲೆಯ ಸ್ವರೂಪಕ್ಕೆ ಅನುಸಾರವಾಗಿ ವ್ಯತ್ಯಾಸವಾಗುತ್ತಾ ಹೋಗುವಾಗ ಹೆಣೆಯುವವರು ಸಹ ಅದಕ್ಕೆ ಸರಿ ಹೊಂದುವ ಹಗರನ್ನು ಬಳಸುತ್ತಾರೆ. ''ಬೀಡು ಬಲೆ'' ಮತ್ತು ಪಟ್ಟೆ ಬಲೆಗಳಲ್ಲಿ ರಂಪಣಿ ಮತ್ತು ಗೋರುವ ಬಲೆಗಳಷ್ಟು ಉದ್ದವಾದ ಕಣ್ಣುಗಳು ಇರುವುದಿಲ್ಲ. ಬಲೆಯ ಅಗಲಕ್ಕೆ ಅನುಸರಿಸಿ ಕಣ್ಣುಗಳ ಉದ್ದ ಬೆಳೆಸಿಕೊಂಡು ಅನಂತರ ಬಲೆಗೆ ಕಣ್ಣು ಎಷ್ಟು ಬೇಕೋ ಅಷ್ಟರವರೆಗೆ ಅದನ್ನು ಮುಂದುವರಿಸುತ್ತಾರೆ. ಸಾಮಾನ್ಯವಾಗಿ ಒಂದು ಬಲೆಗೆ 300 ಕಣ್ಣುಗಳು ಇರುತ್ತವೆ. ಬಲೆ ಹೆಣೆಯುವ ಕೆಲಸ ಪೂರ್ಣಗೊಂಡ ನಂತರ ಅದರ ಕಣ್ಣನ್ನು ಎಳೆದು ಅಗಲ ಮಾಡುತ್ತಾರೆ. ಹೀಗೆ ಮಾಡುವುದರಿಂದ ಬಲೆ ನೀರಲ್ಲಿ ಹಾಕಿದಾಗ ಅದರ ಕಣ್ಣುಗಳು ತೆರೆದೇ ಇರುತ್ತವೆ.

''ಬೀಸುವ ಬಲೆ''ಹೆಣೆಯುವಾಗ ಕಾಲಿನ ಹೆಬ್ಬೆಟ್ಟಿಗೆ ಚಿಕ್ಕ ದಾರ ಒಂದನ್ನು ಕಟ್ಟಿಕೊಂಡು ಆ ದಾರಕ್ಕೆ ಚಿಗಲಿಯ ದಾರವನ್ನು ಕಟ್ಟಿ ಹಗರಿನ ಮೇಲಿಂದ ಈ ದಾರವನ್ನು ಹಾಯಿಸಿ ಕಣ್ಣಿನ ಗಂಟನ್ನು ಹುಕುತ್ತಾರೆ. ಒಂದೊಂದು ಕಣ್ಣಿಗೆ ನಾಲ್ಕು ಗಂಟಗಳು ಬರುವಂತೆ ಹೆಣೆಯಲಾಗುತ್ತದೆ. ಬಲೆಯನ್ನು ಒಂದು ಅಡಿ ಹೆಣೆದ ನಂತರ ವರ್ತುಲಾಕಾರವಾಗುವಂತೆ ಕೂಡಿಸುತ್ತಾರೆ. ಪ್ರತಿಯೊಂದು ಸುತ್ತು ಮುಂದುವರಿಯುತ್ತಾ ಹೋದಂತೆ ಒಂದೊಂದು ಕಣ್ಣು ಹೆಚ್ಚಾಗುತ್ತಾ ಹೋಗುತ್ತದೆ. ಪ್ರಾರಂಭದಲ್ಲಿ 88 ಕಣ್ಣುಗಳಿದ್ದು ಬಲೆಯ ಗಾತ್ರಕ್ಕನುಸಾರವಾಗಿ ಕೊನೆಯಲ್ಲಿ ಹೆಚ್ಚುತ್ತಾ ಹೋಗುತ್ತವೆ. ಬಲೆಯ ಸ್ವರೂಪವು ಸರ್ಕಸ್ಸಿನ ಹಾಸ್ಯಗಾರನ ಉದ್ದ ಟೊಪ್ಪಿಯ ಆಕಾರದಲ್ಲಿರುತ್ತದೆ. ಬಲೆಯ ಮೇಲ್ಭಾಗದ ತುದಿಯಲ್ಲಿ ನೂಲಿನ ಇಲ್ಲವೆ ನೈಲಾನಿನ ದಾರವನ್ನು ಕಟ್ಟಿರುತ್ತಾರೆ. ಅದು ಬಲೆ ಬೀಸುವ ಸಂದರ್ಭದಲ್ಲಿ ಕೈಗೆ ಕಟ್ಟಿಕೊಂಡಿರುತ್ತಾರೆ. ಬಲೆಯ ತಳಭಾಗದಲ್ಲಿ ಮೂರು ಅಥವಾ ಐದು ಕಣ್ಣುಗಳಿಗೊಂದರಂತೆ ಸೀಸದ ಮಣಿಗಳನ್ನು ಕಟ್ಟುತ್ತಾ ಹೋಗುತ್ತಾರೆ. ಬಲೆ ಬೀಸಿದಾಗ ಸೀಸದ ಮಣಿಗಳ ಭಾರಕ್ಕೆ ಅದು ಛತ್ರಿಯಂತೆ ತೆರೆಯುತ್ತಾ ನೀರಲ್ಲಿಳಿಯುತ್ತಾ ಹೋಗಿ ನೀರಿನ ಒಳಗೆ ಚೀಲದ ಬಾಯಿ ಮುಚ್ಚಿಕೊಳ್ಳುವಂತೆ ಮುಚ್ಚಿಕೊಳ್ಳುತ್ತದೆ. ಬೀಸುವ ಬಲೆ ಹೆಣೆಯುವುದು ಇತರ ಬಲೆ ಹಣೆಯುವುದಕ್ಕಿಂತ ಕಷ್ಟದ ಕೆಲಸ. ಏಕೆಂದರೆ ವರ್ತುಲಾಕಾರದಲ್ಲೆನಾದರು ಸ್ವಲ್ಪ ವ್ಯತ್ಯಾಸವಾದರೂ ಬಲೆಯ ಸ್ವರೂಪ ವಿಕಾರಗೊಳ್ಳುತ್ತದೆ.

''ಕಿಂಡಿ ಬಲೆ'' ಹೆಣೆಯುವಾಗ ಗಟ್ಟಿ ನೂಲಿನಿಂದ ಆರು ಅಥವಾ ಎಂಟು ಅಂಗುಲ ಅಳತೆಯ ಕಣ್ಣುಗಳು ಬರುವಂತೆ ಹೆಣೆದು ಕೊಳ್ಳುತ್ತಾರೆ. ಕಣ್ಣು ಹೆಣೆಯುವಿಕೆ ಮುಂದುವರಿಯುತ್ತಾ ಹೋದಂತೆ ಬೇರೆ ಬೇರೆ ಗಾತ್ರದ ಹಗರನ್ನು ಬಳಸುತ್ತಾರೆ. ಮೊದಲು 19 ರಿಂದ 18 ಅಡಿ ಉದ್ದದ 30 ರಿಂದ 40 ಕಣ್ಣುಗಳಿರುವ ಒಂದೊಂದು ಬಲೆಯ ತುಂಡನ್ನು ಹೆಣೆದು ಕೊಂಡು ಅನಂತರ ಇಂತಹ ನಾಲ್ಕು ತುಂಡು ಬಲೆಗಳನ್ನು ಜೋಡಿಸಿ ಚೌಕಾಕಾರದ ಬಲೆಯನ್ನು ಸಿದ್ಧಮಾಡಿ ಎರಡೂ ಬಲೆಯ ಕೊನೆಯ ಕಣ್ಣುಗಳನ್ನು ಒಂದುಗೂಡಿಸಿ ಹೊಲಿಯುತ್ತಾರೆ. ಆಗ ಬಲೆಯು ಚೀಲದ ಸ್ವರೂಪ ಪಡೆಯುತ್ತದೆ.

ದಾರ : ಬಲೆ ಹೆಣೆಯಲು ಪ್ರಮುಖವಾದುದು ದಾರ. ಪ್ರಾರಂಭದಲ್ಲಿ ಸೆಣಬಿನ ದಾರ ಬಳಸುತ್ತಿದ್ದು. ಕಾಲಕ್ರಮೇಣ ಹತ್ತಿದಾರದ ಬಳಕೆ ಬಂದಿತ್ತು. ಈಗ ನೈಲಾನ ದಾರದ ಬಲೆಗಳು ಹೆಚ್ಚಾಗಿವೆ. ಅನುಭವಿಗಳ ಪ್ರಕಾರ ಸೆಣಬಿನ ದಾರದ ಬಲೆಯೇ ಒಳ್ಳೆಯದೆಂಬ ಅಭಿಪ್ರಾಯವಿದೆ. ಏಕೆಂದರೆ ಇದು ನೀರಲ್ಲಿ ಬೇಗ ಕೊಳೆಯುವುದಿಲ್ಲ ಅಲ್ಲದೆ ಅದು ನೈಲಾನ ಬಲೆಗಿಂತ ಗಟ್ಟಿಯಾದದ್ದೆಂದು ಹೇಳುತ್ತಾರೆ. ಸೆಣಬಿನ ದಾರ ತಯಾರಿಸುವಾಗ ಮೊದಲು ನೀರಿನಲ್ಲಿ ಸೆಣಬಿನ ಗಿಡವನ್ನು ಕೊಳೆಸಿ ನಾರು ತೆಗೆಯುತ್ತಾರೆ. ಆ ನಾರನ್ನು ಹಿಂಜಿ ಶುದ್ಧಗೊಳಿಸಿ ಚರಕದಿಂದ ಎಳೆ ತಯಾರಿಸಿ ಅದನ್ನು ಚೆಂಡಿನಾಕಾರದಲ್ಲಿ ಸುತ್ತಿ ಉಂಡೆ ಮಾಡಿಕೊಳ್ಳುತ್ತಾರೆ. ಉಂಡೆಗಳನ್ನು ನಾಲ್ಕೈದು ದಿನಗಳವರೆಗೆ ನೀರಿನಲ್ಲಿಡುತ್ತಾರೆ. ಚೆನ್ನಾಗಿ ನೆನೆದ ನಂತರ ಅದನ್ನು ಹೊರ ತೆಗೆದು ತೆಂಗಿನ ನಾರಿನಿಂದ ಚೆನ್ನಾಗಿ ತೀಡಿ ಮೃದು ಮಾಡುತ್ತಾರೆ. ದಾರವನ್ನು ನಾರಿಗೆ ತೀಡುವಾಗ ತೆಂಗಿನ ನಾರನ್ನು ಒಂದು ಮರಕ್ಕೆ ಕಟ್ಟಿ ಅದರ ಮೇಲೆ ದಾರವನ್ನು ಕತ್ತರಿಯಂತೆ ಹಾಕಿ ಎರಡೂ ಕೈಗಳಿಂದ ಜಗ್ಗಿ ತೀಡಿ ''ಕೊಳೆ'' ತೆಗೆಯುತ್ತಾರೆ. ಆಗ ದಾರವು ಮೃದುವಾಗಿ ಶುಭ್ರವಾಗುತ್ತದೆ. ಆ ದಾರವನ್ನು ಒಣಗಿಸಿ ಸುತ್ತ ಉಂಡೆ ಮಾಡಿ ಇಡುತ್ತಾರೆ.

ನೂಲಿನ ಬಲೆ ಸಿದ್ಧ ಪಡಿಸುವಾಗ ಹತ್ತಿಯ ದಾರವನ್ನು ಅಂಗಡಿಯಿಂದ ಕೊಂಡು ತಂದು ತಮಗೆ ಅಗತ್ಯವಾದ ಗಾತ್ರಕ್ಕೆ ಎರಡು ಮೂರು ಎಳೆಗಳನ್ನು ಸೇರಿಸಿ ದಾರ ಸಿದ್ಧ ಮಾಡಿಕೊಳ್ಳುತ್ತಾರೆ.

ಬಲೆಗಾಗಿ ಬಳಸುವ ದಾರವು 16 x 9, 18 x 9, 20 x 3, 20 x 4, 20 x 8, 20 x 9 ನಂಬರಿನದಾಗಿರುತ್ತದೆ. ಬಲೆಯ ಸ್ವರೂಪಕ್ಕೆ ಅನುಸಾರವಾಗಿ ದಾರದ ನಂಬರು ಬದಲಾಗುತ್ತದೆ. ಪಟ್ಟೆಬಲೆ, ಮಡ್ಲೆಬಲೆ, ಗೋರುಬಲೆಗಳನ್ನು ಹೆಣೆಯಲು 20 x 3, 20 x 4, ನೇ ನಂಬರಿನ ದಾರವನ್ನು ಉಪಯೋಗಿಸುತ್ತಾರೆ. ದೊಡ್ಡ ಕಣ್ಣಿನ ರಂಪಣ ಬಲೆ ಹೆಣೆಯಲು 18 x 9 ನಂಬರಿನ ದಾರವನ್ನು, ಚಿಕ್ಕ ಕಣ್ಣಿನ ರಂಪಣ ಬಲೆಗೆ 20 x 9 ನಂಬರಿನ ಬಲೆಯನ್ನು ಬಳಸುತ್ತಾರೆ.

ಬಲೆಯ ಮೇಲಿನ ಮತ್ತು ಕೆಳಬದಿಯ ಅಂಚುಗಳು ಬಲೆಯನ್ನು ಕಲಾತ್ಮಕಗೊಳಿಸುವುದು ಮಾತ್ರವಲ್ಲದೆ ಅದನ್ನು ಸುರಕ್ಷಿತವಾಗಿರುವಂತೆ ರಕ್ಷಿಸುತ್ತವೆ. ಅಂಚಿಗೆ ಮೀನುಗಾರರು ''ಆಸರೆ'' ಎಂದು ಕರೆಯುತ್ತಾರೆ. ಬಲೆಯ ಕೆಳಬದಿಯ ಅಂಚಿಗೆ ಸೀಸದ ಮಣಿ ಇಲ್ಲವೆ ಸೀಸದ ಗುಂಡುಗಳನ್ನು ಕಟ್ಟಿರುತ್ತಾರೆ. ಇದನ್ನು '' ಅಡಿ '' ಎನ್ನುತ್ತಾರೆ. ಬಲೆಯ ಮೇಲ್ ತುದಿಗೆ ಬೆಂಡು ಕಟ್ಟಿರುತ್ತಾರೆ. ಬಲೆಯ ಎರಡೂ ಬದಿಯಲ್ಲಿ ಹೊಂದಿಸಿರುವ ಸೀಸದ ಗುಂಡು ಮತ್ತು ಬೆಂಡುಗಳು ಹೊರಭಾಗದಲ್ಲಿ ಬಲೆಯ ಕೆಳಬದಿ ಮತ್ತು ಮೇಲ್ಬದಿಯನ್ನು ಗುರುತಿಸಲು ಮತ್ತು ನೀರಿನಲ್ಲಿದ್ದಾಗ ಬಲೆಯನ್ನು ನೇರವಾಗಿ ನಿಲ್ಲಿಸಲು ಸಹಾಯಕವಾಗುತ್ತವೆ.

ಬಲೆಗೆ ರೂಪ ಕೊಡುವ ಗಂಟುಗಳು :

ಬಲೆಗೆ ಮುಖ್ಯವಾದದ್ದು ಕಣ್ಣು, ಕಣ್ಣಿನ ಆಧಾರ ಗಂಟು. ಗಂಟುಗಳಿಲ್ಲದೆ ಬಲೆಯಾಗಲಾರದು. ಒಂದು ಕಣ್ಣು ಸಿದ್ಧವಾಗಬೇಕಾದರೆ ನಾಲ್ಕು ಮೂಲೆಗೂ ಒಂದೊಂದು ಗಂಟು ಬೀಳಲೇಬೇಕಾಗುತ್ತದೆ. ಹೊಸ ಬಲೆಯ ತಯಾರಿಕೆಗೂ ಗಂಟೇ ಪ್ರಧಾನ, ಹಳೆ ಬಲೆಯ ರಿಪೇರಿಗೂ ಗಂಟೇ ಪ್ರಮುಖ . ಮೀನುಗಾರರು ಹಾಕುವ ಗಂಟಿಗೂ ಉಳಿದವರು ಹಾಕುವ ಗಂಟಿಗೂ ಅಜಗಜಾಂತರ ವ್ಯತ್ಯಾಸ. ಏಕೆಂದರೆ ಮೀನುಗಾರರ ಗಂಟು '' ಬ್ರಹ್ಮಗಂಟು '' ಬಲೆ ಹರಿದರೂ ಗಂಟು ಮಾತ್ರ ಬಿಚ್ಚಿಕೊಳ್ಳುವದಿಲ್ಲ. ಅವರು ಹಾಕುವ ಗಂಟುಗಳಲ್ಲಿ ಹಲವು ವಿಧ. ಪ್ರತಿಯೊಂದೂ ತನ್ನದೇ ಆದ ವಿಶಿಷ್ಟತೆಯನ್ನು ಹೊಂದಿರುತ್ತದೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ :

1. ಗೂಟದ ಗಂಟು
2. ಹುಟ್ಟಿನ ಗಂಟು
3. ಜೋಡಿ ಗಂಟು
4. ಸರಿಗೆ ಗಂಟು
5. ಕವಲು ಗಂಟು
6. ಸರ ಗಂಟು
7. ಬಲೆ ಗಂಟು
8. ಸರಿಗಂಟು
9. ಒಂದು ಪೂರ್ಣ, ಎರಡು ಅರ್ಧ ಸುತ್ತಿನ ಗಂಟು.

1. **ಗೂಟದ ಗಂಟು :** ಇದು ಸಾಮಾನ್ಯ ಗಂಟು . ವ್ಯವಸಾಯಗಾರರಿಗೆ ಈ ಗಂಟಿನ ಪರಿಚಯವಿದ್ದೇ ಇರುತ್ತದೆ. ಅವರು ಸಾಕಿದ ಪ್ರಾಣಿಗಳನ್ನು ಗೂಟಕ್ಕೆ ಕಟ್ಟುವಾಗ ಈ ಗಂಟನ್ನು ಹಾಕುತ್ತಾರೆ. ಪ್ರಾಣಿ ತನ್ನೆಡೆಗೆ ಹಗ್ಗ ಎಳೆದಷ್ಟು ಈ ಗಂಟು ಭದ್ರವಾಗುತ್ತಾ ಹೋಗುತ್ತದೆ. ಮೀನುಗಾರರು ದೋಣಿಗೆ ಲಂಗರು ಕಟ್ಟುವಾಗ ಈ ಗಂಟನ್ನು ಹಾಕುತ್ತಾರೆ. ರಂಪಣಿ ಬಲೆಯ ಎರಡೂ ಬದಿಗೂ ದಂಡಿಗೆ ಕಟ್ಟುವಾಗ ಈ ಗಂಟನ್ನು ಹಾಕುತ್ತಾರೆ. ಬಲೆ ಜಗ್ಗಿದಂತೆ ಗಂಟು ಬಿಗಿಯಾಗುತ್ತಾ ಹೋಗುತ್ತದೆ. ದೋಣಿಯನ್ನು ತಂದು ನಿಲ್ಲಿಸುವಾಗಲೂ ದಡದ ಮೇಲಿರುವ ಗೂಟಕ್ಕೆ ಇದೇ ಗಂಟು ಹಾಕುತ್ತಾರೆ.

2. ಹುಟ್ಟಿನ ಗಂಟು : ಜೇನ್ನೊಣಗಳು ಕೊಂಬೆಗೆ ಗೂಡು ಕಟ್ಟುವಾಗ ಇದೇ ಬಗೆಯ ಗಂಟನ್ನು ಹಾಕುತ್ತವೆ. ವೈ.ಎಸ್. ದುರ್ಗೇಕರರು '' ಜೇನು ನೋಣಗಳ ಹುಟ್ಟಿನಂತೆ ಗಂಟು ಬೀಳುವುದರಿಂದ ಇದನ್ನು ಹುಟ್ಟಿನ ಗಂಟು ಎನ್ನುತ್ತಾರೆ'' ಎಂದು ಅಭಿಪ್ರಾಯ ಪಡುತ್ತಾರೆ. ಈ ಗಂಟನ್ನು ಗಾಳ ಕಟ್ಟುವಾಗ, ತೆಂಗಿಸ್ ದಾರವನ್ನು '' ಬಯಣಿಗೆ '' ಸೇರಿಸುವಾಗ ಹುಟ್ಟಿನ ಗಂಟು ಹಾಕುತ್ತಾರೆಂದು ಅವರು ತಿಳಿಸುತ್ತಾರೆ.

3. ಜೋಡಿ ಗಂಟು : ಇದು ಸರಿಗಂಟನ್ನು ಹೋಲುತ್ತದೆ. ಇಲ್ಲಿ ದಾರದ ಎರಡೂ ತುದಿಗಳಿಗೂ ಸರಿಗಂಟನ್ನು ಹಾಕಿ ದಾರ ಜಗ್ಗಿದರೆ ಎರಡೂ ಗಂಟುಗಳು ಒಂದಕ್ಕೊಂದು ಕೂಡಿ ಕೊಳ್ಳುತ್ತವೆ. ಇದನ್ನು ಗಾಳ ಸಿದ್ಧ ಮಾಡುವ ಸಂದರ್ಭದಲ್ಲಿ ಹಾಕುವುದು ಹೆಚ್ಚು.

4. ಸರಿಗೆ ಗಂಟು : ತಂತಿ ಇಲಾಖೆಯವರು ಎರಡು ತಂತಿಯನ್ನು ಕೂಡಿಸುವಾಗ ಈ ಗಂಟನ್ನು ಹಾಕುತ್ತಾರೆ. ಆದ್ದರಿಂದ ಇದನ್ನು ''ತಂತಿ ಗಂಟು '' ಎಂದು ಕರೆಯುವರೆಂದು ದುರ್ಗೇಕರರು ತಿಳಿಸುತ್ತಾರೆ. ತೆಂಗೀಸ್ ಮತ್ತು ಬಯಣಿ ಮೊದಲಾದ ದಾಟಿಗಳನ್ನು ಒಂದಕ್ಕೊಂದು ಕೂಡಿಸುವಾಗ ಸರಿಗೆ ಗಂಟು ಹಾಕುತ್ತಾರೆ.

5. ಕವಲು ಗಂಟು : ಬಲೆಗಳಿಗೆ ಸೀಸದ ಮಣಿಗಳನ್ನು ಪೋಣಿಸುವಾಗ ಕವಲು ಗಂಟು ಹಾಕುತ್ತಾರೆ. ಒಂದು ದಾರಕ್ಕೆ ಮತ್ತೊಂದು ದಾರವನ್ನು ಕವಲಾಗಿ ಸೇರಿಸುವಾಗ ಈ ಗಂಟನ್ನು ಹಾಕಲಾಗುತ್ತದೆ. ಮುಖ್ಯದಾರದ ಎಳೆಯೊಂದಿಗೆ ಕವಲಾಗುವ ದಾರದ ಎಳೆಯನ್ನು ಸೇರಿಸಿ ಒಂದು ಮಾಡುತ್ತಾರೆ. ಅದನ್ನು ನಿಂಗಿಬಲೆಯಲ್ಲಿನ 22 ಎಳೆಗಳಿಗೆ ಕವಲು ಗಂಟು ಹಾಕುತ್ತಾರೆ. ಆ ಗಂಟು ಗಟ್ಟಿಯಾಗಿರುವುದಲ್ಲದೆ ನಯವಾಗಿದ್ದು ಒಂದೇ ದಾರ ಕವಲಾಗಿದೆಯೆಂಬಂತೆ ತೋರುತ್ತದೆ. ಸಾಮಾನ್ಯವಾಗಿ ಕವಲು ಗಂಟು ದಾರ ದಾರಗಳ ನಡುವೆ ಹಾಕಲ್ಪಡದೆ, ಎಳೆ-ಎಳೆಗಳನ್ನು ಸೇರಿಸುತ್ತದೆ.

6. ಸರಗಂಟು : ಇದು ಶಾಶ್ವತವಾದ ಗಂಟಾಗದೆ ತಾತ್ಕಾಲಿಕ ಭದ್ರತೆಯ ಗಂಟಾಗಿದೆ. ಅವಶ್ಯಕವಿಲ್ಲದಾಗ ಗಂಟನ್ನು ಸುಲಭವಾಗಿ ಬಿಚ್ಚುವಂತೆ ಹಾಕಿರುತ್ತಾರೆ. ಬಲೆ ಎಳೆಯುವಾಗ ಹಗ್ಗ ಹರಿದರೆ ಇಂತಹ ಗಂಟು ಹಾಕಿ ಹಗ್ಗ ಜೋಡಿಸುತ್ತಾರೆ.

7. ಬಲೆಗಂಟು: ಬಲೆ ಹೆಣೆಯುವಾಗ ಹಾಕುವ ಗಂಟಿಗೆ ''ಬಲೆಗಂಟು '' ಎಂದು ಕರೆಯುತ್ತಾರೆ. ಹಗರನ್ನು ಬಳಸಿ ಬಲೆಯಲ್ಲಿ ಕಣ್ಣು ಮೂಡಿಸಲು ಈ ಗಂಟನ್ನು ಹಾಕುತ್ತಾರೆ. ತುಂಡು ಬಲೆಗಳನ್ನು ಒಂದಕ್ಕೊಂದು ಸೇರಿಸುವಾಗ ಬಲೆಗಂಟು ಹಾಕುತ್ತಾರೆ. ಇದನ್ನು '' ಜಾಲದ ಗಂಟು '' ಎಂದು ಸಹ ಕರೆಯುತ್ತಾರೆ. ಇಂಗ್ಲೀಷನಲ್ಲಿ '' ಶೀಟ್ ಬೆಂಡ್ ''ಎಂದು ಹೇಳುತ್ತಾರೆ.

8. ಸರಿಗಂಟು : ಇದು ಭದ್ರವಾದ ಗಂಟು ಆದ್ದರಿಂದ '' ಬಿರುಸು ಗಂಟು '' ''ಗಂಡು ಗಂಟು ''ಎಂದೂ ಇದನ್ನು ಮೀನುಗಾರರು ಕರೆಯುತ್ತಾರೆ. ಬಲೆಯ ಮೇಲ್ತುದಿಗೂ ಹಾಗೂ ಕೆಳ ತುದಿಗೂ ಅಂಚು ಸೇರಿಸುವಾಗ ಮತ್ತು ಒಂದು ಬಲೆಯನ್ನು ಮತ್ತೊಂದು ಬಲೆಯೊಡನೆ ಜೋಡಿಸುವಾಗ ಸರಿಗಂಟನ್ನು ಹಾಕುತ್ತಾರೆ. ಇದರಲ್ಲಿ ಎರಡು ಪ್ರಯೋಜನಗಳಿವೆ. ಬೇಕಾದಾಗ ಗಂಟನ್ನು ಸುಲಭವಾಗಿ ಬಿಡಿಸಿಕೊಳ್ಳಬಹುದು. ಬೇಡವಾದಾಗ ಎಳೆದು ಅದನ್ನು ಬಿಗಿಗೊಳಿಸಬಹುದು.

9. ಒಂದು ಪೂರ್ಣ ಮತ್ತು ಎರಡು ಅರ್ಧ ಸುತ್ತಿನ ಗಂಟು : ಇದನ್ನು ''ಮರಗಂಟು '' ಎಂದು ಕರೆಯುತ್ತಾರೆಂದು ದುರ್ಗೇಕರರು ತಿಳಿಸುತ್ತಾರೆ. ಮೀನುಗಾರರು ತಮ್ಮ ದೋಣಿಗಳಿಗೆ ಲಂಗರು ಕಟ್ಟುವಾಗ ಹಾಗೂ ಕೆಲಸ ಮುಗಿದ ನಂತರ ದೋಣಿಯನ್ನು ದಡದಲ್ಲಿನ ಗೂಟಕ್ಕೆ ಕಟ್ಟುವಾಗ ಈ ಗಂಟನ್ನು ಹಾಕುತ್ತಾರೆ. ಇದನ್ನು ಸುಲಭವಾಗಿ ಕಟ್ಟಲೂಬಹುದು ಮತ್ತು ಬಿಚ್ಚಲೂ ಬಹುದು. ಇದನ್ನು ಇಂಗ್ಲೀಷನಲ್ಲಿ '' ಒನ ರೌಂಡ ಟರ್ನ ಆಂಡ್ ಟೂ ಹಾಫ್ ಹಿಚ್ಚೆಸ್'' ಎನ್ನುವರು.


. ಹೀಗೆ ಬಳಕೆಯಲ್ಲಿರುವ ಇನ್ನೂ ಹಲವಾರು ಬಗೆಯ ಗಂಟುಗಳು ಮೀನುಗಾರರ ಕೈಯ್ಯ ಕಲಾತ್ಮಕತೆಯನ್ನು ಪರಿಚಯಿಸುತ್ತದೆ. ಇವರು ಹಾಕುವ ಗಂಟುಗಳಲ್ಲೆಲ್ಲಾ ಪ್ರಮುಖವಾದವು ಸ್ಥಿರ ಭದ್ರತೆಯ ಗಂಟು, ಹಾಗೂ ತಾತ್ಕಾಲಿಕ ಭದ್ರತೆಯ ಗಂಟು. ಬಲೆ ಹೆಣೆಯುವಾಗ,

ಹೆಣೆದ ತುಂಡು ಬಲೆಗಳನ್ನು ಸೇರಿಸುತ್ತಿರುವುದು.










ಬಲೆ ಹೆಣೆವ ವಿವಿಧ ಬಗೆಗಳು.




ಹುರಿಗಂಟು



ಸುರಿಗೆಗಂಟು



ಗೂಟಗಂಟು




ಒಂದು ಪೂರ್ಣ ಸುತ್ತು
ಎರಡು ಅರ್ಧ ಸುತ್ತಿನ ಗಂಟು.


~~ಒಂದು ಪೂರ್ಣ ಸುತ್ತು~~
ಎರಡು




ಜುಟ್ಟಿನ ಗಂಟು




ಕುರಗಂಟು



ಬಲೆಹೆಣೆಯುವಾಗ ಹಾಕುವ ಗಂಟುಗಳ ರೀತಿ



ಕವಲು ಗಂಟು



ಜೋಡಿ ಗಂಟು

ಬಲೆಗಳನ್ನು ಜೋಡಿಸುವಾಗ, ಗಾಳ ಕಟ್ಟುವಾಗ, ಸ್ಥಿರ ಭದ್ರತೆಯ ಗಂಟನ್ನು ಹಾಕುತ್ತಾರೆ. ಗಂಟಿನ ಅವಶ್ಯಕತೆ ತಾತ್ಕಾಲಿಕವೆನಿಸುವ ಸಂದರ್ಭಗಳಲ್ಲಿ ತಾತ್ಕಾಲಿಕ ಭದ್ರತೆಯ ಗಂಟನ್ನು ಹಾಕುತ್ತಾರೆ. ಮೀನುಗಾರರು ಹಾಕುವ ಗಂಟು ಯಾವುದೇ ಆಗಿರಲಿ , ಅದರಲ್ಲಿ ಭದ್ರತೆ ಮತ್ತು ಕಲಾತ್ಮಕತೆಗಳೆರಡೂ ಇರುತ್ತವೆ.

ಪ್ರಮುಖ ಬಲೆಗಳು

~~ಪ್ರಮುಖ ಬಲೆಗಳು~~ ಮೀನುಗಾರರು ಮೀನಿನ ಸ್ವಭಾವನ್ನರಿತು ಅದನ್ನು ಯಾವ ಸಾಧನದಿಂದ ಹಿಡಿಯಬಹುದೆಂಬುದನ್ನು ನಿರ್ಧರಿಸುತ್ತಾರೆ. ಮೀನಿನ ಆಕಾರ, ಗುಣ, ಸ್ವಭಾವಕ್ಕೆ ತಕ್ಕಂತೆ ಬಲೆಯಲ್ಲಿ ವಿವಿಧ ಸ್ವರೂಪದ ಬಲೆಗಳನ್ನು ಅವರು ಸಿದ್ಧಪಡಿಸುತ್ತಾರೆ. ಇಂದು ಬಲೆಗಳ ತಯಾರಿಕೆಯಲ್ಲಿ ಕ್ರಾಂತಿಯೇ ನಡೆದಿದೆ. ಆದರೂ ಪ್ರಾಚೀನವಾದ ಬಲೆಗಳು ಅಂದಿನ ಮೀನುಗಾರರು ಸಮುದ್ರ ಸಂಪತ್ತನ್ನು ಸೆರೆಹಿಡಿಯುವಲ್ಲಿ ಅವರಲ್ಲಿದ್ದ ಚಾಣಾಕ್ಷತನವನ್ನು ಪರಿಚಯಿಸುತ್ತವೆ.

ರಂಪಣಿ ಬಲೆ

ಹಿಂದೆ ಕರ್ನಾಟಕ ಕರಾವಳಿಯಲ್ಲಿ ಹಿಡಿದ ಒಟ್ಟು ಮೀನಿನಲ್ಲಿ ಶೇಕಡ 55ರಿಂದ 75ರಷ್ಟು ಮೀನನ್ನು ರಂಪಣಿ ಬಲೆಯಿಂದ ಹಿಡಿಯಲಾಗುತ್ತಿತ್ತು. ಸಾಮಾನ್ಯವಾಗಿ ಬೃಹದಾಕಾರದ ರಂಪಣಿ ಬಲೆಯು ಹಲವು ತುಂಡು ಬಲೆಗಳನ್ನು ಹೊಂದಿರುತ್ತದೆ. ಒಂದೊಂದು ತುಂಡು ಸುಮಾರು 324 ಚದರಡಿ ಇರುತ್ತದೆ. ಅಂದರೆ 13 x 3.75 ಅಡಿಗಳಾಗಿರುತ್ತದೆ. ಇಂತಹ ಐದುನೂರು ಇಲ್ಲವೆ ಆರುನೂರು ತುಂಡುಗಳನ್ನು ರಂಪಣಿ ಬಲೆಯಲ್ಲಿ ಸೇರಿಸಿ ಹೆಣೆದಿರುತ್ತಾರೆ. ಈ ತುಂಡುಗಳ ಸಂಖ್ಯೆಯು ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸವಾಗುತ್ತಾ ಹೋಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ಮೀನುಗಾರರು ಬಳಸುವ ರಂಪಣಿ ಬಲೆಯಲ್ಲಿ ನೂರರಿಂದ ಇನ್ನೂರೈವತ್ತು ತುಂಡು ಬಲೆಗಳನ್ನು ಜೋಡಿಸಿರುತ್ತಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಬಳಸುವ ರಂಪಣಿ ಬಲೆಯಲ್ಲಿ ನಾಲ್ಕು ನೂರರಿಂದ ಆರುನೂರು ತುಂಡು ಬಲೆಗಳನ್ನು ಜೋಡಿಸಿರುತ್ತಾರೆ. ಈ ವ್ಯತ್ಯಾಸದಿಂದ ದಕ್ಷಿಣ ಕನ್ನಡ ಜಿಲ್ಲೆಯ ರಂಪಣಿ ಬಲೆಯ ಉದ್ದವು 1030 ಮೀಟರುಗಳಾದರೆ, ಉತ್ತರ ಕನ್ನಡ ಜಿಲ್ಲೆಯ ರಂಪಣಿ ಬಲೆಯ ಉದ್ದವು 4000 ಮೀಟರುಗಳಾಗಿರುತ್ತದೆ.

ಕಡಲ ಸಂಪತ್ತನ್ನು ಸೆರೆಹಿಡಿಯಲು ಬಳಸುತ್ತಿದ್ದ ಬಲೆಗಳಲ್ಲಿ ಪ್ರಸಿದ್ಧ ಬಲೆ ರಂಪಣಿ ಬಲೆಯಾಗಿದೆ. ಇದನ್ನು ಸ್ಥಳೀಯರು ''ಮಾರಿಬಲೆ'' ಎಂದು ಕರೆಯುತ್ತಾರೆ. ಗೋವಾ ಮೂಲದ ಕ್ರಿಶ್ಚಿಯನ್ ಪಾದರ್ ರಂಪನ್ ಎಂಬವನು ಈ ಬಲೆಯನ್ನು ಕಂಡುಹಿಡಿದ ಕಾರಣ ಅದನ್ನು ''ರಂಪನಿ ಬಲೆ'' ಎಂದು ಕರೆಯಲಾಯಿತು. ಸ್ಥಳೀಯರು ಅದಕ್ಕೆ ಉದ್ದ ಮತ್ತು ಅಗಲದಲ್ಲಿ ಬಹುದೊಡ್ಡದಾಗಿದ್ದ ಆ ಕಾರಣ ಬಲೆಯನ್ನು ''ಮಾರಿಬಲೆ'' ಎಂದು ಕರೆದಿರಬಹುದು. ಹಿಂದೆ ರಂಪಣಿ ಬಲೆ ಅಥವಾ ಮಾರಿಬಲೆಯ ಮೀನುಗಾರರ ಗುಂಪೇ ಪ್ರತ್ಯೇಕವಾಗಿತ್ತು. ಅವರು ಮೀನು ಹಿಡಿಯುವಾಗ ಮಾತ್ರ ಒಂದಾಗದೆ ಊರಿನ ಯೋಗಕ್ಷೇಮವನ್ನು ನೋಡಿಕೊಳ್ಳುವಾಗಲೂ ಪರಸ್ಪರ ಸಹಕರಿಸುತ್ತಿದ್ದರು. ಮಾರಿಬಲೆಯ ಮೀನುಗಾರರಿಗೆ ''ರಂಪನಿ ಫಂಡು'' ಎಂದು ಕರೆಯುತ್ತಿದ್ದರು. ಒಂದು ಫಂಡಿನಲ್ಲಿ 100 -150 ಜನರಿದ್ದು ಕೆಲವರು ರಂಪನಿ ಬಲೆಯ ಬಂಡವಾಳಗಾರರಾಗಿರುತ್ತಿದ್ದರು. ಈ ಫಂಡಿನಲ್ಲಿ ಒಬ್ಬ ಯಜಮಾನ, ಒಬ್ಬ ಶಿಲ್ಕುದಾರ, ಒಬ್ಬ ಶ್ಯಾನುಭೋಗ, ಒಬ್ಬ ತಾಂಡೇಲ, ಇಬ್ಬರು ಗುರಿಕಾರರು ಇರುತ್ತಿದ್ದರು. ಅವರು ಈಗಲೂ ತಮ್ಮ ಹೆಸರಿನ ಮುಂದೆ ಶ್ಯಾನುಭೋಗ, ತಾಂಡೇಲ, ಗುರಿಕಾರ ಎಂದು ಸೇರಿಸಿಕೊಳ್ಳುತ್ತಾರೆ. ಈಗ ಅದು ಮನೆತನದ ಹೆಸರಾಗಿ ಉಳಿದಿದೆ. ಊರಲ್ಲಿ ಗಲಾಟೆಯಾದರೆ ರಂಪನಿ ಬಲೆಯ ಫಂಡಿನವರು ಸಭೆ ಸೇರಿ ತೀರ್ಮಾನ ಕೈಗೊಳ್ಳುತ್ತಿದ್ದರು. ಆಗ ಫಂಡಿನ ಪಂಚಾಯಿತಿ ಅಂದರೆ ಜನರು ಗೌರವ ಕೊಡುತ್ತಿದ್ದರು. ಅವರು ಕೈಗೊಳ್ಳುವ ತೀರ್ಮಾನಕ್ಕೆ , ಕೊಡುವ ಶಿಕ್ಷೆಗೆ ಯಾರೂ ಮರುಮಾತಾಡುವಂತಿರಲಿಲ್ಲ. ಮಾರಿಬಲೆಯ ತಂಡದಲ್ಲಿ ದುಡಿಯುವ ಜನ ಕೇವಲ ತಮ್ಮ ಮನೆಗಳನ್ನು ಮಾತ್ರ ಕ್ಷೇಮದಿಂದ ನೋಡಿಕೊಳ್ಳದೆ ತಮ್ಮೂರಿನ ಕ್ಷೇಮ ಕಾಪಾಡುವ ಜವಾಬ್ದಾರಿಯನ್ನು ಹೊತ್ತಿದ್ದರು. ರಂಪಣಿ ಬಲೆಯಲ್ಲಿ ಬೇಟೆಯಾಡಲು ಅದಕ್ಕೆ ಸಂಬಂಧಿಸಿದ ಸಾಮಾಗ್ರಿಗಳಾದ ಒಂದು ಅಥವಾ ಎರಡು ಪಾಂಡಿ, ಮೂರು ಅಥವಾ ನಾಲ್ಕು ಪಾತಿ, ನಾರು, ಕೊಳೆ, ದಂಡು, ಅಡ್ಡಿ, ನೊಗ, ಅಳ್ಳಿ ಬಲೆ, ಚಿಕಣ ಬಲೆ, ಮಾಡಿನ ಬಲೆ, ತೋಕಳಿ, ಏಂಡಿ ಬಲೆ, ಒಳಮಾಡು, ಕಣ್ಣಿ ಬಲೆ, ಹೋದರ ಗುಟ್ಟ, ಗೋಲಾಯಿ ಬಲೆ, ಕಳಿ ಮೊದಲಾದವು ಬೇಕಾಗುತ್ತದೆ.

[**ಅಳ್ಳಿ ಬಲೆ :** ದೊಡ್ಡ ಕಣ್ಣಿನ ಬಲೆ.

ಚಿಕಣ ಬಲೆ : ಅಳ್ಳಿ ಬಲೆಯನ್ನು ಎಳೆದು ದಡಕ್ಕೆ ಹಾಕಿದ ನಂತರ ಬರುವ ಸಣ್ಣ ಕಣ್ಣಿನ ಬಲೆಯನ್ನು ಚಿಕಣ ಬಲೆ ಎನ್ನುತ್ತಾರೆ. ಇದರಲ್ಲಿ ಎಲ್ಲಾ ವಿಧದ ಮೀನುಗಳು ಸೆರೆಹಿಡಿಯಲ್ಪಡುತ್ತವೆ.

ಮಾಡಿನ ಬಲೆ : ಮೀನುಗಳು ಒಟ್ಟಾಗಿ ನಿಲ್ಲುವ ಗಟ್ಟಿ ನೂಲಿನಿಂದ ದಪ್ಪದಾಗಿ ಮಾಡಿದ ಬಲೆಯನ್ನು ಮಾಡಿನ ಬಲೆ ಎನ್ನುತ್ತಾರೆ.

ತೋಕಳಿ : ಇದನ್ನು ''ಪಾಟ್ '' ಎಂದೂ ಸಹ ಕರೆಯುತ್ತಾರೆ. ಬಲೆಯ ಎರಡೂ ಸೆರಗನ್ನು ಸರಿಪಡಿಸಲು ಇರುವ ತೇಲಾಡುವ ಒಂದು ಸಾಧನ. ಇದನ್ನು ಮಾಡಿನ ಬಲೆಯ ಮಧ್ಯದಲ್ಲಿ ಕಟ್ಟಿರುತ್ತಾರೆ.

ಏಂಡಿ ಬಲೆ : ಬಲೆಯಲ್ಲಿ ತುಂಬಿದ ಮೀನನ್ನು ದಡಕ್ಕೆ ತುಂಬಿಸಿ ತಂದು ಹಾಕುವ ಬಲೆಯನ್ನು ಏಂಡಿ ಬಲೆ ಎನ್ನುತ್ತಾರೆ. ಬಲೆಯಲ್ಲಿ ಬಾಂಗ್ಡೆ, ಬೈಗೆ ಮೊದಲಾದ ಮೀನುಗಳು ತುಂಬಿರುವಾಗ ಈ ಏಂಡಿ ಬಲೆಗೆ ತುಂಬಿಸಿ ಅಡ್ಡಿ ಕಟ್ಟಿ ನಾಲ್ಕು ಜನರು ಸೇರಿ ಸಂತೋಷದಿಂದ ಪದ ಹಾಡುತ್ತಾ ತಂದು ಹಾಕುತ್ತಾರೆ. ಇದಕ್ಕೆ ''ಮೀನು ತೋಡುವುದು ''ಎಂದು ಕರೆಯುತ್ತಾರೆ.

ಒಳಮಾಡು : ರಂಪನಿ ಬಲೆಯಲ್ಲಿ ಬೇರೆ ಬೇರೆ ಜಾತಿಯ ಮೀನು ತುಂಬಿರುವಾಗ ಸಣ್ಣ ಬಲೆಯನ್ನು ಉಪಯೋಗಿಸಿ ಮೇಲೆ ಎಳೆದು ಮೀನನ್ನು ರಾಶಿ ಹಾಕುತ್ತಾರೆ. ಇಂಕ್ಕೆ ಒಳಮಾಡು ಹಾಕಿ ತೋಡುವುದು ಎನ್ನುತ್ತಾರೆ.

ಹೋದರ ಗುಟ್ಟ : ಮೀನು ತೋಡುವಾಗ ಬಲೆಯ ಎರಡೂ ಬದಿಯ ಸೆರಗನ್ನು ದಡದಲ್ಲಿ ಎರಡು ಗೂಟ ಹೊಡೆದು ಕಟ್ಟುತ್ತಾರೆ. ಆ ಗೂಟಗಳಿಗೆ ''ಹೋದರ ಗುಟ್ಟ'' ಎನ್ನುತ್ತಾರೆ. ಒಂದೊಂದು ಸೆರಗಿಗೆ ಎರಡೆರಡು ಹೋದರ ಗುಟ್ಟಗಳು ಬೇಕಾಗುತ್ತವೆ.]

ರಂಪನಿ ಬಲೆಯಲ್ಲಿ ಮೂರುಭಾಗಗಳಿರುತ್ತವೆ. ಮಧ್ಯಭಾಗದ ಬಲೆಯನ್ನು ''ಮಂಡು'' ಎಂದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕರೆದರೆ, ಉತ್ತರ ಕನ್ನಡ ಜಿಲ್ಲೆಯಲ್ಲಿ ಅದಕ್ಕೆ ''ಚಿಕ್ಕ ಬಲೆ'' ಎಂದು ಕರೆಯುತ್ತಾರೆ. ಮಂಡು ಬಲೆಯಲ್ಲಿ ಸುಮಾರು ನೂರು ತುಂಡು ಬಲೆಗಳನ್ನು ಜೋಡಿಸಿರುತ್ತಾರೆ. ಪ್ರತಿಯೊಂದು ತುಂಡು ಬಲೆಯು 1.20 ಮೀಟರ್ ಉದ್ದವಿದ್ದು 11.5 ಮೀಟರ್ ಅಗಲವಿರುತ್ತದೆ. ಅದರ ಕಣ್ಣಳತೆಯು 20 ಮಿ.ಮೀಟರಗಳಾಗಿರುತ್ತದೆ. ಕಣ್ಣಿನ ಗಾತ್ರವು ಹೊರಭಾಗದಿಂದ ಮೇಲ್ಬಾಗದ ಕಡೆಗೆ ಕಡಿಮೆಯಾಗುತ್ತಾ ಹೋಗುತ್ತದೆ. ದೊಡ್ಡ ತೇಲು ಬುರುಡೆಯನ್ನು ಮಂಡು ಬಲೆಯ ಮಧ್ಯೆ ಉದ್ದವಾದ ಹಗ್ಗದಿಂದ ಸಿಕ್ಕಿಸಿರುತ್ತಾರೆ. ಈ ಬುರುಡೆಗೆ ''ವ್ಯರಜ'' ಎಂದು ಕರೆಯುತ್ತಾರೆ. ಇದು ನೀರಿನಲ್ಲಿರುವ ಬಲೆಯ ಮಧ್ಯಬಿಂದುವನ್ನು ಸೂಚಿಸುತ್ತಿರುತ್ತದೆ. ಮಂಡು ಬಲೆಯ ಅಕ್ಕಪಕ್ಕದಲ್ಲಿ ಸುಮಾರು ಐವತ್ತರಿಂದ ಎಪ್ಪತ್ತೈದು ತುಂಡು ಬಲೆಗಳನ್ನು ಸೇರಿಸಿರುತ್ತಾರೆ. ಇದರ ಕಣ್ಣಳತೆಯು ಇಪ್ಪತ್ತೈದು ಮಿ.ಮೀ. ಆಗಿರುತ್ತದೆ. ಈ ಭಾಗಕ್ಕೆ ''ಡೊಲ್ಲಿ ಬಲೆ '' ಎನ್ನುತ್ತಾರೆ. ಡೊಲ್ಲಿ ಬಲೆಯ ಪ್ರತಿಯೊಂದು ತುಂಡು ಮೂರು ಮೀಟರ್ ಉದ್ದವಿದ್ದು 11.5 ಮೀಟರ್ ಅಗಲವಿರುತ್ತದೆ.ಡೊಲ್ಲಿ ಬಲೆಯ ಅಕ್ಕಪಕ್ಕ ಸುಮಾರು ಐವತ್ತರಿಂದ ನೂರು ತುಂಡು ಬಲೆಗಳನ್ನು ಸೇರಿಸಿರುತ್ತಾರೆ. ಇದು ರಂಪಣಿ ಬಲೆಯ ಕೊನೆಯ ಅಥವಾ ಹೊರಭಾಗವಾಗಿರುತ್ತದೆ. ಇದಕ್ಕೆ ''ಅಲ್ಲಿ ಬಲೆ'' ಎಂದು ಕರೆಯುತ್ತಾರೆ. ಅಲ್ಲಿ ಬಲೆಯಲ್ಲಿ ಜೋಡಿಸಿರುವ ಪ್ರತಿಯೊಂದು ತುಂಡು ಬಲೆಯ ಅಳತೆಯು ಆರು ಮೀಟರ್ ಉದ್ದ ಮತ್ತು 10.7 ಮೀಟರ್ ಅಗಲವಿರುತ್ತದೆ. ಇದರ ಕಣ್ಣಳತೆಯು 30 ಮಿ. ಮೀಟರುಗಳು. ರಂಪಣಿಯ ಒಳ ಹಾಗೂ ಹೊರಭಾಗದ ಬಲೆಗಳು ರಂಪಣಿಯ ಒಟ್ಟು ಉದ್ದದಲ್ಲಿ ೯೦ ಭಾಗದಷ್ಟಿರುತ್ತವೆ.

ಹೀಗೆ ರಂಪಣಿ ಬಲೆಯ ಮೂರು ಭಾಗಗಳು ಒಂದಕ್ಕೊಂದು ಜೋಡಿಸಲ್ಪಟ್ಟಿರುವುದರ ಜೊತೆಗೆ ಬಲೆಯ ನಡುನಡುವೆ ಕಲ್ಲುಗಳನ್ನು ಕಟ್ಟಿರುತ್ತಾರೆ. ಮೇಲ್ಬಾಗದಲ್ಲಿ ಬೆಂಡುಗಳನ್ನು ಕಟ್ಟಿರುತ್ತಾರೆ. ಇವು ಬಲೆ ನೀರಲ್ಲಿ ಸರಿಯಾಗಿ ಹರಡಿಕೊಳ್ಳಲು ಸಹಕಾರಿಯಾಗಿರುತ್ತವೆ. ಈ ಬಲೆಯನ್ನು ಸಾಗಿಸಲು 3.6 ಮೀಟರ್ ಅಗಲದ ಹಾಗೂ 1.7 ಮೀಟರ್ ಆಳದ ಒಂದು ನಾಡದೋಣಿ ಬೇಕಾಗುತ್ತದೆ. ಅದಕ್ಕೆ ಮೀನುಗಾರರು ''ಪಾಂಡಿ'' ಎಂದು ಕರೆಯುತ್ತಾರೆ. ಇದರೊಂದಿಗೆ 7.5 ಮೀಟರ್ ಉದ್ದದ ಒಂದು ಮೀಟರ್ ಅಗಲದ ಮತ್ತು 0.7 ಮೀಟರ್ ಆಳದ ಎರಡು ಅಥವಾ ಮೂರು ಪಾತಿ ದೋಣಿಗಳು ಬೇಕಾಗುತ್ತವೆ. ಇವುಗಳಲ್ಲೊಂದು ''ಮೀನಿನ ಕರ್ಪು'' ಕಂಡುಹಿಡಿಯಲು ಮೀಸಲಿರುತ್ತದೆ. ಉಳಿದ ಪಾತಿ ದೋಣಿಗಳು ಬಲೆ ಬಿಡಲು ಉಪಯೋಗಿಸಲಾಗುತ್ತದೆ.

ಕರ್ನಾಟಕ ಕರಾವಳಿಯಲ್ಲಿ 1950ರಿಂದ 1960 ರವರೆಗೆ 200 ರಂಪಣಿ ಬಲೆಗಳಿದ್ದವೆಂದು ತಿಳಿದು ಬರುತ್ತದೆ. ಯಾಂತ್ರಿಕ ದೋಣಿಗಳ ಪ್ರವೇಶದ ನಂತರ ರಂಪಣಿ ಬಲೆಗಳು ಅಪರೂಪವಾಗುತ್ತಾ ಹೋದವು.

ಮೊದಲು ಪಾತಿ ದೋಣಿಯು ಮೀನಿನ ಕರ್ಪು ಹುಡುಕಲು ಹೋಗುತ್ತದೆ. ಅದರಲ್ಲಿ ಮೂರು ನಾಲ್ಕು ಜನರಿರುತ್ತಾರೆ. ಅವರು ತಮ್ಮ ಅನುಭವಜ್ಞಾನದಿಂದ ದೂರದಿಂದಲೇ ಮೀನಿನ ಗುಂಪನ್ನು ಕಂಡುಹಿಡಿಯುತ್ತಾರೆ. ಆ ಸಂದರ್ಭದಲ್ಲಿ ದಡದಲ್ಲಿರುವ ಉಳಿದ ರಂಪಣಿ ಬಲೆಯ ಮೀನುಗಾರರು ಪಾತಿ ದೋಣಿಯ ಕಡೆಯೇ ದೃಷ್ಟಿನೆಟ್ಟಿರುತ್ತಾರೆ. ಪಾತಿಯಲ್ಲಿನ ಜನರು ಮೀನಿನ ಕರ್ಪು ಕಂಡು ಹಿಡಿದ ತಕ್ಷಣ ಬಾವುಟವನ್ನು ತೋರಿಸಿ ದಡದಲ್ಲಿದ್ದ ತಮ್ಮ ಸಹೋದ್ಯೋಗಿಗಳಿಗೆ ಸೂಚನೆ ಕೊಡುತ್ತಾರೆ. ಆಗ ರಂಪಣಿ ಬಲೆಯನ್ನು ಪಾಂಡಿಯಲ್ಲಿ ತುಂಬಿಕೊಂಡು ಹದಿನೈದು ಇಲ್ಲವೆ ಇಪ್ಪತ್ತು ಜನರು ಹೊರಡುತ್ತಾರೆ. ಉಳಿದ ಜನರು ದಡದಲ್ಲಿರುತ್ತಾರೆ. ಅವರು ಬಲೆಯ ಒಂದು ಸೆರಗನ್ನು ಹಿಡಿದುಕೊಂಡಿರುತ್ತಾರೆ. ಪಾಂಡಿಯಲ್ಲಿನ ಜನ ಬಲೆಯನ್ನು ಬಿಡುತ್ತಾ ಪಾತಿಯವರ ಕಡೆಗೆ ಸಾಗುತ್ತಾರೆ. ಮೀನಿನ ಕರ್ಪುವಿನ ಸುತ್ತಾ ಅರ್ಧ ವೃತ್ತಾಕಾರದಲ್ಲಿ ಬಲೆ ಬಿಡುತ್ತಾ ಹೋಗುತ್ತಾರೆ. ಆಗ ಪಾಂಡಿಯವರು ಬಲೆಯ ಮಧ್ಯದ ಮಾಡಿನ ಬಲೆಯನ್ನು ಎತ್ತಿ ಹಿಡಿದು ಮಾಡನ್ನು ಪಾಂಡಿಗೆ ಕಟ್ಟಿಕೊಂಡು ಎರಡು ಬದಿಯ ಸೆರಗಿನ ಸಮಾನತೆ ಸರಿಯಾಗಿದೆಯೋ ಇಲ್ಲವೋ ಎಂಬುದನ್ನು ನೋಡಿ ಕೊಳ್ಳುತ್ತಿರುತ್ತಾರೆ. ಪಾತಿ ದೋಣಿಗಳಲ್ಲಿನ ಜನರು ಎರಡು ಬದಿಯ ಬಲೆಯನ್ನು ಎತ್ತಿ ಹಿಡಿದು ಬಲೆ ತಳಕ್ಕೆ ಹೋಗಿ ಕೆಸರಿನಲ್ಲಿ ಹೂತು ಹೋಗದಂತೆ ನೋಡಿಕೊಳ್ಳುತ್ತಾರೆ. ನಿಧಾನವಾಗಿ ಎರಡು ಬದಿಯಲ್ಲಿ ಮೀನುಗಾರರು ಬಲೆ ಎಳೆಯುತ್ತಾ ಬರುತ್ತಾರೆ. ಆಗ ರಾಗವಾಗಿ ಪದಗಳನ್ನು ಹಾಡುತ್ತಿರುತ್ತಾರೆ.

ಅಯ್ಯಾಲ ಅಯ್ಯಾಲ; ನಮ್ಮೀಯಾರ ಸುಲ್ಲು ಅಯ್ಯಾಲ ;
ಯ್ಯಾಲಹೋದಿ ಅಯ್ಯಾಲ; ನಮ್ಮೀಯಾರನಾಮೈ ಅಯ್ಯಾಲ;
ಹೋದಿ ಬಾಲ ಅಯ್ಯಾಲ ; ನಮ್ಮೈನೂರು ಅಯ್ಯಾಲ;
ಬಾಡಿ ಸಾಲ ಅಯ್ಯಾಲ ; ನೂರ್ ತೇರ್ ಅಯ್ಯಾಲ;
ಸಾಲ ಎಂಬರ ಅಯ್ಯಾಲ; ತೇರ್‌ಮೇರ್ ಅಯ್ಯಾಲ;
ತೋಪಾ ಬಂದರ್ ಅಯ್ಯಾಲ; ಬಾಯಿಮೇರ್ ಅಯ್ಯಾಲ;
ಕಪ್ಪಾನಿ ಕುಲ್ಲು ಅಯ್ಯಾಲ ; ಅಲ್ಲಾದಾಯಂ ಅಯ್ಯಾಲ;

ಹಾಡಿನೊಂದಿಗೆ ಶಕ್ತಿಗೂಡಿಸುತ್ತಾ ಬಲೆಯನ್ನು ಎಳೆದುಕೊಂಡು ತೀರದ ಕಡೆಗೆ ಬರುತ್ತಿರುತ್ತಾರೆ. ಹೀಗೆ ಎಳದು ತಂದ ಬಲೆಯ ಮತ್ತೊಂದು ಸೆರಗನ್ನು ತೀರದಲ್ಲಿನ ಜನರಿಗೆ ಕೊಡುತ್ತಾರೆ. ಅವರು ನಿಧಾನವಾಗಿ ಬಲೆಯನ್ನು ತಮ್ಮೆಡೆಗೆ ಎಳೆದುಕೊಳ್ಳುತ್ತಾರೆ. ಆ ಸಂದರ್ಭದಲ್ಲಿ ಅವರು ಬಹಳ ಎಚ್ಚರಿಕೆ ವಹಿಸುತ್ತಾರೆ. ಬಲೆ ತೀರದಿಂದ 500 ಅಥವಾ 600 ಅಡಿ ದೂರದಲ್ಲಿರುವಾಗಲೇ ಬಲೆಯ ಮೇಲ್ಭಾಗದ ಹಗ್ಗವನ್ನು ನೀರಿನಿಂದ ಎರಡು ಮೂರು ಅಡಿ ಮೇಲೆ ಎತ್ತಿಕೊಂಡು ಎಳೆಯುತ್ತಾ ಬಂದು ತೀರದಲ್ಲಿ ಹೂತಿರುವ ಹೊದರ ಗುಟ್ಟಕ್ಕೆ ಬಲೆಯ ಒಂದು ಸೆರಗನ್ನು ಕಟ್ಟಿ ಮತ್ತೊಂದು ಸೆರಗನ್ನು ಮತ್ತೊಂದು ಗೂಟಕ್ಕೆ ಕಟ್ಟುತ್ತಾರೆ. ಅನಂತರ ಎರಡೂ ಸೆರಗಿನವರು ಒಟ್ಟಾಗಿ, ಮೀನು ಮಾಡಿನ ಬಲೆಗೆ ಸೇರಿದ ನಂತರ ಎರಡೂ ಸೆರಗನ್ನು ಒಟ್ಟು ಮಾಡಿ ಎಳೆದು ಮೇಲೆ ಹಾಕುತ್ತಾರೆ. ಆ ಸಂದರ್ಭದಲ್ಲಿ ಒಂದು ವೇಳೆ ಮೀನಿಗೆ ಬೆಲೆ ಕಡಿಮೆ ಇದ್ದರೆ ಬಲೆಯಿಂದ ಮೀನು ತೆಗೆಯದೆ ಎರಡೂ ಸೆರಗನ್ನು ಸಮುದ್ರದಲ್ಲೇ ಬಿಟ್ಟಿರುತ್ತಾರೆ. ಮೀನು ಬಲೆಯಿಂದ ಹೊರಹೋಗದಂತೆ ಬಲೆಯನ್ನು ನೀರಿನಿಂದ ಸ್ವಲ್ಪ ಮೇಲ್ಭಾಗಕ್ಕೆ ಎತ್ತಿ ಕಟ್ಟಿರುತ್ತಾರೆ. ಹೀಗೆ ಸಮುದ್ರದಲ್ಲಿರುವ ಬಲೆಯಲ್ಲಿ ಎಂಟುದಿನಗಳವರೆಗೂ ಮೀನು ಜೀವಂತವಾಗಿಯೇ ಇರುತ್ತವೆ.

ರಂಪಣಿ ಬಲೆಯಲ್ಲಿ ಹೆಚ್ಚಾಗಿ ಬಂಗಡೆ , ಹೆಸಡಿ, ತೋರಿ, ಕಳಗೆ , ಇಸ್ವಾನ್, ಮೀನುಗಳನ್ನು ಹಿಡಿಯುತ್ತಾರೆ. ರಂಪಣಿ ಬಲೆ ಎಳೆಯುವ ದೃಶ್ಯ ತುಂಬಾ ಆಕರ್ಷಣೀಯವಾಗಿರುತ್ತದೆ. ಅಲ್ಲದೆ ಬಲೆಯನ್ನು ನೀರೊಳಗೆ ಕಟ್ಟಿ , ಸೆರೆಯಾದ ಮೀನು ಜೀವಂತವಾಗಿ ರಕ್ಷಿಸಿಡುವ ಈ ವಿಧಾನವು ಇಂದಿನ ಯಾವ ಬಲೆಯಿಂದಲೂ ಸಾಧ್ಯವಿಲ್ಲ. ಒಂದು ಕಾಲದಲ್ಲಿ ತಲೆ ಎತ್ತಿ ಮೆರೆದ ರಂಪನಿ ಬಲೆ ಒಂದೆ ಬಾರಿಗೆ ೧೦೦ ಟನ್ ಮೀನು ಹಿಡಿಯುವ ಸಾಮರ್ಥ್ಯವನ್ನು ಹೊಂದಿತ್ತು. ಇಂತಹ ಬಲೆ ಇಂದು ಆಳ ಸಮುದ್ರದ ಮೀನು ಬೇಟೆಯ ಕಾರಣದಿಂದ ತನ್ನ ಮಹತ್ವವನ್ನು ಕಳೆದುಕೊಂಡು ಮಾಯವಾಗುತ್ತಿರುವುದು ನಾಡದೋಣಿಯವರ ದುರದೃಷ್ಟ .

2. **ಗೋಲ್ ಬಲೆ :** ಇದನ್ನು ''ಪೋಳ್ ಬಲೆ'' ಎಂದೂ ಸಹ ಕರೆಯಲಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಬಲೆಯನ್ನು ''ಮಾರಿ ಬಲೆ'' ಎಂದು ಕರೆಯುತ್ತಾರೆ. ಚೀಲದ ಸ್ವರೂಪದಲ್ಲಿರುವ ಈ ಬಲೆಯನ್ನು ಎರಡು ಮೂರು ದೋಣಿಗಳು ಒಂದಾಗಿ ಬೇಟೆಯಾಡುತ್ತಾರೆ. ಇದರ ಕಣ್ಣಳತೆಯು 19ರಿಂದ 27 ಮಿ. ಮೀಟರುಗಳಿದ್ದರೂ ಅದು 21 ಮಿ.ಮೀಟರಿನಿಂದ 160 ಮಿ.ಮೀ. ವರೆಗೆ ಬದಲಾಗುತ್ತಾ ಹೋಗುತ್ತದೆ. ತಳಭಾಗದಲ್ಲಿ ಕಣ್ಣಳತೆ ಕಡಿಮೆ ಇದ್ದು ಮೇಲ್ಭಾಗಕ್ಕೆ ಬಂದಂತೆ ಹಾಗೆ ಅದು ದೊಡ್ಡದಾಗುತ್ತದೆ. [illegible] 110 ಮೀಟರುಗಳಾಗಿದ್ದು ಚೀಲದಂತೆ ಅಗಲವಾಗುತಾ ಹೋದಂತೆ 140 ಮೀಟರುಗಳಾಗುತದೆ. 10

ಮೀಟರುಗಳುದ್ದದ ಎರಡು ನಾಡ ದೋಣಿಗಳಲ್ಲಿ ಹದಿನೇಳು ಅಥವಾ ಹದಿನೆಂಟು ಮೀನುಗಾರರು ಈ ಬಲೆಯಲ್ಲಿ ಬೇಟೆಯಾಡುತ್ತಾರೆ. ಇದರ ಹೊರತು ''ಮಿನಿನ ಕರ್ಪು'' ಕಂಡುಹಿಡಿಯುವ ಒಂದು ದೋಣಿ ಇರುತ್ತದೆ. ಅದರಲ್ಲಿ ನಾಲ್ಕೈದು ಜನರಿರುತ್ತಾರೆ.

'' ಮೀನಿನ ಕರ್ಪು'' ಕಂಡುಹಿಡಿಯುವವರು ಬೆಳಿಗ್ಗೆಯೇ ಹೋಗುತ್ತಾರೆ. ಆಗ ಉಳಿದೆರಡು ದೋಣಿಯ ಜನರು ದಡದಲ್ಲಿ ಕಾಯುತ್ತಿರುತ್ತಾರೆ. '' ಮೀನಿನ ಕರ್ಪು'' ಕಂಡು ಹಿಡಿದ ತಕ್ಷಣ ಅವರು ಬಾವುಟದ ಮೂಲಕ ದಡದಲ್ಲಿರುವವರಿಗೆ ಬರುವ ಸೂಚನೆ ಕೊಡುತ್ತಾರೆ. ಆಗ ಅವರು ಮೀನಿನ ಬಲೆಯೊಂದಿಗೆ ಹೆರಟು ಮೀನಿನ ಕರ್ಪು ಇರುವ ಸ್ಥಳದ ಸುತ್ತ ಬಲೆ ಹರಡುತ್ತಾ ಹೋಗಿ ಮೀನಿನ ಗುಂಪನ್ನು ಸೆರೆಹಿಡಿಯುತ್ತಾರೆ. ಈ ಬಲೆಯನ್ನು 150 ಅಡಿ ಆಳದ ನೀರಿನಲ್ಲಿ ಬೇಟೆಯಾಡಲು ಬಳಸುವುದು ಹೆಚ್ಚು. ಶ್ಯಾಡಿ, ನಂಗು, ಪಾಂಪ್ಲೆಟ್, ಸಿಗಡಿ, ತೊರ್ಕೆ ಮೊದಲಾದ ಜಲಚರಗನ್ನು ಇದರಲ್ಲಿ ಹೆಚ್ಚಾಗಿ ಹಿಡಿಯುತ್ತಾರೆ.

ಕರ್ನಾಟಕ ಕರಾವಳಿಯಲ್ಲಿ 1987 - 88 ರಲ್ಲಿ 2,561 ಗೋಲ್ ಬಲೆಗಳನ್ನು ಬಳಸಲಾಗುತ್ತಿದ್ದು ಈಗ ಇದರ ಬಳಕೆ ಯಾಂತ್ರಿಕ ದೋಣಿಗಳ ಬಲೆಯ ಬಳಕೆಯ ಕಾರಣದಿಂದ ಕಡಿಮೆಯಾಗಿದೆ.

3. ಬಾಕ್ಸಿ ಬಲೆ : ಇದು ಸಹ ಚೀಲಾಕಾರದಲ್ಲಿದ್ದು ಇದರ ಬಾಯಿ ದುಂಡಾಗಿರುತ್ತದೆ. ಬಾಯಿಯ ವ್ಯಾಸವು ಸುಮಾರು ಹತ್ತರಿಂದ ಹದಿಮೂರು ಅಡಿಗಳಿರುತ್ತದೆ. ಇದರಲ್ಲಿನ ಮತ್ತೊಂದು ಬಗೆಯು ಬಲೆಯ ಗಾತ್ರದಲ್ಲಿ ಚಿಕ್ಕದಿದ್ದು ಅದರ ಬಾಯಿಯ ಸುತ್ತಳತೆ ಐದು ಅಡಿ ಇರುತ್ತದೆ. ಉದ್ದ ಸುಮಾರು ಐದಾರು ಅಡಿಗಳಿರುತ್ತದೆ. ಈ ಬಲೆಯ ಬಾಯಿಗೆ ದುಂಡಾಕಾರದ ಕಬ್ಬಿಣದ ಸರಿಗೆಯನ್ನು ಅಳವಡಿಸಿರುತ್ತಾರೆ. ಅದಕ್ಕೆ ನಾಲ್ಕು ಕೊಂಡಿಗಳನ್ನು ಹಾಕಿ ಅದಕ್ಕೆ ಹಗ್ಗ ಕಟ್ಟಿ ಬಲೆಯನ್ನು ನೀರಿನಲ್ಲಿ ಬಿಡುತ್ತಾರೆ. ಇದರಿಂದ ಕೊಳ್ಳಶೆಟ್ಲಿ, ಕಾಯಿಶೆಟ್ಲಿ, ಮಡ್ಲೆ, ಕುರುಡಿ ಮೊದಲಾದ ಮೀನುಗಳನ್ನು ಹಿಡಿಯುತ್ತಾರೆ. ಒಂದು ನಾಡದೋಣಿಯಲ್ಲಿ ಐದಾರು ಜನರು ಈ ಬಲೆಯಿಂದ ಬೇಟೆಯಾಡುತ್ತಾರೆ.

4. ಬೀಸೋ ಬಲೆ : ಈ ಬಲೆಯನ್ನು ತೀರಪ್ರದೇಶದಲ್ಲಿನ ಮೊಣಕಾಲುದ್ದದ ನೀರಿನಲ್ಲಿಳಿದು ಇಲ್ಲವೆ ದೋಣಿಗಳಲ್ಲಿ ಸಮುದ್ರದೊಳಗಡೆ ಹೋಗಿ ಬಲೆ ಬೀಸಿ ಮೀನು ಹಿಡಿಯುತ್ತಾರೆ. ಈ ಬಲೆಯ ಮೇಲ್ಭಾಗದಲ್ಲಿ ಐವತ್ತು ಕಣ್ಣಿದ್ದು ಅದು ತಳದ ಕಡೆಗೆ ಹೋದ ಹಾಗೆಲ್ಲಾ ಪ್ರತಿ ಸಾಲಿಗೂ ಒಂದೊಂದು ಕಣ್ಣು ಹೆಚ್ಚುತ್ತಾ ಹೋಗುತ್ತದೆ. ತಳದಲ್ಲಿ ಸುಮಾರು 1000 ಕಣ್ಣಿರುತ್ತದೆ. ಎಡಗೈಯಲ್ಲಿ ಬಲೆಯನ್ನು ಹಿಡಿದುಕೊಂಡು ಬಲಗೈಯಿಂದ ಅದನ್ನು ಬೀಸುವಾಗ ಅದು ಛತ್ರಿಯಂತೆ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ಮೀನಿನ ಕರ್ಪು ಕಂಡ ತಕ್ಷಣ ಕರ್ಪು ಬಲೆಯ ಒಳಗಡೆ ಬರುವ ಹಾಗೆ ಬಲೆ ಬೀಸಿ ಮೇಲಿನಿಂದ ದಾರವನ್ನು ಎಳೆಯುತ್ತಾರೆ. ಆಗ ಬಿಚ್ಚಿಕೊಂಡಿದ್ದ ತಳದ ಬಾಯಿ ಒಂದಾಗಿ ಸೇರಿ ಮೀನು ಹೊರಹೋಗದಂತೆ ಸೆರೆಹಿಡಿಯುತ್ತದೆ. ಮುಳ್ಳುಗಿಡ, ಕಲ್ಲುಬಂಡೆ ಇರುವ ಸ್ಥಳದಲ್ಲಿ ಈ ಬಲೆಯಿಂದ ಬೇಟೆಯಾಡಲು ಸಾಧ್ಯವಿಲ್ಲ. ಇದರಲ್ಲಿ ತೂಲ್ ಬಲೆ, ತೂರ್ ಬಲೆ, ಶೇಂಡೆ ಬಲೆಗಳೆಂಬ ವಿಧಗಳುಂಟು. ಇವುಗಳು ಗಾತ್ರದಲ್ಲಿ ಚಿಕ್ಕದಾಗಿರುತ್ತವೆ. ತಂತಿಯಿಂದ ಮಾಡಿದ ಈ ಬಲೆಗೆ ''ನಂಗಬಲೆ'', ''ತಿಕ್ಕಬಲೆ'', ''ತಂಗ ಬಲೆ'', ಮತ್ತು ''ಕೂರಿಬಲೆ''ಗಳೆಂದು ಕರೆಯುತ್ತಾರೆ. ಮಳೆಗಾಲದಲ್ಲಿ ಸಮುದ್ರ ಉಗ್ರವಾಗಿದ್ದಾಗ ತೀರ ಪ್ರದೇಶದಲ್ಲಿ ಬೇಟೆಯಾಡಲು ಈ ಬಲೆಗಳನ್ನು ಉಪಯೋಗಿಸುತ್ತಾರೆ.

ಹಿಂದೆ ನದಿಗಳಲ್ಲಿ ಬೀಸೋಬಲೆಯನ್ನು ಹೆಚ್ಚಾಗಿ ಬಳಸುತ್ತಿದ್ದರು. ಇಂದಿಗೂ ತೀರಪ್ರದೇಶದಲ್ಲಿ ಬೀಸೋ ಬಲೆ ತನ್ನ ಮಹತ್ವವನ್ನು ಉಳಿಸಿಕೊಂಡಿದೆ. ಕರ್ನಾಟಕ ಕರಾವಳಿಯಲ್ಲಿ ಸುಮಾರು 7,447 ಬೀಸೋಬಲೆಗಳಿವೆ ಎಂದು ಅಂಕಿ ಅಂಶದ ಪ್ರಕಾರ ತಿಳಿದು ಬರುತ್ತದೆ. ಆದರೂ ಅವರ ಲೆಕ್ಕಕ್ಕೆ ಸಿಗದ ಹಲವು ಬೀಸೋ ಬಲೆಗಳು ತೀರದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಸಾಮಾನ್ಯನಿಗೂ ಬಹು ಸುಲಭವಾಗಿ ಸಿಗಬಲ್ಲ ಬೀಸೋಬಲೆಯು ಸರ್ವಕಾಲಿಕ ಬೇಟೆಯ ಸಾಧನ.

ಬೀಸೋ ಬಲೆಯಲ್ಲಿ ಪ್ರಮುಖವಾಗಿ ಎರಡು ವಿಧಗಳಿವೆ. ಅವುಗಳನ್ನು ಹೊಂಗಿಬಲೆ ಮತ್ತು ನಿಂಗಿಬಲೆ ಎಂದು ಕರೆಯುತ್ತಾರೆ. ಇವುಗಳಲ್ಲದೆ ಚಿಕ್ಕ-ಪುಟ್ಟ ಬೀಸೋಬಲೆಗಳು ಹಲವಿವೆ.

1. **ನಿಂಗಿಬಲೆ :** ಈ ಬಲೆಯ ಉದ್ದವು ಆರು ಮೀಟರುಗಳಿರುತ್ತದೆ. ಬಲೆ ಬೀಸುವವನ ಶಕ್ತಿಗನುಸಾರ ಬಲೆಯ ಸ್ವರೂಪದಲ್ಲಿ ಹೆಚ್ಚು ಕಡಿಮೆಯಾಗುತ್ತಾ ಹೋಗುತ್ತದೆ. ಏಕೆಂದರೆ ಬಲೆಯ ತಳದಲ್ಲಿರುವ ಸೀಸದ ಗುಂಡುಗಳು ಭಾರವಾಗಿರುವುದರಿಂದ ಬಲೆಯನ್ನು ಉಸಿರು ಗಟ್ಟಿ ಬೀಸಬೇಕಾಗುತ್ತದೆ. ಇಲ್ಲದಿದ್ದರೆ ಅದು ಸರಿಯಗಿ ಬಿಚ್ಚಿಕೊಳ್ಳದೆ ಕೇವಲ ಶಬ್ದ ಮಾಡಿ ಮೀನಿನ ಕರ್ಪನ್ನು ಓಡಿಸುವಂತಾಗುತ್ತದೆ. ಬೀಸೋ ಬಲೆ ಬೀಸುವಾಗ ಸರಿಯಾದ ತರಬೇತಿ ಅವಶ್ಯಕ. ನಿಂಗಿ ಬಲೆಯ ಕಣ್ಣುಗಳು 0.2, 0.4, 0.6, 0.8 ಅಥವಾ 1.0 ಅಂಗುಲ ಚೌಕಾಕಾರವಾಗಿರುತ್ತವೆ. ತಮಗೆ ಬೇಕಾದ ಅಳತೆಯ ಕಣ್ಣುಗಳನ್ನು ಅವರು ಹೆಣೆದುಕೊಳ್ಳುತ್ತಾರೆ. ಪ್ರಾರಂಭದಲ್ಲಿ ಕಣ್ಣಿನ ಸಂಖ್ಯೆ ಕಡಿಯ ಇದ್ದು ಮುಂದುವರಿದಂತೆ ಪ್ರತಿ ಸಾಲಿಗೂ ಹೆಚ್ಚುತ್ತಾ ಹೋಗುತ್ತದೆ. ಬಲೆಯ ಮೇಲ್ಭಾಗದ ಎಲ್ಲಾ ಕಣ್ಣುಗಳನ್ನು ದುಂಡಾಕಾರದ ಕಟ್ಟಿಗೆಗೆ ಕಟ್ಟಿರುತ್ತಾರೆ. ಅದರ ಮೇಲೆ ಉದ್ದನೆಯ ದಾರ ಕಟ್ಟಿದ್ದು ಅದನ್ನು ನೀರಿನ ಆಳಕ್ಕನುಸಾರ ಬೆಳೆಸುತ್ತಾರೆ. ಬಲೆ ಬೀಸುವ ಸಂದರ್ಭದಲ್ಲಿ ಆಧಾರವನ್ನು ಎಡಗೈಗೆ ಕಟ್ಟಿಕೊಂಡಿರುತ್ತಾರೆ. ನೂಲಿನಿಂದ ಮಾಡಿದ' ಈ ದಾರವು ಆಳ ಸಮುದ್ರದಲ್ಲಿ ಬಲೆ ಬೀಸುವಾಗ ಹತ್ತು ಹದಿನೈದು ಮೀಟರ್ ಉದ್ದವಿರುತ್ತದೆ. ಕಡಿಮೆ ಆಳದಲ್ಲಿ ಬಲೆ ಬೀಸಬೇಕಾದರೆ ಏಳೆಂಟು ಮೀಟರಿನ ದಾರವನ್ನು ಕಟ್ಟಿಕೊಳ್ಳುತ್ತಾರೆ. ಕೆಲವು ಸಂದರ್ಭದಲ್ಲಿ ಇದು ಅಪಾಯಕಾರಿಯು ಹೌದು. ಏಕೆಂದರೆ ದೋಣಿಯ ಅಂಚಿನಲ್ಲಿ ನಿಂತು ಶಕ್ತಿಯನ್ನೆಲ್ಲಾ ಬಿಟ್ಟು ಬಲೆ ಬೀಸುವಾಗ ಮುಗ್ಗರಿಸಿ ನೀರಿನಲ್ಲಿ ಬೀಳುವ ಸಂಭವವೂ ಉಂಟು. ಬೀಸಿದ ಬಲೆ ನೀರಿನಲ್ಲಿ ಹೋದ ತಕ್ಷಣ ಹಿಡಿದುಕೊಂಡಿದ್ದ ಹಗ್ಗವನ್ನು ಎಳೆದಾಗ ಬಲೆಯ ಮಧ್ಯಭಾಗವು ಕೊಡೆಯಂತೆ ಬಿಚ್ಚಿಕೊಳ್ಳುತ್ತದೆ. ಆಗ ಅದು ತನ್ನ ವ್ಯಾಸದಲ್ಲಿ ಬರುವ ಮೀನುಗಳನ್ನೆಲ್ಲಾ ಸೆರೆಹಿಡಿಯುತ್ತದೆ. ಸಾಮಾನ್ಯವಾಗಿ ಎಲ್ಲಾ ಜಾತಿಯ ಮೀನುಗಳ ಬೇಟೆಗೂ ಈ ಬಲೆಯನ್ನು ಬಳಸುತ್ತಾರೆ. ಹೆಚ್ಚಾಗಿ ಕೊಕ್ಕರ್, ಗುರ್ಕು, ಬಾಂಗಡೆ, ಬೆಳುಂಚಿ, ಬುರಾಟೆ ಮೊದಲಾದ ಮೀನುಗಳನ್ನು ಇದರಿಂದ ಹಿಡಿಯುತ್ತಾರೆ.

2. **ಹೊಂಗಿಬಲೆ :** ಬೀಸುವ ಬಲೆಗಳಲ್ಲಿ ಹೊಂಗಿಬಲೆ ಬಹು ಪ್ರಾಚೀನವಾದುದು. ಸಮುದ್ರದಲ್ಲಿ ಬೀಸುವ ಹೊಂಗಿಬಲೆಯ ಉದ್ದವು 8 ಅಡಿಯಿಂದ 12 ಅಡಿಗಳ ವರೆಗೆ ಇರುತ್ತದೆ. ನಿಂಗಿ ಬಲೆಗಿಂತ ಭಿನ್ನವಾದ ಈ ಬಲೆಯು ಪ್ರಾರಂಭದಲ್ಲಿ 88 ಕಣ್ಣುಗಳಿದ್ದು ಮುಂದುವರಿಯುತ್ತಾ ಹೋದಂತೆ ಅದರ ಸುತ್ತಳತೆ ಹೆಚ್ಚುತ್ತಾ ಹೋಗುತ್ತದೆ . ಬಲೆ ಮಡಚಿದರೆ ಕೊಡೆಮಡಚಿದಂತಿರುತ್ತದೆ. ಬಲೆಯ ಮೇಲ್ಭಾಗದಲ್ಲಿ ಕಣ್ಣುಗಳೆಲ್ಲವನ್ನೂ ಸೇರಿಸಿ ಉದ್ದ ದಾರಕ್ಕೆ ಕಟ್ಟಿರುತ್ತಾರೆ. ತಳದಲ್ಲಿ ಸೀಸದ ಗುಂಡುಗಳನ್ನು ಕಟ್ಟಿರುತ್ತಾರೆ. ಇವು ಬಲೆ ಬೀಸಿದ ತಕ್ಷಣ ಬಲೆಯು ಕೊಡೆ ತೆರೆದಂತೆ ಬಿಚ್ಚಿಕೊಳ್ಳಲು ನೆರವಾಗುವುದರ ಜೊತೆಗೆ ನೀರಿನಲ್ಲಿ ಬಹುಬೇಗ ಬಲೆಯನ್ನು ಆಳಕ್ಕೆ ಕೊಂಡೊಯ್ಯುತ್ತವೆ. ಬಲೆಯನ್ನು ಮೇಲಕ್ಕೆ ಎಳೆದುಕೊಂಡಂತೆ ವರ್ತುಲಾಕಾರದಲ್ಲಿ ಹರಡಿದ್ದ ಬಲೆಯನ್ನು ತಳದಲ್ಲಿನ ಸೀಸದ ಗುಂಡುಗಳು ಒಂದುಗೂಡಿಸಿ ಒ ಳಗೆ ಮೀನುಗಳು ಸಿಕ್ಕಿಬೀಳುವಂತೆ ಮಾಡುತ್ತವೆ. ಇದರಿಂದ ಗುರ್ಕು, ಗೊಬ್ಬರೆ, ಬಾಂಗಡೆ, ಶೇಡೆ ಮೊದಲಾದ ಮೀನುಗಳನ್ನು ಹಿಡಿಯುತ್ತಾರೆ.

5. **ತೇಲಾಡುವ ಬಲೆಗಳು :** ಈ ಬಲೆಗಳನ್ನು ತೀರಪ್ರದೇಶದಲ್ಲಿ ಬಳಸದೆ ಹೆಚ್ಚಾಗಿ ಆಳಸಮುದ್ರದಲ್ಲಿ ಬಳಸುತ್ತಾರೆ. ಈ ಬಲೆಗಳ ಮೇಲ್ಭಾಗ ಬೆಂಡುಗಳಿಂದ ಕೂಡಿದ್ದು ಬಲೆ ನೀರಿನಲ್ಲಿದ್ದಾಗ ಬೆಂಡುಗಳು ಮೇಲಿರುವವರಿಗೆ ಈ ಸ್ಥಳದಲ್ಲಿ ಬಲೆ ಇದೆ ಎಂಬುದನ್ನು ಸೂಚಿಸುತ್ತಿರುತ್ತವೆ. ಇದರಲ್ಲಿ ಹಲವು ಬಗೆಗಳಿವೆ. ಅವು ಬೇರೆ ಬೇರೆ ಸ್ವರೂಪದಲ್ಲಿರುತ್ತವೆ. ಸಾಮಾನ್ಯವಾಗಿ ಈ ಬಲೆಗಳನ್ನು ರಾತ್ರಿ ಬೇಟೆಗಾಗಿ ಬಳಸುವುದು ಹೆಚ್ಚು. ಈ ಬಲೆಯಲ್ಲಿ ಬೇಟೆಯಾಡುವವರು ಸಂಜೆಯ ಹೊತ್ತಿಗೆ ಹೊರಡುತ್ತಾರೆ. ರಾತ್ರಿ ಬಲೆ ಹಾಕಿ ಬೆಳಗಿನ ಜಾವ ಅದನ್ನು ತೆಗೆಯುತ್ತಾರೆ. ತೀರದಿಂದ ಹೊರಡುವಾಗಲೇ ಬಲೆಯ ಒಂದು ತುದಿಯನ್ನು ದೋಣಿಗೆ ಕಟ್ಟಿಕೊಂಡೇ ಹೊರಡುತ್ತಾರೆ. ರಾತ್ರಿಯ ಕತ್ತಲೆಯಲ್ಲಿ ಬಲೆ ಬಿಟ್ಟಾಗ ಬಲೆಯ ಒಂದು ಬದಿ ದೋಣಿಯೊಡನೆ ಸಂಬಂಧ ಪಡೆದುಕೊಂಡೇ ಇರುತ್ತದೆ. ಮೀನುಗಾರರ ನಂಬಿಕೆಯಂತೆ ತೇಲಾಡುವ ಬಲೆಗಳಿಂದ ಕಗ್ಗತ್ತಲಲ್ಲಿ ಹೆಚ್ಚು ಮೀನು ಹಿಡಿಯಲು ಸಾಧ್ಯ. ಏಕೆಂದರೆ ಕತ್ತಲಲ್ಲಿ ನೀರು ರೇಡಿಯಂನಂತೆ ಹೊಳೆಯುತ್ತಿರುತ್ತದೆ. ಆದ್ದರಿಂದ ಮೀನಿನ ಕಣ್ಣಿಗೆ ಬಲೆ ಕಾಣಿಸುವುದಿಲ್ಲ. ಅವು ಬಹು ಸುಲಭವಾಗಿ ಸೆರೆಯಾಗುತ್ತವೆ. ಬೆಳದಿಂಗಳು ಮೀನಿನ ಕಣ್ಣನ್ನು ಕುಕ್ಕುವುದರಿಂದ ಮೀನು ಸಮುದ್ರದ ಮೇಲ್ಭಾಗಕ್ಕೆ ಬರುವುದಿಲ್ಲ. ಈ ಕಾರಣದಿಂದಲೇ ಹುಣ್ಣಿಮೆಯ ದಿನ ಮೀನುಗಾರರು ಬೇಟೆಗೆ ಹೋಗುವುದಿಲ್ಲ. ರಾತ್ರಿ ಬೇಟೆಯಲ್ಲಿ ಮೂರು ನಾಲ್ಕು ಜನರು ತೇಲಾಡುವ ಬಲೆಯಿಂದ ಬೇಟೆಯಾಡಲು ಹೋಗುತ್ತಾರೆ. ಆಗ ಅವರು ಸರದಿ ಪ್ರಕಾರ ನಿದ್ದೆ ಮಾಡುತ್ತಾರೆ. ಆದರೂ ಯಾರಾದರೂ ಒಬ್ಬರು ಎಚ್ಚರವಾಗಿ ಇರಲೇ ಬೇಕಾಗುತ್ತದೆ.

ತೇಲಾಡುವ ಬಲೆಗಳಲ್ಲಿನ ಒಂದೊಂದು ಬಲೆಯ ಉದ್ದ ಒಂದು ನೂರು ಅಡಿ ಇರುತ್ತದೆ. ಅಗಲ ಹತ್ತು - ಹನ್ನೆರಡು ಅಡಿ ಇರುತ್ತದೆ. ಇದರಲ್ಲಿ ಬೀಡುಬಲೆ, ಕಾಂಟಲಿ ಬಲೆ, ಮಡ್ಲೆ ಬಲೆ, ಬಿಳಿ ಬಲೆ (ಪಟ್ಟೆ ಬಲೆ), ಬಾಂಗಡೆ ಪಟ್ಟೆ ಬಲೆ, ಬುಡಿ ಬಲೆ ಎಂದ ಪ್ರಕಾರಗಳಿವೆ.

6. ಕಾಂಟಲಿ ಬಲೆ : ಮೀನುಗಳ ಸಂಚಾರ ಹೆಚ್ಚಾಗಿರುವ ಸ್ಥಳಗಳಲ್ಲಿ ಕಾಂಟಲಿ ಬಲೆಯನ್ನು ಬಳಸುತ್ತಾರೆ. ಇದು ಉದ್ದದಲ್ಲಿ ಹೆಚ್ಚಿದ್ದು ಆಳದಲ್ಲಿ ಕಡಿಮೆ ಇರುತ್ತದೆ. ತಳಕ್ಕೆ ಸೀಸದ ಗುಂಡುಗಳನ್ನು ಕಟ್ಟಿರುತ್ತಾರೆ. ಬಲೆ ಹಾಕಿದ ಸ್ಥಳವನ್ನು ಗುರುತು ಹಿಡಿಯಲು ಉದ್ದವಾದ ದಾರದ ಒಂದು ತುದಿಗೆ ದೊಡ್ಡ ಬೆಂಡು ಇಲ್ಲವೆ ಬಾಯಿ ಬೆಸೆದ ಸೀಮೆ ಎಣ್ಣೆ ಡಬ್ಬ ಕಟ್ಟಿ ಅದರ ಮತ್ತೊಂದು ತುದಿಯನ್ನು ಬಲೆಗೆ ಕಟ್ಟಿರುತ್ತಾರೆ. ಬಲೆಯ ಪೂರ್ಣ ಭಾಗ ನೀರಿನಲ್ಲಿ ಮುಳುಗಿ ಹೋಗಿರುವುದರಿಂದ ಮೇಲೆ ತೇಲಾಡುವ ಡಬ್ಬಿ ಇಲ್ಲವೆ ಬೆಂಡಿನಿಂದ ಮಾತ್ರ ಬಲೆ ಹಾಕಿದವರಿಗೆ ಬಲೆಯಿರುವ ಗುರುತು ಸಿಗುವುದು. ಏಕೆಂದರೆ ರಾತ್ರಿಯಲ್ಲಿ ಬಲೆ ಹಾಕಿ ಹಿಂದಿರುಗಿ ಮಾರನೇ ದಿನ ಬಂದು ಆ ಬಲೆಯನ್ನು ತೆಗೆಯುತ್ತಾರೆ. ರಾತ್ರಿ ಇಡೀ ಬಲೆ ಸಮುದ್ರದಾಳದಲ್ಲಿರುವುದರಿಂದ ಒಳಸಂಚಾರಿಗಳಾದ ತೊರ್ಕೆ, ಶೇಡೆ, ಕುರುಚಿ, ಸೊರ, ಕೊಂಬು ಮೊದಲಾದ ಜಾತಿಯ ಮೀನುಗಳು ಅದರಲ್ಲಿ ಸಿಕ್ಕಿ ಬೀಳುತ್ತವೆ. ಮಾರನೇ ದಿನ ಮೀನು ಬಿಡಿಸಿಕೊಂಡು ಬಲೆಯನ್ನು ಅಲ್ಲೇ ಬಿಟ್ಟು ಬಂದರೂ ಬರುತ್ತಾರೆ. ಇಲ್ಲವೆ ಸ್ಥಳ ಬದಲಾಯಿಸಿ ಬರುತ್ತಾರೆ. ಈ ಬಲೆಯು ಸರ್ವಕಾಲಿಕ ಬಲೆಯಾಗಿರುವುದರಿಂದ ಮಳೆಗಾಲ ಮತ್ತು ಬೇಸಿಗೆ ಕಾಲಗಳೆರಡರಲ್ಲೂ ಬೇಟೆಯಾಡಲು ಬಳಸಲಾಗುತ್ತದೆ. ಇದರಲ್ಲಿ ಕಾಂಟಲಿಬಲೆ, ಮಡ್ಲೆ ಬಲೆ, ಬಿಳಿ ಬಲೆ (ಪಟ್ಟಿ ಬಲೆ), ಬಂಗಡೆ ಪಟ್ಟಿ ಬಲೆ, ಬುಡಿ ಬಲೆ ಎಂಬ ಪ್ರಕಾರಗಳಿವೆ.

ಅ. ಬೀಡು ಬಲೆ : ರಾತ್ರಿ ಹೊತ್ತು ಮೀನು ಹಿಡಿಯುವ ಸಲುವಾಗಿ ಸಮುದ್ರದಲ್ಲಿ ಬೀಡು ಬಿಟ್ಟಾಗ ಉಪಯೋಗಿಸುತ್ತಿದ್ದ ಬಲೆಗೆ ಬೀಡುಬಲೆ ಎಂದು ಕರೆಯುತ್ತಿದ್ದರೆಂದು ವೈ. ಎಸ್. ದುರ್ಗೇಕರರು ತಿಳಿಸುತ್ತಾರೆ. ಈ ವಿವರಣೆಯನ್ನು ಒಪ್ಪುವುದಕ್ಕೆ ಅವರು ಕೊಡುವ ಕಾರಣ ಸಮಂಜಸವೆನಿಸದು. ಏಕೆಂದರೆ ರಾತ್ರಿ ಸಮಯದ ಮೀನು ಬೇಟೆಗೆ ಕೇವಲ ಒಂದು ವಿಧದ ಬಲೆ ಮಾತ್ರ ಉಪಯೋಗಿಸದೆ ಬೇರೆ ಬೇರೆ ಬಗೆಯ ಬಲೆಗಳನ್ನು ಬಳಸುತ್ತಾರೆ. ಆದ್ದರಿಂದ ಬೀಡುಬಲೆಗೆ ಸರಿಯಾದ ಅರ್ಥ ಕೊಡುವುದಕ್ಕೆ ಮೀನುಗಾರರನ್ನೇ ಕೇಳಿದರೆ ಅವರು ತಮ್ಮ ಹಿರಿಯರು ಯಾವ ಅರ್ಥದಲ್ಲಿ ಈ ಹೆಸರಿಟ್ಟಿರುವರೋ ತಿಳಿಯದೆಂದು ಹೇಳುತ್ತಾರೆ. ಅದೇನೇ ಇದ್ದರು ಬೀಡು ಬಲೆಯನ್ನು ಸೆಣಬಿವ ದಾರದಿಂದ ಹೆಣೆದಿರುತ್ತಾರೆ. ಎರಡು ಅಂಗುಲ ಕಣ್ಣಳತೆಯ ಈ ಬಲೆಯಲ್ಲಿ ಸುಮಾರು 20-30 ತುಂಡು ಬಲೆಗಳನ್ನು ಜೋಡಿಸಿರುತ್ತಾರೆ. ಪ್ರತಿಯೊಂದು ತುಂಡು ಬಲೆಯು ಹತ್ತು - ಹದಿನೈದು ಅಡಿ ಅಗಲವಿದ್ದು 150 ರಿಂದ 250 ಅಡಿ ಉದ್ದವಿರುತ್ತದೆ. ರಾತ್ರಿಯ ಮೀನುಬೇಟೆಗಾಗಿ ಬಳಸುವ ಬೀಡು ಬಲೆಯನ್ನು ಒಂದಂಚನ್ನು ದೋಣಿಗೆ ಕಟ್ಟಿ ಉಳಿದ ಬಲೆಯನ್ನು ಪೂರ್ಣವಾಗಿ ನೀರಲ್ಲಿ ಮುಳುಗುವಂತೆ ಬಿಡುತ್ತಾರೆ. ಮಾರನೆಯ ದಿನ ಬೆಳಿಗ್ಗೆ ಬಲೆಯನ್ನು ಮೇಲಕ್ಕೆತ್ತಿ ಮೀನು ಬಿಡಿಸಿಕೊಂಡು ದಡಕ್ಕೆ ಹಿಂದಿರುಗುತ್ತಾರೆ. ಬೀಡು ಬಲೆಯಲ್ಲಿ ಬೇಟೆಯಾಡುವ ಕಾಲವೆಂದರೆ ಸೆಪ್ಟಂಬರನಿಂದ ಮಾರ್ಚವರೆಗೆ.

ಇ. ಮಡ್ಲೆಬಲೆ : ಮಡ್ಲೆ ಮೀನು ಹಿಡಿಯಲು ಬಳಸುವ ಬಲೆಗೆ ''ಮಡ್ಲೆ ಬಲೆ'' ಎನ್ನುತ್ತಾರೆ. ಒಂದು ಅಂಗುಲ ಗಾತ್ರದ ಕಣ್ಣುಳ್ಳ ಈ ಬಲೆಯಲ್ಲಿ ಎಂಟು, ಹತ್ತು ತುಂಡು ಬಲೆಗಳನ್ನು ಜೋಡಿಸಿರುತ್ತಾರೆ. ಪ್ರತಿಯೊಂದು ತುಂಡಿನಲ್ಲೂ ಸುಮಾರು ಮುನ್ನೂರು ಕಣ್ಣುಗಳಿರುತ್ತವೆ. ಇದಕ್ಕೆ ಅತಿ ಸಪೂರದ 40 ನಂಬರಿನ ದಾರವನ್ನು ಬಳಸಲಾಗುತ್ತದೆ. ಬಲೆ ಹೆಣೆದ ನಂತರ ಅದನ್ನು ಅಕ್ಕಿ ಗಂಜಿಯೊಡನೆ ತೆಂಗಿನಕಾಯಿ ರಸವನ್ನು ಬೆರೆಸಿ ಕುದಿಸಿದ ರಸದಲ್ಲಿ ಅದ್ದಿ ಒಣಗಿಸುತ್ತಾರೆ. ಹೀಗೆ ಮಾಡುವುದರಿಂದ ಬಲೆ ಬಹುದಿನಗಳವರೆಗೆ ಬಾಳಿಕೆ ಬರುತ್ತದೆಂದು ಹೇಳುತ್ತಾರೆ.

ಮಡ್ಲೆಬಲೆಯು ನಾಲ್ಕು ನೂರು ಅಡಿಗಳಿದ್ದು ಅಗಲ ಏಳೆಂಟು ಅಡಿಗಳಿರುತ್ತದೆ. ಬಲೆಯ ಮೇಲ್ಭಾಗದಲ್ಲಿ ಬೆಂಡು, ತಳದಲ್ಲಿ ಸೀಸದ ಗುಂಡುಗಳನ್ನು ಕಟ್ಟಿರುತ್ತಾರೆ. ಗಾಳಿ ಬೀಸುವಾಗ ಸಮುದ್ರ ಅಲೆಗಳಿಂದ ತುಂಬಿರುತ್ತದೆ. ಅಂತಹ ಸಂದರ್ಭದಲ್ಲಿ ಮಡ್ಲೆ ಮೀನು ದಡದ ಕಡೆಗೆ ಬರುವ ಸಂಭವ ಹೆಚ್ಚು ಆ ಸಮಯವನ್ನು ಕಾಯತ್ತಿದ್ದ ಮೀನುಗಾರರು ತಕ್ಷಣ ಮಡ್ಲೆಮೀನಿನ ಬಲೆಯನ್ನು ಮೀನಿನ ಗುಂಪಿನ ಸುತ್ತ ಹರಡಿ ಅವುಗಳನ್ನು ಸೆರೆಹಿಡಿಯುತ್ತಾರೆ. ಅವರ ಅನಿಸಿಕೆಯಂತೆ ಮಡ್ಲೆ ಮೀನು ಬಲು ಚತುರ. ಅದು ಯಾವ ಬಲೆಗೂ ಅಷ್ಟು ಸುಲಭವಾಗಿ ಸಿಕ್ಕುವುದಿಲ್ಲ ಆದ್ದರಿಂದ ಅದಕ್ಕಾಗಿಯೇ ವಿಶೇಷ ಬಲೆಯೊಂದನ್ನು ತಯಾರಿಸಿದ್ದೇವೆ ಎನ್ನುತ್ತಾರೆ. ಇಂತಹ ಬಲೆಯಲ್ಲೂ

ಅವು ಕೆಲವು ಸಂದರ್ಭಗಳಲ್ಲಿ ತಪ್ಪಿಸಿಕೊಳ್ಳುತ್ತವೆ. ಆದರೂ ಈ ಬಲೆಯ ದಾರ ಬಹಳ ಸಪೂರ ಇರುವುದರಿಂದ ಅವುಗಳ ಕಣ್ಣಿಗೆ ನೀರಿನಲ್ಲಿರುವ ಬಲೆ ಅಷ್ಟು ಬೇಗ ಗೋಚರಿಸುವುದಿಲ್ಲ. ಆದ್ದರಿಂದ ಅವು ಬಲೆಯಲ್ಲಿ ಸಿಕ್ಕಿ ಬೀಳುತ್ತವೆ ಎನ್ನುತ್ತಾರೆ. ಮೀನಿನ ಸ್ವಭಾವ ಮತ್ತು ಅದನ್ನು ಸೆರೆಹಿಡಿಯುವ ತಂತ್ರ ಮೀನುಗಾರರಿಗೆ ಚೆನ್ನಾಗಿ ತಿಳಿದಿದೆ. ಈ ಕಾರಣದಿಂದಲೇ ಅವರಲ್ಲಿನ ಜ್ಞಾನ ಇತರರಿಗಿಂತ ವಿಶಿಷ್ಟ.

ಈ. ಬುಡಿಬಲೆ: ದೊಡ್ಡ ಮೀನಿನ ಬೇಟೆಗೆ ಈ ಬಲೆಯನ್ನು ಬಳಸುತ್ತಾರೆ. ಇದಕ್ಕೆ ಬಳಸುವ ಸೆಣಬಿನ ದಾರವು ಹೆಚ್ಚು ಗಟ್ಟಿಯಾಗಿರುತ್ತದೆ. ಇದರ ಒಂದೊಂದು ಕಣ್ಣಿನ ಗಾತ್ರ ಸುಮಾರು 10 ಅಂಗುಲದಷ್ಟು ದೊಡ್ಡದು. ಒಂದು ಬಲೆಯಲ್ಲಿ 300 ಕಣ್ಣುಳ್ಳ 25 ರಿಂದ 30 ತುಂಡು ಬಲೆಗಳನ್ನು ಸೇರಿಸಿರುತ್ತಾರೆ. ಇದರ ಒಟ್ಟು ಉದ್ದ 250 ಮಾರು ಅಗಲ ಮೂರು ಇಲ್ಲವೆ ನಾಲ್ಕು ಮಾರು. ಬಲೆಯು ನೀರಿನಲ್ಲಿ ನೇರವಾಗಿ ನಿಲ್ಲುವ ಸಲುವಾಗಿ ಅದರ ಮೇಲ್ಭಾಗಕ್ಕೆ ಬೆಂಡು ತಳಭಾಗಕ್ಕೆ ಕಲ್ಲು ಇಲ್ಲವೆ ಸೀಸದ ಗುಂಡುಗಳನ್ನು ಕಟ್ಟಿರುತ್ತಾರೆ.

ಬುಡಿಬಲೆಯಿಂದ ಬೆಳಗಿನ ಸಮಯದಲ್ಲಿ ಬೇಟೆಯಾಡುತ್ತಾರೆ. ಬೆಳಗಿನ ಜಾವ ಐದು ಗಂಟೆಗೆ ದಡಬಿಟ್ಟು ದೋಣಿಗಳು ಆಳ ಸಮುದ್ರದ ಪ್ರದೇಶಕ್ಕೆ ಹೋಗಿ ಬಲೆಬಿಟ್ಟು ಸಂಜೆಯತನಕ ಕಾದು ಅನಂತರ ಬಲೆ ಮೇಲೆತ್ತುತ್ತಾರೆ. ಬಲೆ ಬಿಟ್ಟಾಗ ಮೇಲ್ಭಾಗದಲ್ಲಿ ಬಾವುಟಗಳನ್ನು ಗುರುತಿನ ಸಲುವಾಗಿ ಕಟ್ಟಿರುತ್ತಾರೆ. ಇದರಿಂದ ಘೋಳ, ಕೂರ್ಮ, ಸೊರ, ಹೊಳ ಎಂಬ ದೊಡ್ಡಗಾತ್ರದ ಮೀನು ಹಿಡಿಯುತ್ತಾರೆ. ಈ ಮೀನುಗಳಿಗೆ ಹೆಚ್ಚಿನ ಬೆಲೆ ಸಿಗುವುದರಿಂದ ಬುಡಿಬಲೆಯಿಂದಾಡುವ ಬೇಟೆ ಹೆಚ್ಚು ಲಾಭದಾಯಕವೆನ್ನುತ್ತಾರೆ.

ಉ. ಬಾಂಗಡೆ ಬಲೆ: ಕರ್ನಾಟಕ ಕರಾವಳಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸಿಗುವ ಮೀನೆಂದರೆ ಬಾಂಗಡೆ. ಇದು ಮೀನುಗಾರರ ಲಕ್ಷ್ಮಿ. ಅಂತಹ ಲಕ್ಷ್ಮಿಯನ್ನು ತಮ್ಮ ಮನೆಗೆ ಕರೆತರುವುದಕೋಸ್ಕರವೇ ಬಾಂಗಡೆ ಬಲೆಯೆಂಬ ವಿಶೇಷ ಬಲೆಯನ್ನು ನಿರ್ಮಿಸಿರುವುದು. ಇದನ್ನು ''ಬಿಳಿ ಬಾಂಗಡೆ ಬಲೆ'' ಎಂದೂ ಸಹ ಕರೆಯುತ್ತಾರೆ. ಈ ಬಲೆಯ ಕಣ್ಣಳತೆ ಒಂದು ಚದರಂಗುಲ ಬಲೆಯ ಉದ್ದ 100-125 ಮಾರುಗಳು. ಅಗಲ ಎಂಟು ಹತ್ತು ಮಾರುಗಳು. ಇದಕ್ಕೂ ಬುಡಿಬಲೆಯಂತೆ ಬೆಂಡು ಮತ್ತು ಸೀಸದ ಗುಂಡುಗಳನ್ನು ಕಟ್ಟಿರುತ್ತಾರೆ. ದೋಣಿಯ ಮುಂದಿರುವ ''ಆರ್ಚಾಯ'' ಮೊದಲು ಬಾಂಗಡೆ ಮೀನಿನ ಗುಂಪನ್ನು ನೋಡುತ್ತಾನೆ. ಅವನ ಮಾರ್ಗ ದರ್ಶನದ ಮೇರೆಗೆ ಉಳಿದವರು ಆ ಗುಂಪಿನ ಸುತ್ತಾ ಬಲೆ ಬಿಡುತ್ತಾರೆ. ಅನಂತರ ದೋಣಿಯ ತಳಕ್ಕೆ ಕುಟ್ಟಿ ಶಬ್ಧಮಾಡಿ ಆ ಗುಂಪನ್ನು ಚದುರಿಸುತ್ತಾರೆ. ಆಗ ಅವು ಸಿಕ್ಕೆಡೆ ನುಗ್ಗಿ ಹೋಗುವ ಭರದಲ್ಲಿ ಬಲೆಗೆ ಸಿಕ್ಕಿ ಬೀಳುತ್ತವೆ. ಬೇಟೆ ಚೆನ್ನಾಗಿ ಆದರೆ ದೋಣಿ ತುಂಬಾ ಮೀನು ತರುವುದುಂಟು. ಬಾಂಗಡೆಯ ಜೊತೆಗೆ ಹೆಸಡಿ, ಜಟ್ಲಿ, ಮಾಂಜ ಮೊದಲಾದ ಜಲಚರಗಳನ್ನು ಸಹ ಇದರಿಂದ ಹಿಡಿಯುತ್ತಾರೆ. ಬಾಂಗಡೆ ಬಲೆಯಲ್ಲಿ ಕಾಣುವ ಮತ್ತೊಂದು ಸ್ವರೂಪದ ಬಲೆಯೆಂದರೆ ''ಬಾಂಗಡೆ ಪಟ್ಟೆಬಲೆ''.

ಊ. ಬಾಂಗಡೆ ಪಟ್ಟೆ ಬಲೆ: ಬಾಂಗಡೆ ಪಟ್ಟೆ ಬಲೆಗೂ ಬಾಂಗಡೆ ಬಲೆಗೂ ವ್ಯತ್ಯಾಸವೆಂದರೆ ಇದನ್ನು ಸೆಣಬಿನ ದಾರದಿಂದ ಹೆಣೆದು ಮತ್ತಿ ಚೆಲ್ಲಿಯ ತೊಗರನ್ನು ಹಾಕಿರುತ್ತಾರೆ. ಆದ್ದರಿಂದ ಇದು ಕಪ್ಪಾಗಿರುತ್ತದೆ. ಬಾಂಗಡೆ ಬಲೆ ಬಿಳಿಯಾಗಿರುತ್ತದೆ. ಹಿಂದೆ ಬಾಂಗಡೆ ಪಟ್ಟೆ ಬಲೆಯನ್ನು ಬಾಂಗಡೆ ಮೀನು ಹಿಡಿಯುವ ಸಲುವಾಗಿಯೇ ಬಳಸುತ್ತಿದ್ದರೆಂದು ಹೇಳುತ್ತಾರೆ. ಈ ಬಲೆಯು ಬಾಂಗಡೆ ಬಲೆಯನ್ನು ಹೋಲುತ್ತದೆ. ಆದರೆ ಉದ್ದ ಮತ್ತು ಅಗಲದಲ್ಲಿ ಕಡಿಮೆ ಇರುತ್ತದೆ.

ಎ. ಎಳೆವ ಬಲೆ: ಕೆಲವು ಬಲೆಗಳನ್ನು ನೀರಿನಲ್ಲಿ ಬಿಟ್ಟು ಮೀನು ಹಿಡಿದರೆ ಕೆಲವು ಬಲೆಗಳನ್ನು ನೀರಿನಲ್ಲಿ ಎಳೆಯುತ್ತಾ ಮೀನು ಹಿಡಿಯುತ್ತಾರೆ. ಅಂತಹ ಬಲೆಗಳನ್ನು '' ಜಗ್ಗುವ ಬಲೆ'' ''ಗೋರುವ ಬಲೆ'' ಎಂದೆಲ್ಲಾ ಕರೆಯುತ್ತಾರೆ. ಎಳೆವ ಬಲೆಯಲ್ಲಿ ತೀರ ಪ್ರದೇಶದಲ್ಲಿ ಇಲ್ಲವೆ ನದಿ ಸಮುದ್ರ ಸೇರುವ ಸಂಗಮ ಸ್ಥಳದಲ್ಲಿ ಮೀನು ಹಿಡಿಯುತ್ತಾರೆ. ಇದು ಸಾಮಾನ್ಯವಾಗಿ ಆರರಿಂದ ಎಂಟು ಅಥವಾ ಹತ್ತಾ ಅಡಿ ಉದ್ದವಿದ್ದು ನಾಲ್ಕೈದು ಅಡಿ ಅಗಲವಿರುತ್ತದೆ. ಈ ಬಲೆಗೆ ಬೆಂಡಾಗಲಿ ಸೀಸದ ಗುಂಡಾಗಲಿ ಕಟ್ಟುವದಿಲ್ಲ. ಇದರ ಕಣ್ಣಿನ ಸಾಮಾನ್ಯ ಅಳತೆ 4 ಮಿ. ಮೀ. ಇದು ಚೌಕಾಕಾರವಾಗಿರುತ್ತದೆ. ಈ ಬಲೆಯ ಎರಡೂ ಅಂಚಿಗೂ ಒಂದೊಂದು ಕಟ್ಟಿಗೆ ಕಟ್ಟಿ

ಅವುಗಳನ್ನು ಇಬ್ಬರು ಹಿಡಿದುಕೊಂಡು ಬಲೆಯನ್ನು ತಳದವರೆಗೆ ಮುಳುಗಿಸಿ, ಒಂದು ಕೈ ಬಲೆಯ ತಳವನ್ನು ಇನ್ನೊಂದು ಕೈ ಬಲೆಯ ಮೇಲ್ಭಾಗವನ್ನು ಹಿಡಿದುಕೊಂಡು ಬಲೆ ಎಳೆಯುತ್ತಾ ದಡದ ಕಡೆಗೆ ತರುತ್ತಾರೆ. ಆಗ ಬಲೆಯೊಳಗೆ ಬಂದ ಮೀನುಗಳು ಸಿಕ್ಕಿ ಬೀಳುತ್ತದೆ. ಇದರಿಂದ ತೊರ್ಕೆ, ಬೈಗೆ, ಏಡಿ, ನೋಗ್ಲಿ, ಬೆಳಂಜೆ ಮೊದಲಾದ ಮೀನುಗಳನ್ನು ಹಿಡಿಯುತ್ತಾರೆ. ಮಳೆಗಾಲದಲ್ಲಿ ಸಮುದ್ರ ಉಗ್ರವಾಗಿರುವಾಗ ತೀರ ಪ್ರದೇಶದಲ್ಲಿ ಈ ಬಲೆಯಿಂದ ಮೀನು ಹಿಡಿಯುವುದು ಹೆಚ್ಚು. ಈ ಗಿಡಗಂಟೆ, ಕಲ್ಲುಬಂಡೆಯ ಸುತ್ತಾ ಈ ಬಲೆಯನ್ನು ಬಳಸುತ್ತಾರೆ.

ಏ. **ಪಟ್ಟೆಬಲೆ :** ಇದು ಸುತ್ತಬಲೆ. ಇದರ ಮೇಲ್ಭಾಗ ಉದ್ದದಲ್ಲಿ ಕಡಮೆ ಇದ್ದು ತಳಭಾಗ ಹೆಚ್ಚಾಗಿರುತ್ತದೆ. ಇದನ್ನು ಹೆಣೆಯುವಾಗ ಪ್ರತಿ ಸಾಲಿಗೂ ಒಂದೊಂದು ಕಣ್ಣು ಹೆಚ್ಚಿಸಿಕೊಂಡು ಹೊಗುತ್ತಾರೆ. ಇದನ್ನು ಕೆಲವರು '' ಬಾಂಗಡೆ ಬಲೆ'' ಎಂದೂ ಸಹ ಕರೆಯುತ್ತಾರೆ. ಸೆಣಬಿನ ದಾರದಿಂದ ಹೆಣೆದಿರುವ ಈ ಬಲೆಯ ಕಣ್ಣಳತೆ 25 ಮಿ. ಮೀ. ನಿಂದ 30 ಮಿ.ಮೀ. ಗಳವರೆಗೆ ಇರುತ್ತದೆ. ಬಲೆಯ ತಳಕ್ಕೆ ಗ್ರೈನೆಟ್ ಕಲ್ಲುಗಳನ್ನು ಕಟ್ಟುತ್ತಾರೆ. ಇದರ ಉದ್ದ 400 ರಿಂದ 600 ಮೀಟರುಗಳಾಗಿರುತ್ತದೆ. ಆಳ 13 ರಿಂದ 15 ಮೀಟರುಗಳಾಗಿರುತ್ತದೆ. ಇದರಲ್ಲಿ 8 ರಿಂದ12 ತುಂಡು ಬಲೆಗಳನ್ನು ಸೇರಿಸಿರುತ್ತಾರೆ.

ಈ ಬಲೆಯಿಂದ ಬೇಟೆಯಾಡುವ ದೋಣಿಗಳನ್ನು ''ಪಟ್ಟೆಬಲೆದೋಣಿ'' ಎಂದು ಕರೆಯುತ್ತಾರೆ. ಬಲೆಯ ಗಾತ್ರಕ್ಕನುಸಾರವಾಗಿ ದೋಣಿಗಳ ಸಂಖ್ಯೆಯೂ ಹೆಚ್ಚಾಗುತ್ತದೆ. ಚಿಕ್ಕ ಬಲೆಯಿದ್ದರೆ ಒಂದು ಅಥವಾ ಎರಡು ದೋಣಿಗಳಿಂದ ಬೇಟೆಯಾಡುತ್ತಾರೆ. ದೊಡ್ಡ ಬಲೆ ಇದ್ದರೆ ನಾಡದೋಣಿಗಳ ಗುಂಪನ್ನು ಬಳಸುತ್ತಾರೆ. ದೋಣಿಯ ಉದ್ದ 8 ರಿಂದ 10 ಮೀಟರ್‌ಗಳಾಗಿರುತ್ತದೆ. ಹತ್ತು ಹದಿನೈದು ಜನರು ಬೇಟೆಯಾಡುವವರಿರುತ್ತಾರೆ. ಸಾಮಾನ್ಯವಾಗಿ ಆಗಸ್ಟ್‌ನಿಂದ ಮೇ ವರೆಗೆ ಈ ಬಲೆಯಿಂದ ಬೇಟೆಯಾಡುತ್ತಾರೆ.

ನಾಡದೋಣಿಯ ಪಟ್ಟೆ ಬಲೆಯು 21 ತುಂಡುಗಳ ಬಲೆಯಾಗಿರುತ್ತದೆ. ಅದನ್ನು ಬಳಸಲು 7 ಜನರಿರುತ್ತಾರೆ. ಮೂರು ತುಂಡಿಗೆ ಒಬ್ಬರಂತೆ ಇದ್ದು ತಮ್ಮ ತಮ್ಮ ಭಾಗದ ಬಲೆ ಹಾಕುವ ಮತ್ತು ಮೇಲೆತ್ತುವ ಜವಾಬ್ದಾರಿಯನ್ನು ಏಳೂ ಮಂದಿ ಹಂಚಿಕೊಂಡಿರುತ್ತಾರೆ. 32 ಅಡಿ ಉದ್ದದ ದೊಡ್ಡ ದೋಣಿಯಲ್ಲಿ 30-31 ತುಂಡಿನ ಪಟ್ಟೆ ಬಲೆಯಿಂದ ಒಂಬತ್ತು ಹತ್ತು ಮೀನುಗಾರರು ಬೇಟೆಯಾಡುತ್ತಾರೆ. ಬಲೆಯ ತುಂಡಿಗೆ ಮೀನುಗಾರರು ''ಸಿಗಳು'' ಎಂದು ಕರೆಯು ವಾಡಿಕೆ ಇದೆ. ಪ್ರತಿಯೊಂದು ಸಿಗಳಿಗೆ 300 ಕಣ್ಣುಗಳಿರುತ್ತವೆ.

ಪಟ್ಟೆ ಬಲೆಯ ದೋಣಿಗಳಲ್ಲಿ ಒಂದು ದೋಣಿ ಮೀನಿನ ಕರ್ಪನ್ನು ಪತ್ತೆ ಗುಚ್ಚುವ ಸಲುವಾಗಿ ಮೀಸಲಿರುತ್ತದೆ. ಅದರಲ್ಲಿ ಮೀನನ್ನು ಕಂಡುಹಿಡಿವ ಜನರು ಮೊದಲು ಹೋಗಿ ಮೀನು ಪತ್ತೆ ಹಚ್ಚಿ ದಡದಲ್ಲಿರುವವರಿಗೆ ಬಾವುಟ ತೋರಿಸಿ ಸೂಚನೆ ಕೊಡುತ್ತಾರೆ. ಆಗ ಉಳಿದ ದೋಣಿಗಳು ಹೊಟರು ಮೀನಿನ ಕರ್ಪಿನ ಸುತ್ತ ಬಲೆ ಬಿಟ್ಟು ಮೀನನ್ನು ಸೆರೆ ಹಿಡಿಯುತ್ತವೆ. ಪಟ್ಟಬಲೆಯಿಂದ ಆಳವಾದ ಸಮುದ್ರದಲ್ಲಿ ಬೇಟೆಯಾಡುವುದು ಹೆಚ್ಚು.


8. **ಮರಣ ಬಲೆ :** ದೋಣಿಯ ಸಹಾಯವಿಲ್ಲದೆ ಬೇಟೆಯಾಡಲು ಬಳಸುವ ಮೀನು ಬಲೆ ಎಂದರೆ ಮರಣ ಬಲೆ. ಇದರ ಉದ್ದ 35 ಮಾರಿರುತ್ತದೆ. ಆಳ ಒಂದು ಮಾರು ಇರುತ್ತದೆ. ಸಮುದ್ರ ಉಗ್ರವಾಗಿದ್ದಾಗ ತೀರದಲ್ಲಿ ಸೊಂಟದ ವರೆಗಿನ ನೀರಿನಲ್ಲಿ ನಿಂತು ಈ ಬಲೆಯನ್ನು ಎಸೆಯುತ್ತಾರೆ. ಇದು ದಡವನ್ನಪ್ಪಳಿಸಿ ಹಿಂದೆ ಹೋಗುವ ಅಲೆಗಳೊಡನೆ ಸೇರಿಕೊಂಡು ಸಮುದ್ರದೊಳಗಡೆ ಹೋಗುತ್ತದೆ. ಬಲೆಯ ಒಂದು ತುದಿ ಬಲೆ ಬಿಡುವವನ ಕೈಯಲ್ಲಿರುತ್ತದೆ. ಮತ್ತೊಂದು ತುದಿ ಸಮುದ್ರದಲೆಗಳೊಡನೆ ಹೋಗುತ್ತದೆ. ಸ್ವಲ್ಪ ಹೊತ್ತಿನ ನಂತರ ಬಲೆಯನ್ನು ಮೆಲ್ಲನೆ ತನ್ನೆಡೆಗೆ ಎಳೆದುಕೊಳ್ಳುತ್ತಾರೆ. ಆ ಸಂದರ್ಭದಲ್ಲಿ ತೀರದೆಡೆಗೆ ಬಂದ ಮೀನುಗಳು ಬಲೆಯಲ್ಲಿ ಸಿಕ್ಕಿಬೀಳುತ್ತವೆ. ಮೀನು ಬಲೆಯಲ್ಲಿ ಸಿಕ್ಕಿಕೊಳ್ಳುವುದಕ್ಕೆ ''ಮೀನು ಹಾಯೋದು''ಎನ್ನುತ್ತಾರೆ.

ಈ ಬಲೆಗೆ ''ಮರಣ ಬಲೆ''ಎಂದೇಕೆ ಹೆಸರು ಬಂದಿತೆಂದು ವಿಚಾರಿಸಿದರೆ ಈ ಬಲೆ ಬಿಡದು ಹೋದವರನ್ನು ಕೆಲವು ಸಂದರ್ಭಗಳಲ್ಲಿ ಅಲೆಗಳು ತಮ್ಮೆಡೆಗೆ ಎಳೆದುಕೊಂಡು ಹೋಗಿರುವ ನಿದರ್ಶನಗಳನ್ನು ಕೊಡುತ್ತಾರೆ. ಈ ಕಾರಣದಿಂದ ಇದಕ್ಕೆ ''ಮರಣ

ಮಳೆಗಾಲದ ಉಗ್ರಸಮುದ್ರದಲ್ಲಿ ಬೀಸೋ ಬಲೆಯಿಂದ ಮೀನು ಹಿಡಿಯುತ್ತಿರುವುದು.










ನೀರಿನಲ್ಲಿ ಬೀಸಿದಾಗ


ಬೀಸಿ ಬಲೆ




ಹೊರಗೆ ಹಾಸಿದಾಗ




ಜೊಂಟಿ ಬಲೆ ಅಥವಾ ಬೀಸ್ಕೊ ಬಲೆ




ಚಿತ್ರ ೬: ಗೋರುವ ಬಲೆಯ ಒಂದು ರೇಖಾಚಿತ್ರ



ಬೀಡು ಬಲೆಯನ್ನು ಬಿಟ್ಟಿರುವುದು



ಬಾಕ್ಸಿ ಬಲೆ



ಕೈಬ್ಯಜ ಬಲೆ

ಬಲೆ'' ಎಂದು ಕರೆಯುತ್ತಾರೆ. ಈ ಬಲೆಯ ಬೇಟೆಯು ಆದಾಯ ತರುವುದಕ್ಕಿಂತ ಹೆಚ್ಚಾಗಿ ಮನೆ ಖರ್ಚು ಸಾಗಿಸಲು ಮಾತ್ರ ಸಹಾಯಕವಾಗುತ್ತದೆ.

8. ಚಟ್ಲಿ ಬಲೆ: ಸಿಗಡಿ ಹಿಡಿಯುವ ಸಲುವಾಗಿಯೇ ನಿರ್ಮಾಣಗೊಂಡ ಈ ಬಲೆಯ ಉದ್ದ 150 ಮಾರು. ಆಳ ಮೂರು ಮಾರು. ಕಣ್ಣಳತೆ 2 ಅಂಗುಲ. ಕೂದಲಿಗಿಂತ ಸಪೂರದ ನೈಲಾನ್ ದಾರದಿಂದ ಮಾಡಿದ ಈ ಬಲೆ ನೀರಲ್ಲಿ ಹಾಕಿದಾಗ ಕಣ್ಣಿಗೆ ಕಾಣಿಸುವುದಲ್ಲಿ. ಆದ್ದರಿಂ ಸಿಗಡಿ ಈ ಬಲೆಗೆ ಬಹು ಸುಲಭವಾಗಿ ಸಿಕ್ಕಿ ಬೀಳುತ್ತದೆ. ಸಿಗಡಿಯ ಜೊತೆಗೆ ಅಂಬರ್ಕಿ, ಗುರ್ಕು, ಚಟ್ ಬೈಗೆ, ಗಾವಳೆ, ಶ್ಯಾಡೆ ಮರಿ, ಕುಡ್ತಲಿ, ಹೆಸಿಡಿ, ಬಾಳ್ಯಾ ಮೊದಲಾದ ಮೀನುಗಳನ್ನು ಈ ಬಲೆಯಿಂದ ಹಿಡಿಯುತ್ತಾರೆ.

9. ಮಾಟ್ ಬಲೆ: ಈ ಬಲೆಯನ್ನು ಜೂನ್‌ನಿಂದ ಆಗಸ್ಟ್ ವರೆಗೆ ಹಗಲಿನ ಬೇಟೆಗಾಗಿ, ಡಿಸೆಂಬರ್ ನಂತರ ರಾತ್ರಿ ಬೇಟೆಗಾಗಿ ಬಳಸುತ್ತಾರೆ. ಇದರ ಕಣ್ಣಳತೆ 14 ಮಿ. ಮೀಟರಗಳಾಗಿರುತ್ತದೆ. ಆಳ 20 ಮಾರು, ಉದ್ದ 250 ಮಾರುಗಳಿರುತ್ತದೆ. ಇದರಿಂದ ಸಣ್ಣ ಸಿಗಡಿ (ಚಟ್ಲಿ), ಬಾಂಗಡೆ, ಗುರ್ಕು, ಬೈಗೆ, ಬೆಳ್ಳಂಜಿ, ಗೊಲ್ಲೆ ಮೊದಲಾದ ಮೀನುಗಳನ್ನು ಹಿಡಿಯುತ್ತಾರೆ.

10. ಕಲ್ ಮಾಟ್ ಬಲೆ: ಸಮುದ್ರದಲ್ಲಿ ಕಲ್ಲಿರುವ ಸ್ಥಳದಲ್ಲಿ ಬೇಟೆಯಾಡಲು ಬಳಸುವ ''ಮಾಟ್ ಬಲೆ'' ಯನ್ನು ''ಕಲ್ ಮಾಟ್ ಬಲೆ'' ಎಂದು ಕರೆಯುತ್ತಾರೆ. ಈ ಬಲೆ ಹಾಕುವಾಗ ನಡುವೆ ಕಲ್ಲು ಬರುವಂತೆ ಮಾಡಿಕೊಂಡು ಅದರ ಸುತ್ತ ಎರಡು ದೋಣಿಗಳಿಂದ ಬಲೆ ಬಿಡುತ್ತಾರೆ. ಅನಂತರ ಕಲ್ಲಿನಡಿ ಶಬ್ದ ಮಾಡಿ ಮೀನುಗಳನ್ನು ಓಡಿಸುತ್ತಾರೆ. ಅವು ಗಾಬರಿಗೊಂಡು ಓಡುವಾಗ ಬಲೆಯಲ್ಲಿ ಸಿಕ್ಕಿ ಬೀಳುತ್ತವೆ. ಇದರಲ್ಲಿ ಕೊಕ್ಕರ, ಚಾಟಿ, ಹಲಗೆ ಮೀನು, ಲಾತಾಡು, ಮಗ್ಗು, ಚೇಳು ಮೀನು, ಹಂದಿ ಕೊಕ್ಕರ, ಕಂಮ್ಟೆ, ಬುಯಮ್ ಮೊದಲಾದ ಮೀನುಗಳನ್ನು ಹಿಡಿಯುತ್ತಾರೆ. ಈ ಬಲೆಯ ಕಣ್ಣಳತೆ 6 ಅಂಗುಲವಿದ್ದು ಉದ್ದ 250 ಮಾರು, ಆಳ 14 ಮಾರು ಇರುತ್ತದೆ.

11. ತಂಗೀಸ್ ಬಲೆ: ಈ ಬಲೆಗೆ ಡಬಲ್ ಜೀರೊದಿಂದ ಹಿಡಿದು 18 ಪಾಯಿಂಟ್ ವರೆಗಿನ ತಂಗೀಸ್ (ದಾರ) ಬಳಸುತ್ತಾರೆ. ಹಗಲು ಬೇಟೆಗಾಗಿ ಈ ಬಲೆ ಬಳಸುತ್ತಾರೆ. ಇದರ ಕಣ್ಣಳತೆ ಎರಡು ಬಗೆಯಾಗಿದೆ. ಒಂದು 2 ಅಂಗುಲದ ಕಣ್ಣಳತೆಯ ಬಲೆ, ಮತ್ತೊಂದು 6 ಅಂಗುಲದ ಕಣ್ಣಳತೆಯ ಬಲೆ. ಇವೆರಡೂ 100 ರಿಂದ 150 ಮಾರು ಉದ್ದವಿದ್ದು 2 ಮಾರು ಆಳವಿರುತ್ತವೆ. 6 ಅಂಗುಲ ಕಣ್ಣಳತೆಯ ಬಲೆಯಿಂದ ಚಟ್ಲಿ (ಸಿಗಡಿ), ಬಾಂಗಡೆ, ಗೊನಗ, ಕುಡಿತ್ಲಿ, ಗುರುಬೆನೆಸಡಿ, ಅಂಬಾಳಿನ ಮರಿ ಮೊದಲಾದ ಮೀನುಗಳನ್ನು ಹಿಡಿಯುತ್ತಾರೆ.

ಗಿಲ್ ಬಲೆಗಳು

ಯಾಂತ್ರಿಕ ದೋಣಿಗಳು ಬಂದ ನಂತರ ಅವುಗಳಿಗೆ ಸರಿ ಹೊಂದುವ ಬಲೆಗಳೂ ಸಹ ನಿರ್ಮಾಣಗೊಂಡವು. ಅಂತಹ ಬಲೆಗಳಲ್ಲಿ ಗಿಲ್ ಬಲೆ, ಟ್ರಾಲ್ ಬಲೆ, ಪರ್ಶಿಯನ್ ಬಲೆಗಳು ಪ್ರಮುಖವಾದವು. ಗಿಲ್ ಬಲೆಗಳಲ್ಲಿ ಎರಡು ವಿಧ:

1. ಡ್ರಿಫ್ಟ್ ಗಿಲ್ ಬಲೆ
2. ಸೆಟ್ ಗಿಲ್ ಬಲೆ ಎಂದು.

1. ಡ್ರಿಫ್ಟ್ ಗಿಲ್ ಬಲೆ

ಅ) ಕಂಡಾರಿ ಬಲೆ

ಆ) ಬೊಲಿಂಗರ್ ಬಲೆ

ಇ) ಓಡು ಬಲೆ

2. ಸೆಟ್ ಗಿಲ್ ಬಲೆ

ಅ) ಕಂಟ ಬಲೆ

ಆ) ಪತ್ತಿರ್ಲೆ ಬಲೆ

ಇ) ಬೂತಾಯಿ ಬಲೆ

ಈ) ತಿರಂಡಿ ಬಲೆ

ಉ) ಯೆತ್ತಿ ಬಲೆ

1. ಡ್ರಿಫ್ಟ್ ಗಿಲ್ ಬಲೆಗಳು : ಈ ಬಲೆಗಳು ಗಾಳಿಯಿಂದುಂಟಾಗುವ ಅಲೆಗಳ ಸೆಳೆತಕ್ಕೆ ಸುಲಭವಾಗಿ ಸಿಗುವುದಿಲ್ಲ. ಗಿಲ್ ಬಲೆಯ ದೋಣಿಗಳಲ್ಲಿ ಈ ಬಲೆಗಳನ್ನು ಬಳಸುತ್ತಾರೆ. ಹೆಚ್ಚಾಗಿ ರಾತ್ರಿ ಬೇಟೆಗೆ ಉಪಯೋಗಿಸುತ್ತಾರೆ. ನಾಡ ದೋಣಿಗೆ ಹೊಂದಿಸಿರುವ ಯಂತ್ರದ ಸಹಾಯದಿಂದ ಗಿಲ್ ಬಲೆಯ ದೋಣಿಗಳು ಸಮುದ್ರದಲ್ಲಿ ಸಂಚರಿಸುತ್ತವೆ. ಕರ್ನಾಟಕ ಕರಾವಳಿಯಲ್ಲಿ ಮೂರು ಬಗೆಯ ಡ್ರಿಫ್ಟ್ ಗಿಲ್ ಬಲೆಗಳು ಮಾತ್ರ ಬಳಕೆಯಲ್ಲಿವೆ.

ಅ) ಕಂಡಾರಿ ಬಲೆ: ಇದನ್ನು ಸಮುದ್ರದ ಮೇಲ್ಭಾಗದ ನೀರಿನಲ್ಲಿ ಬೇಟೆಯಾಡಲು ಬಳಸುತ್ತಾರೆ. ಮಾನ್‌ಸೂನ್ ಮಳೆ ಪ್ರಾರಂಭವಾದ ತಕ್ಷಣ ಕಂಡಾರಿ ಬಲೆಯ ಬೇಟೆ ಪ್ರಾರಂಭವಾಗುತ್ತದೆ. ಹೊಸ ನೀರಿಗೆ ಮೀನು ಮೇಲ್ಭಾಗದಲ್ಲಿ ಸಂಚರಿಸುತ್ತಿರುತ್ತದೆ. ಆ ಸಂದರ್ಭದಲ್ಲಿ ಈ ಬಲೆಯಿಂದ ಮೀನು ಹಿಡಿಯುತ್ತಾರೆ. ಮೂರು ತುಂಡುಗಳ ಸೇರ್ಪಡೆಯಿಂದಾದ ಕಂಡಾರಿ ಬಲೆಯ ಆಳ 3 ಮೀಟರುಗಳು. ಉದ್ದ 1000 ಮೀಟರುಗಳಾಗಿರುತ್ತದೆ. ಇದರ ಕಣ್ಣಳತೆ 13ರಿಂದ 16 ಮಿ. ಮೀಟರುಗಳು. ಬಲೆಯ ಮೇಲ್ಭಾಗದಲ್ಲಿ ಸುಮಾರು 450 ಬೆಂಡುಗಳಿರುತ್ತವೆ. ಆಳದಲ್ಲಿ ಸೀಸದ ಗುಂಡುಗಳಿರುತ್ತವೆ. ಇದರಿಂದ ''ನಂಗು'' ಮೀನನ್ನು ಹೆಚ್ಚು ಹಿಡಿಯುತ್ತಾರೆ.

ಆ) ಬೊಲಿಂಗರ್ ಬಲೆ: ಇದೂ ಸಹ ಸಮುದ್ರದ ಮೇಲ್ಮೈಯಲ್ಲಿ ಬೇಟೆಯಾಡಲು ಬಳಸುತ್ತಾರೆ. ಇದರ ಉದ್ದ 1500ರಿಂದ 1800 ಮೀಟರ್‌ಗಳಾಗಿದ್ದು ಆಳ 25 ಮೀಟರುಗಳು. ಕಣ್ಣಳತೆ 19.5 ಮೀ. ಮೀಟರ್. ಇದನ್ನು ಹಗಲು ಬೇಟೆಯಲ್ಲಿ ಹೆಚ್ಚು ಬಳಸುತ್ತಾರೆ.

ಇ) ಓಡು ಬಲೆ: ಸಮುದ್ರದಾಳದಲ್ಲಿ ಬೇಟೆಯಾಡಲು ಈ ಬಲೆಯನ್ನು ಬಳಸುತ್ತಾರೆ. ಇದರ ಉದ್ದ 900 ರಿಂದ 1000 ಮೀಟರ್ ಆಳ 8 ರಿಂದ 9 ಮೀಟರ್. 14 ತುಂಡು ಬಲೆಗಳನ್ನು ಸೇರಿಸಿ ಒಂದು ಓಡು ಬಲೆ ಮಾಡುತ್ತಾರೆ. ಇದಕ್ಕೆ ನೈಲಾನ್ ಇಲ್ಲವೆ ಹತ್ತಿಯ ಬೂಲನ್ನು ಬಳಸುತ್ತಾರೆ. ಇದರ ಕಣ್ಣಳತೆ 27 ರಿಂದ 67 ಮಿ. ಮೀಟರ್ ಓಡುಬಲೆಯನ್ನು ಯಾಂತ್ರಿಕ ದೋಣಿಗಳಲ್ಲೂ ಮತ್ತು ನಾಡದೋಣಿಗಳಲ್ಲೂ ಬಳಸುತ್ತಾರೆ. ಹೆಚ್ಚಾಗಿ ರಾತ್ರಿ ಮೀನು ಬೇಟೆಗೆ ಬಳಸುಸುವುದು ರೂಢಿಯಲ್ಲಿದೆ.

<u>**ಸೆಟ್ ಗಿಲ್ ಬಲೆಗಳು**</u>: ಈ ಬಲೆಗಳು ಡಫ್ಟ್ ಗಿಲ್ ಬಲೆಗಳನ್ನು ಬಹುಪಾಲು ಹೋಲಿದರೂ ಇವುಗಳ ತಳದಲ್ಲಿ ಆ್ಯಂಕರ್ ಅನ್ನು ಕಟ್ಟಿರುತ್ತಾರೆ. ಪ್ರಮುಖವಾಗಿ ಈ ಬಲೆಗಳಲ್ಲಿ ಐದು ಬಗೆಗಳನ್ನು ಕಾಣಬಹುದು.

ಅ) ಕಂಟಬಲೆ: ಇದನ್ನು ಹಗಲಿನ ಬೇಟೆಗಾಗಿ ಬಳಸಲಾಗುತ್ತದೆ. ಬೆಳಗಿನ ಜಾವ ದಡಬಿಟ್ಟ ಮೀನುಗಾರರು ಸುಮಾರು 8 ಗಂಟೆಯ ಹೊತ್ತಿಗೆ 'ಕಂಟೆ ಬಲೆ'ಯನ್ನು ಸಮುದ್ರದಲ್ಲಿ ಬಿಟ್ಟು ನಾಲ್ಕೈದು ಗಂಟೆಗಳ ನಂತರ ಬಲೆ ಮೇಲೆತ್ತಿ ಮೀನು ಬಿಡಿಸಿಕೊಂಡು ಹಿಂದಿರುಗುತ್ತಾರೆ. ಸೆಣಬಿನ ದಾರದಿಂದ ಹೆಣೆದಿರುವ ಕಂಟಬಲೆ 300ರಿಂದ 400 ಮೀಟರ್ ಉದ್ದವಿದ್ದು 5.5 ಮೀಟರ್ ಆಳವಿರುತ್ತದೆ. ಕಣ್ಣಳತೆ 25.4 ರಿಂದ 27.9 ಮಿ.ಮೀಗಳಾಗಿರುತ್ತದೆ. ಈ ಬಲೆಯ ದೋಣಿಯಲ್ಲಿ ಮೂರು ಇಲ್ಲವೆ ನಾಲ್ಕು ಮಂದಿ ಇರುತ್ತಾರೆ. ಸೆಪ್ಟೆಂಬರ್‌ನಿಂದ ಪ್ರಾರಂಭಿಸಿ ಮೇ ಮಾಹೆಯವರೆಗೆ ಇದರಿಂದ ಬೇಟೆಯಾಡುವಾಗ ಸಿಗಡಿ, ಬಾಂಗಡೆ, ಬೈಗೆ ಮೊದಲಾದ ಜಲಚರಗಳನ್ನು ಸೆರೆಹಿಡಿಯುತ್ತಾರೆ.

ಆ) ಪತ್ತಿರ್ಲೆ ಬಲೆ : ಸಮುದ್ರದ ಮೇಲ್ಮೈಯಲ್ಲಿ ಬೇಟೆಯಾಡಲು ಈ ಬಲೆಯನ್ನು ಬಳಸಲಾಗುತ್ತದೆ. ಎಂಟು ತುಂಡುಗಳನ್ನು ಸೇರಿಸಿ ಮಾಡಿರುವ ಪತ್ತಿರ್ಲೆ ಬಲೆಯ ಉದ್ದ 240 ಮೀಟರುಗಳು. ಆಳ 2.6 ಮೀಟರುಗಳು. 10 ಮೀಟರ್ ಆಳದ ಸಮುದ್ರದಲ್ಲಿ ಈ ಬಲೆಯನ್ನು ರಾತ್ರಿ ವೇಳೆ ಬೇಟೆಯಾಡಲು ಬಳಸುತ್ತಾರೆ.

ಇ) **ಬೂತಾಯಿ ಬಲೆ :** ಈ ಬಲೆಯು ಸೆಣಬಿನ ದಾರದಿಂದ ಹೆಣೆದಿದ್ದು 600 ರಿಂದ 700 ಮೀಟರ್ ಉದ್ದವಿದ್ದು ಎಂಟು ಅಥವಾ ಹತ್ತು ಮೀಟರ್ ಆಳವಿರುತ್ತದೆ. ಕಣ್ಣಳತೆ 165 ಮಿ.ಮೀಟರ್‌ಗಳು. ಸುಮಾರು 20 ರಿಂದ 25 ತುಂಡು ಬಲೆಗಳನ್ನು ಜೋಡಿಸಿ ಈ ಬಲೆಯನ್ನು ಸಿದ್ಧಗೊಳಿಸುತ್ತಾರೆ. ಐದು ಇಲ್ಲವೆ ಆರು ಜನರು ಈ ಬಲೆಯಿಂದ ಬೇಟೆಯಾಡುತ್ತಾರೆ. ಇದನ್ನು ರಾತ್ರಿ ಬೇಟೆಗೆ ಬಳಸುವರು. ರಾತ್ರಿ ಬಲೆಹಾಕಿ ಹಿಂದಿರುಗಿ ಮಾರನೇ ದಿನ ಹೋಗಿ ಬಲೆ ಎತ್ತಿ ಮೀನು ಬಿಡಿಸಿಕೊಂಡು ಮತ್ತೆ ಅದೇ ಸ್ಥಳದಲ್ಲಿ ಇಲ್ಲವೆ ಸ್ಥಳ ಬದಲಾವಣೆ ಮಾಡಿ ಬಲೆ ಹಾಕಿ ಬರುತ್ತಾರೆ. ಈ ಬಲೆಯಿಂದ ಬೇಟೆಯಾಡುವ ಕಾಲವು ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ''ಬೂತಾಯಿ'' ಮೀನು ಹಿಡಿಯುವುದಕ್ಕೋಸ್ಕರವೇ ವಿಶೇಷವಾಗಿ ಸಿದ್ಧಗೊಳಿಸುವರು. ಈ ಮೀನು ಎಣ್ಣೆ ತೆಗೆಯಲು ಬೆಳಸಲಾಗುತ್ತದೆ.

ಈ) **ತಿರಂಡಿ ಬಲೆ :** ಬೂತಾಯಿ ಬಲೆಯನ್ನೆ ಹೋಲುವ ತಿರಂಡಿ ಬಲೆಯ ಬೇಟೆಯ ಕಾಲ ಸಪ್ಟೆಂಬರ್‌ನಿಂದ ಮೇ ವರೆಗೆ. ಇದರ ಉದ್ದಳತೆ 100 ರಿಂದ 120 ಮೀಟರ್‌ಗಳು. ಆಳ 3.5 ಮೀಟರ್‌ಗಳು. ಇದನ್ನು 15 ಮೀಟರ್ ಆಳದ ನೀರಿನಲ್ಲಿ ರಾತ್ರಿ ವೇಳೆ ಬೇಟೆಯಾಡಲು ಬಳಸುವರು. ಶಾರ್ಕ್, ಕಿರಣ್ ಮೀನುಗಳನ್ನು ಹಿಡಿಯುತ್ತಾರೆ.

ಉ) **ಯೆತ್ತಿ ಬಲೆ :** ಮಾನ್‌ಸೂನ್ ಮಳೆ ಪ್ರಾರಂಭವಾದಾಗ ನಾಡದೋಣಿಗೆ ಯಂತ್ರವನ್ನು ಅಳವಡಿಸಿರುವ ಗಿಲ್ ಬಲೆ (ಗಿಲ್ ನಟ್ ಬೋಟ್) ದೋಣಿಯಲ್ಲಿ ಯೆತ್ತಿಬಲೆಯಿಂದ ಬೇಟೆಯಾಡುತ್ತಾರೆ. ಇದರ ಉದ್ದ 220 ಮೀಟರ್‌ಗಳು. ಆಳ 7.0 ಮೀಟರ್‌ಗಳು. ಹತ್ತು ತುಂಡು ಬಲೆಗಳನ್ನು ಸೇರಿಸಿ ಸಿದ್ಧಗೊಳಿಸಿದ ಈ ಬಲೆ ಹತ್ತು ಮೀಟರ್ ಆಳದ ನೀರಿನಲ್ಲಿ ಸೀಗಡಿ ಹಿಡಿಯಲು ಹೆಚ್ಚಾಗಿ ಬಳಸುತ್ತಾರೆ. ಇದು ಹಗಲಿನ ಬೇಟೆಯ ಬಲೆಯಾಗಿದ್ದು ಒಮ್ಮೆ ಬಲೆ ಬಿಟ್ಟು ಮೇಲೆತ್ತಲು ಒಂದು ಗಂಟೆ ಬೇಕಾಗುತ್ತದೆ.

ಯಾಂತ್ರಿಕ ದೋಣಿಯ ದೊಡ್ಡ ಬಲೆಗಳು

ನಾಡ ದೋಣಿಯವರು ಬಳಸುವ ಬಲೆಗಳಲ್ಲಿ ಹಲವು ಬಲೆಗಳನ್ನು ಗಿಲ್‌ಬಲೆಯ ದೋಣಿಯವರೂ ಸಹ ಬಳಸುವುದು ಕಂಡು ಬಂದರೂ ಯಾಂತ್ರಿಕ ದೊಡ್ಡ ದೋಣಿಯ ಮೀನುಗಾರರು ಬಳಸುವ ಬಲೆಯನ್ನು ಬೇರಾವ ದೋಣಿಯವರೂ ಬಳಸಲಾಗದು. ಸಾಧ್ಯವಾಗದು. ಏಕೆಂದರೆ ಬಲೆ ಬಿಡಲು ಮತ್ತು ಬಲೆ ಮೇಲೆತ್ತಲು ದೋಣಿಯಲ್ಲಿನ ಯಂತ್ರವನ್ನು ಬಳಸುತ್ತಾರೆ. ಈ ಕಾರಣದಿಂದ ಯಾಂತ್ರಿಕ ದೋಣಿಯ ದೊಡ್ಡ ಬಲೆಗಳನ್ನು ಗಟ್ಟಿಮುಟ್ಟಾದ ದಾರದಿಂದ ಹೆಣೆದಿರುತ್ತಾರೆ. ಅದಕ್ಕೆ ಬಳಸುವ ದಾರವನ್ನು ಪಾಲಿಮೈಡ್ಸ್, ಪಾಲಿಥೈಲೇನ್, ಪಾಲಿವಿನ್ಯಾಲ್ ಕ್ಲೋರೈಡ್ ದಾರಗಳೆಂದು ಕರೆಯಲಾಗುತ್ತದೆ. ಈ ಬಲೆಗಳನ್ನು ''ಟ್ರಾಲ್ ಬಲೆ'' ಮತ್ತು ''ಪರ್ಶಿಯನ್ ಬಲೆ'' ಎಂದು ಎರಡು ಭಾಗ ಮಾಡಬಹುದು.

ಅ) **ಟ್ರಾಲ್ ಬಲೆ :** ಮೀನು ಹಿಡಿವ ಯಾಂತ್ರಿಕ ದೋಣಿಗಳಲ್ಲಿ ಪರ್ಶಿಯನ್ ಮೊದಲನೇ ಸ್ಥಾನದ ದೋಣಿಯಾದರೆ ಟ್ರಾಲ್ ಎರಡನೇ ಸ್ಥಾನದ ದೋಣಿಯಾಗಿದೆ. ಕೆಲವರು ಪರ್ಶಿಯನ್ ದೋಣಿಯಲ್ಲಿ ಹಿಡಿದ ಮೀನನ್ನು ದಡಕ್ಕೆ ತರಲು ಚಿಕ್ಕ ಟ್ರಾಲರ್ ಎಂಬ ದೋಣಿಯನ್ನು ಬಳಸುತ್ತಾರೆ. ಆಧುನಿಕ ತಂತ್ರಜ್ಞಾನದ ಆಧಾರದ ಮೇಲೆ ಟ್ರಾಲ್ ಬಲೆಯನ್ನು ಸಿದ್ಧಪಡಿಸುತ್ತಾರೆ. ಇದನ್ನು ''ಸೆಳೆವ ಬಲೆ'' ಎಂದೂ ಸಹ ಕರೆಯುತ್ತಾರೆ. ಸಮುದ್ರದ ನೀರಿನ ಬಣ್ಣದಂತೆ ನೀಲಿಯಾಗಿರುವ ಈ ಬಲೆಯು ನೀರಿನಲ್ಲಿದ್ದಾಗ ಮೀನಿಗೆ ಅಷ್ಟು ಸುಲಭವಾಗಿ ಗುರುತು ಹಿಡಿಯಲು ಸಾಧ್ಯವಿಲ್ಲ. ಇದರ ಕಣ್ಣಳತೆಯು ಹಿಡಿವ ಮೀನಿನ ಗಾತ್ರಾನುಸಾರ ಇರುತ್ತದೆ. ಈ ಬಲೆಯಲ್ಲಿ ನಡುನೀರಿನ ಟ್ರಾಲ್ ಬಲೆ, ಮೇಲ್ನೀರಿನ ಟ್ರಾಲ್ ಬಲೆ, ಆಳನೀರಿನ ಟ್ರಾಲ್ ಬಲೆಗಳೆಂಬ ವಿಧಗಳಿವೆ. ಒಟ್ಟಾರೆ ಟ್ರಾಲ್ ಬಲೆಯನ್ನು ಕರ್ನಾಟಕ ಕರಾವಳಿಯಲ್ಲಿ ಹೆಚ್ಚಾಗಿ ಬಳಸಲಾಗುತ್ತದೆ. ಆಳವಾದ ನೀರಲ್ಲಿ ಬೇಟೆಯಾಡಲು ಹೆಚ್ಚಾಗಿ ಬಳಸುತ್ತಾರೆ. ಸೀಗಡಿ, ಬಾಂಗಡೆ, ಮೊದಲಾದ ಜಲಚರಗಳನ್ನು ಇದರಿಂದ ಹಿಡಿಯುತ್ತಾರೆ.

ಟ್ರಾಲ್‌ನಲ್ಲಿ ಮಿನಿ ಟ್ರಾಲ್ ಬಲೆ ಎಂಬ ಚಿಕ್ಕ ಬಲೆ ಇದೆ. ಇದನ್ನು ನಾಡದೋಣಿಯ ಮೀನುಗಾರರು ಮೂರು ಮೀಟರ್ ಆಳದ ನೀರಿನಲ್ಲಿ ಬೇಟೆಯಾಡಲು ಬಳಸುತ್ತಾರೆ.

1987-88 ರಲ್ಲಿ ಕರ್ನಾಟಕ ಕರಾವಳಿಯಲ್ಲಿ 5,198 ಟ್ರಾಲ್ ಬಲೆಗಳಿದ್ದು ಕರಾವಳಿಯಲ್ಲಿ ಹಿಡಿಯುವ ಒಟ್ಟು ಮೀನಿನಲ್ಲಿ ಶೇಕಡಾ 20ರಷ್ಟು ಮೀನನ್ನು ಟ್ರಾಲ್ ಬಲೆಯಲ್ಲಿ ಹಿಡಿಯುತ್ತಿದ್ದರೆಂದು ತಿಳಿದು ಬರುತ್ತದೆ.

2. **ಪರ್ಸ್ - ಸೀನ್ ಬಲೆ:** ಇದನ್ನು 1976 ರಲ್ಲಿ ಮೊಟ್ಟಮೊದಲಿಗೆ ಕರ್ನಾಟಕ ಕರಾವಳಿಯಲ್ಲಿ ಬಳಸಲಾಯಿತು. ಮೀನುಗಾರರಿಗೆ ವರವಾಗಿ ಸಮುದ್ರಕ್ಕೆ ಬಂದ ಈ ಬಲೆಯು ಅವರ ಆದಾಯವನ್ನು ಇದ್ದಕ್ಕಿದಂತೆ ಏರಿಸಿತು. ಪರ್ಸ್ -ಸೀನ್ ಬಲೆಯ ಉದ್ದ 450 ಮೀಟರನಿಂದ 600 ಮೀಟರ್‌ಗಳವರೆಗೆ ಇರುತ್ತದೆ. ಹಲವಾರು ತುಂಡು ಬಲೆಗಳನ್ನು ಸೇರಿಸಿ ಈ ಬಲೆಯನ್ನು ಸಿದ್ಧ ಮಾಡಿರುತ್ತಾರೆ. 43.5 ಅಡಿ ಉದ್ದದ ಪರ್ಸ್-ಸೀನ್ ದೋಣಿಯು ಸುಮಾರು 468 ಮೀಟರ್ ಉದ್ದದ ಬಲೆಯನ್ನು ಹೊಂದಿರುತ್ತದೆ.
ಪರ್ಸ್‌ಸೀನ್ ಬಲೆಯಿಂದ ಬೇಟೆಯಾಡುವ ಮೊದಲು '' ಮೀನಿನ ಕರ್ಪನ್ನು '' ನಾಡದೋಣಿಯಿಂದ ಇಲ್ಲವೆ ಪರ್ಸ್ ಸೀನ್ ದೋಣಿಯ ಮುಂದಿರುವ ಎತ್ತರದ ಕಂಬದ ಮೇಲೆ ನಿಂತು ಕಂಡುಹಿಡಿಯುತ್ತಾರೆ. ಅನಂತರ ಕರ್ಪಿನ ಸುತ್ತಾ ಯಂತ್ರದ ಸಹಾಯದಿಂದ ಬಲೆ ಬಿಡುತ್ತಾರೆ. ಬಲೆ ಪೂರ್ಣವಾಗಿ ನೀರಲ್ಲಿಳಿದ ನಂತರ ಅದರ ತಳದ ದಾರವನ್ನು ಮೇಲೆಳೆದಾಗ ತಳದಲ್ಲಿ ಬಲೆ ಚೀಲದ ಬಾಯಿ ಕಟ್ಟಿದಂತಾಗುತ್ತದೆ. ನಡುವಿನಲ್ಲಿನ ಮೀನಿನ ಕರ್ಪು ಬಲೆಯಲ್ಲಿ ಸಿಕ್ಕಿ ಬೀಳುತ್ತದೆ. ಒಮ್ಮೊಮ್ಮೆ ಒಂದೇ ಬಾರಿ ದೋಣಿ ತುಂಬುವಷ್ಟು ಮೀನು ಬರುವುದುಂಟು. ಸಾಮಾನ್ಯವಾಗಿ ಕರ್ನಾಟಕ ಕರಾವಳಿಯಲ್ಲಿ ಹಿಡಿಯುವ ಒಟ್ಟು ಮೀನಿನ ಶೇಕಡ 65 ರಷ್ಟು ಮೀನನ್ನು ಪರ್ಸ್‌ಸೀನ್ ಬಲೆಯಂದ ಹಿಡಿಯಲಾಗುತ್ತದೆ. ಈ ಬಲೆಯಲ್ಲಿ ಮೀನು ಹಿಡಿಯುತ್ತಿರುವಂತೆಯೇ ಅವುಗಳನ್ನು ದಡಕ್ಕೆ ಕೊಂಡೊಯ್ಯಲು ಟ್ರಾಲ್ ದೋಣಿಗಳಿರುತ್ತವೆ. ಇವು ಮೀನು ಬೇಟೆ ಚೆನ್ನಾಗಿ ಆದರೆ ಪ್ರತಿದಿನ ಎರಡು ಮೂರು ಬಾರಿಯಾದರು , ಮೀನನ್ನು ದಡಕ್ಕೆ ತಲುಪಿಸಿ ಬರುತ್ತವೆ. ಸಾಮಾನ್ಯವಾಗಿ ಒಂದು ಪರ್ಸ್ ಸೀನ್ ಬಲೆಯಿಂದ ಬೇಟೆಯಾಡಲು ಇಪ್ಪತ್ತರಿಂದ ಮೂವತ್ತು ಮೀನುಗಾರರು ಇರುತ್ತಾರೆ. ಇದರಿಂದ ಬಾಂಗಡೆ, ಬೈಗೆ, ಪಾಂಪ್ಲೆಟ್, ನಂಗು ಮೊದಲಾದ ಮೀನುಗಳನ್ನು ಹಿಡಿಯಲಾಗುತ್ತದೆ.

ಕರ್ನಾಟಕದಲ್ಲಿ 1987-88 ರ ಹೊತ್ತಿಗೆ 301 ಪರ್ಸ್ ಸೀನ್ ಬಲೆಗಳು ಬಳಕೆಯಲ್ಲಿದ್ದವೆಂದು ತಿಳಿದು ಬರುತ್ತದೆ.

ಮೀನು ಹಿಡಿಯುವುದು ಉದ್ಯೋಗವಾಗಿದ್ದಾಗ ಮೀನುಬಲೆಗಳಿಗೆ ಅಷ್ಟೊಂದು ಮಹತ್ವವಿರಲ್ಲಿ. ಅದು ಆರ್ಥಿಕ ಸ್ಥಿತಿಯನ್ನು ಸುಧಾರಿಸುವ ಒಂದು ಉದ್ಯೋಗವಾದಾಗ ಬಲೆಗಳಲ್ಲಿ ಹೊಸ ಹೊಸ ಬಗೆಗಳು ಕಂಡುಹಿಡಿಯಲ್ಪಟವು. ಮೀನುಗಾರಿಕೆಯು ಉದ್ದಿಮೆಯಾದಾಗ ಬಲೆಯ ಕ್ಷೇತ್ರದಲ್ಲಿ ಕ್ರಾಂತಿಯೇ ತಲೆದೋರಿತು. ಇಂದಿಗೂ ಪ್ರತಿವರ್ಷ ಹೊಸಹೊಸ ಬಲೆಗಳು ಬರುತ್ತಿವೆ. ಆ ಬಗ್ಗೆ ಸಂಶೋಧನೆ ನಡೆಯುತ್ತಲೇ ಇದೆ. ಆದರೆ ಆಧುನಿಕ ತಂತ್ರ ಜ್ಞಾನದನುಸಾರ ಸಿದ್ಧಗೊಳಿಸಿದ ಬಲೆ ಸಾಮಾನ್ಯ ಮೀನುಗಾರನ ಮಟ್ಟಕ್ಕೆ ಮುಟ್ಟುತ್ತಿಲ್ಲ. ಒಂದು ಸಾಮಾನ್ಯ ಬಲೆ ಎರಡು ಲಕ್ಷ ರೂಪಾಯಿಗಳನ್ನು ದಾಟುತ್ತದೆ. ಆದ್ದರಿಂದ ಇಂದಿಗೂ ಹಿಂದಿನ ಸಾಮಾನ್ಯ ಬಲೆಯೇ ಬಡ ಮೀನುಗಾರರ ಜೀವನಾಧಾರವಾಗಿದೆ. ಆಧುನಿಕ ಬಲೆಗಳ ಹಾವಳಿಯಿಂದ ಅವರಿಗೆ ಇನ್ನ ದೈನಂದಿನ ಅವಶ್ಯತೆಗಳನ್ನು ಪೂರೈಸಿಕೊಳ್ಳುವುದು ಸಹ ಕಷ್ಟವಾಗುತ್ತಿದೆ.

ಮೇಲೆ ತಿಳಿಸಿರುವ ಬಲೆಗಳಲ್ಲದೆ ಇನ್ನೂ ಹಲವು ಬಗೆಯ ಬಲೆಗಳು ಸಿಗುತ್ತವೆ. ಅವುಗಳ ಬಗ್ಗೆಯೇ ಒಂದು ಮಹಾ ಪ್ರಬಂಧ ಸಿದ್ಧಗೊಳಿಸುವಷ್ಟು ವಿಷಯ ದೊರೆಯುತ್ತದೆ. ಇಲ್ಲಿ ನಾನು ಬಲೆಗಳ ಬಗ್ಗೆ ಪಕ್ಷಿನೋಟ ನೀಡಲು ಮಾತ್ರ ಪ್ರಯತ್ನಿಸಿದ್ದೇನೆ.

ಜಿಲ್ಲಾವಾರು - ಮೀನು ಬೇಟೆಯ ಬಲೆಗಳು

ಅ.ನಂ.	ಹೆಸರು.	ದಕ್ಷಿಣಕನ್ನಡ.	ಉತ್ತರಕನ್ನಡ.	ಒಟ್ಟು
1.	ಟ್ರಾಲ್ ಬಲೆ	945	843	1,788
2.	ಪರ್ಸ್-ಸೀನ್	121	67	188
3.	ಗಿಲ್ ಬಲೆ	1130	5441	6,571
4.	ರಂಪಣಿ ಬಲೆ	24	62	86
5.	ತೀರದ ಬಲೆ	2,990	934	3,924
6.	ತೀರದ ದೋಣಿ ಬಲೆ	1	22	23
7.	ಇತರೆ	4554	7312	11,866

ಬಲೆಗಳ ರಕ್ಷಣೆ :

ಮೀನುಗಾರರಿಗೆ ಬಲೆಯೇ ಬದುಕಿನ ಆಧಾರ. ಆದ್ದರಿಂದ ಅದನ್ನು ಎಚ್ಚರಿಕೆಯಿಂದ ರಕ್ಷಿಸಿಡಲು ಅವರು ಹಲವು ವಿಧಗಳನ್ನು ಅನುಸರಿಸುತ್ತಾರೆ. ಒಂದು ಬಲೆ ಸಿದ್ಧಪಡಿಸಲು ಹಲವಾರು ದಿನಗಳು ಬೇಕು ಜೊತೆಗೆ ಕೈ ತುಂಬಾ ಹಣ ಬೇಕು. ಹೀಗೆ ತನು-ಮನ-ಧನಗಳನ್ನೆಲ್ಲಾ ಸವೆಸಿ ಸವೆಸಿ ಒಂದು ಬಲೆಯನ್ನು ಸಿದ್ಧ ಮಾಡುತ್ತಾರೆ. ಅದು ಬೇಟೆಯ ಸಂದರ್ಭದಲ್ಲಿ ಕಲ್ಲಿನ ಇಲ್ಲವೆ ಗಿಡಬಳ್ಳಿಗಳಿಗೆ ತಾಗಿ ಸ್ವಲ್ಪ ಹರಿದರೆ ಅವರ ಅಂಗಾಂಗವೇ ಕಿತ್ತು ಬಂದಷ್ಟು ನೋವು ಅವರಿಗಾಗುತ್ತದೆ. ಈ ಕಾರಣದಿಂದ ಅವರು ಅನುಭವ ಜ್ಞಾನದ ಆಧಾರದಿಂದ ಕಂಡು ಹಿಡಿದ ನಿಸರ್ಗದ ಮದ್ದಿನಿಂದ ತಮ್ಮ ತಮ್ಮ ಬಲೆಗಳನ್ನು ಅವರು ರಕ್ಷಿಸಿಕೊಳ್ಳುತ್ತಾರೆ. ಬೇಟೆಯ ನಂತರ ಬಲೆಯನ್ನು ಸಿಹಿನೀರಿನಲ್ಲಿ ಚೆನ್ನಾಗಿ ತೊಳೆದು ಒಣಗಿಸಿ ಇಡುತ್ತಾರೆ. ಇಲ್ಲದಿದ್ದರೆ ಮೀನಿನ ಮತ್ತು ಸಮುದ್ರದ ಉಪ್ಪಿನಾಂಶ ಬಲೆಯೊಡನೆ ಸೇರಿ ಅದು ಕ್ರಿಮಿಕೀಟಗಳ ಬಾಯಿಗೆ ಆಹಾರವಾಗಬಹುದು. ಇದನ್ನು ಗಮನಿಸಿಯೇ ಇತ್ತೀಚಿನ ಯಾಂತ್ರಿಕ ದೋಣಿಗಳ ಬಲೆಗೆ ರಾಸಾಯನಿಕ ವಸ್ತುಗಳನ್ನು ಆಗಾಗ್ಗೆ ಸಿಂಪಡಿಸಿ ಇಡುವುದು.

ನಾಡದೋಣಿಗಳ ಬಲೆಯು ಯಾಂತ್ರಿಕ ದೋಣಿಗಳ ಬಲೆಯಷ್ಟು ಬಲಯುತವಾಗಿರುವುದಿಲ್ಲ. ಆದ ಪ್ರಯುಕ್ತ ಆ ಬಲೆಗೆ ಜಗಿಬರಲು ಮತ್ತು ಎಲ್ಲಾ ಕಾಲದ ಹವಾಮಾನಕ್ಕೂ ಅದು ಹೊಂದಿಕೊಳ್ಳಲು ಅದಕ್ಕೆ ಹಲವು ಬಗೆಯ ಹಣ್ಣಿನ ಇಲ್ಲವೆ ಮರದ ತೊಗಟೆಯ ರಸವನ್ನು ಬಳಿದಿಡುತ್ತಾರೆ. ಹೀಗೆ ರಸದಲ್ಲಿ ಬಲೆಯನ್ನು ಅದ್ದುವುದರಿಂದ ಬಲೆಗೆ ಹೊಸ ಬಣ್ಣ ಬರುತ್ತದೆ. ಅದು ನೀರಿನ ಬಣ್ಣವನ್ನು ಹೋಲುವುದರಿಂದ ಮೀನಿಗೆ ಬಲೆಯು ಅಷ್ಟು ಸುಲಭವಾಗಿ ಕಾಣಿಸುವುದಿಲ್ಲ. ರಸಹಾಕಿದ ಬಲೆಯು ನೋಡಲೂ ಸಹ ಅಂದವಾಗಿ ಕಾಣುತ್ತದೆ.

ಮತ್ತಿ ತೊಗಟೆ : ಮತ್ತಿ ಮರದ ತೊಗಟೆ ತೆಗೆದು ಅದನ್ನು ಚೆನ್ನಾಗಿ ಅರೆದು ಅದರ ರಸವನ್ನು ಬಲೆಗೆ ಲೇಪಿಸುತ್ತಾರೆ. ಇದರಿಂದ ಬಲೆಗೆ ಮೆರಗು ಕೊಟ್ಟಂತಾಗುತ್ತದೆ. ಕೆಂಪು ಬಣ್ಣದ ಮತ್ತಿರಸವನ್ನು ಬಲೆಗೆ ಬಳಿದಾಗ ಬಲೆಯೆಲ್ಲಾ ಕೆಂಪಾಗಿ ಬಿಡುತ್ತದೆ.

ಮತ್ತಿಮರದ ತೊಗಟೆಯನ್ನು ತಂದು ಅದನ್ನು ಚೂರು ಚೂರು ಮಾಡಿ ಚೆನ್ನಾಗಿ ಜಜ್ಜಿ ಒಂದು ಪಾತ್ರೆಯಲ್ಲಿ ಹಾಕಿ ಅದರ ಎರಡರಷ್ಟು ನೀರು ಹಾಕಿ ಕಾಯಿಸಿದಾಗ ರಸ ಬಿಡುತ್ತದೆ. ರಸ ಕಹಿ ಹಾಗೂ ಒಗರಾಗಿರುವುದರಿಂದ ಬಲೆಯನ್ನು ಕ್ರಿಮಿಕೀಟಗಳು ಮುಟ್ಟುವುದಿಲ್ಲ. ಮತ್ತಿ ತೊಗಟೆ ರಸ ಹಾಕಿಡುವ ಮೊದಲು ಬಲೆಯನ್ನು ಚೆನ್ನಾಗಿ ಸಿಹಿನೀರಿನಿಂದ ತೊಳೆಯುತ್ತಾರೆ. ಅದರಲ್ಲಿನ ಉಪ್ಪಿನಂಶ ಹೋದ ನಂತರ ಅದನ್ನು ರಸದಲ್ಲಿ ಅದ್ದಿ ಒಣಗಿಸಿಡುವ ಪದ್ಧತಿ ರೂಢಿಯಲ್ಲಿದೆ.

ಹೊಸ ಬಲೆಯಾದರೆ ಅದನ್ನು ಮೊದಲು ಸುಣ್ಣದ ನೀರಿನಲ್ಲಿ ಅದ್ದಿ, ಅಡುಸೋಗೆಯ ಎಲೆಯೊಡನೆ ಸೇರಿಸಿ ಚೆನ್ನಾಗಿ ಕುದಿಸುತ್ತಾರೆ. ಹೀಗೆ ಮಾಡುವುದರಿಂದ ದಾರದಲ್ಲಿನ ಸೂಕ್ಷ್ಮ ಕ್ರಿಮಿಗಳು ಸಾಯುತ್ತವೆ. ಕುದಿಸಿದ ಬಲೆಯನ್ನು ಹೊರತೆಗೆದು ಮರದ ಒಂದು ಕೊಂಬೆಗೆ ಒಂದು ತುದಿ ಕಟ್ಟಿ, ಇನ್ನೊಂದು ತುದಿಯನ್ನೂ ಮತ್ತೊಂದು ಕೊಂಬೆಗೆ ಎಳೆದು ಕಟ್ಟಿ ಗಂಟುಗಳು ಬಿಗಿಯಾಗುವಂತೆ ಮಾಡುತ್ತಾರೆ. ಮೂರು ನಾಲ್ಕು ದಿನಗಳ ನಂತರ ಆ ಬಲೆಯನ್ನು ಮತ್ತಿ ತೊಗಟೆಯ ರಸದಲ್ಲಿ ಅದ್ದಿ ಚೆನ್ನಾಗಿ ಒಣಗಿಸಿ ಬೇಟೆಗೆ ಬಳಸುತ್ತಾರೆ. ಮತ್ತಿ ರಸಕ್ಕೆ ''ತೊಗರು'' ಎಂದೂ ಸಹ ಕರೆಯುತ್ತಾರೆ.

ತೆಂಗಿನ ರಸ : ಮೂರು ನಾಲ್ಕು ತೆಂಗಿನ ಕಾಯಿಗಳನ್ನು ತುರುಬಿ ಅದಕ್ಕೆ 1/8 ಭಾಗದಷ್ಟು ಅಕ್ಕಿ ಕೂಡಿಸಿ ಅಳಿದು ಹಿಟ್ಟು ಮಾಡುತ್ತಾರೆ. ಅದನ್ನು ಪಾತ್ರೆಯಲ್ಲಿ ಹಾಕಿ ಅದಕ್ಕೆ ಸರಿಯಾದ ಪ್ರಮಾಣದಲ್ಲಿ ನೀರು ಹಾಕಿ ಚೆನ್ನಾಗಿ ಕುದಿಸುತ್ತಾರೆ. ಈ ರಸದಲ್ಲಿ ಸಿಹಿನೀರಲ್ಲಿ ತೊಳೆದ ಬಲೆಗಳನ್ನು ಅದ್ದಿಡುತ್ತಾರೆ. ಸಪೂರ ದಾರದ ಬಲೆಯನ್ನು ಸಹ ಈ ರಸದಲ್ಲಿ ಮುಳುಗಿಸುತ್ತಾರೆ. ಆಗ ತೆಂಗಿನ ಎಣ್ಣೆಯ ಅಂಶ ಹಾಗೂ ಅಕ್ಕಿ ಓಟ್ಟಿನ ಜಿಡ್ಡಿನ ಅಂಶಗಳೆರಡೂ ಬಲೆಯ ಮೇಲೆ ಕುಳಿತು ದಾರವನ್ನು ಮೆದು ಮಾಡುವುದರ ಜೊತೆಗೆ ಬಲೆಯ ಗಂಟುಗಳು ಜಜ್ಜಿಕೊಳ್ಳದಂತೆ ರಕ್ಷಿಸುತ್ತದೆ. ತೆಂಗಿನ ರಸದಲ್ಲಿ ಅದ್ದಿದ ಬಲೆಯು ಬಿಳಿ ಬಣ್ಣದ್ದಾಗುತ್ತದೆ. ಹೆಚ್ಚಾಗಿ ಪಟ್ಟೆ ಬಲೆಯನ್ನು ತೆಂಗಿನ ರಸದಲ್ಲಿ ಅದ್ದಿಡುತ್ತಾರೆ.

ತೆಂಬ್ರಿ ಕಾಯಿಯ ರಸ: ಎಳ್ಳಿ ಕಾಯಿಯಂತಿರುವ ತೆಂಬ್ರಿ ಕಾಯಿಗಳನ್ನು, ಒಂದು ಪಾತ್ರೆಯಲ್ಲಿ ಹಾಕಿ ಆದಕ್ಕೆ ನೀರು ಹಾಕಿಡುತ್ತಾರೆ. ಮೂರು ನಾಲ್ಕು ಗಂಟೆಗಳ ನಂತರ ಪಾತ್ರೆಯಲ್ಲಿ ಜಿಗುಟಾದ ರಸ ಸಿದ್ಧವಾಗುತ್ತದೆ. ಈ ರಸವನ್ನು ಬಲೆಯ ಹಗ್ಗ ಮತ್ತು ವಾಲ್ ಗಾಳಗಳಿಗೆ ವಿಶೇಷವಾಗಿ ಲೇಪಿಸುತ್ತಾರೆ.

ಇತ್ತೀಚೆಗೆ ಹೆಚ್ಚು ಪ್ರಭಾವಶಾಲಿಯಾದ ರಾಸಾಯನಿಕಗಳನ್ನು ಬಲೆಯ ರಕ್ಷಣೆಗಾಗಿ ಬಳಸಲಾಗುತ್ತಿದೆ. ಕಾಪರ್ ಸಲ್ಫೇಟ್, ಅಮೋನಿಯ, ಸ್ಟಾಂಡರ್ಡ್‌ಗ್ರೀನ್, ಬಿ.ಸಿ ಗ್ರೀನ್, ಕುಪ್ಪಿನಲ್, ಬ್ರೌನ್ ಕುಪ್ರಿನಲ್ ಮೊದಲಾದ ರಾಸಾಯನಿಕಗಳನ್ನು ಬಳಸುವುದರಿಂದ ಬಲೆಯನ್ನು ಕೀಟಗಳಿಂದ ರಕ್ಷಿಸಬಹುದಾಗಿದೆ.

ಪ್ರತಿವರ್ಷ ಮೀನು ಹಿಡಿವ ಕಾಲ ಮುಗಿದ ತಕ್ಷಣ ಬಲೆಯನ್ನು ಸಿಹಿ ನೀರಿನಲ್ಲಿ ತೊಳೆದು ಅದಕ್ಕೆ ಬಣ್ಣಹಾಕಿ ಒಣಗಿಸಿಡುತ್ತಾರೆ. ಮರದ ತೊಗಟೆಯ ಇಲ್ಲವೆ ರಾಸಾಯನಿಕಗಳಲ್ಲಿ ಅದ್ದುವ ಮೊದಲು ಬಲೆ ರಿಪೇರಿ ಕೆಲಸವಿರುತ್ತದೆ. ಎಲ್ಲಾದರೂ ಬಲೆ ಹರಿದಿದ್ದರೆ ಅದನ್ನು ಹೆಣೆದು ಸರಿಪಡಿಸುತ್ತಾರೆ. ಗುಂಡು-ಬೆಂಡುಗಳು, ಅಂಚಿನ ಹಗ್ಗ ಮೊದಲಾದವುಗಳನ್ನು ಎಚ್ಚರಿಕೆಯಿಂದ ಪರೀಕ್ಷಿಸಿ ಸರಿಪಡಿಸಿ ಮೀನುಗಾರಿಕೆ ಪ್ರಾರಂಭವಾಗುವವರೆಗೂ ರಕ್ಷಿಸಿಡುತ್ತಾರೆ. ಬಲೆಯನ್ನು ನೆಲದ ಮೇಲೆ ಹಾಕದೆ ಹಲಗೆ, ಇಲ್ಲವೆ ಚಾಪೆಯ ಮೇಲೆ, ಸಿಮೆಂಟ್ ನೆಲವಿದ್ದರೆ ಅದರ ಮೇಲೆ ಇಡುತ್ತಾರೆ. ಆಗಾಗ್ಗೆ ಬಲೆ ಪರೀಕ್ಷೆಯ ಕೆಲಸ ನಡೆಯುತ್ತಲೇ ಇರುತ್ತದೆ. ಹೀಗೆ ತಾವು ಕಂಡುಕೊಂಡ ವಸ್ತುಗಳಿಂದಲೇ ತಮ್ಮ ಉದ್ಯೋಗದ ಬಂಡವಾಳವಾದ ಬಲೆಯನ್ನು ರಕ್ಷಿಸಿಟ್ಟುಕೊಳ್ಳುವ ಮೀನುಗಾರರ ಚತುರತೆ ಮೆಚ್ಚುವಂತಹದು.

ಮೀನು ಹಿಡಿಯುವ ಕಾಲ ಮುಗಿದ ನಂತರ ಸಿಹಿನೀರಿನಲ್ಲಿ ಬಲೆ ತೊಳೆದು ಬಣ್ಣಹಾಕಿ ರಕ್ಷಿಸಿಟ್ಟಿರುವುದು.



ಹೊಸ ಬಲೆಯನ್ನು ಸಿದ್ಧಮಾಡುತ್ತಿರುವುದು.



ಮೀನು ಹಿಡಿಯಲು ಬಳಸುವ ದೋಣಿಗಳು:

ದೋಣಿಗೆ ಪ್ರಾಚೀನವಾದ ಇತಿಹಾಸವಿದೆ. ಪ್ರಾರಂಭದಲ್ಲಿ ನದಿದಾಟುವ ಉದ್ದೇಶದಿಂದ ನಿರ್ಮಾಣಗೊಂಡ ದೋಣಿಯು ಇಂದು ಮೀನುಗಾರರ ಬದುಕಿಗೆ ಆಧಾರವಾಗಿದೆ. ದೋಣಿಗಳಿಗೆ ಮೂಲ ಆಕಾರ ಬಿದಿರಿನ ಗಳಗಳ ತೆಪ್ಪ. ಈ ತೆಪ್ಪವನ್ನೇ ಬಟ್ಟಲಿನಾಕಾರ ಮಾಡಲು ಮರದ ಕಾಂಡದ ಒಳ ತಿರುಳನ್ನು ಸುಟ್ಟು ಇಲ್ಲವೆ ಕೆತ್ತಿ ತೆಗೆದು ದೋಣಿ ತಯಾರಿಸಲಾಯಿತು. ನಾವು ಗಮನಿಸ ಬೇಕಾದ ಅಂಶವೆಂದರೆ ಪ್ರಪಂಚದ ಎಲ್ಲಾ ಭಾಗಗಳಲ್ಲೂ ದೋಣಿಯಾಕಾರದ ಕಲ್ಪನೆ ಒಂದೇ ರೀತಿಯಾದದ್ದು. ಜಲಯಾನದ ಸೌಲಭ್ಯ ಇಲ್ಲದಿರುವಾಗ ಸಮಸ್ಯೆಯೊಂದಕ್ಕೆ ಒಂದೇ ಬಗೆಯ ಪರಿಹಾರ ಕಂಡುಕೊಂಡದ್ದು ಗಮನಾರ್ಹವಾದುದು.

ನೀರಿನ ಮೇಲೆ ಪ್ರಯಾಣಿಸುವ ಉದ್ದೇಶದಿಂದ ರೂಪಗೊಂಡ ದೋಣಿಯು ಮಾನವನ ಬುದ್ಧಿ ವಿಕಾಸದೊಡನೆ ಹೊಸ ಹೊಸ ಆಕಾರಗಳನ್ನು ಪಡೆಯುವುದರ ಜೊತೆಗೆ ಉದ್ದೇಶಗಳನ್ನು ಸಹ ಬದಲಾಯಿಸಿಕೊಂಡಿತು. ಒಂದೇ ಮರದ ಕಾಂಡವನ್ನು ಕೊರೆದು ದೋಣಿ ನಿರ್ಮಿಸುತ್ತಿದ್ದ ಪ್ರಾರಂಭಿಕ ಹಂತವು ಕಾಲದ ಬದಲಾವಣೆಯೊಂದಿಗೆ ಮರದ ಹಲವು ಹಲಗೆಗಳಿಂದ ಇಲ್ಲವೆ ಕಬ್ಬಿಣದ ತಗಡುಗಳಿಂದ ದೊಡ್ಡ ದೊಡ್ಡ ಹಡಗುಗಳ ನಿರ್ಮಾಣವಾಗುವ ಹಂತಕ್ಕೆ ಬೆಳೆಯಿತು. ಅದು ಹಲವು ಉದ್ದೇಶಗಳಿಗಾಗಿ ಈಡೇರಿಕೆಗಾಗಿ ಬಳಕೆಯಾಯಿತು. ಕೆಲವರು ನದಿ ದಾಟಲು ಬಳಸಿದರೆ, ಕೆಲವರು ಮೀನುಹಿಡಿಯಲು ಬಳಸಿದರು. ಕೆಲವರು ಅದರ ಮೇಲೆಯೇ ಮನೆಕಟ್ಟಿಕೊಂಡು ವಿಹಾರ ಮಾಡಲು ಪ್ರಾರಂಭಿಸಿದರು. ಕೆಲವರು ಅದನ್ನು ಆಟದ ಸಾಧನವಾಗಿ ಬಳಸಿದರು. ಇದರ ಪ್ರಸಿದ್ಧತೆ ಇಂಗ್ಲೇಂಡ್ ಮತ್ತು ಅಮೇರಿಕಾದಲ್ಲಿ ಅಂತರಾಷ್ಟ್ರೀಯ ಬೋಟ್ ಕ್ಲಬ್ ಸ್ಥಾಪನೆ ಮಾಡಲು ಹಾದಿ ಮಾಡಿತು. ಅದರ ಸದಸ್ಯತ್ವ ಕೇಲವು ಆಗರ್ಭ ಶ್ರೀಮಂತರಿಗೆ ಮಾತ್ರ ಮೀಸಲಾಯಿತು. ದೋಣಿ ವಿಹಾರದ ಎಷ್ಟು ಜನಪ್ರಿಯತೆ ಕಾಶ್ಮೀರದ ಬೇಸಗೆಯ ಮಡುಗಳು ದೋಣಿವಿಹಾರದ ಕೇಂದ್ರವಾಗಲು ಕಾರಣವಾಯಿತು.

ಹೀಗೆ ವಿವಿಧ ಉದ್ದೇಶಗಳಿಗಾಗಿ ಬಳಸಲ್ಪಡುತ್ತಿರುವ ದೋಣಿಗಳಲ್ಲೆಲ್ಲಾ ಮೀನುಹಿಡಿಯಲು ಬಳಕೆಯಾಗುತ್ತಿರುವುದು ಹೆಚ್ಚು ಮೀನುಗಾರರು ಬಳಸುವ ದೋಣಿಗಳಲ್ಲಿ ಪ್ರಾಚೀನ ಮಾದರಿಯ ಮತ್ತು ನವೀನ ಮಾದರಿಯ ದೋಣಿಗಳೆರಡನ್ನೂ ಕಾಣಬಹುದು. ದೋಣಿಗಳಲ್ಲಿ ಪ್ರಮುಖವಾಗಿ ನಾಡದೋಣಿಗಳು ಮತ್ತು ಯಾಂತ್ರಿಕ ದೋಣಿಗಳು ಎಂದು ಎರಡು ವಿಧಗಳಾಗಿ ವಿಂಗಡಿಸಬಹುದು.

ನಾಡದೋಣಿಗಳು :

ನಾಡದೋಣಿಗಳು ಹಳೆಯ ದೋಣಿಗಳಾಗಿದ್ದು ಹುಟ್ಟಿನ ಸಹಾಯದಿಂದ ನಡೆಯುವಂತಹವು. ಇವುಗಳಲ್ಲಿ ಪ್ರಮುಖವಾದವೆಂದರೆ :

1. ಪಾತಿ
2. ಪಾಂಡಿ
3. ಡಿಂಗಿ
4. ರಂಪಣಿ
5. ತೋಡ್ ದೋಣಿ

1. ಪಾತಿ : ಇದು ನಾಡದೋಣಿಗಳಲ್ಲೆಲ್ಲಾ ಅತಿ ಪ್ರಾಚೀನವಾದ ಮತ್ತು ಸಾಮಾನ್ಯ ಮೀನುಗಾರರ ಜೀವನಾಧಾರವಾದ ದೋಣಿ. ಇದನ್ನು ಸಾಗವಾನಿ ಇಲ್ಲವೆ ಹೆಬ್ಬಲಸಿನ ಅಥವಾ ಮಾವಿನ ಹಲಗೆಗಳಿಂದ ಮಾಡುತ್ತಾರೆ. ಪಾತಿ ದೋಣಿ ತಯಾರಿಸುವಾಗ ಮೊದಲು ಒಂದುವರೆ ಅಥವಾ ಎರಡು ಅಡಿ ವ್ಯಾಸವುಳ್ಳ ಹಾಗೂ ಹತ್ತು ಹನ್ನೆರಡು ಅಡಿ ಉದ್ದದ ಮರದ ದಿಮ್ಮಿಯನ್ನು ಕೊರೆದು ಮಾಡುತ್ತಾರೆ. ಅದನ್ನು ಹತ್ತು ಹದಿನೈದು ದಿನಗಳ ವರೆಗೆ ನೀರಿನಲ್ಲಿ ಕಲ್ಲು ಹೇರಿ ಇಟ್ಟು ಅದು ಚೆನ್ನಾಗಿ ನೆನೆದ ನಂತರ ಹೊರತೆಗೆದು ಅದರ ಅಕ್ಕಪಕ್ಕ ಎರಡು ಹಲಗೆಗಳನ್ನು ಜೋಡಿಸಿ ಹೊಲಿಗೆ ಹಾಕುತ್ತಾರೆ. ಹೊಲಿಗೆ ಹಾಕುವಾಗ ತಳದ ಹಲಗೆಯ ಮೇಲಂಚಿನಲ್ಲಿ ಮತ್ತು ಅದರ ಮೇಲಿನ ಹಲಗೆಯ ಕೆಳ ಅಂಚಿನಲ್ಲಿ ರಂಧ್ರಗಳನ್ನು ಮಾಡಿ ಅವೆರಡನ್ನು ಗಟ್ಟಿ ದಾರದಿಂದ ಇಲ್ಲವೆ ಪ್ಲಾಸ್ಟಿಕ್ ಹಗ್ಗದಿಂದ ಸೇರಿಸಿ ಕಟ್ಟುತ್ತಾರೆ. ಹೀಗೆ

ಸಿದ್ಧ ಮಾಡಿದ ಪಾತಿ ದೋಣಿಗೆ ಗೋಡಂಬಿ ಬೀಜದ ಸಿಪ್ಪೆಯಿಂದ ತೆಗೆದ ಎಣ್ಣೆಯನ್ನು ಬಳಿಯುತ್ತಾರೆ. ಎಣ್ಣೆ ಕುಡಿದ ಹಲಗೆ ನೀರನ್ನು ಹೀರಿಕೊಳ್ಳುವುದಿಲ್ಲ ಮತ್ತು ಕೀಟಗಳು ಅದನ್ನು ಮುಟ್ಟುವದಿಲ್ಲ. ಹೀಗೆ ಸಿದ್ಧ ಮಾಡಿದ ದೋಣಿಗೆ ಆಧಾರವಾದ ಹುಟ್ಟನ್ನು ಸಿದ್ಧ ಮಾಡುತ್ತಾರೆ. ಹುಟ್ಟಿನ ಕೆಳಭಾಗದಲ್ಲಿ ಒಂದು ಚದರಡಿ ಅಗಲದ ಚಿಕ್ಕ ಹಲಗೆ ಇದ್ದು ಅದಕ್ಕೆ ನಾಲ್ಕು ಅಡಿ ಉದ್ದದ ಕೋಲನ್ನು ಹೊಂದಿಸಿರುತ್ತಾರೆ. ಇದು ದೋಣಿಯನ್ನು ಮುಂದೂಡಲು ಸಹಾಯಕವಾಗುತ್ತದೆ. ಹುಟ್ಟು ಚಿಕ್ಕದಾದರೂ ಅದರ ಪ್ರಾಮುಖ್ಯತೆ ದೋಣಿ ನಡೆಸುವವರಿಗೆ ಮಾತ್ರ ಗೊತ್ತು. ಇದನ್ನು ಬೀಸಣಿಗೆಯಂತೆ ಬೀಸಿ ದೂರದಲ್ಲಿರುವ ಮೀನುಗಾರರನ್ನು ಹತ್ತಿರಕ್ಕೆ ಕರೆಯಲು ಸಹ ಬಳಸಲಾಗುತ್ತದೆ. ಅಪಾಯಕ್ಕೆ ಸಿಕ್ಕಿದಾಗ ಹುಟ್ಟನ್ನು ಬೀಸಿ ದೂರದ ದೋಣಿಯವರನ್ನು ಕರೆಯುವುದು ರೂಢಿಯಲ್ಲಿದೆ. ಹುಟ್ಟು ಮತ್ತು ದೋಣಿಯ ಸಂಬಂಧ ಬಿಡಿಸಲಾಗದ ನಂಟು.

ಪಾತಿದೋಣಿಯಲ್ಲಿ ವಿವಿಧ ಆಕಾರಗಳಿವೆ. ಅತಿ ಚಿಕ್ಕ ಪಾತಿದೋಣಿಯು 1.5 ಮೀಟರ್ ಉದ್ದವಿದ್ದು 0.5 ಮೀಟರ್ ಅಗಲವಿರುತ್ತದೆ. ಅತಿ ದೊಡ್ಡ ಪಾತಿ ದೋಣಿಯ ಉದ್ದ 5 ಮೀಟರ್‌ಗಳಾಗಿದ್ದು ಅಗಲ 1.5 ಮೀಟರ್‌ಗಳಾಗಿರುತ್ತದೆ. ಚಿಕ್ಕ ದೋಣಿಯ ಒಳವ್ಯಾಸ 0.4 ಮೀಟರ್ ಇದ್ದರೆ ದೊಡ್ಡ ಪಾತಿ ದೋಣಿಯ ಒಳವ್ಯಾಸ 1.0 ಮೀಟರ್ ಇರುತ್ತದೆ. ಚಿಕ್ಕ ಪಾತಿದೋಣಿಯನ್ನು ಹತ್ತು ಹನ್ನೆರಡು ವರ್ಷದ ಹುಡುಗನೂ ನಡೆಸಬಹುದು. ಸಾಮಾನ್ಯವಾಗಿ ಇದು ಒಬ್ಬ ಮೀನುಗಾರ ನಡೆಸುವ ದೋಣಿ. ಇದನ್ನು ಗಾಳದ ಮೀನು ಬೇಟೆಗೆ ಮತ್ತು ಬಲೆಯ ಮೀನುಬೇಟೆಗೆ ಬಳಸಲಾಗುತ್ತದೆ. ಸಾಮಾನ್ಯ ಮೀನುಗಾರನು ಇಂತಹ ದೋಣಿಯನ್ನು ಹೊಂದಿರುತ್ತಾನೆ. ಏಕೆಂದರೆ ಇದಕ್ಕೆ ತಗಲುವ ಖರ್ಚು 6000 ದಿಂದ 8000 ರೂಪಾಯಿಗಳು. ದೊಡ್ಡ ಪಾತಿ ದೋಣಿಗಳಲ್ಲಿ ನಾಲ್ಕೈದು ಜನರು ಹೋಗಬಹುದು. ಇದನ್ನು ಮೀನಿನ ಕರ್ಪು ಕಂಡುಹಿಡಿಯಲು ಬಲೆಯ ಮೀನು ಬೇಟೆ ಹಾಗೂ ಗಾಳದ ಮೀನು ಬೇಟೆಗೆ ಬಳಸುತ್ತಾರೆ. ಇದರ ನಿರ್ಮಾಣಕ್ಕೆ ಸುಮಾರು 18,000 ಅಥವಾ 20,000 ರೂಪಾಯಿಗಳ ಖರ್ಚು ಬರುತ್ತದೆ. ಚಿಕ್ಕದೋಣಿ ಒಬ್ಬರ ಮಾಲೀಕತ್ವದಲ್ಲಿದ್ದರೆ ದೊಡ್ಡ ಪಾತಿ ದೋಣಿಗೆ ಇಬ್ಬರು ಬಂಡವಾಳಗಾರರಾಗಿರುತ್ತಾರೆ.

1980ರ ಅಂಕಿ ಅಂಶದ ಪ್ರಕಾರ ಕರ್ನಾಟಕ ಕರಾವಳಿಯಲ್ಲಿ 4454 ಪಾತಿದೋಣಿಗಳಿವೆ ಎಂದು ತಿಳಿದು ಬರುತ್ತದೆ. ಇತ್ತೀಚೆಗೆ ಇದರ ಮಹತ್ವ ಕಡಿಮೆಯಾಗುತ್ತಿದೆ. ಏಕೆಂದರೆ ಯಾಂತ್ರಿಕ ದೋಣಿಗಳ ಶಬ್ದದಿಂದ ಪಾತಿದೋಣಿಯ ಮೀನುಗಾರರಿಗೆ ಮೀನುಬೇಟೆ ಪ್ರಯೋಜನಕಾರಿಯಾಗುತ್ತಿಲ್ಲ. ಮಳೆಗಾಲವು ಪಾತಿದೋಣಿಯ ಮೀನುಗಾರರ ಕಾಲ. ಆ ಸಂದರ್ಭದಲ್ಲಿ ಯಾಂತ್ರಿಕ ದೋಣಿಗಳು ಉಗ್ರಸಮುದ್ರದಲ್ಲಿ ಹೋಗುವುದಿಲ್ಲ. ಆಗ ಸಾಗರದ ಶಾಂತಮಯ ಪ್ರದೇಶವಾದ ಮಡಿ ಇರುವ ಸ್ಥಳದಲ್ಲಿ (ಕೆಸರು ಬಂದಿರುವ ಸ್ಥಳದಲ್ಲಿ ಅಲೆಗಳೇಳುವುದಿಲ್ಲವೆಂಬ ನಂಬಿಕೆ) ಮೀನುಗಾರರು ಬೇಟೆಯಾಡುತ್ತಾರೆ. ಏನೇ ಆದರೂ ಮಳೆಗಾಲದಲ್ಲಿ ಸಮುದ್ರದೊಳಹೊಕ್ಕುವುದು ಅಪಾಯಕಾರಿ. ದಡದಲ್ಲಿ ನಿಂತು ನೋಡುವವರಿಗೇ ಆಳೆತ್ತರದ ಅಲೆಗಳಲ್ಲಿ ಏಳುತ್ತಾ ಬೀಳುತ್ತಾ ನುಗ್ಗುವ ದೋಣಿಯ ದೃಶ್ಯ ರೋಮಾಂಚನಗೊಳಿಸುವಾಗ ಅದನ್ನು ನಡೆಸುವವನ ಸ್ಥಿತಿ ಹೇಗಿರಬೇಕು ? ನಿಜಕ್ಕೂ ಯಾಂತ್ರಿಕ ದೋಣಿಗಿಂತ ಪಾತಿದೋಣಿ ಹೆಚ್ಚು ಅಪಾಯಕಾರಿ. ಅದನ್ನು ನಡೆಸುವವನು ಒಮ್ಮೆ ಹುಟ್ಟು ಹಾಕುವುದರ ಕಡೆ ಮತ್ತೊಮ್ಮೆ ಬಲೆ ಹಾಕುವುದರ ಕಡೆಗೆ ಗಮನ ಕೇಂದ್ರೀಕರಿಸಿ, ಬಲೆ ಮೇಲೆತ್ತುವ ಸಂದರ್ಭದಲ್ಲಿ ಬಹಳ ಎಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕಾಗುತ್ತದೆ. ಒಂದು ಕೈಯ್ಯಲ್ಲಿ ದೋಣಿಯನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವ ಮತ್ತೊಂದು ಕೈಯಲ್ಲಿ ಬಲೆಯನ್ನು ಮೇಲೆತ್ತಿ ಮೀನು ಬಿಡಿಸಿಕೊಳ್ಳುವ ಕೆಲಸ ಮಾಡಬೇಕಾಗುತ್ತದೆ. ಆ ಸಂದರ್ಭದಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾದರೆ ದೋಣಿ ತಲೆಕೆಳಗಾಗುವ ಸಂಭವವುಂಟು.

ಪಾತಿದೋಣಿಗೆ ಜೂನ್‌ನಿಂದ ಆಗಸ್ಟ್ ವರೆಗೆ ಹೆಚ್ಚಿನ ಬೇಡಿಕೆ. ಕೆಲವರು ಬಂಡವಾಳ ಹಾಕಿ ದೋಣಿ ಸಿದ್ಧ ಮಾಡಿ ಅದನ್ನು ದಿನಕ್ಕೆ ನೂರು ರೂಪಾಯಿಗೆ ಬಾಡಿಗೆ ಕೊಡುತ್ತಾರೆ. ಕೆಲವರು ಮೀನು ಹಿಡಿಯುವವನಿಗೆ ಕೊಟ್ಟು ಅವನು ಹಿಡಿದು ತಂದ ಮೀನಿನಲ್ಲಿ ಅರ್ಧಪಾಲನ್ನು ಪಡೆಯುತ್ತಾರೆ. ಅಪಾಯದ ಸಂದರ್ಭದಲ್ಲೂ ಹಣದ ಆಸೆಯ ಸಲುವಾಗಿ ಪಾತಿದೋಣಿಯ ಮೀನುಗಾರರು ಒಂಟಿಯಾಗಿ ಸಮುದ್ರ ಹೊಗುವ ಸಾಹಸ ನಿಜಕ್ಕೂ ಮೆಚ್ಚುವಂತಹದು. ಅವರ ಶ್ರಮಕ್ಕೆ ತಕ್ಕ ಹಾಗೆ ಅವರಿಗೆ ಬೆಲೆಯೂ ಸಿಗುತ್ತದೆ. ಏಕೆಂದರೆ ಜೂನ್‌ನಿಂದ ಆಗಸ್ಟ್‌ವರೆಗೆ ಮೀನು ಬರುವುದು ಕಡಿಮೆ, ಬಂದರೂ ಪಾತಿ, ಪಾಂಡಿ ಮೊದಲಾದ ದೋಣಿಗಳ ಮೀನುಗಾರರಿಂದ ಮಾತ್ರ ಮಾರು ಕಟ್ಟೆಗೆ ಮೀನು ಬರಬೇಕು. ಅದೂ ಹೆಚ್ಚಿನ ಪ್ರಮಾಣದಲ್ಲಿ ಇರದೇ ಇರುವುದರಿಂದ ಮೀನಿಗೆ ಹೆಚ್ಚಿನ ಬೆಲೆಸಿಗುತ್ತದೆ. ಕೆಲವು ವೇಳೆ ಹತ್ತು ರೂಪಾಯಿಗೆ ಎರಡು ಬಾಂಗಡೆಯಾಗುತ್ತದೆ.

ಮೀನುಗಾರಿಕೆಯನ್ನು ಪಾತಿ ದೋಣಿಯಿಂದ ಆರಂಭಮಾಡಿದ ಮೀನುಗಾರರು ಇಂದಿಗೂ ವರ್ಷದ 365 ದಿನಗಳೂ ಪಾತಿದೋಣಿಯೊಡನೆ ಬದುಕಲು ಹೋರಾಟ ನಡೆಸುತ್ತಲೇ ಇದ್ದಾರೆ. ಬಿಸಿಲು-ಮಳೆ-ಗಾಳಿಗೆ ಮೈಯೊಡ್ಡಿ ದುಡಿಯುವ ಅಂಬಿಗ ಸಾವು-ಬದುಕಿನ ನಡುವೆ ಜಲದ ಮೇಲೆ ಹೋರಾಡುತ್ತಲೇ ಬದುಕುತ್ತಿದ್ದಾನೆ.

2. ಪಾಂಡಿ: ಪಾತಿದೋಣಿಯ ನಂತರ ಗಾತ್ರದಲ್ಲಿ ಸ್ವಲ್ಪ ದೊಡ್ಡ ಸ್ವರೂಪದ ದೋಣಿ ಎಂದರೆ ಪಾಂಡಿ. ಸಾಗವಾನಿ ಇಲ್ಲವೇ ಹೆಬ್ಬಲಸಿನ ಹಲಗೆಗಳಿಂದ ಮಾಡಿರುವ ಈ ದೋಣಿಯು 5 ರಿಂದ 15 ಮೀಟರ್ ಉದ್ದವಿರುತ್ತದೆ. 0.9 ರಿಂದ 3.5 ಮೀಟರ್ ಅಗಲವಿರುತ್ತದೆ. ಒಳ ಆಳವು 0.6 ರಿಂದ 1.5 ಮೀಟರ್‌ವರೆಗೆ ಇರುತ್ತದೆ. ಹಲವು ಗಲಗೆಗಳನ್ನು ಜೋಡಿಸಿ ಅವುಗಳನ್ನು ಗಟ್ಟಿದಾರದಿಂದ ಹೊಲಿದು ದೋಣಿ ಸಿದ್ಧಮಾಡುತ್ತಾರೆ. ಹಲಗೆಯ ಹೊರಭಾಗಕ್ಕೆ ನೀರು ಹಿಡಿಯಬಾರದೆಂದು ಗೋಡಂಬಿ ಎಣ್ಣೆ ಇಲ್ಲವೆ ಮೀನೆಣ್ಣೆಯನ್ನು ಬಳಿಯುತ್ತಾರೆ. ಒಳಭಾಗದಲ್ಲಿ ಟಾರು ಬಳಿಯುತ್ತಾರೆ. ಗೋಡಂಬಿ ಎಣ್ಣೆ ಹಲಗೆಗೆ ಪಾಚಿಕಟ್ಟದಂತೆ ರಕ್ಷಿಸುತ್ತವೆ.

ಸಮುದ್ರ ಶಾಂತವಾಗಿರುವಾಗ ಮಾತ್ರ ಬಳಸಬಹುದಾದ ಪಾಂಡಿಯಲ್ಲಿ 3 ರಿಂದ 12 ಜನರವರೆಗೆ ಮೀನು ಹಿಡಿಯಲು ಹೋಗುತ್ತಾರೆ. ಲೈನ್‌ಗಾಳ ಹಾಕಿ ಇಲ್ಲವೆ ವಿವಿಧ ಬಗೆಯ ಬಲೆಗಳಿಂದ ಮೀನು ಹಿಡಿಯುತ್ತಾರೆ. ಇತ್ತೀಚಿಗೆ ಪಾಂಡಿಗೆ ಯಂತ್ರ ಜೋಡಿಸಲಾಗಿದೆ. ಯಂತ್ರ ಅಳವಡಿಸಿದ ದೋಣಿಗಿಂತ ಯಂತ್ರದ ಪಾಂಡಿಯಲ್ಲಿ ಸಮುದ್ರದಲ್ಲಿ ಹೆಚ್ಚುದೂರದವರೆಗೆ ಹೋಗಿ ಬೇಟೆಯಾಡಬಹುದು. ದಕ್ಷಿಣ ಕನ್ನಡ ಜಿಲ್ಲೆಗಿಂತ ಉತ್ತರ ಕನ್ನಡ ಜಿಲ್ಲೆಯಲ್ಲಿ ಪಾಂಡಿ ದೋಣಿಗಳು ಹೆಚ್ಚಾಗಿವೆ. ಒಂದು ದೋಣಿಯ ನಿರ್ಮಾಣಕ್ಕೆ 3000 ದಿಂದ 20,000 ರೂ. ಗಳವರೆಗೆ ಖರ್ಚು ಬರುತ್ತದೆ. ಅದು 15 ವರ್ಷಗಳವರೆಗೆ ಬಾಳಕೆಬರಬಲ್ಲದು. ಕೆಲವು ಪಾಂಡಿಗಳಿಗೆ ಒಬ್ಬರು ಮಾತ್ರ ಮಾಲೀಕರಿದ್ದರೆ, ಕೆಲಸಕ್ಕೆ ಇಬ್ಬರು ಮೂವರು ಪಾಲುದಾರರಿರುತ್ತಾರೆ. ಇವರು ಗಳಿಸಿದ ಆದಾಯವನ್ನು ಸಮವಾಗಿ ಹಂಚಿಕೊಳ್ಳುತ್ತಾರೆ.

1987-88 ರ ಅಂಕಿ ಅಂಶದ ಪ್ರಕಾರ ಕರ್ನಾಟಕ ಕರಾವಳಿಯಲ್ಲಿ 2,212 ಪಾಂಡಿಗಳಿದ್ದವೆಂದು ತಿಳಿದು ಬರುತ್ತದೆ. ಈಗ ಅವುಗಳಿಗೆ ಬೇಡಿಕೆ ಇಲ್ಲದ್ದರಿಂದ ಸಂಖ್ಯೆ ಕಡಿಮೆಯಾಗಿದೆ.

3. ಡಿಂಗಿ : ಇದು ಯಂತ್ರದ ದೋಣಿಯ ಜೊತೆಗೆ ಸಹಾಯಕ ದೋಣಿಯಾಗಿ ಕೆಲಸ ಮಾಡುವ ದೋಣಿಯಾಗಿದೆ. ಇದರ ಉದ್ದ ಮೂರು ಇಲ್ಲವೇ ನಾಲ್ಕು ಮೀಟರ್. ಅಗಲ ಎರಡು ಮೀಟರ್. ಆಳ 0.75 ಮೀಟರ್. ಟ್ರಾಲರ್‌ನ ಮೀನುಗಾರರು ಬಲೆ ಬಿಡಲು ಡಿಂಗಿ ದೋಣಿಯನ್ನು ಬಳಸುತ್ತಾರೆ. ಲಾಂಗ್ ಲೈನ್ ಗಾಳದಲ್ಲಿ ಮೀನು ಹಿಡಿಯಲು ಈ ದೋಣಿಯನ್ನು ಬಳಸಲಾಗುತ್ತದೆ. ಮೂರರಿಂದ ಏಳೆಂಟು ಜನಗಳವರೆಗೆ ಕೂರಬಹುದಾದ ಡಿಂಗಿ ಮಧ್ಯದಲ್ಲಿ ಅಗಲವಾಗಿರುತ್ತದೆ.

4. ರಂಪಣಿ : ಒಂದು ಕಾಲದಲ್ಲಿ ರಂಪಣಿದೋಣಿ ಸಮುದ್ರದಲ್ಲಿ ರಾಜನಾಗಿ ಮೆರೆದಂತಹದು. ಉದ್ದದಲ್ಲಿ ಇದು ಸುಮಾರು ಆರು ಹತ್ತು ಹನ್ನೆರಡು ಮೀಟರ್‌ಗಳವರೆಗೆ ಇದ್ದು ಅಗಲದಲ್ಲಿ ಎರಡುವರೆ ಮೀಟರ್ ಇರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ರಂಪಣಿ ದೋಣಿಯ ಸ್ವರೂಪಕ್ಕೂ ಉತ್ತರಕನ್ನಡ ರಂಪಣಿ ದೋಣಿಯ ಸ್ವರೂಪಕ್ಕೂ ವ್ಯತ್ಯಾಸವಿದೆ. ದಕ್ಷಿಣ ಕನ್ನಡದ ರಂಪಣಿ ದೋಣಿಯ ಉದ್ದ ಹನ್ನೆರಡು ಮೀಟರ್‌ಗಳವರೆಗೆ ಇದ್ದರೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಅದರ ಉದ್ದ ಅರು ಅಥವಾ ಏಳು ಮೀಟರುಗಳಾಗಿದ್ದು ದೋಣಿಯ ನಡುವೆ ಅಡ್ಡವಾಗಿ ಎರಡು ಕೋಲುಗಳನ್ನು ಕಟ್ಟಿರುತ್ತಾರೆ. ಆ ಕೋಲುಗಳ ಒಂದು ತುದಿ ದೋಣಿಯ ಅಂಚಿಗೆ ಕಟ್ಟಿದ್ದು ಮತ್ತೊಂದು ತುದಿಯಲ್ಲಿ ಅರ್ಧ ಅಡಿ ಅಗಲದ ನಾಲ್ಕು ಅಡಿ ಉದ್ದದ ಹಲಗೆಯನ್ನು ಎರಡೂ ಕೋಲಿಗೂ ಒಂದೊಂದು ತುದಿ ಬರುವಂತೆ ಕಟ್ಟಿರುತ್ತಾರೆ. ಇದು ದೋಣಿಯನ್ನು ನೀರಿನಲ್ಲಿ ಸಮತಟ್ಟಾಗಿ ನಿಲ್ಲಲು ಸಹಾಯಕವಾಗುತ್ತದೆ.

ರಂಪಣಿ ಬಲೆಯ ಬೇಟೆಗಾಗಿ ಈ ದೋಣಿಯನ್ನು ಹೆಚ್ಚಾಗಿ ಬಳಸುತ್ತಿದ್ದರು. ಈಗ ಉತ್ತರ ಕನ್ನಡ ಜಿಲ್ಲೆಯಲ್ಲಿ ಮಾತ್ರ ಇದು ಹೆಚ್ಚು ಬಳಕೆಯಲ್ಲಿದೆ.

5. ತೋಡ್ ದೋಣಿ : ದೊಡ್ಡ ಮರದ ದಿಮ್ಮಿಯ ಒಳಭಾಗವನ್ನು ತೋಡಿ ಮಾಡುವ ದೋಣಿಗೆ ''ತೋಡ್ ದೋಣಿ'' ಎಂದು ಕರೆಯುತ್ತಾರೆ. ಇದರ ತಳಭಾಗವು ಪಕ್ಕದ ಭಾಗಗಳಿಗಿಂತಲೂ ದಪ್ಪವಾಗಿ ಬಲವಾಗಿ ಇರುತ್ತದೆ. ಇದನ್ನು ಮೀನು ಹಿಡಿಯಲು ಹಿಂದೆ ಬಳಸುತ್ತಿದ್ದು, ಈಗ ಕೇವಲ ನದಿದಾಟಲು ಇಲ್ಲವೆ ದೋಣಿಗಳಿಂದ ಮೀನು ತರಲು ಬಳಸಲಾಗುತ್ತಿದೆ.

ಕರಾವಳಿಯಲ್ಲಿ 1984ರಿಂದ 1991ರ ವರೆಗಿನ ನಾಡದೋಣಿಗಳ ಸಂಖ್ಯೆ

ಹೆಸರು.	1984 - 85	1985 - 86	1986- 87	1987 - 88	1988 - 89	1989 -90	1990 -91
1. ಪಾತಿ	5499	5534	5549	5551	4688	4526	4526
2. ಪಾಂಡಿ	2010	2202	2203	2212	2250	2274	2274
3. ರಂಪಣಿ	83	74	69	69	69	72	72
4. ಪಟ್ಟೆಬಲೆದೋಣಿ	1090	1201	951	961	984	1160	1160
5. ಇತರೆ.	3165	8143	3182	3186	4013	3828	3828
ಒಟ್ಟು	**11847**	**17154**	**11954**	**11979**	**12004**	**11860**	**11860**

ಪಾತಿ, ಪಾಂಡಿನಗಳಂತೆಯೆ ಪಟ್ಟೆಬಲೆಯ ದೋಣಿಯನ್ನು ಕರ್ನಾಟಕ ಕರಾವಳಿಯಲ್ಲಿ ಮೀನುಹಿಡಿಯುವ ಸಲುವಾಗಿಯೇ ಬಳಸುತ್ತಿದ್ದು ರಚನೆಯಲ್ಲಿ ಪಾಂಡಿಗಿಂತ ಸ್ವಲ್ಪ ದೊಡ್ಡದಾಗಿರುತ್ತದೆ. ಪಟ್ಟೆಬಲೆಯಿಂದ ಬೇಟೆಯಾಡಲು ಮಾತ್ರ ಈ ದೋಣಿಯನ್ನು ಬಳಸುತ್ತಿದ್ದ ಕಾರಣದಿಂದ ಅದನ್ನು ಪಟ್ಟೆಬಲೆ ದೋಣಿ ಎಂದು ಕರೆಯಲಾಯಿತು.

ಇದೇ ರೀತಿ ಇನ್ನು ಹಲವು ಚಿಕ್ಕ ಪುಟ್ಟ ನಾಡದೋಣಿಗಳ ವಿಧಗಳಿವೆ. ಅವುಗಳು ಪಾತಿ, ಪಾಂಡಿ, ರಂಪಣಿಯಷ್ಟು ಪ್ರಸಿದ್ಧತೆ ಪಡೆಯದೆ ಇರುವುದರಿಂದ ಅವುಗಳಿಗೆ ಪ್ರತ್ಯೇಕ ಹೆಸರು ಕೊಡದೆ ''ದೋಣಿ''ಎಂದು ಮಾತ್ರ ಕರೆಯಲಾಗುತ್ತಿದೆ.

ನಾಡದೋಣಿಗಳ ರಕ್ಷಣೆ

ಸಾಮಾನ್ಯ ವರ್ಗದ ಮೀನುಗಾರರ ಜೀವನಾಧಾರ ನಾಡದೋಣಿಯೇ ಆಗಿರುವುದರಿಂದ ಅದನ್ನು ತಮ್ಮ ಪ್ರಾಣಕ್ಕಿಂತ ಹೆಚ್ಚು ಜೋಪಾನವಾಗಿ ರಕ್ಷಿಸುತ್ತಾರೆ. ನಾಡದೋಣಿಗಳಿಗೆ ನಿಲ್ಲಲು ಪ್ರತ್ಯೇಕ ಬಂದರಿನ ಅವಕಾಶವಿಲ್ಲ. ಹಗುರವಾಗಿರುವುದರಿಂದ ಮತ್ತು ತಳವು ಗಟ್ಟಿಯಾದ ಮರದಿಂದ ಮಾಡಿರುವುದರಿಂದ ಮೀನು ಹಿಡಿಯುವ ಕೆಲಸ ಮುಗಿದ ತಕ್ಷಣ ಅವುಗಳನ್ನು ನೀರಿನಿಂದ ಮರಳಿನ ದಡಕ್ಕೆ ದೂಡಲಾಗುತ್ತದೆ. ದೂಡುವಾಗ ಪಾತಿದೋಣಿಯಾಗಿದ್ದರೆ ನಾಲ್ಕಾರು ಜನರು ಒಂದಾಗಿ ಎಳೆದುಕೊಂಡು ಬಂದು ಮರಳಿನ ಮೇಲೆ ನಿಲ್ಲಿಸುತ್ತಾರೆ. ಪಾಂಡಿ, ರಂಪಣಿ, ಪಟ್ಟೆಬಲೆ ಮೊದಲಾದ ದೊಡ್ಡ ದೋಣಿಗಳಾಗಿದ್ದರೆ ಸಮುದ್ರದಿಂದ ಮೇಲ್ಭಾಗಕ್ಕೆ ಇಲ್ಲವೆ ಮೇಲ್ಭಾಗದಿಂದ ನೀರಿಗೆ ತರುವಾಗ ಮೀನುಗಾರರೆಲ್ಲಾ ಒಂದು ಗುಂಪಾಗಿ ಸೇರಿ ಪದ ಹೇಳುತ್ತಾ ದೂಡುತ್ತಾರೆ. ಆಗ ದೋಣಿಯ ಅಡಿಯಲ್ಲಿ ಮರದ ತುಂಡುಗಳನ್ನಿಟ್ಟು ಅದಕ್ಕೆ ಗೋಡಂಬಿ ಎಣ್ಣೆ ಸವರುತ್ತಾ ಅದರ ಮೇಲೆ ದೋಣಿ ಜಾರಿಸುತ್ತಾರೆ. ಹೀಗೆ ಪ್ರತಿದಿನ ಕೆಲಸ ಮುಗಿದ ತಕ್ಷಣ ನಾಡದೋಣಿಗಳನ್ನು ನೀರಿನಿಂದ ಹೊರತಂದು ನಿಲ್ಲಿಸುತ್ತಾರೆ. ಆಗ ಬಿಸಿಲಲ್ಲಿ ಒಣಗುವುದರಿಂದ ಬಹುಕಾಲದ ವರೆಗೆ ಬಾಳಿಕೆ ಬರುತ್ತದೆ. ಇಲ್ಲದಿದ್ದರೆ ಸದಾ ನೀರಿನಲ್ಲಿರುವ ದೋಣಿಯ ಹಲಗೆ ನೀರುಕುಡಿದು ಭಾರವಾಗುತ್ತಾ ಹೋಗಿ ಬೆಂಡಾಗುವ ಸಂಭವವುಂಟು. ಆ ಕಾರಣದಿಂದ ನಾಡದೋಣಿಗಳು ಮೀನುಹಿಡಿಯುವಾಗ ಮಾತ್ರ ನೀರಿನಲ್ಲಿರುತ್ತವೆ.

ನಾಡದೋಣಿಗಳಿಗೆ ವರ್ಷಕ್ಕೊಮ್ಮೆ ರಿಪೇರಿ ಕೆಲಸ ನಡೆಯುತ್ತದೆ. ಜೋಡಿಸಿರುವ ಹಲಗೆಗಳು ಸಡಿಲಗೊಂಡಿದ್ದರೆ ಅವುಗಳನ್ನು ಸರಿಪಡಿಸಿ ಮೀನೆಣ್ಣೆ ಇಲ್ಲವೆ ಗೋಡಂಬಿ ಎಣ್ಣೆಯನ್ನು ಬಳಿಯಲಾಗುತ್ತದೆ. ಕೆಲವರು ಹೊರಭಾಗದಲ್ಲಿ ಡಾಂಬರ್ ಬಳಿಯುತ್ತಾರೆ. ಮಳೆಗಾಲದಲ್ಲಿ ರಂಪಣಿ, ಪಾಂಡಿ ಮೊದಲಾದ ದೋಣಿಗಳನ್ನು ದಡದಿಂದ ಮೇಲೆ ತಂದು ನಿಲ್ಲಿಸಿ ಅವುಗಳ ಮೇಲೆ ತೆಂಗಿನ ಮಡಲಿನ ಗುಡಿಸಲುಗಳನ್ನು ಕಟ್ಟಿರುತ್ತಾರೆ. ಮಳೆಗಾಲ ಮುಗಿಯುತ್ತಿದೆ ಎನ್ನುವಾಗ ದೋಣಿಗಳ ರಿಪೇರಿ ಕೆಲಸ ಭರದಿಂದ ಸಾಗುತ್ತದೆ. ಯಾವುದಾದರೂ ಹಲಗೆ ಬೆಂಡಾಗಿ ಹೋಗಿದ್ದರೆ ಅಂತಹ ಹಲಗೆಯನ್ನು ತೆಗೆದು ಬೇರೆ ಹಲಗೆಯನ್ನು ಜೋಡಿಸುತ್ತಾರೆ. ದೋಣಿ ಮೀನುಗಾರರಿಗೆ ಜಲದ ಮೇಲೋಡುವ ವಾಹನವಾದ್ದರಿಂದ ಅದನ್ನು ಎಚ್ಚರಿಕೆಯಿಂದ ರಕ್ಷಿಸಿಡುವುದು ಅವರ ಮಹತ್ವದ ಕೆಲಸಗಳಲ್ಲಿ ಒಂದಾಗಿದೆ.

ಯಾಂತ್ರಿಕ ದೋಣಿಗಳು

ಪ್ರಾರಂಭದಲ್ಲಿ ನಾಡದೋಣಿಗಳಿಗೆ ಯಂತ್ರವನ್ನಳವಡಿಸಿ ನಡೆಸಲಾಯಿತು. ಆದರೆ ಅದು ಅಷ್ಟೊಂದು ಯಶಸ್ವಿಯಾಗಲಿಲ್ಲ. ಏಕೆಂದರೆ ನಾಡದೋಣಿಗಳು ಗಾತ್ರದಲ್ಲಿ ಚಿಕ್ಕದಾಗಿರುವುದರಿಂದ ಮತ್ತು ಹಗುರವಾಗಿರುವುದರಿಂದ ಯಂತ್ರದ ರಭಸವಾದ ನೂಕುವಿಕೆಗೆ ಅದು ಸರಿ ಹೊಂದದೆಂಬುದು ತಿಳಿದಾಗ ಪ್ರತ್ಯೇಕವಾಗಿ ಯಾಂತ್ರಿಕ ದೋಣಿಗಳನ್ನು ಸಿದ್ಧಪಡಿಸುವ ಯೋಜನೆಯನ್ನು ಕೈಗೊಳ್ಳಲಾಯಿತು. ಇದರ ಪರಿಣಾಮದಿಂದ 1960ರಲ್ಲಿ ಟ್ರಾಲರ್ ಎಂಬ ದೋಣಿಯನ್ನು ಮೀನುಹಿಡಿಯಲು ಮೊದಲಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಳಸಲಾಯಿತು. ಅದರನಂತರ 1980ರಲ್ಲಿ ಪರ್ಸ್-ಸೀನರ್ ದೋಣಿಯನ್ನು ಮೊದಲಿಗೆ ಬಳಸಿ ಟ್ರಾಲರ್‌ಗಿಂತಲೂ ಹೆಚ್ಚಿಗೆ ಮೀನ್ನು ಹಿಡಿಯಲಾಯಿತು. ಕರ್ನಾಟಕ ಕರಾವಳಿಯಲ್ಲಿ ಯಾಂತ್ರಿಕ ದೋಣಿಯನ್ನು ಬಳಸುವುದು ಎಷ್ಟು ಪ್ರಸಿದ್ಧವಾಗಿದೆ ಎಂದರೆ ಈಗ ಕರ್ನಾಟಕವು ರಾಷ್ಟ್ರದಲ್ಲಿ ಪ್ರತಿ ಚದರ ಕಿಲೋಮೀಟರಿಗೆ ಅತಿ ಹೆಚ್ಚಿನ ಯಾಂತ್ರಿಕ ದೋಣಿಗಳನ್ನು ಹೊಂದಿರುವ ರಾಜ್ಯವೆನಿಸಿಕೊಂಡಿದೆ.

ಕರ್ನಾಟಕ ಕರಾವಳಿಯಲ್ಲಿ ಪ್ರಸ್ತುತ ಬಳಕೆಯಲ್ಲಿರುವ ಯಾಂತ್ರಿಕ ದೋಣಿಗಳಲ್ಲಿ ಪ್ರಮುಖವಾಗಿ ಮೂರು ವಿಧಗಳನ್ನು ಕಾಣಬಹುದು.

1. ಟ್ರಾಲರ್
2. ಪರ್ಸ್-ಸೀನರ್
3. ಗಿಲ್ ನಟ್ಟರ್

1. ಟ್ರಾಲರ್ : ಈ ದೋಣಿಯನ್ನು ಭಾರತದಲ್ಲಿ ಮೊದಲಿಗೆ ಕೊಚ್ಚಿನ್ ಮೀನುಗಾರಿಕೆಯ ತಾಂತ್ರಿಕ ಸಂಸ್ಥೆ ಸಿದ್ಧ ಮಾಡಿತು. ಇದರ ಉದ್ದ 9ರಿಂದ 13 ಮೀಟರುಗಳಾಗಿದ್ದು ಅಗಲ 4 ರಿಂದ 5 ಮೀಟರುಗಳಾಗಿರುತ್ತದೆ. ಒಳ ಆಳ 1.7ರಿಂದ 2 ಮೀಟರುಗಳಾಗಿರುತ್ತದೆ. ಇದಕ್ಕೆ 30ರಿಂದ 100 ಅಶ್ವಶಕ್ತಿಯ ಡೀಜಲ್ ಎಂಜಿನನ್ನು ಜೋಡಿಸಲಾಗುತ್ತದೆ. ಮರದ ಹಲಗೆ, ಸ್ಟೀಲಿನ ತಗಡು, ಫೈಬರ್ ಹಲಿಗೆ ಮೊದಲಾದವುಗಳಿಂದ ದೋಣಿ ತಯಾರಿಸುತ್ತಾರೆ. ತಾಮ್ರದ ತಗಡಿನ ಇಲ್ಲವೆ ಅಲ್ಯುಮಿನಿಯಂ ತಗಡಿನ ಕವಚದಿಂದ ರಕ್ಷಿಸಲ್ಪಟ್ಟ ಎಂಜಿನನ್ನು ದೋಣಿಯ ಒಳಗೆ ಹಿಂಬದಿಯಲ್ಲಿ ಜೋಡಿಸುತ್ತಾರೆ. ದೋಣಿ ಹೊರ- ಒಳಭಾಗಕ್ಕೆ ಆಯಿಲ್ ಪೈಂಟ್ ಹೊಡೆದು ಹಲಗೆಯನ್ನು ನೀರಿನಿಂದ ರಕ್ಷಿಸಿರುತ್ತಾರೆ.

ಟ್ರಾಲರ್ ನಡೆಸಲು ಒಬ್ಬ ಡ್ರೈವರ್ ಮತ್ತು ಒಬ್ಬ ಸಹಾಯಕನಿರುತ್ತಾನೆ. ಕರ್ನಾಟಕ ಕರಾವಳಿಯಲ್ಲಿ 60 ಅಶ್ವಶಕ್ತಿಯ ಎಂಜಿನ್ ಅಳವಡಿಸಿರುವ 32 ಅಡಿ ಉದ್ದದ ಟ್ರಾಲರ್ ಹೆಚ್ಚು ಪ್ರಸಿದ್ಧವಾಗಿವೆ. ರಾತ್ರಿ ಬೇಟೆಗಾಗಿ ಇವುಗಳನ್ನು ಹೆಚ್ಚಾಗಿ ಬಳಸಲಾಗುತ್ತಿದೆ. ಉತ್ತರ ಕನ್ನಡ ಜಿಲ್ಲೆಗಿಂತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದರ ಸಂಖ್ಯೆ ಹೆಚ್ಚು. ಟ್ರಾಲರ್ ಒಳಗೆ ''ಐಸ್ ಬಾಕ್ಸ್'' ಇರುವುದರಿಂದ ಎರಡು ಮೂರು ರಾತ್ರಿಗಳ ವರೆಗೆ ಸಮುದ್ರದಲ್ಲೆ ಇದ್ದು ಬೇಟೆಯಾಡಿಕೊಂಡುಬರಬಹುದಾಗಿದೆ. ಹಿಡಿದ ಮೀನು, ಸೀಗಡಿ ಮೊದಲಾದ ಜಲಚರಗಳನ್ನು ''ಐಸ್ ಬಾಕ್ಸ್''ನಲ್ಲಿ ರಕ್ಷಿಸಿಟ್ಟುಕೊಂಡಿರುತ್ತಾರೆ.

ಮೂವತ್ತು ಅಡಿ ಉದ್ದದ ಟ್ರಾಲರ್‌ಗಳು 10ರಿಂದ 20 ಮಾರು ಆಳದ ನೀರಿನಲ್ಲಿ ಮೀನುಹಿಡಿಯುವ ಸಾಮರ್ಥ್ಯವನ್ನು ಪಡೆದಿವೆ. ಮೂವತ್ತಾರು ಅಡಿಯ ಟ್ರಾಲರ್ 30 ಮಾರು ಆಳದ ನೀರಿನಲ್ಲಿ ಮೀನುಹಿಡಿಯಬಲ್ಲದು. ಆದರೆ ಇಂದಿಗೂ ಕರ್ನಾಟಕ ರಾಜ್ಯಕ್ಕೆ ಸೇರಿದ ಸಮುದ್ರ ವಲಯವನ್ನು ಪರಿಪೂರ್ಣವಾಗಿ ನಮ್ಮ ಮೀನುಗಾರರು ಬಳಸಿಕೊಂಡಿಲ್ಲ. ಏಕೆಂದರೆ ಅವರಿಗೆ ಆರ್ಥಿಕ ವಲಯದ ಹೊರತಾದ ಪ್ರದೇಶದಲ್ಲಿ ಮೀನುಹಿಡಿಯುವ ಸಾಮರ್ಥ್ಯವುಳ್ಳ ದೋಣಿಗಳು ದೂರವಾಗಿಯೇ ಉಳಿದಿವೆ. ಪೂರ್ವ ಕಡಲ ತೀರದಲ್ಲಿ ಮಾತ್ರ ಅವುಗಳನ್ನು ಬಳಸಲಾಗುತ್ತಿದೆ.

1962ರಲ್ಲಿ ಕೇವಲ 0.30 ಲಕ್ಷ ರೂಪಾಯಿಗೆ ಮಾರಾಟವಾಗುತ್ತಿದ್ದ ಟ್ರಾಲರ್ 1988ರ ಹೊತ್ತಿಗೆ 3.5 ಲಕ್ಷ ರೂಪಾಯಿಗಳಿಗೆ ಏರುತ್ತಾ ಹೋಗಿ ಇಂದು 15 ಲಕ್ಷ ರೂಪಾಯಿಗಳಿಗೆ ಮುಟ್ಟಿ ಸಾಮಾನ್ಯ ಮೀನುಗಾರರ ಕನಸಿನ ದೋಣಿಯಾಗಿದೆ. ಇಷ್ಟೆಲ್ಲಾ ಬಂಡವಾಳ ಹೂಡುವುದು ವ್ಯಕ್ತಿಯೊಬ್ಬನಿಂದ ಸಾಧ್ಯವಾಗದ ಕೆಲಸವಾಗಿರುವುದರಿಂದ ಒಂದು ಟ್ರಾಲರ್‌ನ ಹಿಂದೆ ಆರೇಳು ಬಂಡವಾಳಗಾರರಿರುತ್ತಾರೆ. ಟ್ರಾಲರ್‌ನಲ್ಲಿ ಹಿಡಿದ ಒಟ್ಟು ಮೀನಿನ 70 ರಷ್ಟು ಬಂಡವಾಳಗಾರರಿಗೆ ಹೋಗಿ ಉಳಿದ 30 ಭಾಗವು ಮೀನುಹಿಡಿಯಲು ಹೋದ ಮೀನುಗಾರರಿಗೆ ಹೋಗುತ್ತದೆ. ಕೆಲವು ಸಂದರ್ಭಗಳಲ್ಲಿ ಮೀನು ಬೇಟೆಯಾಗದೆ ಇದ್ದಾಗ ಮಾಲಿಕರು ಯಂತ್ರದ ಡೀಜಲ್ ಖರ್ಚನಿನ ನಷ್ಟ ಅನುಭವಿಸಬೇಕಾಗುತ್ತದೆ. ಮೀನು ಹಿಡಿಯುವ ಗುಂಪು ಪ್ರಾಮಾಣಿಕವಾಗಿದ್ದರೆ ಮಾತ್ರ ಟ್ರಾಲರ್‌ನ ಬಂಡವಾಳಗಾರರಿಗೆ ಪ್ರಯೋಜನ, ಇಲ್ಲದಿದ್ದರೆ ಅವರು ಹಿಡಿದ ಮೀನಿನಲ್ಲಿ ಅರ್ಧಭಾಗ ಬೇರೆಯ ದೋಣಿಯವರಿಗೆ ಸಮುದ್ರಲ್ಲೇ ಮಾರಿಕೊಂಡು ಬಂದಾಗ ದಡದ ಮೇಲಿರುವ ಮಾಲೀಕರು ನಷ್ಟ ಅನುಭವಿಸಬೇಕಾಗುತ್ತದೆ. ಹೀಗೆಯೇ ಹಲವು ಮಂದಿ ಕೈಸುಟ್ಟುಕೊಂಡು ಹೋಗಿರುವ ನಿದರ್ಶನಗಳು ಹಲವು ದೊರೆಯುತ್ತವೆ. ಆದ್ದರಿಂದ ಟ್ರಾಲರ್ ದೋಣಿಯ ಲಾಭ ನಷ್ಟವು ವ್ಯವಹಾರವು ಅದರಲ್ಲಿ ಕೆಲಸ ಮಾಡುವವರ ಪ್ರಾಮಾಣಿಕತೆಯನ್ನವಲಂಭಿಸಿದೆ.

ಬಲೆಯಿಂದ ಬೇಟೆಯಾಡಲು ಟ್ರಾಲರ್ ದೋಣಿಯನ್ನು ಹೆಚ್ಚಾಗಿ ಬಳಸುತ್ತಾರೆ. ಇದರಿಂದ ಸೀಗಡಿ, ಬಾಂಗಡೆ, ಬೈಗೆ ಮೊದಲಾದ ಮೀನುಗಳನ್ನು ಹಿಡಿಯುತ್ತಾರೆ. ಅವು ಸಿಕ್ಕದೇ ಇದ್ದಾಗ ಕೊನೆಗೆ ನೀರಿನ ಹುಳುಗಳನ್ನಾದರೂ ಹಿಡಿದು ತಂದು ಗೊಬ್ಬರದವರಿಗೆ ಮಾರುತ್ತಾರೆ.

ಸರ್ಕಾರ ನೀಡುತ್ತಿರುವ ಹಣ ಸಹಾಯದ ಕಾರಣದಿಂದ ವರ್ಷವರ್ಷ ಕರ್ನಾಟಕ ಕರಾವಳಿಯಲ್ಲಿ ಟ್ರಾಲರ್‌ಗಳ ಸಂಖ್ಯೆ ಏರುತ್ತಲೇ ಹೋಗುತ್ತಾ ಮೀನುಗಾರರ ಜೀವನ ಮಟ್ಟ ಸುಧಾರಣೆಯಾಗುತ್ತಾ ಸಾಗುತ್ತಿದೆ. 1960 ರಲ್ಲಿ ಕರಾವಳಿಯಲ್ಲಿ ನಾಲ್ಕು ಟ್ರಾಲರುಗಳಿದ್ದು 1991 ರ ಹೊತ್ತಿಗೆ ಅವುಗಳ ಸಂಖ್ಯೆ 1938 ಕ್ಕೆ ಏರಿತು. ದೋಣಿಗಳ ಹೆಚ್ಚಳವು ಮೀನುಗಾರಿಕೆಯನ್ನು ಒಂದು ಉದ್ದಿಮೆಯನ್ನಾಗಿ ಪರಿಗಣಿಸಲು ಕಾರಣವಾಯಿತು.

ಯಾಂತ್ರಿಕ ದೋಣಿಗಳಲ್ಲಿ ಮೀನುಗಾರರಿಗೆ ಕಡಿಮೆ ಖರ್ಚಿನಲ್ಲಿ ಹೆಚ್ಚಿನ ಆದಾಯವನ್ನು ಗಳಿಸಿಕೊಡುವ ಟ್ರಾಲರ್ ಉಳಿದೆಲ್ಲಾ ದೋಣಿಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಸಮುದ್ರದಲ್ಲಿ ತೇಲುತ್ತಿವೆ. ಪರ್-ಸೀನರ್‌ನ ಪ್ರಭಾವದಿಂದ ಇತ್ತೀಚಿಗೆ ಮಾತ್ರ ಅದರ ಸಂಖ್ಯೆಯಲ್ಲಿ ಗಣನೀಯ ಇಳಿತ ಕಾಣುತ್ತಿದ್ದರೂ ಟ್ರಾಲರ್ ದೋಣಿಗಳಷ್ಟು ಬೇರಾವ ಯಾಂತ್ರಿಕ ದೋಣಿಗಳೂ ಕರ್ನಾಟಕ ಕರಾವಳಿಯಲ್ಲಿಲ್ಲ.

2. ಪರ್ಸ್‌ಸೀನರ್: ಹಿಂದೆ ಪರ್ಸ್‌ಸೀನರ್ ದೋಣಿಯ ನಿರ್ಮಾಣಕ್ಕೆ ಸಾಗವಾನಿ ಮರವನ್ನು ಬಳಸುತ್ತಿದ್ದು ಇಂದು ಅದರ ಬೆಲೆ ಹೆಚ್ಚಾಗಿರುವ ಕಾರಣದಿಂದ ಹೆಬ್ಬಲಸನ್ನು ಬಳಸಲಾಗುತ್ತಿದೆ. ಒಂದು ಪರ್ಸ್‌ಸೀನರ್ ದೋಣಿಯ ನಿರ್ಮಾಣಕ್ಕೆ ಮೂರರಿಂದ ಆರು ತಿಂಗಳವರೆಗೆ ಕಾಲಾವಧಿ ಬೇಕಾಗುತ್ತದೆ. 25 ರಿಂದ 30 ಜನರು ನಿರಂತರವಾಗಿ ಕೆಲಸ ಮಾಡಬೇಕಾಗುತ್ತದೆ. ಇದಕ್ಕೆ ತಗಲುವ ಖರ್ಚು ಸುಮಾರು 20 ಲಕ್ಷ ರೂಪಾಯಿಗಳು. ದೋಣಿಯ ಜೊತೆಯಲ್ಲಿ ವಿವಿಧ ಬಗೆಯ ಬಲೆಗಳು ಮತ್ತು ಅವುಗಳನ್ನು ಎಳೆಯುವ ಯಂತ್ರ ಸಹ ಇರುತ್ತವೆ. ಇದರ ಸಾಮಾನ್ಯ ಉದ್ದಳತೆ 15 ಮೀಟರುಗಳು. ಅಗಲ ಆರೇಳು ಮೀಟರ್‌ಗಳು. ಒಳ ಆಳ ಸುಮಾರು ಮೂರು ಮೀಟರ್‌ಗಳಾಗಿರುತ್ತವೆ. ಇದಕ್ಕೆ 90 ರಿಂದ 120 ಅಶ್ವಶಕ್ತಿಯ ಎಂಜಿನ್‌ಅನ್ನು ಜೋಡಿಸಿರುತ್ತಾರೆ. ಮೊಟ್ಟಮೊದಲಿಗೆ ಇದರ ಮಾದರಿಯನ್ನು ಕೊಚ್ಚಿನ್ ಮೀನುಗಾರಿಕೆ ತಾಂತ್ರಿಕ ಸಂಸ್ಥೆಯ ಶ್ರೀ ಪಿ.ಬಿ. ಜೈನರು ನೀಡಿದರೆಂದು ತಿಳಿಯುತ್ತದೆ.

ಪರ್ಸ್‌ಸೀನರ್ ದೋಣಿಯಲ್ಲಿ ಚಿಕ್ಕ ಗಾತ್ರದ ದೋಣಿ ಸಹ ಇದ್ದು ಅದರ ಉದ್ದ 32 ರಿಂದ 38 ಅಡಿಗಳಾಗಿರುತ್ತದೆ. ಇದು 50 ಮಾರು ಆಳದ ನೀರಲ್ಲಿ ಮೀನುಹಿಡಿಯುವ ಸಾಮರ್ಥ್ಯವನ್ನು ಪಡೆದಿದೆ. ದೋಣಿಯಲ್ಲಿ ಐಸ್‌ಬಾಕ್ಸ್ ಜೋಡಿಸಿರುತ್ತಾರೆ. ಹಿಡಿದ ಬೆಲೆಬಾಳುವ ಮೀನು ಸೀಗಡಿಗಳನ್ನೆಲ್ಲಾ ಐಸ್‌ಬಾಕ್ಸ್‌ನಲ್ಲಿ ಸಂಗ್ರಹಿಸಿಟ್ಟು ಒಂದೆರಡು ದಿನಗಳವರೆಗೆ ಸಮುದ್ರದಲ್ಲಿ ಬೇಟೆಯಾಡಿಕೊಂಡು ಹಿಂದಿರುಗುತ್ತಾರೆ. ಪರ್-ಸೀನರ್ ದೋಣಿಯಲ್ಲಿ ಮೀನುಹಿಡಿಯಲು 25 ರಿಂದ 30 ಜನರು ಇರುತ್ತಾರೆ. ಇವರು ದಿನಗೂಲಿ ಪಡೆಯದೆ ಹಿಡಿದ ಮೀನಿನ ಒಟ್ಟು ಭಾಗದಲ್ಲಿ ಶೇಕಡ 30 ರಷ್ಟನ್ನು ಪಡೆಯುತ್ತಾರೆ. ಉಳಿದದ್ದು ದೋಣಿಯ ಮಾಲಿಕರಿಗೆ ಹೋಗುತ್ತದೆ. ಸಾಮಾನ್ಯವಾಗಿ ಹೊಸ ಪರ್ಸ್-ಸೀನರ್ ಕೊಳ್ಳುವವರು ಬ್ಯಾಂಕಿನ ಹಣ ಸಹಾಯದ ಪಡೆಯಬೇಕಾಗುತ್ತದೆ. ಅವರಿಗೆ ನೀಡಿದ ಸಾಲಕ್ಕೆ ಕಡಿಮೆ ಪ್ರಮಾಣದಲ್ಲಿ ಬಡ್ಡಿ ಹಾಕುವುದು ಮಾತ್ರವಲ್ಲದೆ ಕಟ್ಟುವ ಅಸಲಿನಲ್ಲೂ ಶೇಕಡಾ 20 ರಿಂದ 25 ರಷ್ಟು ರಿಯಾಯಿತಿ ನೀಡಲಾಗುತ್ತಿದೆ. ಸರಕಾರದ ಈ ಸೌಲಭ್ಯದಿಂದ ದಿನೇ ದಿನೇ ಈ ದೋಣಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ಅಲ್ಲದೆ ಮೂರು ನಾಲ್ಕು ಜನರ ಮಾಲೀಕತ್ವದಲ್ಲಿ ಓಡುತ್ತಿದ್ದ ದೋಣಿಗಳು ಇಂದು ಒಂಟಿ ಮಾಲೀಕತ್ವದಲ್ಲಿ ಕಾರ್ಯನಿರ್ವಹಿಸುತ್ತಿವೆ.

ಈ ದೋಣಿಯ ಜೊತೆಯಲ್ಲಿ ಒಂದು ಚಿಕ್ಕ ದೋಣಿ ಇದ್ದೇ ಇರುತ್ತದೆ. ಇದನ್ನು ಡಿಂಗಿ ಎಂದು ಕರೆಯತ್ತಾರೆ. ಬಲೆಬಿಡಲು ಇದು ಅತಿ ಅವಶ್ಯಕ. ಪರ್‌ಸೀನರ್ ದೋಣಿಯ ಮುಂಭಾಗ ಮತ್ತು ಹಿಂಭಾಗದಲ್ಲಿ ಒಂದೊಂದು ಕಂಬವಿರುತ್ತದೆ. ಮುಂದಿನ ಕಂಬದಲ್ಲಿ ಹಗ್ಗದ ಏಣಿ ಇದ್ದು ಅದರ ಮೇಲೆ ಹತ್ತಿದ ''ಆಚಾರ್ಯ''ನೆಂಬ ವ್ಯಕ್ತಿ ಸಮುದ್ರದಲ್ಲಿ ಮೀನಿನ ಗುಂಪಿರುವ ಸ್ಥಳವನ್ನು ಗುರುತಿಸುವುದರಲ್ಲಿ ನಿರತನಾಗಿರುತ್ತಾನೆ. ಅವನ ಸೂಚನೆಯ ಮೇರೆಗೆ ದೋಣಿ ನಡೆಸಲಾಗುತ್ತದೆ.

ಪರ್ಸ್-ಸೀನರ್‌ನಿಂದ ಹಗಲು ಬೇಟೆಯಾಡುವುದೇ ಹೆಚ್ಚು. ಬೆಳಗಿನಜಾವ ಐದುಗಂಟೆಗೆ ದಡ ಬಿಟ್ಟ ದೋಣಿಗಳು ಸಂಜೆ ಐದುಗಂಟೆಯ ಹೊತ್ತಿಗೆ ಹಿಂದಿರುಗುತ್ತವೆ. ದಡದಲ್ಲಿರುವವರು ದೂರದಿಂದಲೇ ಮೀನಿನ ಬೇಟೆ ಚೆನ್ನಾಗಿ ಆಗಿದೆಯೋ ಇಲ್ಲವೊ ಎಂಬುದನ್ನು ದೋಣಿಯ ಚಲನವಲನದಲ್ಲಿಯೇ ತಿಳಿದುಕೊಳ್ಳುತ್ತಾರೆ. ದೋಣಿ ನೀರಿಲ್ಲಿ ಅರ್ಧಕ್ಕಿಂತ ಹೆಚ್ಚಾಗಿ ಮುಳುಗಿದ್ದರೆ ಅದರಲ್ಲಿ ತುಂಬಾ ಮೀನಿದೆ ಎಂದು ಭಾವಿಸುತ್ತಾರೆ. ಆಗ ದೋಣಿ ನಿಧಾನವಾಗಿ ಚಲಿಸುತ್ತಾ ಬರುತ್ತದೆ.

ಪ್ರತಿಯೊಂದು ಪರ್ಸ್‌ಸೀನರಗೂ ತನ್ನದೇ ಆದ ನಿಶಾನಿ ಇರುತ್ತದೆ. ಆ ನಿಶಾನಿಯ ಬಾವುಟವನ್ನು ದೋಣಿಯ ಹಿಂದಿನ ಮತ್ತು ಮುಂದಿನ ಎರಡೂ ಕಂಬಗಳಿಗೂ ಕಟ್ಟಿರುತ್ತಾರೆ. ಅದನ್ನು ಕಂಡ ತಕ್ಷಣ ದೂರದಿಂದಲೇ ಇಂತಹವರದೇ ಈ ದೋಣಿ ಎಂದು ಗುರುತು ಹಚ್ಚುತ್ತಾರೆ. ಬೋಟಿನ ಮೇಲೆ ಕೆಲವರು ತಮಗೆ ಮೆಚ್ಚುಗೆಯಾದ ಹೆಸರುಗಳನ್ನು ಬರೆಸುತ್ತಾರೆ. ತಮ್ಮ ತಮ್ಮ ಕುಲದೇವರ ಹೆಸರುಗಳಿಂದ ಬೋಟುಗಳನ್ನು ಕರೆಯುವುದು ಹೆಚ್ಚು.

ಪರ್ಸ್ ಸೀನರ್ ದೋಣಿಯಲ್ಲಿ ಮೀನು ಹಿಡಿಯುವ ಕಾಲ ಪ್ರಾರಂಭವಾಗುವುದು ಸೆಪ್ಟಂಬರ್‌ನಿಂದ, ಕೊನೆಗೊಳ್ಳುವುದು ಮೇ ಮಾಹೆಗೆ. ಅದರ ನಂತರ ಬೋಟನ್ನು ದಡದಿಂದ ಮೇಲೆಳೆಯುತ್ತಾರೆ. ದೋಣಿಯನ್ನು ದಡದಿಂದ ಮೇಲೆಳೆಯುವ ಮತ್ತು ಪ್ರಾರಂಭದಲ್ಲಿ ಮೇಲಿಂದ ಸಮುದ್ರಕ್ಕೆ ತಳ್ಳುವ ಗುಂಪು ಬೇರೆ ಇರುತ್ತದೆ. ಇವರಿಗೆ 2000 ರೂ ಕೊಟ್ಟರೆ ಅವರು ಗಾಣದ ಸಹಾಯದಿಂದ ಬಹು ಸುಲಭವಾಗಿ

ದೋಣಿಯನ್ನು ನೀರಿನಿಂದ ಹೊರಗಡೆ ಎಳೆಯುತ್ತಾರೆ. ಹೀಗೆ ಎಳೆಯುವಾಗ ಬೋಟಿನ ಅಡಿಯಲ್ಲಿ ಮರದ ತುಂಡುಗಳನ್ನು ಕೊಟ್ಟು ಅದಕ್ಕೆ ಗೋಡಂಬಿ ಎಣ್ಣೆ ಹಚ್ಚಿ ಅದರ ಮೇಲೆ ಬೋಟನ್ನು ಜಾರಿಸಿಕೊಂಡು ಬರುತ್ತಾರೆ. ಗಾಣಕ್ಕೆ ಕಟ್ಟಿದ ಬೋಟನ್ನು ಎಳೆಯುವಾಗ ಶಕ್ತಿಗೂಡಿಸುವ ಪದಗಳನ್ನು ಹಾಡುತ್ತಾರೆ.

ಮೇ ಮಾಹೆಯಲ್ಲಿ ಮೇಲೆಳೆದ ಬೋಟಿನ ಮೇಲೆ ತೆಂಗಿನ ಗರಿಗಳನ್ನು ಹೊದಿಸಿ ಮಳೆ-ಗಾಳಿ-ಬಿಸಿಲಿನಿಂದ ಅದನ್ನು ರಕ್ಷಿಸುತ್ತಾರೆ. ಆ ಸಂದರ್ಭದಲ್ಲಿ ಯಂತ್ರದ ಮತ್ತು ದೋಣಿಯ ರಿಪೇರಿ ಕೆಲಸಗಳನ್ನು ಮಾಡುವುದು. ಹಾಗೆಯೇ ಅದರ ಬಲೆಯ ರಿಪೇರಿ ಕೆಲಸ ಸಹ ನಡೆಯುತ್ತದೆ.

ಪರ್ಸ್‌ಸೀನರ್ ಕೇವಲ ಮಾಲೀಕನ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸುವ ದೋಣಿಯಾಗದೆ ದೇಶದ ಆರ್ಥಿಕಾಭಿವೃದ್ಧಿಗೆ ದುಡಿಯುವ ದೋಣಿಯಾಗಿದೆ. ಇಂದು ವಿದೇಶಗಳಿಗೆ ರಫ್ತಾಗುತ್ತಿರುವ ಸೀಗಡಿ, ಪಾಂಪ್ಲೆಟ್, ಇಸ್ವಾನ್ ಮೊದಲಾದ ಮೀನುಗಳನ್ನು ಇದೇ ದೋಣಿಯಿಂದ ಹಿಡಿಯುವುದು ಹೆಚ್ಚು. ಇದರ ನಂತರದ ಸ್ಥಾನದಲ್ಲಿ ಟ್ರಾಲರ್ ದೋಣಿ ನಿಲ್ಲುತ್ತದೆ. ಈ ಕಾರಣದಿಂದ ವರ್ಷ ಕಳೆದಂತೆಲ್ಲಾ ಪರ್-ಸೀನರ್‌ಗಳ ಸಂಖ್ಯೆ ಹೆಚ್ಚುತ್ತಿದೆ. 1975 ರಲ್ಲಿ ಕೇವಲ ಎರಡು ಪರ್-ಸೀನರ್ ಮೀನುಹಿಡಿಯಲು ಬಳಕೆಯಗುತ್ತಿದ್ದು 1991 ರ ಹೊತ್ತಿಗೆ ಅವುಗಳ ಸಂಖ್ಯೆ 395 ಕ್ಕೆ ಏರುತ್ತಾ ಹೋಯಿತು.


3. ಗಿಲ್‌ನೆಟ್ಟರ್ : ಇದು ನಾಡ ದೋಣಿಯ ಗುಂಪಿಗೆ ಸೇರಿರುವ ದೋಣಿಯಾಗಿದೆ. ಇದರ ಹಿಂದೆ ಪ್ರತ್ಯೇಕವಾಗಿ 35 ಅಶ್ವಶಕ್ತಿಯ ''ಯಮಹ'' ಇಲ್ಲವೆ ''ರಸ್ಟನ್'' ಎಂಬ ಎಂಜಿನ್ ಅನ್ನು ಜೋಡಿಸಿರುವುದರಿಂದ ಇದು ಯಾಂತ್ರಿಕ ದೋಣಿಗಳ ಗುಂಪಿಗೆ ಸೇರಿತು. ಈ ಯಂತ್ರವನ್ನು ಬೇಕಾದಾಗ ದೋಣಿಗೆ ಜೋಡಿಸಬಹುದು ಬೇಡವಾದಾಗ ಅದನ್ನು ದೋಣಿಯಿಂದ ಪ್ರತ್ಯೇಕಿಸಬಹುದು. ಇದು ಟ್ರಾಲರ್ ಮತ್ತು ಪರ್ಸ್-ಸೀನರ್‌ಗಳಷ್ಟು ಸುರಕ್ಷಿತವಾದ ದೋಣಿಯಲ್ಲ. ತುಂಬಿದ ಭಾರದಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾದರೆ ದೋಣಿಯ ನಿಯಂತ್ರಣ ತಪ್ಪುವ ಸಂಭವವುಂಟು. ಒಂದು ಬದಿಯ ತೂಕ ತಕ್ಷಣ ಹೆಚ್ಚಿದರೆ ಅಂದರೆ ಕುಳಿತವರು ತಕ್ಷಣ ಮೇಲೆದ್ದರೆ ಸಾಕು ದೋಣಿಯು ಬುಡ ಮೇಲಾಗುವ ಸಂಭವವಿದೆ. ಇಂತಹ ನಿದರ್ಶನಗಳು ಪ್ರತಿವರ್ಷ ಸಿಗುತ್ತಿವೆ.

ಗಿಲ್ ನೆಟ್ಟರ್ ದೋಣಿಯನ್ನು ಮಾವಿನ ಇಲ್ಲವೆ ಹೆಬ್ಬಲಸಿನ ಮರದ ಹಲಗೆಗಳಿಂದ ಮಾಡಿರುತ್ತಾರೆ. ಇದರ ಉದ್ದಳತೆ 8 ರಿಂದ 10 ಮೀಟರ್‌ಗಳಾಗಿದ್ದು ಅಗಲ 1.4 ರಿಂದ 1.8 ಮೀಟರ್ ಆಗಿರುತ್ತದೆ. ಒಳ ಆಳ 0.9 ರಿಂದ 1.2 ಮೀಟರ್. ಇದನ್ನು ನಿರ್ಮಿಸಲು ತಗಲುವ ವೆಚ್ಚ 75,000 ದಿಂದ ಒಂದು ಲಕ್ಷ ರೂಪಾಯಿಗಳು. ಇದನ್ನು ಮೊದಲಿಗೆ ಕರ್ನಾಟಕ ಕರಾವಳಿಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೀನುಹಿಡಿಯಲು ಬಳಸಲಾಯಿತು. ರಚನೆಯಲ್ಲಿ ನಾಡದೋಣಿಯನ್ನು ಹೋಲುವ ಗಿಲ್‌ನೆಟ್ಟರ್‌ನಲ್ಲಿ ಮೂರು ನಾಲ್ಕು ಜನರು ಮೀನುಹಿಡಿಯಲು ಹೋಗುತ್ತಾರೆ. ಅವರಲ್ಲಿ ಒಬ್ಬನು ದೋಣಿಯ ಹಿಂಬದಿಗೆ ಸಿಕ್ಕರುವ ಎಂಜಿನ್ ನಡೆಸುವ ಕೆಲಸ ನಿರ್ವಹಿಸುತ್ತಾನೆ. ಉಳಿದವರು ಬಲೆ ಬಿಡುವ ಇಲ್ಲವೆ ಬಲೆ ಮೇಲೆತ್ತುವ ಕೆಲಸದಲ್ಲಿ ನಿರತರಾಗಿರುತ್ತಾರೆ. ಪೆಟ್ರೋಲ್‌ನಿಂದ ಸ್ಟಾರ್ಟ್ ಆಗಿ ಸೀಮೆ ಎಣ್ಣೆಯಿಂದ ನಡೆಯುವ ಎಂಜಿನ ಪ್ರತಿದಿನದ ಖರ್ಚು 200 ರಿಂದ 350 ರೂಪಾಯಿಗಳಾಗಿವೆ.


ರಾತ್ರಿಯ ಮೀನು ಬೇಟೆಗೆ ಗಿಲ್‌ನೆಟ್ಟನ್ನು ಹೆಚ್ಚಾಗಿ ಬಳಸುತ್ತಾರೆ. ಸಂಜೆ ಐದು ಗಂಟೆಯ ಹೊತ್ತಿಗೆ ದಡ ಬಿಟ್ಟ ಮೀನುಗಾರರು ಇಡೀ ರಾತ್ರಿ ಸಮುದ್ರದಲ್ಲಿ ಮೀನು ಹಿಡಿದು ಬೆಳಿಗ್ಗೆ ಆರುಗಂಟೆಗೆ ದಡ ಸೇರುತ್ತಾರೆ. ಗಿಲ್‌ನೆಟ್ಟರ್‌ನಿಂದ ಬಲೆಯ ಮತ್ತು ಗಾಳದಿಂದ ಮೀನುಹಿಡಿಯುತ್ತಾರೆ.

ಮೀನುಗಾರರಿಗೆ ಗಿಲ್‌ನೆಟ್ಟರ್‌ನ ಪ್ರಯಾಣ ಅಭ್ಯಾಸವಾಗಿರುವುದರಿಂದ ಅವರು ಇದರಿಂದ ನಷ್ಟ ಅನುಭವಿಸುವುದಕ್ಕಿಂತ ಲಾಭಗಳಿಸುವುದೇ ಹೆಚ್ಚು ಒಂದು ಗಿಲ್‌ನೆಟ್ಟರ್‌ನ ಮೀನುಗಾರರು ಪ್ರತಿ ವರ್ಷ ಸರಾಸರಿ 50-60 ಸಾವಿರ ರೂಪಾಯಿಗಳವರೆಗೆ ಆದಾಯಗಳಿಸುತ್ತಾರೆ. ಬೇಟೆ ಹೆಚ್ಚಾದರೆ ಒಂದು ಲಕ್ಷಕ್ಕಿಂತ ಹೆಚ್ಚು ಆದಾಯ ಗಳಿಸಬಹುದಾಗಿದೆ.

ಈ ದೋಣಿಯಿಂದ ಶಾರ್ಕ್, ಇಸ್ವಾನ್, ಗೋಬ್ರ ಮೊದಲಾದ ದೊಡ್ಡ ಗಾತ್ರದ ಮೀನುಗಳನ್ನು ಹಿಡಿಯುತ್ತಾರೆ. ಮೀನು ಹಿಡಿಯುವ ಕಾಲವು ನವೆಂಬರ್‌ನಿಂದ ಪ್ರಾರಂಭವಾಗಿ ಏಪ್ರಿಲ್‌ಗೆ ಕೊನೆಗೊಳ್ಳುತ್ತದೆ. ಮುಂದುವರಿಸುತ್ತಾರೆ. ಮಳೆಗಾಲದಲ್ಲಿ ಇದರ ''ಉದ್ಯೋಗ'' ಪರಿಪೂರ್ಣವಾಗಿ ಬಂದಾಗಿರುತ್ತದೆ. ಆದರೂ ಕೇವಲ ಆರು ತಿಂಗಳಲ್ಲೇ ಸಾಕಷ್ಟು ಆದಾಯವನ್ನು ಗಿಲ್‌ನಟ್ಟರಿನ ಮೀನುಗಾರರು ಗಳಿಸಿಕೊಂಡಿರುತ್ತಾರೆ. 1987-88ರ ಅಂಕಿ ಅಂಶದ ಪ್ರಕಾರ ಕರ್ನಾಟಕ ಕರಾವಳಿಯಲ್ಲಿ ಗಿಲ್‌ನಟ್ಟರ್‌ನಿಂದ ಹಿಡಿದ ಮೀನು 2,541 ಮೆಟ್ರಿಕ್ ಟನ್. ಈ ಕಾರಣದಿಂದ ವರ್ಷ ವರ್ಷ ಕರಾವಳಿಯಲ್ಲಿ ಗಿಲ್ ನಟ್ಟರ್‌ಗಳ ಸಂಖ್ಯೆ ಹೆಚ್ಚುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಗಿಂತ ಉತ್ತರ ಕನ್ನಡ ಜಿಲ್ಲೆಯಲ್ಲಿ ಅವುಗಳ ಸಂಖ್ಯೆ ಹೆಚ್ಚಾಗಿದೆ.



ಉತ್ತರ ಕನ್ನಡದ ರಂಪಣಿ



ಡಿಂಗಿ ದೋಣಿ



ಪರ್ಶಿಯನ್ ದೋಣಿ.



ಗಿಲ್‌ನೆಟ್ ದೋಣಿ.



ಪಾತಿ ದೋಣಿ



ರಂಪಣಿ ದೋಣಿ.



ಗಿಲ್ ನೆಟ್ ದೋಣಿ.



ಪರ್ಸಿನಿಯನ್ ದೋಣಿಯ
ಜೊತೆಯಲ್ಲಿರುವ
ಡಿಂಗಿ ದೋಣಿ.



ಪಾತಿದೋಣಿಯ ತಳದ ಭಾಗ.



ಪಾತಿದೋಣಿ.



ಒಂದೇ ಮರದ ಕಾಂಡದಿಂದ ಕೊರೆದು ಮಾಡಿರುವ ಜನಪದಾಕಾರದ ದೋಣಿ


ಗಿಲ್‌ನೆಟ್ ದೋಣಿಯಲ್ಲಿ ಹಿಡಿದ ಮೀನನ್ನು ಬಲೆಯಿಂದ ಬಿಡಿಸುತ್ತಿರುವುದು.





ಮಳೆಗಾಲ ಮುಗಿದ ತಕ್ಷಣ ಪರ್ಸಿಯನ್ ದೋಣಿಯನ್ನು ಜನಪದ ತಂತ್ರಜ್ಞಾನದ ನೆರವಿನಿಂದ ಸಮುದ್ರಕ್ಕೆ ತರುತ್ತಿರುವುದು.

ಯಾಂತ್ರಿಕದೋಣಿಗಳು
ಹಾಗು
ಮೀನು ಹಿಡಿಯುವ ಬಲೆಗಳು.



ಆಧಾರ : Statistical Bulletin of Fisheries 1988-89

ವರ್ಷಾವಾರು ಪರ್-ಸೀನರ್‌ಗಳ ಸಂಖ್ಯೆ

ಅ.ನಂ..	ವರ್ಷ.	ದಕ್ಷಿಣ ಕನ್ನಡ ಜಿಲ್ಲೆ.	ಉತ್ತರ ಕನ್ನಡ ಜಿಲ್ಲೆ.	ಒಟ್ಟು.
1.	1979-80	-	24	24
2.	1980-81	38	66	104
3.	1981-82	59	260	319
4.	1982-83	97	410	507
5.	1983-84	126	420	546
6.	1984-85	182	445	627
7.	1985-86	242	480	722
8.	1986-87	242	489	731
9.	1987-88	310	505	815
10.	1988-89	310	529	839
11.	1989-90	365	519	884
12.	1990-91	365	519	884

ಜಿಲ್ಲಾವಾರು ಮತ್ತು ವರ್ಷವಾರು ಯಾಂತ್ರಿಕ ದೋಣಿಗಳ ಹೆಚ್ಚಳ

ಅ.ನಂ.	ವರ್ಷ.	ದಕ್ಷಿಣ ಕನ್ನಡ ಜಿಲ್ಲೆ.	ಉತ್ತರ ಕನ್ನಡ ಜಿಲ್ಲೆ.	ಒಟ್ಟು (ಎಲ್ಲಾ ಯಾಂತ್ರಿಕ ದೋಣಿಗಳು ಸೇರಿ)
1.	1960-61	4	-	04
2.	1961-62	17	03	20
3.	1962-63	29	17	46
4.	1963-64	53	4	77
5.	1964-65	86	44	130
6.	1965-66	151	62	213
7.	1966-67	167	100	267
8.	1967-68	244	141	385
9.	1968-69	412	192	604
10.	1969-70	563	244	807
11.	1970-71	733	308	1041
12.	1971-72	753	324	1077
13.	1972-73	773	338	1111
14.	1973-74	795	349	1144
15.	1974-75	866	366	1232

ಜಿಲ್ಲಾವಾರು ಮತ್ತು ವರ್ಷವಾರು ಯಾಂತ್ರಿಕ ದೋಣಿಗಳ ಹೆಚ್ಚಳ

ಅ.ನಂ.	ವರ್ಷ.	ದಕ್ಷಿಣ ಕನ್ನಡ ಜಿಲ್ಲೆ.	ಉತ್ತರ ಕನ್ನಡ ಜಿಲ್ಲೆ.	ಒಟ್ಟು (ಎಲ್ಲಾ ಯಾಂತ್ರಿಕ ದೋಣಿಗಳು ಸೇರಿ)
16.	1975-76	935	402	1337
17.	1976-77	995	443	1438
18.	1977-78	1053	491	1544
19.	1978-79	1164	561	1725
20.	1979-80	1239	708	1947
21.	1980-81	1313	872	2185
22.	1981-82	1404	1093	2497
23.	1982-83	1526	1261	2787
24.	1983-84	1572	1272	2844
25.	1984-85	1762	1287	3049
26.	1985-86	1802	1329	3131
27.	1986-87	1792	1340	3132
28.	1987-88	1851	1349	3200
29.	1988-89	1853	1399	3252
30.	1989-90	2347	1383	3730
31.	1990-91	2347	1383	3730

ಯಾಂತ್ರಿಕ ದೋಣಿಗಳಿಂದ ಹಿಡಿದ ಮೀನು ಮತ್ತು ಅದರ ಬೆಲೆ

ವರ್ಷ.	ಪರ್ಸ್-ಸೀನರ್		ಟ್ರಾಲರ್		ಗಿಲ್‌ನಟ್	
	ಪ್ರಮಾಣ ಮೆಟ್ರಿಕ್‌ಟನ್	ಬೆಲೆ (ಲಕ್ಷಗಳಲ್ಲಿ)	ಪ್ರಮಾಣ ಮೆಟ್ರಿಕ್‌ಟನ್	ಬೆಲೆ (ಲಕ್ಷಗಳಲ್ಲಿ	ಪ್ರಮಾಣ ಮೆಟ್ರಿಕ್‌ಟನ್	ಬೆಲೆ (ಲಕ್ಷಗಳಲ್ಲಿ)
1979-80	124989	ತಿಳಿದಿಲ್ಲ	31038	ತಿಳಿದಿಲ್ಲ	-	-
1980-81	96320	1016-00	38822	883-21	134	2-32
1981-82	97217	1428-10	26450	590-64	952	20-61
1982-83	56799	1112-14	30901	843-38	3241	97-82
1983-84	54288	1303-07	34214	967-09	3640	97-14
1984-85	92812	2208-43	59099	1482-79	3924	102-12
1985-86	133963	3074-47	42951	1140-44	4154	98-92

ಯಾಂತ್ರಿಕ ದೋಣಿಗಳಿಂದ ಹಿಡಿದ ಮೀನು ಮತ್ತು ಅದರ ಬೆಲೆ

ವರ್ಷ.	ಪರ್ಸ್-ಸೀನರ್		ಟ್ರಾಲರ್		ಗಿಲ್‌ನಟ್	
	ಪ್ರಮಾಣ ಮೆಟ್ರಿಕ್‌ಟನ್	ಬೆಲೆ (ಲಕ್ಷಗಳಲ್ಲಿ)	ಪ್ರಮಾಣ ಮೆಟ್ರಿಕ್‌ಟನ್	ಬೆಲೆ (ಲಕ್ಷಗಳಲ್ಲಿ	ಪ್ರಮಾಣ ಮೆಟ್ರಿಕ್‌ಟನ್	ಬೆಲೆ (ಲಕ್ಷಗಳಲ್ಲಿ)
1986-87	79354	2130-39	46968	1752-12	3754	119-56
1987-88	69103	2329-48	43357	1655-49	4199	160-06
1988-89	82661	2753-04	41154	1516-11	8029	359-67
1989-90	129487	2311-01	32734	1239-06	9219	344-95
1990-91	107095	2725-65	58950	2146-58	8826	248-75

ನಾಡ ದೋಣಿಗಳಿಂದ ಹಿಡಿದ ಮೀನು ಮತ್ತು ಅದರ ಬೆಲೆ

ವರ್ಷ.	ರಂಪಣಿ ದೋಣಿ		ಇತರ ನಾಡ ದೋಣಿ		ಒಟ್ಟು	
	ಪ್ರಮಾಣ ಮೆಟ್ರಿಕ್‌ಟನ್	ಬೆಲೆ (ಲಕ್ಷಗಳಲ್ಲಿ)	ಪ್ರಮಾಣ ಮೆಟ್ರಿಕ್‌ಟನ್	ಬೆಲೆ (ಲಕ್ಷಗಳಲ್ಲಿ	ಪ್ರಮಾಣ ಮೆಟ್ರಿಕ್‌ಟನ್	ಬೆಲೆ (ಲಕ್ಷಗಳಲ್ಲಿ)
1979-80	8206	ತಿಳಿದಿಲ್ಲ	20400	ತಿಳಿದಿಲ್ಲ	191026	-
1980-81	5027	66.83	13878	343.77	160703	2312.13
1981-82	6880	98.32	11586	291.99	145377	2348.66
1982-83	1528	31.65	10909	384.66	104055	2469.65
1983-84	1539	30.97	10967	406.03	104290	2804.65
1984-85	1244	44.71	17400	582.32	168046	4461.37
1985-86	2198	72.06	20474	899.54	200666	5285.42
1986-87	1229	37.06	11095	797.95	151779	4837.06
1987-88	1905	76.26	14586	584.25	129659	4805.54
1988-89	877	28.96	14342	738.38	147307	5396.16
1989-90	350	7.27	10293	858.30	186132	4760.59
1990-91	542	16.92	58950	720.08	185706	5858.00

ವಲ್ಕವಂತ ಪ್ರಾಣಿಗಳು

ಮೀನಿನ ಹೊರತು ಸೀಗಡಿ, ಏಡಿ, ಚಿಪ್ಪುಮೀನು, ಚಿಪ್ಪಿನ ಮೃದ್ವಂಗಿ ಮೊದಲಾದ ಜಲಚರಗಳು ಮಾನವನ ಆಹಾರದ ಪ್ರಾಣಿಗಳಾಗಿ ಬಳಕೆಯಾಗುತ್ತಿವೆ. ಮೀನು ಸಿಗುವುದು ಅಸಾಧ್ಯವಾದಾಗ ವಲ್ಕವಂತ ಪ್ರಾಣಿಗಳಿಗೆ ಹೆಚ್ಚಿನ ಬೇಡಿಕೆ ಬರುತ್ತದೆ. ಅದರಲ್ಲೂ ಸೀಗಡಿಗೆ ಮೀನಿಗಿಂತ ಹೆಚ್ಚಿನ ಬೇಡಿಕೆ ಇರುವುದರಿಂದ ಅದನ್ನು ಹೊರದೇಶಗಳಿಗೆ ರಫ್ತು ಮಾಡಲಾಗುತ್ತಿದೆ. ಉಳಿದ ವಲ್ಕವಂತ ಪ್ರಾಣಿಗಳು ಸಾಮಾನ್ಯನ ಆಹಾರವಾಗಿವೆ.

ಚಿಪ್ಪು ಮೀನು :


ಸಿಂಪಿ ಮತ್ತು ಚಿಪ್ಪುಮೀನುಗಳು ಪೆಟ್ಟಿಗೆಯಂತೆ ತೆರೆಯಬಲ್ಲ ಚಿಪ್ಪಿನಲ್ಲಿ ವಾಸ ಮಾಡುತ್ತವೆ. ಚಿಪ್ಪಿನ ಒಂದು ಭಾಗಕ್ಕೆ ಮಾಂಸದ ತುಂಡೊಂದು ಕಚ್ಚಿಕೊಂಡಿದ್ದು ಅದು ಕಲ್ಲು ಬಂಡೆಗಳಿಗೆ ಕಚ್ಚಿ ಕೊಂಡಿರುತ್ತದೆ. ಚಿಪ್ಪುಗಳಲ್ಲಿರುವ ಮಾಂಸವು ಆದಿ ಮಾನವನಿಗೆ ಸಮುದ್ರದಿಂದ ದೊರೆತ ಮೊಟ್ಟ ಮೊದಲ ಸಮುದ್ರಾಹಾರ.

ಚಿಪ್ಪು ಮೀನು ಹಿಡಿಯುವ ವಿಧಾನ :

ಸಮುದ್ರದ ಜಲಚರಗಳಲ್ಲಿ ಒಂದಾದ ಚಿಪ್ಪು ಮೀನು ಕೇವಲ ತೀರಪ್ರದೇಶದವರಿಗೆ ಮಾತ್ರ ಪ್ರಿಯವಾದುದು. ಕರಾವಳಿ ಪ್ರದೇಶದವರಲ್ಲದವರಿಗೆ ಚಿಪ್ಪುಮೀನು ಮೀನಿನ ಜಾತಿಯಿಂದ ಹೊರತಾದ ಪ್ರಾಣಿ. ಆದ್ದರಿಂದ ಅದನ್ನು ಬಳಸುವವರು ಕರಾವಳಿಯ ಜನ ಮಾತ್ರರಾಗಿರುತ್ತಾರೆ. ಅಲ್ಲದೆ ಮೀನಿಗಿಂದ ಕಡಿಮೆ ಬೆಲೆಯಲ್ಲಿ ಸಿಗುವ ಕಾರಣದಿಂದ ಇದು ಬಡವರ ಆಹಾರವಾಗಿದೆ. ಇದನ್ನು ಹಿಡಿಯುವ ಕಾಲವೆಂದರೆ ಜೂನ್‌ನಿಂದ ಅಗಸ್ಟ್ ಮತ್ತು ಮಾರ್ಚ್ ನಿಂದ ಎಪ್ರಿಲ್. ಮೂರು ವಿಧಗಳಿಂದ ಚಿಪ್ಪು ಮೀನುಗಳನ್ನು ಹಿಡಿಯುತ್ತಾರೆ.

1. ಶಾಂತವಾಗಿರುವ ಕಲ್ಲು ಬಂಡೆಗಳ ಹತ್ತಿರ ಮಳುಗಿ ಬಂಡೆಗೆ ಕಚ್ಚಿಕೊಂಡಿರುವ ಬಾದಾಮಿಯಾಕಾರದ ಚಿಪ್ಪನ್ನು ಸಂಗ್ರಹಿಸಿಕೊಳ್ಳುತ್ತಾರೆ. ದೊಡ್ಡ ಚಿಪ್ಪುಗಳಾದರೆ ಮಾತ್ರ ಈ ವಿಧಾನ ಹೆಚ್ಚು ಪ್ರಯೋಜನಕಾರಿಯಾಗುತ್ತದೆ. ಇಲ್ಲದಿದ್ದರೆ ಕೈಗಳಿಂದ ಸಂಗ್ರಹಿಸುವುದರಿಂದ ಹೆಚ್ಚಿನ ಪ್ರಮಾಣದಲ್ಲಿ ಚಿಪ್ಪುಮೀನನ್ನು ''ಒಕ್ಕಲು'' ಸಾಧ್ಯವಿಲ್ಲ.
2. ಕೈಗಳಿಂದ ಒಕ್ಕುವುದು ಅಸಾಧ್ಯವಾದ ಸಂದರ್ಭದಲ್ಲಿ ಬಾಚಿಯಂತಹ ಚಿಮುಟದಿಂದ '' ಒಕ್ಕುತ್ತಾರೆ'' ಚಿಮುಟವನ್ನು ಚಿಪ್ಪು ಮೀನಿರುವ ಸ್ಥಳದಲ್ಲಿಟ್ಟು ಬಾಯಗಲಿಸಿ ಅನಂತರ ಚಿಮಟವನ್ನು ಅದುಮಿದಾಗ ಅದರ ಬಾಯಲ್ಲಿ ಚಿಪ್ಪುಮೀನುಗಳು ಸಿಕ್ಕಕೊಳ್ಳುತ್ತವೆ. ಅನಂತರ ಚಿಮುಟವನ್ನು ಮೇಲೆತ್ತಿ ಬಾಯಲ್ಲಿನ ಚಿಪ್ಪು ಮೀನನ್ನು ಬಿಡಿಸಿ ಕೊಳ್ಳುತ್ತಾರೆ.
3. ಕರ್ನಾಟಕ ಕರಾವಳಿಯಲ್ಲಿ ಇವೆರಡು ವಿಧಾನಗಳು ಮಾತ್ರ ಚಿಪ್ಪು ಮೀನು ಹಿಡಿಯಲು ಹೆಚ್ಚು ಪ್ರಸಿದ್ಧವಾಗಿದೆ. ಇತ್ತೀಚಿಗೆ ಸಮುದ್ರದ ಸಿಹಿ ನೀರಲ್ಲಿ ದೋಣಿಗೆ ಹೂಳೆತ್ತುವ ಯಂತ್ರವನ್ನು ಕಟ್ಟಿ ಅದರಿಂದ ಚಿಪ್ಪು ಮೀನನ್ನು ಸಂಗ್ರಹಿಸುವ ಕೆಲಸ ನಡೆಯುತ್ತಿದೆ.

ಹೂಳೆತ್ತುವ ಯಂತ್ರವನ್ನು ಮೀನುಗಾರರು ''ಮಿರ್ಷ'' ಎಂದು ಕರೆಯುತ್ತಾರೆ. ಇದರ ಬಾಯಿಯು ಅರ್ಧ ಚಂದ್ರಾಕೃತಿಯ ಕಬ್ಬಿಣದ ಕಮಾನಿನಿಂದ ಕೂಡಿರುತ್ತವೆ. ಇದಕ್ಕೆ 4.5 ಸೆ.ಮೀ. ಎತ್ತರದ ಒಂದು ಕಬ್ಬಿಣದ ಪಟ್ಟಿಯನ್ನು ಜೋಡಿಸಿರುತ್ತಾರೆ. ಇದು ಬಾಗಿದ್ದು 42 ಸೆ.ಮೀ. ಉದ್ದವಿರುತ್ತದೆ. ಬಾಯಿಯ ಕೆಳಗಡೆ ಹತ್ತು ಹನ್ನೆರಡು ಮೊನಚಾದ ಕಬ್ಬಿಣದ ಮೊಳೆಗಳಿರುತ್ತವೆ. ಕಬ್ಬಿಣದ ಪಟ್ಟಿಯ ನಡುವ 13 ಸೆ.ಮೀ. ಉದ್ದದ ಬಾಯಿ ಇರುವ ಬಿದಿರಿನ ಕೋಲನ್ನು ಕಟ್ಟಲಾಗುತ್ತದೆ. ಕಮಾನಿನಂತಿರುವ ಉಂಗುರಕ್ಕೆ ಮೂರು ಮೀಟರ್ ಉದ್ದದ ಸಾಧಾರಣವಾದ ಕಬ್ಬಿಣದ ಸರಪಳಿಯನ್ನು ಜೋಡಿಸಲಾಗುತ್ತದೆ. ಈ ಸರಪಳಿಯ ಮಧ್ಯಭಾಗಕ್ಕೆ 10-11 ಮೀ ಉದ್ದದ ನೈಲಾನ್ ದಾರವನ್ನು ಕಟ್ಟಲಾಗುತ್ತದೆ. ಈ ರೀತಿ ಸಿದ್ಧಮಾಡಿದ ಯಂತ್ರವನ್ನು ದೋಣಿಯ ಹಿಂದೆ ಹೊಂದಿಸಲಾದ ರಾಟೆಯ ಮೂಲಕ ಎಳೆಯಲು ಅನುಕೂಲವಾಗುವಂತೆ ಕಟ್ಟಲಾಗುವುದು. ಯಂತ್ರಕ್ಕೆ ಒಂದು ಬಲೆ ಕಟ್ಟಲಾಗುತ್ತದೆ. ಅದರಲ್ಲಿ ಚಿಪ್ಪು ಮೀನು ಸಂಗ್ರಹವಾಗುತ್ತಾ ಹೋಗುತ್ತದೆ. ಬಲೆಯ ಹಿಂಭಾಗಕ್ಕೆ 2 ಮೀಟರ್ ಹಗ್ಗ ಕಟ್ಟಿ ಇದನ್ನು ದೋಣಿ ಸಾಗುವಾಗ ಮೇಲೆ ಕೆಳಗೆ ಎಳೆದಾಡುವಾಗ ಕೆಸರಿನಲ್ಲಿನ ಚಿಪ್ಪು ಶುದ್ಧವಾಗಿ ಬಲೆಯೊಳಗೆ ಬರುತ್ತದೆ.


ಬಿದಿರಿನ ಕೋಲು
ಮರದ ತುಂಡು
ಕಬ್ಬಿಣದ ಅರ್ಧಚಂದ್ರಾಕೃತಿಯಂ
ಬಲೆ
ಕಬ್ಬಿಣದ ತಗಡು
ಮೊನಚಾದ ಮುಳ್ಳುಗಳ
ಹಗ್ಗ
ಸರಪಳಿ

ಹೂಳೆತ್ತುವ ಯಂತ್ರ.

ಚಿಪ್ಪು ಮೀನಿನ ನಿಧಿಯ ಅನ್ವೇಷಣೆ

ಚಿಪ್ಪು ಮೀನಿನ ನಿಧಿಯನ್ನು ಗುರುತಿಸಲು ಮೀನುಗಾರರು ತಮ್ಮ ಅನುಭವ ಜ್ಞಾನದ ವಿಧಾನ ಒಂದನ್ನು ಬಳಸುತ್ತಾರೆ. ಉದ್ದನೆಯ ಒಂದು ಬಿದರಿನಗಳ ತೆಗೆದುಕೊಂಡು ನೀರಿನಲ್ಲಿ ತಳಮುಟ್ಟುವವರೆಗೆ ಬಿಡುತ್ತಾರೆ. ಗಳದ ತುದಿ ಚಿಪ್ಪುಗಳಿಗೆ ತಾಗಿದಾಗ ಗಳಕ್ಕೆ ಕಿವಿಗೊಟ್ಟು ಕೇಳಿ ಚಿಪ್ಪಿರುವುದನ್ನು ಖಚಿತ ಪಡಿಸಿಕೊಳ್ಳುತ್ತಾರೆ. ಅನಂತರ ಗಳವನ್ನು ಆಳಕ್ಕೆ ಹೋಗುವ ಹಾಗೆ ನೂಕುವಾಗ ಅದರಿಂದುಟಾಗುವ ಶಬ್ದದ ಆಧಾರದಿಂದ ಚಿಪ್ಪು ಎಷ್ಟು ಆಳದವರೆಗಿದೆ ಎಂಬುದನ್ನು ಮೊದಲು ಕಂಡು ಹಿಡಿಲು ಬಿದರುಗಳವನ್ನು ಮೇಲೆತ್ತಿ ಅಕ್ಕಪಕ್ಕದಲ್ಲಿ ಆಡಿಸಿ ಚಿಪ್ಪು ಎಷ್ಟು ವಿಶಾಲದವರೆಗೆ ಹರಡಿದೆ ಎಂಬುದನ್ನು ಖಚಿತ ಪಡಿಸಿ ಕೊಳ್ಳುತ್ತಾರೆ. ಅವರ ಹೇಳಿಕೆಯಂತೆ ತಾವು ಕಂಡು ಹಿಡಿಯುವ ಒಳ್ಳೆಯ ಚಿಪ್ಪಿನ ನಿಧಿ ಎಂದರೆ ಅದು ಒಂದು ವಾರದವರೆಗೆ ಕೆಲಸ ಒದಗಿಸುವಂತಹದು.

ಚಿಪ್ಪು ಮೀನು ಹಿಡಿಯಲು ಎರಡು ನಾಡ ದೋಣಿಗಳನ್ನು ಬಳಸಲಾಗುತ್ತದೆ. ಇವೆರಡನ್ನು ಒಂದು ಮೀಟರ್ ಅಂತರದಲ್ಲಿ ನಿಲ್ಲಿಸಿರುತ್ತಾರೆ. ಮೊದಲನೆಯ ದೋಣಿಗೆ ಹೂಳೆತ್ತುವ ಯಂತ್ರ ಕಟ್ಟಿ ಅದನ್ನು ನೀರಲ್ಲಿಳಿ ಬಿಡುತ್ತಾರೆ. ಯಂತ್ರವನ್ನು ಎಳೆದಾಡುವುದರ ಮೂಲಕ ಚಿಪ್ಪು ಮೀನನ್ನು ಬಲೆಯಲ್ಲಿ ಸಂಗ್ರಹಿಸಿ ಅವುಗಳನ್ನು ಮೇಲೆತ್ತಿ ಬೇರೊಂದು ದೋಣಿಗೆ ತುಂಬುತ್ತಿರೆತ್ತಾರೆ. ಒಮ್ಮೆ ಯಂತ್ರವನ್ನು ಆಡಿಸಿ ಮೇಲೆತ್ತಲು 3-4 ನಿಮಿಷಗಳು ಬೇಕಾಗುತ್ತದೆ. ಅದರಲ್ಲಿ ಸಂಗ್ರಹವಾಗುವ ಚಿಪ್ಪು ಮೀನಿನ ತೂಕ 10-15 ಕೆ.ಜಿ.ಗಳಾಗಿರುತ್ತದೆ. ದೋಣಿ ತುಂಬುವವರೆಗೆ ಚಿಪ್ಪು ಮೀನು ಸಂಗ್ರಹಿಸಿ ಅದನ್ನು ದಡಕ್ಕೆ ತಂದು ಹಾಕಿ ಮತ್ತೇ ಹೋಗುತ್ತಾರೆ. ಹೀಗೆ ಚಿಪ್ಪು ಮೀನಿನ ನಿಧಿಯನ್ನು ಖಾಲಿ ಮಾಡಿದ ಒಂದಡೆರಡು ತಿಂಗಳಲ್ಲೇ ಅಲ್ಲಿ ಚಿಪ್ಪುಮೀನು ಹೆಚ್ಚುತ್ತಾ ಹೋಗುತ್ತದೆ.

ಜಳ್ಳಿ (ಏಡಿ) :

ಕರ್ನಾಟಕ ಕರಾವಳಿಯಲ್ಲಿನ ಜನ ಏಡಿಯನ್ನು ''ಜಳ್ಳಿ'' ಎಂದು ಕರೆಯುತ್ತಾರೆ. ಸಮುದ್ರದ ಏಡಿ ನದಿ ಏಡಿಗಿಂತ ರೂಪ, ಬಣ್ಣ, ರುಚಿಯಲ್ಲಿ ಭಿನ್ನವಾಗಿರುತ್ತದೆ. ಮೀನು ಹಿಡಿಯಲು ಬಲೆ ಬಿಟ್ಟ ಸಂದರ್ಭದಲ್ಲಿ ಏಡಿಗಳು ಅವುಗಳಲ್ಲಿ ಸಿಕ್ಕ ಬೀಳುತ್ತವೆ. ಬಲೆಯಲ್ಲಿ ಏಡಿ ಸಿಕ್ಕರೆ ಅದನ್ನು ಬಹುಬೇಗ ಬಲೆಯಿಂದ ಪ್ರತ್ಯೇಕಿಸುತ್ತಾರೆ. ಇಲ್ಲವಾದರೆ ಅದು ಬಲೆಯನ್ನು ಕತ್ತರಿಸುವ ಸಂಭವವಿರುತ್ತದೆ. ಜಳ್ಳಿಯು ಕಲ್ಲು ಬಂಡೆಗಳಿರುವ ಪ್ರದೇಶದಲ್ಲಿ ವಾಸವಾಗಿರುವುದು ಹೆಚ್ಚು. ಕರಾವಳಿಯ ಬಡ ಜನರ ಆಹಾರವಾಗಿರುವ ಜಳ್ಳಿ ಕಡಿಮೆ ಬೆಲೆಗೆ ಸಿಗುವ ಜಲಚರಗಳಲ್ಲಿ ಒಂದಾಗಿದೆ. ಇದನ್ನು ಔಷಧಿಯ ರೂಪದಲ್ಲೂ ಜನ ಬಳಸುತ್ತಾರೆ. ಬಾಣಂತಿಯರ ಮೈಯಲ್ಲಿ ಉಷ್ಣಾಂಶ ಕಾಯ್ದಿಡಲು ಜಳ್ಳಿ ಹುಳಿ ಕೊಡುತ್ತಾರೆ.

ಸೀಗಡಿ :

ಕರ್ನಾಟಕ ಕರಾವಳಿಯ ಜನರು ಸೀಗಡಿಗೆ '' ಚಟ್ಲಿ '' ''ಶೆಟ್ಲಿ'' ಎಂದು ಕರೆಯುವುದು ವಾಡಿಕೆ. ಬಹಳ ಕಾಲದಿಂದಲೂ ತೀರಪ್ರದೇಶದ ಜನರ ಮುಖ್ಯ ವೃತ್ತಿ ಸೀಗಡಿ ಹಿಡಿಯುವುದಾಗಿದೆ. ಸೀಗಡಿಯಲ್ಲಿ ಹಲವು ವಿಧಗಳುಂಟು. ಇವೆಲ್ಲವೂ ಆಹಾರಕ್ಕೆ ಉಪಯುಕ್ತವಾದದ್ದರಿಂದ ಆದಾಯ ಕ್ಷೇತ್ರದಲ್ಲಿ ಅದು ಮುಖ್ಯಸ್ಥಾನ ಗಳಿಸಿಕೊಂಡಿವೆ. ಪ್ರಮುಖವಾಗಿ ಸೀಗಡಿಯಲ್ಲಿ ಎರಡು ವಿಧಗಳಾಗಿ ವಿಂಗಡಿಸಲಾಗಿದೆ.

1. ಬಿಳಿ ಸೀಗಡಿ : ಇದು ಗಾತ್ರದಲ್ಲಿ ದೊಡ್ಡದಾಗಿದ್ದು ಕಡಿಮೆ ಆಳದ ನೀರಿನಲ್ಲಿ ವಾಸಿಸುತ್ತದೆ. 75 ಅಡಿಗಳಿಗಿಂತ ಕಡಿಮೆ ಇರುವ ಸಮುದ್ರದಲ್ಲಿ ಬಿಳಿ ಸೀಗಡಿಯನ್ನು ಹಿಡಿಯಲಾಗುತ್ತದೆ. ಇದಕ್ಕೆ ಬೇಡಿಕೆ ಹೆಚ್ಚಾಗಿರುವುದರಿಂದ ಇದರ ಬೆಲೆ ಕೆ.ಜಿ.ಗೆ ರೂ. 50 ರಿಂದ 150 ರವರೆಗೆ ಏರುತ್ತದೆ. ಇದು ಹೊರದೇಶಕ್ಕೆ ರಫ್ತಾಗುವ ಜಲಚರಗಳಲ್ಲಿ ಒಂದಾಗಿದೆ. 1950 ರಿಂದ ಈಚೆಗೆ ಬಿಳಿ ಸೀಗಡಿಯನ್ನು ಹಿಡಿಯಲು 24 ರಿಂದ 30 ಮೀಟರ್ ಉದ್ದದ ದೋಣಿಗಳನ್ನು ಬಳಸಲಾಗುತ್ತಿದೆ. ಹಿಡಿದ ಸೀಗಡಿಯಲ್ಲಿ ದೊಡ್ಡ ಗಾತ್ರದ ಸೀಗಡಿಯನ್ನು ಹಸಿಯಾಗಿಯೇ ಮಾರಾಟಮಾಡಿದರೆ ಚಿಕ್ಕ ಗಾತ್ರದ ಸೀಗಡಿಯನ್ನು ಒಣಗಿಸಿ ಮಾರಾಟ ಮಾಡುತ್ತಾರೆ.

2. ಕಂದು ಹಾಗೂ ಗುಲಾಬಿ ಬಣ್ಣದ ಸೀಗಡಿ: ಇವು ಆಳ ನೀರಿನಲ್ಲಿ ವಾಸಿಸುವ ಸೀಗಡಿ. ರಾತ್ರಿ ಬೇಟೆಯಲ್ಲಿ ಇವುಗಳನ್ನು ಹಿಡಿಯುತ್ತಾರೆ. ಹಿಡಿದ ಸೀಗಡಿಯಲ್ಲಿ ಕಂದು ಬಣ್ಣದ ಸೀಗಡಿ ಪ್ರಥಮ ಸ್ಥಾನ ಪಡೆದರೆ ಗುಲಾಬಿ ಬಣ್ಣದ ಸೀಗಡಿ ಮೂರನೇ ಸ್ಥಾನವನ್ನು ಪಡೆಯುತ್ತದೆ. ಬಿಳಿ ಸೀಗಡಿ ದ್ವಿತೀಯ ಸ್ಥಾನದಲ್ಲಿ ನಿಲ್ಲುತ್ತದೆ.

ಸೀಗಡಿ ಹಿಡಿಯುವ ಬಗೆ :

ಸೀಗಡಿ ವಲ್ಕವಂತ ಪ್ರಾಣಿಗಳಲ್ಲೆಲ್ಲಾ ಪ್ರಥಮ ಸ್ಥಾನದಲ್ಲಿ ನಿಂತಿರುವುದು ಮಾತ್ರವಲ್ಲದೆ ಅದು ಅಂತರ್ ರಾಷ್ಟ್ರೀಯ ಮಾರುಕಟ್ಟೆಯಲ್ಲೂ ಹೆಚ್ಚು ಬೆಲೆ ಪಡೆದಿದೆ. ಆದ್ದರಿಂದ ಸೀಗಡಿ ಉದ್ದಿಮೆ ಮೀನುಗಾರರ ಜನಜೀವನವನ್ನು ಸುಧಾರಿಸುವ ಉದ್ದಿಮೆಯೆನ್ನಬಹುದು. ಈ ಕಾರಣದಿಂದ ಸೀಗಡಿ ಹಿಡಿಯುವ ಕಡೆ ಮೀನುಗಾರರ ಆಸಕ್ತಿ ಕೇಂದ್ರಿಕೃತವಾಗಿದೆ. ಅದಕ್ಕೆ ಪೂರಕವಾಗಿ ಹೊಸ ತಾಂತ್ರಿಕ ವಿಧಾನಗಳು ಬಳಕೆಗೆ ಬಂದಿವೆ. ಹಲವು ವಿಧದ ಬಲೆಗಳು ಉಪಯೋಗಿಸಲ್ಪಡುತ್ತಿವೆ.

ಸೀಗಡಿ ಹಿಡಿಯಲು ಜಿರೊಪಾಯಿಂಟ್‌ನ ಕೂದಲಿಗಿಂತ ತೆಳುವಾದ ನೈಲಾನ್ ದಾರದ ಬಲೆಗಳನ್ನು ಬಳಸಲಾಗುತ್ತದೆ. ಇವುಗಳನ್ನು ನೀರಿನಲ್ಲಿ ಬಿಟ್ಟಾಗ ಬಲೆ ಸೀಗಡಿಗೆ ಕಾಣುವುದಿಲ್ಲ. ಇದರ ಜೊತೆಗೆ ತೇಲುಬೆಂಡು ಹಾಗೂ ಕಬ್ಬಿಣದ ತುಂಡು ಕಟ್ಟಿರುವ ಶಂಖಾಕಾರದ ಬಲೆಗಳು ಸೀಗಡಿ ಹಿಡಿಯಲು ಬಳಸಲಾಗುತ್ತಿದೆ. ಸೀಗಡಿ ಬೇಟೆಗೆ ಬಳಸುವ ಸಾಮಾನ್ಯ ಬಲೆಗಳೆಂದರೆ ಬೀಸು ಬಲೆ, ಎಳೆಯುವ ಬಲೆ, ಗೋಡೆ ಬಲೆ ಮೊದಲಾದವು. ಈ ಬಲೆಗಳನ್ನು ಸೀಗಡಿ ಗುಂಪಿರುವ ಸ್ಥಳವನ್ನು ಮೊದಲು ಕಂಡು ಹಿಡಿದು ಆ ಸ್ಥಳದಲ್ಲಿ ಬಳಸಲಾಗುತ್ತದೆ. ಸುಮಾರು 20 ಮೀಟರ್ ಆಳದ ಪ್ರದೇಶದಲ್ಲಿ ಅವುಗಳನ್ನು ಉಪಯೋಗಿಸಲಾಗುವುದು.

ಮುಂಗಾರು ಮಾರುತ ಪ್ರಾರಂಭವಾದಾಗ ಜೂನ್-ಅಗಸ್ಟ್ ತಿಂಗಳಲ್ಲಿ ಸೀಗಡಿಗಳ ದೊಡ್ಡ ದೊಡ್ಡ ಹಿಂಡು ತೀರದ ಕಡೆಗೆ ಬರುತ್ತದೆಂದು ನಂಬುವ ಮೀನುಗಾರರು ಆ ಸಂದರ್ಭದಲ್ಲಿ ಬೀಸು ಬಲೆಯ ಸಹಾಯದಿಂದ ಅವುಗಳನ್ನು ಹಿಡಿಯುತ್ತಾರೆ. ವರ್ಷದಲ್ಲಿ ಕೆಲವು ತಿಂಗಳಲ್ಲಿ ಸೀಗಡಿ ಮೊಟ್ಟೆಹಾಕಲು ಉಪ್ಪಿನ ಪ್ರಮಾಣ ಕಡಿಮೆ ಇರುವ ಸಮುದ್ರದ' ಹಿಂಬದಿ ನೀರಿಗೆ ಬರುತ್ತದೆ. ಆಗ ಮೀನುಗಾರರು ಬಲೆ ಬೀಸಿ ಸೀಗಡಿ ಹಿಡಿಯುತ್ತಾರೆ. ' ಇಂಡಿಕಸ್' ಎಂದು ಕರೆಯುವ ಸೀಗಡಿಯೊಂದು ಸಾವಿರಾರು ಮೊಟ್ಟೆ ಹಾಕಿದಾಗ ಅದು ಒಡೆದು ಮರಿಯಾಗಿ ಆ ಮರಿಗಳು ಉಪ್ಪಿನ ಪ್ರಮಾಣ ಕಡಿಮೆ ಇರುವ ನದಿ ನೀರಿನೆಡೆಗೆ ಬರುತ್ತವೆ. ಕರ್ನಾಟಕ ಕರಾವಳಿಯಲ್ಲಿ ಸೀಗಡಿ ದೊರೆಯುವ ಕಾಲವೆಂದರೆ ಅಕ್ಟೋಬರ್ ನಿಂದ ಏಪ್ರಲ್ ವರೆಗೆ.

ಇತ್ತಿಚೆಗೆ ನಡೆವ ಸಂಶೋಧನೆಗಳ ಪರಿಣಾಮದಿಂದ ಸೀಗಡಿಯು 40-45 ಮೀಟರ್ ಆಳದೊಳಗಿನ ಪ್ರದೇಶದಲ್ಲಿ ಹೆಚ್ಚಾಗಿ ಸಿಗುತ್ತದೆಂದು ತಿಳಿದು ಬಂದಿದೆ. ಸೀಗಡಿ ದೊರೆಯುವ ಪ್ರದೇಶಗಳನ್ನು ಮುಖ್ಯವಾಗಿ ಮೂರು ಭಾಗಗಳಾಗಿ ವಿಂಗಡಿಸಿದ್ದಾರೆ.

1. 0-40 ಮೀಟರ್ ಆಳದ ಪ್ರದೇಶ
2. 41-80 ಮೀಟರ್ ಆಳದ ಪ್ರದೇಶ
3. 81- ಮೀಟರ್‌ಗಿಂತ ಹೆಚ್ಚು ಆಳದ ಪ್ರದೇಶ

ಮೊದಲ ಪ್ರದೇಶದಲ್ಲಿ ಗಂಟೆಗೆ 40 ಕಿಲೋ ಗ್ರಾಂಗಳಿಗಿಂತ ಕ'ಡಿಮೆ ಪ್ರಮಾಣದಲ್ಲಿ ಸೀಗಡಿ ಸಿಗುವುದೆಂದು, ಎರಡನೇ ಪ್ರದೇಶದಲ್ಲಿ ಪ್ರತಿಗಂಟೆಗೆ 10 ಕಿ. ಗ್ರಾಂ ಸೀಗಡಿ ಸಿಗುವುದೆಂದು ಲೆಕ್ಕಹಾಕಲಾಗಿದೆ. ಆದರೆ ಕರ್ನಾಟಕ ಕರಾವಳಿಯ ಕಾರವಾರದ ಬಳಿ ಗಂಟೆಗೆ 5.7 ಕಿ.ಗ್ರಾಂ. ಸೀಗಡಿ ಸಿಗುತ್ತದೆಂದು, ಮಂಗಳೂರಿನ ಬಳಿ ಗಂಟೆಗೆ 18.7 ಕಿ. ಗ್ರಾಂ. ಸೀಗಡಿ ಸಿಗುವುದೆಂದು ಗೊತ್ತಾಗಿದೆ. ಅತಿ ಹೆಚ್ಚು ಆಳದಲ್ಲಿ ಸೀಗಡಿ ಅಷ್ಟಾಗಿ ಕಂಡುಬಂದಂತೆ ತಿಳಿದಿಲ್ಲ. ಸಾಮಾನ್ಯವಾಗಿ 7 ರಿಂದ 20 ಮೀಟರ್ ಆಳದ ಸಮುದ್ರದಲ್ಲಿ ಮಾತ್ರ ಗರಿಷ್ಟ ಪ್ರಮಾಣದಲ್ಲಿ ಅಂದರೆ ಗಂಟೆಗೆ 50 ಕಿ.ಗ್ರಾಂ. ನಷ್ಟು ಸೀಗಡಿ ದೊರೆಯುವುದೆಂದು ಹೇಳಲಾಗುತ್ತದೆ. ಇದಕ್ಕಿಂತ ಹೆಚ್ಚು ಆಳದಲ್ಲಿ ಸೀಗಡಿ ಪ್ರಮಾಣ ಕಡಿಮೆಯಾಗುತ್ತಾ ಹೋಗುತ್ತದೆ.

ದೇಶದ ಆದಾಯ ಹೆಚ್ಚಿಸುವುದರಲ್ಲಿ ಸೀಗಡಿ ಉದ್ದಿಮೆಯೂ ಒಂದಾಗಿರುವ ಕಾರಣ ಪಂಚವಾರ್ಷಿಕ ಯೋಜನೆಗಳಲ್ಲಿ ಈ ಉದ್ದಿಮೆಯ ಬೆಳವಣಿಗೆಗೆ ಗಮನ ಕೊಡಲಾಗುತ್ತಿದೆ. ಇದರ ಪರಿಣಾಮವಾಗಿ ಮೀನುಗಾರರಿಗೆ ಆಧುನಿಕ ರೀತಿಯ ಮೀನು ಹಿಡಿವ ಜ್ಞಾನವನ್ನು ಕೊಡುವುದರ ಜೊತೆಗೆ ಯಾಂತ್ರಿಕ ದೋಣಿಗಳ ಮತ್ತು ಶೈತ್ಯಾಗಾರಗಳ ಸೌಲಭ್ಯವನ್ನು ಕಲ್ಪಿಸಿಕೊಡಲಾಗುತ್ತಿದೆ. ಈ ಪ್ರೋತ್ಸಾಹದ ಕಾರಣದಿಂದ ಇಂದು ಭಾರತವು ವಿಶ್ವದ ಸೀಗಡಿ ಮೀನುಗಾರಿಕೆಯ ದೇಶಗಳಲ್ಲಿ ಎರಡನೆಯ ಸ್ಥಾನದಲ್ಲಿದೆ. ಕಳೆದ 25 ವರ್ಷಗಳಲ್ಲಿ ಸೀಗಡಿ ಉದ್ಯಮದ ವಿಚಾರವಾಗಿ ಸರ್ವತೋಮುಖ ಸಂಶೋಧನೆಗಳು ಜಾರಿಯಲ್ಲಿವೆ. ಇದರ ಅನುಸಾರ ಭಾರತದ 5,600 ಕಿ.ಮೀ. ತೀರ ಪ್ರದೇಶದ ಉದ್ದಕ್ಕೂ ಸೀಗಡಿ ಸಿಗುವುದೆಂದು ಅಂದಾಜು ಮಾಡಲಾಗಿದೆ. ಅಲ್ಲದೆ 50,000 ಕಿ.ಮೀ ವಿಸ್ತಾರ ಪ್ರದೇಶದಲ್ಲಿ ಸೀಗಡಿ ನಿಧಿ ಇದೆ ಎಂದೂ, ಅದರಲ್ಲಿ ಈಗ ಕೇವಲ 1,12,000 ಕಿ.ಮೀ. ಪ್ರದೇಶದಲ್ಲಿ ಮಾತ್ರ ಸೀಗಡಿ ಹಿಡಿಯಲಾಗುತ್ತಿದೆ ಎಂದು ಲೆಕ್ಕ ಹಾಕಲಾಗಿದೆ. ಕರ್ನಾಟಕ ಕರಾವಳಿಯಲ್ಲಿ ಹಿಡಿಯುವ ಸೀಗಡಿಗಳಲ್ಲಿ ದೊಡ್ಡಗಾತ್ರದ 'ಪಿನಾಯಿಡ್' ಸೀಗಡಿಯ ಪ್ರಮಾಣವು ವರ್ಷಕ್ಕೆ 5,500 ಟನ್‌ಗಳೆಂದು ಹೇಳಲಾಗುವುದು.

ಸೀಗಡಿಗೆ ಸಿಗುತ್ತಿರುವ ಬೇಡಿಕೆಯಿಂದ ಪ್ರತಿಯೊಬ್ಬ ಮೀನುಗಾರನೂ ಸಮುದ್ರದಲ್ಲಿ ಇಳಿದಾಗಲೇ ಸೀಗಡಿ ಬೇಟೆಯ ಕನಸು ಹೊತ್ತೇ ಸಾಗುತ್ತಿರುತ್ತಾನೆ. ಅಂತಹ ಸಂದರ್ಭದಲ್ಲಿ ಅವನ ಕನಸು ನನಸಾದರಂತೂ ಅವನು ತನ್ನ ಕುಲದೇವತೆಗೆ ಬೆಳ್ಳಿಯ ಸೀಗಡಿಯ ಇಲ್ಲವೆ ಚಿನ್ನದ ಸೀಗಡಿಹಾರವನ್ನು ಮಾಡಿಸಿ ಹಾಕುತ್ತಾನೆ. ನಿಜಕ್ಕೂ ಸೀಗಡಿಯ ಬೇಟೆ ಮೀನುಗಾರನ ಬದುಕಿಗೊಂದು ಹೊಸ ತಿರುವು ನೀಡಬಲ್ಲದು.

೫:೨ ಕಡಲ ಅಪಾಯಗಳು

ನೆಲದ ಅಪಾಯಗಳು ಗೋಚರ, ಆದರೆ ಕಡಲ ಅಪಾಯಗಳು ಅಗೋಚರ. ಅವು ಇದ್ದಕ್ಕಿದ್ದಂತೆ ಕಡಲಿಗರ ಮೇಲೆ ಆಕ್ರಮಣ ಮಾಡುವಂತಹವು. ಪ್ರತಿ ವರ್ಷ ಈ ಅಪಾಯಗಳಿಗೆ ಬಲಿಯಾಗುವ ಕಡಲಿಗರು ಹಲವರು. ಇದ್ದಕ್ಕಿದಂತೆ ನಡುಗಿಸುವ ಬಿರುಗಾಳಿ, ಮೃತ್ಯುವಿನ ಸ್ವರೂಪದಲ್ಲಿ ನೀರೊಳಗೆ ಅಡಗಿ ನಿಂತಿರುವ ದೊಡ್ಡಗಾತ್ರದ ಬಂಡೆ, ಉಸುಕಿನ ದಿನ್ನೆಗಳು, ಒಡೆದು ಹೂತಿರುವ ಹಡಗು ಇಲ್ಲವೆ ಮಚವೆಗಳು ಪರ್ವತದಂತೆ ಪ್ರವೇಶಿಸುವ ತಿಮಿಂಗಿಲ, ತಮ್ಮ ಉದ್ಯೋಗದ ಬಂಡವಾಳವಾದ ಬಲೆಯನ್ನು ನೀರೋಳಗೆ ರಹಸ್ಯವಾಗಿ ಕತ್ತರಿಸುವ ಹಂದಿ ಮೀನು, ಚೊಂದೆ ಮೀನು, ಮುಕಂಜಿ ಮೊದಲಾದವು ಕಡಲ ಅಪಾಯಗಳು. ಇವುಗಳನ್ನು ಕಡಲಿಗರು ಉಪಾಯದಿಂದ ಎದುರಿಸುತ್ತಾರೆ. ಆಕಾಶ ಕೆಂಪಾಗಿ, ನೀರು ಕಪ್ಪಾಗುತ್ತಾ ಹೋದರೆ ಅದು ಬಿರುಗಾಳಿಯ ಸಂಕೇತವೆಂದು ಭಾವಿಸುತ್ತಾರೆ. ಶಾಂತವಾಗಿರುವ ನೀರಿನ ಮೇಲ್ಮೈ ಇದ್ದಕ್ಕಿದಂತೆ ಒಂದೆರಡು ಸ್ಥಳಗಳಲ್ಲಿ ಅಲ್ಲೋಲ ಕಲ್ಲೋಲವಾಗುತ್ತಿದ್ದರೆ ಆ ಸ್ಥಳದಲ್ಲಿ ತಿಮಿಂಗಲದ ಸಂಚಾರವಿದೆ ಎಂದು ತಿಳಿಯುತ್ತಾರೆ. ಹೀಗಿದ್ದರೂ ಕೆಲವು ವೇಳೆ ಅವರ ಅನುಭವ ಜ್ಞಾನಕ್ಕೂ ಸಿಲುಕದ ಅಪಾಯಗಳಿಗೆ ಬಲಿಯಾಗಿರುವ ಮೀನುಗಾರರ ನಿದರ್ಶನಗಳು ಪ್ರತಿ ವರ್ಷ ಸಿಗುತ್ತವೆ. ಆದ್ದರಿಂದ ಅವರ ಬದುಕು ಅನಿಶ್ಚಿತ. ಸಮುದ್ರಕ್ಕೆ ಹೋದವರು ಮನೆಗೆ ಹಿಂದಿರುಗುವುದು ತಡವಾದರೆ ಮನೆಯವರ ಎದೆ ಬಡಿತ ಹೆಚ್ಚಾಗಲು ಪ್ರಾರಂಭವಾಗುತ್ತದೆ. ಇಲ್ಲ ಸಲ್ಲದ ಊಹಾಪೋಹಗಳು ಅವರ ಮಾನಸಿಕ ಸಮತೋಲನವನ್ನು ಕೆಡಿಸುತ್ತವೆ.

ಅನೀರಿಕ್ಷಿತವಾಗಿ ಎದುರಾಗುವ ಕಡಲ ಅಪಾಯಗಳಲ್ಲಿ ವಿಶೇಷ ಅಪಾಯಗಳು ಮತ್ತು ಸಾಮಾನ್ಯ ಅಪಾಯಗಳೆಂದು ಎರಡು ಬಗೆಯಾಗಿ ವಿಂಗಡಿಸಬಹುದು. ವಿಶೇಷ ಅಪಾಯಗಳು ಆರ್ಥಿಕವಾಗಿ ನಷ್ಟಗೊಳಿಸುದರ ಜೊತೆಗೆ ಪ್ರಾಣಾಪಾಯಗಳನ್ನುಂಟು ಮಾಡುತ್ತವೆ. ಸಾಮಾನ್ಯ ಅಪಾಯಗಳು ಆರ್ಥಿಕವಾಗಿ ನಷ್ಟಗೊಳಿಸುವಂತಹವು.

ವಿಶೇಷ ಅಪಾಯಗಳು :

1. ಬಿರುಗಾಳಿ
2. ಸಮುದ್ರದಲ್ಲಡಗಿದ ಬಂಡೆ, ಉಸುಕಿನ ದಿನ್ನೆ, ಒಡೆದ ಹಡಗುಗಳು
3. ತಿಮಿಂಗಿಲ

1. **ಬಿರುಗಾಳಿ :** ಮೀನುಗಾರರ ಜೀವನಕ್ಕೆ ಆಧಾರವಾಗುವ ಸಮುದ್ರ ಬಿರುಗಾಳಿಗೆ ತುತ್ತಾದಾಗ ಯಮ ರಾಜನಾಗಬಲ್ಲದು. ಅಂತಹ ಸಂದರ್ಭಗಳಲ್ಲಿ ಬದುಕಿ ಹಿಂದಿರುಗುವುದು ಅಸಾಧ್ಯವೆನಿಸುತ್ತದೆ. ಈ ಬಿರುಗಾಳಿಯ ಬರುವಿಕೆಯನ್ನು ಅವರು ಅನುಭವದಿಂದಲೇ ತಿಳಿಯುತ್ತಾರೆ. ಆಕಾಶ ಕೆಂಪಾಗಿ, ನೀರು ಕಪ್ಪಾಗುತ್ತಿದ್ದರೆ ಅದು ಬಿರುಗಾಳಿಯ ಸಂಕೇತವೆಂದು ಭಾವಿಸಿ ಬೇಗನೆ ಮನೆ ಸೇರುತ್ತಾರೆ.

2. **ಸಮುದ್ರದಲ್ಲಡಗಿದ ಬಂಡೆ, ಉಸುಕಿನ ದಿನ್ನೆ, ಒಡೆದ ಹಡಗುಗಳು :** ಸಮುದ್ರವು ಸಮ ಮಟ್ಟದಲ್ಲಿ ನಿಂತಿರುವ ನೀರಿನ ಪ್ರದೇಶವಾಗಿ ಕಂಡರು ಅದರೊಳಗಡೆ ಡಕಾಯಿತಿಗಳಂತೆ ಅಡಗಿ ಕುಳಿತ ಬಂಡೆಗಳು, ಉಸುಕಿನ ದಿನ್ನೆ ಮತ್ತು ಒಡೆದ ಹಡಗುಗಳು ಮೀನುಗಾರರನು ಮೋಸಗೊಳಿಸಬಲ್ಲವು. ಅಂತಹ ಪ್ರದೇಶಗಳಲ್ಲಿ ದೋಣಿ ನಡೆಸುವಾಗ ಅವರು ಎಚ್ಚರಿಕೆಯಿಂದ ನಡೆಸುವುದು ಮಾತ್ರವಲ್ಲದೆ ದೋಣಿಯ ತಳಕ್ಕೆ ಕಿವಿಗೊಟ್ಟು ಶಬ್ದದ ಮೂಲಕ ಅಪಾಯಕಾರಿ ವಸ್ತುಗಳನ್ನು ಅರಿಯುತ್ತಾರೆ. ಚಲಿಸುವ ದೋಣಿಯ ವೇಗ ಇದ್ದಕ್ಕದಂತೆ ಕಡಿಮೆಯಾಗುತ್ತಾ ''ನರ್ ನರ್'' ಎಂಬ ಶಬ್ದ ತಳದಲ್ಲಾಗುತ್ತಿದ್ದರೆ ಅಲ್ಲಿ ಬಂಡೆ ಇದೆ ಎಂದು ತಿಳಿಯುತ್ತಾರೆ ಮೀನುಗಾರರು ಅಂತಹ ಸ್ಥಳಕ್ಕೆ '' ಹಾರ್'' ಇರುವ ಸ್ಥಳವೆಂದು ಕರೆಯುತ್ತಾರೆ. ಒಂದೊಂದು 'ಹಾರ್' ಗೆ ಅವರು ಒಂದೊಂದು ಹೆಸರಿಟ್ಟಿರುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯ ಉಪ್ಪುಂದದ ಹತ್ತಿರ ಇರುವ 'ಹಾರ್' ಗಳಿಗೆ ಅಲ್ಲಿನವರು ''ಮಂಜನ ಹಾರು'' ''ವೀರಮಹಾಸತಿ ಹಾರು'' ''ಕೊಕ್ಕಲು ಹಾರು'' ಎಂದು ಹೆಸರಿಸಿ ಅವುಗಳ ಬಗ್ಗೆ ಸುತ್ತಮುತ್ತಲಿನವರಿಗೆಲ್ಲ ಎಚ್ಚರ ನೀಡುತ್ತಾರೆ. ಇದೇರೀತಿ ಉಸುಕಿನ ದಿನ್ನೆಗಳಿಗೂ ಒಂದೊಂದು ಹೆಸರು ಕೊಟ್ಟು ಅದನ್ನು ಮೀನುಗಾರರಿಗೆಲ್ಲಾ ತಿಳಿಸುತ್ತಾರೆ. ಇಂತಹ ಪ್ರದೇಶದಲ್ಲಿ ಬೇರೆ ಕಡೆಯ ಮೀನುಗಾರರು ಬಂದಾಗ ಅವರು ಅಪಾಯವನ್ನೆದುರಿಸಬೇಕಾಗುತ್ತದೆ

3. **ತಿಮಿಂಗಿಲ:** ಕಡಲ ರಾಜನಾದ ತಿಮಿಂಗಿಲ ಕೋಪಗೊಂಡಾಗ ಕಡಲ ರಾಕ್ಷಸನಾಗಬಲ್ಲದು. ಅಂತಹ ಸಂದರ್ಭದಲ್ಲಿ ದೋಣಿಯನ್ನೆ ಅದು ತಳಕೆಳಗು ಮಾಡಬಲ್ಲದು. ಈ ಅಪಾಯವನ್ನು ಮೀನುಗಾರರು ಮುನ್ಸೂಚನೆಯ ಮೂಲಕ ಅರಿತುಕೊಳ್ಳುತ್ತಾರೆ. ತಿಮಿಂಗಿಲ ದೂರದಲ್ಲಿ ಬರುತ್ತಿದೆ ಎಂಬುದನ್ನು ಆ ಸ್ಥಳದಲ್ಲಾಗುವ ನೀರಿನ ಅಲ್ಲೋಲ ಕಲ್ಲೋಲತೆಯ ಮೂಲಕ ತಿಳಿಯುತ್ತಾರೆ. ತಕ್ಷಣ ಅವರಲ್ಲಿ ಉಂಟಾಗುವ ಭಯವು ಅವರನ್ನು ಭಕ್ತಿಯ ಕಡೆಗೆ ಕೊಂಡೊಯ್ಯುತ್ತದೆ. ತಿಮಿಂಗಿಲವನ್ನು ಅವರು '' ಕಡಲಜ್ಜ'' ಎಂದು ಕರೆದು ತಮ್ಮನ್ನು ರಕ್ಷಿಸಬೇಕೆಂದು ಬೇಡುತ್ತಾರೆ. ಪೂಜೆಯ ಹರಕೆ ಸಲ್ಲಿಸುತ್ತೇವೆಂದು ಹೇಳಿಕೊಳ್ಳುತ್ತಾರೆ. ಅದು ಬರುತ್ತಿರುವ ದಿಕ್ಕನ್ನು ಬಿಟ್ಟು ಬೇರೆ ದಿಕ್ಕಿನ ಕಡೆಗೆ ದೋಣಿ ತಿರುಗಿಸುತ್ತಾರೆ.

ಬಂದರು ಇಲಾಖೆಯವರು ಮೀನುಗಾರರಿಗೆ ಬಿರುಗಾಳಿಯ ಮತ್ತು ಕಡಲಲ್ಲಿ ಹುದುಗಿದ ಅಪಾಯಕಾರಿ ವಸ್ತುಗಳ ಬಗ್ಗೆ ಮುನ್ನೆಚ್ಚರಿಕೆಯ ಸೂಚನೆಗಳನ್ನು ನೀಡಿದರೂ ತಿಮಿಂಗಿಲಗಳ ಚಲನವಲನದ ಬಗ್ಗೆ ಮೀನುಗಾರರು ತಮ್ಮ ಅನುಭವ ಜ್ಞಾನದಿಂದ ಮಾತ್ರ ಮುನ್ನೆಚ್ಚರಿಕೆ ವಹಿಸಬೇಕಾಗುತ್ತದೆ.



ಬಂದರ ಇಲಾಖೆಯವರ ಮೂನ್ಸೂಚನೆಗಳು :

ಸಮುದ್ರದಲ್ಲಿ ಸಂಚರಿಸುವವರಿಗೆ ಸಹಾಯಕವಾಗುವ ಕೆಲವು ಸಾಂಕೇತಿಕ ಮೂನ್ಸೂಚನೆಗಳನ್ನು ಬಂದರ್ ಇಲಾಖೆಯವರು ನೀಡಿ ಅವರನ್ನು ಅಪಾಯದಿಂದ ರಕ್ಷಿಸಲು ಪ್ರಯತ್ನಿಸಿದ್ದಾರೆ. ಇವರು ನೀಡುವ ಮೂನ್ಸೂಚನೆಗಳಲ್ಲಿ ಎರಡು ವಿಧಗಳಿವೆ.










1. ಬಿರುಗಾಳಿಯ ಮುನ್ಸೂಚನೆಗಳು
2. ಸಮುದ್ರದಲ್ಲಡಗಿದ ಅಪಾಯಕಾರಿ ವಸ್ತುಗಳ ಮೂನ್ಸೂಚನೆಗಳು

1. **ಬಿರುಗಾಳಿಯ ಮುನ್ಸೂಚನೆಗಳು :** ಬಿರುಗಾಳಿ ಅನೀರಿಕ್ಷಿತವಾಗಿ ಏಳುವಂತಹದು. ಇದನ್ನು ಹವಾಮಾನ ವೀಕ್ಷಣಾಲಯದವರಿಂದ ತಿಳಿದು ಬಂದರ್ ಇಲಾಖೆಯವರು ಕರಾವಳಿ ಪ್ರದೇಶದ ಉದ್ದಕ್ಕೂ ಮೂನ್ಸೂಚಕ ಸಂಕೇತಗಳ ನಿಶಾನೆ ಕಂಬಗಳನ್ನು ಮತ್ತು ದೀಪಸ್ಥಂಭಗಳನ್ನು ನೆಟ್ಟಿರುತ್ತಾರೆ. ಬಣ್ಣಗಳ ಮೂಲಕ ಮತ್ತು ಕೆಲವು ವಿಶಿಷ್ಟ ಗುರುತುಗಳ ಮೂಲಕ ಮೀನುಗಾರರಿಗೆ ಮತ್ತು ಹಡಗಿನ ನಾವಿಕರಿಗೆ ಮುನ್ಸೂಚನೆ ನೀಡಲಾಗುತ್ತದೆ. ಇವುಗಳಲ್ಲಿಹಡಗಿನ ಮೂನ್ಸೂಚನೆಗಳ ಸ್ವರೂಪ ಬೇರೆ ಬಗೆಯದಾಗಿರುತ್ತದೆ. ರಾತ್ರಿ ಮುನ್ಸೂಚನೆಗಳೇ ಬೇರೆ ಸ್ವರೂಪದಲ್ಲಿರುತ್ತವೆ. ಬೆಳಗಿನ ಸಂದರ್ಭದಲ್ಲಿ ವಿಶಿಷ್ಟ ಗುರುತುಗಳ ಮೂಲಕ ಮೂನ್ಸೂಚನೆ ನೀಡಿದರೆ ರಾತ್ರಿ ವೇಳೆ ಕೆಂಪು ಮತ್ತು ಬಿಳಿ ದೀಪಗಳ ಮೂಲಕ ಸೂಚನೆ ನೀಡಲಾಗುತ್ತದೆ. ಇಲಾಖೆಯವರು ನೀಡುವ ಸಂಕೇತಗಳ ಒಳಾರ್ಥವನ್ನು ಮೀನುಗಾರರಿಗೆ ಮೊದಲು ತಿಳಿಸಲಾಗುತ್ತದೆ. ಅದರ ಅನುಸಾರ ಅವರು ಸೂಚನೆಗಳನ್ನು ಗಮನಿಸಿ ಎಚ್ಚರಿಕೆವಹಿಸುತ್ತಾರೆ.

ಬಿರುಗಾಳಿಯ ಮುನ್ಸೂಚನೆಗಳು

ಕ್ರ. ಸಂ.	ಹಗಲಿನ ಗುರುತು	ರಾತ್ರಿ ದೀಪ	ಅಪಾಯಸೂಚನೆಗಳ ವಿವರ
1.			**ಮುಂಜಾಗ್ರತೆ :** ನಾವಿಕರು ಸಂಚಾರ ಮಾಡಬಹುದು : ಆದರೂ ಜಾಗ್ರತೆ ವಹಿಸಬೇಕು.
2.			**ಎಚ್ಚರಿಕೆ :** ನಾವಿಕರು ಸಂಚಾರ ಮಾಡಲೇಬಾರದು. ಬಿರುಗಾಳಿ ಬರುವ ಸಂಭವವಿದೆ.

ಬಿರುಗಾಳಿಯ ಮುನ್ಸೂಚನೆಗಳು

ಕ್ರ. ಸಂ.	ಹಗಲಿನ ಗುರುತು	ರಾತ್ರಿ ದೀಪ	ಅಪಾಯಸೂಚನೆಗಳ ವಿವರ
3. i)			**ಅಪಾಯ:** ಬಿರುಗಾಳಿ ಭಯವಿದೆ.
ii)			ದೂರದಲ್ಲಿ ಬಿರುಗಾಳಿ ಏಳುವ ಸಂಭವ, ಗಾಳಿ, ಮಳೆ ಅಧಿಕಗೊಳ್ಳಬಹುದು.
iii)			ಸಾಧಾರಣ ರಭಸದ ಬಿರುಗಾಳಿ. ಅದು ಬಂದರದ ದಕ್ಷಿಣ ಭಾಗದಿಂದ ಹಾದುಹೋಗಬಹುದು.
iv)			ಸಾಧಾರಣ ರಭಸದ ಬಿರುಗಾಳಿ. ಅದು ಬಂದರದ ಉತ್ತರ ಭಾಗದಿಂದ ಹಾದುಹೋಗಬಹುದು.
v)			ಸಾಧಾರಣ ಬಿರುಗಾಳಿ. ಅದು ಬಂದರಿನ ಹತ್ತಿರದಿಂದ ಅಥವಾ ಮೇಲಿಂದ ಹಾದುಹೋಗಬಹುದು.
4. i)			**ಬಹಳ ಅಪಾಯ:** ಅಧಿಕ ರಭಸದ ಬಿರುಗಾಳಿ. ಅದು ಬಂದರಿನ ದಕ್ಷಿಣ ಭಾಗದಿಂದ ಹಾದು ಹೋಗುತ್ತದೆ.
ii)			ಅಧಿಕ ರಭಸದ ಬಿರುಗಾಳಿ. ಅದು ಬಂದರಿನ ಉತ್ತರ ಭಾಗದಿಂದ ಹಾದು ಹೋಗುತ್ತದೆ.
5. i)			**ದೊಡ್ಡ ಅಪಾಯ :** ಅತ್ಯಧಿಕ ರಭಸದ ಬಿರುಗಾಳಿ ಅದು ಬಂದರಿನ ಮೇಲಿಂದ ಅಥವಾ ಹತ್ತಿರದಿಂದ ಹಾದು ಹೋಗುತ್ತದೆ.
ii)			ಹವಾಮಾನ ವೀಕ್ಷಣಾಲಯದಿಂದ ಯಾವ ಸುದ್ದಿಯೂ ಇಲ್ಲ. ಅದರ ಸಂಪರ್ಕ ಕಡಿದು ಹೋಗಿದೆ.

W = ಬಿಳಿ R = ಕೆಂಪು

ಕಡಲಲ್ಲಿಡಗಿದ ಅಪಾಯಕಾರಿ ವಸ್ತುಗಳನ್ನು ಸೂಚಿಸುವ ಸಂಕೇತಗಳು

ಮೀನುಗಾರರು ''ಮೀನಿನ ಕರ್ಪನ್ನು'' ಹುಡುಕುತ್ತಾ ಹೋಗುವಾಗ ಅವರ ಗಮನವೆಲ್ಲಾ ಮೀನುಗಳ ಚಲನವಲನಗಳ ಕಡೆಗೇ ಕೇಂದ್ರಿಕೃತವಾಗಿರುವ ಸಂದರ್ಭದಲ್ಲಿ ಕಡಲಲ್ಲಿ ಅಡಗಿರುವ ಮರಳ ದಿಣ್ಣೆ ನದಿಗಳಿಂದ ತೇಲಿಬಂದ ಮರಗಳ ರಾಶಿ, ಕಲ್ಲುಬಂಡೆ ಮೊದಲಾದವು ಅವರ ದೋಣಿಗೆ ಅಪಾಯಕಾರಿಯಾಗಬಹುದು. ಇಲ್ಲವೆ ಹಾಕಿದ ಬಲೆಯನ್ನು ಹರಿದು ಚೂರು ಚೂರು ಮಾಡಬಹುದು. ಇಂತಹ ಅಪಾಯವನ್ನು ತಪ್ಪಿಸುವ ಸಲುವಾಗಿ ಬಂದರ ಇಲಾಖೆಯವರು ಮೊದಲು ಅಂತಹ ಅಪಾಯಕಾರಿ ಸ್ಥಳಗಳನ್ನು ಹುಡುಕಿ ಆಸ್ಥಳಗಳಲ್ಲಿ ಕೆಲವು ಸಂಕೇತಗಳನ್ನಿಡುತ್ತಾರೆ. ಅವುಗಳನ್ನು ''ಬೋವೆ'' ಗಳೆಂದು ಕರೆಯುತ್ತಾರೆ. ಅವುಗಳು ಸ್ವರೂಪ ಮತ್ತು ಬಣ್ಣಗಳಲ್ಲಿ ವೈವಿಧ್ಯತೆ ಇದೆ. ಒಂದೊಂದು ಬಣ್ಣ ಮತ್ತು ಒಂದೊಂದು ಸ್ವರೂಪಕ್ಕೆ ಒಂದೊಂದು ಅರ್ಥವಿರುತ್ತದೆ. ಸಮುದ್ರದಲ್ಲಿ ಹಾದು ಹೋಗುವ ಮುನ್ನ ಬೋವೆಗಳು ಮತ್ತು ಬಣ್ಣಗಳು ಸೂಚಿಸುವ ಅರ್ಥವನ್ನು ತಿಳಿದಿರಬೇಕಾಗುತ್ತದೆ. ಇವುಗಳಲ್ಲಿ ಹಗಲಿನ ಸಂಕೇತಗಳು ಮತ್ತು ರಾತ್ರಿಯ ಸಂಕೇತಗಳು ಪ್ರತ್ಯೇಕವಾಗಿರುತ್ತವೆ.

1. ಹಗಲಿನ ಸಂಕೇತಗಳು :

ಚಿತ್ರದಲ್ಲಿ ಆರು ಹಗಲಿನ ಸಂಕೇತಗಳನ್ನು ಕೊಡಲಾಗಿದೆ. ಮೊದಲನೆಯ ಬೋವೆಯು ತಳದಲ್ಲಿ ಕಪ್ಪು ಬಣ್ಣವಿದ್ದು ತುದಿಯಲ್ಲಿ ಕೆಂಪು ಬಣ್ಣವಿರುತ್ತದೆ, ಅದರ ತಳದಲ್ಲಿ ಬಿಳಿ, ಅನಂತರ ಕೆಂಪು, ಆ ನಂತರ ಮತ್ತೆ ಬಿಳಿ ಹೀಗೆ ನಾಲ್ಕು ಪಟ್ಟಿಗಳಿರುತ್ತವೆ. ಈ ಬೋವೆ ಇದ್ದರೆ ಅದರ ಸಮೀಪದಿಂದ ಸಾಗಬೇಕೆಂದು ಅರ್ಥ. ಬೋವೆಯಿರುವ ಸ್ಥಳವು ಸುರಕ್ಷಿತ ಸ್ಥಳವಾಗಿರುವುದರಿಂದ ಇದರ ಬದಿಯಿಂದ ದೋಣಿಗಳು ಹೋದರೆ ಯಾವ ಅಪಾಯವು ಸಂಭವಿಸುವದಿಲ್ಲ.

ಎರಡನೇ ಬೋವೆಯ ಮೇಲೆ ಕಪ್ಪು ಮತ್ತು ಬಿಳಿ ಪಟ್ಟೆಗಳು ಇರುತ್ತವೆ. ಈ ಬೋವೆ ಇರುವ ಸ್ಥಳವು ಅಪಾಯಕಾರಿ ವಸ್ತುಗಳಿರುವ ಸ್ಥಳವಾಗಿರುವುದರಿಂದ ಅದರಿಂದ ಬಹುದೂರದ ಅಂತರದಲ್ಲಿ ದೋಣಿಗಳು ಸಾಗಬೇಕಾಗುತ್ತದೆ.

ಮೂರನೇ ಚಿತ್ರದಲ್ಲಿ ಎಡಬದಿಯಲ್ಲಿ ಕೆಂಪು ಮತ್ತು ಬಿಳಿ ಪಟ್ಟೆಗಳಿಂದ ಕೂಡಿರುವ ಬೋವೆ ಇದ್ದರೆ ಅದಕ್ಕಿಂತ ಸ್ವಲ್ಪ ದೂರದಲ್ಲಿ ಕಪ್ಪು ಮತ್ತು ಬಿಳಿ ಪಟ್ಟೆಗಳಿರುವ ಬೋವೆಯಿರುತ್ತದೆ. ಇವೆರಡೂ ಅಪಾಯದ ಸ್ಥಳವನ್ನು ಸೂಚಿಸುತ್ತಿರುವುದರಿಂದ ಅವೆರಡರ ನಡುವೆ ಮಾತ್ರ ದೋಣಿಗಳು ಸಾಗಬೇಕಾಗುತ್ತದೆ.

ಚಿತ್ರ ನಾಲ್ಕರಲ್ಲಿ ಕೆಂಪು ಬಣ್ಣದ ತ್ರಿಕೋನಾಕಾರದ ಬೋವೆ ಬಲ ಬದಿಯಲ್ಲಿದ್ದು ಅದರ ಎಡಬದಿಯ ಸ್ವಲ್ಪ ದೂರದಲ್ಲಿ ಚೌಕಾಕಾರದ ಕೆಂಪು ಬೋವೆ ಇರುತ್ತದೆ. ಇವೆರಡೂ ಸಹ ಅಪಾಯದ ಸ್ಥಳವನ್ನು ಸೂಚಿಸುತ್ತಿರುವುದರಿಂದ ಅವೆರಡರ ನಡುವೆ ದೋಣಿ ಚಲಿಸಬಹುದೆಂದು ಅರ್ಥ ಸೂಚಿಸುತ್ತದೆ.

ಐದನೇ ಚಿತ್ರದಲ್ಲಿ ದೋಣಿ ಮುಳುಗಿರುವುದನ್ನು ಚೌಕಾಕಾರದ ಮತ್ತು ತ್ರಿಕೋನಾಕಾರದ ಬೋವೆಗಳು ಸೂಚಿಸುತ್ತಿರುವುದರಿಂದ ಅವೆರಡರ ನಡುವಿನ ಸ್ಥಳ ಮಾತ್ರ ಸುರಕ್ಷಿತ ಸ್ಥಳವಾಗಿರುತ್ತದೆ. ಆ ಸ್ಥಳದಿಂದ ಮಾತ್ರ ದೋಣಿಗಳು ಹಾದು ಹೋಗಬಹುದಾಗಿದೆ.

ಕೊನೆಯ ಚಿತ್ರದಲ್ಲಿ ಕೆಂಪು ಬಣ್ಣದ ಚೌಕಾಕಾರದ ಬೋವೆ ಎಡಬದಿಯಲ್ಲಿದ್ದು ಕಪ್ಪು ಬಣ್ಣದ ಬೋವೆ ಬಲಬದಿಯಲ್ಲಿದೆ. : ಬೋವೆಗಳಿರುವ ಸ್ಥಳವು ದೋಣಿ ನಡೆಸಲು ಸೂಕ್ತವಾದ ಸ್ಥಳವಲ್ಲದ್ದರಿಂದ ಇವುಗಳ ನಡುವೆ ಮಾತ್ರ ದೋಣಿ ನಡೆಸಬೇಕೆಂದು ತಿಳಿಯಬೇಕಾಗುತ್ತದೆ.


ಹಗಲಿನ ಸಂಕೇತಗಳು




ಈ ಬೋವೆಯಿದ್ದಲ್ಲಿ ಸಮೀಪದಿಂದ ಸಾಗಬೇಕು



ಈ ಬೋವೆ ಕಂಡಲ್ಲಿ ಅತಿ ದೂರದಿಂದ ಸಾಗಬೇಕು




ಇವೆರಡು ಬೋವೆಗಳಿದ್ದಲ್ಲಿ ಅವುಗಳ ನಡುವೆ ದೋಣಿ ನಡೆಸಬೇಕು



ಇವೆರಡು ಬೋವೆಗಳ ಮಧ್ಯದಲ್ಲಿ ಸಾಗಬೇಕು





ಇವೆರಡು ಬೋವೆಗಳನ್ನು ಕಂಡರೆ ಇವುಗಳ ನಡುವೆ ಸಾಗಬೇಕು



ಇವೆರಡು ಬೋವೆಗಳನ್ನು ಕಂಡರೆ ಇವುಗಳ ನಡುವೆ ಹಾದುಹೋಗಬೇಕು

ಇವುಗಳಲ್ಲದೆ ದಾರಿ ಗತಿಯನ್ನು ಸೂಚಿಸುವ ಸಂಕೇತಗಳು ಪ್ರತ್ಯೇಕವಾಗಿವೆ. ಕಪ್ಪು ಬಣ್ಣದ ಪಿಪಾಯಿ ಇದ್ದು ಅದರ ಮೇಲೆ ಒಂದು ಕಂಬ ಸಿಕ್ಕಿಸಿದ್ದರೆ ದಾರಿ ಚೆನ್ನಾಗಿದೆ ಎಂದು ತಿಳಿಯಬೇಕಾಗುತ್ತದೆ. ಕಪ್ಪು ಮತ್ತು ಹಳದಿ ಪಟ್ಟಿಗಳಿರುವ ತ್ರಿಕೋನವಿದ್ದರೆ ಅಲ್ಲಿ ದಾರಿ ಚೆನ್ನಾಗಿಲ್ಲವೆಂದು ತಿಳಿಯಬೇಕಾಗುತ್ತದೆ.

ಕೆಲವು ನಿಷೇಧಿತ ಸ್ಥಳವನ್ನು ಸೂಚಿಸುವಾಗ ಕೆಂಪು ಪೀಪಾಯಿಯನ್ನು ತೇಲಿ ಬಿಟ್ಟಿರುತ್ತಾರೆ. ಅ ಸ್ಥಳದಲ್ಲಿ ದೋಣಿ ಲಂಗರು ಹಾಕಿದೆ ಎಂದು ತಿಳಿಯಬೇಕಾಗುತ್ತದೆ. ಕಪ್ಪು ತ್ರಿಕೋನದ ಬೋವೆ ಇದ್ದರೆ ಅದು ಟೆಲಿಗ್ರಾಫ್ ತಂತಿಗಳಿರುವ ಸ್ಥಳವಾದ್ದರಿಂದ ಅಲ್ಲಿ ದೋಣಿಗಳಿಗೆ ಪ್ರವೇಶವಿಲ್ಲವೆಂದು ತಿಳಿಯಬೇಕು.

ಹೀಗೆಯೇ ಬಣ್ಣ ಮತ್ತು ಬೋವೆಗಳ ವಿವಿಧ ಸ್ವರೂಪಗಳು ಮೀನುಗಾರರ ಪ್ರಾಣರಕ್ಷಣೆಯ ಸಂಕೇತಗಳೂ ಆಗಿವೆ. ಈ ಮಾರ್ಗಸೂಚಿಗಳು ಹೆಚ್ಚಾಗಿ ಯಾಂತ್ರಿಕ ದೋಣಿಗಳಾದ ಪರ್ಸ್-ಸೀನರ್, ಟ್ರಾಲರ್‌ಗಳ ಮೀನುಗಾರರಿಗೆ ಉಪಯೋಗವಾಗುತ್ತವೆ. ನಾಡ ದೋಣಿಗಳಿಗೆ ಸಾಮಾನ್ಯ ಅಪಾಯಗಳು ಮಾತ್ರ ಎದುರುಗೊಳ್ಳುವಂತಹದು.

2. ರಾತ್ರಿ ಸಂಕೇತಗಳು :

ರಾತ್ರಿ ಸಂಕೇತಗಳು ಹಗಲಿನ ಸಂಕೇತಗಳಿಗಿಂತ ಹೆಚ್ಚು ಪ್ರಮುಖವಾದವು. ಏಕೆಂದರೆ ಹಗಲಲ್ಲಿ ಸದಾ ಸಂಚಾರ ಮಾಡುವ ಹಾದಿಯಲ್ಲಿ ಎದುರಾಗುವ ಅಪಾಯದ ಸ್ಥಳಗಳು ಬೆಳಕಲ್ಲಿ ಗೋಚರವಾಗಬಲ್ಲವು. ಆದರೆ ಕತ್ತಲೆಯಲ್ಲಿ ಸಾಗುವ ದೋಣಿಗಳಿಗೆ ಅಪಾಯದಿಂದ ರಕ್ಷಿಸುವುದೆಂದರೆ ರಾತ್ರಿ ಸಂಕೇತಗಳು . ಇವುಗಳಲ್ಲಿ ಕೆಂಪು-ಹಸಿರು-ಬಿಳಿ ದೀಪಗಳು ಪ್ರಮುಖ. ಹಸಿರು ಬೆಳಕು ಸುರಕ್ಷಿತ ಸ್ಥಳವನ್ನು ಸೂಚಿಸುತ್ತಿದ್ದರೆ, ಕೆಂಪು ಬೆಳಕು ಅಪಾಯದ ಸೂಚನೆಯನ್ನು ನೀಡುತ್ತದೆ.

ಮೊದಲ ಚಿತ್ರದಲ್ಲಿರುವ ಎರಡು ಬೋವೆಗಳಲ್ಲಿ ಎಡ ಬೋವೆಯ ತುದಿಯಲ್ಲಿ ಬಿಳಿಯ ಬೆಳಕು ನೀಡುವ ದೀಪವಿದೆ. ಬಲ ಬೋವೆಯ ತುದಿಯಲ್ಲಿ ಕೆಂಪು ದೀಪವಿದೆ. ಕೆಂಪು ದೀಪ ಅಪಾಯದ ಸ್ಥಳವನ್ನು ಸೂಚಿಸಿ ಆ ಕಡೆಗೆ ದೋಣಿಗಳನ್ನು ನಡೆಸಬಾರದೆಂಬ ಎಚ್ಚರಿಕೆ ನೀಡುತ್ತದೆ. ಎಡಬದಿಯ ಬಿಳಿಯ ದೀಪ ತನ್ನಿಂದ ಸ್ವಲ್ಪ ಅಂತರದಿಂದ ಸಾಗಲಭ್ಯಂತರವಿಲ್ಲವೆಂಬುದನ್ನು ಸೂಚಿಸುತ್ತದೆ.

ಚಿತ್ರ ಎರಡರಲ್ಲಿ ಕಪ್ಪು ಬಣ್ಣದ ಬೋವೆ ಇದ್ದು ಅದು ಹಡಗು ಇಲ್ಲವೆ ಮಚವೆ ಮುಳುಗಿರುವ ಸ್ಥಳವನ್ನು ಸೂಚಿಸಿ ಎಡಬದಿಯಿಂದ ಮಾತ್ರ ದೋಣಿ ನಡೆಸಲಡ್ಡಿಯಿಲ್ಲವೆಂದು ಸೂಚನೆ ನೀಡುತ್ತದೆ.


ಮೂರನೇ ಚಿತ್ರದಲ್ಲಿ ಕೆಂಪು ಮತ್ತು ಹಸಿರು ದೀಪಗಳನ್ನು ಹೊಂದಿರುವ ಬೋವೆಗಳಿವೆ. ದೋಣಿ ಹಸಿರು ಬೋವೆ ಪಕ್ಕದಲ್ಲಿ ಚಲಿಸುವ ಸೂಚನೆಯನ್ನು ಇದು ನೀಡುತ್ತದೆ.

ಇವುಗಳ ಹೊರತು ಬೆಳಕಿನ ಇನ್ನೂ ಕೆಲವು ಸೂಚನೆಗಳಿವೆ. ಹಸಿರು ದೀಪಗಳಿದ್ದರೆ ಎಡಭಾಗದಲ್ಲಿ ದೋಣಿ ಸಾಗಬೇಕೆಂದು, ನಾಲ್ಕು ಹಸಿರು ದೀಪಗಳಿದ್ದರೆ ಎರಡೂ ಬದಿಯಲ್ಲೂ ಚಲಿಸಬಹುದೆಂಬ ಅರ್ಥವಿದೆ.


ರಾತ್ರಿಯ ಸಂಕೇತಗಳು

1

ಈ ಬೋಯಿಗಳಿರುವ ಸ್ಥಳದಿಂದ ಇನ್ನು ಸ್ವಲ್ಪ ಮುಂದಕ್ಕೆ ಹೋಗಬಾರದು




2.



→ ಹಡಗು ಇಲ್ಲವೆ ನಾವೆ ಮುಳುಗಿದ ಸ್ಥಳದಲ್ಲಿ ಈ ಬೋಯಿ ಹಾಕಿರುತ್ತಾರೆ.

→ ಇದನ್ನು ಕಂಡಾಗ ದೋಣಿ ಎಡದಿಂದ ಸಾಗಬೇಕು.

3.



ಈ ಬೋಯಿಗಳು ಕಂಡಾಗ ಇವುಗಳ ನಡುವೆ ದೋಣಿ ನಡೆಸಬೇಕು.

೫:೨ ಸಾಮಾನ್ಯ ಅಪಾಯಗಳು :

ಕಡಲ ವಿಶೇಷ ಅಪಾಯಗಳ ತಡೆಗೆ ಬಂದರ್ ಇಲಾಖೆ ಇಲ್ಲವೆ ಆಕಾಶವಾಣಿಯ ಹವಾಮಾನ ವೀಕ್ಷಣಾಲಯದವರು ಮುನ್ಸೂಚನೆ ನೀಡುತ್ತಾರೆ. ಆದರೆ ಸಾಮಾನ್ಯ ಅಪಾಯಗಳಿಂದ ಪಾರಾಗಲು ಸ್ವ ಅನುಭವವೇ ಆಧಾರ. ಅನುಭವ ಜ್ಞಾನದ ಕೊರತೆ ಇರುವವರು ಸಮದ್ರ ಹೊಕ್ಕರೆ ಅಪಾಯಗಳಿಗೆ ಬಲಿಯಾಗಬೇಕಾಗುತ್ತದೆ.

ಸಾಮಾನ್ಯ ಅಪಾಯಗಳಲ್ಲಿ ಬಹು ಮುಖ್ಯವಾದವು ಬಲೆ ಹರಿದು ಹಾಕುವ ಇಲ್ಲವೆ ಹಿಡಿದ ಮೀನು ತಿಂದು ಹಾಕುವ ಜಲಚರಗಳು ಹಾಗೂ ಸಮುದ್ರದ ಮೇಲೆ ಸಂಗ್ರಹವಾಗುವ ಲೋಳಿ ಸ್ವರೂಪದ ದ್ರವ.

ಬಲೆ ನಷ್ಟಗೊಳಿಸುವ ಜಲಚರಗಳು :

ಮೀನುಗಾರರಿಗೆ ಬಲೆಯೇ ಜೀವಾಳ. ದೋಣಿ ಬೇಕಾದರೆ ಅವರಿಗೆ ಬಾಡಿಗೆಗೆ ದೊರೆಯಬಲ್ಲದು. ಆದರೆ ಬಲೆ ಕೊಡುವವರು ಬಹಳ ಅಪರೂಪ. ಲಕ್ಷಕ್ಕಂತ ಹೆಚ್ಚು ರೂಪಾಯಿ ಬೆಲೆ ಬಾಳುವ ಬಲೆ ಬೇರೆಯವರ ಕೈಗೆ ಹೋದರೆ ಏನಾಗುವುದೋ? ಎಂಬ ಸಂಶಯವೇ ಬಲೆ ಬಾಡಿಗೆಗೆ ಕೊಡಲು ಅಡ್ಡಿಬರುವಂತಹದು. ಹೀಗಿರುವಾಗ ಕಷ್ಟಪಟ್ಟು ಒಂಟಿ ಬಲೆಯ ಸರದಾರನಾದ ಮೀನುಗಾರ ಮೀನು ಹಿಡಿವ ಆಸೆಯಿಂದ ಸಮುದ್ರದಲ್ಲಿ ಬಲೆ ಬಿಟ್ಟಾಗ ಅದನ್ನು ಹರಿಯಲು ಹಲವು ಜಲಚರಗಳು ಕಾಯುತ್ತಿರುತ್ತವೆ. ಅವುಗಳಲ್ಲಿ ಪ್ರಮುಖವೆಂದರೆ:

1. **ಹಂದಿ ಮೀನು :** ಹಂದಿಯ ಸ್ವರೂಪದಲ್ಲಿರುವ ಈ ಮೀನು ಬಲೆಯಲ್ಲಿ ಸಿಕ್ಕಿಬಿದ್ದಿರುವ ಮೀನನ್ನು ತಿನ್ನಲು ಬಲೆಯನ್ನೆಲ್ಲಾ ತುಂಡು ತುಂಡಾಗಿ ಕತ್ತರಿಸುತ್ತದೆ. ಇಂತಹ ಸಂದರ್ಭವನ್ನರಿತ ಮೀನುಗಾರರು ತಮ್ಮ ಬಲೆಯ ಸುತ್ತ ಹಂದಿ ಮೀನಿನ ಬಲೆಯನ್ನು ಮೊದಲು ಬಿಟ್ಟಿರುತ್ತಾರೆ. ಬಲೆಯಲ್ಲಿ ಬಿದ್ದ ಮೀನು ತಿನ್ನಲು ಬರುವ ಅದು ಮೊದಲ ಹಂತದಲ್ಲಿನ ಬಲೆಯಲ್ಲಿ ಸಿಕ್ಕಿಬೀಳುತ್ತದೆ.

2. **ಚೇಳು ಮೀನು :** ಈ ಮೀನು ಬಾಲದಲ್ಲಿ ಚೇಳಿನ ಕೊಂಡಿಯಂತಹ ವಿಷದ ಮುಳ್ಳನ್ನು ಹೊಂದಿರುತ್ತದೆ. ಬಲೆಯಲ್ಲಿ ಸಿಕ್ಕಿಬಿದ್ದಾಗ ಅದನ್ನು ಎಚ್ಚರಿಕೆಯಿಂದ ಬಿಡಿಸಿಕೊಳ್ಳಬೇಕಾಗುತ್ತದೆ ಇಲ್ಲದಿದ್ದರೆ ಬಲೆ ಹರಿಯುವುದರ ಜೊತೆ ಮುಳ್ಳು ಕೈಗೆ ತಾಗಿ ಮೈಯೆಲ್ಲಾ ಬೊಬ್ಬೆ ಬರುತ್ತದೆ. ಕೆಲವು ವೇಳೆ ಅದರಿಂದ ಪ್ರಾಣಾಪಾಯವೂ ಆಗಬಹುದು ಎನ್ನುತ್ತಾರೆ.

3. **ಚೊಂದ್ಯಾ :** ಇದು ಇಲಿ ಜಾತಿಗೆ ಸೇರಿದ ಮೀನು. ನೀರಿನಿಂದ ಹೊರ ಬಂದರೆ ಬೆಲೂನಿನಂತೆ ಉಬ್ಬುತ್ತದೆ. ಈ ಮೀನಿಗೆ ಎರಡು ಮಾತ್ರ ಹಲ್ಲಿದ್ದು ಅವೆರಡೂ ಗರಗಸದಂತೆ ಮೇಲಿನ ಮತ್ತು ಕೆಳಗಿನ ಒಸಡುಗಳ ತುಂಬಾ ಹಬ್ಬಿಕೊಂಡಿರುತ್ತವೆ. ಮೀನು ತಿನ್ನಲು ಬರುವ ಚೊಂದ್ಯಾ ಇಲಿಯಂತೆ ಬಲೆಯನ್ನು ತುಂಡು ತುಂಡು ಮಾಡಿ ಒಳಹೊಕ್ಕಿ ಮೀನಿನ ಕಣ್ಣು ಮತ್ತು ಹೊಟ್ಟೆ ಭಾಗಗಳನ್ನು ಮಾತ್ರ ತಿಂದು ಮತ್ರ ತಿನ್ನುತ್ತದೆ.

4. **ಮುಕಂಜಿ :** ಈ ಮೀನಿನ ಕಾಲುಗಳಲ್ಲಿ ಉಗುರುಗಳಿದ್ದು ಬಲೆಯನ್ನು ಇದು ಭದ್ರವಾಗಿ ಹಿಡಿದುಬಿಡುತ್ತದೆ. ಮೂಕಂಜಿ ಮೀನು ಬಿದ್ದ ಬಲೆ ಹರಿಯದೆ ಇರುವುದಿಲ್ಲವೆಂದು ಮೀನುಗಾರರ ಹೇಳಿಕೆ. ಏಕೆಂದರೆ ಮೀನನ್ನು ಬಲೆಯಿಂದ ಬಿಡಿಸಬೇಕಾದರೆ ಬಲೆ ಹರಿಯದೇ ಇರುವುದಿಲ್ಲ. ಆದ್ದರಿಂದ ಈ ಮೀನು ಬಲೆಗೆ ಬೀಳಬಾರದೆಂದು ದೇವರಲ್ಲಿ ಮೊದಲು ಪ್ರಾರ್ಥಿಸಿಕೊಂಡು ಅನಂತರ ಬಲೆ ಬಿಡುವುದು ರೂಢಿಯಲ್ಲಿದೆ.

5. **ಕಣ್ಣುಜಳ್ಳಿ :** ಹರಿತವಾದ ಹಲ್ಲುಗಳ ಕೊಂಡಿ ಹೊಂದಿರುವ '' ಕಣ್ಣುಜಳ್ಳಿ'' ಎಂಬ ಏಡಿ ಮೀನು ತಿನ್ನುವ ಸಲುವಾಗಿ ಬಲೆಯನ್ನು ಕತ್ತರಿಸುತ್ತದೆ.

6. **ಹಾಂಬ್ಯಾ :** ಇಂಗ್ಲಿಷಿನಲ್ಲಿ 'ರಿಬ್ಬನ್ ಫಿಶ್' ಎಂದು ಕರೆಯುವ 'ಹಾಂಬ್ಯಾ' ಬಲೆಯಲ್ಲಿ ಸಿಕ್ಕಿಬಿದ್ದಾಗ ಅದು ಉಳಿದ ಮೀನನ್ನು ಕಚ್ಚಿ ಕಚ್ಚಿ ಗಾಯಗೊಳಿಸುತ್ತದೆ. ಅಂತಹ ಮೀನು ಮಾರಾಟವಾಗುವುದು ಕಷ್ಟ.

ಇದೇರೀತಿ ಹಲವು ಬಗೆಯ ಮೀನುಗಳು ಮೀನುಗಾರರಿಗೆ ವಿವಿಧ ರೀತಿಯಿಂದ ನಷ್ಟ ಉಂಟು ಮಾಡುತ್ತದೆ. ಕೆಲವು ಮೀನು ಗಾತ್ರದಲ್ಲಿ ಚಿಕ್ಕವಿದ್ದರೂ ಬಹು ಅಪಾಯಕಾರಿಯಾಗಿರುತ್ತದೆ. 'ಹೊರ್ಕಳೆ' ಎಂಬುದು ಮೂರುನಾಲ್ಕು ಅಂಗುಲ ಉದ್ದದ ಮೀನು ಅದು ಕಡಲ ರಾಜನಾದ ತಿಮಿಂಗಿಲವನ್ನೇ ತೊಂದರೆಗೀಡುಮಾಡುತ್ತದೆ. ಹೆಚ್ಚು ಮುಳ್ಳುಗಳಿಂದ ಕೂಡಿದ ಈ ಮೀನನ್ನು ತಿಮಿಂಗಿಲ ತಿಂದ ತಕ್ಷಣ ಅದರ ಮುಳ್ಳುಗಳು ಕರುಳಲ್ಲಿ ಸಿಕ್ಕಿ ಗಾಯಗೊಳಿಸುತ್ತವೆ. ಕರುಳು ಬೇನೆಯಿಂದ ಕೊನೆಗೆ ತಿಮಿಂಗಿಲ ಸಾಯುತ್ತದೆ. ಹೀಗೆ ಸದಾ ನೀರಲಿ-ರುವ ಐರಾವತದಂತಹ ತಿಮಿಂಗಲವನ್ನೇ ಅಪಾಯಕ್ಕೆ ಎಡೆ ಮಾಡುವ ಜಲಚರಗಳು ಮೀನುಗಾರರಿಗೆ ಎಂತೆಂತಹ ತೊಂದರೆ ಕೊಡ ಬಲ್ಲವೆಂಬುದು ಅವರಿಗೇ ಗೊತ್ತು.

ಸಮುದ್ರದ ಮೇಲಿನ ದ್ರವ :

ಸಮುದ್ರದಲ್ಲಿ ನಡೆವ ರಾಸಾಯನಿಕ ಕ್ರಿಯೆಯ ಪರಿಣಾಮದಿಂದ ಲೋಳೆಯಂತಹ ದ್ರವ ರಚನೆಗೊಳ್ಳುತ್ತದೆ. ಅದು ಮೀನುಗಾರರಿಗೆ ಅಪಾಯಕಾರಿ ದ್ರವವಾಗಿರುತ್ತದೆ. ಅವರ ಹೇಳಿಕೆಯಂತೆ ದಕ್ಷಿಣದಿಂದ ಉತ್ತರಕ್ಕೆ ಬೀರುಗಾಳಿ ಬೀಸಿದರೆ ಹಳದಿ ಬಣ್ಣದ ಲೋಳಿಯಂತಹ ದ್ರವವು ಸಮುದ್ರದ ಮೇಲೆ ತೇಲುತ್ತಾ ಬರುತ್ತದೆ. ಇದು ಮೈಗೆ ತಾಗಿದರೆ ತುರಿಕೆ ಪ್ರಾರಂಭವಾಗುತ್ತದೆ. ತುರಿಕೆ ಎಷ್ಟು ಅಪಾಯಕಾರಿ ಎಂದರೆ ಕೆರೆದಂತೆಲ್ಲಾ ಉರಿಪ್ರಾರಂಭವಾಗಿ ಆ ಸ್ಥಳ ಕೆಂಪಾಗಾಗುತ್ತಾ ಬಂದು ಕೊನೆಗೆ- ಗಾಯವಾಗುತ್ತದೆ.

ಇದೇ ರೀತಿ ಜೂನ್ ಜುಲೈನಲ್ಲಿ ದಕ್ಷಿಣದಿಂದ ಉತ್ತರಕ್ಕೆ ಗಾಳಿ ಬೀಸುವಾಗ ''ತೊರ್ಕೆ ಮೀನಿನ'' ಮೊಟ್ಟೆ ಸಮುದ್ರದೊಳಗಡೆಯಿಂದ ಮೇಲೆ ಬರುತ್ತದೆ. ಬಿರುಗಾಳಿಯ ಪ್ರಭಾವಕ್ಕೆ ಅಲ್ಲೋಲ ಕಲ್ಲೋಲಗೊಳ್ಳುವ ನೀರಿನ ಕಾರಣದಿಂದ ಮೇಲೆ ಬರುವ ಬಿಳಿಯ ಬಣ್ಣದ ಮೊಟ್ಟೆಯ ಜೊತೆಯಲ್ಲಿ ನೀಲಿಬಣ್ಣದ ಲೋಳಿಯಂತಹ ದ್ರವ ಸೇರಿರುತ್ತದೆ. ಮೊಟ್ಟೆಗಳೆಲ್ಲಾ ಆ ದ್ರವದಲ್ಲಿ ಅಲ್ಲಲ್ಲಿ ಸಿಕ್ಕಿಕೊಂಡಿರುತ್ತವೆ. ಈ ದ್ರವ ಕೈಗೆ ತಾಗಿದರೆ ತುರಿಕೆ ಪ್ರಾರಂಭವಾಗುತ್ತದೆ. ಆಗ ಮೀನುಗಾರರು ಮೀನು ಹಿಡಿಯುವುದರ ಕಡೆಗೆ ಗಮನ ಹರಿಸದೆ ತುರಿಕೆಯ ಸ್ಥಳದಲ್ಲಿ ಕೆರೆಯುವುದರಲ್ಲಿ ಮಗ್ನವಾಗಬೇಕಾಗುತ್ತದೆ. ಇದಲ್ಲದೆ ತೊರ್ಕೆಮೊಟ್ಟೆ ಮೇಲ್ಬಂದರೆ ಮೀನಿನ ಚಲನವಲನ ಕಡಿಮೆಯಾಗುವುದರಿಂದ ಮೀನು ಸಿಗುವುದು ಕಡಿಮೆಯಾಗುತ್ತದೆ.

ಹೀಗೆ ವಿವಿಧ ಬಗೆಯಾದ ಸಮುದ್ರದ ಅಪಾಯಗಳನ್ನು ಎದುರಿಸುತ್ತಾ ಮೀನುಹಿಡಿಯುವ ಮೀನುಗಾರರ ಉದ್ಯೋಗದ ಹಿಂದೆ ಅನುಭವ, ಧೈರ್ಯ, ತಾಳ್ಮೆ ಮೊದಲಾದವು ಪ್ರಧಾನವಾಗುತ್ತವೆ. ಹೆಜ್ಜೆ ಹೆಜ್ಜೆಗೂ ಅವರು ಎಚ್ಚರಿಕೆಯಿಂದ ಮುಂದುವರಿಯುವುದು ಅವರಿಗೆ ಅಭ್ಯಾಸವಾಗಿ ಹೋಗಿದೆ. ಹೀಗಿದ್ದರೂ ಅವರಲ್ಲಿ ಹಲವರು ಅಪಾಯಗಳಿಗೆ ಪ್ರತಿವರ್ಷ ಬಲಿಯಾಗುತ್ತಲೇ ಇದ್ದಾರೆ. ಇದಕ್ಕೆ ಕಾರಣ ಅಪಾಯಗಳ ಬಗ್ಗೆ ಮುನ್ಸೂಚನೆ ಕಾಲಕ್ಕೆ ಸರಿಯಾಗಿ ಇದ್ದುದ್ದು. ಹಾಗೂ ಮುನ್ಸೂಚನೆಗಳಳನ್ನು ನಿರ್ಲಕ್ಷಿಸಿವುದು.

3:2 ಆರ್ಥಿಕ

ಅ) ವ್ಯಾಪಾರ - ವಿಧ - ವಿಧಾನಗಳು :

ಮೀನು ತಿನ್ನುವವರ ಸಂಖ್ಯೆ ಹೆಚ್ಚುತ್ತಾ ಹೋದಂತೆ ಹವ್ಯಾಸವಾಗಿದ್ದ ಮೀನುಬೇಟೆ ಉದ್ಯೋಗವಾಗಿ ಪರಿವರ್ತನೆಯಾಯಿತು. ಜನಪದ ವ್ಯಾಪಾರದಲ್ಲಿ ಆಧುನಿಕ ವ್ಯಾಪಾರದ ವಿಧಗಳು ಸೇರಿಕೊಂಡವು. ನವೀನ ಮಾರುಕಟ್ಟೆಗೆ ಹೊಂದಿಕೊಂಡು ವ್ಯಾಪಾರ ಮಾಡುವುದು ಅನಿವಾರ್ಯವಾಯಿತು. ಈ ಕಾರಣದಿಂದ ಕಡಲಿಗರ ವ್ಯಾಪಾರದಲ್ಲಿ ಪ್ರಸ್ತುತ ವಿಧ ವಿಧಾನಗಳು ಹೆಚ್ಚಾಗಿವೆ. ಕರ್ನಾಟಕ ಕರಾವಳಿಯ ಇತಿಹಾಸವನ್ನು ತೆರೆದು ನೋಡಿದಾಗ ಮೀನುಗಾರಿಕೆಯನ್ನು ವ್ಯಾಪಾರ ದೃಷ್ಟಿಯಲ್ಲಿ ಕೈಗೊಂಡಿರುವುದಕ್ಕೆ ಬಹುಪ್ರಾಚಿನವಾದ ನಿದರ್ಶನಗಳು ದೊರೆಯುತ್ತದೆ. ಕಾರವಾರದ ಬಳಿ ಇರುವ ಅಂಜದೀಪ್ ನಡುಗಡ್ಡೆಗೆ ಕ್ರಿ.ಶ. 150 ರಲ್ಲಿ ತಾಲ್ಮೆ ಎಂಬ ಇತಿಹಾಸಕಾರ ಭೇಟಿಕೊಟ್ಟಾಗ ಅಂಜದೀಪ್ ಒಂದು ಬಂದರಾಗಿದ್ದು ಅಲ್ಲಿ ಮೀನುಹಿಡಿಯುವ ಉದ್ಯೋಗ ನಡೆಯುತ್ತಿತ್ತು ಎಂಬುದನ್ನು ತಿಳಿಸಿದ್ದಾನೆ.

ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ಬಂದರನ್ನು ಕ್ರಿ.ಶ. 242 ರಲ್ಲಿ ಬರೆದ "Periplus of Erithrean Sea" ಎಂಬ ಗ್ರಂಥದಲ್ಲಿ "ನಾವರ" ಎಂದು ನಮೂದಿಸಲಾಗಿದೆ. ಕ್ರಿ. ಶ.1342 ರಲ್ಲಿ ಈ ಬಂದರಿಗೆ ಆಫ್ರಿಕಾದ ಪ್ರವಾಸಿಯಾದ ಇಬ್ನ ಬತೂತಾ ಭೇಟಿಕೊಟ್ಟನೆಂದು, ಇದೇ ಬಂದರನ್ನು ಕ್ರಿ. ಶ.1503 ರಲ್ಲಿ ವಾಸ್ಕೋಡಾ ಗಾಮಾನ ಸೈನಿಕರು ಸುಟ್ಟರೆಂದು ತಿಳಿಸಲಾಗಿದೆ. ಕಾರವಾರವು ನೈಸರ್ಗಿಕ ಬಂದರಾಗಿದ್ದು ಅದಕ್ಕೆ ಬ್ರಿಟೀಷ್ ಕಾಲದಿಂದಲೇ ಅಂತರಾಷ್ಟ್ರೀಯ ಮಹತ್ವವಿತ್ತು ಆದರೆ ಇಲ್ಲಿ ಮೀನುಗಾರಿಕೆ ಉದ್ಯೋಗವು ಅತೀ ಪ್ರಾಚೀನ ಕಾಲದಿಂದಲೇ ನಡೆಯುತ್ತಿದ್ದುದು ತಿಳಿದುಬರುತ್ತದೆ. ಮಿರ್ಜಾನ ಒಂದು ಪ್ರಾಚೀನ ಬಂದರಾಗಿದ್ದು ಅಲ್ಲಿ ಅನೇಕ ಐತಿಹಾಸಿಕ ಘಟನೆಗಳು ಪೋರ್ಚುಗೀಸರ ಕಾಲದಿಂದಲೂ ನಡೆದಿರುವುದು ತಿಳಿಯುತ್ತದೆ. ಕುಮಟಾದ ಅಘನಾಶಿನಿ ನದಿಯು ಪಶ್ಚಿಮ ಸಮುದ್ರವನ್ನು ಕೂಡುವ ಪ್ರದೇಶದಲ್ಲಿ ತದಡಿ ಎಂಬ ಮೀನುಗಾರಿಕೆಯ ಕಟ್ಟೆ ಹಾಗೂ ಚಿಕ್ಕ ಬಂದರು ಪ್ರಾಚೀನ ಕಾಲದಿಂದಲೇ ಇದ್ದುದು ತಿಳಿದುಬರುತ್ತದೆ. ಈ ಅಭಿಪ್ರಾಯಗಳ ಜೊತೆಗೆ ಭಟ್ಕಳ, ಗಂಗೊಳ್ಳಿ ಮಲ್ಪೆ ಮತ್ತು ಮಂಗಳೂರು ಬಂದರುಗಳ ಇತಿಹಾಸವನ್ನು ಅರಿತಾಗ ಕರ್ನಾಟಕ ಕರಾವಳಿಯ ಸ್ವಾಭಾವಿಕ ಬಂದರುಗಳಿಗೆ ಅಂತರಾಷ್ಟ್ರೀಯ ಮಹತ್ವವಿದ್ದು ಅವು ವಿದೇಶಿಗರ ವ್ಯಾಪಾರ ಕೇಂದ್ರಗಳಾಗಿದ್ದವೆಂದು ಇತಿಹಾಸ ಗ್ರಂಥಗಳಿಂದ ತಿಳಿಯುತ್ತದೆ.

ಕರ್ನಾಟಕ ಕರಾವಳಿಯ ಬಂದರುಗಳು ಕೇವಲ ವಿದೇಶಿಗರ ವ್ಯಾಪಾರಕ್ಕೆ ಸಹಾಯಕವಾಗದೆ ಮೀನುಗಾರಿಕೆಯ ಪ್ರಮುಖ ಕೇಂದ್ರಗಳೂ ಸಹ ಆಗಿದ್ದವು. ಸ್ವಾತಂತ್ರ್ಯದ ನಂತರ ಮೀನುಗಾರಿಕೆ ಉದ್ದಿಮೆಯ ಮಟ್ಟಕ್ಕೆ ಏರಿ ದೇಶದ ಆರ್ಥಿಕಾಭಿವೃದ್ಧಿಗೆ ಒಂದು ಮಾರ್ಗವಾಯಿತು. ಅದನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಪಂಚವಾರ್ಷಿಕ ಯೋಜನೆಗಳಲ್ಲಿ ಅದಕ್ಕಾಗಿ ಹಣವನ್ನು ಕಾಯ್ದಿಡಲಾಯಿತು. ಈ ವಿದೇಶಿಗರಿಗೆ ಕರ್ನಾಟಕ ಕರಾವಳಿಯ ಮೀನು ಸೀಗಡಿಗಳು ಪ್ರಿಯವಾಗುತ್ತಾ ಹೋದಂತೆ ಅಂತರಾಷ್ಟ್ರೀಯ ಹಣಸಹಾಯದ ಪ್ರೋತ್ಸಾಹ ಕರಾವಳಿಯ ಮೀನುಗಾರಿಕೆಗೆ ದೊರೆಯಿತು. ಇದರ ಪರಿಣಾಮವಾಗಿ 1982 ರಲ್ಲಿ ಕರ್ನಾಟಕ ಸರ್ಕಾರವು ಡೆನ್ಮಾರ್ಕ್ ಸಹಾಯಧನದಿಂದ ಉತ್ತರ ಕನ್ನಡ ಜಿಲ್ಲೆಯ ತದಡಿ ಎಂಬ ಗ್ರಾಮದಲ್ಲಿ ಮೀನುಗಾರಿಕಾಭಿವೃದ್ಧಿಯ ಯೋಜನೆಯೊಂದುನ್ನು ಪ್ರಾರಂಭಿಸಿತು. ಈ ಯೋಜನೆಯ ಪ್ರಕಾರ 7 ಕೋಟಿ 48 ಲಕ್ಷ ರೂಪಾಯಿಗಳನ್ನು ಅಭಿವೃದ್ಧಿಗಾಗಿ ಇಟ್ಟುಕೊಂಡಿದ್ದು 6 ಕೋಟಿ 38 ಲಕ್ಷ ರೂಪಾಯಿಗಳನ್ನು ಡೆನ್ಮಾರ್ಕನ ಸರ್ಕಾರ ಕೊಡಲು ಒಪ್ಪಿಕೊಂಡಿತು ಈ ಯೋಜನೆಯಡಿಯಲ್ಲಿ ತದಡಿ ಸುತ್ತಮುತ್ತಲಿನ 65 ಹಳ್ಳಿಗಳ ಮೀನುಗಾರರಿಗೆ ಉಪಯೋಗವಾಯಿತು.

ಅಂತರಾಷ್ಟ್ರೀಯ ಪ್ರೋತ್ಸಾಹದಿಂದ ಕರ್ನಾಟಕ ಕರಾವಳಿಯ ಮೀನುಗಾರಿಕೆ ಒಂದಡೆ ಅಭಿವೃದ್ಧಿಗೊಳ್ಳುತ್ತಿದ್ದರೆ ರಾಷ್ಟ್ರದ ಪ್ರೋತ್ಸಾಹದಿಂದ ಮತ್ತೊಂದು ಮುಖದಲ್ಲಿ ಅದು ಬೆಳವಣಿಗೆ ಸಾಧಿಸುತ್ತಿದೆ. ಇದರ ಪರಿಣಾಮದಿಂದ ಮೀನುಹಿಡಿಯುವ, ಬಲೆ ಹೆಣೆಯುವ ಹೊಸ ತಂತ್ರಗಳನ್ನು ಮೀನುಗಾರರಿಗೆ ಕಲಿಸಲು ತರಬೇತಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ದೋಣಿಕೊಳ್ಳುವವರಿಗೆ ಕಡಿಮೆ ಬಡ್ಡಿಯ ಸಾಲವನ್ನು ಒದಗಿಸುವುದರ ಜೊತೆಗೆ ದೋಣಿಗಳಿಗೆ ಮತ್ತು ಮೀನುಗಾರರಿಗೆ ವಿಮೆಮಾಡಿಸುವ ಸೌಲಭ್ಯವನ್ನು ಕಲ್ಪಿಸಿಕೊಟ್ಟಿದೆ. ಐಸ್‌ಫ್ಯಾಕ್ಟ್ರಿಗಳನ್ನು, ರೆಫ್ರಿಜಿರೇಟರ್ ಸಹಿತದ ಮೀನು ಸಾಗಾಣಿಕೆ ವಾಹನಗಳನ್ನು ಕೊಳ್ಳಲು ಸಾಲದ ಸೌಲಭ್ಯ ಒದಗಿಸಿಕೊಡುತ್ತಿದೆ. ಈ ಪ್ರೋತ್ಸಾಹದ ಫಲವಾಗಿ ನಾಡದೋಣಿಗಳ ಸಂಖ್ಯೆ ಕಡಿಮೆಯಾಗುತ್ತಾ ಯಾಂತ್ರಿಕ ದೋಣಿಗಳ ಸಂಖ್ಯೆ ಹೆಚ್ಚುತ್ತಿದೆ. ಮೀನುಗಾರರ ಆರ್ಥಿಕ ಸ್ಥಿತಿ ಸುಧಾರಿಸುವುದರ ಜೊತೆಗೆ ಅವರ ಬದುಕು ಆಧುನೀಕರಣಗೊಳ್ಳುತ್ತಿದೆ. ಪಂಚವಾರ್ಷಿಕ ಯೋಜನೆಗಳಲ್ಲಿ ಕರ್ನಾಟಕ ಸರ್ಕಾರವು 1956 ರಿಂದ ಮೀನುಗಾರಿಕೆ ಮತ್ತು ವ್ಯಾಪಾರದ ಅಭಿವೃದ್ಧಿಗಾಗಿ ವಿಶೇಷ ಗಮನ ಕೊಡುತ್ತಿದೆ. ಈ ಯೋಜನೆಗಳ ಪ್ರೋತ್ಸಾಹದ ಪರಿಣಾಮವಾಗಿ 1956 - 57 ಕರಾವಳಿಯ ಮೀನು ಉತ್ಪಾದನೆ 80,000 ಟನ್ ಇದ್ದುದು 1984 - 85 ರ ಹೊತ್ತಿಗೆ 2 ಲಕ್ಷ ಟನ್‌ಗಳಷ್ಟು ಏರಿದ್ದು ಮಾತ್ರವಲ್ಲದೆ, 1,25000 ಜನರು ಉದ್ಯೋಗಿಗಳಾಗಿದ್ದಾರೆ. ಹೊಸ ಹೊಸ ತಂತ್ರಗಳ ಬಳಕೆ ಜಾರಿಗೆ ಬಂದು ಕಡಿಮೆ ಶ್ರಮದಿಂದ ಹೆಚ್ಚು ಆದಾಯಗಳಿಸುವುದು ಪ್ರಾರಂಭವಾಗಿದೆ. ಪಾತಿ ದೋಣಿಯಲ್ಲಿ ಒಬ್ಬನೇ ದೋಣಿ ನಡೆಸುವ ಮತ್ತು ಆತನೇ ಬಲೆಬಿಸಿ ಮೀನುಹಿಡಿಯುವ ವಿಧಾನವು ಕಡಿಮೆಯಾಗುತ್ತಾ ದೋಣಿ ನಡೆಸುವವರೇ ಬೇರೆ, ಬಲೆಬೀಸುವವರೇ ಬೇರೆ, ಬಲೆ ಮೇಲೆತ್ತುವ ಯಂತ್ರವೇ ಬೇರೆಯಾಗಿ ಶ್ರಮವಿಭಜನೆ ಹಾಗೂ ಸಹಕಾರ ಮನೋಭಾವನೆ ಉದ್ಯೋಗದಲ್ಲಿ ಪ್ರಮುಖವಾಯಿತು. ಜೊತೆ ಜೊತೆಗೆ ಹಿಡಿದ ಮೀನನ್ನು ಮಾರಾಟಮಾಡುವ ವಿಧಾನಗಳಲ್ಲಿ ಪರಿವರ್ತನೆಯಾಯಿತು.

ಜನಪದರು ಹಿಡಿದ ಮೀನು ಅವಶ್ಯಕತೆಗಳಿಗನುಸಾರ ಮಾರ್ಪಡಿಸಿ ಮಾರಾಟಮಾಡುವಾಗ ಅವರು ಆಧುನಿಕತೆಗೆ ಹೊಂದಿಕೊಳ್ಳುವುದು ಅನಿವಾರ್ಯವಾಯಿತು. ಆಗ ಜನಪದ ವ್ಯಾಪಾರ ವಿಧಾನವು ಮಾರುಕಟ್ಟೆಗಳಿಗನುಸಾರ ಬದಲಾವಣೆಪಡೆಯತು. ವ್ಯಾಪಾರದಲ್ಲಿ ಲಾಭದ ದೃಷ್ಟಿ ಮುಖ್ಯವಾಗಿರುವುದರಿಂದ ಹಿಡಿದ ಮೀನಿನಲ್ಲಿ ಎಣ್ಣೆತೆಗೆದು ಮಾರಾಟ ಮಾಡುವ, ಹಿಂಡಿಮಾಡಿ ಮಾರುವ, ಔಷಧಿಗಳಿಗಾಗಿ ಅವುಗಳ ಅಂಗಾಂಗಗಳನ್ನು ವಿದೇಶಗಳಿಗೆ ರಫ್ತುಮಾಡುವ ನವೀನ ವಿಧಾನಗಳನ್ನು ಜನಪದರು ಅನುಸರಿಸುವುದು ಅನಿವಾರ್ಯವಾಗಿದ್ದ ಕಾರಣದಿಂದ ಅವು ಜನಪದರ ವ್ಯಾಪಾರ ವಿಧಾನಗಳಾದವು.

ಹಿಡಿದ ಮೀನನ್ನು ಮಾರಾಟ ಮಾಡುವ ವಿಧಗಳು :


1. ಹಸಿ ಮೀನಿನ ಮಾರಾಟ
2. ಉಪ್ಪುಹಾಕಿದ ಹಸಿ ಮೀನಿನ ಮಾರಾಟ
3. ಒಣ ಮೀನಿನ ಮಾರಾಟ
4. ಮೀನೆಣ್ಣೆಯ ಮಾರಾಟ
5. ಮೀನುಗೊಬ್ಬರದ ಮಾರಾಟ
6. ಮೀನು ಹಿಂಡಿಯ ಮಾರಾಟ
7. ಚಿಪ್ಪುಗಳ ಮಾರಾಟ
8. ಮೀನಿನ ಅಮೂಲ್ಯ ಭಾಗಗಳ ಮಾರಾಟ

1) ಹಸಿಮೀನಿನ ಮಾರಾಟ :

ಸಮುದ್ರದಿಂದ ಮೀನು ಹಿಡಿದ ತಕ್ಷಣ ಮಾರಾಟ ಮಾಡುವಾಗ ಪ್ರಮುಖವಾಗಿ ಮೂರು ವಿಧಾನಗಳನ್ನು ಅನುಸರಿಸುತ್ತಾರೆ.

ಹಿಡಿದ ಮೀನನ್ನು ಮಾರುಕಟ್ಟೆಗೆ ಸಾಗಿಸುತ್ತಿರುವುದು.







ಅ) ಹರಾಜಿನ ಮೂಲಕ ಮಾರಾಟ

ಆ) ಗುತ್ತಿಗೆ ಮಾರಾಟ

ಇ) ಚಿಲ್ಲರೆ ಮಾರಾಟ

ಅ) ಹರಾಜಿನ ಮೂಲಕ ಮಾರಾಟ :-

ಮೀನು ಹೊತ್ತ ದೋಣಿ ದಡ ಸೇರಿದ ತಕ್ಷಣ ಅದರಲ್ಲಿನ ಮೀನನ್ನು ಹರಾಜು ಮಾಡಿ ಮಾರಾಟ ಮಾಡಲಾಗುತ್ತದೆ. ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ಮಂಡಳಿ, ಮೀನುಗಾರಿಕೆ ಪ್ರಾಥಮಿಕ ಸಹಕಾರಿ ಸಂಘಗಳು ಹಾಗೂ ಡಿಸ್ಟ್ರಿಕ್ಟ್ ಕೊ- ಅಪರೇಟರ್ ಮಾರ್ಕೇಟಿಂಗ್ ಫೆಡರೇಶನ್‌ಗಳು ಹರಾಜಿನ ಮೂಲಕ ಹಸಿಮೀನು ಮಾರಾಟದ ಸೌಲಭ್ಯವನ್ನು ಕಲ್ಪಿಸಿವೆ. ಜನಪದ ವ್ಯಾಪಾರದಲ್ಲಿ ಹರಾಜಿನ ಮಾರಾಟವು ಒಂದಾಗಿದ್ದು ಅದು ಇಂದಿಗೂ ಮೀನುವ್ಯಾಪಾರದಲ್ಲಿ ಉಳಿದುಕೊಂಡಿರುವುದು ಗಮನಾರ್ಹವಾದುದು. ಹರಾಜಿನ ವಿಧಾನವೆಂದರೆ ದೋಣಿಯಿಂದ ಒಂದು ಬುಟ್ಟಿ ಮೀನನ್ನು ತಂದು ದಡದ ಮೇಲೆ ಸುರಿಯುತ್ತಾರೆ. ಅದನ್ನು ಸಂಘ ಸಂಸ್ಥೆಗಳ ಪ್ರತಿನಿಧಿಗಳು ಹರಾಜು ಹಾಕುತ್ತಾರೆ. ಯಾರು ಅದನ್ನು ಅತಿ ಹೆಚ್ಚಿನ ಬೆಲೆಗೆ ಕೊಳ್ಳುವರೋ ಅವರೇ ದೋಣಿಯೊಳಗಿನ ಮೀನನ್ನೆಲ್ಲಾ ಕೊಂಡುಕೊಳ್ಳುತ್ತಾರೆ. ಮೀನನ್ನು ಗುಡ್ಡೆ ಹಾಕಿ ಬುಟ್ಟಿ ಲೆಕ್ಕದಲ್ಲಿ ಮಾರಾಟಮಾಡುವುದು ಜನಪದ ವ್ಯಾಪಾರದ ವಿಧಾನವಾಗಿದೆ. ದೋಣಿಯಲ್ಲಿ ಮೀನು ಹೆಚ್ಚಿದ್ದರೆ ಇಬ್ಬರು ಇಲ್ಲವೆ ಮೂರು ಜನ ವ್ಯಾಪಾರಿಗಳು ಒಂದಾಗಿ ಕೊಳ್ಳುತ್ತಾರೆ. ಮೀನು ಮಾರಾಟವಾದ ನಂತರ ಹರಾಜು ಮಾಡಿದವನು ಶೇಕಡ 4 ರಿಂದ 6 ರ ರಂತೆ ದಲ್ಲಾಳಿ ಹಣವನ್ನು ಮೀನುಗಾರರಿಂದ ತೆಗೆದುಕೊಳ್ಳುತ್ತಾನೆ ಹರಾಜಿನಲ್ಲಿ ಮೀನುಕೊಂಡವರು ಅದನ್ನು ಐಸ್‌ಬಾಕ್ಸ್‌ಗಳಲ್ಲಿ ತುಂಬಿ ಬೇಡಿಕೆ ಹೆಚ್ಚಾಗಿರುವ ಸ್ಥಳಗಳಿಗೆ ಸಾಗಿಸಿ ಮಾರಾಟಮಾಡುತ್ತಾರೆ. ಒಳ್ಳೆಯ ಜಾತಿಯ ಮೀನಾದರೆ ಹೊರದೇಶಗಳಿಗೆ ರಫ್ತುಮಾಡುವವರಿಗೆ ಮಾರಾಟ ಮಾಡುತ್ತಾರೆ. ಹರಾಜಿನ ಮೂಲಕ ಮೀನು, ಸೀಗಡಿ, ಗೊಬ್ಬರದ ಹುಳುಗಳು ಮಾರಾಟವಾಗುತ್ತವೆ. ಮೀನು ಕೊಂಡವರು ಅದನ್ನು ಬೇರೆ ಬೇರೆ ವಿಧಾನಗಳಿಂದ ಮಾರಾಟ ಮಾಡಿ ಲಾಭಗಳಿಸುತ್ತಾರೆ. ಕೆಲವರು ಕರ್ನಾಟಕ ಕರಾವಳಿಯಿಂದ ಕೇರಳ, ಗೋವಾ ಇಲ್ಲವೆ ರಾಜ್ಯದ ಒಳನಾಡಿನಲ್ಲಿ ಮಾರಾಟಮಾಡಿದರೆ ಕೆಲವರು ಉಪ್ಪು ಹಾಕಿಟ್ಟು ಬೇಡಿಕೆ ಹೆಚ್ಚಿದಾಗ ಮಾರಾಟಮಾಡುತ್ತಾರೆ. ಕೆಲವರು ವಿದೇಶಗಳಿಗೆ ರಫ್ತು ಮಾಡುತ್ತಾರೆ. ಕೆಲವರು ಎಣ್ಣೆ ತೆಗೆದು ಎಣ್ಣೆ ಹಾಗೂ ಅದರ ಹಿಂಡಿಯನ್ನು ಬೇರೆ ಬೇರೆಯಾಗಿ ಮಾರಾಟ ಮಾಡುತ್ತಾರೆ. ಇನ್ನೂ ಕೆಲವರು ಗೊಬ್ಬರದ ಹುಳುಗಳನ್ನು ಕೊಂಡು ಅದರಿಂದ ತೆಂಗಿನ ಗಿಡಗಳ ಗೊಬ್ಬರಮಾಡಿ ಇಲ್ಲವೆ ಪ್ರಾಣಿಗಳ ಆಹಾರ ತಯಾರಿಸಿ ಮಾರಾಟ ಮಾಡುತ್ತಾರೆ.

ಹರಾಜಿನ ಮೂಲಕ ಮೀನುಕೊಳ್ಳುವವರು, ಮೀನುಗಾರರಿಗೆ ಕೊಂಡ ತಕ್ಷಣ ಹಣವನ್ನೆಲ್ಲಾ ಕೊಡದೆ ಅರ್ಧಭಾಗ ಇಲ್ಲವೆ ಶೇಕಡ 40 ರಷ್ಟು ಹಣಕೊಟ್ಟು ಉಳಿದ ಹಣವನ್ನು ಮೀನು ಮಾರಾಟದ ನಂತರ ಕೊಡುವ ಒಪ್ಪಂದದ ಮೇರೆಗೆ ಮೀನು ಕೊಳ್ಳುತ್ತಾರೆ. ಈ ಒಪ್ಪಂದಕ್ಕೆ ಹರಾಜು ಮಾಡಿದ ಸಂಘ, ಸಂಸ್ಥೆಯವರು ಜಾಮೀನಾಗಿರುತ್ತಾರೆ. ಕೆಲವು ಸಂದರ್ಭಗಳಲ್ಲಿ ಮೀನುಗಾರರಿಗೆ ಮೊದಲು ಕೊಟ್ಟ ಹಣ ಮಾತ್ರ ಸೇರಿ ಉಳಿದದ್ದು ನೀರಿನ ಮೇಲೆ ಬರೆದಿಟ್ಟುಕೊಳ್ಳುವಂತಾಗುತ್ತದೆ. ಇಂತಹ ಮೋಸಕ್ಕೆ ಹಲವು ಮುಗ್ಧ ಮೀನುಗಾರರು ಬಲಿಯಾಗಿರುವ ನಿದರ್ಶನಗಳಿವೆ. ಸಾಮಾನ್ಯವಾಗಿ ವ್ಯಾಪಾರದಲ್ಲಿ ಜನಪದರನ್ನು ಮೋಸಮಾಡುವುದು ಎಲ್ಲೆಡೆ ಕಂಡುಬರುತ್ತದೆ. ಕೇವಲ ನಂಬಿಕೆಯ ಆಧಾರದ ಮೇಲೆ ಅವರ ವ್ಯಾಪಾರನಡೆಯುತ್ತದೆ. ಕೆಲವು ವೇಳೆ ಮೀನುಗಾರರು ನಿಜಕ್ಕೂ ಅಸಹಾಯಕರಾಗುತ್ತಾರೆ. ಶ್ರಮಪಟ್ಟು ಹಿಡಿದ ಮೀನು ಹೆಚ್ಚಾಗಿದ್ದಾಗ ಅದನ್ನು ಹೇಗಾದರೂ ಮಾಡಿ ಮಾರಾಟ ಮಾಡಲೇಬೇಕಾಗುತ್ತದೆ. ಇಲ್ಲದಿದ್ದರೆ ಅದನ್ನು ರಕ್ಷಿಸಿಡುವುದು ಅವರಿಗೆ ಕಷ್ಟವಾಗುತ್ತದೆ. ಈ ಅಸಹಾಯಕ ಸ್ಥಿತಿಯನ್ನು ಅರಿತು ತಮ್ಮ ಲಾಭಕ್ಕಾಗಿ ಅವರ ಪರಿಶ್ರಮವನ್ನು ಬಳಸಿಕೊಳ್ಳುವ ವ್ಯಾಪಾರಿಗಳು ವರ್ಷ ವರ್ಷ ಶ್ರೀಮಂತರಾಗುತ್ತಾ ಹೋದರೆ ಮೀನುಗಾರರು ಇದ್ದ ಸ್ಥಿತಿಯಲ್ಲೇ ಉಳಿಯುತಿದ್ದಾರೆ. ಜನಪದ ವ್ಯವಹಾರದಲ್ಲಾಗುತ್ತಿರುವ ಮೋಸವನ್ನು ನಿಲ್ಲಿಸಬೇಕಾದರೆ ಹಿಡಿದ ಮೀನನ್ನು ಸರ್ಕಾರವೇ ಕೊಂಡುಕೊಳ್ಳುವ ವಿಧಾನವು ಜಾರಿಗೆ ಬರಬೇಕಾಗಿದೆ.

ಆ) ಗುತ್ತಿಗೆ ಮಾರಾಟ :-

ಹಿಡಿದ ಮೀನನ್ನು ಒಟ್ಟಾಗಿ ಮಾರಾಟ ಮಾಡುವ ಎರಡನೇ ವಿಧಾನವೆಂದರೆ ಗುತ್ತಿಗೆ ಮಾರಾಟ. ಇದು ಪ್ರಾಚೀನ ಜನಪದ ವ್ಯಾಪಾರ ಪದ್ಧತಿಯಾಗಿದೆ. ಈ ವಿಧಾನದಲ್ಲಿ ಮೀನುಗಾರರು ಸಾಲಗಾರರಾಗಿ ಹಿಡಿದ ಮೀನನ್ನು ಸಾಲ ತೀರಿಸಲು ಕೊಡುತ್ತಾಹೋಗುತ್ತಾರೆ. ವ್ಯಾಪಾರಿಗಳು ಮೀನು ಬೇಟೆಯ ಕಾಲವಿಲ್ಲದ ಸಂದರ್ಭದಲ್ಲಿ ಮೀನುಗಾರರಿಗೆ ಮುಂಗಡವಾಗಿ ಹಣಕೊಟ್ಟು ಮೀನು ಬೇಟೆಯಕಾಲದಲ್ಲಿ ಹಿಡಿದ ಮೀನನ್ನು ತಮಗೇ ಕೊಡುವಂತೆ ಒಪ್ಪಂದ ಮಾಡಿಕೊಳ್ಳುತ್ತಾರೆ. ಈ ಒಪ್ಪಂದದ ಪ್ರಕಾರ ಮೀನುಗಾರರು ಮುಂಗಡ ಹಣ ಪಡೆದವರಿಗೆ ಮಾರುಕಟ್ಟೆಯ ಬೆಲೆಯನುಸಾರ ಮೀನನ್ನು ಮಾರಾಟ ಮಾಡುತ್ತಾರೆ. ಕೆಲವು ವೇಳೆ ಹಿಡಿದ ಮೀನನ್ನು ಗುತ್ತಿಗೆದಾರರು ಕೇಳಿದ ಬೆಲೆಗೆ ಕೊಡಬೇಕಾಗುತ್ತದೆ. ಏಕೆಂದರೆ ಸಾಲಗಾರನಾದ ಮೀನುಗಾರನು ಗುತ್ತಿಗೆದಾರನ ವಿರುದ್ಧ ಹೋಗುವಂತಿಲ್ಲ. ಈ ಸಮಸ್ಯೆಯನ್ನು ಬಗೆಹರಿಸುವ ಸಲುವಾಗಿ ಸಹಕಾರಿ ಸಂಘಗಳು ಹುಟ್ಟಿಕೊಂಡವು. ಅವು ಮೀನುಗಾರರಿಗೆ ಅಗತ್ಯಬಿದ್ದಾಗ ಸಾಲ ನೀಡಿ ಮೀನು ಹಿಡಿವ ಕಾಲದಲ್ಲಿ ಅವರು ಮಾರಾಟ ಮಾಡಿದ ಮೀನಿನ ಹಣದಿಂದ ಸಾಲದ ಕಂತುನ್ನು ಕಟ್ಟುವ ಅವಕಾಶ ನೀಡಿವೆ. ಆದರೆ ಹಿಡಿದ ಮೀನನ್ನು ಸಾಲ ನೀಡಿದ ಸಹಕಾರಿ ಸಂಘಗಳ ಹೊರತು ಬೇರಾರಿಗೂ ಮಾರಾಟ ಮಾಡುವಂತಿಲ್ಲ. ಗುತ್ತಿಗೆಯ ಆಧಾರದ ಮೇಲೆ ಮೀನುಕೊಳ್ಳುವವರು ತಮಗೆ ಹೆಚ್ಚು ಲಾಭ ಬರುವ ಸ್ಥಳಗಳಲ್ಲಿ ಅದನ್ನು ಮಾರಾಟ ಮಾಡಿಕೊಳ್ಳುತ್ತಾರೆ. ಕೆಲವರು ಒಳನಾಡಿನ ಪ್ರಮುಖ ಸ್ಥಳಗಳಾದ ಬೆಂಗಳೂರು, ಮೈಸೂರು, ಬೆಳಗಾಂ ಶಿವಮೊಗ್ಗ, ಹುಬ್ಬಳ್ಳಿ, ಮೊದಲಾದ ಸ್ಥಳಗಳಿಗೆ ಕೊಂಡೊಯ್ದು ಮಾರಾಟ ಮಾಡಿದರೆ, ಕೆಲವರು ಕೊಚ್ಚಿ, ಪೂನಾ ಗೋವಾ ಮೊದಲಾದ ಹೊರರಾಜ್ಯಗಳಲ್ಲಿ ಮಾರಾಟ ಮಾಡುತ್ತಾರೆ. ಶೈತ್ಯಾಗಾರಗಳಲ್ಲಿ ಸಂರಕ್ಷಿಸಿಟ್ಟು ಬೇಡಿಕೆ ಹೆಚ್ಚಾದಾಗ ಮಾರಾಟ ಮಾಡುತ್ತಾರೆ ಇಲ್ಲವೆ ವಿದೇಶಗಳಿಗೆ ರಫ್ತುಮಾಡುತ್ತಾರೆ. ಹೀಗೆ ವಿದೇಶಗಳಿಗೆ ರಫ್ತಾಗುವ ಮೀನನ್ನು, ಮೇಲಿನ ಎರಡು ವಿಧಾನಗಳಿಂದ ಕೊಳ್ಳುತ್ತಾರೆ. ಈ ಇವೆರಡೂ ವಿಧಾನಗಳಿಗೆ ಜನಪದ ವ್ಯಾಪಾರ ಪದ್ಧತಿಯೇ ಮೂಲ.

ಇ) ಚಿಲ್ಲರೆ ಮಾರಾಟ :

ಈ ವಿಧಾನವು ಪರಿಪೂರ್ಣವಾಗಿ ಜನಪದ ವ್ಯವಹಾರವಾಗಿದೆ. ಇದರಲ್ಲಿ ತಕ್ಕಡಿಯ ಸಹಾಯದ ಮಾರಾಟವಿರುವುದಿಲ್ಲ. ಮೀನಿನ ಸಂಖ್ಯೆಗೆ ಅನುಗುಣವಾಗಿ ಬೆಲೆಕಟ್ಟುತ್ತಾರೆ. ಮೀನನ್ನು ಚಿಲ್ಲರೆ ಮಾರಾಟ ಮಾಡುವವರು ಹೆಂಗಸರಾಗಿದ್ದು, ಇವರು ದೋಣಿಯವರಿಂದ ಇಲ್ಲವೆ ಹರಾಜಿನಲ್ಲಿ ಒಂದೊಂದು ಬುಟ್ಟಿ ಮೀನು ಕೊಂಡು ಊರಿನ ಮಾರುಕಟ್ಟೆಯಲ್ಲಿ ಇಲ್ಲವೆ ಬೀದಿಗಳಲ್ಲಿ ಮಾರಾಟ ಮಾಡುತ್ತಾರೆ. ನಾಡದೋಣಿಯವರು ತಾವು ಹಿಡಿದ ಮೀನನ್ನು ತಮ್ಮ ಮನೆಯ ಹೆಂಗಸರಿಂದ ಮಾರಾಟ ಮಾಡಿಸುತ್ತಾರೆ. ಇವರು ಬಸ್ಸಿನ ಟ್ಯುಬನ್ನು ಹರಿದು ಅಗಲವಾಗಿ ಬುಟ್ಟಿಯಲ್ಲಿ ಹಾಸಿ ಅದರಲ್ಲಿ ಮೀನಿಟ್ಟುಕೊಳ್ಳುತ್ತಾರೆ. ಇದರಿಂದ ಮೀನಿನ ನೀರು ತಲೆಯ ಮೇಲೆ ಬೀಳದೆ ರಬ್ಬರಿನಲ್ಲೇ ಉಳಿಯುತ್ತದೆ. ಮೀನು ವ್ಯಾಪಾರದ ಹೆಂಗಸರು ಬಾಂಗಡೆ, ಬೈಗೆ, ದೋಡಿ ಮೊದಲಾದ ಮೀನನ್ನು ಹತ್ತು ರೂಪಾಯಿಗೆ ಇಷ್ಟೆಂದು ಲೆಕ್ಕಹಾಕಿ ಮಾರಾಟ ಮಾಡಿದರೆ, ಏಡಿಯನ್ನು ಗುಡ್ಡೆಹಾಕಿ, ಹಸಿ ಸೀಗಡಿಯನ್ನು ನೂರರಲೆಕ್ಕದಲ್ಲಿ ಮಾರಾಟ ಮಾಡುತ್ತಾರೆ. ನೋಗ್ಲಿ, ಅಡುಮೀನು ಮೊದಲಾದವುಗಳನ್ನು ತೆಂಗಿನ ಗರಿಯಲ್ಲಿ ಪೋಣಿಸಿ ಕ್ವಾವೆ(ಹಾರ) ಮಾಡಿ ಒಂದು ಕ್ವಾವೆಗೆ ಹತ್ತು ರೂಪಾಯಿಯಿಂದ ಹದಿನೈದು- ಇಪ್ಪತ್ತು ರೂಪಾಯಿಗಳವರೆಗೆ ಮಾರಾಟ ಮಾಡುತ್ತಾರೆ. ಇದೇ ರೀತಿ ಚಿಪ್ಪುಮೀನನ್ನು ನೂರರಲೆಕ್ಕದಲ್ಲಿ, ಇಸ್ವಾನ್ ಮೀನಾದರೆ ಒಂದು ಕೆ.ಜಿ. ಗೆ100 ರೂಪಾಯಿಗಳಿಂದ120 ರೂಪಾಯಿಗಳವರೆಗೆ ಮಾರಾಟ ಮಾಡುತ್ತಾರೆ. ಕೆ.ಜಿ. ಲೆಕ್ಕದಲ್ಲಿ ಮಾರಾಟ ಮಾಡುವವರು ಪುರುಷರಾಗಿರುತ್ತಾರೆ.

ಚಿಲ್ಲರೆ ಮಾರಾಟ ಮಾಡುವ ಪ್ರತಿ ಹೆಂಗಸು ದಿನಕ್ಕೆ 100 ರೂಪಾಯಿಯಿಂದ 200 ರೂಪಾಯಿಗಳವರೆಗೆ ಸಂಪಾದಿಸುತ್ತಾಳೆ. ವ್ಯಾಪಾರದಲ್ಲಿ ಚತುರರಾದ ಇವರು ಗಿರಾಕಿಗಳಿಗೆ ಮಾತಿನಲ್ಲಿ ಆಕರ್ಷಿಸಿ ಬುಟ್ಟಿ ಖಾಲಿ ಮಾಡಿಕೊಳ್ಳುತ್ತಾರೆ. ಅವರಾಡುವ ಮಾತುಗಳನ್ನು ಗಮನಿಸಿದಾಗ ಅವರನ್ನು ಯಾರೂ ಅನಕ್ಷರಸ್ಥರೆಂದು ಹೇಳುವುದಿಲ್ಲ ಅಲ್ಲದೆ ಸರ್ಕಾರದ ಅಂಕಿ ಅಂಶದ ಪಟ್ಟಿಯಲ್ಲಿ ಇವರ ವಹಿವಾಟಿನ ಲೆಕ್ಕ ಸೇರುವುದಿಲ್ಲ.

ಡಿ) ಉಪ್ಪು ಹಾಕಿದ ಹಸಿ ಮೀನಿನ ಮಾರಾಟ :

ಹಸಿ ಮೀನಿಗೆ ಬೇಡಿಕೆ ಕಡಿಮೆ ಇರುವಾಗ ಉಪ್ಪು ಹಾಕಿ ರಕ್ಷಿಸಿಟ್ಟು ಬೇಡಿಕೆ ಹೆಚ್ಚಾದಾಗ ಅದನ್ನು ಮಾರಾಟ ಮಾಡುತ್ತಾರೆ. ಉಪ್ಪಿನಲ್ಲಿ ಮೀನನ್ನು ರಕ್ಷಿಸಿಟ್ಟು ಮಾರಾಟ ಮಾಡುವ ವಿಧಾನವು ಬಹು ಪ್ರಾಚೀನವಾದ ಜನಪದ ವಿಧಾನ. ಈ ವಿಧಾನವು ಮೀನುಗಾರರನ್ನು ಇಂದಿಗೂ ನಷ್ಟದಿಂದ ರಕ್ಷಿಸುತ್ತಿದೆ. ಸಮುದ್ರದ ದಡದಲ್ಲಿ ತೆಂಗಿನಗರಿಯ ಗುಡಿಸಿಲಿನಲ್ಲಿ ಏಳೆಂಟು ಅಡಿ ಆಳದ ಸೀಮೆಂಟಿನ ತೊಟ್ಟಿಗಳು ಉಪ್ಪು ಹಾಕಿದ ಮೀನನ್ನು ರಕ್ಷಿಸುವ ತಾಣಗಳಾಗಿವೆ. ಆ ತೊಟ್ಟಿಗಳಲ್ಲಿ ದೊಡ್ಡ ಗಾತ್ರ ಮೀನನ್ನು ಸಿಗಿದು ತೊಳೆದು ಉಪ್ಪು ಹಾಕಿಡುತ್ತಾರೆ. ಚಿಕ್ಕ ಮೀನಾದರೆ ಇಡಿಯಾಗಿ ಉಪ್ಪಿನಲ್ಲಿಡುತ್ತಾರೆ.

ಸಿಗಿದು ಉಪ್ಪುಹಾಕುವ ಮೀನುಗಳಲ್ಲಿ ಪ್ರಮುಖವಾದವೆಂದರೆ ಬಾಂಗಡಿ, ಕೊಡುವಾಯಿ, ಮೊಗ್ರ, ಸೊರ, ಅರುಕಳಿ, ಗ್ಯಾದ್ರಿ, ಸ್ಯಾಡಿ, ಕೊಕ್ರ, ಮೊಗ್ಗ, ತೊರ್ಕಿ, ಹಲಗೆಮೀನು, ಉಳಿಯಾ, ಸನ್ಯಾಸಿ ಮೀನು, ಹಾಯಿ ಮೀನು, ಗೋಲಿ ಮೀನು ಇತ್ಯಾದಿ. ಮಾಂಸ ಮತ್ತು ಮೀನು ರಕ್ಷಣೆಯ ಈ ಜನಪದ ವಿಧಾನದಲ್ಲಿ ಹನ್ನೆರಡು ತಿಂಗಳವರೆಗೆ ಮೀನನ್ನು ಕೆಡದಂತೆ ಇಡುತ್ತಾರೆ. ಆದರೆ ಆಗಾಗ್ಗೆ ಅದನ್ನು ಪರೀಕ್ಷಿಸುತ್ತಿರಬೇಕು . ಒಂದು ವರ್ಷದೊಳಗೆ ಮೀನಿಗೆ ಹೆಚ್ಚು ಬೆಲೆ ಯಾವಾಗ ಬರುತ್ತದೆಯೋ ಆಗ ತೊಟ್ಟಿಯಿಂದ ಅದನ್ನು ಹೊರ ತೆಗೆದು ಮಾರಾಟ ಮಾಡುತ್ತಾರೆ. ಕೆಲವು ಜಾತಿಯ ಮೀನನ್ನು ಕೆ.ಜಿ. ಲೆಕ್ಕದಲ್ಲಿ ಕೆಲವು ಜಾತಿಯ ಮೀನನ್ನು ನೂರರಲೆಕ್ಕದಲ್ಲಿ ಮಾರಾಟ ಮಾಡುವುದು ರೂಢಿಯಲ್ಲಿದೆ. ಉಪ್ಪಿನ ಮೀನು ಕೊಳ್ಳುವವರಿಗೆ "ಕಮಾನುವ್ಯಾಪಾರಸ್ಥರು" ಎಂದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕರೆಯುತ್ತಾರೆ. ಇವರು ಮೀನು ತೊಟ್ಟಿಯಲ್ಲಿರುವಾಗಲೇ ಅದರ ಬೆಲೆ ಕಟ್ಟಿ ಮುಂಗಡವಾಗಿ ಸ್ವಲ್ಪ ಹಣಕೊಟ್ಟು ಮೀನನ್ನು ಕಾಯ್ದಿರಿಸಿಕೊಳ್ಳುತ್ತಾರೆ ಮಾರುಕಟ್ಟೆಯಲ್ಲಿ ಮೀನಿಗೆ ಬೆಲೆ ಹೆಚ್ಚಾದಾಗ ತೊಟ್ಟಿಯಿಂದ ಅದನ್ನು ಹೊರತೆಗೆದು ತೆಂಗಿನ ಮಡಲಿನಲ್ಲಿಟ್ಟು "ಮುಡಿಕಟ್ಟಿದ"ಹಾಗೆ ಕಟ್ಟುತ್ತಾರೆ. ತೂಕದ ಲೆಕ್ಕದಲ್ಲಿ ಮಾರಾಟ ಮಾಡುವ ಮೀನನ್ನು ಅನುಭವ ಜ್ಞಾನದಿಂದ ಸಿದ್ದಮಾಡಿಕೊಂಡಿರುವ ಒಂದು ಮಣದ ತೂಕದ ಕಲ್ಲಿನಿಂದ ತೂಕಮಾಡಿ ತೆಂಗಿನ ಮಡಲಿನಲ್ಲಿ ''ಕೊಟ್ಟೆ'' ಕಟ್ಟಿ ಮಾರುಕಟ್ಟೆಗೆ ರವಾನಿಸುತ್ತಾರೆ. ಇದರ ತೂಕದ ಕಲ್ಲು ಗುಂಡಗಿದ್ದು ಬಿಳಿ ಕಲ್ಲಾಗಿರುತ್ತದೆ. ಇದು ಜನಪದ ವ್ಯಾಪಾರದ ತೂಕದ ಸಾಧನಗಳಲ್ಲೊಂದಾಗಿದೆ. ಉಪ್ಪು ಹಾಕಿದ ಹಸಿ ಮೀನು ಮೂರು ವ್ಯಾಪಾರಿಗಳ ಕೈಬದಲಾಗಿ ಕೊನೆಯದಾಗಿ ಬಳಸುವವನಿಗೆ ಸೇರುತ್ತದೆ. ಮೊದಲು ಕಮಾನು ವ್ಯಾಪಾರಿ ಮೀನುಗಾರರಿಂದ ಮೀನು ಕೊಳ್ಳುತ್ತಾನೆ. ಅದನ್ನು ಅವನು ಮಾರುಕಟ್ಟೆಯ ವ್ಯಾಪಾರಿಗೆ ಮಾರುತ್ತಾನೆ ಅಲ್ಲಿಂದ ಚಿಲ್ಲರೆ ವ್ಯಾಪಾರಿಗಳ ಕೈಗೆ ಅದು ಬದಲಾಗಿ ಅವರಿಂದ ಗ್ರಾಹಕರಿಗೆ ಸೇರುತ್ತದೆ. ಮೊದಲಿನಿಂದ ಕೊನೆಯವರೆಗೆ ಯಾವ ಲಿಖಿತದ ಒಪ್ಪಂದವಿಲ್ಲದೆ ಕೇವಲ ವಿಶ್ವಾಸದ ಆಧಾರದ ಮೇರೆಗೆ ಇವರ ನಡುವಿನ ವ್ಯವಹಾರಿಕ ಸಂಬಂಧಗಳು ಮುಂದುವರಿಯುತ್ತವೆ. ಜನಪದರ ವ್ಯವಹಾರಕ್ಕೆ ನಂಬಿಕೆಯೇ ಮುಖ್ಯ. ಇಂದಿಗೂ ಇದು ಮೀನು ವ್ಯಾಪಾರದಲ್ಲಿ ಉಳಿದುಕೊಂಡಿರುವುದು ಗುಮನಾರ್ಹ. ಇಡಿಯಾಗಿ ಉಪ್ಪಿನಲ್ಲಿ ಹಾಕುವ ಚಿಕ್ಕ ಮೀನನ್ನು ಐದಾರು ತಿಂಗಳವರೆಗೆ ಮಾತ್ರ ರಕ್ಷಿಸಿಡಬಹುದು ಅದರ ನಂತರ ಅದನ್ನು ಇಟ್ಟರೆ ಅದು ಪುಡಿಯಾಗಿ ರುಚಿಕಳೆದುಕೊಳ್ಳುವ ಸಂಭವ ಉಂಟು ಆದ್ದರಿಂದ ಐದಾರು ತಿಂಗಳೊಳಗೇ ಆ ಮೀನನ್ನು ಮಾರಾಟ ಮಾಡಿಬಿಡುತ್ತಾರೆ.

ಮೀನಗಾರರು ಮೀನು ತೂಗುವಾಗ ಮಣದ ಲೆಕ್ಕದಲ್ಲಿಯೇ ತೂಗುತ್ತಾರೆ. 13 ಕೆ.ಜಿ. ಗೆ ಒಂದು ಮಣವೆಂದು ನಿರ್ಧರಿಸಿಕೊಂಡಿರುತ್ತಾರೆ. ಒಂದೊಂದು ಕೊಟ್ಟೆಯಲ್ಲಿ ಮೂರು ಮಣ ಮೀನನ್ನು ತುಂಬಿರುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉಪ್ಪುಹಾಕಿದ ಹಸಿ ಮೀನನ್ನು ''ಖಾರ್ವಣಿ'' ಎಂದು ಕರೆಯುವ ವಾಡಿಕೆ ಇದೆ. ಉಪ್ಪು ಹಾಕಿದ ಮೀನನ್ನು ಕೊಳ್ಳುವ ವ್ಯಾಪಾರಿಗಳು ಕೇರಳ, ಗೋವಾದವರಾಗಿರುತ್ತಾರೆ. ಇವರು ಕೊಂಡ ಮೀನಿನಲ್ಲಿ ಶ್ರೇಷ್ಠ ಜಾತಿಯ ಇಸ್ವಾನ್, ಪಾಂಪ್ಲೇಟ್ ಮೊದಲಾದ ಮೀನನ್ನು ರಫ್ತುಮಾಡುತ್ತಾರೆ. ಕರಾವಳಿಯ ಜನರಿಗೆ ಪ್ರಿಯವಾಗದ ಗೇದಳ್ ಎಂಬ ಮೀನು ಶ್ರೀಲಂಕದ ಜನರಿಗೆ ಹೆಚ್ಚುಪ್ರಿಯ. ಆದ್ದರಿಂದ ಉಪ್ಪಿನ ಗೇದಳ್ ಅನ್ನು ಶ್ರೀಲಂಕಾಕ್ಕೆ ರಫ್ತು ಮಾಡುತ್ತಾರೆ. ಬೇಟೆ ಇಲ್ಲದಿರುವಾಗ ಉಪ್ಪಿನ ಹಸಿ ಮೀನಿಗೆ ಹೆಚ್ಚಿನ ಬೇಡಿಕೆ. ಈ ಮೀನಿನ ಪದಾರ್ಥ ಮಾಡುವುದು ಕರಾವಳಿಯ ಜನರಿಗೆ ಮಾತ್ರ ಚೆನ್ನಾಗಿ ತಿಳಿದಿದೆ. ಬೇರೆಯವರಾದರೆ ಮೀನಿನ ಹುಳಿಯನ್ನೆಲ್ಲಾ ಉಪ್ಪಾಗಿಸಿ ಬಾಯಲ್ಲಿ ಇಡದಂತೆ ಮಾಡುತ್ತಾರೆ.

ಹಸಿಮೀನಿನ ಮಾರಾಟದಲ್ಲಿ ಉಪ್ಪುಹಾಕಿದ ಮೀನು ಎರಡನೇ ಹಂತದ್ದು. ಆಗತಾನೆ ಹಿಡಿದು ಮಾರಾಟ ಮಾಡುವ ತಾಜ ಮೀನಿಗೆ ಜನ ಇಷ್ಟಪಡುವಷ್ಟು ಉಪ್ಪು ಹಾಕಿದ ಮೀನಿಗೆ ಇಷ್ಟಪಡುವುದಿಲ್ಲ. ಆದರೆ ಆಗ ತಾನೆ ಹಿಡಿದ ಮೀನಿನಿಂದ ಮೀನುಗಾರರು ಕೆಲವು ವೇಳೆ ನಷ್ಟಅನುಭವಿಸುವ ಸಂಭವ ಒದಗಿದರೂ ಉಪ್ಪುಹಾಕಿದ ಮೀನಿನಿಂದ ಅವರಿಗೆ ನಷ್ಟ ಕಡಿಮೆ.

3) ಒಣಮೀನಿನ ಮಾರಾಟ :

ಉಪ್ಪು ಹಾಕಿದ ಮೀನನ್ನು ಒಣಗಿಸಿ ಮಾರಾಟ ಮಾಡುವ ವಿಧಾನವು ಸಹ ಪ್ರಾಚೀನ ಜನಪದ ವಿಧಾನವೇ ಆಗಿದೆ. ಮೊದಲು ಉಪ್ಪುಹಾಕದ ಮೀನನ್ನು ಒಣಗಿಸಿ ಮಾರಾಟ ಮಾಡುವ ವಿಧಾನ ಜಾರಿಯಲ್ಲಿತ್ತು. ಇಂದು ಮೀನು ಹೆಚ್ಚಿನ ಪ್ರಮಾಣದಲ್ಲಿ ಸಿಕ್ಕಾಗ ಅದನ್ನು ಒಣಗಿಸಿ ಮಾರಾಟ ಮಾಡುವಾಗ ಎರಡು ವಿಧಾನಗಳನ್ನು ಅನುಸರಿಸುತ್ತಾರೆ.

ಮೀನನ್ನು ಒಣಗಿಸುವಾಗ ಶ್ರೇಷ್ಠ ಮೀನನ್ನು ಮನುಷ್ಯರ ಆಹಾರಕ್ಕಾಗಿ ಒಣಗಿಸಿದರೆ ಕನಿಷ್ಠ ಜಲಚರಗಳನ್ನು ಪ್ರಾಣಿ ಹಾಗೂ ಪಕ್ಷಿಗಳ ಆಹಾರಕ್ಕಾಗಿ ಒಣಗಿಸಲಾಗುತ್ತದೆ. ಒಣಮೀನಿನ ಮಾರಾಟದಲ್ಲಿ ಮೀನು ಮೂರು ವ್ಯಾಪಾರಿಗಳ ಕೈ ಬದಲಾಗುತ್ತದೆ. ಮೊದಲು ಮೀನುಗಾರರಿಂದ ವ್ಯಾಪಾರಿಗಳು ಕೊಳ್ಳುತ್ತಾರೆ. ಅವರಿಂದ ಮಾರುಕಟ್ಟೆಯಲ್ಲಿ ಸಗಟುವ್ಯಾಪಾರಿಗಳು ಕೊಂಡು ಚಿಲ್ಲರೆ ವ್ಯಾಪಾರಿಗಳಿಗೆ ಮಾರಾಟ ಮಾಡುತ್ತಾರೆ.

ಒಳನಾಡಿನಲ್ಲಿ ಒಣಮೀನಿಗೆ ಸದಾ ಬೇಡಿಕೆ ಇದ್ದರೆ ಕರಾವಳಿಯಲ್ಲಿ ಮಳೆಗಾಲದಲ್ಲಿ ಮಾತ್ರ ಒಣಮೀನಿಗೆ ಹೆಚ್ಚು ಬೇಡಿಕೆ. ಪಶುಪಕ್ಷಿಗಳ ಆಹಾರಕ್ಕಾಗಿ ಹೋಗುವ ಮೀನಿಗೆ ಸರ್ವಕಾಲಿಕ ಬೇಡಿಕೆ ಇದೆ. ಒಣಮೀನುಗಳಲ್ಲಿ ಇಸ್ವಾನ್ ಮೀನನ್ನು ತೂಕದ ಲೆಕ್ಕದಲ್ಲಿ ಮಾರಾಟ ಮಾಡಿದರೆ ಬಾಂಗಡಿ, ದೋಡಿ, ಮೊದಲಾದ ಮೀನನ್ನು ಎಣಿಕೆಯ ಲೆಕ್ಕದಲ್ಲಿ ಮಾರುತ್ತಾರೆ. ಇದೇರೀತಿ ಸೀಗಡಿ ಯನ್ನು ಒಣಗಿಸಿ ಹಳೆಯ ಅಳತೆಯ ಸಾಧನಗಳಾದ ಹಾನೆ, ಸಿದ್ದಿ ಮೊದಲಾದವುಗಳಿಂದ ಅಳತೆ ಮಾಡಿ ಮಾರಾಟ ಮಾಡುವ ಜನಪದ ಪದ್ಧತಿ ಇಂದಿಗೂ ಕರಾವಳಿಯಲ್ಲಿ ರೂಢಿಯಲ್ಲಿದೆ. ಹಣವನ್ನು ಪಾವಲಿ, ಲೆಕ್ಕದಲ್ಲಿ ಎಣಿಸುತ್ತಾರೆ. ಆರು ಪಾವಲಿಗೆ ಇಷ್ಟು ಮೀನು ಎಂದು ಲೆಕ್ಕ ಹಾಕುತ್ತಾರೆ. ರೂಪಾಯಿ ಲೆಕ್ಕದಲ್ಲಿ ಹಣ ಎಣಿಸುವ ರೀತಿಯು ಎರಡು ರೂಪಾಯಿಗಳ ನಂತರದ್ದಾಗಿರುತ್ತದೆ. ಕರ್ನಾಟಕ ಕರಾವಳಿಯಿಂದ ಹೊರಡುವ ಒಣಮೀನು ಕೇರಳಾ, ಗೋವಾ ಮೊದಲಾದ ರಾಜ್ಯಗಳಲ್ಲಿ ಹಾಗೂ ಕರ್ನಾಟಕದ ಒಳನಾಡಿನ ಪ್ರದೇಶಗಳಲ್ಲಿ ಮಾರಾಟವಾಗುತ್ತದೆ. ಶ್ರೇಷ್ಠ ಜಾತಿಯ ಮೀನು ವಿದೇಶಗಳಿಗೆ ರಫ್ತಾಗುತ್ತದೆ.

ಕರ್ನಾಟಕ ಕರಾವಳಿಯಲ್ಲಿ ಜೂನ್ ನಿಂದ ಸೆಪ್ಟಂಬರ ವರೆಗೆ ಒಣಮೀನಿಗೆ ಬೇಡಿಕೆ ಇರುತ್ತದೆ. ಹಸಿಮೀನು ಸಿಗುವ ಕಾಲದಲ್ಲಿ ಒಣಮೀನಿಗೆ ಬೆಲೆ ಕಡಿಮೆ ಆ ಸಂದರ್ಭದಲ್ಲಿ ಒಳರಾಜ್ಯದ ವ್ಯಾಪಾರಿಗಳು ಒಣಮೀನು ಕೊಳ್ಳಲು ಬರುತ್ತಾರೆ. ಆಗ ಪ್ರತಿ ಟನ್ನಿಗೆ 1000 ದಿಂದ 5000 ರೂಪಾಯಿಗಳವರೆಗೆ ಒಣಮೀನಿನ ಬೆಲೆ ಇರುತ್ತದೆ. ಮೇ ಮಾಹೆಯಲ್ಲಿ ಅದರ ಬೆಲೆ ಟನ್ನಿಗೆ 10,000 ರೂಪಾಯಿಗಳಿಗೆ ಏರುತ್ತದೆ. ಏಕೆಂದರೆ ಜೂನ್ ನಂತರ ಮೀನನ್ನು ಒಣಗಿಸುವ ಕೆಲಸ ನಿಲ್ಲುತ್ತದೆ. ಆದರೆ ಬೇಡಿಕೆ ಹೆಚ್ಚಾಗುತ್ತದೆ. ಇದನ್ನರಿತ ವ್ಯಾಪಾರಿಗಳು ಏಪ್ರಿಲ್, ಮೇ ಮಾಹೆಯಲ್ಲೇ ಒಣಮೀನನ್ನು ಕೊಂಡು ರಕ್ಷಿಸಿಟ್ಟುಕೊಳ್ಳುತ್ತಾರೆ. ಕೆಲವು ಸಂದರ್ಭಗಳಲ್ಲಿ ರಕ್ಷಿಸಿಡಲು ಮೀನುಗಾರರಿಗೆ ಸರಿಯಾದ ಸೌಲಭ್ಯಗಳಿಲ್ಲದೇ ಇರುವುದರಿಂದ ಕಡಿಮೆ ದರದಲ್ಲಿ ಅದನ್ನು ಮಾರಾಟ ಮಾಡುವುದು ಅವರಿಗೆ ಅನಿವಾರ್ಯವಾಗುತ್ತದೆ. ಕರಾವಳಿಯಲ್ಲಿ ಜೂನ್‌ವರೆಗೆ ಒಣಮೀನಿನ ಚಿಲ್ಲರೆ ಮಾರಾಟದ ಬೆಲೆ ಕೆ.ಜಿ.ಗೆ 3 ರಿಂದ 5 ರೂಪಾಯಿಗಳವರೆಗೆ ಇದ್ದು, ಜೂನ್ ನಿಂದ ಸೆಪ್ಟಂಬರವರೆಗೆ 5 ರಿಂದ 15 ಕ್ಕೆ ಏರುತ್ತದೆ. ಇದೇ ಮೀನು ಒಳರಾಜ್ಯದಲ್ಲಿ ಜೂನ್‌ವರೆಗೆ 5 ರಿಂದ15 ರವರೆಗೆ ಮಾರಾಟವಾಗುತ್ತಿದ್ದು. ಜೂನ್‌ನಿಂದ ಸೆಪ್ಟಂಬರ್‌ವರೆಗೆ 15 ರಿಂದ 30 ರೂಪಾಯಿಗಳವರೆಗೆ ಏರುತ್ತದೆ. ಆದರೂ ಹಸಿಮೀನಿಗೆ ಇರುವಷ್ಟು ಬೇಡಿಕೆ ಒಣಮೀನಿಗೆ ಇಲ್ಲ. ಹಸಿಮೀನಿಗಿಂತ ಒಣಮೀನನ್ನು ಉಪಯೋಗಿಸುವವರ ಸಂಖ್ಯೆ ಕಡಿಮೆ ಇರುವುದರಿಂದ ಅದರ ಬೆಲೆಸಹ ಕಡಿಮೆಯೇ ಇರುತ್ತದೆ.

4) ಮೀನೆಣ್ಣೆಯ ತಯಾರಿಕೆ ಮತ್ತು ಮಾರಾಟ :

ಮೀನು ಎಂದ ತಕ್ಷಣ ಪ್ರತಿಯೊಬ್ಬರು ಯೋಚಿಸುವುದು ಅದು ಒಂದು ಆಹಾರಕ್ಕಾಗಿ ಬಳಸುವ ಜಲಪರ ಪ್ರಾಣಿ ಎಂದು. ಪ್ರಮುಖವಾಗಿ ಅದು ಆಹಾರಕ್ಕಾಗಿ ಉಪಯೋಗವಾಗುತ್ತಿದ್ದರೂ ಅದನ್ನು ಔಷಧಿಯ ರೂಪದಲ್ಲಿ ಬಳಸುತ್ತಿರುವುದು ಬಹಳ ಮಂದಿಗೆ ತಿಳಿದಿಲ್ಲ. ಎಣ್ಣೆಕಾಳುಗಳ ಎಣ್ಣೆಗಿಂತ ಮೀನೆಣ್ಣೆಯ ಬಳಕೆಯ ಉದ್ದೇಶ ಭಿನ್ನವಾದದ್ದು.

ಸಾಮಾನ್ಯವಾಗಿ ಮೀನೆಣ್ಣೆಯನ್ನು ಮೀನಿನ ಮಾಂಸದಿಂದ ಮತ್ತು ಅದರ ಪಿತ್ತಜನಕಾಂಗದಿಂದ ತೆಗೆಯುತ್ತಾರೆ. ಪಿತ್ತಜನಕಾಂಗದಿಂದ ತೆಗೆಯುವ ಎಣ್ಣೆಯಲ್ಲಿ ಅನ್ನಾಂಗ ಹೆಚ್ಚಿರುವುದರಿಂದ ಅದನ್ನು ಔಷಧಿಯಾಗಿ ಬಳಸುತ್ತಾರೆ. ಮೀನಿನ ಮಾಂಸದಿಂದ ತಯಾರಿಸುವ ಎಣ್ಣೆಯನ್ನು ಆಹಾರ ಮತ್ತು ವಸ್ತುಗಳನ್ನು ಸಿದ್ಧಪಡಿಸಲು ಉಪಯೋಗಿಸಲಾಗುತ್ತಿದೆ. ಯಾವ ಮೀನಿನ ಮಾಂಸದಲ್ಲಿ ಹೆಚ್ಚು ಎಣ್ಣೆ ಇರುತ್ತದೆಯೋ ಆ ಮೀನಿನ ಪಿತ್ತಜನಕಾಂಗದಲ್ಲಿ ಎಣ್ಣೆ ಅಂಶ ಕಡಿಮೆ ಇರುತ್ತದೆ. ಪಿತ್ತಜನಕಾಂಗದಲ್ಲಿ ಎಣ್ಣೆ ಅಂಶ ಹೆಚ್ಚಿರುವ ಮೀನಿನ ಮಾಂಸದಲ್ಲಿ ಎಣ್ಣೆಯ ಅಂಶ ಕಡಿಮೆ ಇರುತ್ತದೆ.

1) ಪಿತ್ತಜನಕಾಂಗದಿಂದ ಮೀನೆಣ್ಣೆ ತೆಗೆಯುವುದು :

ಎಣ್ಣೆ ತೆಗೆಯುವ ಕಾರ್ಯ ಮೊದಲು ಹಂತಗಳಲ್ಲಿ ನೆಡೆಯುತ್ತದೆ.

ಅ) ಪಿತ್ತಜನಕಾಂಗವನ್ನು ಕೊಚ್ಚುವುದು.

ಆ) ಬೇಯಿಸುವುದು, ಆವಿ ಮತ್ತು ನೀರು ಬೆರೆಸುವುದು

ಇ) ಎಣ್ಣೆಯನ್ನು ನೀರು ಮತ್ತಿತರ ಭಾಗಗಳಿಂದ ಬೇರ್ಪಡಿಸುವುದು

ಅ) ಪಿತ್ತಜನಕಾಂಗ ಕೊಚ್ಚುವುದು :

ಶಾರ್ಕ್, ಹೆಡಾಕ್ ಮೊದಲಾದ ಮೀನಿನ ಪಿತ್ತಜನಕಾಂಗವನ್ನು ತಿರುಗುತ್ತಿರುವ ಅಚ್ಚಿನ ಮೇಲೆ ಹರಿತವಾದ ಚಾಕುಗಳಿಂದ ಕತ್ತರಿಸಿ ಚೂರು ಚೂರು ಮಾಡುತ್ತಾರೆ. ಈ ಚೂರುಗಳಿಗೆ ಶೇಕಡಾ 25 ಭಾಗದಷ್ಟು ಹೈಡ್ರೊಕ್ಲೋರಿಕ್ ಆಮ್ಲ ಬೆರಿಸಿ ಆ ಮಿಶ್ರಣದ ಪಿಚ್ 1:2 ರಿಂದ 1:5 ರಷ್ಟು ಪ್ರಮಾಣದಲ್ಲಿ ಇಟ್ಟು ಅದಕ್ಕೆ 0.05 ರಿಂದ 0.1 ರಷ್ಟು ಪೆಪಿನ್ ಎಂಬ ಕಿಣ್ವವನ್ನು ಬೆರೆಸುತ್ತಾರೆ. ಮಿಶ್ರಣವನ್ನು ಚೆನ್ನಾಗಿ ಕುಲಕಿ ಅದನ್ನು ಒಂದು ಪ್ರಣಾಳಿಕೆಯಲ್ಲಿ ತೆಗೆದುಕೊಂಡು ಅದಕ್ಕೆ ಪ್ರತ್ಯಾಮ್ಲವನ್ನು ಹಾಕಿದಾಗ ಮಿಶ್ರಣವು ದ್ರಾವಣದಂತಾಗುತ್ತದೆ. ಇದನ್ನು ಪಿತ್ತಜನಕಾಂಗದ ಚೂರುಗಳನ್ನು ಬೇಯಿಸುವ ಪಾತ್ರೆಗೆ ವರ್ಗಾಯಿಸಿ ಅಲ್ಲಿ ದುರ್ಬಲ ಹೈಡ್ರೋಕ್ಲೋರಿಕ್ ಆಮ್ಲವನ್ನು ಅದಕ್ಕೆ ಸೇರಿಸುವುದರ ಮೂಲಕ ಎಣ್ಣೆ ವಿಭಜನೆಯಾಗದಂತೆ ನೋಡಿಕೊಳ್ಳುತ್ತಾರೆ.

ಆ) ಬೇಯಿಸುವುದು, ಆವಿ ಮತ್ತು ನೀರು ಬೆರಸುವುದು :

ಪಿತ್ತಜನಕಾಂಗ ಬೇಯಿಸಲು ಮರದ ಇಲ್ಲವೇ ಡ್ರಮ್ಮಿನಾಕಾರದ ತಗಡಿನ ಪಿಪಾಯಿಗಳಿರುತ್ತವೆ. ಒಂದೊಂದು ಪಿಪಾಯಿ 12 ರಿಂದ 18 ಅಡಿ ಎತ್ತರವಿದ್ದು 6 ರಿಂದ 9 ಅಡಿ ವ್ಯಾಸ ಹೊಂದಿರುತ್ತದೆ. ಪಿಪಾಯಿಯ ಅಡಿಯಲ್ಲಿ ಆವಿ ಹಾಯಿಸಲು ಮತ್ತು ನೀರು ತುಂಬಲು ಕೊಳವೆಗಳನ್ನು ಜೋಡಿಸಿರುತ್ತಾರೆ. ಆವಿಯನ್ನು ರಭಸವಾಗಿ ಹಾಯಿಸಿ ಒಳಗಿನ ಮಿಶ್ರಣವನ್ನು ಚೆನ್ನಾಗಿ ಕುಲುಕುತ್ತಾರೆ. ವ್ಯರ್ಥವಾದ ನೀರು ಪೀಪಾಯಿ ತಳದಿಂದ ಹೊರಹೋಗುತ್ತಿರುತ್ತದೆ. ಪೀಪಾಯಿಗೆ ನೀರನ್ನು ರಭಸವಾಗಿ ಬಿಟ್ಟಾಗ ಎಣ್ಣೆಯ ಭಾಗ ಮೇಲೆ ಬಂದು ಅದು ಮುಂದಿನ ತೊಟ್ಟಿಯಲ್ಲಿ ಬೀಳುತ್ತದೆ. ಇದು ಕಚ್ಚಾ ಎಣ್ಣೆಯಾಗಿರುದರಿಂದ ಅದನ್ನು ಮುಂದಿನ ತೊಟ್ಟಿಗಳಲ್ಲಿರುವ ಸೋಡಿಯಂ ಹೈಡ್ರಾಕ್ಸೈಡ್ ಮಿಶ್ರಣ ಮಾಡಿದ ನೀರಿನ ಮೂಲಕ ಹಾಯಿಸಿ ಶುದ್ಧ ಮಾಡುತ್ತಾರೆ.

ಇ) ಎಣ್ಣೆಯನ್ನು ಶುದ್ಧ ಮಾಡುವುದು :

ಕಲ್ಮಶಗಳಿಂದ ಕೂಡಿದ ಎಣ್ಣೆಯನ್ನು ಬೇರೆ ಬೇರೆ ತೊಟ್ಟಿಗಳ ಮೂಲಕ ಹಾಯಿಸುವಾಗ ನೀರಿನ ಆವಿಯಿಂದ ಬಿಸಿಮಾಡುತ್ತಾ ಹೋಗುತ್ತಾರೆ. ಪ್ರತಿತೊಟ್ಟಿಯಲ್ಲೂ ಆದು ಕಲ್ಮಶಗಳ ಪ್ರಮಾಣವನ್ನು ಕಡಿಮೆ ಮಾಡಿಕೊಂಡು ಮುಂದುವರಿದು ಕೊನೆಯ ತೊಟ್ಟಿಗೆ ಬಂದಾಗ ಅದು ಪರಿಪೂರ್ಣವಾಗಿ ಶುದ್ಧವಾಗುತ್ತದೆ. ಹೀಗೆ ತಯಾರಿಸಿದ ಎಣ್ಣೆಯಲ್ಲಿ 'ಎ' ಅನ್ನಾಂಗ ಅಧಿಕ.

ಈ ವಿಧಾನವಲ್ಲದೆ ತಂಪುಮಾಡುವುದರ ಮೂಲಕ ಮತ್ತು ಲೀನಕಾರಿಗಳಿಂದ ಪಿತ್ತಜನಕಾಂಗದ ಎಣ್ಣೆ ತೆಗೆಯಲಾಗುತ್ತದೆ.

ಹೀಗೆ ತೆಗೆದ ಎಣ್ಣೆಯನ್ನು ಮೂರು ಭಾಗಗಳಲ್ಲಿ ವಿಂಗಡಿಸಲಾಗುತ್ತದೆ:

1. ಎಣ್ಣೆ ಅಂಶ ಹೆಚ್ಚಿದ್ದು 'ಎ' ಅನ್ನಾಂಗ ಕಡಿಮೆ ಇರುವುದು.
2. 'ಎ' ಅನ್ನಾಂಗ ಹೆಚ್ಚಿದ್ದು ಎಣ್ಣೆ ಅಂಶ ಕಡಿಮೆ ಇರುವುದು
3. 'ಎ' ಅನ್ನಾಂಗ ಮತ್ತು ಎಣ್ಣೆ ಅಂಶ ಸಮ ಪ್ರಮಾಣದಲ್ಲಿರುವುದು.

2) ಮೀನಿನ ಮಾಂಸದಿಂದ ಎಣ್ಣೆ ತೆಗೆಯುವುದು :


ಈ ವಿಧಾನ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಹೆಚ್ಚು ಪ್ರಚಲಿತವಿದೆ. ಪ್ರಾರಂಭದಲ್ಲಿ ಮೀನನ್ನು ಒಂದು ಚೀಲ ಅಥವಾ ಬಲೆಯಲ್ಲಿ ತುಂಬಿ ಅದನ್ನು ಒತ್ತು ಯಂತ್ರದ ಅಡಿಯಲ್ಲಿ ಕೊಟ್ಟು ಒತ್ತಿದಾಗ ಅದರಿಂದ ಹೊರಟ ರಸವನ್ನು ಬಳಸಿಕೊಂಡು ಎರಡು ವಿಧಾನಗಳಿಂದ ಎಣ್ಣೆ ತೆಗೆಯುತ್ತಾರೆ.

ಮೊದಲನೆಯ ವಿಧಾನದಲ್ಲಿ ರಸವನ್ನು ಪಾತ್ರೆಯಲ್ಲಿ ತುಂಬಿ ಅದನ್ನು ಆವಿಯಿಂದ ಬೇಯಿಸಿದಾಗ ರಸದಿಂದ ಎಣ್ಣೆ ಹೊರಡುತ್ತದೆ. ಅದನ್ನು ನೀರಿನ ತೊಟ್ಟಿಗಳಲ್ಲಿ ಹಾಯಿಸಿ ಎಣ್ಣೆ ಶುದ್ಧಗೊಳಿಸುತ್ತಾರೆ.

ಎರಡನೇ ವಿಧಾನದಲ್ಲಿ ಉದ್ದವಾದ ಪಿಪಾಯಿಗಳಂತಿರುವ ಪಾತ್ರೆಗಳಲ್ಲಿ ಮೀನಿನ ರಸ ತುಂಬಿ ಅವುಗಳಲ್ಲಿ ಆವಿ ಹಾಯಿಸಿ ರಸವನ್ನು ಬೇಯಿಸಲಾಗುತ್ತದೆ. ಮೀನಿನ ಗುಣಕ್ಕನುಗುಣವಾಗಿ ಬೇಯಿಸುವ ಅವಧಿ ಮತ್ತು ಆವಿಯ ಒತ್ತಡವನ್ನು ನಿರ್ಧರಿಸಲಾಗುತ್ತದೆ. ಹದವಾಗಿ ಬೇಯಿಸಲ್ಪಟ್ಟ ರಸವನ್ನು ದೊಡ್ಡ ಜರಡಿಗಳ ಮೂಲಕ ತಿರುವುಗಳುಳ್ಳ ಯಂತ್ರಕ್ಕೆ ಹಾಯಿಸುವಾಗ ನೀರಿನ ಅಂಶವೆಲ್ಲಾ ಸೋರಿ ಹೋಗುತ್ತದೆ. ಉಳಿದ ಗಟ್ಟಿ ಭಾಗವನ್ನು ಒತ್ತು ಯಂತ್ರದಿಂದ ಒತ್ತಿ ಎಣ್ಣೆ ತೆಗೆಯುತ್ತಾರೆ.

ಮಾಂಸದಿಂದ ಎಣ್ಣೆ ತೆಗೆಯಲು ಬೈಗೆ, ಬಾಂಗಡೆ ಮೊದಲಾದ ಮೀನುಗಳನ್ನು ಬಳಸಲಾಗುತ್ತದೆ.

ಎಣ್ಣೆ ತೆಗೆಯುವ ವಿಧಾನದ ಸಂಕ್ಷಿಪ್ತ ಪರಿಚಯ :



ಮೀನೆಣ್ಣೆಯ ಉಪಯೋಗಗಳು :

1. ಬಣ್ಣ ಹಾಗೂ ವಾರ್ನಿಸ್‌ಗಳ ತಯಾರಿಕೆಗೆ ಬಳಸಲಾಗುವುದು.
2. ಸಾಬೂನು ತಯಾರಿಸಲು.
3. ಚರ್ಮಹದ ಮಾಡಲು.
4. ಮೀನನ್ನು ಡಬ್ಬಿಕರಿಸಲು.
5. ಮುದ್ರಣ ಶಾಯಿಯ ತಯಾರಿಕೆಯಲ್ಲಿ.
6. ಬಟ್ಟೆಯು ಒದ್ದೆಯಾಗದಂತೆ ಮಾಡಲು ಬಟ್ಟೆಯ ಮೇಲೆ ತೆಳುಲೇಪನ ಮಾಡಲಾಗುವುದು
7. ಕಬ್ಬಿಣ ಮತ್ತು ಉಕ್ಕು ಕಾರ್ಯಗಾರಗಳಲ್ಲಿ
8. ಕಬ್ಬಿಣದ ಅದುರಿನಿಂದ ತೇರಿಕೆ ವಿಧಾನದಿಂದ ಲೋಹವನ್ನು ಬೇರ್ಪಡಿಸಲು
9. ಮೇಣದಬತ್ತಿಗಳ ತಯಾರಿಕೆಯಲ್ಲಿ
10 ಔಷಧಿಗಳನ್ನು ತಯಾರಿಸಲು
11. ಸುಟ್ಟಗಾಯಕ್ಕೆ
12. ಕ್ರಿಮಿಕೀಟನಾಶಕಗಳ ತಯಾರಿಕೆಯಲ್ಲಿ

ಹೀಗೆ ಬಹೂಪಯುಕ್ತವಾದ ಮೀನಿನ ಎಣ್ಣೆಗೆ ಬೇಡಿಕೆ ಇರುವುದರಿಂದ ಎಣ್ಣೆಯ ಅಂಶವುಳ್ಳ ಶಾರ್ಕ ಮತ್ತು ಬೈಗೆ ಅಥವಾ ಭೂತಾಯಿ ಮೀನನ್ನು ಆಹಾರಕ್ಕಿಂತ ಹೆಚ್ಚಾಗಿ ಎಣ್ಣೆಗಾಗಿ ಬಳಸಲಾಗುತ್ತಿದೆ. ಈ ಹಂತದ ಮುಂದಿನ ಮೀನಿನ ಮಾರಾಟದ ವಿಧಾನ ಬೇರೊಂದು ರೂಪದಲ್ಲಿ ನಡೆಯುತ್ತದೆ. ಮೊದಲು ಎಣ್ಣೆಯ ರೂಪದಲ್ಲಿ ಮಾರಾಟವಾಗಿ ಅನಂತರ ಅದು ಹಿಂಡಿಯ ರೂಪದಲ್ಲಿ ಮಾರಾಟವಾಗುತ್ತದೆ.

5) ಮೀನುಗೊಬ್ಬರದ ಮಾರಾಟ :

ಆಹಾರಕ್ಕೆ ಮೀನನ್ನು ಬಳಸುವಾಗ, ಇಲ್ಲವೆ ಉಪ್ಪಿನ ತೊಟ್ಟಿಗಳಲ್ಲಿ ರಕ್ಷಿಸಿಡಲು ಮೀನು ಶುದ್ಧಗೊಳಿಸುವಾಗ, ಎಣ್ಣೆ ತಯಾರಿಸುವಾಗ ಹೊರತೆಗೆಯುವ ವ್ಯರ್ಥಭಾಗಗಳನ್ನೆಲ್ಲಾ ಒಂದುಗೂಡಿಸಿ ಅದಕ್ಕೆ ಉಪ್ಪು ಮಿಶ್ರಣಮಾಡಿ ಗೊಬ್ಬರ ತಯಾರಿಸುತ್ತಾರೆ. ಅದನ್ನು ತೆಂಗಿನ ಗಿಡಗಳಿಗೆ ಹಾಕಲು ಮಾರಾಟ ಮಾಡತ್ತಾರೆ. (ನೋಡಿ ಸಮುದ್ರದಾಹಾರ)

6) ಮೀನು ಹಿಂಡಿಯ ಮಾರಾಟ :

ಮಾನವನಿಗೆ ಆಹಾರಕ್ಕೆ ಅರ್ಹವಲ್ಲದ ಮೀನು ಮತ್ತು ಅದರ ವ್ಯರ್ಥಭಾಗಗಳಿಂದ ಇಲ್ಲವೇ ಎಣ್ಣೆ ತಯಾರಿಸುವಾಗ ಉಳಿಯುವ ಹಿಂಡಿಯಿಂದ ದನಕರು, ಕೋಳಿ ಮೊದಲಾದ ಪ್ರಾಣಿ-ಪಕ್ಷಿಗಳಿಗೆ ಆಹಾರ ತಯಾರಿಸಿ ಮಾರಾಟ ಮಾಡುತ್ತಾರೆ. (ನೋಡಿ: ಸಮುದ್ರದಾಹಾರ)

7) ಚಿಪ್ಪುಗಳ ಮಾರಾಟ :

ಚಿಪ್ಪು ಮೀನನ್ನು ಆಹಾರಕ್ಕೆ ಬಳಸಿದ ನಂತರ ಉಳಿಯುವ ಚಿಪ್ಪನ್ನು ಬೇರೆ ಬೇರೆ ಉದ್ದೇಶಗಳಿಗಾಗಿ ಬಳಸಲಾಗುತ್ತದೆ. ಆದ್ದರಿಂದ ಅದನ್ನು ಸಂಗ್ರಹಿಸುವುದನ್ನೆ ಉದ್ಯೋಗವನ್ನಾಗಿಸಿಕೊಂಡು ಬದುಕುವವರು ಹಲವರಿದ್ದಾರೆ. ಹಿನ್ನೀರನ ಪ್ರದೇಶದಲ್ಲಿ ಸಂಗ್ರಹವಾಗುವ ಚಿಪ್ಪುಮೀನನ್ನು ಹಿಡಿದ ನಂತರ ಚಿಪ್ಪನ್ನು ಸಹ ಮಾರಾಟ ಮಾಡುತ್ತಾರೆ. ಚಿಪ್ಪುಗಳನ್ನು ಕೊಳ್ಳುವ ಸಂಘಗಳಿದ್ದು ಅವು ಕೊಂಡ ಚಿಪ್ಪನ್ನು ವಿವಿದೆಡೆ ಸರಬರಾಜು ಮಾಡುತ್ತಾರೆ. ಇವರು ಚಿಪ್ಪನ್ನು ಪ್ರತಿ ಟನ್ನಿಗೆ ರೂ. 35 ರಿಂದ 100 ರವರಗೆ ಕೊಂಡುಕೊಳ್ಳುತ್ತಾರೆ. ಚಿಪ್ಪು ಸಂಗ್ರಹವಾಗಿರುವ ಒಂದೊಂದು ಪ್ರದೇಶದಿಂದ ಪ್ರತಿದಿನ 100 ರಿಂದ 150 ಟನ್ ಚಿಪ್ಪುಗಳನ್ನು ತೆಗೆಯಲಾಗುತ್ತದೆ. ಕುಂದಾಪುರದ ಬಳಿ ಇರುವ ಸ್ವಾವಲಂಬಿ ಸಂಘ 1975 ರಿಂದ ಚಿಪ್ಪುಕೊಳ್ಳುವ ವ್ಯಾಪಾರವನ್ನು ಪ್ರಾರಂಭಿಸಿದ್ದು ಅದು ಪ್ರತಿವರ್ಷ ಕೊಂಡಿರುವ ಚಿಪ್ಪಿನ "ಅಂಕಿ ಅಂಶ" ಹೀಗಿದೆ.

ಅ.ನಂ.	ವರ್ಷ	ಕೊಂಡಿದ್ದು ಟನ್‌ಗಳಲ್ಲಿ
1.	1975 / 76	13,500
2.	1976 / 77	21,540
3.	1977 / 78	22,000
4.	1978 / 79	19,630
5.	1979 / 80	22,470
6.	1980 / 81	29,540
7.	1981 / 82	14,325
8.	1982 / 83	6,000
9.	1983 / 84	2,500
10.	1984 / 85	3,200
11.	1985 / 86	2,754
12.	1986 / 87	1,900

* ಆಧಾರ: ಬೆಳ್ಳಿ ಮಿನುಗು ಸ್ಮರಣ ಸಂಚಿಕೆ 1988

ಸ್ವಾವಲಂಬಿ ಸಂಘದ ಸದಸ್ಯರು ಚಿಪ್ಪು ಸಂಗ್ರಹದಲ್ಲಿ ವರ್ಷ ವರ್ಷ ಕಡಿಮೆಯಾಗುತ್ತಾ ಹೋಗುತ್ತಿರುವುದಕ್ಕೆ ಕಾರಣ ಚಿಪ್ಪು ಸಂಗ್ರಹದ ಉದ್ಯೋಗಕ್ಕಿಂತ ಮೀನು ಹಿಡಿಯುವ ಉದ್ಯೋಗ ಲಾಭದಾಯಕವಾದ್ದರಿಂದ ಆ ಕಡೆಗೆ ಜನರ ಆಸಕ್ತಿ ಕೇಂದ್ರೀಕೃತವಾಗುತ್ತಿದೆ ಎಂದು ಹೇಳುತ್ತಾರೆ. ಆದರೂ ಮೀನುಹಿಡಿಯಲು ಸಾಧ್ಯವಾಗದ ಕಾಲದಲ್ಲಿ ಜನ ಚಿಪ್ಪು ಸಂಗ್ರಹಿಸಲು ಬರುತ್ತಾರೆ. ದಿನಗಳೆದಂತೆ ಚಿಪ್ಪಿಗೆ ಹೆಚ್ಚಿನ ಬೇಡಿಕೆ ಇದೆ ಅದೇರೀತಿ ಅದರ ಬೆಲೆ ಸಹ ಏರುತ್ತಿದೆ.

ಚಿಪ್ಪಿನ ಉಪಯೋಗ :

1) ರೇಯನ್ ಮತ್ತು ಪೇಪರ್ ಕಾರ್ಖಾನೆಗಳಲ್ಲಿ ಕೆಲವು ರಾಸಾಯನಿಕ ವಸ್ತುಗಳನ್ನು ತೆಗೆಯಲು ಚಿಪ್ಪಿನ ಹುಡಿಯನ್ನು ಬಳಸಲಾಗುತ್ತದೆ.
2) ಕಾಫಿ ಮತ್ತು ಟೀ ಪ್ಲಾಂಟೇಶರ್‌ಗಳ ಉದ್ಯಮಗಳಲ್ಲಿ ಹೊರಹರಿಯುವ ನೀರಿನ ಆಮ್ಲತೆ ಹೆಚ್ಚಾದಾಗ ಅದನ್ನು ತಗ್ಗಿಸಲು ಚಿಪ್ಪನ್ನು ಬಳಸಲಾಗುತ್ತದೆ.
3) ಕೀಟನಾಶಕಗಳ ಕೈಗಾರಿಕೆಗಳಲ್ಲಿ ಮೈಲುತುತ್ತಿನೊಂದಗೆ ಬೆರೆಸಲು ಚಿಪ್ಪನ್ನು ಬಳಸಲಾಗುತ್ತದೆ.
4) ಚಿಪ್ಪಿನಲ್ಲಿ ಶೇಕಡ 42 ರಷ್ಟು ಕ್ಯಾಲ್ಸಿಯಂ 1.55 ರಷ್ಟು ಮೆಗ್ನೀಷಿಯಂ ಮತ್ತು 17.55 ರಷ್ಟು ಸಿಲಿಕಾ ಇರುವುದರಿಂದ ತೆಂಗು ಮತ್ತು ಅಡಿಕೆ ಬೆಳೆಗಳಿಗೆ ಗೊಬ್ಬರವಾಗಿ ಬಳಸಲಾಗುತ್ತದೆ.
5) ಸುಣ್ಣ ತಯಾರಿಸಲು ಚಿಪ್ಪನ್ನು ಉಪಯೋಗಿಸುತ್ತಾರೆ.
6) ಕೋಳಿ ಆಹಾರದೊಡನೆ ಮಿಶ್ರಣ ಮಾಡಿದರೆ ಕೋಳಿ ಮೊಟ್ಟೆಯ ಕವಚ ಗಟ್ಟಿಯಾಗುತ್ತದೆಂಬ ಕಾರಣದಿಂದ ಚಿಪ್ಪನ್ನು ಬಳಸುತ್ತಾರೆ.
7) ಇತ್ತೀಚೆಗೆ ಆಧುನಿಕ ಅಲಂಕಾರಕ್ಕಾಗಿ ಚಿಪ್ಪು ಶಂಕು ಮೊದಲಾದವುಗಳನ್ನು ಉಪಯೋಗಿಸುತ್ತಾರೆ. (ನೋಡಿ: ಕಲೆ ಮತ್ತು ಮನರಂಜನೆ)

ಹೀಗೆಯೇ ಚಿಪ್ಪಿನ ಉಪಯೋಗ ದಿನಗಳೆದಂತೆ ಹೆಚ್ಚಾಗುತ್ತಿರುವುದರಿಂದ ಸಮುದ್ರದಾಶ್ರಯವನ್ನವಲಂಬಿಸಿರುವವರಿಗೆ ಇದೊಂದು ಪೂರ್ಣ ಪ್ರಮಾಣದ ಉದ್ಯೋಗ ನೀಡಬಹುದೆಂಬ ಭರವಸೆ ಇದೆ.

8) ಮೀನಿನ ಅಮೂಲ್ಯ ಭಾಗಗಳು :

ಮೀನು ಬಹೂಪಯೋಗಿ ಪ್ರಾಣಿ. ಆರೋಗ್ಯವಂತರಿಗೆ ಆಹಾರವಾಗುತ್ತದೆ. ರೋಗಿಗಳಿಗೆ ಔಷಧಿಯಾಗುತ್ತದೆ. ಪ್ರಾಣಿ ಪಕ್ಷಿ ಸಸ್ಯಗಳಿಗೂ ಆಹಾರವಾಗುತ್ತದೆ. ಇಂತಹ ಮೀನುಗಳಲ್ಲಿ ನೂರಾರು ಜಾತಿಗಳಿವೆ. ಕೆಲವು ಜಾತಿಯ ಮಿನುಗಳು ಬಂಗಾರಕ್ಕಿಂತ ಬೆಲೆ ಉಳ್ಳ ಅಮೂಲ್ಯ ಅಂಗಾಂಗಗಳನ್ನು ಹೊಂದಿರುತ್ತವೆ. ಅಷ್ಟೇ ಅಲ್ಲದೆ ಅವು ವಾಂತಿ ಮಾಡುವ ರಕ್ತದಲ್ಲೂ ವಿಶೇಷ ಶಕ್ತಿ ಇದೆ ಈ ವಿಶಿಷ್ಟತೆಗಳ ಬಗ್ಗೆ ಮಿನುಗಾರರೇ ಬಲ್ಲರು. ಆದರೂ ವ್ಯಾಪಾರಿಗಳು ಅವುಗಳ ಉಪಯೋಗದ ಪ್ರಾಮುಖ್ಯತೆಯ ರಹಸ್ಯವನ್ನೆಂದೂ ಹೇಳುವುದಿಲ್ಲ.

1) ಶಾರ್ಕ್ ಮೀನಿನ ಬಾಲ ಮತ್ತು ರೆಕ್ಕೆಗಳು :

ಇವುಗಳನ್ನು ಮೀನಿನಿಂದ ಪ್ರತ್ಯೇಕವಾಗಿ ತೆಗೆದು ಸುಣ್ಣ ಹಚ್ಚಿ ಒಣಗಿಸಿಡುತ್ತಾರೆ. ವ್ಯಾಪಾರಿಗಳು ಈ ಬಾಲ ಮತ್ತು ರೆಕ್ಕೆಗಳನ್ನು ಪ್ರತಿ ಕೆ.ಜಿ.ಗೆ 300 ರೂಪಾಯಿಗಳಿಂದ 3000 ರೂಪಾಯಿಗಳವರೆಗೆ ಕೊಳ್ಳುತ್ತಾರೆ. ಕೊಚ್ಚಿ ಬೊಂಬಾಯಿ ಮಾರ್ಗವಾಗಿ ವಿದೇಶಗಳಿಗೆ ರಫ್ತಾಗುವ ಇವು ಔಷಧಿಗಾಗಿ ಬಳಸಲಾಗುತ್ತದೆ ಎಂದು ಹೇಳುತ್ತಾರೆ. ಶಾರ್ಕ್ ಮೀನು ಆಹಾರಕ್ಕೆ ಅಷ್ಟೊಂದು ಪ್ರಿಯವಲ್ಲದದಿದ್ದರೂ ಅದರ ಬಾಲ ಬಹೂಪಯೋಗಿಯಾಗಿದೆ.

2) ಶಾರ್ಕ್ ಮೀನಿನ ಪಿತ್ತ ಜನಕಾಂಗ :

ಇದರಿಂದ ತೆಗೆದ ಎಣ್ಣೆಯನ್ನು ಕೆ.ಜಿ.ಗೆ 15 ರೂಪಾಯಿಗಳಂತೆ ಮಾರಾಟ ಮಾಡುತ್ತಾರೆ ದೊಡ್ಡ ಡಬ್ಬಿಗಳಲ್ಲಿ ಅದನ್ನು ತುಂಬಿ ಬೇರೆ ಬೇರೆ ರಾಜ್ಯಗಳಿಗೆ ರವಾನಿಸುತ್ತಾರೆ.

3) ಶಾರ್ಕ್ ಮೀನು ವಾಂತಿ ಮಾಡಿದ ರಕ್ತ :

ಮೀನುಗಾರರು ಸಮುದ್ರದ ಮೇಲೆ ಸಂಚರಿಸುವಾಗ ಅನಿರೀಕ್ಷಿತವಾಗಿ ಎಣ್ಣೆಯಂತಹ ಕೆಂಪುಬಣ್ಣದ ದ್ರವ ಕಂಡರೆ ಅದನ್ನು ತಕ್ಷಣ ಸಂಗ್ರಹಿಸಿಟ್ಟುಕೊಳ್ಳುತ್ತಾರೆ. ಇದನ್ನು ಶಾರ್ಕ್ ಮೀನು ವಾಂತಿ ಮಾಡಿದ ರಕ್ತವೆಂದು ಹೇಳುತ್ತಾರೆ. ಅದು ಸಿಕ್ಕಿದರೆ ಭಾಗ್ಯಸಿಕ್ಕಿದಷ್ಟೆ ಅವರಿಗೆ ಸಂತೋಷ. ಏಕೆಂದರೆ ಇದನ್ನು ಶುದ್ಧಗೊಳಿಸಿ ಮಾರಾಟ ಮಾಡಿದರೆ ಒಂದು ಕೆ.ಜಿ.ಗೆ 200 ರೂಪಾಯಿಗಳಾದರೂ ದೊರೆಯುತ್ತದೆ. ಇದು ಸಿಗುವುದು ಬಹಳ ಅಪರೂಪ. ಅದೂ ಸಹ ಆ ಮೀನು ವಾಂತಿ ಮಾಡಿದ ಕೆಲವು ಕ್ಷಣಗಳಲ್ಲಿ ಅದನ್ನು ಸಂಗ್ರಹಿಸಿಕೊಳ್ಳಬೇಕು. ಇಲ್ಲದಿದ್ದರೆ ಅದು ನೀರಿನಲ್ಲಿ ಒಂದಾಗಿ ಹೋಗುತ್ತದೆ ಎಂದು ಅನುಭವಿಗಳ ಅನಿಸಿಕೆ.

4) ಶಿಂಗಾಲೆ ಪೊಕಟ್ :

ಶಿಂಗಾಲೆ ಎನ್ನುವ ಮೀನಿನ ಹೊಟ್ಟೆಯಲ್ಲಿ ಈಜಾಡಲು ಸಹಾಯಕವಾಗುವ ಗಾಳಿ ತುಂಬಿದ ಬೆಲೂನಿನಂತಿರುವ ಪೊಕಟ್ ಇರುತ್ತದೆ. ಇದನ್ನು ಪ್ರತ್ಯೇಕವಾಗಿ ತೆಗೆದು ಒಣಗಿಸಿಡುತ್ತಾರೆ. ಒಂದು ಕೆ.ಜಿ.ಗೆ 200 ರೂಪಾಯಿಗಳಿಂದ 300 ರೂಪಾಯಿಗಳವರೆಗೆ ಅದನ್ನು ಮಾರಾಟ ಮಾಡುತ್ತಾರೆ. ಅದು ಬೆಲೆ ಬಾಳುವ ಮದ್ಯದ ತಯಾರಿಕೆಗಾಗಿ ಬಳಕೆಯಾಗುತ್ತದೆ.


5) ಹಾವು ಮೀನಿನ ಪೊಕಟ್ :

ಹಾವಿನಂತೆ ಉದ್ದವಾಗಿರುವ ಮೀನಿನ ಹೊಟ್ಟೆಯಲ್ಲಿ ಗಾಳಿ ತುಂಬಿರುವ ಚೀಲವಿರುತ್ತದೆ. ಹಾವು ಮೀನನ್ನು ಸಿಗಿಯುವಾಗ ಅದರ ಪೊಕಟ್ ಅನ್ನು ಪ್ರತ್ಯೇಕವಾಗಿ ಒಣಗಿಸಿಡುತ್ತಾರೆ. ಮದ್ಯ ತಯಾರಿಕೆಗೆ ಉಪಯೋಗವಾಗುವ ಇದನ್ನು ಕೆ.ಜಿ.ಗೆ.500 ರಿಂದ 700 ರೂಪಾಯಿಗಳವರೆಗೆ ಮಾರಾಟ ಮಾಡುತ್ತಾರೆ.


7) **ಬಂಚಿನ ನಾಲಿಗೆ :**

ಜಲಪರ ಪ್ರಾಣಿಯ ಬೆನ್ನಿನ ಮೂಳೆಯು ನಾಲಿಗೆಯಾಕಾರದಲ್ಲಿದ್ದು ಥರ್ಮೋಕೂಲ್‌ನಂತೆ ಮೃದುವಾಗಿರುತ್ತದೆ. ಇದನ್ನು ಸಮುದ್ರದನಾಲಿಗೆ ಎಂದೂ ಸಹ ಕರೆಯುತ್ತಾರೆ. ಜಿರಲೆ ನಾಶಕ್ಕಾಗಿ ಇದನ್ನು ಬಳಸಲಾಗುತ್ತದೆ. ಅಲ್ಲದೆ ಗಾಜನ್ನು ಉಜ್ಜಿ ಶುದ್ಧಮಾಡಲು, ಸ್ನೋ, ತಯಾರಿಸಲು ಉಪಯೋಗಿಸುತ್ತಾರೆ. ನಿಂಬೆ ಹಣ್ಣಿನ ರಸದಲ್ಲಿ ಇದರ ಪುಡಿ ಮಿಶ್ರಣ ಮಾಡಿ ಮೊಡವೆಗಳಿಗೆ ಹಚ್ಚಿದರೆ ಅವು ಮಾಯವಾಗುತ್ತವೆ. ಹೀಗೆಯೇ ಇನ್ನೂ ಹಲವು ಅಮೂಲ್ಯವಾದ ಅಂಗಾಂಗಗಳು ಮೀನುಗಳಲ್ಲಿವೆ. ಆದರೆ ಅವುಗಳ ಪ್ರಾಮುಖ್ಯತೆ ಮೀನು ಹಿಡಿಯುವ ವರಿಗೇ ತಿಳಿಯದು. ವ್ಯಾಪಾರಿಗಳ ಚತುರ ಬುದ್ದಿಗೆ ಮಾತ್ರ ಅವುಸಿಲುಕುವಂತಹವು ಆದ್ದರಿಂದಲೇ ಇಂದಿಗೂ ಮೀನಿನ ಅಮೂಲ್ಯ ಅಂಗಾಂಗಗಳು ಯಾವುದಕ್ಕೆ ಉಪಯೋಗವಾಗಬಲ್ಲವೆಂಬುದು ಹಲವು ಮೀನುಗಾರರಿಗೆ ತಿಳಿದೇ ಇಲ್ಲ.

ಮೀನು ಮಾರಾಟದ ವಿವಿಧ ರೂಪಗಳು :



ಮೀನು ಮಾರಾಟದ ಕೈಗಳು :



ಮೀನಿನ ಅಮೂಲ್ಯ ಭಾಗಗಳು.





ಶಾರ್ಕ್ ಮೀನಿನ ಬಾಲ



ಸಿಂಗಾಳ್ ಮೀನಿನ.
ಕೋಶಟ

ಹಾವು ಮೀನಿನ ಹೊಟ್ಟೆಯಲ್ಲಿನ 'ಹೋರಟ್'





ಮೀನುಗಾರರಿಗೆ ಆರ್ಥಿಕ ನೆರವು ನೀಡುವ ಸಂಘ ಸಂಸ್ಥೆಗಳು :

ಮೀನುಗಾರರಿಗೆ ಒಬ್ಬೊಂಟಿಗರ ಉದ್ಯೋಗದಲ್ಲಿ ಆಧುನಿಕ ಯಂತ್ರೋಪಕರಣಗಳು ಮೀನುಗಾರಿಕೆ ಕ್ಷೇತ್ರಕ್ಕೆ ಬರುವ ಮುಂಚಿತವಾಗಿ ಪಾತಿದೋಣಿಗಳು ಮೀನುಗಾರಿಕೆಗೆ ಮಾಧ್ಯಮಗಳಾಗಿ ದುಡಿಯುತ್ತಿದ್ದವು. ಆಗ ಅದರಲ್ಲಿ ಒಬ್ಬಿಬ್ಬರು ಮೀನು ಹಿಡಿಯಲು ಹೋಗುತ್ತಿದ್ದರು. ಇಂದು ಮೀನುಗಾರಿಕೆಯನ್ನು ಉದ್ಯಮವೆಂದು ಪರಿಗಣಿಸಿರುವುದರಿಂದ ಅದರಲ್ಲಿ ಸಾಮೂಹಿಕ ದುಡಿಮೆ ಸಹಕಾರ ಮನೋಭಾವನೆ ಅನಿವಾರ್ಯವಾಯಿತು. ಅವರ ದುಡಿಮೆಗೆ ಆರ್ಥಿಕವಾಗಿ ಪ್ರೋತ್ಸಾಹಿಸಲು ಸಂಘ ಸಂಸ್ಥೆಗಳು ಹುಟ್ಟಿಕೊಂಡವು. ಆಧುನಿಕ ಆರ್ಥಿಕ ವ್ಯವಸ್ಥೆಯನುಸಾರ ಅವು ಕಾರ್ಯನಿರ್ವಹಿಸಿ ಮೀನುಗಾರರ ಉದ್ಯೋಗ ಸುಧಾರಣೆಯಾಯಿತು. ಮೀನುಗಾರರಿಗೆ ಆರ್ಥಿಕ ನೆರವು ನೀಡುವ ಸಂಸ್ಥೆಗಳೆಂದರೆ:

1. ಮೀನುಗಾರಿಕೆ ಪ್ರಾಥಮಿಕ ಸಹಕಾರಿ ಸಂಘ.
2. ಮೀನುಗಾರಿಕೆ ಮಹಿಳಾ ಸಹಕಾರಿ ಸಂಘ.
3. ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ಕಾರ್ಪೊರೇಷನ್
4. ಮೀನುಗಾರಿಕೆ ಮಾರ್ಕೇಟಿಂಗ್ ಫೆಡರೇಷನ್.

ಈ ಎಲ್ಲಾ ಸಹಕಾರಿ ಸಂಘಗಳು ವ್ಯವಸಾಯದಲ್ಲಿ ಹಸಿರುಕ್ರಾಂತಿ ಹೇಗೆ ತಲೆದೋರಿತೊ ಹಾಗೆಯೇ ಮೀನುಗಾರಿಕೆಯಲ್ಲಿ ಸಹ ಕ್ರಾಂತಿ ತರಬೇಕೆಂಬ ಉದ್ದೇಶದಿಂದ ದುಡಿಯಲು ಪ್ರಾರಂಭಿಸಿದವು. ಈಗಿನ ಸಂಘ ಸಂಸ್ಥೆಗಳ ಕಾರ್ಯದೆಡೆಗೆ ಗಮನಹರಿಸಿದರೆ ಮೀನುಗಾರರಿಗೆ ಅವುಗಳಿಂದ ದೊರೆಯುವ ಸೌಲಭ್ಯಗಳರಿವಾಗುತ್ತದೆ.

1) ಮೀನುಗಾರಿಕೆ ಪ್ರಾಥಮಿಕ ಸಹಕಾರಿ ಸಂಘ :

ಕರಾವಳಿಯ ಮೀನುಗಾರಿಕೆಯ ಅಭಿವೃದ್ಧಿಯ ಗುರಿ ಹೊಂದಿ ಹುಟ್ಟಿಕೊಂಡ ಮೀನುಗಾರಿಕೆ ಪ್ರಾಥಮಿಕ ಸಹಕಾರಿ ಸಂಘಗಳ ಸಂಖ್ಯೆ 63 ಇದ್ದುದು, 87-88ರ ಹೊತ್ತಿಗೆ ಅದು 74ಕ್ಕೆ ಏರಿತು. ಆದರೆ ಅವುಗಳಲ್ಲಿ 25 ಸಹಕಾರಿ ಸಂಘಗಳು. ನಷ್ಟವನ್ನನುಭವಿಸಿದವು. ನಾಲ್ಕು ಮುಚ್ಚಲ್ಪಟ್ಟವು. ಒಂದು ನಷ್ಟವೂ ಇಲ್ಲದೆ ಲಾಭವೂ ಇಲ್ಲದೆ ಕೆಲಸಮಾಡುತ್ತಿದೆ. ಉಳಿದ ನಲವತ್ನಾಲ್ಕು ಸಹಕಾರಿ ಸಂಘಗಳು ಮಾತ್ರ ಏಳಿಗೆಯೆಡೆಗೆ ದುಡಿಯುತ್ತಿವೆ.

ಈ ಸಂಘ ಸಂಸ್ಥೆಗಳ ಉದ್ದೇಶಗಳೆಂದರೆ :

1. ಮೀನುಗಾರರಿಗೆ ಮೀನು ಹಿಡಿಯುವ ಮತ್ತು ಹಿಡಿದ ಮೀನನ್ನು ಸಂರಕ್ಷಿಸಿಡುವ ಸೌಲಭ್ಯವನ್ನು ಕಲ್ಪಿಸಿಕೊಡುವುದು.
2. ಮೀನುಗಾರಿಕೆ ಅಭಿವೃದ್ಧಿಗಾಗಿ ಹೊಸ ತಂತ್ರಗಳನ್ನು ಪರಿಚಯಿಸುವುದು.
3. ಮೀನು ಒಣಗಿಸಲು ಉಪ್ಪು ಮತ್ತು ಇತರೆ ವಸ್ತುಗಳನ್ನು ಕಡಿಮೆ ದರದಲ್ಲಿ ಒದಗಿಸುವುದು.
4. ಮೀನಿನ ಉತ್ಪಾದನೆಯ ಹೆಚ್ಚಾಳಕ್ಕೆ ಮತ್ತು ಮಾರಾಟಕ್ಕೆ ಪ್ರೋತ್ಸಾಹಿಸುವುದು.
5. ಉಪ್ಪಿನ ಉಗ್ರಾಣಗಳನ್ನು ಕೊಳ್ಳುವುದು. ಮೀನು ಒಣಗಿಸುವ ಸ್ಥಳಗಳನ್ನು ಮತ್ತು ಉಪ್ಪಿಗೆ ಮೀನುಹಾಕಲು ಸೀಮೆಂಟಿನ ತೊಟ್ಟಿಗಳನ್ನು ಕಡಿಮೆ ದರದಲ್ಲಿ ಮೀನುಗಾರರಿಗೆ ಒದಗಿಸಿಕೊಡುವುದು
6. ಹೊಸ ಮಾರುಕಟ್ಟೆಗಳನ್ನು ಹುಡುಕಿ ಅಲ್ಲಿ ಮೀನು ಮಾರಾಟದ ಸೌಲಭ್ಯಗಳನ್ನು ಕಲ್ಪಿಸಿಕೊಡುವುದು.
7. ದೋಣಿ, ಬಲೆ ಮೊದಲಾದ ಅಗತ್ಯ ವಸ್ತುಗಳನ್ನು ಕೊಳ್ಳಲು ಸಾಲದ ಸೌಲಭ್ಯ ನೀಡುವುದು.
8. ಮೀನುಹಿಡಿಯದ ಕಾಲದಲ್ಲಿ (ಮಳೆಗಾಲದಲ್ಲಿ) ದೋಣಿ, ಬಲೆ - ಇವುಗಳ ರಿಪೇರಿಗೆ, ಒಣ ಮೀನಿನ ರಕ್ಷಣೆಗೆ ಮತ್ತು ಮೀನುಗಾರರ ಜೀವನಕ್ಕೆ ಸಾಲದರೂಪದಲ್ಲಿ ಹಣ ಸಹಾಯ ನೀಡುವುದು.
9. ಹಿಡಿದ ಮೀನು ಹೆಚ್ಚಿನ ಬೆಲೆಗೆ ಮಾರಾಟವಾಗುವಂತೆ ಪ್ರೋತ್ಸಾಹಿಸುವುದು.
10. ಮೀನಿಗೆ ಸಂಬಂಧಪಟ್ಟ ಮೀನುಗೊಬ್ಬರದ ಮೀನೆಣ್ಣೆ, ದೋಣಿ ನಿರ್ಮಾಣ, ದೋಣಿ ರಿಪೇರಿ ಈ ಮೊದಲಾದ ಉದ್ದಿಮೆಗಳನ್ನು ಪ್ರಾರಂಭಿಸಲು ಮಾರ್ಗದರ್ಶನ ನೀಡಿ ಹಣಸಹಾಯ ನೀಡುವುದು.

ಈ ಗುರಿಗಳನ್ನಿಟ್ಟುಕೊಂಡ ಪ್ರಾಥಮಿಕ ಸಹಕಾರಿ ಸಂಘಗಳ ಸದಸ್ಯತ್ವವನ್ನು ಮೀನುಗಾರರು ಮೊದಲು ಪಡೆಯಬೇಕು. ಅದರ ನಂತರ ಸಂಘವು ತನ್ನ ಆರ್ಥಿಕ ಸ್ಥಿತಿಗತಿಗನುಸಾರ ಅವರಿಗೆ ಸಾಲ ನೀಡುತ್ತದೆ. ಪಾತಿ ದೋಣಿಕೊಳ್ಳಲು 2500ರ ವರೆಗೆ ಸಾಲ ನೀಡಿದರೆ ಪರ್ಸಿಯನ್ ದೋಣಿಕೊಳ್ಳಲು ಹತ್ತು ಲಕ್ಷ ರೂಪಾಯಿಗಳ ಹಣಸಹಾಯ ನೀಡುತ್ತದೆ. ಹಣದ ಮೊಬಲಗು ಹೆಚ್ಚುತ್ತಾ ಹೋದಂತೆ ದೋಣಿಯ ಪಾಲುಗಾರರು ಸಹ ಹೆಚ್ಚುತ್ತಾ ಹೋಗುತ್ತಾರೆ. ಟ್ರಾಲರ್ ದೋಣಿಗೆ ಐದಾರುಮಂದಿ ಪಾಲುಗಾರರಿದ್ದರೆ ಪರ್ಸಿನರ್‌ಗೆ ಹತ್ತು ಹದಿನೈದು ಜನ ಪಾಲುಗಾರರಿರುತ್ತಾರೆ. ಕೆಲವು ಪರ್ಸಿನರ್‌ಗೆ ಎರಡು ಮೂರು ಪಾಲುಗಾರರಿರುತ್ತಾರೆ. ಇವರು ಸಾಲದಲ್ಲಿ ಮತ್ತು ಆದಾಯದಲ್ಲೆರಡರಲ್ಲೂ ಸಹಭಾಗಿಗಳು. ಸಾಲ ಪಡೆಯುವ ಮೊದಲು ಯಾವ ಪಾಲುಗಾರ ಹೆಚ್ಚಿನ ಹಣವನ್ನು ಮುಂಗಡ ಠೇವಣಿಗಾಗಿ ನೀಡುತ್ತಾನೋ ಅವನೇ ಪ್ರಮುಖ ಪಾಲುಗಾರನಾಗುತ್ತಾನೆ.

ಕೆಲವು ದೋಣಿಗಳಲ್ಲಿ ಪಾಲುಗಾರರೇ ಮೀನು ಹಿಡಿಯಲು ಸಹ ಹೋಗುತ್ತಾರೆ. ದಿನದ ಖರ್ಚುವೆಚ್ಚ ಕಳೆದು ಉಳಿದ ಹಣವನ್ನು ಸಮವಾಗಿ ಹಂಚಿಕೊಳ್ಳುತ್ತಾರೆ. ಆದಾಯ ವೆಚ್ಚದ ಲೆಕ್ಕಪತ್ರವನ್ನು ಸಾಮನ್ಯವಾಗಿ ಮೀನು ಹಿಡಿದ ಕಾಲದ ಕೊನೆಯದಿನ ಮಾಡುತ್ತಾರೆ.

ದೋಣಿಯ ಮಾಲೀಕರು, ಮೀನುಹಿಡಿಯುವವರು ಬೇರೆಬೇರೆಯಾಗಿದ್ದಲ್ಲಿ ಹಿಡಿದ ಮೀನನ್ನು ಮಾರಾಟಮಾಡಿದ ಹಣದಲ್ಲಿ ಶೇಕಡ 30 ರಷ್ಟು ಮೀನುಹಿಡಿದವರಿಗೆ ನೀಡಲಾಗುತ್ತದೆ. ಉಳಿದ ಹಣವನ್ನು ಖರ್ಚುವೆಚ್ಚ ಕಳೆದು ಬ್ಯಾಂಕಿನಲ್ಲಿ ಇಲ್ಲವೆ ಸಂಘದಲ್ಲಿ ಜಂಟಿ ಖಾತೆಯಲ್ಲಿ ಇಡುತ್ತಾರೆ. ಕೊನೆಯಲ್ಲಿ ಆ ಹಣವನ್ನು ಸದಸ್ಯರೆಲ್ಲಾ ಹಂಚಿಕೊಳ್ಳುತ್ತಾರೆ. ಕೆಲವು ಯಾಂತ್ರಿಕ ದೋಣಿಗಳಲ್ಲಿ ಪಾಲುಗಾರರಲ್ಲಿ ಕೆಲವರು ಮೀನು ಹಿಡಿಯುವವರೂ ಆಗಿರುತ್ತಾರೆ. ಇಂತಹವರಿಗೆ ಪಾಲುಗಾರರಿಗೆ ಸಿಗುವ ಶೇಕಡ 30 ರಷ್ಟು ಹಣದಲ್ಲೂ ಪಾಲು ಸಿಗುತ್ತದೆ. ಹೀಗೆ ಅವರು ಎರಡೂ ಕಡೆಯ ಪಾಲಿಗೆ ಹಕ್ಕುದಾರರಾಗಿರುತ್ತಾರೆ.

ಮೀನುಗಾರಿಕೆ ಪ್ರಾಥಮಿಕ ಸಹಕಾರಿ ಸಂಘದಿಂದ ಸಾಲ ಪಡೆದು ಅದನ್ನು ಕಾಲಕ್ಕೆ ಸರಿಯಾಗಿ ಪಾವತಿ ಮಾಡಿದವರಿಗೆ ಮಾತ್ರ ಸರ್ಕಾರದ ವಿಶೇಷ ರಿಯಾಯಿತಿ ಸೌಲಭ್ಯ ನೀಡಲಾಗುತ್ತದೆ. ಸಾಲದ ಮೊತ್ತದಲ್ಲಿ ಶೇಕಡ ಹತ್ತರಿಂದ ಇಪ್ಪತ್ತು ಭಾಗದಷ್ಟು ರಿಯಾಯಿತಿ ನೀಡುವ ನಿಯಮವಿದೆ. ಕಾನೂನಿನ ಪ್ರಕಾರ ಸಾಲಪಡೆದ ದೋಣಿಯ ಮೇಲೆ ವಿಮೆ ಮಾಡಿಸಲೇ ಬೇಕಾಗುತ್ತದೆ. ಸಂಘ ಸಂಸ್ಥೆಗಳಿಗೆ ಋಣಿಯಾದ ಮೀನುಗಾರರು ತಾವು ಹಿಡಿದ ಮೀನನ್ನು ಸಾಲಪಡೆದ ಸಂಘ ಸಂಸ್ಥೆಗಳ ಮೂಲಕವೇ ಮಾರಾಟ ಮಾಡಬೇಕೆಂಬ ನಿಯಮಕ್ಕೆ ಬದ್ಧರಾಗಿರಬೇಕು. ಮಾರಾಟ ಮಾಡಿದ್ದಕ್ಕಾಗಿ ಸಂಘ ಸಂಸ್ಥೆಗೆ ಶೇಕಡ 6ರಷ್ಟು ಕಮೀಷನ್ ನೀಡಬೇಕಾತ್ತದೆ. ಮೀನನ್ನು ಮಾರಾಟಮಾಡಿಕೊಡುವ ಜವಾಬ್ದಾರಿಯನ್ನು ಸಂಘ ಸಂಸ್ಥೆಗಳು ಹೊತ್ತ ಕಾರಣದಿಂದ ಮೀನುಗಾರರಿಗೆ ಎದುರಾಗುವ ಮೀನುಮಾರಾಟದ ದೊಡ್ಡ ಸಮಸ್ಯೆಯೊಂದು ದೂರವಾದ ಹಾಗಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಮೀನಿಗೆ ಬೇಡಿಕೆ ಕಡಿಮೆ ಇದ್ದಾಗ ಸಂಘದ ಶೈತ್ಯಾಗಾರದಲ್ಲಿ ಮೀನನ್ನು ರಕ್ಷಿಸಿಟ್ಟು ಬೇಡಿಕೆ ಬಂದಾಗ ಅದನ್ನು ಮಾರಾಟ ಮಾಡಲಾಗುತ್ತದೆ. ಈ ಸೌಲಭ್ಯಗಳೆಲ್ಲಾ ಸಂಘ ಸಂಸ್ಥೆಗಳ ಆರ್ಥಿಕ ಸ್ಥಿತಿಗತಿಗನುಣವಾಗಿ ಲಭ್ಯವಾಗುತ್ತದೆ.

ಮಿನುಗಾರಿಕೆ ಪ್ರಾಥಮಿಕ ಸಹಕಾರಿ ಸಂಘಗಳ ದುಡಿವಬಂಡವಾಳ :

ಮಿನುಗಾರಿಕೆ ಪ್ರಾಥಮಿಕ ಸಹಕಾರಿ ಸಂಘಗಳ ದುಡಿವ ಬಂಡವಾಳವನ್ನು ಸದಸ್ಯರು ಪಡೆವ ಶೇರುಗಳಿಂದ, ಸರ್ಕಾರದಿಂದ ಪಡೆದ ಸಾಲದಿಂದ, ಸಂಘದ ನಿರ್ದೇಶಕರು ಹೂಡಿದ ಕಾಯ್ದಿಟ್ಟ ಹಣದಿಂದ ಹಾಗೂ ಇತರೆ ಠೇವಣಿಗಳಿಂದ ಸಂಗ್ರಹಿಸಲಾಗುತ್ತದೆ. ಇದಲ್ಲದೆ ಮೀನುಗಾರರ ಅಭಿವೃದ್ಧಿಗಾಗಿ ನೀಡುವ ಸರ್ಕಾರದ ಎಲ್ಲಾ ಸಾಲಗಳು ಪ್ರಾಥಮಿಕ ಸಹಕಾರಿ ಸಂಘಗಳ ಮೂಲಕವೇ ವಿತರಿಸಲಾಗುತ್ತದೆ. ಸಂಘವು ನೀಡಿದ ಸಾಲಕ್ಕೆ ಶೇಕಡ 15 ರಂತೆ ಬಡ್ಡಿ ಸಂಗ್ರಹಿಸುತ್ತಾರೆ. ಸರ್ಕಾರದ ಸಾಲದ ವಿಧಗಳಿನುಸಾರ ಸಾಲದ ಮೇಲಿನ ಬಡ್ಡಿಯು ಹೆಚ್ಚು ಕಡಿಮೆಯಾಗುತ್ತದೆ. ಕೆಲವು ವಿಧದ ಸಾಲಕ್ಕೆ ಶೇಕಡ 4 ರಂತೆ ಬಡ್ಡಿ ವಿಧಿಸಲಾಗುತ್ತದೆ. ಸಾಲದ ಮೇಲೆ ಶೇಕಡ $8\frac{1}{2}$ ಕಾಲಕ್ಕೆ ಸರಿಯಾಗಿ ಸಾಲ ಮರುಪಾವತಿಯಾಗದೇ ಇದ್ದರೆ ಕಾನೂನಿನಂತೆ ಶೇಕಡ 2 ರಷ್ಟು ಚಕ್ರಬಡ್ಡಿ ವಸೂಲಿಮಾಡುತ್ತಾರೆ.

ಮಿನುಗಾರಿಕೆ ಪ್ರಾಥಮಿಕ ಸಹಕಾರಿ ಸಂಘಗಳ ವಹಿವಾಟಿನ ಬಗ್ಗೆ ಭಟ್ಕಳ ತಾಲೂಕಿನ ಪ್ರಾಥಮಿಕ ಸಹಕಾರಿ ಸಂಘದ ಲೇವಾದೇವಿಯನ್ನು ನಿದರ್ಶನಕ್ಕಾಗಿ ಕೊಡಲಾಗಿದೆ. ಇದರಲ್ಲಿ ಮಿನುಗಾರರು ಪಡೆದ ಸೌಲಭ್ಯ ಹಾಗೂ ಅವರ ಆದಾಯ ವೆಚ್ಚದ ಸಂಕ್ಷಿಪ್ತ ಪರಿಚಯವಾಗುತ್ತದೆ.

1987-88 ನೇ ಸಾಲಿನಲ್ಲಿ ಭಟ್ಕಳ ತಾಲೂಕಿನ ಕೆಲವು ಪ್ರಾಥಮಿಕ ಮೀನುಗಾರಿಕೆ ಸಹಕಾರಿ ಸಂಘಗಳು ನಡೆಸಿರುವ ವ್ಯವಹಾರ (ರೂಪಾಯಿಗಳಲ್ಲಿ)

	ಅಳವೆಕೋಡಿ ಮಿ. ಪ್ರಾ. ಸ. ಸಂ	ಮಾವಿನ ಕುರ್ವೆ ಮಿ. ಪ್ರಾ. ಸ. ಸಂ	ಗಾಂಧಿ ನಗರ ಮಿ. ಪ್ರಾ. ಸ. ಸಂ
1. ಮೀನುಗಾರರಿಗೆ ನೀಡಿರುವ ಸಾಲ		36,060	81460
2. ಸಾಲದ ಮರುಪಾವತಿ	10,892	7,780	
3. (ಅ) ಮೀನಿನ ಒಟ್ಟು ಮಾರಾಟ (ಆ) ಮೀನು, ಹಿಡಿದ ಜಲಚರಗಳ ಮಾರಾಟ (ಇ) ಡೀಜಲ್ ಮತ್ತು ಆಯಿಲ್ ಮಾರಾಟ (ಈ) ರೇಷರ್ ವಸ್ತುಗಳ ಮಾರಾಟ (ಉ) ಇತರೆ	1,32,399 ----- 23,28,798 2,04,115 -----	10,36,275 ----- ------- 53,040 -----	18,90,642 ----- ---- 2,39,170 -----
4. ಆದಾಯ (ಅ) ಮೀನು ಮಾರಾಟದಿಂದ (ಆ) ಮೀನು ಹಿಡಿಯುವ ಇತರೆ ಜಲಚರಗಳಿಂದ (ಇ) ಡೀಜಲ್ ಮತ್ತು ಆಯಿಲ್ ಮಾರಾಟದಿಂದ (ಈ) ಇತರೆ ವಸ್ತುಗಳ ಮಾರಾಟದಿಂದ	 52,932 ---- 24,133 48,191	 43,209 ---- ---- ----	 75,625 ---- ---- 5105
ಒಟ್ಟು ಆದಾಯ	1,25,256	43,209	80,730

2. **ಮೀನುಗಾರಿಕೆ ಮಹಿಳಾ ಸಹಕಾರಿ ಸಂಘ :**

ವ್ಯವಸಾಯದಂತೆಯೇ ಮೀನುಗಾರಿಕೆಯಲ್ಲಿ ಹೆಣ್ಣು ಗಂಡೆಂಬ ಭೇದ ಭಾವವಿಲ್ಲದೆ ದುಡಿಯಬೇಕಾಗುತ್ತದೆ. ಗಂಡು ಮೀನು ಹಿಡಿಯುವ ಶ್ರಮದ ಕೆಲಸದಲ್ಲಿ ನಿರತನಾದರೆ ಹೆಣ್ಣು ಮೀನು ಮಾರಾಟದ ಕೆಲಸದಲ್ಲಿ ನಿರತಳಾಗುತ್ತಾಳೆ. ಗಂಡಿಗೆ ಸರಿಸಮಾನಳಾಗಿ ನಿಂತು ದುಡಿವ ಹೆಣ್ಣಿನ ಪಾತ್ರ ಇತರೆ ಸಮಾಜಗಳಿಗಿಂತ ಮೀನುಗಾರರ ಸಮಾಜದಲ್ಲಿ ಹೆಚ್ಚು ಮಹತ್ವವಾದದ್ದು ಒಂದು ದೃಷ್ಟಿಯಿಂದ ಮನೆನಡೆಸುವ ಜವಾಬ್ದಾರಿ ಹೆಣ್ಣಿನದೇ ಆಗಿರುತ್ತದೆ. ಮನೆಗೆ ಅಗತ್ಯವಾದದ್ದನ್ನು ಕೊಂಡುತರುವವಳು ಅವಳೆ, ಮನೆಯ ಅಭಿವೃದ್ಧಿಗಾಗಿ ಯೋಚಿಸುವಂತಹವಳು ಅವಳೆ. ಮಹಿಳೆಯರಿಂದ ನಡೆಯುವ ಮೀನುಗಾರಿಕೆ ಮಹಿಳಾ ಸಹಕಾರಿ ಸಂಘಗಳು ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳೆರಡರಲ್ಲೂ ಸಮನಾಗಿ ಹಂಚಿಹೋಗಿವೆ. ಇವು ಮೀನುಗಾರರಿಗೆ ಸಾಲದ ಸೌಲಭ್ಯವನ್ನೊದಗಿಸುವುದಕ್ಕಿಂತ ಹೆಚ್ಚಾಗಿ ಮನೆಗೆ ಬೇಕಾದ ದೈನಂದಿನ ವಸ್ತುಗಳನ್ನು, ಮೀನಿಗೆ ಬೇಕಾಗುವ ಉಪ್ಪನ್ನು, ದೋಣಿ ಹಾಗೂ ಯಂತ್ರದ ಬಿಡಿ ಭಾಗ ಮೊದಲಾದವುಗಳನ್ನು ಮಾರಾಟ ಮಾಡುತ್ತಿವೆ.

ಸಹಕಾರಿ ಸಂಘಗಳು ಮೀನುಗಾರರ ಅಭಿವೃದ್ಧಿಗಾಗಿ ದುಡಿಯುತ್ತಿದ್ದರೂ ಮೀನುಗಾರಿಕೆ ಒಂದೆರಡು ವರ್ಷಗಳಿಂದ ಹೇಳಿಕೊಳ್ಳುವಂತಹ ಲಾಭದಾಯಕವಾಗಿಲ್ಲ. ಹಿಡಿದ ಮೀನಿನ ಪ್ರಮಾಣ ಸಹ ವರ್ಷ ವರ್ಷ ಕಡಿಮೆಯಾಗುತ್ತಾ ಹೋಗುತ್ತಿದೆ. ಮೀನು ಬೇಟೆಯಲ್ಲಿ ಸುಧಾರಿತ ತಂತ್ರಗಳನ್ನು ಅಳವಡಿಸಿದ್ದರೂ ಆದಾಯ ಕಡಿಮೆಯಾಗುತ್ತಲೇ ಹೋಗುತ್ತಿದೆ. ಈ ಕಾರಣದಿಂದ ಸಾಲದ ಹೊರೆಹೊತ್ತ ಮೀನುಗಾರರ ಆರ್ಥಿಕ ಸ್ಥಿತಿ ಇಳಿಮುಖವಾಗುತ್ತಿದೆ. ಪಾತಿದೋಣಿಯ ಮೀನುಗಾರರು ತಮ್ಮ ಜನಪದ ವಿಧಾನದ ಮೀನುಗಾರಿಕೆಯನ್ನು ಕಾಯ್ದಿಟ್ಟುಕೊಂಡ ಕಾರಣದಿಂದ ಅವರು ಇದ್ದಹಾಗೇಯೇ ಮುಂದುವರಿಯುತ್ತಿದ್ದಾರೆ.

ಕರ್ನಾಟಕ ಕರಾವಳಿಯ ಮೀನು ಹಿಡಿಯುವ ಕೇಂದ್ರಗಳು :

ಕರ್ನಾಟಕ ಕರಾವಳಿಯಲ್ಲಿ ಉತ್ತರ ಕನ್ನಡ ಜಿಲ್ಲೆಗಿಂತ ದಕ್ಷಿಣ ಕನ್ನಡ ಜಿಲ್ಲೆ ಹೆಚ್ಚು ಅಭಿವೃದ್ಧಿಗೊಂಡಿರುವ ಜಿಲ್ಲೆ. ತೌಲನಿಕವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಜನರು ಬುದ್ಧಿವಂತರೂ ಮತ್ತು ಶ್ರಮ ಜೀವಿಗಳು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವಷ್ಟು ಯಾಂತ್ರಿಕ ದೋಣಿಗಳು ಉತ್ತರ ಕನ್ನಡ ಜಿಲ್ಲೆಯಲ್ಲಿಲ್ಲ. ಇಲ್ಲಿ ಹಿಡಿಯುವಷ್ಟು ಮೀನು ಉತ್ತರ ಕನ್ನಡ ಜಿಲ್ಲೆಯಲ್ಲಿ ಹಿಡಿಯುವುದಿಲ್ಲ. ಆದರೆ ಮೀನು ಹಿಡಿಯುವ ಕೇಂದ್ರಗಳು ದಕ್ಷಿಣ ಕನ್ನಡ ಜಿಲ್ಲೆಗಿಂತ ಉತ್ತರ ಕನ್ನಡ ಜಿಲ್ಲೆಯಲ್ಲಿ ಹೆಚ್ಚಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 12 ಮೀನು ಹಿಡಿಯುವ ಕೇಂದ್ರಗಳಿವೆ. ಅವುಗಳಲ್ಲಿ ಹೆಚ್ಚು ಮೀನು ಹಿಡಿಯುವ ಕೇಂದ್ರಗಳೆಂದರೆ ಮಂಗಳೂರು, ಮಲ್ಪೆ ಮತ್ತು ಗಂಗೊಳ್ಳಿ. ಎಲ್ಲಕ್ಕಿಂತ ಕಡಿಮೆ ಪ್ರಮಾಣದಲ್ಲಿ ಮೀನು ಹಿಡಿಯುವ ಕೇಂದ್ರ ಉದ್ಯಾವರ. ಉತ್ತರ ಕನ್ನಡ ಜಿಲ್ಲೆಯಲ್ಲಿ 16 ಮೀನುಹಿಡಿಯುವ ಕೇಂದ್ರಗಳಿದ್ದು ಅವುಗಳಲ್ಲಿ ಕಾರವಾರ, ಹೊನ್ನಾವರ ಮತ್ತು ಭಟ್ಕಳ ಕೇಂದ್ರಗಳು ಹೆಚ್ಚು. ಮೀನು ಹಿಡಿಯುವ ಕೇಂದ್ರಗಳಾಗಿವೆ. ಅತಿ ಕಡಿಮೆ ಪ್ರಮಾಣದಲ್ಲಿ ಮೀನು ಹಿಡಿಯುವ ಕೇಂದ್ರವೆಂದರೆ ಅರ್ಗ ಎಂಬುದು.

ಕರ್ನಾಟಕ ಕರಾವಳಿಯಲ್ಲಿ ಹಿಡಿಯುವ ಒಟ್ಟು ಮೀನಿನ ಶೇಕಡಾ 65 ರಷ್ಟು ಮೀನನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಿಡಿಯಲಾಗುತ್ತದೆ. ಆದ್ದರಿಂದಲೇ ಉತ್ತರ ಕನ್ನಡ ಜಿಲ್ಲೆಯಲ್ಲಿ 5 ಐಸ್ ಪ್ಲಾಂಟ್‌ಗಳು 4ಕೋಲ್ಡ್ ಸ್ಟೋರೇಜ್‌ಗಳು 18 ದೋಣಿ ನಿರ್ಮಾಣದ ಕೇಂದ್ರಗಳಿದ್ದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 28 ಐಸ್‌ಪ್ಲಾಂಟ್‌ಗಳು 12 ಕೋಲ್ಡ್ ಸ್ಟೋರೇಜ್‌ಗಳು 27 ದೋಣಿ ನಿರ್ಮಾಣದ ಕೇಂದ್ರಗಳಿವೆ. ಹೊರದೇಶಗಳಿಗೆ ಮೀನು ರಫ್ತು ಮಾಡುವುದರಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಬಹಳ ಮುಂದಿದೆ.

ಮೀನು ಹಿಡಿಯುವ ದೋಣಿ ಸಿದ್ಧ ಮಾಡವುದು ಅಷ್ಟು ಸುಲಭದ ಕೆಲಸವಲ್ಲ. ಹಲವರ ಸಹಾಯ ಅದಕ್ಕೆ ಅಗತ್ಯ ಅದಕ್ಕಾಗಿ ಮೀನುಗಾರರು ಎಷ್ಟು ಶ್ರಮ ಪಡುತ್ತಾರೆಂಬುದನ್ನು ತಿಳಿಯಲು ಅದರ ಪರಿಚಯ ಅಗತ್ಯ. ಹಣ ಪಡೆದು ಸಿದ್ಧಗೊಳಿಸುವ ದೋಣಿಯ ದುಡಿದು ಸಾಲತೀರಿಸಿದ ನಂತರವೇ ಮೀನುಗಾರರಿಗೆ ಚಿಂತೆಯಿಲ್ಲದೆ ನಿದ್ದೆ ಬರುವುದು. ಒಂದು ದೋಣಿಯ ಸಿದ್ಧತೆಯ ಹಿಂದೆ ಎಷ್ಟು ಕೈಗಳು ಸಹಾಯಕವಾಗಿರುತ್ತದೆಂಬುದನ್ನು ಈ ಕೆಳಗಿನ ಪಟ್ಟಿಕಂಡರೆ ತಿಳಿಯುತ್ತದೆ.

ಮೀನು ಹಿಡಿವ ದೋಣಿಗಳ ಬೆಲೆ ಮತ್ತು ಹಣಕಾಸಿನ ಸೌಲಭ್ಯ :

ದೋಣಿಯ ಸರಾಸರಿ ಬೆಲೆ, ಹಣಕಾಸಿನ ಸೌಲಭ್ಯ 1985 - 86 ರಲ್ಲಿ				
ಬಂಡವಾಳ ದೊರೆಯುವ ಮಾರ್ಗ	ಪರ್ಸ್-ಸೀನರ್	ಟ್ರಾಲರ್	ಗಿಲ್‌ನಟ್	ನಾಡ ದೋಣಿ
1. ಸ್ವಂತ ಬಂಡವಾಳ	1,37, 850 (19.6%)	49,568 (13.3%)	17,800 (35%)	9,200 (28.1%)
2. ಬ್ಯಾಂಕುಗಳಿಂದ	4, 39,477 (62.6%)	2,37,680 (63.3%)	10,383 (20.8%)	9,248 (28.3%)
3. ಮೀನುಗಾರರ ಸಹಕಾರಿ ಸಂಘಗಳಿಂದ	62,322 (8,9%)	41,410 (11.0%)	5,188 (10.4%)	5,478 (16.8%)
4. ಖಾಸಗಿ ಸಾಲದಿಂದ	28,917 (4.1%)	23,357 (11.0%)	6,554 (10.4%)	5,637 (16.8%)
5. ಸ್ನೆಹಿತರು ಮತ್ತು ಬಂಧುಗಳಿಂದ ಕೈ ಬದಲು	33,280 (4.8%)	23,435 (6.2%)	10,036 (20.1%)	3,133 (9.6%)
	7,01846	3,75450	49,961	32,696

ಇಷ್ಟೆಲ್ಲ ಕಷ್ಟಪಟ್ಟು ದೋಣಿಮಾಡಿ ಶ್ರಮಪಟ್ಟು ಮೀನುಹಿಡಿದರೆ ಅವರಿಗೆ ಸಿಗುವ ಲಾಭವೆಷ್ಟೆಂಬುದನ್ನು ಗಮನಿಸಿದರೆ ಅವರ ಶ್ರಮಕ್ಕೆ ಸಿಗುತ್ತಿರುವ ಪ್ರತಿಫಲ ಎಷ್ಟೆಂಬುದರ ಅರಿವಾಗುತ್ತದೆ.

ದೋಣಿವಾರು ವಾರ್ಷಿಕ ಖರ್ಚು ಮತ್ತು ಆದಾಯದ ಅಂದಾಜು :

ರೂಪಾಯಿಗಳಲ್ಲಿ

		ಪರ್ಸ್-ಸೀನರ್	ಟ್ರಾಲರ್	ಗಿಲ್-ನಟ್	ನಾಡದೋಣಿ	
1)	ಹಿಡಿದ ಮೀನಿನ ಅಂದಾಜುಬೆಲೆ	6,85,974	2,20,316	77,370	26,289	
2)	ಖರ್ಚು					
ಅ)	ಕೂಲಿ	1,87,027	37,167	20,754	7,526	
		(36.5%)	(23.4%)	(43.6%)	(67.5%)	
ಆ)	ಇಂಧನ	1,43,592	80,619	19,368		
		(28.0%)	(51.0%)	(46.7%)	----	
ಇ)	ಬಲೆಯ ಬಂಡವಾಳ ಹಾಗೂ ರಿಪೇರಿ	45,180	8,577	1,615		
		(8.8%)	(5.4%)	(3.4%)		
ಈ)	ದೋಣಿ ರಿಪೇರಿ	37,850	17,110	1,486	1,890	
		(7.4%)	(10.7%)	(3.1%)	(16.9%)	
ಉ)	ದೋಣಿ ಬಾಡಿಗೆ	35,275				
		(6.9%)				
ಊ)	ವಿಮೆ	16,284	5,890	580		
		(3.3%)	(3.7%)	(1.1%)		
ಎ)	ಮೀನುಹಿಡಿಯುದವರಿಗೆ ಆಹಾರ	33,353	3,655	1,326		
		(6.5%)	(2.3%)	(2.8%)		
ಏ)	ಮಾರಾಟದ ಕಮೀಷನ್ನು	14,205	5,529	2,495	1,750	
		(2.6%)	(3.4%)	(5.2%)	(15.6%)	
	ಒಟ್ಟು ಖರ್ಚು	5,12,764	1,58,547	47,624	11,156	
	ಹಿಡಿದ ಮೀನಿನ ಒಟ್ಟು ಬೆಲೆ	6,85,974	2,20316	77,370	26,289	
	ಒಟ್ಟು ಖರ್ಚು	5,12,764	5,58,547	47,624	11,156	
	ವಾರ್ಷಿಕ ಆದಾಯ	1,73,210	61,769	29,744	15,133	

ಸಾಲ ಪಡೆದಿದ್ದರೆ ಆದಾಯದಲ್ಲಿ ಸಾಲದ ಕಂತು ಮತ್ತು ಬಡ್ಡಿ ತೆಗೆಯಬೇಕಾಗುತ್ತದೆ.

ಹಿಂದೆ ಒಂದು ಜಾತಿಯವರಿಗೆ ಮೀಸಲಾಗಿದ್ದ ಈ ವೃತ್ತಿಯು ಅಂದಿನ ಸಾಂಪ್ರದಾಯಿಕ ಮಹತ್ವವನ್ನು ಕಳೆದುಕೊಂಡು ಇಂದು ಆರ್ಥಿಕ ಮಹತ್ವವನ್ನು ಪಡೆಯಿತು. ಮೀನುಹಿಡಿಯುವ ಪ್ರಮುಖ ಉದ್ದೇಶವು ಆರ್ಥಿಕಾಭಿವೃದ್ಧಿಯೇ ಆಗಿರುತ್ತದೆ. ಆದ್ದರಿಂದಲೇ ಯಾವ ಸ್ಥಳದಲ್ಲಿ ಹೆಚ್ಚಾಗಿ ಮೀನಿಹಿಡಿಯಲಾಗುತ್ತಿದೆಯೇ ಆ ಸ್ಥಳದ ಜನಜೀವನದ ಮಟ್ಟಸುಧಾರಿಸಲ್ಪಟ್ಟಿರುತ್ತದೆ. ಹೀಗಿದ್ದರೂ ಬಹುಮಂದಿ ಮೀನುಗಾರರಿಗೆ ಇನ್ನೂ ಆದಾಯ ತರುವ ಮಾರುಕಟ್ಟೆಗಳು ಸಿಕ್ಕಿಲ್ಲ. ಅವಶ್ಯಕತೆ ಇದ್ದವರಿಗೆ ಹಣ ಸಹಾಯ ದೊರೆಯುತ್ತಿಲ್ಲ. ಹಿಡಿದ ಮೀನನ್ನು ಮತ್ತು ಒಣ ಮೀನನ್ನು ರಕ್ಷಿಸಿಡುವ ಸೌಲಭ್ಯ ಸಿಗುತ್ತಿಲ್ಲ. ಈ ದೃಷ್ಟಿಯಿಂದ ಉತ್ತರ ಕನ್ನಡ ಜಿಲ್ಲೆಯ ಮೀನುಗಾರರಿಗಿಂತ ದಕ್ಷಿಣ ಕನ್ನಡ ಜಿಲ್ಲೆಯ ಮೀನುಗಾರರು ಉತ್ತಮ ಸ್ಥಿತಿಯಲ್ಲಿದ್ದಾರೆ. ಅವರ ಶ್ರಮಕ್ಕೆ ಸರಿಯಾದ ಪ್ರೋತ್ಸಾಹ ಮತ್ತು ಪ್ರತಿಫಲ ದೊರೆಯುತ್ತಿದೆ. ಇದೇ ಸೌಲಭ್ಯ ಉತ್ತರ ಕನ್ನಡ ಜಿಲ್ಲೆ ಮೀನುಗಾರರಿಗೂ ದೊರೆತರೆ ಕರ್ನಾಟಕ ಕರಾವಳಿಯ ಮೀನುಗಾರಿಕೆ ಉದ್ದಿಮೆ ಲಾಭದಾಯಕವಾಗಲುಸಾಧ್ಯ.

ಮೀನುಗಾರಿಕೆ ಇಲಾಖೆಯವರು ಪ್ರತಿವರ್ಷ ಕರಾವಳಿಯ ಮೀನು ಉತ್ಪಾದನೆಯ ಹೆಚ್ಚಳಕ್ಕಾಗಿ ಶ್ರಮಿಸುತ್ತಿದ್ದರು. ಮೀನು ಉತ್ಪಾದನೆಯಲ್ಲಿ ಕಳೆದ ಹನ್ನೆರಡು ವರ್ಷಗಳ ಅಂಕಿ ಅಂಶಗಳನ್ನು ನೋಡಿದಾಗ ಅಂತಹ ಗಮನಾರ್ಹವಾದ ಹೆಚ್ಚಳ ಕಂಡುಬರುವುದಿಲ್ಲ. ಆದರೂ ಮೀನುಗಾರಿಕೆ ಇಲಾಖೆಯ ಅಂಕಿ ಅಂಶಗಳು ಖಚಿತವೆಂದು ನಂಬುವುದು ಸಹ ಕಷ್ಟ. ಏಕೆಂದರೆ ಇಲಾಖೆಯವರು ಗುರುತಿಸಿರುವ ಮೀನು ಹಿಡಿಯುವ ಕೇಂದ್ರದ ಹೊರತು ಇನ್ನೂ ಹಲವು ಚಿಕ್ಕಪುಟ್ಟಮೀನು ಹಿಡಿದ ಕೇಂದ್ರಗಳಿದ್ದು ಅಲ್ಲಿ ಹಿಡಿವ ಮೀನುಗಳ ಲೆಕ್ಕ ಇಲಾಖೆಗೆ ಸಿಗುವುದಿಲ್ಲ. ಅಲ್ಲದೆ ಪಾತಿ ದೋಣಿಯಿಂದ ಹಿಡಿದ ಮೀನಲ್ಲಿ ಬಹುಭಾಗ ಚಿಲ್ಲರೆ ಮಾರಾಟವಾಗಿ ಹೋಗುತ್ತದೆ. ಈ ಕಾರಣದಿಂದ ಇಲಾಖೆಯವರ ಅಂಕಿ ಅಂಶದಲ್ಲಿ ತೋರಿಸಿರುವ ಮೀನಿನ ಉತ್ಪಾದನೆಗಿಂತ ಹೆಚ್ಚಿನ ಉತ್ಪಾದನೆ ಕರ್ನಾಟಕ ಕರಾವಳಿಯಲ್ಲಿ ಆಗುತ್ತಿದೆ. ಆದರೆ ಅದಕ್ಕೆ ಸರಿಯಾದ ಮಾರುಕಟ್ಟೆಯ ವ್ಯವಸ್ಥೆ ದೊರೆಯದೇ ಇರುವುದರಿಂದ ಮೀನುಗಾರರ ಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುತ್ತಿಲ್ಲ. ಮೀನುಗಾರರಿಗಿಂತ ಮೀನು ವ್ಯಾಪಾರಿಗಳ ಆರ್ಥಿಕ ಸ್ಥಿತಿ ದಿನಗಳೆದಂತೆ ಉತ್ತಮವಾಗುತ್ತಿದೆ. ಕರ್ನಾಟಕ ಕರಾವಳಿಯಲ್ಲಿ ಹಿಡಿಯಲಾಗುತ್ತಿರುವ ಮೀನುಗಳಲ್ಲಿ ಬಾಂಗಡೆ ಮತ್ತು ಬೈಗೆ ಅಥವಾ ಭೂತಾಯಿ ಜಾತಿಯ ಮೀನು ಹೆಚ್ಚಾಗಿ ಹಿಡಿಯುತ್ತಿದ್ದು ಅವುಗಳಿಗೆ ಹೇಳಿಕೊಳ್ಳುವಂತಹ ಬೇಡಿಕೆ ಇಲ್ಲದ್ದೂ ಸಹ ಮೀನುಗಾರರ ಆರ್ಥಿಕ ಸ್ಥಿತಿಯಲ್ಲಿ ತೀವ್ರಗತಿಯ ಸುಧಾರಣೆಯಾಗದಿರಲು ಕಾರಣವೆನ್ನಬಹುದು.

ಆ) ಜಲಚರ ಪ್ರಾಣಿಗಳ ಸಂರಕ್ಷಣಾ ವಿಧಾನ :

ದಿನಗಳೆದಂತೆ ಜಲಚರ ಪ್ರಾಣಿಗಳ ಉಪಯೋಗ ಹೆಚ್ಚಾಗುತ್ತಾಹೋಗುತ್ತಿರುವಂತೆ ಹೊಸಹೊಸ ತಂತ್ರಗಳಿಂದ ಅವುಗಳನ್ನು ಸೆರೆಹಿಡಿಯುವುದು ಸಹ ತಿವ್ರಗತಿಯಲ್ಲಿ ಸಾಗುತ್ತಿದೆ. ಹೀಗೆಯೇ ಇದು ಮುಂದುವರಿದರೆ ಸಮುದ್ರ ಸಂಪತ್ತು ಬರಿದಾಗುತ್ತಾ ಹೋಗುವ ಸಂಭವ ತಲೆತೋರಬಹುದು. ಮೀನುಗಾರಿಕೆಯ ಉನ್ನತಿಗೆ ಮೀನನ್ನು ಹೆಚ್ಚು ಹೆಚ್ಚು ಹಿಡಿಯುವುದು ಹೇಗೆ ಪ್ರಮುಖವೋ ಹಾಗೆಯೇ ಜಲಚರ ಪ್ರಾಣಿಗಳ ಬೆಳೆವಣಿಗೆಗೆ ಅವಕಾಶ ಮಾಡಿಕೊಡುವುದು ಸಹ ಮುಖ್ಯವಾಗಿದೆ. ಇವೆರಡು ಒಟ್ಟೊಟ್ಟಿಗೆ ಸಾಗಬೇಕು. ಇಲ್ಲದಿದ್ದರೆ ಮೀನುಗಾರರು ಒಂದು ಕಾಲಕ್ಕೆ ತಲೆಯ ಮೇಲೆ ಕೈ ಹೊತ್ತು ಕುಳಿತುಕೊಳ್ಳುವಂತಾಗಬಹುದು. ಸಾಮಾನ್ಯವಾಗಿ ಮೀನುಗಾರಿಕೆಯಲ್ಲಿನ ಪ್ರಮುಖ ಅಂಶಗಳೆಂದರೆ, ದೊರೆಯಬಹುದಾದ ಮೀನು ಸಂದಣಿಯ ಸಾಂದ್ರತೆ, ಅಭಿವೃದ್ಧಿಯ ಗತಿ, ನೈಸರ್ಗಿಕ ಕಾರಣಗಳಿಂದ ಸತ್ತು ಹೋಗಬಹುದಾದ ಮೀನಿನ ಪ್ರಮಾಣದ ಗರಿಷ್ಠಮಿತಿಗಳು ಮತ್ತು ವಾರ್ಷಿಕವಾಗಿ ಹಿಡಿಯಬಹುದಾದ ಪ್ರಮಾಣದ ಪರಿಮಿತಿ ಈ ನಾಲ್ಕು ಅಂಶಗಳು ಒಂದನ್ನೊಂದು ಅವಲಂಬಿಸಿವೆ.

ಮೀನು ಹಿಡಿಯುವ ಕಾಲದಲ್ಲಿ ಅವುಗಳ ಸಾಂದ್ರತೆ ವಾಸಿಸುವ ಒಳ್ಳೆಯ ವಾತಾವರಣವನ್ನು ಮತ್ತು ಬೆಳೆವಣಿಗೆಯ ಗತಿಯನ್ನು ಅವಲಂಬಿಸಿರುತ್ತದೆ. ಮೀನಿನ ವಂಶಾಭಿವೃದ್ಧಿಯಾಗಿ ಬೆಳೆವಣಿಗೆಗೆ ಸರಿಹೊಂದುವ ಸನ್ನಿವೇಶಗಳು ಒದಗಿ ಸಂಣಿಯ ಸಾಂದ್ರತೆ ಹೆಚ್ಚಾಗಲು ಕಾಲವಕಾಶದ ಅಗತ್ಯವಿದೆ. ಇದನ್ನು ಗಮನಿಸದೆ ಮರು ಋತುವಿನಲ್ಲಿ ಮೀನು ಹಿಡಿಯಲು ಪ್ರಾರಂಭಿಸಿದಾಗ ಕಡಿಮೆ ಪ್ರಮಾಣದಲ್ಲಿ ಮೀನು ದೊರೆಯುತ್ತದೆ ಇದನ್ನು ಸಮುದ್ರದಲ್ಲಿ ಮೀನಿನ ಕೊರತೆ ಎಂದು ಕರೆಯುತ್ತಾರೆ.

ವಿವಿಧ ಕಾರಣಗಳಿಂದ ಮೀನು ಸಾಯುವುದು ಹೆಚ್ಚಾದಾಗ ಅದನ್ನು ತಡೆಗಟ್ಟುವ ಕ್ರಮ ಕೈಗೊಳ್ಳಬೇಕಾಗುತ್ತದೆ. ಮೀನು ಹೆಚ್ಚು ಸಂಖ್ಯೆಯಲ್ಲಿ ಗುಂಪೂಗೂಡಿ ಕೊಂಡಿರುವುದನ್ನು ತಪ್ಪಿಸುವುದರ ಮೂಲಕ, ಒದಗಬಹುದಾದ ರೋಗ ಮತ್ತು ಅವಲಂಬಿ ಜೀವಿಗಳ ಕಾಟವನ್ನು ತಡೆಯಬಹುದೆಂದು ಹೇಳಲಾಗುತ್ತದೆ.

ಸಮುದ್ರದಲ್ಲಿ ದೊರೆಯುವ ಮೀನಿನ ಪ್ರಮಾಣವು ಸಂದಣಿಯ ಸಾಂದ್ರತೆಯನ್ನು ಅವಲಂಬಿಸಿರುತ್ತದೆ. ತೀವ್ರಗತಿಯಿಂದ ಪ್ರಾರಂಭವಾದ ಮೀನುಗಾರಿಕೆಯಲ್ಲಿ ಮೊದ ಮೊದಲು ಉತ್ತಮ ಪ್ರತಿಫಲಕಂಡರು ಕ್ರಮೇಣ ಹಿಡಿಯುವ ವೇಗ ಹೆಚ್ಚಾದಂತೆ ಪ್ರತಿಫಲ ಕಡಿಮೆಯಾಗುತ್ತದೆ. ಈ ಕಾರಣದಿಂದ ಮೀನಿನ ಸಾಂದ್ರತೆಯನ್ನು ಸಮ ಪ್ರಮಾಣದಲ್ಲಿಡಲು ಹಿಡಿಯುವ ಮೀನಿನ ಗತಿಯಲ್ಲಿ ನಿಯಂತ್ರಣ ತರುವುದು. ಇಲ್ಲದಿದ್ದರೆ ಮೀನಿನ ಪ್ರಮಾಣ ಬಹುಬೇಗ ಖಾಲಿಯಾಗುವುದಲ್ಲದೆ ಒಂದೇ ಬಾರಿಗೆ ಹೆಚ್ಚು ಮೀನು ಮಾರುಕಟ್ಟೆಗೆ ಸೇರುವುದರಿಂದ ಸಿಗುವ ಬೆಲೆಯೂ ಕಡಿಮೆ ಯಾಗುತ್ತದೆ. ಆದ್ದರಿಂದ ಅದನ್ನು ನಿಯಂತಿಸಲು ಕೆಲವು ಕ್ರಮಗಳನ್ನು ಕೈಗೊಳ್ಳಬೇಕೆಂದು ಅನುಭಾವಿಗಳು ಸೂಚಿಸುತ್ತಾರೆ.

1) ವಾರ್ಷಿಕವಾಗಿ ಹಿಡಿಯುವ ಮೀನಿನ ಗರಿಷ್ಠ ಮಿತಿಯನ್ನು ಗೊತ್ತು ಮಾಡುವುದು.
2) ಇಡೀ ವರ್ಷ ಮೀನು ಹಿಡಿಯುವುದರ ಮೇಲೆ ನಿರ್ಬಂಧ ವಿಧಿಸುವುದು.
3) ಮೀನಿನ ಮರಿ ಹಿಡಿಯುವುದನ್ನು ತಡೆಗಟ್ಟುವುದು.
4) ಮೀನುಗಳು ಮೊಟ್ಟೆ ಇಡುವ ಋತುಗಳಲ್ಲಿ ಮೀನುಗಾರಿಕೆಯನ್ನು ನಿಷೇಧಿಸುವುದು.
5) ಮೀನುಹಿಡಿಯಲು ಉಪಯೋಗಿಸುವ ವಿನಾಶಕಾರಿ ಸಲಕರಣೆಗಳನ್ನು ನಿಷೇಧಿಸುವುದು.
6) ಸಮುದ್ರಕ್ಕೆ ಬಿಡುವ ಕಲುಷಿತ ನೀರನ್ನು ತಡೆಗಟ್ಟುವುದು.

ಸಮುದ್ರದಲ್ಲಿನ ಪರಿಸರವು ಮೀನಿನ ವೃದ್ಧಿಗೆ ಬಹು ಮುಖ್ಯವಾದುದು. ಆದರೆ ಅದು ಸದಾ ಒಂದೇ ರೀತಿಯಲ್ಲಿರುವುದಿಲ್ಲ. ಒಂದು ವರ್ಷ ಮೀನಿನ ವೃದ್ಧಿಗೆ ಅದು ಅನುಕೂಲವಿದ್ದರೆ ಮತ್ತೊಂದು ವರ್ಷ ಅನಾನುಕೂಲವಿರುತ್ತದೆ. ಅದರಲ್ಲೂ ಸಹ ಮೀನು ಮೊಟ್ಟೆ ಹಾಕುವಾಗ ಮತ್ತು ಮೊಟ್ಟೆಯಿಂದ ಮೀನು ಹೊರಬರುವಾಗ ಸಮುದ್ರದಲ್ಲಿನ ಪರಿಸರ ಅನುಕೂಲಕರವಾಗಿದ್ದರೆ ಮಾತ್ರ ಆ ವರ್ಷದ ಮೀನಿನಲ್ಲಿ ವೃದ್ಧಿ ಕಾಣಲು ಸಾಧ್ಯ. ಇದು ನೈಸರ್ಗಿಕವಾದದ್ದರಿಂದ ಮಾನವನು ಇದನ್ನು ಹತೋಟಿಯಲ್ಲಿಡುವುದು ಕಷ್ಟವಾಗುತ್ತದೆ. ಎಷ್ಟೋ ಸಂದರ್ಭದಲ್ಲಿ ಸಮುದ್ರದೊಳಗಿನ ಉಷ್ಣಾಂಶದ ವ್ಯತ್ಯಾಸದಿಂದ ಮೀನುಗಳು ರೋಗಕ್ಕೆ ತುತ್ತಾಗುತ್ತವೆ. ಜೊತೆ ಜೊತೆಗೆ ಸಮುದ್ರದಲ್ಲಿ ಉದ್ಭವಿಸುವ ವಿಷಪೂರಿತ ಸೂಕ್ಷ್ಮ ಜೀವಿಗಳು ಮೀನುಗಳಿಗೆ ರೋಗತರುತ್ತವೆ. ನೀರಿನಲ್ಲಿ ಈ ವಿಷಪೂರಿತ ಜೀವಾಣುಗಳ ಹೆಚ್ಚಳವನ್ನು ನೀರು ಕೆಂಪು ಬಣ್ಣಕ್ಕೆ ತಿರುಗುವುದರ ಮೇಲೆ ಊಹಿಸಲಾಗುತ್ತದೆ. ಇದಕ್ಕೆ ಜನಪದರು ಕೆಂಪು ಆಲೆ ಬಂದಿದೆ ಆದ್ದರಿಂದ ಮೀನು ಸಿಗುವುದು ಕಷ್ಟ ಎಂದು ಹೇಳುತ್ತಾರೆ.

ಸಮುದ್ರದೊಳಗಿನ ಸ್ವಾಭಾವಿಕ ಬದಲಾವಣೆಯ ಕಾರಣದಿಂದ ಜಲಚರ ಪ್ರಾಣಿ ಸಂಪತ್ತಿನ ನಾಶ ಒಂದೆಡೆಯಿಂದ ಆದರೆ ಮಾನವನ ಆಶೆಯ ಕಾರಣದಿಂದ ಮತ್ತೊಂದೆಡೆ ಮೀನುನಾಶವಾಗುತ್ತಿದೆ. ಕಾರ್ಖಾನೆಗಳಿಂದ ಬಿಡುವ ನೀರು ಹಲವು ಬಗೆಯಾದ ವಿಷಕಾರಿ ರಾಸಾಯನಿಕ ವಸ್ತುಗಳಿಂದ ಕುಡಿದ್ದು ಅದು ಮೀನಿನ ಸಾವಿಗೆ ಕಾರಣವಾಗುತ್ತಿದೆ. ಅದೇ ರೀತಿ ಇತ್ತೀಚೆಗೆ ಹೆಚ್ಚಾಗುತ್ತಿರುವ ಅಣುವಿದ್ಯುತ್ ಕಾರ್ಯಗಾರಗಳಿಂದ ಹೊರದೂಡಲ್ಪಟ್ಟ ವ್ಯರ್ಥವಾದ ವಸ್ತುಗಳನ್ನು ಸಮುದ್ರದಲ್ಲಿ ವಿಲೀನಗೊಳಿಸುತ್ತಿರುವುದು ಮತ್ತು ಅಣುಬಾಂಬು ಸ್ಫೋಟದ ತರಬೇತಿಯನ್ನು ಸಮುದ್ರದೊಳಗೆ ನಡೆಸುವುದು ಮೀನುಕುಲದ ನಾಶಕ್ಕೆ ನಾಂದಿಯಾಗಿದೆ. ಆದ್ದರಿಮದ ಮಾನವನ ಈ ವಿನಾಶಕಾರಿ ಪ್ರವೃತ್ತಿಯು ನಿಲ್ಲದ ಹೊರತು ಮೀನಿನ ಸಂರಕ್ಷಣೆ ಅಸಾಧ್ಯವೆನ್ನಬಹುದು.

ಮೀನುಗಾರಿಕೆಯು ಲಾಭದಾಯಕ ವೃತ್ತಿಗಳಲ್ಲೊಂದಾಗಿರುವುದರಿಂದ ಮೀನಿನ ಸಂರಕ್ಷಣೆಯ ಕಡೆಗೆ ಮಾನವನ ಗಮನ ಹರಿಯುವುದು ಅತಿ ಅವಶ್ಯಕ. ಇದಕ್ಕಾಗಿ ಈಗಾಗಲೇ ಜೂನ್‌ನಿಂದ ಅಗಸ್ಟವರೆಗೆ ಮೀನುಹಿಡಿಯುವುದು ನಿಷೇಧಿಸುವ ಕ್ರಮವನ್ನು ಕೈಗೊಳ್ಳಲಾಗಿದೆ. ಅಣುಬಾಂಬುಗಳ ಸ್ಫೋಟ ಮತ್ತು ಅಣುವಿದ್ಯುತ್ ಕಾರ್ಯಗಾರಗಳಿಂದ ಸಮುದ್ರದಲ್ಲಿ ಚೆಲ್ಲುವ ವಿಷಕಾರಿಕ ವಸ್ತುಗಳನ್ನು ತಡೆಗಟ್ಟುವ ಕೆಲಸ ನಡೆಯಬೇಕು. ಜೊತೆಗೆ ಮೇಲೆ ತಿಳಿಸಿದ ನಿರ್ಬಂಧಗಳನ್ನು ಚಾಚೂತಪ್ಪದೆ ಅನುಸರಿಸಿದಾಗ ಮಾತ್ರ ಸಮುದ್ರ ಸಂಪತ್ತನ್ನು ಸುರಕ್ಷಿತವಾಗಿ ಸಂರಕ್ಷಿಸಿಟ್ಟುಕೊಳ್ಳಲು ಸಾಧ್ಯ.

3 : 3 ಧಾರ್ಮಿಕ

ಹಬ್ಬಗಳು :

ಕಡಲಿಗರಿಗೆ ಸಮುದ್ರವೇ ಜೀವನಾಧಾರ. ಅದೊಂದು ದೈವೀ ಶಕ್ತಿ. ಸಂಪತ್ತಿನ ಗಣಿ. ಉಳಿದವರಿಗೆ ಸಮುದ್ರ ಬೆಟ್ಟ, ಗುಡ್ಡಗಳಂತೆ ಪ್ರಕೃತಿಯ ಒಂದು ಅಂಗ ಮಾತ್ರ.

1. ನೂಲು ಹುಣ್ಣಿಮೆ :

ಕಡಲ ಹಬ್ಬಗಳಲ್ಲಿ ''ನೂಲು ಹುಣ್ಣಿಮೆ'' ಪ್ರಮುಖವಾದುದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದನ್ನು '' ಕಡಲ ಪೂಜೆ''ಯ ಹಬ್ಬವೆನ್ನುತ್ತಾರೆ. ಅವರು ಶ್ರಾವಣ ಮಾಸದಲ್ಲಿ ಈ ಹಬ್ಬವನ್ನು ಆಚರಿಸುವುದು ಹೆಚ್ಚು. ಆ ಸಂದರ್ಭದಲ್ಲಿ ಅವರು ಮನೆಸಾರಿಸಿ ಸ್ನಾನ ಮಾಡಿ ''ಅವಲಕ್ಕಿ ಹೊದಳು'' '' ಪನಿವಾರ'' ಮಾಡುತ್ತಾರೆ. ಅವುಗಳನ್ನು ಕಡಲಿನ ತೀರಕ್ಕೆ ತಂದು ಬಾಳೆ ಎಲೆಯಲ್ಲಿ ಹಾಕಿ, ಲೋಬಾನ ಧೂಪ ಹಾಕಿ, ಕರ್ಪೂರದಾರತಿ ಬೆಳಗಿ ಪೂಜೆ ಸಲ್ಲಿಸುತ್ತಾರೆ. ಅನಂತರ ಎಡೆಯನ್ನು ಕಡಲಿಗರ್ಪಿಸುತ್ತಾರೆ. ಆ ಸಂದರ್ಭದಲ್ಲಿ ತಮ್ಮನ್ನು ರಕ್ಷಿಸುವಂತೆ, ಮೀನು ಸಂಪತ್ತು ಸಿಗುವಂತೆ ಪ್ರಾರ್ಥಿಸುತ್ತಾರೆ.

ತುಳುವರು ಕಡಲ ಪೂಜೆ ಮಾಡುವಾಗ ಹಾಲನ್ನು ಕಡಲಿಗೆ ಅರ್ಪಿಸಿ ತೆಂಗಿನ ಕಾಯಿ ಒಡೆಯುತ್ತಾರೆ. ಆಗ ಅವರು ಪ್ರಾರ್ಥಿಸುವುದನ್ನು ವೆಂಕಟರಾಜ ಪುಣಿಂಚತ್ತಾಯ ಹೀಗೆ ತಿಳಿಸುತ್ತಾರೆ. '' ಕಡಲ್ ಮಲ್ಲೆ ಉಂಡು, ಅವೆನ್ ಶಾಂತ ಮಲ್ಪೊಡು, ಉಂಕ್ಲ ಕಪ್ಪೊಡು ಉಲ್ಲೊ, ಎಂದ್ಲು ನೆನೆತಿನಾಡ್ ಸಂಪಾದನೆ ಮಲ್ತ್ ಕೊರೊಡು, ಅಂಚೆನೆ ಎಂಕ್ಲ ನಡೆವಳಿ ಕೆಡ್ ಎಚ್ಚಿಕಮ್ಮಿ ಉಪರಲ ಯಾವು, ಅವನಗಲಾ ಮಾಪು ಮಲ್ಪೊಡು'' ಇದರ ಅರ್ಥವೆಂದರೆ ''ಸಮುದ್ರ ದೊಡ್ಡದುಂಟು, ಅದನ್ನು ಶಾಂತವಾಗಿ ಮಾಡಬೇಕು. ನಾವು ಕಷ್ಟದಲ್ಲಿದ್ದೇವೆ. ನಾವು ನಡೆಸಿದಷ್ಟು ಸಂಪಾದನೆ ಒದಗಿಸಿ ಕೊಡಬೇಕು'' ಎಂಬುದು.

ಉತ್ತರ ಕನ್ನಡ ಜಿಲ್ಲೆಯಲ್ಲಿ ನೂಲುಹುಣ್ಣಿಮೆಯ ಆಚರಣೆ ದಕ್ಷಿಣ ಕನ್ನಡ ಜಿಲ್ಲೆಗಿಂತ ಭಿನ್ನವಾಗಿದೆ. ವೈಷ್ಣವ ಸಂಪ್ರದಾಯದ ಲಕ್ಷಣಗಳು ಇಲ್ಲಿನ ಆಚರಣೆಯಲ್ಲಿ ಕಾಣುತ್ತೇವೆ. ಮೊದಲಿಗೆ ತುಳಸಿಕಟ್ಟೆ ಮತ್ತು ದೋಣಿಯನ್ನೆಲ್ಲಾ ಚೆನ್ನಾಗಿತೊಳೆಯುತ್ತಾರೆ. ಅದರ ಮೇಲೆ ''ಸೇಡಿ'' ಯಿಂದ '' ಹಲಿ'' ಬರೆಯುತ್ತಾರೆ. ಮಾವಿನ ಸೊಪ್ಪನ್ನು ತುಳಸಿ ಕಟ್ಟೆ ಮತ್ತು ದೋಣಿಗೆ ಸಿಕ್ಕಿಸುತ್ತಾರೆ. ಸ್ನಾನ ಮಾಡಿ ಜನಿವಾರ, ಬಾಳೆಹಣ್ಣು ಮೊದಲಾದ ಪೂಜಾ ಸಾಮಗ್ರಿಗಳನ್ನು ತೆಗೆದುಕೊಂಡು ತೀರಕ್ಕೆ ಹೋಗುತ್ತಾರೆ. ಅಲ್ಲಿ ಸಮುದ್ರಕ್ಕೆ ಜನಿವಾರ ಹಾಕಿ ತಾವೊಂದು ತೊಡುತ್ತಾರೆ. ಅನಂತರ ಕಾಯಿ ಒಡೆದು ಪೂಜೆ ಮಾಡುತ್ತಾರೆ. ಅ ದಿನ ಧರಿಸಿದ ಜನಿವಾರವನ್ನು ಮಾರನೆಯ ದಿನ ತೆಗೆಯುತ್ತಾರೆ. ಆ ದಿನ ಮಾಂಸದ ಅಡುಗೆ ಮಾಡುವುದಿಲ್ಲ. ವಿಶೇಷವೆಂದರೆ ಪಾಯಸದ ಊಟ ಮಾತ್ರ. ಸಮುದ್ರ ದೇವತೆಗೆ ಜನಿವಾರ ತೊಡಿಸುವುದು ಈ ಹಬ್ಬದ ವೈಶಿಷ್ಟ್ಯ.

2. ಹೊಸ್ತು : ಧಾನ್ಯ ಮನೆಗೆ ಬರುವ ಮೊದಲು ಆಚರಿಸುವ ಹಬ್ಬ ಇದು. ಬೆಳೆ ಪಕ್ವಗೊಂಡು ಇನ್ನೂ ಹೊಲಗದ್ದೆಗಳಲ್ಲಿಯೇ ಇದ್ದಾಗ ಕೆಲವು ತೆನೆಗಳನ್ನು ತಂದು ಹೊಸ ಧಾನ್ಯದಿಂದ ಮನೆಯನೆಲ್ಲಾ ಅಲಂಕರಿಸಿ ಮಾಡಿ ಸಂತೋಷ ಪಡುವುದರ ಜೊತೆಗೆ ಆ ದಿನ ಹೊಸ ಧಾನ್ಯದ ಅಡುಗೆ ಮಾಡಿ ಉಂಡು ಆನಂದಿಸುವುದು ಈ ಹಬ್ಬದ ವಿಶೇಷತೆ.

ಹೊಸ್ತು ಹಬ್ಬದಲ್ಲಿ ಮೀನುಗಾರರು ಬೇರೆಯವರಿಗಿಂತ ಸ್ವಲ್ಪ ಭಿನ್ನವಾದ ಆಚರಣೆಯನ್ನಿಟ್ಟುಕೊಂಡಿದ್ದಾರೆ. ಇತರರಂತೆ ಇವರೂ ಸಹ ಸ್ನಾನ ಮಾಡಿ ಮನೆಮುಂದಿನ ತುಳಸಿಕಟ್ಟೆಯ ಸುತ್ತ '' ಸೇಡಿ '' ಬರೆದು ಅಲಂಕರಿಸುತ್ತಾರೆ. ಮನೆ ಯಜಮಾನ ಹರಿವಾಣದಲ್ಲಿ ಪೂಜಾ ಸಾಮಗ್ರಿಗಳನ್ನು ತೆಗೆದುಕೊಂಡು ಗದ್ದೆಗೆ ಹೋಗುತ್ತಾನೆ. ಅಲ್ಲಿ ಹಣ್ಣಾದ ತೆನೆಯಿಂದ ಕೂಡಿದ ಬತ್ತದ ಗದ್ದೆಗೆ ಪೂಜೆಸಲ್ಲಿಸಿ ಕೆಲವು ತೆನೆಗಳನ್ನು (ಕದಿರು) ಕೊಯ್ದು ಹರಿವಾಣದಲ್ಲಿಟ್ಟುಕೊಂಡು ಮನೆಗೆ ತರುತ್ತಾನೆ. ಅವನು ಬಂದ ತಕ್ಷಣ ಮನೆ ಒಡತಿ ಅವನ ಕಾಲು ತೊಳೆಯುತ್ತಾಳೆ.

ಯಜಮಾನ ಗದ್ದೆಯಿಂದ ತಂದ ''ಕದಿರಿನ ಹೊರೆಯನ್ನು'' ತುಳಸಿ ಕಟ್ಟೆ ಎದುರು ಇಟ್ಟು ಪೂಜಿಸುತ್ತಾನೆ. ಅನಂತರ ಕದಿರನ್ನು ಮನೆಯೊಳಗಡೆ ತೆಗೆದುಕೊಂಡು ಹೋಗಿ ದೇವರ ಕೋಣೆಯಲ್ಲಿಟ್ಟು ಮತ್ತೊಮ್ಮೆ ಪೂಜಿಸುತ್ತಾನೆ. ಆ ಕದಿರನ್ನು ಮಾವಿನ ಎಲೆಯೊಂದಿಗೆ ಸೇರಿಸಿ ಮನೆಯ ಬಾಗಿಲಿಗೆ ತೋರಣಮಾಡಿ ಕಟ್ಟುತ್ತಾನೆ. ದೋಣಿಗೆ, ಬಲೆಗೆ ಅದನ್ನು ಸಿಕ್ಕಿಸುತ್ತಾರೆ. ಉಳಿದ ಕದಿರಿನಿಂದ ಒಂದು ಹಿಡಿ ಭತ್ತವನ್ನು ತೆಗೆದು ಕುಟ್ಟಿ ಅಕ್ಕಿಮಾಡಿ, ಅದರ ಪಾಯಸ ಮಾಡುತ್ತಾರೆ. ಆ ಪಾಯಸದ ಎಡೆಯನ್ನು ಕಡಲ ತೀರಕ್ಕೆ ತಂದು ಸಮುದ್ರಕ್ಕೆ ಪೂಜೆ ಸಲ್ಲಿಸಿ ನೀರಿನ ಮೇಲಿಟ್ಟು ಮನೆಗೆ ಹಿಂದಿರುಗುತ್ತಾರೆ. ಆ ದಿನದ ವಿಶೇಷ ಅಡುಗೆ ಹೊಸಧಾನ್ಯದ ಪಾಯಸವಾಗಿರುತ್ತದೆ. ಹೊಸ್ತು ಪರಿಪೂರ್ಣವಾಗಿ ವ್ಯವಸಾಯಗಾರರ ಹಬ್ಬ. ಅದು ಮೀನುಗಾರರಲ್ಲೂ ಆಚರಣೆಯಲ್ಲಿರಲು ಕಾರಣ ಅವರು ಮಳೆಗಾಲದಲ್ಲಿ ಸಮುದ್ರಕ್ಕೆ ಹೋಗುವದಿಲ್ಲ. ಆ ಸಂದರ್ಭದಲ್ಲಿ ಅವರು ವ್ಯವಸಾಯಗಾರಾಗಿರುತ್ತಾರೆ. ಈ ಅಲ್ಪಾವಧಿ ವ್ಯವಸಾಯ ವೃತ್ತಿಯು ಹೊಸ್ತು ಹಬ್ಬದ ಆಚರಣೆಗೆ ದಾರಿ ಮಾಡಿದ್ದು ಮಾತ್ರವಲ್ಲದೆ ಸಮುದ್ರದೊಡನೆ ವ್ಯವಸಾಯದ ಆಚರಣೆಯ ಸಂಬಂಧ ಕಲ್ಪಿಸಲು ಅವಕಾಶ ಮಾಡಿತು. ಸಮುದ್ರಕ್ಕೆ ಹೊಸ ಧಾನ್ಯದ ಎಡೆ ಅರ್ಪಿಸುವ ಸಂಪ್ರದಾಯವು ಮೀನುಗಾರರಲ್ಲಿನ ವಿಶಿಷ್ಟತೆಯನ್ನು ಪರಿಚಯಿಸುತ್ತದೆ.

3. ಸಿರಣಿ ಪೂಜೆ : ಇದು ಕಡಲ ಪೂಜೆಯ ಮತ್ತೊಂದು ಬಗೆ. ಇದನ್ನು ಪ್ರತಿವರ್ಷ ಆಚರಿಸದೆ ಮೀನು ಕಡಿಮೆ ಸಿಕ್ಕಾಗ ಆಚರಣೆ ಮಾಡುವ ಸಾಂದರ್ಭಿಕ ಹಬ್ಬವಾಗಿದೆ. ಈ ಆಚರಣೆಯ ವಿಶೇಷತೆಯೆಂದರೆ ತೆಂಗಿನ ನಾರನ್ನು ಗೋಣಿದಾರದಿಂದ ಹೊಲಿದು ದೋಣಿಯಾಕಾರ ಬರುವಂತೆ ಮಾಡುತ್ತಾರೆ. ಆದರಲ್ಲಿ ಬಾಳೆ ಎಲೆ ಇಟ್ಟು, ಅದರ ಮೇಲೆ ಪಂಚ ಕಜ್ಜಾಯ ಇಟ್ಟು, ಅದರ ಬದಿಗೆ ಹಣತೆ ಹಚ್ಚಿಡುತ್ತಾರೆ. ಕಾಯಿನಾರಿನ ದೋಣಿಗೆ ಬಿಳಿ ಬಾವುಟ ಕಟ್ಟುತ್ತಾರೆ. ಇದನ್ನೆಲ್ಲಾ ದೋಣಿಯಲ್ಲಿಟ್ಟುಕೊಂಡು ಸಮುದ್ರದಲ್ಲಿ ಸ್ವಲ್ಪ ದೂರದವರೆಗೆ ಹೋಗಿ ನೀರಲ್ಲಿ ಬಿಟ್ಟು ಕೈಮುಗಿದು ತಮಗೆ ಮೀನುಬೇಟೆಯಾಗುವಂತೆ ಪ್ರಾರ್ಥಿಸಿ ಹಿಂದಿರುಗುತ್ತಾರೆ. ಆ ದಿನ ಸಿರಣಿ ಪೂಜೆ ಮಾಡಿದ ಮೀನುಗಾರರು ಮೀನು ಹಿಡಿಯಲು ಹೋಗುವುದಿಲ್ಲ. ಸಿರಣಿ ಪೂಜೆ ಕರ್ನಾಟಕ ಕರಾವಳಿಯಲ್ಲಿ ಕೆಲವು ಕಡೆ ಮಾತ್ರ ಆಚರಣೆಯಲ್ಲಿದೆ. ಇದನ್ನು ಹಬ್ಬವೆನ್ನುವುದಕ್ಕಿಂತ ಹರಕೆ ಒಪ್ಪಿಸುವ ಸಂಪ್ರದಾಯವೆನ್ನುವುದು ಸೂಕ್ತ. ಇದು ಸಾಮೂಹಿಕ ಆಚರಣೆಯಲ್ಲದೆ, ವೈಯಕ್ತಿಕ ಆಚರಣೆಯಾಗಿದೆ .

ಸಮುದ್ರಕ್ಕೆ ನೇರವಾಗಿ ಸಂಬಂಧಿಸಿದ ಹಬ್ಬಗಳು ಬಹಳ ಕಡಿಮೆ. ನೂಲು ಹುಣ್ಣಿಮೆ ಮಾತ್ರ ಸಮುದ್ರದ ಹಬ್ಬ ಉಳಿದ ಹಬ್ಬಗಳಲ್ಲಿ ಮೀನುಗಾರರು ಸಮುದ್ರಕ್ಕೆ ಗೌರವ ಸಲ್ಲಿಸುವ ಒಂದು ಆಚರಣೆಯನ್ನು ಅಳವಡಿಸಿಕೊಂಡಿದ್ದಾರೆ. ಅಲ್ಲದೆ ಸದಾ ಸಮುದ್ರದಲ್ಲಿ ದುಡಿಮೆಗಾಗಿ ಸಾಹಸ ಪ್ರದರ್ಶಿಸುತ್ತಾ ಬದುಕುವ ಮೀನುಗಾರರಿಗೆ ಹಬ್ಬ ಆಚರಿಸುವಷ್ಟು ಕಾಲ ಸಿಗುವುದು ಕಷ್ಟ. ಆದ್ದರಿಂದ ಅವರಲ್ಲಿ ಉಳಿದವರಿಗಿಂತ ಹಬ್ಬಗಳ ಸಂಖ್ಯೆ ಕಡಿಮೆ ಇವೆ.

ಸಮುದ್ರ ಸಂಬಂಧಿ ದೇವತೆಗಳು :

ಕಡಲಿಗರು ಸಾರ್ವಜನಿಕವಾಗಿ ಆರಾಧಿಸುವ ದೇವತೆಗಳ ಜೊತೆಗೆ ತಮ್ಮದೇ ಆದ ದೇವತೆಗಳ ಬಗ್ಗೆ ವಿಶೇಷವಾದ ನಂಬಿಕೆಯುಳ್ಳವರಾಗಿದ್ದಾರೆ. ದಕ್ಷಿಣ ಮತ್ತು ಉತ್ತರ ಕನ್ನಡ ಜಿಲ್ಲೆಗಳೆರಡೂ ಪ್ರಾದೇಶಿಕವಾಗಿ ಮಹತ್ವವಾದ ದೇವತೆಗಳನ್ನು ಹೊಂದಿವೆ. ಭೂತಾರಾಧನೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಚ್ಚು ಪ್ರಸಿದ್ಧ. ಒಂದು ಕಾಲದಲ್ಲಿ ಪರಾಕ್ರಮಿಗಳಾಗಿ ಮೆರೆದ ವ್ಯಕ್ತಿಗಳು ಸಾರ್ವಜನಿಕರ ಹಿತರಕ್ಷಣೆಗಾಗಿ ಹೋರಾಡಿ ಮಡಿದು ಭೂತರಾಗಿ ತಮ್ಮ ಅತೀಂದ್ರಿಯ ಶಕ್ತಿಯಿಂದ ಜನರನ್ನು ಒಲಿಸಿಕೊಂಡವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಸಿದ್ಧರಾದರೆ, ಶತ್ರುಗಳಿಂದ ನಾಡನ್ನು ರಕ್ಷಿಸುವ ಸಲುವಾಗಿ ಹೋರಾಟ ಮಾಡಿದ ಜಟ್ಟಿಗರು ತಮ್ಮ ತ್ಯಾಗ, ಬಲಿದಾನದ ಕಾರಣದಿಂದ ಉತ್ತರ ಕನ್ನಡ ಜಿಲ್ಲೆಯ ಜನರ ಆರಾಧನೆಗೆ ಪಾತ್ರರಾದರು. ಪತಿಯೊಡನೆ ಸಹಗಮನ ಮಾಡಿ ತಮ್ಮ ಪಾತಿವ್ರತ್ಯವನ್ನು ಪ್ರದರ್ಶಿಸಿದ ಪತ್ನಿಯು ಮಹಾಸತಿಯಾಗಿ ಆರಾಧನೆಗೆ ಒಳಗಾದಳು. ಸಂಪ್ರದಾಯ ಮತ್ತು ನಂಬಿಕೆಗಳ ದೃಷ್ಟಿಯಿಂದ ಈ ಎರಡೂ ಜಿಲ್ಲೆಗಳು ತಮ್ಮ ವಿಶಿಷ್ಟತೆನ್ನುಳಿಸಿಕೊಂಡಿವೆ. ಸಾಂಸ್ಕೃತಿಕ ವೀರರು ಕಡಲಿಗರ ಶ್ರೇಷ್ಠ ದೇವತೆಗಳು.

1. ಕಡಲ ದೇವ ನೇತ್ರಾಣಿ ಜಟ್ಟಿಗ : ನೇತ್ರಾಣಿ ಎಂಬುದು ಭಟ್ಕಳದಿಂದ ಪಶ್ಚಿಮಕ್ಕೆ ಸುಮಾರು ೩೦ ಕಿ.ಮೀ. ದೂರದಲ್ಲಿರುವ ನಡುಗಡ್ಡೆ. ಒಂದು ಕಾಲದಲ್ಲಿ ಕಡಲ್ಗಳ್ಳರ ಸ್ಥಳವಾಗಿತ್ತೆಂದು ಹೇಳುತ್ತಾರೆ. ಹೊರದೇಶಗಳಿಂದ ಬಂದ ವಸ್ತುಗಳನ್ನು ನೇತ್ರಾಣಿ ಗುಡ್ಡೆಯಲ್ಲಿ ಸಂಗ್ರಹಿಸಿಟ್ಟುಕೊಂಡು ಸಮಯ ನೋಡಿ ಅವುಗಳನ್ನು ತೀರಕ್ಕೆ ತರುತ್ತಿದ್ದರೊಂದು ಹೇಳಲಾಗುತ್ತದೆ. ಇಂತಹ ಕಡಲ್ಗಳ್ಳರ ವಿರುದ್ಧ ಹೋರಾಟ ಮಾಡಿ ಮಡಿದ ವೀರ ಜಟ್ಟಿಗನಾಗಿ ಅಲ್ಲಿ ನೆಲೆನಿಂತಿದ್ದಾನೆ. ಇಂದಿಗೂ ಪ್ರಾದೇಶಿಕವಾಗಿ ಆತನ ಮಹಿಮೆ ಹೆಚ್ಚಾಗಿದೆ. ಹೊಸ ದೋಣಿಗಳು ಮೊದಲು ನೇತ್ರಾಣಿ ಗುಡ್ಡಕ್ಕೆ ಹೋಗಿ ಪೂಜೆ ಸಲ್ಲಿಸಿದ ನಂತರವೇ ಮೀನು ಹಿಡಿವ ಕೆಲಸ ಪ್ರಾರಂಭಿಸುವುದು.

ನೇತ್ರಾಣಿ ಗುಡ್ಡವು ಭಾವೈಕ್ಯತೆಯ ಪವಿತ್ರ ಸ್ಥಳ. ಅಲ್ಲಿ ಜಟ್ಟಿಗನ, ಆನೆ, ಕುದುರೆ ಮತ್ತು ಕೋಳಿಯ ಮೂರ್ತಿಗಳಿದ್ದು ಅದರ ಬದಿಯಲ್ಲೇ ಒಬ್ಬ ಮುಸ್ಲಿಂ ವೀರನ ಗೋರಿ ಇದೆ. ಅಲ್ಲಿಗೆ ಹೋದವರು ವಿಶಾಲ ಮನೋಭಾವನೆಯಿಂದ ಹಿಂದೂ-ಮುಸ್ಲಿಂ ದೈವಗಳೆರಡಕ್ಕೂ ಪೂಜೆ ಸಲ್ಲಿಸಿ ಬರುತ್ತಾರೆ. ಜಟ್ಟಿಗನಿಗೆ ಹಣ್ಣು-ಕಾಯಿಯ ಪೂಜೆ ಕೊಟ್ಟರೆ, ಗೋರಿಗೆ ಹೂಹಾಕಿ, ಊದುಗಡ್ಡಿ ಹಚ್ಚಿ ಭಕ್ತಿಯರ್ಪಿಸಿ ಬರುತ್ತಾರೆ. ಜನರ ವಾಸ ಆ ಗುಡ್ಡದಲ್ಲಿ ಇಲ್ಲದೆ ಇರುವುದರಿಂದ ಆ ಎರಡೂ ಪರಾಕ್ರಮಿಗಳು ಅಕ್ಕಪಕ್ಕದಲ್ಲಿ ತಮ್ಮ ತಮ್ಮ ಧರ್ಮಗಳಿಗೆನುಸಾರ ಸ್ಥಾನ ಪಡೆದುಕೊಂಡು, ಹರಕೆ ಒಪ್ಪಿಸುವ ಸಂಪ್ರದಾಯವನ್ನು ಜೀವಂತವಾಗುಳಿಸಿಕೊಂಡಿರುವುದು ಗಮನಾರ್ಹವಾದುದು.

ನೇತ್ರಾಣಿ ಜಟ್ಟಿಗನ ಆಚರಣೆಯಲ್ಲಿ ಕಾಣುವ ವಿಶಿಷ್ಟತೆ ಎಂದರೆ ಹರಕೆ ಹೊತ್ತವರು ಜೀವಂತ ಕೋಳಿ ಇಲ್ಲವೇ ಕುರಿಯನ್ನು ತೆಗೆದುಕೊಂಡು ಹೋಗಿ ಜಟ್ಟಿಗನ ಹೆಸರಲ್ಲಿ ಬಿಟ್ಟು ಬರುತ್ತಾರೆ. ದೇವರಿಗೆ ಪ್ರಾಣಿಯ ಪ್ರಾಣಕೊಟ್ಟು ಅದರ ಮಾಂಸವನ್ನು ಭಕ್ತರು ಭಕ್ಷಿಸುವ ಸಂಪ್ರದಾಯವೇ ಎಲ್ಲೆಡೆಯೂ ಪ್ರಚಲಿತವಿರುವಾಗ ನೇತ್ರಾಣಿ ಜಟ್ಟಿಗನಿಗೆ ಜೀವಂತ ಪ್ರಾಣಿ ಬಿಡುವ ಸಂಪ್ರದಾಯ ವಿಶಿಷ್ಟ. ಆ ಗುಡ್ಡೆಗೆ ಹೊರಗಿನ ಪ್ರದೇಶದಿಂದ ಕ್ರೂರ ಪ್ರಾಣಿಗಳು ಬರಲು ದಾರಿ ಇಲ್ಲದೇ ಇರುವುದರಿಂದ ಬಿಟ್ಟು ಬಂದ ಪ್ರಾಣಿಗಳು ಸುರಕ್ಷಿತವಾಗಿರುತ್ತವೆ.

ಕಡಲ ದೇವ ನೇತ್ರಾಣಿ ಜಟ್ಟಿಗ ಕಡಲ ಅಪಾಯಗಳಿಂದ ರಕ್ಷಿಸಬಲ್ಲನೆಂಬ ನಂಬಿಕೆ ಮೀನುಗಾರರಲ್ಲಿದೆ. ಅವರು ಬಿರುಗಾಳಿಯ ಸೆಳೆತಕ್ಕೆ ಸಿಕ್ಕಾಗ, ತಿಮಿಂಗಿಲಗಳ ತೊಂದರೆಗೆ ಒಳಗಾದಾಗ, ಮೀನು ಬೇಟೆಯಾಗದೇ ಇದ್ದಾಗ ನೇತ್ರಾಣಿ ಜಟ್ಟಿಗನಿಗೆ ಹರಕೆ ಹೊರುವ ಸಂಪ್ರದಾಯವಿದೆ. ಎಲ್ಲರಿಗೂ ಆಶ್ರಯದಾತನಾದ ಜಟ್ಟಿಗ ತನ್ನ ನೆತ್ತಿಯ ಮೇಲೆ ಸೂರಿಲ್ಲದೆ, ಕೇವಲ ಗಿಡದ ನೆರಳಿನ ಆಶ್ರಯ ಪಡೆದು ನಿಂತಿದ್ದಾನೆ. ಭಕ್ತಾದಿಗಳ ಮನದಲ್ಲಿ ಅಲ್ಲೊಂದು ದೇವಸ್ಥಾನ ಕಟ್ಟುವ ಆಸೆ ಇದ್ದರೂ ಜಟ್ಟಿಗನಿಗೆ ಇಷ್ಟವಿಲ್ಲವೇನೋ ಅವನ ಅಪ್ಪಣೆ ಇಲ್ಲದೆ ಇರುವುದರಿಂದ ಜನ ಕೈಕಟ್ಟಿ ಕುಳಿತಿದ್ದಾರೆ.

ನೇತ್ರಾಣಿ ಗುಡ್ಡಕ್ಕೆ ಹರಕ್ಕೆ ಒಪ್ಪಿಸಲು ಹೋದವರು, ಗುಡ್ಡದ ಬದಿ ಮೀನು ಹಿಡಿಯಲು ಹೋದವರು ಯಾರೇ ನೇತ್ರಾಣಿ ಗುಡ್ಡಕ್ಕೆ ಆಗಲಿ ಮೂರು ಪ್ರದಕ್ಷಿಣೆ ಹಾಕಿಯೇ ಬರಬೇಕೆಂಬ ಸಂಪ್ರದಾಯವಿದೆ. ಸುಮಾರು ಎರಡು-ಮೂರು ಕಿ.ಮೀ. ಸುತ್ತಳತೆ ಹೊಂದಿರುವ ಆ ಗುಡ್ಡದಲ್ಲಿ ಒಂದು ಸುರಂಗವಿದೆ. ಇದು ಗುಡ್ಡದ ಎರಡೂ ಬದಿಗೂ ಕಾಣಿಸುತ್ತದೆ. ಕೆಲವರು ಆ ಗುಡ್ಡವನ್ನು ದುಷ್ಟರು ಹೊತ್ತುಕೊಂಡು ಹೋಗುವ ಸಲುವಾಗಿ ಸುರಂಗ ಮಾಡಿ ಅದರ ಮೂಲಕ ಅಡ್ಡಗೋಲು ಹಾಕಿದ್ದರೆಂದು ಆ ಪ್ರಯತ್ನ ವಿಫಲವಾದ್ದರಿಂದ ಸುರಂಗ ಇಂದಿಗೂ ಹಾಗೆಯೇ ಉಳಿದಿದೆ ಎಂಬ ಕಟ್ಟುಕತೆಯೊಂದನ್ನು ಪ್ರಚಲಿತವಿದೆ.

ಹರಕೆ ಒಪ್ಪಿಸಲು ನೇತ್ರಣಿ ಗುಡ್ಡಕ್ಕೆ ಹೋದವರು ಅಲ್ಲಿಂದ ಏನಾದರೂ ತಂದರೆ ಅದು ದಡತಲುಪುವುದರೊಳಗೆ ಸ್ವರೂಪದಲ್ಲಿ ಅಲ್ಪ ಸ್ವಲ್ಪ ಬದಲಾವಣೆಯಾಗುವುದೆಂದು ಭಕ್ತರ ನಂಬಿಕೆ. ಅಲ್ಲಿಂದ ನೇರ ಕೋಲು ತಂದರೆ ಅದು ದಡ ಸೇರುವುದರೊಳಗೆ ಡೊಂಕಾಗಿರುತ್ತದೆ. ಕಲ್ಲು ತಂದರೆ ಅದರ ಆಕಾರ ಬದಲಾಗಿರುತ್ತದೆ ಎಂದು ಅವರು ನಂಬುತ್ತಾರೆ.

ವೆಂಕಟರಾಜ ಪುಣಿಂಚತ್ತಾಯ ಅವರು ''ನೇತ್ರಾಣಿ'' ಎಂದರೆ ದೇವತೆ. ಅವಳು ಸಮುದ್ರದ ಆದಿ ದೇವತೆ ಎಂದು ತಿಳಿಸುತ್ತಾರೆ.ಮೊಗವೀರರ ಸಂಸ್ಕೃತಿ (ಪುಟ ೨೨) ಆದರೆ ಅವರ ಅಭಿಪ್ರಾಯವನ್ನು ನಂಬಲು ಆಧಾರಗಳಿಲ್ಲ ಅದು ಪ್ರಾಚೀನ ಗಂಡು ದೇವತೆಗಳಲ್ಲೊಂದು ಎಂದು ಹೇಳಬಹುದು. ನೇತ್ರಾಣಿಯಲ್ಲಿರುವುದೆಲ್ಲಾ ಗಂಡು ದೇವತೆಗಳೇ ವಿನಾ ಹೆಣ್ಣು ದೇವತೆಗಳಲ್ಲ.

2. ದುರ್ಗಾಪರಮೇಶ್ವರಿ : ಭಟ್ಕಳ ತಾಲೂಕಿನ ಅಳವೆಕೋಡಿ ಗ್ರಾಮದಲ್ಲಿರುವ ಈ ಶಕ್ತಿ ದೇವತೆ ಪ್ರಾದೇಶಿಕ ಮಹತ್ವ ಪಡೆದ ದೇವತೆಗಳಲ್ಲೊಂದು. ಕಡಲ ತೀರದಲ್ಲಿ ದುರ್ಗಾಪರಮೇಶ್ವರಿಯ ಕಲಾತ್ಮಕ ದೇವಸ್ಥಾನವಿದೆ. ಆ ಪ್ರದೇಶದ ಮೀನುಗಾರರು ತಾವೇನೇ ಕೆಲಸ ಪ್ರಾರಂಭಿಸಬೇಕಾದರೂ ಆ ದೇವತೆಯ ಅಪ್ಪಣೆ ಅವಶ್ಯಕವೆಂದು ನಂಬುತ್ತಾರೆ. ಆ ದೇವತೆಯು ತನ್ನ ಬಲಬದಿಯ ಮೂರನೇ ಹೂ ಕೊಟ್ಟರೆ ಭಕ್ತಾದಿಗಳ ಕೆಲಸ ಆಗುತ್ತದೆ ಎಂದು. ಒಂದು ವೇಳೆ ಮೂರನೇ ಹೂ ಕೊಡದೆ ಬೇರೆ ಹೂ ಕೊಟ್ಟರೆ ಕೆಲಸ ಆಗುವುದಿಲ್ಲವೆಂಬ ನಂಬಿಕೆ ಇದೆ. ಈ ಕಾರಣದಿಂದ ಅಲ್ಲಿನ ಭಕ್ತಾದಿಗಳು ದುರ್ಗಾಪರಮೇಶ್ವರಿಗೆ ''ಮೂರನೇ ಹೂಗೆ ಪ್ರಶ್ನೆ'' ಇಡುವ ಪದ್ಧತಿ ಜಾರಿಯಲ್ಲಿದೆ.

ಕಡಲಾಶ್ರಯ ಪಡೆದವರ ರಕ್ಷಣೆ ಮತ್ತು ಆರ್ಥಿಕಾಭಿವೃದ್ಧಿಯ ಜವಾಬ್ದಾರಿಯು ತಮ್ಮ ದೇವತೆಯ ಕೈಯಲ್ಲಿದೆ ಎಂದು ನಂಬಿರುವ ಜನರು ಮೀನು ಹಿಡಿಯಲು ಪ್ರಾರಂಭಿಸುವ ಮೊದಲು ಆ ದೇವತೆಯನ್ನು ಕೇಳುತ್ತಾರೆ. ಹಿಡಿದ ಮೀನಲ್ಲಿ ಪಾಲು ಕೊಡುವ ಹರಕೆ ಹೊರುತ್ತಾರೆ. ಸಾಮಾನ್ಯವಾಗಿ ಮೀನು ಹಿಡಿಯುವ ಪರ್ಶಿಯನ್ ದೋಣಿಯಲ್ಲಿ ಹಿಡಿದ ಮೀನನ್ನು ಎರಡು ಪಾಲು ಮಾಡಲಾಗುತ್ತದೆ. ದೋಣಿಯ ಮಾಲೀಕನಿಗೆ ಒಂದು ಪಾಲು ಹೋದರೆ ಮೀನುಹಿಡಿದ ಗುಂಪಿನವರಿಗೆ ಒಂದು ಪಾಲು ಹೋಗುತ್ತದೆ. ಹರಕೆ ಹೊತ್ತಿದ್ದರೆ ಹಿಡಿದ ಮೀನನ್ನು ಮೂರು ಪಾಲು ಮಾಡುತ್ತಾರೆ. ಅದರಲ್ಲಿ ಮೊದಲನೆಯ ಪಾಲು ದೇವತೆಯ ಪಾಲು ಎಂದು ತೆಗೆದಿಡುತ್ತಾರೆ. ಆ ಮೀನನ್ನು ಮಾರಾಟ ಮಾಡಿ ಬರುವ ಹಣದಿಂದ ದೇವತೆಗೆ ಆಭರಣ ಮಾಡಿಸಿ ಒಪ್ಪಿಸುತ್ತಾರೆ. ಆಭರಣ ಮಾಡಿಸುವಾಗಲು ದೇವತೆಯನ್ನು ತನಗೆ ಯಾವ ಆಭರಣಬೇಕೆಂದು ಕೇಳುವ ಪದ್ಧತಿ ಇದೆ. ಹೆಚ್ಚಾಗಿ ಮೀನು , ಸೀಗಡಿ ಇಲ್ಲವೆ ದೋಣಿ ಸ್ವರೂಪದ ಆಭರಣಗಳನ್ನು ಮಾಡಿಸಿ ದೇವತೆಗೆ ಒಪ್ಪಿಸುತ್ತಾರೆ. ಹೀಗೆ ಒಪ್ಪಿಸಿದ ಹರಕೆಯ ಸರಗಳು ದುರ್ಗಾಪರಮೇಶ್ವರಿಯ ಮೈತುಂಬಾ ಅಲಂಕರಿಸುವುದು ವಿಶೇಷ ಪೂಜೆಯ ಸಂದರ್ಭದಲ್ಲಿ ಮಾತ್ರ. ಉಳಿದ ವೇಳೆಯಲ್ಲಿ ಆಭರಣಗಳನ್ನು ತೆಗೆದು ಬ್ಯಾಂಕಿನ ಇಲ್ಲವೆ ದೇವಸ್ಥಾನದ ''ಲಾಕರ್'' ನಲ್ಲಿಡುತ್ತಾರೆ. ದೇವತೆಯ ಆಭರಣಗಳನ್ನು ತೋರಿಸಲು ಸಹ ದೇವಸ್ಥಾದ ಆಡಳಿತ ಮಂಡಳಿಯವರು ಹಿಂಜರಿಯುತ್ತಾರೆ. ನೋಡಲಪೇಕ್ಷಿಸಿದ ಪರಿಚಿತ ವ್ಯಕ್ತಿಗಳಿಗೆ ಮಾತ್ರ ಒಂದೆರಡು ಮೀನಿನ ಇಲ್ಲವೆ ದೋಣಿಯ ಸರಗಳನ್ನು ತೋರಿಸುವರು ವಿಶೇಷ ಪೂಜೆಯ ಸಂದರ್ಭದಲ್ಲಿ ಸಹ ಎಲ್ಲಾ ಆಭರಣಗಳು ನೋಡಲು ಸಿಗುವುದಿಲ್ಲ ಏಕೆಂದರೆ ಅವುಗಳ ಮೇಲೆ ಹೂಹಾರಗಳನ್ನು ಹಾಕಿರುತ್ತಾರೆ. ಈ ದೇವತೆ ಮೀನುಗಾರರ ರಕ್ಷಣೆಗಿದ್ದರೆ, ಮೀನುಗಾರರು ಆ ದೇವತೆಯ ಆಭರಣಗಳು ಸರಕಾರದ ಕಣ್ಣಿಗೆ ಬೀಳದಂತೆ ರಕ್ಷಿಸುತ್ತಿದ್ದಾರೆ.

ದುರ್ಗಾಪರಮೇಶ್ವರಿಯ ಆಭರಣದ ಸ್ವರೂಪಗಳು ಸಮುದ್ರವನ್ನಾಶ್ರಯಿಸಿರುವವರ ವಿಶಿಷ್ಟ ಸಂಪ್ರದಾಯವನ್ನು ಬಿಂಬಿಸುತ್ತವೆ.

3. ನಗರ ಮಹಾಕಾಳಿ : ಕುಂದಾಪುರ ತಾಲೂಕಿನ ಗಂಗೊಳ್ಳಿ ಗ್ರಾಮದಲ್ಲಿರುವ ನಗರ ಮಹಾಕಾಳಿ ಖಾರ್ವಿ ಜನಾಂಗಂದ ಪ್ರಮುಖ ದೇವತೆ. ಆ ದೇವತೆಯ ಬಗ್ಗೆ ಅವರು ಹೇಳುವ ಐತಿಹ್ಯ ಕುತೂಹಲಕಾರಿಯಾಗಿದೆ. ಮೊದಲು ನಗರ ಮಹಾಕಾಳಿ ಶಿವಮೊಗ್ಗ ಜಿಲ್ಲೆಯ ''ನಗರ'' ಎಂಬ ಪಟ್ಟಣದಲ್ಲಿದ್ದಳು. ಈ ಕಾರಣದಿಂದ ಆ ದೇವತೆಗೆ ''ನಗರ ಮಹಾಕಾಳಿ'' ಎಂಬ ಹೆಸರು ಬಂದಿದೆ ಎನ್ನುತ್ತಾರೆ. ಅದು ಕೇದಗೆ ಹೂವಿನ ಗರಿಯ ಮೇಲೆ ಕುಳಿತು ಸಮುದ್ರ ತೀರದೆಡೆಗೆ ಬಂದು ಗಂಗೊಳ್ಳಿಯ ಜನರಿಗೆ ತೊಂದರೆ ಕೊಡಲು ಪ್ರಾರಂಭಿಸಿತು. ಆಗ ಮನೆಗಳಲ್ಲಿ ಇದ್ದಕ್ಕಿದ್ದಂತೆ ಬೆಂಕಿ ಹತ್ತಿಕೊಳ್ಳುತ್ತಿತ್ತು. ಇಲ್ಲವೆ ಮನೆಯಲ್ಲೆಲ್ಲಾ ಹೊಲಸು ಬೀಳಲು ಪ್ರಾರಂಭವಾಗುತಿತ್ತು. ಆಗ ಹಿರಿಯರು ಭಟ್ಟರ ಹತ್ತಿರ ಹೋಗಿ ಇದಕ್ಕೆ ಕಾರಣವೇನೆಂದು ಜೋತಿಷ್ಯ ಕೇಳಿದರು. ಭಟ್ಟರು ಊರಿಗೆ ನಗರ ಮಹಾಕಾಳಿ ಬಂದಿದ್ದಾಳೆ ಅವಳನ್ನು ಪ್ರತಿಷ್ಠಾಪಿಸಿ ಅವಳಿಗೊಂದು ನೆಲೆ ಕಾಣಿಸಬೇಕೆಂದು ಸೂಚಿಸಿದರು. ಅಷ್ಟರಲ್ಲಿ ಅ ದೇವತೆ ಗಂಗೊಳ್ಳಿಯ ಹಿರಿಯರಾದ ಅಪ್ಪಣ್ಣ ಖಾರ್ವಿಯವರಿಗೆ ಕಾಣಿಸಿಕೊಂಡು ತನ್ನನ್ನು ಪ್ರತಿಷ್ಠಾಪಿಸಬೇಕಾದ ಸ್ಥಳವನ್ನು ಸೂಚಿಸಿದಳು. ಅದರಂತೆ ದೇವಸ್ಥಾನ ಕಟ್ಟಿಸಿ ಶೃಂಗೇರಿ ಮಠದ ಸ್ವಾಮಿಗಳನು ಕರೆಸಿ ದೇವತೆಯನ್ನು ಪ್ರತಿಷ್ಠಾಪಿಸಿದರು. ಆಗ ಊರಿನವರ ಮೇಲಾಗುತ್ತಿದ ತೊಂದರೆ ನಿಂತಿತೆಂದು ಅಲ್ಲಿನ ಜನರ ಹೇಳಿಕೆ. ಪ್ರಾರಂಭದಲ್ಲಿ ನಗರ ಮಹಾಕಾಳಿಗೆ ಪ್ರಾಣಿ ಬಲಿಕೊಟ್ಟು ತೃಪ್ತಿಪಡಿಸುತ್ತಿದ್ದು ಕಾಲಕ್ರಮೇಣ ಶೃಂಗೇರಿ ಮಠದ ಪ್ರಭಾವದಿಂದ ಬಲಿ ಸಂಪ್ರದಾಯವನ್ನು ನಿಲ್ಲಿಸಲಾಗಿದೆ. ಆದರೂ ಸಾಂಕೇತಿಕವಾಗಿ ಕುಂಬಳಕಾಯಿಯೊಳಗೆ ಕುಂಕುಮ ತುಂಬಿ ರಕ್ತಾರ್ಪಣೆಯ ಸಂಪ್ರದಾ-ಯವನ್ನು ಆಚರಿಸುತ್ತಿರುವುದನ್ನು ಗಮನಿಸಿದರೆ ಮಾಂಸಾಹಾರಿಗಳಾದ ಕಡಲಿಗರ ಸಸ್ಯಾಹಾರಿ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿರುವುದು ತಿಳಿಯುತ್ತದೆ.

ಮೀನು ಹಿಡಿಯಲು ಹೋಗುವ ಮೊದಲು ಮಹಾಕಾಳಿಗೆ ಪೂಜೆಕೊಟ್ಟು ಪ್ರಸಾದವನ್ನು ದೋಣಿಯಲ್ಲಿಟ್ಟುಕೊಂಡು ಹೋಗು-ತ್ತಾರೆ. ಪ್ರಸಾದದ ಪ್ರಭಾವದಿಂದ ಮೀನು ಹೆಚ್ಚು ಸಿಗುತ್ತವೆಂಬ ನಂಬಿಕೆ ಇದೆ. ಪ್ರಸಾದ ಪಡೆಯದೆ ಹೋದರೆ '' ಮೀನಿನ ಕರ್ಪು'' ಇದ್ದ ಸ್ಥಳದಲ್ಲಿ ಬಲೆ ಹಾಕಿ ಎಳೆದಾಗ ಅದರಲ್ಲಿ ಮೀನು ಬರದೆ ಬರಿಯ ಬಲೆಯೇ ಮೇಲೆ ಬಂದಿರುವ ನಿದರ್ಶನಗಳಿವೆ ಎಂದು ಅಲ್ಲಿನ ಅನುಭಾವಿಗಳ ಅನಿಸಿಕೆ. ಅಂತಹ ಸಂದರ್ಭದಲ್ಲಿ ದೇವತೆಯ ಬಳಿ ಕ್ಷಮೆ ಕೇಳಿ ಅವಳಿಗೆ ಪೂಜೆಸಲ್ಲಿಸಿ ಪ್ರಸಾದ ಪಡೆದು ಮೀನು ಹಿಡಿಯಲು ಹೋಗುತ್ತಾರೆ. ಹೀಗೆ ತನ್ನನ್ನು ಮರೆತವರ ಮೇಲೆ ಪ್ರಭಾವ ಬೀರಿ ತನ್ನೆಡೆಗೆ ಸೆಳೆದು ಕೊಳ್ಳುವ ಮಹಾಕಾಳಿಯ ಗುಣವನ್ನರಿತ ಆ ಪ್ರದೇಶದಿ ಖಾರ್ವಿ ಜನ ಯಾವ ದೇವತೆಯನ್ನಾದರೂ ಮರೆತರು ಬದುಕಿನಲ್ಲಿ ಬೆರೆತು ಹೋದ ನಗರ ಮಹಾಕಾಳಿಯನ್ನು ಮಾತ್ರ ಮರೆಯುವುದಿಲ್ಲ ಅಲ್ಲದೆ ಹಿಂದೂ- ಮುಸ್ಲಿಂ-ಕ್ರಿಶ್ಚಿಯನ್ ಎಂಬ ಭೇದವಿಲ್ಲದೆ ಜನ ಆ ದೇವತೆಗೆ ನಡೆದುಕೊಳ್ಳುತ್ತಾರೆ. ಮೀನು ಹೆಚ್ಚು ಸಿಕ್ಕಾಗ ನಗರ ಮಹಾಕಾಳಿ ಹಣವೆಂದು ಪ್ರತ್ಯೇಕವಾಗಿ ತೆಗೆದಿಟ್ಟು ಅವಳಿಗೆ ಚಿನ್ನದ ಇಲ್ಲವೆ ಬೆಳ್ಳಿಯ ಮುಖವಾಡ ಮಾಡಿಸುತ್ತಾರೆ. ಕೆಲವರು ಹರಕೆಯ ಸೀರೆ, ದೀಪ ಸ್ತಂಭ, ಮೊದಲಾದವುಗಳನ್ನು ಒಪ್ಪಿಸುತ್ತಾರೆ.

4. ಮಾರು ಸ್ವಾಮಿ : ಮಾರುಸ್ವಾಮಿ ಸಾರ್ವಜನಿಕರ ಆರಾಧ್ಯ ದೇವ. ಅದರ ನೆಲೆ ಸುಂದರ ಸ್ಥಳವಾದ '' ಮರವಂತೆ'' ಯಲ್ಲಿದೆ. ದೇವಸ್ಥಾನದ ಒಂದು ಬದಿ ಕಡಲು, ಮತ್ತೊಂದು ಬದಿ ನದಿ ಇರುವ ಸುಂದರ ಸ್ಥಳದಲ್ಲಿ ವಿಷ್ಣುವು ವರಹಾವತಾರದ ಸ್ವರೂಪದಲ್ಲಿ ಮಾರುಸ್ವಾಮಿಯಾಗಿದ್ದಾನೆ. ಸಮುದ್ರಕ್ಕೂ ವಿಷ್ಣವಿಗೂ ಹತ್ತಿರದ ಸಂಬಂಧ ವಿಷ್ಣುವಿನ ಹಲವಾರು ಪವಾಡಗಳು ಸಮುದ್ರದಲ್ಲಿ ನಡೆದಿವೆ. ಅವುಗಳನ್ನು ಅರಿತ ಜನ ವಿಷ್ಣುವಿಗೆ ಶರಣಾದರು. ಅವರೊಡನೆ ಕಡಲನಾಶ್ರಯಿಸಿದ ಜನರು ಸೇರಿದರು. ಆದರೆ ತಮ್ಮ ಸಂಪ್ರದಾಯಗಳನುಸಾರ ಅವರು ವರಾಹವತಾರದ ವಿಷ್ಣುವನ್ನು ತೃಪ್ತಿಪಡಿಸುವ ಮಾರ್ಗವನ್ನು ಕಂಡು ಕೊಂಡರು. ಅದರಂತೆ ಮೀನುಗಾರರು ಬಿರುಗಾಳಿಯಿಂದ ರಕ್ಷಣೆ ಪಡೆಯಲು, ದೋಣಿ ಹತ್ತುವಾಗ ಮನದಲ್ಲಿನ ಆಸೆ ಈಡೇರಲು ಹರಕೆ ಹೊರುತ್ತಾರೆ. ಅದರಂತೆ ಮಾರುಸ್ವಾಮಿಗೆ ಬೆಳ್ಳಿಯ ಸೀಗಡಿಯನ್ನೋ ಇಲ್ಲವೆ ಚಿನ್ನದ ಬಾಂಗಡೆ ಮೀನನ್ನೂ ಒಪ್ಪಿಸುತ್ತಾರೆ.

ಹಿಂದೆ ರಾಜನೊಬ್ಬ ಮಾನಸಿಕ ಅಶಾಂತತೆಯನ್ನು ಹೋಗಲಾಡಿಸಿಕೊಳ್ಳುವ ಸಲುವಾಗಿ ಕಡಲ ದಡದಲ್ಲಿ ಮಾರುಸ್ವಾಮಿಯನ್ನು ಪ್ರತಿಷ್ಠಾಪಿಸಿದನೆಂದು ಹೇಳಲಾಗುತ್ತದೆ. ಊರಿನ ಹೊಲಸು ವಾತಾವರಣದಿಂದ ದೂರವಿರುವ ಮಾರುಸ್ವಾಮಿ ಪ್ರಕೃತಿ ಸೌಂದರ್ಯದ ನಡುವೆ ನಿಂತು ಇಂದಿಗೂ ಹಲವರ ಮನದ ಬಯಕೆಗಳನ್ನು ಈಡೇರಿಸುತ್ತಿರುವ ಕಾರಣದಿಂದ ಕರಾವಳಿಯಲ್ಲಿ ಹೆಚ್ಚು ಪ್ರಸಿದ್ಧವಾಗಿದೆ.



ಸಮುದ್ರದಲ್ಲಿರುವ
ನೇತ್ರಾಣಿ ಗುಡ್ಡೆ



ಹರಕೆ ಹೊತ್ತ
ಮೀನುಗಾರರು
ನೇತ್ರಾಣಿ ಗುಡ್ಡೆಗೆ
ಪ್ರಯಾಣ.



ನೇತ್ರಾಣಿಗುಡ್ಡೆಯ
ದಡಕ್ಕೆ ದೋಣಿ
ತಳ್ಳುತ್ತಿರುವುದು.



ನೇತ್ರಾಣಿ ಜಟ್ಟಿಗನಿಗೆ
ಜೀವಂತ ಕುರಿಯ
ಹರಕೆ.



ನೇತ್ರಾಣಿ ಗುಡ್ಡೆಯ
ಜಟ್ಟಿಗನ ಮೂರ್ತಿ



ಇದೇ ಗುಡ್ಡೆಯಲ್ಲಿರುವ
ಕಲ್ಲಿನ ಕೋಳಿ ಮತ್ತು
ಜಟ್ಟಿಗನ ಕಂಬ.



ಭಟ್ಕಳ ಬಂದರಿನಲ್ಲಿರುವ
ಈಶ್ವರ



ಶಿರಾಲಿಯ ಅಳ್ವೆಕೋಡಿಯ
ದುರ್ಗಾ ಪರಮೇಶ್ವರಿ

ಮರವಂತೆಯ ಮಾರುಸ್ವಾಮಿ





ಕಡಲ ತೀರದ
ಸುಂದರ ಸಂಜೆ



ದೇವತೆಗೆ ಹರಕೆ ಒಪ್ಪಿಸಲು
ಸಿದ್ಧವಾಗಿರುವ ಮೀನಿನ ಶರ.



ಸೀಗಡಿ ಶರ.

5. ಸೋಡಿಗದ್ದೆ ಮಾಸ್ತಿ : ಭಟ್ಕಳದಿಂದ ಸುಮಾರು 5 ಕಿ.ಮೀ. ದೂರದಲ್ಲಿರುವ ಸೋಡಿಗದ್ದೆಯಲ್ಲಿ 'ಮಾಸ್ತಿ' ಯ ಮಹಿಮೆ ಹೆಚ್ಚು ಪತಿಯೊಂದಿಗೆ ಸಹಗಮನ ಮಾಡಿ ಶಕ್ತಿ ದೇವತೆಯಾಗಿ ಹೆಸರು ಗಳಿಸಿದ 'ಮಾಸ್ತಿ' ಯ ಮಂದಿರದಲ್ಲಿ ಹಲವಾರು ಮಾಸ್ತಿಯ ಮೂರ್ತಿಗಳಿವೆ. ಹರಕೆ ಹೊತ್ತವರು ಒಂದೊಂದು ಮೂರ್ತಿಯನ್ನು ಸಲ್ಲಿಸುವುದು ಅಲ್ಲಿನ ಸಂಪ್ರದಾಯ. ದೇವಸ್ಥಾನದಲ್ಲಿ ಆ ಮೂರ್ತಿಗಳನ್ನೆಲ್ಲಾ ಇಡಲು ಸ್ಥಳಾವಕಾಶವಿಲ್ಲದ್ದರಿಂದ ಹೊರಗೆ ಅವುಗಳನ್ನು ಇಟ್ಟು ಸುತ್ತಲೂ ಗೋಡೆ ಕಟ್ಟಿದ್ದಾರೆ. ಸೋಡಿಗದ್ದೆಯಲ್ಲಿರುವ ಮಾಸ್ತಿ ಮೂರ್ತಿಗಳೆಲ್ಲಾ ಕೈ ಚಾಚಿ ನಿಂತಿರುವ ಮರದ ಮೂರ್ತಿಗಳಾಗಿವೆ. ಕಡಲಿಗರು ಸಮುದ್ರಕ್ಕೆ ಹೋಗುವ ಮೊದಲು ಮಾಸ್ತಿಗೆ ಕೈಮುಗಿದು ಆ ದಿನದ ಸಂಪಾದನೆ ಹೆಚ್ಚಲೆಂದು ಪ್ರಾರ್ಥಿಸಿ ಹೋಗುತ್ತಾರೆ. ವರ್ಷಕೊಮ್ಮೆ ಜಾತ್ರೆ ನಡೆಸಿ ಕೆಂಡ ತುಳಿಯುವ ಸಂಪ್ರದಾಯವಿದೆ ಸೋಡಿಗದ್ದೆಯ ಮಾಸ್ತಿ ಸತ್ಯವಂತ ಎಂಬ ನಂಬಿಕೆ ಭಕ್ತರಲ್ಲಿದೆ. ಈ ಕಾರಣದಿಂದ ಅವರು ವಿಶೇಷ ಪೂಜೆಯನ್ನು ತಮ್ಮ ಮನದಾಸೆ ಈಡೇರಿದಾಗ ಸಲ್ಲಿಸುತ್ತಾರೆ.

ಕರಾವಳಿಯಲ್ಲಿ ಪ್ರಾದೇಶಿಕವಾಗಿ ಪ್ರಸಿದ್ಧವಾದ ದೇವತೆಗಳನ್ನು ತಮ್ಮದನ್ನಾಗಿಸಿಕೊಂಡು ಆರಾಧಿಸುವ ಸಂಪ್ರದಾಯ ಹೆಚ್ಚಾಗಿದೆ. ಆದ್ದರಿಂದ ಪ್ರಾದೇಶಿಕ ಮಹತ್ವದ ದೇವತೆಗಳು ತೀರಪ್ರದೇಶಗಳಲ್ಲಿ ಹಲವಾರು ಸಿಗುತ್ತವೆ. ಅವುಗಳಲ್ಲಿ ಜಟ್ಟಿಗ ಮತ್ತು ಮಾಸ್ತಿಗಳ ಸಂಖ್ಯೆ ಉತ್ತರ ಕನ್ನಡದಲ್ಲಿ ಹೆಚ್ಚಾಗಿವೆ. ಅಚಲ ನಂಬಿಕೆ ಭಕ್ತಿ ಪೂರ್ವಕ ಆಚರಣೆ ಕಡಲಿಗರಲ್ಲಿ ಧೈರ್ಯ ಮತ್ತು ಆತ್ಮ ವಿಶ್ವಾಸವನ್ನು ತುಂಬಿವೆ.

ಇ) ಸಮುದ್ರ ಸಂಬಂಧಿ - ಭೂತ ಮತ್ತು ದೆವ್ವಗಳು :

ಸಮುದ್ರದಲ್ಲಿ ಪ್ರಾಣ ಕಳೆದು ಕೊಂಡು ದೆವ್ವ, ಭೂತಗಳಾಗಿ ಪರಿವರ್ತನೆ ಹೊಂದಿ ಜನರನ್ನು ಕಷ್ಟಗಳಿಂದ ಪಾರುಮಾಡುವ ಕೆಲಸಗಳ ಮೂಲಕ ಅವರ ನಂಬಿಕೆಗೆ ಪಾತ್ರವಾಗಿರುವ ದೇವತೆಗಳು ಕರಾವಳಿಯಲ್ಲಿ ಸಾಮಾನ್ಯ. ಆ ವ್ಯಕ್ತಿಗಳನ್ನೆಲ್ಲ ಮಾನವ ಸ್ಥಾನದಿಂದ ದೈವಸ್ಥಾನಕ್ಕೆ ಕೊಂಡೊಯ್ಯುವಾಗ ಜನರು ಅವರ ಮತ, ಧರ್ಮಗಳನ್ನು ಲೆಕ್ಕಿಸದೆ ಕೇವಲ ಅವರ ಪರಾಕ್ರಮ, ಸಾಹಸ ಬಲಿದಾನಗಳನ್ನು ಮಾತ್ರ ಅವರ ಅರ್ಹತೆಗಳಾಗಿ ಪರಿಗಣಿಸುವುದು ಗಮನಾರ್ಹವಾದುದು. ಬೊಬ್ಬರ್ಯ ಭೂತ ಮಾನವನಾಗಿದ್ದಾಗ ಮುಸ್ಲಿಮನಾಗಿದ್ದವನು. ಅವನು ಸತ್ತು ಭೂತವಾದ ನಂತರ ಹಿಂದೂ ದೈವವಾಗಿ ಪರಿವರ್ತಿಸಲ್ಪಟ್ಟ. ಯಾವುದೇ ದೆವ್ವ, ಭೂತವಾಗಲಿ ಅದು ತನ್ನ ಪವಾಡದ ಮಹಿಮೆಯ ಮೂಲಕ ಭಕ್ತರನ್ನು ಗಳಿಸಿಕೊಳ್ಳಬಲ್ಲದು. ಆ ಭಕ್ತಾದಿಗಳು ತಮ್ಮ ಇಷ್ಟಾರ್ಥಗಳ ಈಡೇರಿಕೆಯನ್ನು ಮಾತ್ರ ಪರಿಗಣಿಸುತ್ತಾರೆಯೇ ವಿನಾ ಆ ದೆವ್ವ, ಭೂತದ ಹಿಂದಿರುವ ಇತಿಹಾಸವನ್ನೆಂದೂ ಲೆಕ್ಕಿಸುವುದಿಲ್ಲ. ಈ ಕಾರಣದಿಂದಲೇ ಇಂದು ಹಲವು ಮುಸ್ಲಿಂ ದೈವಗಳು ಹಿಂದೂ ಭಕ್ತರನ್ನು ಪಡೆದಿರುವುದು. ಹಲವು ಹಿಂದೂ ದೈವಗಳು ಮುಸ್ಲಿಂ ಭಕ್ತರನ್ನು ಪಡೆದಿರುವುದು.

ಬೊಬ್ಬರ್ಯ : ಭೂತದ ಕಲ್ಪನೆ ಬಂದ ತಕ್ಷಣ ತುಳುನಾಡಿನ ನೆನಪಾಗುತ್ತದೆ. ತುಳುನಾಡಿನ ಬಹು ಪಾಲು ಜನರು ಭೂತಗಳ ನಿಯಂತ್ರಣದಲ್ಲಿದ್ದಾರೆ. ಅವರು ಮಾಡುವ ಪ್ರತಿಯಂದು ಕೆಲಸಕ್ಕೂ ಭೂತಗಳ ಅಪ್ಪಣೆ ಅವಶ್ಯಕವಾಗಿದೆ. ಹೀಗೆ ತಮ್ಮ ಪ್ರಭುತ್ವವನ್ನು ಭದ್ರಗೊಳಿಸಿ ಕೊಳ್ಳುವ ಭೂತಗಳಲ್ಲಿ ಬೊಬ್ಬರ್ಯ ಒಂದು ಪ್ರಮುಖ ಭೂತವಾಗಿದೆ. ಈ ಭೂತದ ಇತಿಹಾಸದ ಬಗ್ಗೆ ತಿಳಿಯಲು ತುಳು ಪಾಡ್ದನಗಳ ಸಹಾಯ ಅವಶ್ಯಕ. ಆದರೆ ಒಂದೊಂದು ಪಾಡ್ದನವು ಬೊಬ್ಬರ್ಯನ ಬಗ್ಗೆ ಬೇರೆ ಬೇರೆಯ ಮಾಹಿತಿ ನೀಡತ್ತದೆ. ಅವುಗಳಲ್ಲಿ ಬೊಬ್ಬರ್ಯ ಇತಿಹಾಸವನ್ನರಿಯುವ ದೃಷ್ಟಿಯಿಂದ ಒಂದನ್ನು ಇಲ್ಲಿ ಸಂಗ್ರಹಿಸಲಾಗಿದೆ.

ಎಲ್ಲಿ ಒಂದಕ್ಕಿಂತ ಹೆಚ್ಚು ಸಂಸ್ಕೃತಿಗಳು ಕಾಣಿಸಿಕೊಳ್ಳುತ್ತವೆಯೋ ಅಲ್ಲಿ ಸಂಸ್ಕೃತಿಗಳ ನಡುವೆ ಕೊಡುಕೊಳ್ಳುವಿಕೆಯ ವಿನಿಮಯ ಕಾರ್ಯ ನಡೆದೇ ಇರುತ್ತದೆ. ಇದಕ್ಕೊಂದು ನಿದರ್ಶನವಾಗಿ ನಿಲ್ಲುವುದು ಬೊಬ್ಬರ್ಯನ ಇತಿಹಾಸ.

''.ಸುಲಿಕಲ್ಲ ಮುರವೆ ಮತ್ತು ಬೀಬಿ ಪಾತುಮ್ಮರಿಗೆ ಏಳು ಮಕ್ಕಳು ಅವರಿಗೆ ಕಾಯಿರಿ, ಕಲಸಪ್ಪೆ, ಗೆಂಡ, ಬೊಮ್ಮಾಯಿ, ಸಿಂಕಿರಿ ಸುವಣೆ, ಅನಂತ, ಸರಪೊಳಿ ಮತ್ತು ಸುಣ್ಣ ಜಾನು ನಾಯಕ'' ಎಂದು ಹೆಸರಿಟ್ಟರು. ಬೊಬ್ಬರ್ಯನೂ ಅವರಲ್ಲೊಬ್ಬ''.

ಇವರು ವ್ಯಾಪಾರ ಮಾಡುವ ಸಲುವಾಗಿ ದೋಣಿ ಕೊಂಡು (ಈಗಿನ ಕೊಚ್ಚಿನ್) ಕೊಚ್ಚಿಗೆ ಹೋಗಿ ಅಲ್ಲಿ ವ್ಯಾಪಾರ ಮಾಡಿ ವಜ್ರ,ವೈಡೂರ್ಯ ಮಾಣಿಕ್ಯ ಬಂಗಾರ ಮೊದಲಾದವುಗಳನ್ನು ದೋಣಿಯಲ್ಲಿ ತುಂಬಿಕೊಂಡು ಹಿಂದಿರುಗುವಾಗ ಸಮುದ್ರದಲ್ಲಿ ಎದುರಿನಿಂದ ಕಲ್ಲಿನ ದೋಣಿಯೊಂದು ಬರುತ್ತದೆ. ಅದರಲ್ಲಿದ್ದ ವ್ಯಾಪಾರಿಗಳಿಗೂ ಇವರಿಗೂ ಜಗಳ ಪ್ರಾರಂಭವಾಗಿ ಹೋರಾಟ ನಡೆದಾಗ ಕೊಚ್ಚಿಯಿಂದ ಬಂದ ದೋಣಿ ಮುಳುಗಿತು. ಆಗ ಅದರಲ್ಲಿದ್ದವರಲ್ಲಿ ಎಲ್ಲಾ ಮುಳುಗಿ ಒಬ್ಬ ಬ್ಯಾರಿ ಮಾತ್ರ ಕಾಪುವಿನ ಹತ್ತಿರದ ದಡ ಸೇರಿದ. ಅಲ್ಲಿದ್ದ ಬೆರ್ಮರೊಡನೆ ಅವನು ಮಾಯವಾಗಿ ಸೇರಿಬಿಟ್ಟ. ಅಲ್ಲಿ ಅವನು ಬೇರೆಯವರ ಮೈ ಮೇಲೆ ಬಂದು ''ಅಲ್ಲಿಂದ ಮುಂಗ್ಲುದೊಟ್ಟಿ ಎಂಬಲ್ಲಿನ ಸ್ಥಾನದಲ್ಲಿ ಸೇರಿ ಮತ್ತೆ ಮೂಲೂರಿನ ಒಂದು ಸ್ಥಾನದಲ್ಲಿ ಸೇರಿದ. ಅಲ್ಲಿ ಪೊಂಗಬೇರ ಬೈದ್ಯನೆಂಬುವನನ್ನು ತಾವರೆ ಕೆರೆಯಲ್ಲಿ ಏಳು ರಾತ್ರಿ ಎಂಟು ಹಗಲು ಮುಳುಗಿಸಿಟ್ಟ. ಜನರು ಅವನನ್ನು ಹುಡುಕುತ್ತಾ ಕೆರೆಯ ಬಚಿಗೆ ಬಂದು ನೋಡಿ ಹಿಂದಿರುಗಿ ಕೆರೆಗೆ ಹೋದ ಬೈದ್ಯನ ಹೆಜ್ಜೆ ಕಾಣುತ್ತವೆ. ಆದರೆ ಮರಳಿದ ಹೆಜ್ಜೆ ಕಾಣುವುದಿಲ್ಲವೆಂದು ಜ್ಯೋತಿಷ್ಯನನ್ನು ಕೇಳಿದರು. ಅನಂತರ ಮೂಲೂರು ಸ್ನಾನಕ್ಕೆ ಊರವರು ಹೋಗಿ ಪ್ರಾರ್ಥಿಸಿಕೊಂಡ ಮೇಲೆ ಮುಳುಗಿದ ಬೈದ್ಯನು ಮೇಲಕ್ಕೆದ್ದು ಬಂದ. ಅಲ್ಲಿಂದ ಜನ ಬೊಬ್ಬರ್ಯನನ್ನು ಆರಾಧಿಸಿದರು.''

''ಅಲ್ಲಿಂದ ಮಲ್ಲಾರ ಸ್ಥಾನಕ್ಕೆ ಹೋಗಿ ತನಗೆ ಸ್ಥಾನಬೇಕೆಂದು ಸ್ವಪ್ನದಲ್ಲಿ ಭೂತ ಕೇಳಿತು. ಅಲ್ಲಿ ಸ್ಥಾನ ಕಟ್ಟಿಸಿದರು. ಅಲ್ಲಿಂದ ಕಾಪು, ಅಜ್ಜಾಲ, ಪಾಂಗಾಳ, ಕಟಪಾಡಿ, ಮಜ್ಜಿ ಉದ್ಯಾವರಗಳಲ್ಲಿಯೂ ಸ್ಥಾನ ಕಟ್ಟಿಸಿದರು. ಉಡುಪಿಯಲ್ಲಿ ಭೂತ ಜಳಕ ಮಾಡಿ ಅನಂತೇಶ್ವರ ದೇವರನ್ನು ಕಂಡಿತು. ಅಲ್ಲಿಯೂ ಸ್ಥಾನ ಕಟ್ಟಿಸಿದರು. ಚಿಟ್ಟುಪಾಡಿ, ಮಲಪು, ಪೊಡ ಬಾಂಡೇಶ್ವರ, ಕಲ್ಮಾಡಿಗಳಿಗೂ ಅದು ಹೋಯಿತು. ಹೀಗೆ ಮೂಡಣ ಗಟ್ಟದ ರಾಜ್ಯದಿಂದ ಪಡುವಣ ಕಡಲವರೆಗೆ, ಉತ್ತರದ ಅಂಕೋಲೆಯಿಂದ ಮಂಜೇಶ್ವರದವರೆಗೆ ಬಿರ್ಮರ ಗುಂಡ ಮತ್ತು ದೇವರ ದೇವಸ್ಥಾನಗಳಲ್ಲಿ ಬೊಬ್ಬರ್ಯ ಭೂತ ನೆಲೆಸಿತು.''

ಮುಸ್ಲಿಮನಾಗಿ ಹುಟ್ಟಿದ ಬೊಬ್ಬರ್ಯ ಬೈದ್ಯನೊಬ್ಬನನ್ನು ತಾವರೇಕೆರೆಯಲ್ಲಿ ಮುಳುಗಿಸಿಟ್ಟು ತನ್ನ ಅತೀಂದ್ರಿಯ ಶಕ್ತಿಯನ್ನು ಪ್ರದರ್ಶಿಸಿ ಪ್ರಸಿದ್ಧತೆ ಪಡೆದದ್ದು ಮಾತ್ರವಲ್ಲದೆ ಹಿಂದೂ-ಮುಸ್ಲಿಂ ಸಂಸ್ಕೃತಿಗಳ ಸಂಗಮ ಸ್ಥಾನವಾಗಿ ನಿಂತನು. ಬೊಬ್ಬರ್ಯನ ಮೂರ್ತಿಯಲ್ಲಿ ಕಾಣುವ ಬೆಳ್ಳಿಯ ಉದ್ದವಾದ ಟೊಪ್ಪಿ, ಹಾಗೂ ಮೊಣಕಾಲಿನವರೆಗೆ ಉಟ್ಟಿರುವ ಲುಂಗಿ ಇವೆರಡೂ ಮುಸ್ಲಿಂ ಸಂಸ್ಕೃತಿಯನ್ನು ಪರಿಚಯಿಸಿದರೆ. ಆತನ ಎಡಗೈಯ್ಯಲಿನ ಗಂಟೆ, ಹಣೆಯ ಮೇಲಿನ ನಾಮ ಹಿಂದೂ ಸಂಸ್ಕೃತಿಯ ಸಂಕೇತಗಳಾಗಿವೆ. ಹೀಗಿದ್ದರೂ ಬೊಬ್ಬರ್ಯನನ್ನು ಕುರಿತ ನಂಬಿಕೆ ಮತ್ತು ಆಚರಣೆಗಳು ಹಿಂದೂ ಸಂಪ್ರದಾಯವನ್ನನುಸರಿಸಿವೆ. ಏನೇ ಇದ್ದರೂ ಬೊಬ್ಬರ್ಯ ದಕ್ಷಿಣ ಕನ್ನಡ ಜಿಲ್ಲೆಯ ಬಹು ಪ್ರಸಿದ್ಧವಾದ ಭೂತವೆಂಬುದನ್ನು ಡಾ॥ ಬಿ. ಎ. ವಿವೇಕ ರೈ ಅವರು ನೀಡಿರುವ ಬೊಬ್ಬರ್ಯನ ಮಹಿಮೆಯನ್ನು ಸಾರುವ ಪ್ರಸರಣ ಸ್ಥಳಗಳನ್ನು ಗಮನಿಸಿದಾಗ ತಿಳಿಯುತ್ತದೆ.

ಬೊಬ್ಬರ್ಯನ ಮಹಿಮೆಯನ್ನು ಸಾರುವ ಸ್ಥಳಗಳು :

<u>ಯೇರಿಕಲ್ಲ್</u> <u>ಬೊಂಡಿಕಲ್ಲ್</u>

ಪೊಡಿಕಲಾಯ ಬ್ರಹ್ಮ

↓

ಮಂಗಲ್‌ದೊಟ್ಟಿ

↓

ಮೂಳೂರು

↓

ಮಲ್ಲಾರ

↓

ಕಾಪು

↓

ಅಜ್ಜಾಲ

↓

ಬಾಹು

↓

ಪಾಂಗಳ (ಇಬ್ಬರು ಸಿರಿಗಳು: ಜನಾರ್ಧನ ದೇವರು)

↓

ಮುದೊಟ್ಟು (ಮಹಾಲಿಂಗೇಶ್ವರ ದೇವರು)
↓
ಕಟಪಾಡಿ
↓
ಪೊಸರ್ ಕುರೆಕುಂಜ
↓
ಮಟ್ಟಿ (ವಿಷ್ಣು ಮೂರ್ತಿದೇವರು)
↓
ಉದ್ಯಾವರ (ವಿನಾಯಕ ದೇವರು)
↓
ವೊಡಿಪ್ಪು (ಉಡುಪಿ) (ಆದಿ ಅನಂತೇಶ್ವರ ದೇವರು)
↓
ಯೆಡುಮೊ ಸಂಸ್ಥಾನ
↓
ಚಿಟ್ಟುಪಾಡಿ
↓
ಕುಡಾರ್ (ಮಲಪು) (ಶಂಕರನಾರಾಯಣ ದೇವರು)
↓
ವೊಡ ಬಾಂಡೇಶ್ವರ (ಬಲರಾಮ ದೇವರು)
↓
ಬಿಲ್ಲುಗುಡ್ಡೆ ಯೆತ್ರಾಳ (ನರದೇಶ್ವರ ದೇವರು)
↓
ಕಲ್ಮಾಡಿ ಪಾಡೆ
↓
ತೂಣದ ಪಾಡೆ
↓
ವರ್ಕಾರ್

ಸಮುದ್ರವನ್ನಾಶ್ರಯಿಸಿದ ಜನರು ಬೊಬ್ಬರ್ಯನ ಭಕ್ತರು. ಅವರು ಕಷ್ಟಗಳಿಂದ ಪಾರಾಗಲು ಬೊಬ್ಬರ್ಯನಿಗೆ ಹರಕೆ ಹೊರುತ್ತಾರೆ. ದುಡಿದ ದುಡಿಮೆಯಲ್ಲಿ ಬೊಬ್ಬರ್ಯನ ಪಾಲು ತೆಗೆದಿಡುತ್ತಾರೆ. ಭವಿಷ್ಯದ ಬೆಳಕಿಗಾಗಿ ಆತನ ಮೊರೆಹೊಕ್ಕುತ್ತಾರೆ.

ಬೊಬ್ಬರ್ಯನ ಕಥೆಯು ಮಾನವ ಶಕ್ತಿಯ ಹಾಗೂ ದೈವ ಶಕ್ತಿಗಳೆರಡನ್ನು ಪರಿಚಯಿಸುತ್ತದೆ. ಮಾನವನಾಗಿ ಸೋಲನ್ನಪ್ಪದ ಬೊಬ್ಬರ್ಯ ದೈವ ಶಕ್ತಿಯಾಗಿ ಗೆಲುವನ್ನು ಸಾಧಿಸುವುದರ ಜೊತೆ ಜೊತೆಗೆ ಬಹುಜನ ಸಂಸ್ಕೃತಿಯ ಸಾಂಸ್ಕೃತಿಕ ವೀರನಾಗುವುದು ಗಮನಾರ್ಹ. ಬೊಬ್ಬರ್ಯನ ಬದುಕಲ್ಲಿನ ಸಮುದ್ರ ಪಯಣ ಹೊಸ ತಿರುವನ್ನು ನೀಡುತ್ತದೆ. ಅದು ಮಾನವ ಶಕ್ತಿಯನ್ನು ಬೊಬ್ಬರ್ಯನಲ್ಲಿ ಕೊನೆಗೊಳಿಸಿ ದೈವಶಕ್ತಿಯ ಸೃಷ್ಟಿಗೆ ಕಾರಣವಾಗುತ್ತದೆ.

ಬೀರರ ಕಂಬಗಳು : ತೀರ ಪ್ರದೇಶದಲ್ಲಿ ಬೀರರ ಕಂಬಗಳನ್ನು ನಿಲ್ಲಿಸಿ ಅದರ ಸುತ್ತ ಗೋಡೆ ಕಟ್ಟಿರುವುದು ಸಾಮಾನ್ಯವಾಗಿ ಕಂಡು ಬರುತ್ತದೆ. ಅವು ವೀರರು ಶತ್ರುಗಳೊಡನೆ ಹೋರಾಟಮಾಡಿ ಮಡಿದವರ ಸ್ಮಾರಕಗಳು . ಆ ಕಂಬಗಳ ಅಕ್ಕ ಪಕ್ಕದಲ್ಲಿ ಚೂಪಾದ ಕೋಲುಗಳನ್ನು ಸಿಕ್ಕಿಸಿರುತ್ತಾರೆ. ಇವು ವೀರರು ಬಳಸುತ್ತಿದ್ದ ಆಯುಧವನ್ನು ಸಂಕೇತಿಸುತ್ತವೆ. ಇಂತಹ ಹಲವಾರು ಕಂಬಗಳು ಸುತ್ತುಗೋಡೆಯೊಳಗಡೆ ಇವೆ. ಅವುಗಳಲ್ಲಿ ಪ್ರತಿಯೊಂದಕ್ಕೂ ಒಂದೊಂದು ಹೆಸರಿನಿಂದ ಕರೆಯುತ್ತಾರೆ. ಆ ಹೆಸರುಗಳು ಬಲಿಯಾದ ವ್ಯಕ್ತಿಗಳನ್ನು ಗುರುತಿಸುತ್ತವೆ. ಅವುಗಳೆಂದರೆ ಬೇಟೆ ಬೀರ, ಬಾಗಿಲ ಬಂಟ, ತೋಟದ್ ಧೀರ, ಕೆಂಡ ಧೀರ, ಕಪ್ಪುಧೀರ, ಮಲ್ಲಧೀರ, ಭೋಗಧೀರ, ನೇತ್ರಾಣಿ ಸುಣ್ಣಧೀರ, ಹಿಂಡ ಚೇರು, ಮಾರಿಗಣ, ಮಳ್ಳ ಮಾಸ್ತಿ, ಸೂಲ ಧೀರ, ಮೊದಲಾದವು ಪ್ರಮುಖ ಹೆಸರಾಗಿವೆ. ಮಾನವರು ಧೀರರಾಗಿ ಪಾರಾಕ್ರಮ ಪ್ರದರ್ಶಿಸಿ ಬಲಿಯಾದ ಕಾರಣದಿಂದ ಅವರು ದೈವಿಶಕ್ತಿಯುಳ್ಳವರಾದರು. ಅವರ ಸ್ಮರಣಾರ್ಥಕವಾದ ಕಂಬಗಳು ಕಡಲಿಗರ ಆರಾಧನೆಯ ಮೂರ್ತಿಗಳಾಗಿ ಧಾರ್ಮಿಕ ವೈಶಿಷ್ಟತೆಯನ್ನು ತಿಳಿಸುತ್ತವೆ.

ಸಾಮಾನ್ಯವಾಗಿ ಸಮುದ್ರ ಸಂಬಂಧಿ ದೆವ್ವ-ಭೂತಗಳನ್ನು ಜನರು ದುಷ್ಟ ಶಕ್ತಿಗಳೆಂದು ಪರಿಗಣಿಸದೆ, ತಮ್ಮನ್ನು ರಕ್ಷಿಸುವ ದೈವ ಶಕ್ತಿಯೆಂದು ನಂಬಿರುತ್ತಾರೆ. ಇವರ ದೆವ್ವ-ಭೂತಗಳೆಲ್ಲಾ ಶ್ರೇಷ್ಠ ಮಾನವರಾಗಿ ಬದುಕಿ ಸತ್ತಂತಹವರು. ಆದ್ದರಿಂದ ಅವು ದುಷ್ಟ ಶಕ್ತಿ-

ಗಳಾಗಿ ಪರಿವರ್ತಿತವಾಗದೆ ದೈವ ಶಕ್ತಿಗಳಾದದ್ದು. ಈ ಶಕ್ತಿಯು ಜಟ್ಟಿಗ, ಮಾಸ್ತಿ, ಭೂತ, ವೀರ ಮೊದಲಾದ ಸ್ವರೂಪಗಳಲ್ಲಿ ಕರ್ನಾಟಕ ಕರಾವಳಿಯಲ್ಲಿ ಕಾಣಿಸಿಕೊಂಡಿವೆ. ಒಂದು ದೃಷ್ಟಿಯಿಂದ ಈ ದೈವ-ಭೂತಗಳೆಲ್ಲವು ಕೆಳವರ್ಗದವರ ಶ್ರೇಷ್ಠ ದೇವರುಗಳಾಗಿ ಅವರನ್ನು ರಕ್ಷಿಸುತ್ತಿವೆ. ಮೇಲ್ವರ್ಗದವರ ದೇವರುಗಳು ಅವರ ಮೇಲೆ ಎಷ್ಟೇ ಪ್ರಭಾವ ಬೀರಿದ್ದರೂ ತಮ್ಮ ದೇವರುಗಳ ಬಗ್ಗೆ ಅವರಿಗೆ ಅತಿಯಾದ ಭಕ್ತಿ ಇದೆ. ಅವುಗಳೆಲ್ಲಾ ಮೇಲ್ವರ್ಗದವರ ದೇವರುಗಳಂತೆ ಆಕಾಶದಿಂದಿಳಿದು ಬಂದವರಲ್ಲ. ಮಾನವರಾಗಿ ಬದುಕಿ ತಮ್ಮ ಸಾಮರ್ಥ್ಯದಿಂದ ದೈವದ ಸ್ಥಾನಕ್ಕೆ ಏರಿರುವಂತಹವು. ಲೌಕಿಕ ಬದುಕಿನೊಡನೆ ಸಂಬಂಧ ಪಡೆದಂತಹವು.

ಮಾಟ-ಮಂತ್ರ-ಭವಿಷ್ಯ

ಮಾಟ-ಮಂತ್ರ ಮತ್ತು ಭವಿಷ್ಯ ಕಡಲಿಗರ ಬದುಕಲ್ಲಿ ಬಹುಮುಖ್ಯ ಪಾತ್ರವಹಿಸುತ್ತವೆ. ನಂಬಿಕೆಗಳನ್ನು ಉಸಿರಾಗಿಸಿಕೊಂಡು ಬದುಕುತ್ತಿರುವ ಅವರು ಮಾಟ-ಮಂತ್ರ-ಭವಿಷ್ಯಗಳ ದಾಸರಾಗಿದ್ದಾರೆ. ಕಡಲನ್ನಾಶ್ರಯಿಸಿರುವವರು ಭವಿಷ್ಯವನ್ನರಿತೇ ಬದುಕಬೇಕಾಗುತ್ತದೆ. ಕಡಲ ಮೇಲಿನ ಅಪಾಯಗಳನ್ನು ಭವಿಷ್ಯದ ಮೂಲಕ ಅರಿತು ನೀರಿಗಿಳಿಯಬೇಕಾಗುತ್ತದೆ. ಆದ್ದರಿಂದ ಅವರಲ್ಲಿ ಮಾಟ-ಮಂತ್ರಗಳಿಗಿಂತ ಭವಿಷ್ಯ ಪ್ರಮುಖವಾಗುತ್ತದೆ. ಆತನು ದೇವಸ್ಥಾನದ ಪೂಜಾರಿಯಾಗಿ, ಮಾಟಗಾರನಾಗಿ, ಭವಿಷ್ಯಗಾರನಾಗಿ ಕಾರ್ಯನಿರ್ವಹಿಸುತ್ತಾನೆ. ಅವನ ಮಾತೆಂದರೆ ಅವರಿಗೆ ವೇದವಾಕ್ಯ.

ಸಮುದ್ರ ಸಂಬಂಧಿ ಮಾಟಗಳಲ್ಲಿ ಉತ್ಪಾದಕ ಮಾಟ ಮಾತ್ರ ಹೆಚ್ಚು ಪ್ರಸಿದ್ಧ. ವಿನಾಶಾತ್ಮಕ ಮಾಟ ಇಲ್ಲವೇ ಇಲ್ಲವೆನ್ನಬಹುದು. ಇದಕ್ಕೆ ಕಾರಣವೆಂದರೆ ಸದಾ ಜಲದ ಮೇಲೆ ಜೀವ ಹಿಡಿದು ಬದುಕುವ ಅವರು ಒಬ್ಬರಿಗೆ ಕೆಟ್ಟದ್ದು ಬಗೆದರೆ ಕಡಲಪಾಯಗಳು ತಮ್ಮನ್ನು ನಾಶಗೊಳಿಸಬಹುದು ಎಂದು ಹೆದರುತ್ತಾರೆ. ಈ ದೃಷ್ಟಿಯಿಂದ ಅವರು ಉತ್ಪಾದಕ ಮಾಟ ಮಾಡಿಸುವುದು ಸಾಮಾನ್ಯ. ಮೀನು ಸಿಗದೇ ಇದ್ದಾಗ, ಬಲೆ ಹರಿದು ನಷ್ಟವಾದಾಗ, ಭಟ್ಟರಲ್ಲಿಗೆ (ಪೂಜಾರಿ) ಹೋಗಿ ಇಲ್ಲವೆ ಮಂತ್ರ ಬರೆದುಕೊಟ್ಟ ತಾಮ್ರದ ತಗಡನ್ನು ತಂದು ತಮ್ಮ ದೋಣಿಯಲ್ಲಿಡುತ್ತಾರೆ. ಕೆಲವು ಸಂದರ್ಭಗಳಲ್ಲಿ ಮಂತ್ರಿಸಿಕೊಟ್ಟ ನಿಂಬೆಹಣ್ಣು ಮತ್ತು ಒಣಮೆಣಸಿನ ಕಾಯಿಗಳನ್ನು ತಂದು ದೋಣಿ ನಡೆಸುವ ಯಂತ್ರದ ಕ್ಯಾಬಿನ್‌ನಲ್ಲಿ ಕಟ್ಟುತ್ತಾರೆ.

ದೇವರಿಗೆ ಹತ್ತಿವಾಗಿರುವ ಪೂಜಾರಿಯಲ್ಲಿ ಅತೀಂದ್ರಿಯ ಜ್ಞಾನವಿದೆ ಎಂದು ನಂಬಿದ ಜನರು ಅವನಿಂದ ಭವಿಷ್ಯ ಕೇಳಲು ಬರುತ್ತಾರೆ. ಅಲ್ಲದೆ ಅವನು ದೇವರಿಗೆ ಹತ್ತಿರವಿರುವುದರಿಂದ ಆ ದೇವರು ಅವನಲ್ಲಿ ಬಂದು ನುಡಿಯುತ್ತದೆ ಎಂದು ನಂಬುತ್ತಾರೆ. ಸಾಮಾನ್ಯವಾಗಿ ಮೈಮೇಲೆ ಬರುವ ದೇವರೆಲ್ಲಾ ಮಾನವರಾಗಿ ಬದುಕಿ ಈಗ ದೇವರಾದ ಜಟ್ಟಿಗ, ಮಾಸ್ತಿ, ಭೂತ ಮೊದಲಾದವು. ದೇವರು ಮೈಮೇಲೆ ಬಂದಾಗ ಬೈದ್ಯ ಕೈಕಾಲುಗಳನ್ನು ನಡುಗಿಸುತ್ತಾ ಕಣ್ಣು ಮುಚ್ಚಿಕೊಂಡು ಉಹುಹೂ, ಉಹುಹೂ ಎಂದು ಶಬ್ದ ಮಾಡುತ್ತಿರುತ್ತಾನೆ. ಆಗ ಅಲ್ಲಿದ್ದ ಭಕ್ತಾದಿಗಳು ದೋಣಿ ಕೊಳ್ಳುವ ಬಗ್ಗೆ ಇಲ್ಲವೆ ಅದನ್ನು ನೀರಿಗಿಳಿಸುವ ದಿನದ ಬಗ್ಗೆ, ಇಲ್ಲವೆ ಮೀನು ಸಿಗುವ ಬಗ್ಗೆ, ಪ್ರಶ್ನೆ ಕೇಳುತ್ತಾರೆ. ಅದಕ್ಕೆ ಕೊಟ್ಟ ಉತ್ತರದ ಪ್ರಕಾರ ಅವರು ನಡೆಯುತ್ತಾರೆ. ಕೆಲವು ವೇಳೆ ಮೀನುಗಾರಿಕೆಯಲ್ಲಿ ನಷ್ಟ ಸಂಭವಿಸುತ್ತಿದ್ದರೆ ಬೈದ್ಯ ಅದಕ್ಕೆ ದೈವದ ಕಾಟ ಕಾರಣವೆಂದು ತಿಳಿಸಿ ಪರಿಹಾರ ಸೂಚಿಸುತ್ತಾನೆ. ಯಾವುದಾದರೂ ಭೂತಗಳ ಕಾಟವಿದ್ದರೆ ಆಗ ಭೂತವಾಗಿರುವ ವೀರನ ಕಂಬ ಮಾಡಿಸಿ ''ಬೀರರಗೊಳಿ'' (ಬೀರರಗೊಳಿ ಎಂದರೆ ವೀರರ ಸ್ಮರಣಾರ್ಥಕವಾಗಿ ನಿಲ್ಲಿಸಿರುವ ಕಂಬಗಳ ಸ್ಥಳ) ಎಂಬ ಸ್ಥಳದಲ್ಲಿ ನಿಲ್ಲಿಸಬೇಕೆಂದು ತಿಳಿಸುತ್ತಾನೆ.

ಬೈದ್ಯನು '' ನೋಟಗಾರ''ನೂ ಆಗಿರುತ್ತಾನೆ. ಅವನು ಮಣೆಯ ಮೇಲೆ ಅಕ್ಕಿ ಕಾಳನ್ನು ಹಾಕಿ ಅವುಗಳನ್ನು ಚಾಕುವಿನಿಂದ ಆ ಕಡೆ ಈ ಕಡೆ ಸರಿಸಿ ದೇವರ ಹೆಸರುಗಳನ್ನು ಜ್ಞಾಪಿಸಿಕೊಂಡು ಛಿದ್ರವಾದ ಅಕ್ಕಿಕಾಳನ್ನು ನೋಡುತ್ತಾ ಭವಿಷ್ಯ ನುಡಿಯುತ್ತಾನೆ. ದೇವರ ಮೂರ್ತಿಗೆ ಹೂ ತೊಡಿಸಿ ಹೂ ಕೇಳುವ ಪದ್ಧತಿ ಕಡಲಿಗರಲ್ಲೂ ಸಾಮಾನ್ಯ.

ಕೆಲವು ಸಂದರ್ಭಗಳಲ್ಲಿ ಅನುಭವ ಜ್ಞಾನದಿಂದ ಭವಿಷ್ಯ ನುಡಿವವರು ಅವರಲ್ಲಿದ್ದಾರೆ. ವಾಯುವ್ಯ ದಿಕ್ಕಿನಿಂದ ಗಾಳಿ ಬೀಸಿದರೆ ಮೀನುಬೇಟೆ ಹೆಚ್ಚಾಗುತ್ತದೆ ಎಂದು ಹೇಳುತ್ತಾರೆ. ಹುಣ್ಣಿಮೆ ಚಂದ್ರನ ಬೆಳಕಿದ್ದಾಗ ಮೀನು ಬೇಟೆ ಆಗುವುದಿಲ್ಲವೆಂದು ಹೇಳುವುದರಿಂದ

ಆ ದಿನ ಯಾರು ಬೇಟೆಗೆ ಹೋಗುವುದಿಲ್ಲ. ಕತ್ತಲ್ಲಿದ್ದರೆ ಮೀನು ಬೇಟೆ ಚೆನ್ನಾಗಿ ಆಗುತ್ತದೆ ಎಂದು ಹೇಳುತ್ತಾರೆ. ಏಕೆಂದರೆ ಕತ್ತಲಲ್ಲಿ ಮೀನಿನ ಹೊಳಪು ಕಾಣುವುದರಿಂದ ಬಲೆ ಹಾಕಿ ಮೀನು ಹಿಡಿಯಲು ಹೆಚ್ಚು ಅನುಕೂಲವಾಗಿರುತ್ತದೆ. ಅದೇ ಚಂದ್ರನ ಬೆಳಕಲ್ಲಿ ಮೀನು ಕಾಣುವುದಿಲ್ಲ ಆಗ ಬೇಟೆ ಕಷ್ಟವಾಗುತ್ತದೆ. ಸಮುದ್ರದ ನೀರು ಕೆಂಪಾಗಿದ್ದರೆ ಬಿರುಗಾಳಿ ಬರುವ ಸೂಚನೆ. ಕಡಲ ಮೇಲೆ ಅಲ್ಲಲ್ಲಿ ಕಪ್ಪು ಕಪ್ಪು ಕಂಡರೆ ಅಲ್ಲಿ ಮೀನಿನ ಹಿಂಡಿದೆ ಎಂಬ ಭವಿಷ್ಯ ಜ್ಞಾನವು ಕಡಲಿಗರಿಗೆ ಅನುಭವದಿಂದ ದೊರೆತದ್ದು. ಇದು ಬೈದ್ಯನ ಭವಿಷ್ಯಕ್ಕಿಂತ ಹೆಚ್ಚು ಸತ್ಯಾಂಶದಿಂದ ಕೂಡಿರುವಂತಹದು. ಹೀಗಿದ್ದರೂ ಬೈದ್ಯನ ಇಲ್ಲವೆ ದೇವರಿಗೆ ಹೂವಿಟ್ಟು ಕೇಳುವ ಭವಿಷ್ಯದ ಬಗ್ಗೆ ಕಡಲಿಗರಿಗೆ ಹೆಚ್ಚು ವಿಶ್ವಾಸ.

ವಿಜ್ಞಾನ ಎಲ್ಲಾ ಕಡೆ ಪ್ರಭಾವ ಬೀರಿದ್ದರೂ ಕಡಲಿಗರ ಮಾಟ-ಮಂತ್ರ-ಭವಿಷ್ಯದ ಮೇಲೆ ಅದು ಹೆಚ್ಚು ಪ್ರಭಾವ ಬೀರಿಲ್ಲ. ಇದಕ್ಕೆ ಕಾರಣ ಜಲಚರದ ಮೇಲಿನ ಅವರ ಬದೆಕು ನಂಬಿಕೆಗಳ ಆಧಾರದ ಮೇಲೆ ಸಾಗುವಂತಹದು. ವಿಜ್ಞಾನದ ದೃಷ್ಠಿಯಲ್ಲಿ ಮೂಢನಂಬಿಕೆ ಎನಿಸಿಕೊಂಡಂತಹವು ಕಡಿಲಿಗರ ದೃಷ್ಠಿಯಲ್ಲಿ ಅವು ಸತ್ಯಾಂಶ ನಂಬಿಕೆಗಳು ಆದ್ದರಿಂದ ಅವರಿಗೆ ಭವಿಷ್ಯವು ಬದುಕಿನ ದಾರಿದೀಪ.



ವೀರ ಕಂಬಗಳು.



4 . ನಂಬಿಕೆ ಮತ್ತು ಆಚರಣೆಗಳು:

ಮನುಷ್ಯನ ಬದುಕು ಸಾಗುವುದು ನಂಬಿಕೆಯ ಆಧಾರದ ಮೇರೆಗೆ. ವ್ಯಕ್ತಿಯ ಸ್ಥಾನ ಮಾನವನ್ನು ಮೇಲಕ್ಕೇರಿಸುವುದು ಇಲ್ಲವೆ ಕೆಳಗಿಳಿಸುವುದು ನಂಬಿಕೆ. ಯಾವ ವ್ಯಕ್ತಿ ನಂಬಿಕೆಯನ್ನುಳಿಸಿಕೊಂಡು ಬದುಕುತ್ತಾನೋ ಅವನು ಸಮಾಜದಲ್ಲಿ ಶ್ರೇಷ್ಠ ವ್ಯಕ್ತಿಯಾಗಬಲ್ಲ ಯಾವ ವ್ಯಕ್ತಿಯನ್ನು ನಂಬಲು ಕಷ್ಟವಾಗುವುದೋ ಅವನು ಕನಿಷ್ಠ ವ್ಯಕ್ತಿಯಾಗುತ್ತಾನೆ. ಮಾನವನ ಪ್ರತಿಯೊಂದು ವ್ಯವಹಾರವೂ ನಂಬಿಕೆಯ ಆಧಾರದ ಮೇಲೆಯೇ ಸಾಗುತ್ತದೆ. ಆದ್ದರಿಂದಲೇ ಮಾನವನ ಬದುಕಿನಲ್ಲಿ ನಂಬಿಕೆಯ ಪಾತ್ರ ಮಹತ್ತರವಾದುದು. ತಾನು ಹಾಗೂ ತನ್ನೊಡನೆ ಕೊಂಡಿ ತಾಗಿಸಿಕೊಂಡ ಸಾಮಾಜಿಕ- ಧಾರ್ಮಿಕ- ಆರ್ಥಿಕ ಮೊದಲಾದ ಕ್ಷೇತ್ರಗಳ ನಡುವೆ ಗಾಢವಾದ ಸಂಬಂಧ ಬೆಳೆದುಳಿಬೇಕಾದರೆ ನಂಬಿಕೆಯೇ ಮೂಲ. ಇದು ಮಾನವನ ಮನಸ್ಸಿಗೆ ಸಂಬಂಧಿಸಿದ ಪ್ರಕ್ರಿಯೆ. ಈ ಕಾರಣದಿಂದದಲೇ ಡಾ। ಪುರುಷೋತ್ತಮ ಬಿಳಿಮಲೆಯವರು ತಿಳಿಸುವಂತೆ '' ಇದು ಸಾರ್ವತ್ರಿಕವಾದದ್ದು ಅಲ್ಲದೆ ಇಲ್ಲಿ ವಿದ್ಯಾವಂತ ಅವಿದ್ಯಾವಂತ ಮತ್ತು ಕೆಳವರ್ಗ ಹಾಗೂ ಮೇಲ್ವರ್ಗದ ವ್ಯತ್ಯಾಸಗಳು ಕಡಿಮೆ'' ಎಂಬ ಅಭಿಪ್ರಾಯ ಸಮಂಜಸವಾದುದ್ದು. ಪ್ರಾದೇಶಿಕವಾಗಿ ನಂಬಿಕೆಗಳು ಭಿನ್ನವಾಗಿರುತ್ತವೆ. ಒಂದು ಪ್ರದೇಶದಲ್ಲಿ ಮಹತ್ವವೆನಿಸಿದ ನಂಬಿಕೆಗಳು ಮತ್ತೊಂದು ಪ್ರದೇಶದಲ್ಲಿ ತನ್ನ ಮಹತ್ವ ಕಳೆದುಕೊಳ್ಳುತ್ತವೆ. ಕರಾವಳಿಯಲ್ಲಿ ಮೀನು, ಸಮುದ್ರ, ಉಪ್ಪು ಮೊದಲಾದ ವಿಷಯಗಳ ಬಗ್ಗೆ ಇರುವ ನಂಬಿಕೆಗಳು ಬಯಲು ಸೀಮೆಯಲ್ಲಿ ಪ್ರಚಲಿತವಿಲ್ಲ. ಈ ದೃಷ್ಠಿಯಲ್ಲಿ ನಂಬಿಕೆಗಳು ಪ್ರಾದೇಶಿಕ ವೈಶಿಷ್ಟತೆಯನ್ನುಳಿಸಿಕೊಂಡತಹವು ನಂಬಿಕೆಯ ಮೂಲದಿಂದ ಆಚರಣೆಗಳು ಬೆಳೆಯಲಾರಂಭಿಸುತ್ತವೆ. ಮಾನವನ ಮನಸ್ಸಿನಲ್ಲಿ ಪ್ರೀತಿ- ವಿಶ್ವಾಸದ ಭದ್ರಬುನಾದಿ ನಿರ್ಮಿಸುವ ಕೆಲಸ ನಂಬಿಕೆಯದು ಅದನ್ನು ಮನಸ್ಸಿನಿಂದ ಹೊರ ಪ್ರದರ್ಶನಕ್ಕೆಡೆ ಮಾಡಿಸುವ ಕಾರ್ಯ ಆಚರಣೆಯದು ಸಾಮಾನ್ಯವಾಗಿ ಇವೆರಡೂ ಒಂದು ನಾಣ್ಯದ ಎರಡು ಮುಖಗಳಂತೆ.

1. ಸಮುದ್ರ ಸಂಬಂಧಿ ನಂಬಿಕೆಗಳು ಹಾಗೂ ಆಚರಣೆಗಳು

1. ಸಮುದ್ರದ ಆಶ್ರಯದಲ್ಲಿ ಬದುಕುವ ಕಡಲಿಗರು ಸಮುದ್ರವನ್ನು ದೇವರೆಂದು ಭಾವಿಸುತ್ತಾರೆ. ಆ ದೇವರನ್ನು ಅಪವಿತ್ರರಾದವರು ಮುಟ್ಟಬಾರದೆಂದು ನಂಬುತ್ತಾರೆ. ಈ ಕಾರಣದಿಂದ ಮುಟ್ಟಾದ ಸ್ತ್ರೀಯರು ಸಮುದ್ರವನ್ನು ಮುಟ್ಟುವುದಿಲ್ಲ.

2. ತೀರದಲ್ಲಿ ಸಮುದ್ರದೊಳಗೆ ಕೆಲವೆಡೆ ಕೆಸರು ಸಂಗ್ರಹವಾಗುತ್ತದೆ. ಅದನ್ನು ಮೀನುಗಾರರು ''ಮಡಿ'' ಎಂದು ಕರೆಯುತ್ತಾರೆ. ಸಮುದ್ರದ ಕೆಸರಿರುವ ಪ್ರದೇಶವು ಮೀನುಗಾರರಿಗೆ ಮಳೆಗಾಲಲ್ಲಿ ಮೀನು ಹಿಡಿಯಲು ಅನುಕೂಲಕರ ಪ್ರದೇಶವಾಗಿರುತ್ತದೆ. ಮಳೆಗಾಲದ ವಾತಾವರಣಕ್ಕೆ ಸಿಕ್ಕಿ ಉಗ್ರವಾದ ಸಮುದ್ರದಲ್ಲಿ ಶಾಂತಮಯ ಪ್ರದೇಶವೆಂದರೆ ಮಡಿ ಪ್ರದೇಶ ಮಾತ್ರ. ಆ ಪ್ರದೇಶದಲ್ಲಿ ಮೀನುಗಾರರು ಧೈರ್ಯವಾಗಿ ಮೀನು ಹಿಡಿಯುತ್ತಾರೆ. ಹೀಗೆ ಮೀನುಗಾರರಿಗೆ ಅನುಕೂಲ ಮಾಡಿಕೊಡುವ ಪ್ರದೇಶದ ಸುತ್ತ ಮುತ್ತಲಿನ ತೀರ ಪ್ರದೇಶವನ್ನು ಪೊರಕೆಯಿಂದ ಗುಡಿಸಬಾರದೆಂದು, ಹಾಗೇನಾದರೂ ಗುಡಿಸಿದರೆ ಸಮುದ್ರದಲ್ಲಿರುವ ಕೆಸರು ಹೊರಟುಹೋಗುವುದೆಂದು ನಂಬುತ್ತಾರೆ. ಆದ್ದರಿಂದ ಕೆಸರು ಸಂಗ್ರಹವಾಗಿರುವ ಸ್ಥಳಕ್ಕೆ ಪೊರಕೆ ತೆಗೆದು ಕೊಂಡು ಹೋಗುವುದಿಲ್ಲ.

3. ಸಮುದ್ರ ಮೀನುಗಾರರಿಗೆ ದೇವತೆಯಾಗಿಯೂ, ಜಲಯಾನಕ್ಕೆ ಮಾರ್ಗವೂ, ಆಹಾರದ ಕಣಜವೂ, ಮುತ್ತುರತ್ನಗಳ ರಾಶಿಯೂ, ರೋಗಗಳಿಗೆ ಔಷಧಿಯೂ ಆಗಬಲ್ಲದು. ಆದ್ದರಿಂದಲೇ ಅವರು ಜಲಯಾನ ಪ್ರಾರಂಭಿಸುವ ಮುಂಚೆ, ಆಹಾರ ಸಂಶೋಧನೆಗೆ ಹೊರಡುವ ಮುಂಚೆ ಸಮುದ್ರಕ್ಕೆ ಪೂಜೆಸಲ್ಲಿಸಿ ತಮ್ಮ ಕಾರ್ಯ ಕೈಗೂಡಲೇಂದು ಪ್ರಾರ್ಥಿಸಿಕೊಳ್ಳುತ್ತಾರೆ. ಅಲ್ಲದೆ ಸಮುದ್ರದ ನೀರು ಚರ್ಮರೋಗಕ್ಕೆ ದಿವ್ಯ ಔಷಧಿಯೆಂದು ನಂಬುತ್ತಾರೆ. ಚರ್ಮದ ಮೇಲಿನ ಕಪ್ಪು ಇಲ್ಲವೆ ಬಿಳಿ ಕಲೆಗಳನ್ನು ಸಮುದ್ರ ಸ್ನಾನದಿಂದ ಅವರು ಕಳೆದುಕೊಳ್ಳುವ ಆಚರಣೆ ರೂಢಿಯಲ್ಲಿದೆ.

4. ಕಡಲಿನ ಉಗ್ರತೆ ಕಡಿಮೆಯಾಗಿ ಕಡಲು ಶಾಂತವಾಗುವುದಕ್ಕೆ ''ಪಲ್ಕೆ ಬೀಳುವುದು '' ಎಂದು ಕರೆಯುತ್ತಾರೆ. ಕಡಲಲ್ಲಿ ಅಲೆಗಳ ಅಬ್ಬರ ಹೆಚ್ಚಾಗಿದ್ದಾಗ ಅವು ಕಡಲೊಳಗಿನಿಂದ ಕಸಕಡ್ಡಿಗಳನ್ನು ತಂದು ದಡಕ್ಕೆಸೆಯುತ್ತದೆ. ಒಲೆ ಉರಿಸಲು ಕಟ್ಟಿಗೆಯ ಕೊರತೆ ಇರುವ ಜನರಿಗೆ ಆದು ವರದಾನವಿದ್ದಂತೆ. ಆದರೆ ಅದನ್ನು ತೆಗೆದು ಕೊಂಡು ಹೋಗಬಾರದೆಂಬ ನಿಯಮವಿದೆ. ಆ ಕಸ ಕಡ್ಡಿಗಳನ್ನು ತೆಗೆದುಕೊಂಡು ಹೋಗಿ ಉರಿಸಿದರೆ ಶಾಂತವಾದ ಕಡಲು ಮತ್ತೆ ಉಗ್ರರೂಪತಾಳುತ್ತದೆ ಎಂಬ ನಂಬಿಕೆ ಕಾರಣ.

5. ಮೀನುಗಾರರು ಸಾಗರವನ್ನು ಪವಿತ್ರ ಗಂಗೆ ಎಂದು ನಂಬಿರುವದರಿಂದ ಅಪವಿತ್ರ ವಸ್ತುವಾವುದನ್ನು ಅದು ತನ್ನಲ್ಲಿಟ್ಟುಕೊಳ್ಳಲು ಬಯಸುವದಿಲ್ಲ ಎಂಬ ನಂಬಿಕೆ ಇದೆ. ಅದಕ್ಕೆ ಅವರು ಕೊಡುವ ನಿದರ್ಶನವೆಂದರೆ ಸತ್ತಮೀನು, ಕಸಕಡ್ಡಿ, ನೀರಿನಲ್ಲಿ ಬಿದ್ದು ಸತ್ತ ಮನುಷ್ಯರನೆಲ್ಲಾ ಅದು ಕೆಲವೇ ಗಂಟೆಗಳಲ್ಲಿ ಹೊರಹಾಕುತ್ತದೆ ಎಂಬುದು.

6. ಸಮುದ್ರ ನಾಲಿಗೆ ಎಂದು ಕರೆಯುವ ಮೀನಿನ ಬೆನ್ನೆಲುಬನ್ನು ನಿಂಬೆಹಣ್ಣಿನ ರಸದೊಡನೆ ಮಿಶ್ರಣಮಾಡಿ ಮೊಡವೆಗಳಿಗೆ ಹಚ್ಚಿದರೆ ಮೊಡವೆಗಳು ಮಾಯವಾಗುತ್ತವೆಂಬ ನಂಬಿಕೆ ಆಚರಣೆಯಲ್ಲಿದೆ.

2. ಮೀನಿನ ನಂಬಿಕೆಗಳು :

ಮೀನು ಕೆಲವರ ದೃಷ್ಠಿಯಲ್ಲಿ ಹೊಲಸಿನ ಗುಂಪಿಗೆ ಸೇರಿದರೂ ಹಲವರ ದೃಷ್ಠಿಯಲ್ಲಿ ಅದು ಶ್ರೇಷ್ಠವಾಗಿದೆ. ಪ್ರಾಚೀನರು ಮೀನನ್ನು ಬೇರೆ ಬೇರೆ ದೃಷ್ಟಿಗಳಿಂದ ಮೆಚ್ಚಿಕೊಂಡಿದ್ದಾರೆ. ಭವಿಷ್ಯ ಶಾಸ್ತ್ರದಲ್ಲಿ ಬರುವ 12 ರಾಶಿಗಳಲ್ಲಿ ಮೀನಿನ ರಾಶಿ ಒಂದಾಗಿದೆ. ಪುರಾಣಗಳು ಮೀನಿನ ಬಗ್ಗೆ ಇರುವ ನಂಬಿಕೆಗಳ ಹಲವು ಸ್ವರೂಪಗಳನ್ನು ತಿಳಿಸುತ್ತವೆ. ಮೀನಿನ ಚಂಚಲತೆಯನ್ನರಿತ ಮನ್ಮಥ ತನ್ನ ಧ್ವಜದ ಗುರುತಿಗಾಗಿ ಮೀನನ್ನು ಆಯ್ಕೆ ಮಾಡಿಕೊಂಡ. ಅದೇರೀತಿ ಶಿವನ ಪತ್ನಿಯಾದ ಪಾರ್ವತಿಗೆ ಮೀನಾಕ್ಷಿ ಎಂದು ಹೆಸರಿಟ್ಟು ಕರೆದರು. ಹಯಗ್ರೀವನೆಂಬ ರಾಕ್ಷಸ ಬ್ರಹ್ಮನಿಂದ ವೇದಗಳನ್ನು ಅಪಹರಿಸಿಕೊಂಡು ಹೋಗಿ ಸಮುದ್ರದ ತಳದಲ್ಲಿಟ್ಟಾಗಅವುಗಳನ್ನು ಮತ್ಸ್ಯಾವತಾರದ ವಿಷ್ಣುವು ಹೊರತಂದನು.

''ಪ್ರಾರಂಭದಲ್ಲಿ ಮೀನು ಕೈಸ್ತರ ಧರ್ಮದ ಸಂಕೇತವಾಗಿತ್ತೆಂದು ತಿಳಿಯುತ್ತದೆ. ಕ್ರಿಸ್ತನು ಐದು ರೊಟ್ಟಿ ತುಣುಕುಗಳಿಂದ ಮತ್ತು ಎರಡು ಮೀನುಗಳಿಂದ ಅಪಾರ ಜನರಿಗೆ ಉಣಬಡಿಸಿದನು. ಅವನು ತನ್ನ ಶಿಷ್ಯರನ್ನು '' ಜನತೆಯ ಮೀನುಗಾರ''ರನ್ನಾಗಿ ಮಾಡಿದ. ಮೀನಿಗೆ ಗ್ರೀಕಿನಲ್ಲಿ ಇಕ್ತೋಸ್ ಎನ್ನುತ್ತಾರೆ. ಇಂದು ಗ್ರೀಕಿನಲ್ಲಿ ಕ್ರಿಸ್ತನಿಗೆ ಇರುವ ಪದಗಳಾದ ಇಸ್ತೋಸ್, ಕ್ರಿಸ್ತೋಸ್ ಮುಂತಾದ್ದರ ದ್ವಂದ್ವ ಪದ ಇರುಬಹುದು''. (ಕನ್ನಡ ಜಾನಪದ ವಿಶ್ವಕೋಶ ಪುಟ ೧೬೯, ೨೦.೨೧)

''ಕಾರಿಚ್ ಇನಾಂಗದವರು ಮೀನುಗಳು ಯಾವಾಗಲೂ ಯೌವ್ವನದಲ್ಲಿರುತ್ತವೆ. ಆದ್ದರಿಂದ ಮೀನು ತಿನ್ನುವವರು ಸಹ ಯೌವನದಲ್ಲೇ ಇರುವರೆಂಬ ನಂಬಿಕೆ ಇದೆ. ಜಗತ್ತಿನಲ್ಲಿ ಅನೇಕ ಭಾಗಗಳಲ್ಲಿ ದೇವಸ್ಥಾನಗಳಲ್ಲಿರುವ ನೂರು ವರ್ಷ ವಯಸ್ಸಿನ ಮೀನುಗಳು ಇದಕ್ಕೆ ಸಾಕ್ಷಿಯೆನ್ನಬಹುದು. ಹಿಂದು ಪುರಾಣದಲ್ಲಿ ಮೀನು ತುಂಬ ಪ್ರಸಿದ್ಧವಾಗಿದೆ. ವಿಷ್ಣುವಿನ ಹತ್ತು ಅವತಾರಗಳಲ್ಲಿ ಇದು ಮೊದಲನೆಯದು. ಹಿಂದು ಪುರಾಣಗಳಲ್ಲಿ ಮತ್ಸ್ಯವು ವಿಷ್ಣುವಿನ ಅವತಾರ. ದೇವರು ತನ್ನ ಒಂದು ಅಂಶವನ್ನು ಬೃಹತ್ತಾದ ಕೊಂಬುಗಳುಳ್ಳ ಮೀನಿಗೆ ಸೇರಿಸಿದನು. ಆಗ ದೆಲುಗೆನಿಂದ ಮನುವನ್ನು ಸಂರಕ್ಷಿಸುವ ಸಲುವಾಗಿ ಮತ್ಸವು ಅವತಾರಗೊಂಡಿತು. '' (ಕನ್ನಡ ಜಾನಪದ ವಿಶ್ವಕೋಶ ಪುಟ ೧೬೯, ೨೦.೨೧)

''ನದಿ ಮತ್ತು ಸಮುದ್ರಗಳಲ್ಲಿ ಸಂಚರಿಸುವ ಹಡಗು, ದೋಣಿಗಳನ್ನು ಯಾರು ನಾಶಪಡಿಸುತ್ತಾರೋ, ಅಂಥವರು ಮತ್ಸ್ಯ ಜನ್ಮ ಪಡೆಯುತ್ತಾರೆನೆಂದು 'ಪರಾಶರಸ್ಮೃತಿ' ಯಿಂದ ತಿಳಿದು ಬರುತ್ತದೆ.

'ಮನುಷ್ಯರು ಮೀನಾಗಿ ಹುಟ್ಟುವ ಪ್ರೇರಣೆ ಜನಪದ ಕಥೆಗಳಲ್ಲಿ ಸಿಗುತ್ತವೆ.''

ಮತ್ಸ್ಯಪುರಾಣದಲ್ಲಿ ಮೀನು ದೇವರ ಸ್ವರೂಪವಾಗಿ ಕಾಣಿಸಿಕೊಂಡಿದೆ ಎಂಬ ನಂಬಿಕೆ ಇಂದು ಬೇರೆ ಸ್ವರೂಪದಲ್ಲುಳಿದಿದೆ. ತಿಮಿಂಗಲವನ್ನು ಮೀನುಗಾರರು ದೇವರೆಂದು ನಂಬುತ್ತಾರೆ ಅದಕ್ಕೆ ''ದೇವರ ಮೀನು'' ಹಂದ್ ಮೀನು 'ಅಜ್ಜ' ಎಂಬೆಲ್ಲಾ ಹೆಸರುಗಳನ್ನಿಟ್ಟುಕೊಂಡಿದ್ದಾರೆ. ಆ ಮೀನನ್ನು ಹಿಡಿಯುವುದಲ್ಲಿ. ಅದು ಎದುರಾದರೆ ಅದರೆಡೆಗೆ ಕೈಬೆರಳು ತೋರಿಸುವುದಿಲ್ಲ, ಉಗುಳುವುದಿಲ್ಲ. ಅದಕ್ಕೆ ಬೈಯುವುದಿಲ್ಲ, ಎದುರಾದ ತಕ್ಷಣ ಅದಕ್ಕೆ ಕೈಮುಗಿದು ''ನಮಗೇನು ಮಾಡಬೇಡ, ಹೊರಟುಹೋಗಪ್ಪ ನಾಳೆ ಪೂಜೆ ಕೊಡುತ್ತೆವೆಂದು'' ಹರಕೆ ಹೊರುತ್ತಾರೆ. ಅದರಂತೆ ಮಾರನೇದಿನ ಪೂಜೆ ಸಲ್ಲಿಸಿ ಹಣ್ಣುಕಾಯಿಗಳನ್ನು ಸಮುದ್ರದಲ್ಲಿ ಬಿಡುತ್ತಾರೆ.

ಕೆಲವರು ''ದೇವರ ಮೀನು'' ತಮಗೆ ''ಮೀನು ಹಿಂಡು'' ಇರುವ ಸ್ಥಳವನ್ನು ತೋರಿಸುತ್ತದೆ ಎಂದು ನಂಬುತ್ತಾರೆ.

ತಿಮಿಂಗಲದ ಬಗ್ಗೆ ಮೀನುಗಾರರಲ್ಲಿ ಮೂಡಿರುವ ನಂಬಿಕೆಗೆ ಭಯವೇ ಕಾರಣ. ಅದು ಗಾತ್ರದಲ್ಲಿ ದೊಡ್ಡದಾಗಿರುವುದರಿಂದ ತಮ್ಮ ದೋಣಿಗಳನ್ನು ಮುಳುಗಿಸಬಹುದೆಂಬ ಹೆದರಿಕೆ ಅದರ ಬಗ್ಗೆ ಭಕ್ತಿ ಭಾವನೆ ಹುಟ್ಟಲು ಕಾರಣವಾಗಿದೆ. ಹೆದರಿಕೆಯು ನಂಬಿಕೆಯ ಹುಟ್ಟಿಗೆ ಬಹುಮುಖ್ಯ ಕಾರಣವಾಗಬಲ್ಲದು. ಧಾರ್ಮಿಕ ನಂಬಿಕೆಗಳ ಬುನಾದಿ ಹೆದರಿಕೆ ಎಂದರೆ ತಪ್ಪಾಗದು.

ಹೆದರಿಸುವ ಪ್ರವೃತ್ತಿಯು ಮಾನವನನ್ನು ಹೇಗೆ ನಿಯಂತ್ರಿಸಬಲ್ಲದೆಂದರೆ ಮೀನುಗಾರರು 'ದೇವರ ಮೀನಿನ' ಹೆಸರನ್ನು ಬಾಯಿಂದ ಉಚ್ಚರಿಸಬಾರದೆಂದು ಹೇಳುತ್ತಾರೆ. ಶನಿವಾರ ತಿರುಪತಿಯ, ಸೋಮವಾರ ಧರ್ಮಸ್ಥಳದ ದೇವರ ದಿನವೆಂದು ನಂಬುವ ಕಾರಣದಿಂದ ಮಾಂಸಾಹಾರಿಗಳಾಗಿರುವ ಮೀನುಗಾರರು ಆ ಎರಡೂ ದಿನಗಳಲ್ಲಿ (ಕೆಲವರು) ಮೀನು ತಿನ್ನುವುದಿಲ್ಲ. ಶನಿವಾರವಂತೂ ಯಾವ ಮೀನುಗಾರರೂ ಮೀನು ತಿನ್ನುವುದಿಲ್ಲ. ಆದರೂ ಮೀನು ಬೇಟೆ ಎಂದಿನಂತೆ ಸಾಗುತ್ತಿರುತ್ತವೆ.

'ನಾಮದ ಮೀನು' ದೇವರ ಮೀನು ಎಂದು ನಂಬುವ ಕಾರಣದಿಂದ ಕೆಲವರು ಆ ಮೀನನ್ನು ತಿನ್ನುವುದಿಲ್ಲ. ಆ ಮೀನಿನ ತಲೆಯ ಮೇಲಿರುವ ಮೂರು ನಾಮಗಳ ಗುರುತೇ ಮೀನುಗಾರರಲ್ಲಿ ಆ ಮೀನಿನ ಬಗ್ಗೆ ಪೂಜ್ಯ ಭಾವನೆ ಮೂಡಿಸಲು ಕಾರಣವೆನ್ನಬಹುದು ''ಮೀನಿಗೆ ಸಂಬಂಧಿಸಿದಂತೆ ತಾತ್ಸಾರದ ಮಾತುಗಳನ್ನಾಡಬಾರದು'' ''ಮೀನಿಗೆ ಕಾಲು ತೋರಿಸಬಾರದು'' ಎಂಬ ನಂಬಿಕೆಗಳು ಹೆದರಿಕೆ ಕಾರಣದಿಂದ ಹುಟ್ಟಿಕೊಂಡಿವೆ.

ಮೀನುಗಾರರ ಮೇಲೆ ಸಸ್ಯಹಾರಿ ಸಂಸ್ಕೃತಿಯು ಪ್ರಭಾವ ಬೀರಿರುವ ಕಾರಣದಿಂದ ದೇವರ ಸ್ಥಾನದಲ್ಲಿದ್ದ ಮೀನು ಹೊಲಸಿನ ಗುಂಪಿಗೆ ಸೇರುವಂತಾಯಿತು. ಮೀನನ್ನು ಒಳಗಿನ ಒಲೆಯ ಮೇಲೆ ಬೇಯಿಸದೆ ಹೊರಗಿನ ಒಲೆಯಲ್ಲಿ ಬೇಯಿಸುವ ಪದ್ಧತಿ ಮೀನುಗಾರರಲ್ಲಿ ಜಾರಿಯಲ್ಲಿರುವುದು ಮಾತ್ರವಲ್ಲದೇ ಮೀನು ಬೇಯಿಸಲು ಪ್ರತ್ಯೇಕ ಮಡಕೆ ಸೌಟುಗಳನ್ನು ಇಡುವಂತಾಯಿತು . ''ಗೌಲು ಒಲೆ'' ಮತ್ತು ಗೌಲು ಮಡಿಕೆ'' ಮೀನುಗಾರರ ಮನೆಯಲ್ಲಿ ಪ್ರತ್ಯೇಕ ಸ್ಥಾನ ಪಡೆದವು. ಮೇಲ್ವರ್ಗ ಸಂಸ್ಕೃತಿ ಕೆಳವರ್ಗ ಸಂಸ್ಕೃತಿಯನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳಲು ಎಷ್ಟೇ ಪ್ರಯತ್ನಿಸಿದರೂ ಕೆಳವರ್ಗ ಸಂಸ್ಕೃತಿ ಎಂದೂ ಸಹ ತನ್ನ ಸರ್ವಸ್ವವನೆಲ್ಲಾ ಮೆಲ್ವರ್ಗ ಸಂಸ್ಕೃತಿಗೆ ಅರ್ಪಿಸುವುದಿಲ್ಲ. ತನ್ನ ದೇ ಆದ ಸಂಪ್ರದಾಯ ಮತ್ತು ನಂಬಿಕೆಗಳನ್ನು ಉಳಿಸಿಕೊಂಡೇ ಅದು ಮುಂದುವರಿಯುತ್ತದೆ. ಆದ್ದರಿಂದಲೇ ಮೀನು ಹೊಲಸೆಂದು ಸಸ್ಯಾಹಾರಿ ಸಂಸ್ಕೃತಿಯು ಸಾರುತ್ತಿದ್ದರೂ ಮೀನುಗಾರರು ಅದು ತಮ್ಮ ಬದುಕಿನ ಜೀವಾಳವೆಂದು ನಂಬಿದ್ದಾರೆ. ಈ ಕಾರಣದಿಂದ '' ಕನಸಿನಲ್ಲಿ ಮೀನು ಕಂಡರೆ ಹಣ ಸಿಗುತ್ತದೆ'', ''ಮೀನಿಗೆ ಆಹಾರ ಹಾಕಿದರೆ ಪುಣ್ಯ ಬರುತ್ತದೆ'', ''ಗರ್ಭಿಣಿಯ ಹೆರಿಗೆ ಕಷ್ಟವಿಲ್ಲದೆ ಆಗಬೇಕಾದರೆ ಮೀನಿಗೆ ಆಹಾರ ಹಾಕುತ್ತಿರಬೇಕು'' , ''ಮತ್ಸರೇಖೆ ಕೈಯಲ್ಲಿದ್ದರೆ ಒಳ್ಳೆಯದು. ಅಂತಹ ವ್ಯಕ್ತಿಗೆ ಕನಸಿನಲ್ಲಿ ಮೀನಿರುವ ಸ್ಥಳ ಕಾಣುತ್ತದೆ''. ''ಯಾವುದಾದರೂ ಕೆಲಸಕ್ಕೆ ಹೊರಟಾಗ ಮೀನು ತುಂಬಿದ ಬುಟ್ಟಿ ಎದುರಾದರೆ ಹೋದಕೆಲಸ ಆಗುತ್ತದೆ.'' ಈ ಮೊದಲಾದ ನಂಬಿಕೆಗಳು ಇಂದಿಗೂ ಅವರಲ್ಲಿ ಪ್ರಸಿದ್ಧವಾಗಿವೆ .

ಮೀನಿನ ಜಾತಿ ಗುಣಗಳ ಬಗ್ಗೆ ಪರಿಪೂರ್ಣ ಜ್ಞಾನವಿರುವ ಕಡಲಿಗರಿಗೆ ಮೀನು ಕೇವಲ ಆಹಾರದ ಪ್ರಾಣಿ ಮಾತ್ರವಲ್ಲ ಅದು ರೋಗಕ್ಕೆ ಮದ್ದು ಸಹ ಆಗಬಲ್ಲದೆಂದು ನಂಬುತ್ತಾರೆ. ಮೀನು ತಿನ್ನುವವರು ಆರೋಗ್ಯವಂತರು. ಅವರ ಬುದ್ಧಿ ಹೆಚ್ಚು ಚುರುಕು ಎಂಬ ನಂಬಿಕೆಗಳು ಹೆಚ್ಚು ಪ್ರಚಲಿತವಾಗಿವೆ. ಕೆಲವು ಮೀನು ಆರೋಗ್ಯಕರವಲ್ಲ. ಬಾಂಗಡೆ ಹೆಚ್ಚು ತಿಂದರೆ ತುರಿಕೆ, ಸಂವ್‌ದಾಳ್, ಏಡಿ ಇವು ಹೆಚ್ಚು ಉಷ್ಣ ಎಂದು ನಂಬಿ ಅವುಗಳನ್ನು ಮಿತಿಮೀರಿ ಬಳಸುವುದಿಲ್ಲ. ಬಾಣಂತಿಗೆ ''ಕುಡ್ತಲೆ'' ಮತ್ತು ''ಗುರ್ಕ'' ಮೀನು ಆರೋಗ್ಯಕರ ಎಂದು ನಂಬುತ್ತಾರೆ. ಬಾಳೆ ಮೀನು ಮತ್ತು ಬಂಗಡೆ ಮೀನುಗಳೆರಡನ್ನು ಒಟ್ಟಿಗೆ ಸೇರಿಸಿ ಬೇಯಿಸಬಾರದು ಎಂಬ ನಂಬಿಕೆ ಇದೆ.

ನವರಾತ್ರಿ ಸಂದರ್ಭದಲ್ಲಿ ಮೀನುಗಾರರು ಆಚರಿಸುವ ''ಘಟ್ಟಿ ಇಡುವ'' ಸಂಪ್ರದಾಯದಲ್ಲಿ ದೇವರಿಗೆ ಎಡೆಯನ್ನಿಡುತ್ತಾರೆ. ಆ ಸಂದರ್ಭದಲ್ಲಿ ಜೋಗಿ ಎಡೆಯಲ್ಲಿ ಒಣಮೀನು ಸುಟ್ಟು ಇಡಲಾಗುತ್ತದೆ.

ಇಂತಹ ಆಚರಣೆಗಳು ಮಾಂಸಾಹಾರಿಗಳು ಸಸ್ಯಾಹಾರಿ ಸಂಪ್ರದಾಯಗಳ ಪ್ರಭಾವಕ್ಕೆ ಒಳಗಾಗಿದ್ದರೂ ತಮ್ಮ ಮೂಲ ಸಂಪ್ರದಾಯಗಳನ್ನು ಆಚರಿಸದಿದ್ದರೆ ತೃಪ್ತಿ ಪಡಲಾರರೆಂಬುದನ್ನು ತಿಳಿಸುತ್ತವೆ.

ಮೀನುಗಾರರಲ್ಲಿ ಬಳಕೆಯಲ್ಲಿರುವ ಹಲವು ನಂಬಿಕೆಗಳ ಜೊತೆಗೆ ಸೂರ್ಯೋದಯ ಮತ್ತು ಸೂರ್ಯಾಸ್ತದ ಸಂದರ್ಭದಲ್ಲಿ ಮೀನುಹಿಡಿಯಲು ಹೋದರೆ ಹೆಚ್ಚು ಮೀನು ಸಿಗುತ್ತವೆ, ಬೆಳದಿಂಗಳಲ್ಲಿ ಮೀನು ಬೇಟೆಯಾಗದು, ಬೇಟೆಗೆ ಹೋಗುವಾಗ ಹೊಸ ಮಡಿಕೆಯಾಗಲಿ, ವಿಧವೆಯಾಗಲಿ, ಬೆಕ್ಕಾಗಲಿ ಎದುರಾಗಬಾರದು ಈ ಮೊದಲಾದ ನಂಬಿಕೆಗಳು ರೂಢಿಯಲ್ಲಿವೆ.

ಮೀನು ಬುದ್ಧಿ ಬೆಳವಣಿಗೆಗೆ ಕಾರಣವಾಗುವ ಆಹಾರವೆಂದು ನಂಬುವ ಮೀನುಗಾರರು ತಾವು ಬೆಳೆಯುವ ತೆಂಗಿನ ಗಿಡಗಳು ಹೆಚ್ಚು ಫಲಕೊಡಲು ಹಸಿ ಮೀನಿನ ಗೊಬ್ಬರ ಹಾಕಬೇಕೆನ್ನುತ್ತಾರೆ.

ಹೀಗೆ ಮೀನು ಜನರ ನಂಬಿಕೆಗಳನುಸಾರ ದೇವರಾಗಿ, ಆಹಾರವಾಗಿ, ಔಷಧಿಯಾಗಿ, ಪುಷ್ಟಿ ನೀಡುವ ಜೀವಸತ್ವವಾಗಿ ಭವಿಷ್ಯ ನುಡಿವ ಪ್ರಾಣಿಯಾಗಿ, ಪವಿತ್ರ ಮತ್ತು ಅಪವಿತ್ರವಾಗಿ ಪ್ರಸಿದ್ಧವಾಗಿದೆ.

ಬಲೆ : ಮೀನುಗಾರರ ಉದ್ಯೋಗಕ್ಕೆ ಬಲೆಯೇ ಬಂಡವಾಳ. ಆದ್ದರಿಂದಲೇ ಹೊಸ ಬಲೆ ತಂದ ತಕ್ಷಣ ಕುಲದೇವತೆಯಾದ ಶೃಂಗೇರಿ ಶಾರದೆಯಲ್ಲಿಗೆ ಹೋಗಿ '' ಬಲೆಗೆ ದಾರಹಾಕಲು'' ಮುಹೂರ್ತ ಕೇಳಿಕೊಂಡು ಬರುತ್ತಾರೆ. ಶೃಂಗೇರಿ ಸ್ವಾಮಿಗಳು ನಿಗದಿಗೊಳಿಸಿದ ದಿನ ಬಲೆಗೆ ಪೂಜೆಮಾಡಿ ತುಂಡು ಬಲೆಗಳನ್ನೆಲ್ಲಾ ಸೇರಿಸುತ್ತಾ ದಾರ ಹಾಕುತ್ತಾ ಹೋಗುತ್ತಾರೆ. ಈ ಕಾರ್ಯಕ್ಕೆ ''ಮಾಡ್'' ಎನ್ನುತ್ತಾರೆ.

ಮೀನು ಹಿಡಿವ ದಿನಗಳು ಮುಗಿದ ಮೇಲೆ ಹಾಕಿದ ದಾರವನ್ನು ಬಿಚ್ಚಿ ಬಲೆಯನ್ನು ಸಿಹಿ ನೀರಲ್ಲಿ ತೊಳೆದು ಬಣ್ಣ ಹಾಕಿ ಇಡುತ್ತಾರೆ. ಮೀನು ಹಿಡಿವ ಕಾಲ ಪುನರಾರಂಭವಾಗುವಾಗ ಮತ್ತೊಮ್ಮೆ ಕುಲದೇವತೆಯಲ್ಲಿಗೆ ಹೋಗಿ ಮುಹೂರ್ತ ಕೇಳಿ ಬಂದು ದಾರ ಹಾಕುವ ಆಚರಣೆ ರೂಢಿಯಲ್ಲಿದೆ.

ಬಲೆಯ ಬಗ್ಗೆ ಹೆಚ್ಚು ಗೌರವ ತೋರುವ ಮೀನುಗಾರರು ಅದನ್ನು ತಲೆಯಡಿ ಇಟ್ಟುಕೊಂಡು ಮಲಗುವದಿಲ್ಲ, ಬಲೆಯನ್ನು ದಿಂಬು ಮಾಡಿಕೊಂಡು ಮಲಗಿದರೆ ಮೀನು ಬೇಟೆಯಾಗದೆಂಬ ನಂಬಿಕೆ ಇದೆ.

ಸಮುದ್ರದಲ್ಲಿ ಬಲೆ ಬೀಸುವ ಮೊದಲು ಸಮುದ್ರದ ನೀರನ್ನು ಅದರ ಮೇಲೆ ಚಿಮುಕಿಸಿ, ದೇವರನ್ನು ಸ್ಮರಿಸುತ್ತಾ ಬಲೆ ಬಿಡುವ ಪದ್ಧತಿ ಇದೆ. ಸಾಮಾನ್ಯವಾಗಿ ಮನೆಯಿಂದ ದೋಣಿಗೆ ಬಲೆ ತರುವಾಗಿ ಖಾಲಿಕೊಡ ಬಂದರೆ ಆ ದಿನ ಮೀನು ಬೇಟೆಯಾಗದೆಂದು ನಂಬುತ್ತಾರೆ.

ಉಪ್ಪು : ಸಮುದ್ರ ಎಂದ ತಕ್ಷಣ ನೆನಪಿಗೆ ಬರುವುದು ಉಪ್ಪುನೀರು. ಸಮುದ್ರಕ್ಕೂ ಉಪ್ಪಿಗೂ ಬಿಡಿಸಲಾರದ ನಂಟು. ಅದೇರೀತಿ ಮಾನವನ ಆಹಾರ ಉಪ್ಪಿನ ಹೊರತಾಗಿ ಇರಲಾರದು ಈ ಕಾರಣದಿಂದಲೇ '' ತಾಯಿಗಿಂತ ಬಂಧುವಿಲ್ಲ ಉಪ್ಪಿಗಿಂತ ರುಚಿ ಇಲ್ಲ'' ಎಂಬ ಗಾದೆ ಹುಟ್ಟಿಕೊಂಡಿದೆ. ಮನುಷ್ಯನ ಇಂದ್ರಿಯಗಳಲ್ಲೊಂದಾದ ನಾಲಿಗೆಯನ್ನು ಸಂತೋಷಗೊಳಿಸುವ ಉಪ್ಪು ಬೆಲೆಯಲ್ಲಿ ಕಡಿಮೆಯಿದ್ದರು ಹೆಚ್ಚು ಗೌರವ ಪಡೆದಿರುವ ವಸ್ತು. ಆದ್ದರಿಂದಲೇ ಉಪ್ಪನ್ನು ಬಿಸಾಡಬಾರದು, ತುಳಿಯಬಾರದು, ಬರಿಕೈಲಿ ತೆಗೆದುಕೊಳ್ಳಬಾರದು, ಉಪ್ಪಿನ ಸಾಲ ಇಟ್ಟುಕೊಳ್ಳಬಾರದು, ಉಪ್ಪು ಕದಿಯಬಾರದು, ರಾತ್ರಿವೇಳೆ ಉಪ್ಪು ಮನೆಯಿಂದ ಹೊರಗೆ ಕೊಡಬಾರದು. ಹೊಸ ಮನೆಗೆ ಬರುವಾಗ ಮೊದಲು ಉಪ್ಪು ತರಬೇಕು, ಊಟ ಬಡಿಸುವಾಗ ಮೊದಲು ಉಪ್ಪು ಹಾಕಬೇಕು. ಊಟವಾದ ಮೇಲೆ ಉಪ್ಪು ಎಲೆಯಲ್ಲಿ ಉಳಿದರೆ

ಅದನ್ನು ನೀರುಮಾಡಬೇಕು. ಪಿತೃಕಾರ್ಯದ ಆಚರಣೆಗಳಲ್ಲಿ ಉಪ್ಪನ್ನು ಬಡಿಸಬಾರದು, ದೇವರಿಗೆ ಸಮರ್ಪಿಸುವ ವಸ್ತುಗಳಲ್ಲಿ ಉಪ್ಪನ್ನು ಬಳಸಬಾರದು, ಉಪ್ಪಿನ ಕಾಯಿ ಜಾಡಿಗೆ ಕೈ ಹಾಕಬಾರದು. ಈ ಮೊದಲಾದ ನಂಬಿಕೆಗಳು ಹುಟ್ಟಿಕೊಂಡಿವೆ.

ಉಪ್ಪು ಮನುಷ್ಯನಿಗೆ ಹೇಗೆ ಅವಶ್ಯಕ ಆಹಾರವಾಗಿದೆಯೋ ಹಾಗೇಯೇ ಸಸ್ಯಗಳಿಗೂ ಅದು ಅವಶ್ಯಕ ವಸ್ತುವಾಗಿದೆ. ಆ ಕಾರಣದಿಂದ ತೆಂಗಿನ ಗಿಡಗಳಿಗೆ ಉಪ್ಪು ಹಾಕುವುದರಿಂದ ಬೇಗ ಬೆಳೆಯುತ್ತವೆ ಎಂದು ಜನ ನಂಬುತ್ತಾರೆ.

ರೋಗಗಳಿಗೆ ಮದ್ದಾಗಿ ಉಪ್ಪನ್ನು ಬಳಸುವ ಪದ್ದತಿ ಬಹುಹಿಂದಿನಿಂದ ರೂಢಿಯಲ್ಲಿದೆ. ಮಗುವಿಗೆ ಹೊಟ್ಟೆ ಕಚ್ಚುತ್ತಿದ್ದರೆ, ಇಲ್ಲವೆ ದೃಷ್ಟಿತಾಗಿದ್ದರೆ ಉಪ್ಪು ಮತ್ತು ಮೆಣಸಿನಕಾಯಿಯನ್ನು ನಿವಾಳಿಸಿ ಎಸೆಯುತ್ತಾರೆ. ಹೆಂಗಸರು ಮುಟ್ಟಾಗುವ ದಿನಗಳು ಹತ್ತಿರವಿದ್ದು ಅವರು ಪ್ರಯಾಣ ಮಾಡುವುದು ಅನಿವಾರ್ಯವಾದಾಗ ಉಪ್ಪಿನ ಮಡಿಕೆಯಲ್ಲಿ ಹಣ ಹಾಕಿ ಹೋದರೆ ಅವರು ಪ್ರಯಾಣದಿಂದ ಹಿಂದಿರುಗುವವರೆಗೆ ಮುಟ್ಟಾಗುವದಿಲ್ಲ. ಗಂಟಲಲ್ಲಿ ಕೆರೆತವಿದ್ದರೆ ಬಿಸಿನೀರಿನಲ್ಲಿ ಉಪ್ಪುಹಾಕಿ ಮುಕ್ಕಳಿಸುವುದರಿಂದ ಕೆರೆತ ಕಡಿಮೆಯಾಗುತ್ತದೆ, ಹೊಡೆತ ಬಿದ್ದು ಊದಿರುವ ಸ್ಥಳಕ್ಕೆ ಬಿಸಿಮಾಡಿದ ಉಪ್ಪಿನ ಶಾಖ ಕೊಟ್ಟರೆ ನೋವು ಕಡಿಮೆಯಾಗುವುದು. ಸಮುದ್ರದ ನೀರಿನಲ್ಲಿ ಸ್ನಾನ ಮಾಡಿದರೆ ಚರ್ಮ ರೋಗ ಗುಣವಾಗುತ್ತದೆ. ಸಮುದ್ರ ಸ್ನಾನದಿಂದ ಚರ್ಮದ ಕಾಂತಿ ಹೆಚ್ಚುತ್ತದೆ. ಈ ಮೊದಲಾದ ನಂಬಿಕೆಗಳು ಸಾಮಾನ್ಯವಾಗಿವೆ. ಔಷಧಿಗಳ ಬೆಲೆ ಗಗನಕ್ಕೆರುತ್ತಿರುವಾಗ ಉಪ್ಪು ಬಡವರ ದಿವ್ಯೌಷಧಿಯಾಗಿ ಬಳಕೆಯಾಗುತ್ತಿದೆ.

ಬಡವ-ಬಲ್ಲಿದರೆನ್ನದೆ ಆಚರಿಸಲ್ಪಡುತ್ತಿರುವ ಉಪ್ಪಿನ ನಂಬಿಕೆಗಳು ಈ ವೈಜ್ಞಾನಿಕ ಯುಗದಲ್ಲೂ ಜೀವಂತವಿರುವುದು ಗಮನಾರ್ಹ.

ಮುತ್ತು : ಸಮುದ್ರಕ್ಕೂ ಉಪ್ಪಿಗೂ ಹೇಗೆ ಬಿಡಿಸಲಾರದ ಸಂಬಂಧವೋ ಹಾಗೇಯೇ ಮುತ್ತಿಗೂ ಸಮುದ್ರಕ್ಕೂ ಅನ್ಯೋನ್ಯ ಸಂಬಂಧವಿದೆ. ಉಪ್ಪು ಅತಿ ಕಡಿಮೆ ಬೆಲೆಯ ವಸ್ತುವಾದರೆ ಮುತ್ತು ಅತೀ ಹೆಚ್ಚಿನ ಬೆಲೆಯ ವಸ್ತುವಾಗಿದೆ. ಇವೆರಡರ ಸೃಷ್ಟಿಗೆ ಸಮುದ್ರವೇ ಕಾರಣ. ಚಿಪ್ಪಿನೊಳಗೆ ಮುತ್ತಾಗುತ್ತದೆ ಎಂದು ನಂಬುವ ಜನ ಸ್ವಾತಿ ನಕ್ಷತ್ರದಲ್ಲಿ ಬಿದ್ದ ಮಳೆ ಹನಿ ಚಿಪ್ಪಿನೊಳಗೆ ನಿಂತು ಮುತ್ತಾಗುತ್ತದೆ ಎಂದು ನಂಬುತ್ತಾರೆ. ಹಣವಿದ್ದವರ ವಸ್ತುವಾದ ಮುತ್ತು ವಿಶ್ವದಲೆಲ್ಲಾ ಪ್ರಸಿದ್ಧತೆ ಪಡೆದಿರುವುದರ ಜೊತೆಗೆ ಪ್ರಾದೇಶಿಕ ನಂಬಿಕೆಗಳನ್ನು ಹೊಂದಿದೆ.

ಪೂರ್ವ ದೇಶಗಳಲ್ಲಿ ಮುತ್ತುಗಳು ಪ್ರತಿವರ್ಷ ಶೇಕಡಾ ಒಂದರಂತೆ ತಮ್ಮ ಹೊಳಪನ್ನು ಕಳೆದುಕೊಳ್ಳುತ್ತಾ ಹೊಗುತ್ತವೆ ಎಂಬ ನಂಬಿಕೆ ಇದೆ. ಕೆಲವರು ಮುತ್ತಿನ ಹೊಳಪು ಇರಬೇಕಾದರೆ ಅದನ್ನು ಸದಾ ಧರಿಸಿರಬೇಕೆಂದು ಹೇಳುತ್ತಾರೆ. ಮುತ್ತು ಧರಿಸಿದ ವ್ಯಕ್ತಿ ರೋಗಗ್ರಸ್ಥವಾದರೆ ಅವು ತಮ್ಮ ಹೊಳಪನ್ನು ಕಳೆದು ಕೊಳ್ಳುತ್ತಾಹೋಗುತ್ತವೆ. ಆ ವ್ಯಕ್ತಿ ಮೃತನಾದರೆ ಅವು ಸಂಪೂರ್ಣವಾಗಿ ತಮ್ಮ ಹೊಳಪನ್ನು ಕೆಳದುಕೊಳ್ಳುತ್ತವೆ. ಎಂದು ಯುರೋಪಿನ ಜನ ನಂಬುತ್ತಾರೆ.

ಮುತ್ತು ರೋಗ ನಿವಾರಣೆಗೆ ಔಷಧವೆಂದು ಕೆಲವರ ನಂಬಿಕೆ. ಮೂರ್ಛೆರೋಗಕ್ಕೆ ಮುತ್ತನ್ನು ಪುಡಿಮಾಡಿ ದ್ರಾವಣವನ್ನಾಗಿಸಿ ಸೇವಿಸಿದರೆ ರೋಗ ನಿವಾರಣೆಯಾಗುತ್ತದೆಂದು ಹೇಳುತ್ತಾರೆ. ಆರನೇ ಚಾರ್ಲ್ಸ್‌ನ ಚಿತ್ತ ಸ್ವಾಸ್ಥವನ್ನು ಸರಿಪಡಿಸುವುದಕ್ಕಾಗಿ ಮುತ್ತಿನ ಪುಡಿಯನ್ನು ನೀರಿನಲ್ಲಿ ಹಾಕಿಕೊಟ್ಟಿದ್ದರೆಂದು ತಿಳಿಯುತ್ತವೆ. ೧೬ ನೇ ಶತಮಾನದಲ್ಲಿ ಯೂರೋಪಿನಲ್ಲಿ ವಿಷ ಸೇವಿಸಿದವರಿಗೆ ಮದ್ದಾಗಿ ಮುತ್ತಿನ ಪುಡಿಯನ್ನು ನೀಡಲಾಗುತ್ತಿತ್ತು. ಹದಿಮೂರನೇ ಶತಮಾನದಲ್ಲಿ ವೈದ್ಯರು ಹೃದಯರೋಗಕ್ಕೆ ಮುತ್ತಿನ ಪುಡಿ ಸ್ವೀಕರಿಸುವ ಸಲಹೆ ನೀಡುತ್ತಿದ್ದರು. ಹದಿನೇಳನೇ ಶತಮಾನದಲ್ಲಿ ಡೆನ್ಮಾರ್ಕಿನ ಜನ ಮುತ್ತಿನ ಹಾಲನ್ನು ಸಾಮಾನ್ಯ ಬಲವರ್ಧಕವಾಗಿ ಬಳಸುತ್ತಿದ್ದರೆಂದು ಹೇಳಲಾಗಿದೆ. ದುಷ್ಟಶಕ್ತಿಗಳಿಂದ ರಕ್ಷಣೆ ಪಡೆಯುವ ಉದ್ದೇಶದಿಂದ ಮುತ್ತಿನ ತಾಯಿತಗಳನ್ನು ಧರಿಸುತ್ತಿದ್ದರೆಂದು ತಿಳಿಯುತ್ತದೆ. ಚೀನಾದಲ್ಲಿ ಮುತ್ತನ್ನು ಬೆಂಕಿಯ ವಿರುದ್ಧದ ರಕ್ಷೆಗಾಗಿ ಬಳಸಲಾಗುತ್ತಿತ್ತು.

ಮಹಮದೀಯರಲ್ಲಿ ಮೂರನೆಯ ಸ್ವರ್ಗ ಮುತ್ತಿನ ಸ್ವರ್ಗವೆಂಬ ನಂಬಿಕೆ ಇದೆ. ಪೌರಾತ್ಯರು ಮುತ್ತುಗಳು ಕಣ್ಣೀರಿನ ಹನಿಗಳಿಂದ ರಚಿತವಾಗಿರುವುದರಿಂದ ಯಾರಲ್ಲಿ ಅವು ಇರುವವೋ ಅವರು ಕಣ್ಣೀರು ಸುರಿಸುವುದು ಹೆಚ್ಚು ಎಂದು ನಂಬುತ್ತಾರೆ. ಹಿಂದೂಗಳ ಜ್ಯೋತಿಷ್ಯ

ಕುಂಡಲಿಗಳಲ್ಲಿ ಮತ್ತು ಚಂದ್ರನನ್ನು ಪ್ರತಿನಿಧಿಸುವ ವಸ್ತುವಾಗಿದೆ ಎಂದು ನಂಬುತ್ತಾರೆ. ರಕ್ಷಾಮಂತ್ರಗಳಲ್ಲಿ ಬಳಕೆಯಾಗುವ ಪ್ರಶಸ್ತ ಶರಲೆಗಳಲ್ಲಿ ಮುತ್ತು ಒಂದೆಂದು ಹೇಳಲಾಗುತ್ತದೆ. ಉದಾಹರಣೆಗೆ ಪಂಚರತ್ನ, ನವರತ್ನಗಳಲ್ಲಿ ಮುತ್ತೂ ಸಹ ಒಂದು.
(ಕನ್ನಡ ಜನಪದ ವಿಶ್ವಕೋಶ ಪುಟ ೧೬೩೧)

ಸುಲು ನಡುಗಡ್ಡೆಗಳ ಮೂಲ ನಿವಾಸಿಗಳು ನಾಟಿಲಸ್ ಜಾತಿಯ ಮುತ್ತಗಳನ್ನು ಹೊಂದುವುದು ಅಶುಭ ಎಂದು ನಂಬುವುದರಿಂದ ಅವು ದೊರೆತಾಗ ಸಮುದ್ರದಲ್ಲೆಸೆಯುತ್ತಾರೆ.

ಮುತ್ತುಗಳನ್ನು, ಹಿಂದೂ ಹೆಂಗಸರು ಕನಸಿನಲ್ಲಿ ಕಂಡರೆ ಸಂತಾನ ಲಾಭ ಉಂಟಾಗುತ್ತದೆ ಎಂಬ ನಂಬಿಕೆ ಇದೆ.
(ಕನ್ನಡ ಜನಪದ ವಿಶ್ವಕೋಶ ಪುಟ ೧೬೩೧)

ಇಂದು ಮುತ್ತು ಬೆಲೆ ಬಾಳುವ ಅಮೂಲ್ಯ ವಸ್ತುವಾಗಿರುವದರಿಂದ ಔಷಧಿಯಾಗಿ ಬಳಸುವ ಇಲ್ಲವೆ ರಕ್ಷಾತಾಯಿತವಾಗಿ ಧರಿಸುವ ನಂಬಿಕೆಗಳು ಕಡಿಮೆಯಾಗಿದೆ.

ಮನುಷ್ಯನನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವ ನಂಬಿಕೆ ಮತ್ತು ಆಚರಣೆಗಳು ಅವನ ಬದುಕಿನಲ್ಲಿ ಮಹತ್ತರ ಪ್ರಭಾವ ಬೀರಿವೆ. ಅವುಗಳಿಗೆ ಅರ್ಥವಿರಲಿ ಇಲ್ಲದೇ ಇರಲಿ ಆದರೆ ಅವುಗಳಿಗೆ ಶರಣಾಗಿ ಬದುಕುವ ಪ್ರವೃತ್ತಿ ಮನುಷ್ಯನದಾಗಿದೆ. ಏಕೆಂದರೆ ಅವು ಪೂರ್ಣವಾಗಿ ಮನಸ್ಸಿಗೆ ಸಂಬಂಧ ಪಟ್ಟಂತಹವು. ಅವುಗಳನುಸಾರ ನಡೆಯದೇ ಇದ್ದಾಗ ಮನಸ್ಸಿನಲ್ಲಿ ಅಶಾಂತತೆ ಹೆಚ್ಚಾಗುತ್ತದೆ. ಈ ವಿಜ್ಞಾನ ಯುಗದಲ್ಲೂ ಮಾನವ ನಂಬಿಕೆಗಳಿಂದ ಹೊರತಾಗಿ ಬದುಕಲು ಸಾಧ್ಯವಾಗುತ್ತಿಲ್ಲ ಶುಭ- ಅಶುಭವೆಂದು ನಂಬಿ ನಡೆದು ಈ ಜಗತ್ತು ಇರುವವರೆಗೂ ಜಾರಿಯಲ್ಲಿದ್ದೇ ಇರುತ್ತದೆ.

5. ಸಮುದ್ರ ಕ್ರೀಡೆಗಳು

ಜಲಕ್ರೀಡೆಗಳ ಸ್ವರೂಪ ಮತ್ತು ವಿಧಗಳು

ಜಲಕ್ರೀಡೆಗೆ ಬಹು ಪ್ರಾಚೀನವಾದ ಇತಿಹಾಸವಿದೆ. ಇದು ಶ್ರೀಮಂತರ ಕ್ರೀಡೆಯಾಗಿತ್ತು. ರಾಣಿಯು ಮನರಂಜನೆಗಾಗಿ ಜಲಕ್ರೀಡೆಯಾಡುತಿದ್ದುದು ತಿಳಿದು ಬರುತ್ತದೆ. ಗೋಪಿಕಾಸ್ತ್ರೀಯರ ವಸ್ತ್ರಗಳನ್ನು ಜಲಕ್ರೀಡೆಯಲ್ಲಿ ಅವರು ನಿರತರಾದಾಗ ಶ್ರೀಕೃಷ್ಣನು ಕದಿಯುವ ನಿದರ್ಶನ ಒಂದು ಜಲಕ್ರೀಡೆಯ ಪ್ರಾಚೀನತೆಯನ್ನು ಪರಿಚಯಿಸುತ್ತದೆ. ಆಗ ಸರೋವರಗಳಲ್ಲಿ ನಡೆಯುತ್ತಿದ್ದ ಜಲಕ್ರೀಡೆ ಮಹಿಳೆಯರಿಗೆ ಮೀಸಲಿದ್ದರೆ, ಸಮುದ್ರದಲ್ಲಿನ ಕ್ರೀಡೆಗಳು ಪುರುಷರಿಗೆ ಮೀಸಲಾಗಿದ್ದವು. ಏಕೆಂದರೆ ಸಮುದ್ರದ ಕ್ರೀಡೆಗೆ ಚತುರತೆಯೊಂದಿಗೆ ಧೈರ್ಯ ಅತಿ ಅವಶ್ಯಕ.

ಸಮುದ್ರದ ಕ್ರೀಡೆಗಳು ವಿಧಗಳು :

1. **ಅಲೆಗಳ ವಿರುದ್ಧ ಈಜುವುದು :** ಪಶ್ಚಿಮದ ಗಾಳಿ ತೀವ್ರವಾದಾಗ ಸಮುದ್ರದಲ್ಲಿ ಆಳೆತ್ತರದ ಅಲೆಗಳು ದಡವನ್ನಪ್ಪಳಿಸುತ್ತಿರುತ್ತವೆ. ಅದರ ಹೊಡೆತಕ್ಕೆ ಸಿಕ್ಕಿದ ದಡ ಕೊರಕಲಾಗಿ ಹೋಗುತ್ತದೆ. ಇಂತಹ ಅಲೆಗಳ ವಿರುದ್ಧ ಈಜುವ ಸ್ಪರ್ಧೆಯನ್ನು ಏರ್ಪಡಿಸಿರುತ್ತಾರೆ. ಸಮುದ್ರದಲ್ಲಿ ಈಜಿ ಅನುಭವವಿರುವ ಯುವಕರು ಅಲೆಗಳ ವಿರುದ್ಧ ಈಜುವ ಸ್ಪರ್ಧೆಯಲ್ಲಿ ಭಾಗವಹಿಸುತ್ತಾರೆ. ಅಲೆಗಳು ಬಂದ ತಕ್ಷಣ ಅವುಗಳ ಹೊಡೆತಕ್ಕೆ ಸಿಗದೆ ಸಮುದ್ರದೊಳಗೆ ಮುಳುಗಿ ಅಲೆ ಹೋದ ನಂತರ ಮೇಲೇಳುತ್ತಾರೆ. ಇದು ಅಪಾಯದ ಸಾಹಸ ಕ್ರೀಡೆಯಾಗಿದೆ. ಎಷ್ಟೋ ಸಂದರ್ಭದಲ್ಲಿ ಅಲೆಗಳು ಬಂದಾಗ ಒಳಗೆ ಮುಳುಗಿದ ಸ್ಪರ್ಧಾಳುವಿನ ಮೇಲೆ ಮತ್ತೊಂದು ಅಲೆ ಬಂದು ಅವನನ್ನು ಒತ್ತಿ ನೆಲಕಚ್ಚಿಸುವಂತಹ ಅಪಾಯ ಉಂಟು. ಈ ಕಾರಣದಿಂದ ಸಮುದ್ರದಲ್ಲಿ ಸಾಧಾರಣ ಅಲೆಗಳಿರುವ ಸಂದರ್ಭದಲ್ಲಿ ಮಾತ್ರ ಇಂತಹ ಸ್ಪರ್ಧೆಯನ್ನೇರ್ಪಡಿಸುತ್ತಾರೆ. ಗೆದ್ದಂತಹವರಿಗೆ ಬಹುಮಾನ ಕೊಟ್ಟು ಪ್ರೋತ್ಸಾಹಿಸುತ್ತಾರೆ. ಸಾಮಾನ್ಯವಾಗಿ ಸ್ಪರ್ಧಾಳುಗಳು ಈಜುವ ಅಂತರವು ಸುಮಾರು ಇನ್ನೂರರಿಂದ ನಾಲ್ಕುನೂರು ಮೀಟರುಗಳಾಗಿರುತ್ತದೆ. ಕೆಲವು ಸ್ಥಳಗಳಲ್ಲಿ ಸಮುದ್ರದಲ್ಲಿ ಬಂಡೆ ಇದ್ದು ಆ ಬಂಡೆಯನ್ನು ಮುಟ್ಟಿ ಯಾರು ಹಿಂದಿರುಗುವರೋ ಅವರು ಪ್ರಥಮ ಸ್ಥಾನ ಪಡೆಯುತ್ತಾರೆ. ಈ ಕ್ರೀಡೆಯು ಸಮುದ್ರ ತೀರದ ಜನರಿಗೆ ಮನರಂಜನೆ ನೀಡುವ ಸಾಹಸ ಕ್ರೀಡೆಯಾಗಿದೆ.

2) ಬಲೆ ಬೀಸಿ ಮೀನು ಹಿಡಿಯುವ ಕ್ರೀಡೆ:

ಮೀನು ಹಿಡಿಯುವುದನ್ನೇ ಪ್ರಮುಖ ಉದ್ಯೋಗವನ್ನಾಗಿಸಿಕೊಂಡಿರುವವರು ಬಲೆ ಯಾವ ಸ್ಥಳದಲ್ಲಿ ಬೀಸಿದರೆ ಮೀನು ಹೆಚ್ಚು ಸಿಗಬಲ್ಲವೆಂಬುದನ್ನು ಚೆನ್ನಾಗಿ ಬಲ್ಲರು. ಅವರ ಮೀನು ಹಿಡಿವ ಜ್ಞಾನವನ್ನರಿವ ಸ್ಪರ್ಧೆ ಇದಾಗಿದೆ. ಸ್ಥಳ ಒಂದನ್ನು ನಿಗದಿಗೊಳಿಸಿ ಆ ಸ್ಥಳದಲ್ಲಿ ಬಲೆ ಬೀಸಿ ಯಾರು ಹೆಚ್ಚು ಮೀನು ಹಿಡಿಯುತ್ತಾರೋ ಅವರು ಪ್ರಥಮ ಸ್ಥಾನ ಪಡೆಯತ್ತಾರೆ. ಅಂತವರಿಗೆ ಸಾರ್ವಜನಿಕರಿಂದ ಸಂಗ್ರಹಿಸಿದ ಹಣದಿಂದ ಬಹುಮಾನ ನೀಡಿ ಪ್ರೋತ್ಸಾಹಿಸುತ್ತಾರೆ.

3) ದೋಣಿ ಓಡಿಸುವ ಕ್ರೀಡೆ:

ದೋಣಿ ಓಡಿಸುವ ಕ್ರೀಡೆಯಲ್ಲಿ ಹುಟ್ಟಿನ ನಾಡ ದೋಣಿಗಳು ಭಾಗವಹಿಸುತ್ತವೆ. ಇವುಗಳಲ್ಲಿ ಒಬ್ಬರು ದೋಣಿ ನಡೆಸುವ ಸ್ಪರ್ಧೆ ಮತ್ತು ಹತ್ತು ಹನ್ನೆರಡು ಜನರು ದೋಣಿ ನಡೆಸುವ ಸ್ಪರ್ಧೆಗಳಿರುತ್ತವೆ. ಒಂದೇ ಬಾರಿಗೆ ತೀರದಿಂದ ಸ್ಪರ್ಧೆಯಲ್ಲಿ ಭಾಗವಹಿಸುವ ದೋಣಿಗಳನ್ನು ಬಿಡಲಾಗುತ್ತದೆ. ಅವು ಗುರಿ ಮುಟ್ಟಿ ದಡಕ್ಕೆ ಹಿಂದಿರುಗುತ್ತವೆ. ಅವುಗಳಲ್ಲಿ ಯಾವುದು ಮೊದಲು ದಡ ಸೇರುತ್ತದೆಯೋ ಅದಕ್ಕೆ ಪ್ರಥಮ ಬಹುಮಾನ ಲಭಿಸುತ್ತದೆ. ಈ ಸ್ಪರ್ಧೆಯು ನೋಡಲು ಆಕರ್ಷಣೀಯವಾಗಿರುತ್ತದೆ. ಆದ್ದರಿಂದಲೇ ಸ್ಪರ್ಧೆಯ ದಿನದ ಬಗ್ಗೆ ಸುತ್ತ ಮುತ್ತಲಿನ ಹಳ್ಳಿಯ ಜನರಿಗೆಲ್ಲ ತಿಳಿಸಿರುತ್ತಾರೆ. ಅವರ ಆಹ್ವಾನದ ಮೇರೆಗೆ ನೂರಾರು ಜನರು ಪ್ರೇಕ್ಷಕರಾಗಿ ಬಂದು ಸಮುದ್ರದ ಈ ಕ್ರೀಡೆಯ ಆನಂದವನ್ನು ಅನುಭವಿಸುತ್ತಾರೆ. ಕ್ರೀಡೆ ಮೆಚ್ಚಿದವರಲ್ಲಿ ಕೇವರು ವೈಯಕ್ತಿಕ ಬಹುಮಾನ ಕೊಡುತ್ತಾರೆ.

ಇತ್ತೀಚಿಗೆ ಸಮುದ್ರದಲ್ಲಿ ಯಾಂತ್ರಿಕ ದೋಣಿಗಳ ಸಂಚಾರ ಹೆಚ್ಚಾಗಿರುವುದರಿಂದ ದೋಣಿ ಓಡಿಸುವ ಕ್ರೀಡೆಗೆ ಹೆಚ್ಚು ಮಹತ್ವ ಸಿಕ್ಕಿದೆ. ಸಮುದ್ರ ಕ್ರೀಡೆಗಳನ್ನೇ ಪೋತ್ಸಾಹಿಸುವ ಸಲುವಾಗಿ ಕೆಲವು ಸಂಘ, ಸಂಸ್ಥೆಗಳು ಕರ್ನಾಟಕ ಕರಾವಳಿಯಲ್ಲಿ ಹುಟ್ಟಿಕೊಂಡಿವೆ. ಮಂಗಳೂರಿನಲ್ಲಿ ಅಡ್ವೆಂಚರ್ ಆಕ್ವಾ ಸ್ಪೋರ್ಟ್ಸ್ ಸೆಂಟರ್ ಪ್ರವಾಸಿಗರನ್ನು ಸಮುದ್ರದಲ್ಲಿನ ನಡುಗಡ್ಡೆಗಳಿಗೆ ಕರೆದೊಯ್ಯುವುದರ ಜೊತೆಗೆ ಜಲಸಾಹಸ ಕ್ರೀಡೆಯ ರೋಮಾಂಚನವನ್ನು ನೀಡುತ್ತಿದೆ. ಪ್ರವಾಸಿ ಕೇಂದ್ರವೊಂದರಲ್ಲಿ ಈ ರೀತಿಯ ಸಾಹಸ ಜಲಕ್ರೀಡೆಯ ವ್ಯವಸ್ಥೆಯು ರಾಜ್ಯದಲ್ಲಿಯೇ ಪ್ರಥಮವೆನ್ನಬಹುದು. ಸಣ್ಣ ಉದ್ದಿಮೆ ಹಾಗೂ ವ್ಯಾಪಾರಗಳನ್ನು ನಡೆಸುತ್ತಿರುವ ಹೆನ್ರಿಬ್ರಿಟ್ಟೊ, ಮಹ್ಮದ್ ಹನೀಫ್, ಎಂ.ಲಿಂಗಪ್ಪ, ರಮೇಶ್ ರಾವ್ ಹಾಗೂ ಜಯರಾಜ್ ಇವರು ಜಲಸಾಹಸ ಕ್ರೀಡೆಗಳಲ್ಲಿ ಸೂಕ್ತ ತರಬೇತಿ ಪಡೆದಿದ್ದು ಈ ಕ್ರೀಡೆಯನ್ನು ಜನಪ್ರಿಯಗೊಳಿಸುವ ಉದ್ದೇಶದಿಂದ ನ್ಯೂ ಮಂಗಳೂರು ಅಡ್ವೆಂಚರ್ ಆಕ್ವಾಸ್ಪೋರ್ಟ್ಸ್ ಸೆಂಟರ್ ಆರಂಭಿಸಿದ್ದಾರೆ. ಈ ಸಂಸ್ಥೆಯ ಯುವಕರು ಪ್ರಾರಂಭದಲ್ಲಿ 5 ರಿಂದ 6 ಲಕ್ಷ ರೂಪಾಯಿ ಬಂಡವಾಳ ಹೂಡಿ ಸ್ಪೀಡ್ ಬೋಟ್, ವಾಟರ್ ಸ್ಕೂಟರ್, ಹಾಯಿದೋಣಿ, ಮೊದಲಾದವುಗಳನ್ನು ಖರೀದಿಸಿ ತಮ್ಮ ಸಾಹಸಗಳನ್ನು ಆರಂಭಿಸಿದವರು. ಇವರ ಉತ್ಸಾಹಗಳನ್ನು ಕಂಡ ಪ್ರವಾಸೋದ್ಯಮ ಇಲಾಖೆ 2,00,000 ರೂಪಾಯಿ ಬೆಲೆಯ ಸ್ಪೀಡ್ ಬೋಟನ್ನು ಕಡಿಮೆ ಬಾಡಿಗೆಗೆ ನೀಡಿ ಪ್ರೋತ್ಸಾಹಿಸಿದೆ.

ಈ ಸಂಸ್ಥೆ ಸಾಹಸ ಜಲಕ್ರೀಡೆಗಾಗಿ ವಿಂಡ್‌ಸರ್ಫಿಂಗ್, ಹಾಯಿದೋಣಿ, ಸ್ಪೀಡ್ ಬೋಟ್ ಮತ್ತು ವಾಟರ್ ಸ್ಕೂಟರ್ ಒದಗಿಸುತ್ತದೆ. ಮಕ್ಕಳಲ್ಲಿ ಸಾಹಸ ಕ್ರೀಡೆಗಳ ಬಗ್ಗೆ ಆಸಕ್ತಿ ಮೂಡಿಸುವ ಉದ್ದೇಶದಿಂದ ಅವರಿಗೆ ಉಚಿತ ತರಬೇತಿ ನೀಡುತ್ತಿದೆ.

ಮನರಂಜನೆಗಾಗಿ ಮೀನು ಹಿಡಿಯಲು ಬಯಸುವವರಿಗೆ ಈ ಸಂಸ್ಥೆ ದೋಣಿಯಲ್ಲಿ ಅವರನ್ನು ಸಮುದ್ರದ ನಡುಗಡ್ಡೆಗಳಿಗೆ ಕೊಂಡೊಯ್ಯುವ ಅವಕಾಶ ಕಲ್ಪಿಸಿದೆ. ಜೊತೆಗೆ ಆಗಾಗ ಸಾರ್ವಜನಿಕರಿಗೆ ಮೀನು ಹಿಡಿಯುವ ಸ್ಪರ್ಧೆಯನ್ನೇರ್ಪಡಿಸುತ್ತಿದೆ.

ಸಾಹಸ ಜಲಕ್ರೀಡೆಯಲ್ಲಿ ತೊಡಗುವ ಪ್ರವಾಸಿಗರ ದೋಣಿಗಳ ಹಿಂದೆ ಸುರಕ್ಷತೆಗಾಗಿ ತರಬೇತಿ ಹೊಂದಿದ ಪರಿಣಿತರನ್ನು ಬೆಂಗಾವಲಾಗಿ ಕಳುಹಿಸಲಾಗುತ್ತದೆ. ಸಾಹಸ ಜಲಕ್ರೀಡೆಯ ಬಗ್ಗೆ ಇಷ್ಟೊಂದು ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗೆ ಸರಕಾರದ ನೆರವು ಸಿಗದೇ ಇದ್ದುದು ದುರಾದೃಷ್ಟಕರ. ಸಂಸ್ಥೆ ನೆರವಿಗಾಗಿ ಅಪೇಕ್ಷಿಸುತ್ತಿದೆ. ಜಲಕ್ರೀಡೆಯ ಇತರ ವಿಧಗಳನ್ನು ಸಹ ಅದು ಜನಪ್ರಿಯಗೊಳಿಸುವ ಕನಸು ಕಾಣುತ್ತಿದೆ. ಆದರೆ ಆ ದಿನ ಬಹು ದೂರವಿದೆ ಎಂಬ ನಿಟ್ಟುಸಿರು ಸಂಸ್ಥೆಯ ಸದಸ್ಯರಿಂದ ಹೊರಬೀಳುತ್ತದೆ.

ದಕ್ಷಿಣ ಕನ್ನಡದ ಮಲ್ಪೆ ಮತ್ತು ಕಾರವಾರಗಳಲ್ಲಿ ಜಲಸಾಹಸ ಕ್ರೀಡೆಗಳ ತರಬೇತಿ ನೀಡಲು ಸರ್ಕಾರವು ಸಾಹಸ ಕ್ರೀಡಾ ಸಂಸ್ಥೆಯ ಅಂಗವೊಂದನ್ನು ಸ್ಥಾಪಿಸಿದೆ. ಅದೇನೇ ಇರಲಿ ಜನಪದ ಜಲಕ್ರೀಡೆಗಳಾದ ಪಾತಿ ದೋಣಿ ಓಡಿಸುವ , ಅಲೆಗಳೆದುರು ಈಜುವ ಹಾಗೂ ಮೀನು ಹಿಡಿಯುವ ಸ್ಪರ್ಧೆಗಳು ಇಂದಿಗೂ ತನ್ನ ತನವನ್ನುಳಿಸಿಕೊಂಡು ಜನರಿಗೆ ಮನರಂಜನೆ ನೀಡುತ್ತಿವೆ . ಆದರೆ ಇವುಗಳಿಗೆ ಸರ್ಕಾರ ಪ್ರೋತ್ಸಾಹಿಸಿ ಉಳಿಸುವ ಪ್ರಯತ್ನ ನೀಡಿದರೆ ಒಳ್ಳೆಯದು.

6. ಕಲೆ

ಮೀನುಗಾರರು ಬಳಸುವ ದೋಣಿ ಮತ್ತು ಬಲೆಗಳೇ ಅವರ ಕಲಾತ್ಮಕತೆಯ ಬಹುಮುಖ್ಯ ವಸ್ತುಗಳು. ಮೂರು ಹಲಗೆಯ ದೋಣಿಯಿಂದ ಹಿಡಿದು ನೂರಾರು ಹಲಗೆಯ ಪರ್ಶಿಯನ್ ಬೋಟಿನವರೆಗಿನ ವಿವಿಧ ಸ್ವರೂಪದ ದೋಣಿಗಳಲ್ಲಿ ಕಲೆಯ ವೈವಿಧ್ಯತೆ ಕಂಡು ಬರುತ್ತದೆ. ಈ ದೃಷ್ಟಿಯಿಂದಲೇ ಇಂದಿನ ಚಲನಚಿತ್ರಗಳಲ್ಲಿ ದೋಣಿಗಳನ್ನು ಆಕರ್ಷಣೀಯವಾಗಿ ಅಲಂಕರಿಸಿ ಬಳಸಲಾಗುತ್ತಿದೆ. ಅದರ ಒಂದು ಭಾವಚಿತ್ರವನ್ನು ನೋಡಿದರೆ ದೋಣಿಯಲ್ಲಿ ಪ್ರದರ್ಶಿಸಲ್ಪಡುವ ಕಲೆಯ ಪರಿಚಯವಾಗುತ್ತದೆ. ಹಾಗೆ ನೋಡಿದರೆ ಸಮುದ್ರದ ಮೇಲೆ ಮೀನು ಹಿಡಿಯಲು ತೇಲಾಡುವ ದೋಣಿಗಳ ದೃಶ್ಯವೇ ಸಾಕು ಸಮುದ್ರ ಕಲೆಯನ್ನನುಭವಿಸಲು ವಿವಿಧ ಕಣ್ಣುಗಳ ಬಲೆಗಳು ಸಮುದ್ರ ಕಲೆಗೆ ಮತ್ತೊಂದು ನಿದರ್ಶನ. ಬಲೆಗಳಿಗೆ ತೇಲಾಡುವ ಬಣ್ಣದ ಬೆಂಡುಗಳನ್ನು ಹೊಂದಿಸಿರುವುದು ಎಂತಹವರನ್ನು ಆಕರ್ಷಿಸುತ್ತದೆ. ಬಲೆ ನೇಯ್ಯುವ, 'ದಾರ ಹಾಕುವ' ವಿಧಾನವೇ ಅವರ ಕಲೆಗಾರಿಕೆಯನ್ನು ಪರಿಚಯಿಸುತ್ತದೆ.

ಸಮುದ್ರದ ಸಂಪತ್ತಿನಿಂದ ರೂಪಿಸಲ್ಪಡುವ ಕಲಾತ್ಮಕ ವಸ್ತುಗಳಂತೂ ಇಂದು ನಗರಗಳಲ್ಲಿ ಆಧುನಿಕ ಅಲಂಕಾರಿಕ ವಸ್ತುಗಳಾಗಿವೆ. ಮುಖ ನೋಡಲು ಬಳಸುವ ಕನ್ನಡಿ, ಮನೆಯ ಬಾಗಿಲಿಗೆ ಕಟ್ಟುವ ತೋರಣ, ಪರದೆ, ಹುಟ್ಟುಹಬ್ಬದಲ್ಲಿ ಸಲ್ಲಿಸುವ ಪ್ರೀತಿಯ ಕಾಣಿಕೆ ಮೊದಲಾದವೆಲ್ಲಾ ಸಮುದ್ರದ ಶಂಕು, ಚಿಪ್ಪುಗಳಿಂದ ರಚಿಸಲ್ಪಡುತ್ತಿವೆ.

ಮುಖ ನೋಡಲು ಬಳಸುವ ಕನ್ನಡಿಯ ಸುತ್ತ ಬಿಳಿ, ಕೆಂಪು ಮೊದಲಾದ ಚಿಕ್ಕ ಚಿಕ್ಕ ಶಂಕುಗಳನ್ನಾಗಲಿ ಇಲ್ಲವೆ ಚಿಪ್ಪುಗಳನ್ನಾಗಲಿ ಅಂಟಿಸಿ ಆಕರ್ಷಣೀಯಗೊಳಿಸಿರುತ್ತಾರೆ. ಕೆಲವು ಕನ್ನಡಿಯ ಸುತ್ತ ಅಂಟಿಸಿರುವ ಶಂಕು ಅಥವಾ ಚಿಪ್ಪಿನಿಂದ ಭಾರತದ ನಕ್ಷೆ ಬರುವಂತೆ ಮಾಡಿದರೆ, ಕೆಲವು ಕನ್ನಡಿಗಳು ಹೃದಯದ ಸ್ವರೂಪವನ್ನು, ಕೆಲವು ಕೋಳಿ ಮೊಟ್ಟೆಯಾಕಾರವನ್ನು ಹೋಲುತ್ತಿರುತ್ತವೆ.

ಬಾಗಿಲ ತೋರಣಗಳನ್ನು ಸಮುದ್ರದ ಚಿಪ್ಪುಗಳಿಂದ ಮಾಡಿರುತ್ತಾರೆ. ಒಂದು ಚಿಪ್ಪಿಗೂ ಮತ್ತೊಂದು ಚಿಪ್ಪಿಗು ನಡುವೆ ಬಣ್ಣ ಬಣ್ಣದ ಗಾಜಿನ ಚಿಕ್ಕ ಪೈಪುಗಳನ್ನು ಹಾಕಿರುತ್ತಾರೆ. 'ತಂಗೂಸ್' ಎಂಬ ಪ್ಲಾಸ್ಟಿಕ್ ದಾರದಿಂದ ತೋರಣ ಮತ್ತು ಬಾಗಿಲ ಪರದೆಗಳನ್ನು ಮಾಡುತ್ತಾರೆ. ಪರದೆಯು ಎಳೆ ಎಳೆಗಳಿಂದ ಕೂಡಿದ್ದು ಅದರಲ್ಲಿ ಚಿಪ್ಪುಗಳನ್ನು ಪೋಣಿಸಿದ್ದು ಬಾಗಿಲಲ್ಲಿ ಅವುಗಳನ್ನು ತೂಗುಬಿಡುತ್ತಾರೆ.

ಮನೆಯನ್ನಲಂಕರಿಸುವ ವಿವಿಧ ವಸ್ತುಗಳಂತೂ ನೋಡುವವರ ಮನ ಸೆಳೆಯುತ್ತವೆ. ಬೇರೆ ಬೇರೆಯ ಆಕಾರದ ತೂಗು ಬುಟ್ಟಿಗಳನ್ನು ಚಿಪ್ಪು ಮತ್ತು ಸಮುದ್ರದ ಚಿಕ್ಕ ಶಂಕುಗಳಿಂದ ಮಾಡಿರುತ್ತಾರೆ. ಕೆಲವು ತೂಗು ಬುಟ್ಟಿಗಳ ನಡುವೆ ಬಲ್ಬ್ ಹಾಕಿ ಆಕರ್ಷಣೀಯ ದೀಪಮಾಡಿರುತ್ತಾರೆ. ವಿವಿಧ ಆಕಾರದ ತೂಗು ಬುಟ್ಟಿಗಳು ಸಮುದ್ರ ದಡದ ಅಂಗಡಿಗಳಲ್ಲಿ ಮಾರಾಟಕ್ಕಾಗಿ ತೂಗು ಹಾಕಿರುವುದನ್ನು ನೋಡಿದರೆ ಸಮುದ್ರ ಕಲೆಯ ಪರಿಚಯವಾಗುತ್ತದೆ.

ಪ್ರೀತಿಯ ಕುರುಹಾಗಿ ಅರ್ಪಿಸುವ ಕಾಣಿಕೆಯ ವಸ್ತುಗಳು ಬಿಳಿಯ ಚಿಪ್ಪುಗಳಿಂದ ರಚಿಸಲ್ಪಟ್ಟಿರುತ್ತವೆ. ಅವುಗಳಲ್ಲಿ ವಜ್ರದಾಕಾರ, ಹೃದಯದಾಕರಗಳಿದ್ದು ಒಳಭಾಗದಲ್ಲಿ ಬಣ್ಣದ ಬಟ್ಟೆಯ ಮೇಲೆ ಚಿಪ್ಪುಗಳನ್ನು ಅಂಟಿಸಿರುತ್ತಾರೆ. ಇದಲ್ಲದೆ ದೊಡ್ಡ ಶಂಕಿನ ಮೇಲೆ ಚಿತ್ರ ಬಿಡಿಸಿ ಹುಟ್ಟು ಹಬ್ಬದ ಕಾಳಿಕೆಯಾಗಿ ನೀಡುತ್ತಾರೆ. ಮನೆಯಲ್ಲಿ ಟೀ ಪಾಯ್ ಮೇಲೆ ಇಡುವ ಪೇಪರ ವೈಟ್‌ಗಾಗಿ ಕಲಾತ್ಮಕ ಶಂಕನ್ನು ಬಳಸಲಾಗುತ್ತದೆ.

ಲಂಬಾಣಿಗಳ ಉಡುಪಿಗೆ ಕಲಾತ್ಮಕಗೊಳಿಸುವುದು ಸಮುದ್ರದ ಕವಡೆಗಳು ಅದೇ ರೀತಿ ಶಂಕಿನ ಸರಗಳನ್ನು ಆಭರಣಗಳನ್ನಾಗಿ ಬಳಸಲಾಗುತ್ತದೆ.

ಸಮುದ್ರದ ಚಿಪ್ಪು ಮತ್ತು ಶಂಕುಗಳಿಂದ ಮಾಡುವ ವಸ್ತುಗಳ ವೈವಿಧ್ಯತೆಯನ್ನು ಕಣ್ಣಾರೆ ಕಂಡಾಗ ಮಾತ್ರ ಅವುಗಳ ಕಲಾತ್ಮಕತೆಯ ಪರಿಚಯವಾಗಬಲ್ಲದು. ಸಮುದ್ರ ದರ್ಶನ ಮಾಡಲು ಬರುವ ಪ್ರವಾಸಿಗರು ದಡದ ಅಂಗಡಿಯಲ್ಲಿಟ್ಟ ಶಂಕು ಮತ್ತು ಚಿಪ್ಪಿನ ಕಲೆಗಾರಿಕೆಗೆ ಸೋತು ಅವುಗಳಿಂದ ತಮ್ಮ ಮನೆಗಳನ್ನು ಅಲಂಕರಿಸಲು ಬಯಸುತ್ತಾರೆ. ಸ ಮುದ್ರದ ಕಲಾತ್ಮಕ ವಸ್ತುಗಳು ಇಂದು ನಗರದ ಹಲವು ಮಹಡಿಗಳ ಮನೆಗಳಿಗೆ ಮೆರಗು ನೀಡುತ್ತಿವೆ. ಸಮುದ್ರದ ದಡದಲ್ಲಿ ಸಿಗುವ ಬಣ್ಣಬಣ್ಣದ ನುಣುಪಾದ ಕಲ್ಲಿಗಳನ್ನು ಮನೆ ಕಂಪೌಂಡಿನ ಗೋಡೆಗೆ ಅಂಟಿಸಿ ಮೆರಗು ಕೊಡಲಾಗುತ್ತಿದೆ.

ಸ್ವಾಭಾವಿಕ ಸಮುದ್ರ ಕಲೆ ಕಾಣುವುದು ನೀರಲ್ಲಿನಿಂತ ಕಲ್ಲುಗಳನ್ನು ಕಂಡಾಗ ತಲೆ ತೂಗುವ ತೆಂಗಿನ ಮರಗಳಿಂದ ಕೂಡಿದ ನಡುಗಡ್ಡೆಗಳನ್ನು ನೋಡಿದಾಗ ಕಲೆಗಾರನ ಕಣ್ಣಿಂದ ನೋಡಿದಾಗ ಸಮುದ್ರದೊಳಗಿನ ಬಣ್ಣ ಬಣ್ಣದ ವಿವಿಧಾಕಾರದ ಜಲಚರಗಳು ಕಲಾತ್ಮಕ ಪ್ರಾಣಿಗಳಾಗುತ್ತವೆ. ಆದ್ದರಿಂದಲೇ ಕಲೆಗಾರನಿಗೆ ಮಾತ್ರ ಸಮುದ್ರದ ಕಲೆಯ ವಿವಿಧ ಸ್ವರೂಪಗಳ ದರ್ಶನವಾಗುವುದು. ಆತನು ಅದರ ಅಂತರಾಳದಲ್ಲಡಗಿರುವ ಕಲಾತ್ಮಕತೆಯನ್ನು ಅರಿಯಬಲ್ಲ ಮತ್ತು ಸವಿಯಬಲ್ಲ. ಸಾಮಾನ್ಯನಿಗೆ ಅದು ಅಸಾಧ್ಯ.

ಸಮುದ್ರದ ಚಿಪ್ಪಿನ ಬಾಗಿಲ ತೋರಣ ಮತ್ತು ಪರದೆ.







ಚಿಪ್ಪು ಮತ್ತು
ಶಂಖಿನ
ಪ್ರತಿಮೆಯು
ಕಾಣಿಕೆಗಳು.

ಕನ್ನಡಿಯ ಸುತ್ತಾ ಸಮುದ್ರದ ಚಿಪ್ಪು ಅಂಟಿಸಿ ಅಂದಗಾಣಿಸಿರುವುದು.





ಸಮುದ್ರದ ಚಿಪ್ಪು ಮತ್ತು ಶಂಕುಗಳಿಂದ ತಯಾರಿಸಿರುವ ತೂಗುಬುಟ್ಟಿಗಳ ಸ್ವರೂಪ



7. ಸಮಾರೋಪ

'ಸಮುದ್ರ ಜಾನಪದ'ವು ಜಾನಪದ ಕ್ಷೇತ್ರದಲ್ಲಿ ಒಂದು ವಿಶಿಷ್ಟವಾದ ಸ್ಥಾನ ಪಡೆಯುತ್ತದೆ. ಭೂಮಿ ಮೇಲಿನ ಸಸ್ಯ, ಪ್ರಾಣಿ, ಖನಿಜ ಮೊದಲಾದ ವಿಷಯಗಳ ಬಗ್ಗೆ ಈಗಾಗಲೇ ಜಾನಪದ ಅಧ್ಯಯನ ನಡೆದಿದೆ. ಆದರೆ ಸಮುದ್ರ ಸಂಬಂಧಿ ವಿಷಯಗಳಾದ ನೀರು, ಮೀನು, ದೋಣಿ, ಬಲೆ ಈ ಮೊದಲಾದ ವಿಷಯಗಳನ್ನು ಕುರಿತ ಜಾನಪದ ಅಧ್ಯಯನ ನಡೆದಿಲ್ಲ. ಈ ದೃಷ್ಟಿಯಿಂದ ಈ ಕೃತಿಯು ಕಡಲಿಗರು ಹೊಂದಿರುವ ಸಮುದ್ರ ಸಂಸ್ಕೃತಿಯನ್ನು ತಿಳಿಸುವ ಮೊದಲ ಗ್ರಂಥವಾಗುತ್ತದೆ. ಇದರಲ್ಲಿ ಕಡಲಿಗರ ಸಂಸ್ಕೃತಿಯನ್ನು ಮಾತ್ರ ತಿಳಿಸದೆ ಇಂದಿನ ನಾಗರೀಕತೆಗೆ ಅವರು ಹೇಗೆ ಸ್ಪಂದಿಸುತ್ತಿದ್ದಾರೆ ಎಂಬುದನ್ನೂ ಪರಿಚಯಿಸಲಾಗಿದೆ. ಈ ದೃಷ್ಟಿಯಲ್ಲಿ ಹಳೆಯ ನಂಬಿಕೆ-ಸಂಪ್ರದಾಯ-ಆಚರಣೆಗಳು ಮಾತ್ರ ಜಾನಪದ ಕ್ಷೇತ್ರದಲ್ಲಿ ಸೇರಿಕೊಳ್ಳುತ್ತದೆ. ಅವು ಜಾನಪದ ವಿದ್ವಾಂಸರಿಗೆ ಶಿಷ್ಟ ಜಾನಪದವಾಗಿ ಕಾಣಬಹುದು. ಅದು ಏನೇ ಇರಲಿ "ಹಳೆ ಬೇರು ಹೊಸ ಚಿಗುರು ಕೂಡಿರಲು ಮರಸೊಬಗು" ಎನ್ನುವ ಡಿ.ವಿ.ಜಿ. ಯವರ ಕವಿವಾಣಿಯಂತೆ ಈ ಕೃತಿಯಲ್ಲಿ ಹಳಬರು ಆಚರಿಸುತ್ತಿದ್ದ ಆಚರಣೆಗಳೊಡನೆ, ಇಂದಿನ ವ್ಯಾಪಾರ, ಉದ್ದಿಮೆ, ಕಲೆ ಮೊದಲಾದವುಗಳನ್ನೂ ಬೆರೆಸಲಾಗಿದೆ.

ಸಮುದ್ರ ಸಂಪತ್ತನ್ನು ಸೆರೆಹಿಡಿಯುವ ಕಡಲಿಗರಲ್ಲಿ ಹಿಂದೂ, ಮುಸ್ಲಿಂ ಹಾಗೂ ಕ್ರಿಶ್ಚಿಯನ್ನರಿದ್ದಾರೆ. ದೋಣಿಯೊಳಗೆ ಕುಳಿತು ಸಮುದ್ರದ ಮೇಲೆ ತೇಲುವಾಗ ಅವರೆಲ್ಲಾ ಒಂದೆಂದು ಭಾವಿಸಿ ದುಡಿಯುತ್ತಾರೆ. ಆ ಸಂದರ್ಭದಲ್ಲಿ ಯಾರಾದರೂ ಕಷ್ಟಕ್ಕೆ ಸಿಕ್ಕರೆ ಜಾತಿ-ಮತಗಳನ್ನು ಮರೆತು ಅದರಿಂದ ಅವರನ್ನು ಪಾರು ಮಾಡಲು ಹೆಗಲಿಗೆ ಹೆಗಲೊಡ್ಡುತ್ತಾರೆ. ದಡ ಸೇರಿದಾಗ ಮಾತ್ರ ಅವರು ತಮ್ಮ ತಮ್ಮ ಧರ್ಮದ ಆಚರಣೆಗಳಲ್ಲಿ ಆಸಕ್ತಿ ವಹಿಸುವುದು. ಸಾಗರದ ಮೇಲೆ ಸಾಹಸ ಪ್ರದರ್ಶನ ಮಾಡುತ್ತಾ ದುಡಿಯುವ ಕಡಲಿಗರಿಗೆ ಧೈರ್ಯವೇ ಬಂಡವಾಳ. ಹಣಹಾಕಿ ದೋಣಿ ಮಾಡುವವರ ಲಾಭ-ನಷ್ಟವು ಮೀನು ಹಿಡಿಯುವವರ ಧೈರ್ಯ ಮತ್ತು ಚಾಣಾಕ್ಷತನವನ್ನು ಅವಲಂಬಿಸಿರುತ್ತದೆ. ಅವರನ್ನು ಸುಖ ಸಂತೋಷದಿಂದ ನೋಡಿಕೊಂಡಾಗ ಮಾತ್ರ ಬಂಡವಾಳದಾರನು ತನ್ನ ಉದ್ದಿಮೆಯಲ್ಲಿ ಲಾಭಗಳಿಸಬಲ್ಲ.

ಕರ್ನಾಟಕ ಕರಾವಳಿಯಲ್ಲಿರುವ ಕಡಲಿಗರಲ್ಲಿ ಮೊಗವೀರರು, ಅಂಬಿಗರು, ಹರಿಕಾಂತರು ಅತಿ ಪ್ರಾಚೀನವಾದ ಮೀನುಗಾರರೆಂದು ತಿಳಿದು ಬರುತ್ತದೆ. ಇಂದು ಮೀನುಗಾರಿಕೆ ಒಂದು ಉದ್ದಿಮೆಯಾಗಿರುವುದರಿಂದ ಹಣವಿದ್ದವರೆಲ್ಲಾ ಸಮುದ್ರ ಸಂಪತ್ತಿನ ವ್ಯಾಪಾರಕ್ಕಿಳಿದು ಮೂಲ ಮೀನುಗಾರರ ವೃತ್ತಿಗೆ ಪೆಟ್ಟು ಬಿದ್ದಿದೆ.

ಕಡಲಿಗರ ವೃತ್ತಿಯು ಹೇಗೆ ತನ್ನ ವಿಶಿಷ್ಟತೆಯನ್ನು ಉಳಿಸಿಕೊಂಡಿದೆಯೋ ಹಾಗೆಯೇ ಅವರ ಸಾಹಿತ್ಯವೂ ಸಹ ಅವರಿಗೇ ವಿಶಿಷ್ಟವಾದುದು. ಸಮುದ್ರ ಸಂಬಂಧಿ ವಿಷಯಗಳನ್ನೊಳಗೊಂಡ ಅವರ ಸಾಹಿತ್ಯದಲ್ಲಿ ಬಿಡಿಗೀತೆ, ಉದ್ಗಾರದ ಹಾಡುಗಳು, ಒಗಟು, ಗಾದೆಗಳು, ಹೆಚ್ಚಾಗಿ ದೊರೆಯುತ್ತವೆ. ಕಥೆಗಳ ಸಂಖ್ಯೆ ಕಡಿಮೆ. ಗೀತೆಗಳಲ್ಲಿ ವಿಶಿಷ್ಟವಾದ ಶಕ್ತಿಗೂಡಿಸುವ ಪದಗಳು ಕಷ್ಟದಲ್ಲಿ ನೆರವಾಗುವ ಭಾವನೆಯನ್ನು ಪರಿಚಯಿಸುತ್ತವೆ. ದೋಣಿ ಯಾರದೇ ಇರಲಿ, ಅದನ್ನು ದಡಕ್ಕೆ ಎಳೆಯುವಾಗ ಇಲ್ಲವೇ ದಡದಿಂದ ಸಮುದ್ರಕ್ಕೆ ಸರಿಸುವಾಗ ದಡದ ಮೇಲಿದ್ದವರ ಕೈಗಳೆಲ್ಲಾ ಒಂದಾಗಿ ಶಕ್ತಿಗೂಡಿಸುವ ಹಾಡಿನ ನೆರವಿನೊಂದಿಗೆ ದೋಣಿಯ ಮಾಲೀಕನ ಕಷ್ಟವನ್ನು ಸುಲಭವಾಗಿ ದೂರಮಾಡುತ್ತವೆ.

ಬಿಡಿಗೀತೆ, ಗಾದೆ, ಒಗಟುಗಳಲ್ಲಿ ಸಮುದ್ರ ಜೀವಿಗಳ ವಿವಿಧ ಸ್ವರೂಪ, ಗುಣಗಳನ್ನು ತಿಳಿಸಲಾಗಿದೆ. ಕಥೆಗಳಲ್ಲಿ ಸಮುದ್ರ ಸಂಚಾರದ ಸಾಹಸದಿಂದ ಆಚೆ ದಡದಲ್ಲಿರುವ ಚಿನ್ನದ ಕೂದಲಿನ ಹೆಣ್ಣನ್ನು ಗಳಿಸುವುದು; ಚಾಣಾಕ್ಷತನ ಮತ್ತು ಧೈರ್ಯ ಹೊಂದಿದವನಿಗೆ ಜನಪದ ಸಮಾಜ ಕಥಾನಾಯಕನ ಪಟ್ಟ ಕಟ್ಟುವುದು ಪ್ರಮುಖವಾಗಿ ಕಂಡು ಬರುತ್ತದೆ. ದೋಣಿ, ಸಮುದ್ರ, ಮೀನು ಮೊದಲಾದವು ಕಥಾನಾಯಕನಿಗೆ ಪೂರಕವಾಗಿ ಬರುತ್ತವೆ. ಕಥೆಯು ನೇರವಾಗಿ ಸಮುದ್ರ, ದೋಣಿಗೆ ಸಂಬಂಧ ಪಡದಿದ್ದರೂ ಅವು ಕಥೆಯ ಸಾಗುವಿಕೆಗೆ ಸಹಾಯಕವಾಗಿ ಬರುತ್ತವೆ. ಕಥೆಗಳಲ್ಲಿ ವಿನೋದ ಕತೆಗಳಿಗಿಂತ ಹೆಚ್ಚಾಗಿ ರಮ್ಯಕತೆ, ನೀತಿ ಕತೆಗಳು ಕಂಡುಬರುತ್ತವೆ. ಸಮುದ್ರ ಜೀವಿಗಳ ಸ್ವಭಾವ ಹಾಗೂ ಗುಣಗಳು ಪ್ರಾಣಿಕತೆಗಳಲ್ಲಿ ಮುಖ್ಯವಾಗಿದೆ. ಕಡಲಿಗರ ಸಾಹಿತ್ಯವು ಕರಾವಳಿಯ ಸಾಂಸ್ಕೃತಿಕ ಮಹತ್ವದೊಡನೆ ಸಾಹಿತ್ಯಿಕ ಮೌಲ್ಯವನ್ನು ಹೊಂದಿರುವಂತಹದು.

ಸಮುದ್ರವನ್ನಾಶ್ರಯಿಸಿರುವವರು ಕನ್ನಡ, ಕೊಂಕಣಿ, ತುಳು, ಮಲೆಯಾಳಿ, ನವಾಯಿತಿ, ಹಾಗೂ ಉರ್ದು ಭಾಷೆಗಳನ್ನು ಆಡುತ್ತಾರೆ. ಕಡಲಿಗರ ಕನ್ನಡದ ಮೇಲೆ ನೆರೆಹೊರೆಯ ಭಾಷೆಗಳ ದಟ್ಟವಾದ ಪ್ರಭಾವ ಕಂಡುಬರುತ್ತದೆ. ದಕ್ಷಿಣ ಕನ್ನಡದ ಕಡಲಿಗರ ಕನ್ನಡ ಭಾಷೆಯು ಮಲೆಯಾಳ, ತುಳು ಭಾಷೆಗಳೊಡನೆ ಬಾಂಧವ್ಯ ಬೆಳೆಸಿಕೊಂಡಿದೆ. ಉತ್ತರ ಕನ್ನಡ ಜಿಲ್ಲೆಯ ಕಡಲಿಗರ ಕನ್ನಡದ ಮೇಲೆ ಕೊಂಕಣಿ ಪ್ರಭಾವವಾಗಿದೆ. ಮುಸ್ಲಿಮ್ ಮೀನುಗಾರರು ನವಾಯಿತಿ ಮತ್ತು ಉರ್ದು ಭಾಷೆಯನ್ನು ತಮ್ಮದೇ ಆದ ಶೈಲಿಯಲ್ಲಿ ಆಡುತ್ತಾರೆ. ಆಗ ಅವು ಕೊಂಕಣಿ ಹಾಗೂ ಮರಾಠಿ ಭಾಷೆಗಳೊಡನೆ ಸಂಬಂಧವಿಟ್ಟುಕೊಂಡಿರುವುದು ತಿಳಿದು ಬರುತ್ತದೆ. ಕರ್ನಾಟಕ ಕರಾವಳಿಯ ಕನ್ನಡವು, ಪ್ರಾದೇಶಿಕವಾಗಿ ಪ್ರಮುಖವಾಗಿರುವ ಉಪಭಾಷೆಗಳೊಂದಿಗೆ ಕೊಡು-ಕೊಳ್ಳುವಿಕೆಯ ಸಂಬಂಧವಿಟ್ಟುಕೊಂಡು ತಾನೂ ಬೆಳೆಯುತ್ತಾ ನೆರೆಯ ಭಾಷೆಗಳನ್ನೂ ಬೆಳೆಸುತ್ತಿರುವುದು ಗಮನಾರ್ಹವಾಗಿದೆ.

ಮಾನವ ಸಮುದ್ರದೊಡನೆ ಸಂಬಂಧ ಬೆಳೆಸಲು ಮುಖ್ಯ ಕಾರಣ ಅದರಲ್ಲಿರುವ ಆಹಾರ ಸಂಪತ್ತು. ಸಮುದ್ರದಾಹಾರ ಮಾಂಸಾಹಾರದಲ್ಲಿ ಶ್ರೇಷ್ಠ ಹಾಗೂ ರುಚಿಕರವಾದದ್ದೆಂದು ಅನುಭವಿಗಳ ಅನಿಸಿಕೆಯಾಗಿರುವುದರಿಂದ ದಿನಗಳೆದಂತೆ ಅದರ ಬೆಲೆ ಹಾಗೂ ಜನಪ್ರಿಯತೆ ಹೆಚ್ಚುತ್ತಲೇ ಹೋಗುತ್ತಿದೆ. ಇತ್ತೀಚಿನ ದಿನಗಳಲ್ಲಿ ಭೂಮಿ ಮೇಲಿನ ಕೃಷಿ ಉತ್ಪನ್ನಗಳ ಬೆಲೆ ಕಡಿಮೆಯಾಗುತ್ತಿದೆ. ಆದರೆ ಸಮುದ್ರ ಸಂಪತ್ತಿನ ಬೆಲೆ ಹೆಚ್ಚುತ್ತಲೇ ಹೋಗುತ್ತಿದೆ. ಇದಕ್ಕೆ ಕಾರಣ ಕರಾವಳಿಯ ಸಮುದ್ರದಾಹಾರವು ವಿದೇಶಿಗರಿಗೆ ಪ್ರಿಯವೆನಿಸಿರುವುದು. ಈ ದೃಷ್ಟಿಯಿಂದ ಇದು ದೇಶದ ಆರ್ಥಿಕಾಭಿವೃದ್ಧಿಗೆ ಹಾದಿ ಮಾಡಿ ಕಡಲಿಗರ ಜೀವನ ಮಟ್ಟವನ್ನು ಸುಧಾರಿಸುತ್ತಿದೆ.

ಸಮುದ್ರ ಬೇಟೆಯು ಕಡಲಿಗರ ಧೈರ್ಯ ಮತ್ತು ಚಾಣಾಕ್ಷತನವನ್ನು ಪರಿಚಯಿಸುವಂತಹ ಉದ್ಯೋಗ ಮೀನನ್ನು ಸೆರೆಹಿಡಿಯಲು ಹೊಸ ಬಗೆಯ ಬಲೆಗಳು ಬಂದಿದ್ದರೂ ಪ್ರಾಚೀನವಾದ ಗಾಳದ ಬೇಟೆಯು ಇಂದಿಗೂ ತನ್ನ ಮಹತ್ವವನ್ನು ಉಳಿಸಿಕೊಂಡಿದೆ. ದೊಡ್ಡ ಗಾತ್ರದ ಮೀನುಗಳನ್ನು ಗಾಳದಿಂದಲೇ ಹಿಡಿಯಲಾಗುತ್ತಿದೆ. ಪಾತಿ ದೋಣಿಯನ್ನು ಎಳೆದೊಯ್ಯುವಂತಹ ಮೀನನ್ನು ಉಪಾಯದಿಂದ ಸೆರೆಮಾಡಿಕೊಳ್ಳುವ ಮೀನುಗಾರರ ಚಾಣಾಕ್ಷತನವು ಅನುಭವ ಜ್ಞಾನದಿಂದ ದೊರೆತಿರುವಂತಹದು. ಅಕ್ಷರ ಜ್ಞಾನದಿಂದ ಹೊರತಾಗಿದ್ದರೂ ಅನುಭವದಿಂದ ಅವರು ಸಮುದ್ರದಲ್ಲಿ ಸಂಚರಿಸುವ ಮೀನಿನ ಗುಂಪನ್ನು, ಜಾತಿಯನ್ನು, ಸಾಗುತ್ತಿರುವ ದಿಕ್ಕನ್ನು ತಿಳಿಯಬಲ್ಲರು. ಪರ್ವತದಂತೆ ಬರುತ್ತಿರುವ ತಿಮಿಂಗಿಲದ ಹಾದಿಯನ್ನು

ಅರಿತು ಅಪಾಯದಿಂದ ಪಾರಾಗಬಲ್ಲರು. ಕಡಲಿಗರ ಮೀನು ಬೇಟೆ ಇಂದು ಆಧುನಿಕ ತಂತ್ರಜ್ಞಾನದಿಂದ ವಿವಿಧ ರೂಪ ತಾಳಿದ್ದರೂ ಪ್ರಾಚೀನ ವಿಧಾನಗಳಾದ ಬೀಸೋ ಬಲೆ, ಎಳೆಯೋ ಬಲೆ, ಗಾಳ ಮೊದಲಾದವುಗಳಿಂದ ಬೇಟೆಯಾಡುವುದು ಮಳೆಗಾಲದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಇದನ್ನು ಗಮನಿಸಿದಾಗ ಯಂತ್ರ ಯುಗದಲ್ಲಿ ಮಾನವ ದಾಪುಗಾಲು ಹಾಕುತ್ತಿದ್ದರೂ ಪ್ರಾಚೀನವಾದ ಹಲವು ವಿಧಾನಗಳನ್ನು ಇಂದಿಗೂ ಅವನು ಮೆಚ್ಚಿಕೊಂಡು ಉಳಿಸಿಕೊಂಡಿದ್ದಾನೆ ಎಂಬುದರ ಅರಿವಾಗುತ್ತದೆ.

ಮಳೆ ಬಿಸಿಲೆನ್ನದೇ ಸಾಗರದ ಮೇಲೆ ತೇಲಾಡುತ್ತ ಮೀನು ಹಿಡಿಯುವುದರಲ್ಲಿ ಮಗ್ನರಾಗುವ ಕಡಲಿಗರು ಕೆಲವು ವೇಳೆ ಅನಿರೀಕ್ಷಿತವಾಗಿ ಅಡ್ಡಬರುವ ಅಪಾಯಗಳಿಗೆ ಎದೆಯೊಡ್ಡಬೇಕಾಗುತ್ತದೆ. ಅಂತಹ ಸಂದರ್ಭಗಳಲ್ಲಿ ಅವುಗಳಿಂದ ಪಾರಾಗುವ ಉಪಾಯವನ್ನು ಅವರು ಹುಡುಕಿಕೊಳ್ಳುತ್ತಾರೆ. ನೀರಿನ ಬಣ್ಣ ಬದಲಾಗುವುದರಿಂದ ಅವರು ಬಿರುಗಾಳಿಯ ಮುನ್ಸೂಚನೆಯನ್ನರಿಯುತ್ತಾರೆ. ಹವಾಮಾನ ಇಲಾಖೆಯವರು ನೀಡುವ ಮುನ್ಸೂಚನೆಗಳಿಗಿಂತ ಅನುಭವ ಜ್ಞಾನದ ಆಧಾರದ ಮೇಲೆ ಅವರು ಕಂಡುಕೊಂಡ ಉಪಾಯಗಳ ಬಗ್ಗೆ ಅವರಿಗೆ ಹೆಚ್ಚಿನ ನಂಬಿಕೆ. ಸಮುದ್ರದ ಅಪಾಯಗಳ ಅನುಭವ ಕೇವಲ ಕಡಲಿಗರಿಗೆ ಮಾತ್ರ ಗೊತ್ತು. ಅವುಗಳನ್ನು ಅವರು ತಿಳಿಸುವಾಗ ಕುತೂಹಲ ಕೆರಳುತ್ತದೆ, ಆಶ್ಚರ್ಯ ಹಾಗೂ ಭಯ ಮೂಡುತ್ತದೆ.

ಮೀನುಗಾರಿಕೆ ಇಂದು ಉದ್ದಿಮೆಯಾಗಿರುವುದರಿಂದ ಹಣವಿದ್ದವರ ಗಮನ ಅದರೆಡೆಗೆ ಹರಿಯುತ್ತಿದೆ. ಪಾತಿ ದೋಣಿಯ ಸ್ಥಾನದಲ್ಲಿ ಆಧುನಿಕ ಬಲೆಗಳ ಯಾಂತ್ರಿಕ ದೋಣಿಗಳು ಸಮುದ್ರ ಸಂಪತ್ತನ್ನು ದೋಚುತ್ತಿವೆ. ವಿದೇಶಿಗರಿಗೆ ಕರ್ನಾಟಕ ಕರಾವಳಿಯ ಸಮುದ್ರ ಪ್ರಾಣಿಗಳು ಹೆಚ್ಚು ಪ್ರಿಯವಾಗಿರುವುದರಿಂದ ಮೀನುಗಾರರ ಆದಾಯದೊಡನೆ ದೇಶದ ಆದಾಯವು ಸಹ ಹೆಚ್ಚುತ್ತಿದೆ. ಆದರೆ ಅಮೂಲ್ಯ ಸಮುದ್ರ ಸಂಪತ್ತಾದ ಸೀಗಡಿ, ಸುರ್ಮಿ, ಪಾಂಪ್ಲೇಟ್ ಮೊದಲಾದವು ಕರಾವಳಿಯ ಜನರಿಗೆ ತುಟ್ಟಿಯಾಗುತ್ತಿವೆ. ವಿದೇಶಿಗರ ಒಪ್ಪಂದದ ಕಾರಣದಿಂದ ಭೂತದಂತೆ ಬರುತ್ತಿರುವ ಅವರ ಆಳ ಸಮುದ್ರದ ಮೀನು ಬೇಟೆಯ ದೋಣಿಗಳನ್ನು ಕಂಡ ಮೀನುಗಾರರು ಕಂಗಾಲಾಗುತ್ತಿದ್ದಾರೆ. ತಮ್ಮ ಉದ್ಯೋಗಕ್ಕೆ ಸಿಡಿಲಿನಂತೆ ಎರಗಲು ಬರುತ್ತಿರುವ ವಿದೇಶಿ ಮೀನುಗಾರರನ್ನು ತಡೆಯುವಂತೆ ಮಾಡುತ್ತಿರುವ ಅವರ ಪ್ರಯತ್ನಗಳಿಗೆ ಪ್ರತಿಫಲ ಸಿಗದೇ ಅವರು ಸಿಡಿದೇಳುವ ಹಂತಕ್ಕೆ ಮುಟ್ಟುವ ಸೂಚನೆಗಳು ಕಾಣುತ್ತಿವೆ.

ಸಮುದ್ರ ಸಂಪತ್ತಿನ ವ್ಯಾಪಾರದಲ್ಲಿ ಗಮನಾರ್ಹ ಅಂಶವೆಂದರೆ ಇಂದಿಗೂ ಮುಂದುವರಿಯುತ್ತಿರುವ ಮೀನನ್ನು ಗುಡ್ಡೆ ಹಾಕಿ, ಇಲ್ಲವೇ ಪೋಣಿಸಿ ಹಾರ ಮಾಡುವ ಪದ್ದತಿ ಜೀವಂತವಾಗಿರುವುದು. ನಾಡದೋಣಿ ಹಾಗೂ ಗಾಳದ ಬಳಕೆ ತನ್ನ ಮಹತ್ವವನ್ನು ಉಳಿಸಿಕೊಂಡಿರುವುದು.

ಕಡಲಿಗರು ಸಾಮಾನ್ಯವಾಗಿ ನಿಯತ್ತಿನ ಜನ. ಮೋಸ, ಕಳ್ಳತನ ಈ ಮೊದಲಾದ ದುಷ್ಕೃತ್ಯಗಳಿಂದ ಅವರು ದೂರ ಉಳಿಯುತ್ತಾರೆ. ಇದಕ್ಕೆ ತಾವು ಮೋಸ ಮಾಡಿದರೆ ದೇವರು ತಮ್ಮನ್ನು ಸುಮ್ಮನೆ ಬಿಡುವುದಿಲ್ಲ ಎಂಬ ನಂಬಿಕೆ ಕಾರಣ. ದೋಷ ಮಾಡಿದರೆ ತಾವು ನೀರಿನ ಮೇಲಿದ್ದಾಗ ದೇವರು ಏನಾದರೂ ಒಂದು ಕಷ್ಟ ಕೊಟ್ಟೇ ಕೊಡುತ್ತಾನೆ ಎಂದು ಅವರು ಹೆದರುತ್ತಾರೆ. ಆದರೆ ವ್ಯಾಪಾರಸ್ಥರು ಅವರಿಗೆ ಮೋಸಮಾಡುವ ಪ್ರಸಂಗಗಳೇ ಹೆಚ್ಚು. ಹೀಗಿದ್ದರೂ ಅವರು ತಮ್ಮ ಹಣೆಯಲ್ಲಿ ಬರೆದಂತೆ ಆಗುತ್ತದೆ ಎಂದು ನಿಶ್ಚಿಂತೆಯಿಂದಲೇ ಬದುಕುತ್ತಾರೆ.

ತನ್ನದೇ ಆದ ಸಂಪ್ರದಾಯ ಹಾಗೂ ಆಚರಣೆಗಳಿಂದ ಕೂಡಿದ ಮೀನುಗಾರರ ಧರ್ಮವು ಸಮುದ್ರ ಜಾನಪದದಲ್ಲಿ ವಿಶಿಷ್ಟ ಸ್ಥಾನ ಗಳಿಸಿದೆ. ತಮಗಿಷ್ಟವಾದದ್ದನ್ನು ನೀಡುತ್ತಿರುವ ಸಾಗರವು ಕಡಲಿಗರಿಗೆ ಪ್ರಮುಖ ದೇವತೆಯಾಗಿ ಕಾಣುತ್ತಿದೆ. ನೂಲು ಹುಣ್ಣಿಮೆಯಂದು ಅವರು ಕಡಲಿಗೆ ವಿಶೇಷ ಪೂಜೆ ಸಲ್ಲಿಸಿ, ಸಂಪತ್ತು ನೀಡಿ ಸಂರಕ್ಷಿಸುವಂತೆ ಪ್ರಾರ್ಥಿಸಿಕೊಳ್ಳುತ್ತಾರೆ. ಮೀನು ಹೆಚ್ಚಾಗಿ ಸಿಕ್ಕಾಗ ತಮ್ಮ ಕುಲದೇವತೆಗೆ ಚಿನ್ನದ ಮೀನಿನ ಹಾರ ಮಾಡಿ ಅರ್ಪಿಸುತ್ತಾರೆ. ಸಸ್ಯಾಹಾರಿ ದೇವತೆಗಳಿಗೆ, ಮಾಂಸಾಹಾರಿ ಸಂಸ್ಕೃತಿಯ ಆಚರಣೆಯಂತೆ ಚಿನ್ನದ ಮೀನು, ಸಿಗಡಿ ಮೊದಲಾದ ಜಲಚರಗಳ ಹಾರ ಅರ್ಪಿಸುವ ಪದ್ಧತಿಯು ಗಮನಾರ್ಹವಾದುದು. ಕಡಲಿಗರ ಮೇಲೆ ಸಸ್ಯಾಹಾರಿ ಸಂಸ್ಕೃತಿಯ ಪ್ರಭಾವ ಗಾಢವಾಗಿ ಬೀರಲ್ಪಟ್ಟಿದೆ. ಶೃಂಗೇರಿ ಶಾರದೆಯ ಅಪ್ಪಣೆಯಿಲ್ಲದೇ ಅವರು ಮುಂಗಾರಿನ ಮೀನು ಬೇಟೆಯನ್ನು ಪ್ರಾರಂಭಿಸುವುದಿಲ್ಲ. ತಮ್ಮ ಕೆಲಸ ಕಾರ್ಯಗಳಲ್ಲಿ ಅಡ್ಡಿ ಆತಂಕಗಳು ಒದಗಿ ಬಂದರೆ ಅವುಗಳನ್ನು ದೂರಮಾಡಿಕೊಳ್ಳಲು ಶಾರದೆಯ ಮೊರೆ ಹೋಗುತ್ತಾರೆ. ಆದರೂ ಅವರ ಮೂಲ ದೇವತೆಗಳಾದ ಜಟ್ಟಿಗ, ಮಾಸ್ತಿ, ಭೂತ, ತಿಮಿಂಗಿಲ ನಾಮದ ಮೀನು ಮೊದಲಾದವುಗಳನ್ನು ಅವರೆಂದೂ ಮರೆಯುವುದಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಕಡಲಿಗರಿಗೆ ಬೊಬ್ಬರ್ಯ ಭೂತ ಪ್ರಮುಖ ದೇವತೆಯಾದರೆ ಉತ್ತರ ಕನ್ನಡ ಜಿಲ್ಲೆಯಲ್ಲಿರುವರಿಗೆ ನೇತ್ರಾಣಿ ದ್ವೀಪದಲ್ಲಿರುವ ಜಟ್ಟಿಗ ಮಹತ್ವದ ದೇವತೆಯಾಗಿದೆ. ನೀರಿನ ಮೇಲೆ ಒದಗುವ ಅನಿರೀಕ್ಷಿತ ಅಪಾಯಗಳಿಂದ ಪಾರಾಗಲು ಈ ಪ್ರಾದೇಶಿಕ ದೇವತೆಗಳನ್ನು ಅವರು ಪ್ರಾರ್ಥಿಸಿಕೊಳ್ಳುತ್ತಾರೆ. ಕಡಲ ಕ್ರೀಡೆ ಮತ್ತು ಕಲೆ ನಗರ ವಾಸಿಗಳನ್ನು ಸೆರೆಹಿಡಿಯುವಂತಹವು. ಸಮುದ್ರದ ಆಳೆತ್ತರದ ಅಲೆಗಳ ಎದುರು ಈಜುವ ಮತ್ತು ದೋಣಿ ನಡೆಸುವ ಕ್ರೀಡೆಗಳು ವೀಕ್ಷಕರಲ್ಲಿ ಸಂತೋಷ ಮತ್ತು ಭಯ ಎರಡನ್ನೂ ಮೂಡಿಸುತ್ತವೆ.

ಸಮುದ್ರ ಸಂಪತ್ತಿನಲ್ಲೊಂದಾದ ಶಂಕು, ಚಿಪ್ಪು ಮೊದಲಾದವುಗಳಿಂದ ತಯಾರಿಸಿದ ತೂಗುಬುಟ್ಟಿ, ತೋರಣ, ಬಾಗಿಲ ಪರದೆ, ಕನ್ನಡಿಯ ಚೌಕಟ್ಟು ಮೊದಲಾದವು ಕಡಲನ್ನು ಕಾಣಲು ಬಂದ ಪ್ರವಾಸಿಗರನ್ನು ಆಕರ್ಷಿಸುತ್ತವೆ. ಈ ಸಮುದ್ರದ ಕಲಾತ್ಮಕ ಕೊಡುಗೆಗಳನ್ನು ಕೊಂಡು ತಮ್ಮ ಮನೆಗಳನ್ನು ಅಲಂಕರಿಸುವಂತೆ ಅವು ಉತ್ತೇಜಿಸುತ್ತವೆ. ನಿಜಕ್ಕೂ ಸಮುದ್ರದ ಕಲಾತ್ಮಕ ವಸ್ತುಗಳನ್ನು ಕಂಡು ಆನಂದಿಸಿದಾಗ ಮಾತ್ರ ಸಮುದ್ರ ಕಲೆಯ ಪರಿಪೂರ್ಣ ಪರಿಚಯವಾಗಲು ಸಾಧ್ಯ. ಅದು ಏನೇ ಇರಲಿ, ಕಡಲಿಗರು ಸಮುದ್ರ ಸಂಪತ್ತಿಗೆ ಕಲಾತ್ಮಕ ಮೆರುಗು ಕೊಟ್ಟು, ಜಾನಪದ ಕ್ಷೇತ್ರದಲ್ಲಿ ಅದಕ್ಕೊಂದು ಮಹತ್ವವಾದ ಸ್ಥಾನ ಸಿಗುವಂತೆ ಮಾಡಿದ್ದಾರೆ.

ಸಮುದ್ರ ಜಾನಪದ ನಿಬಂಧವು ಕಡಲಿಗರ ಬದುಕು, ಸಾಹಿತ್ಯ, ಕಲೆ ಮೊದಲಾದವುಗಳನ್ನು ಪರಿಚಯಿಸುತ್ತಾ ಅವರ ಸಂಸ್ಕೃತಿಯ ಪರಿಪೂರ್ಣ ಪ್ರತಿಬಿಂಬ ನೀಡಬಲ್ಲದು. ಕನ್ನಡ ಜಾನಪದ ಕ್ಷೇತ್ರದಲ್ಲಿ ಸಂಶೋಧನೆ ಮಾಡುವ ವಿದ್ವಾಂಸರಿಗೆ ಸಮುದ್ರ ಸಂಸ್ಕೃತಿಯನ್ನರಿಲು ಸಹಾಯಕವಾಗಬಲ್ಲದು.

ಅನುಬಂಧ
ಆಧಾರ ಗ್ರಂಥಗಳು

1) ಅಮೃತ ಸೋಮೇಶ್ವರ : ಪೊಸ ಗಾದೆಲು; ಪ್ರಕೃತಿ ಪ್ರಕಾಶನ, ಕೋಟೆಕಾರು ದ.ಕ., 1988.

2) ಅರ್ತಿಕಜೆ ಶ್ರೀಕೃಷ್ಣ ಭಟ್ಟ : ಜನಪ್ರಿಯ ತುಳುಗಾದೆಗಳು; ಯುಗಪುರುಷ ಪ್ರಕಟಾಲಯ, ಕಿನ್ನಿಗೋಳಿ, ದ.ಕ., 1988.

3) ಅನುಪಮ ನಿರಂಜನ : ದಿನಕ್ಕೊಂದು ಕಥೆ; ಡಿ.ವಿ.ಕೆ. ಮೂರ್ತಿ, ಮೈಸೂರು, 1989.

4) ಕಡೆತೋಟದ ಎನ್.ಕೆ. : ಮೀನುಗಾರಿಕೆಯಲ್ಲಿ ಪ್ರಾಚೀನತೆ; ಪ್ರಸಾರಾಂಗ, ಕ.ವಿ.ವಿ. ಧಾರವಾಡ, 1988.

5) ಕರಡಿಕೇರಿ : ಶಿವಮಹಾಪುರಾಣ; ಎಂ.ಎಂ. ಕರಡಿ ಆ್ಯಂಡ್‌ಸನ್ಸ್ ಸ್ಟೇಶನ್ ರೋಡ್, ಹುಬ್ಬಳ್ಳಿ, 1982.

6) ಕಾವ್ಯಪ್ರೇಮಿ : ಜನಪ್ರಿಯ ಗಾದೆಗಳ ನಿಘಂಟು; ಶೇಷಚಲ ಗ್ರಂಥಮಾಲೆ, ಧಾರವಾಡ.

7) ಕುರುವ ಬಸವರಾಜ್ : ಒಗಟು ಕಥೆಗಳು; ಅಂತರಂಗ ಪ್ರಕಾಶನ, ಕುರುವ ಶಿವಮೊಗ್ಗ ಜಿಲ್ಲೆ, 1989.

8) ಗದ್ದಗಿಮಠ. ಬಿ. ಎಸ್. : ಕನ್ನಡ ಜಾನಪದ ಗೀತೆಗಳು; ಕ.ವಿ.ವಿ. ಧಾರವಾಡ, 1969.

9) ಚಂದ್ರಶೇಖರ ಕಂಬಾರ (ಸಂ) : ಕನ್ನಡ ಜಾನಪದ ವಿಶ್ವಕೋಶ; ಕ.ಸಾ.ಪ. ಬೆಂಗಳೂರು 1985.

10) ಜಯಪ್ರಕಾಶ ಮಾವಿನಕುಳಿ : ಹರಿಕಾಂತರ ಪದಗಳು; ಸ್ಪಟಿಕ ಪ್ರಕಾಶನ, ಮೂಡಬಿದಿರೆ 1992.

11) ತಮಸ್ವೀಕುಮಾರ್. ನಂ. : ಕನ್ನಡ ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ; ಪ್ರಸಾರಾಂಗ, ಮೈ.ವಿ.ವಿ. ಮೈಸೂರು, 1982.

12) ದಾಸೇಗೌಡ. ಜಿ.ವಿ. : ನಮ್ಮ ಜನಪದ ನಂಬಿಕೆಗಳು; ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ. ಮೈಸೂರು, 1973.

13) ದುರ್ಗೇಕರ್ ವೈ. ಎಸ್. : ಕಡಲಿಗರು; ಪರ್ಶಿಯನ್ ಯೂನಿಯನ್ ಫಿಶಿಂಗ್ ಲಾಂಚ್ ಯೂನಿಯನ್, ಕಾರವಾರ, 1983.

14) ದುರ್ಗೇಕರ್ ವೈ. ಎಸ್. : ಕನ್ನಡ ಕಡಲಿಗರು; 1992.

15) ದುರ್ಗೇಕರ್ ವೈ. ಎಸ್. : ಕಡಲ ಮೀನುಗಾರಿಕೆ; ಕೃಷಿ ವಿ.ವಿ. ಬೆಂಗಳೂರು, 1975.

16) ದೇವೇಂದ್ರ ಕುಮಾರ ಹಕಾರಿ : ಜಾನಪದ - ಸಾಮಾಜಿಕ ಕಥನ ಗೀತೆಗಳಲ್ಲಿ ದುಃಖಾಂತ ನಿರೂಪಣೆ, ಪ್ರಸಾರಾಂಗ, ಕ.ವಿ.ವಿ. ಧಾರವಾಡ, 1977.

17) ನಾಯಕ ಎನ್. ಆರ್. : ಹೇಳುತೇವೊ ಗುಮ್ಮೆ ಪದನಾವು; ಜಾನಪದ ಪ್ರಕಾಶನ, ಹೊನ್ನಾವರ, 1983.

18) - " - : ಹಾಲಕ್ಕಿ ಒಕ್ಕಲಿಗರ ಜನಪದ ಗೀತೆಗಳು; ಪ್ರಸಾರಾಂಗ, ಕ.ವಿ.ವಿ. ಧಾರವಾಡ, 1982.

19) - " - : ಕಾರವಾರ ಜಿಲ್ಲೆಯ ಜನಪದ ಗೀತೆಗಳು; ಪ್ರಸಾರಾಂಗ, ಕ.ವಿ.ವಿ. ಧಾರವಾಡ, 1982.

20) - " - : ಜಾನಪದ ಸಿಂಹಾಲೋಕನ; ಜಾನಪದ ಪ್ರಕಾಶನ, ಹೊನ್ನಾವರ, 1995.

21) - " - : ಜಾನಪದ ಸಂಬಾರ ಬಟ್ಟಲು; ಜಾನಪದ ಪ್ರಕಾಶನ, ಹೊನ್ನಾವರ, 1992.

22) ನಾಯಕ ವಿ.ಗ. : ಹರಿಕಾಂತರ ಸಂಸ್ಕೃತಿ; ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, 1993.

23) ನಾವಡ ಎ.ವಿ. (ಸಂ) : ಕುಂದ ದರ್ಶನ; ಭಂಡಾರ್ಕಾರ್ ಕಾಲೇಜು, ಕುಂದಾಪುರ, 1977.

24) ನಾವಡ ಎ.ವಿ. ಮತ್ತು ಸುಭಾಶ್ಚಂದ್ರ (ಸಂ): ತುಳುವ ದರ್ಶನ; ಪ್ರಾದೇಶಿಕ ವ್ಯಾಸಂಗ, ಕುಂದಾಪುರ, 1987.

25) ನಾಗೇಗೌಡ. ಎಚ್. ಎಲ್. (ಸಂ) : ಸೋಬಾನೆ ಚಿಕ್ಕಮ್ಮನ ಪದಗಳು; ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1972.

26) ಪರಮಶಿವಯ್ಯ ಜೀ. ಶಂ : ಕನ್ನಡ ಒಗಟುಗಳು; ಸಾಹಿತ್ಯ ಸದನ ಸರಸ್ವತಿ ಪುರಂ, ಮೈಸೂರು, 1967.

27) ಪಾಂಡುರಂಗ ಡಿ. ಆರ್. : ದಕ್ಷಿಣ ಕನ್ನಡ ಜಿಲ್ಲೆಯ ಭೈರರು; ರಾಷ್ಟ್ರಕವಿ ಗೋವಿಂದ ಪೈ, ಸಂಶೋಧನ ಕೇಂದ್ರ, ಉಡುಪಿ, 1990.

27 ಅ) ಪರುಷೋತ್ತಮ ಬಿಳಿಮಲೆ : ಕರಾವಳಿ ಜಾನಪದ; ಮಂಗಳ ಗಂಗೋತ್ರಿ, ಮಂಗಳೂರು, 1990.

28) ರಾಗೌ : ಕಿಟ್ಟಲ್ ಕೋಶದ ಗಾದೆಗಳು; ಉಷಾ ಸಾಹಿತ್ಯ ಮಾಲೆ, ಮೈಸೂರು.

29) ರಂಗಸ್ವಾಮಿ ಜೆ. ಆರ್. : ಮೀನುಗಾರಿಕೆ; ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾ ನಿಲಯ, ಬೆಂಗಳೂರು, 1977.

30) ರಾಗೌ : ನಮ್ಮ ಒಗಟುಗಳು; ಡಿ.ವಿ.ಕೆ. ಮೂರ್ತಿ, ಮೈಸೂರು, 1992.

31) ರಮೇಶ ಮಸ್ಕ : ವಿದ್ಯಾಶ್ರೀ ಜನಪ್ರಿಯ ಒಗಟುಗಳು ಮತ್ತು ಗಾದೆ ಮಾತುಗಳು; ವಿದ್ಯಾಶ್ರೀ ಪ್ರಕಾಶನ, ನಾವುಂದ, ದ.ಕ. ಜಿಲ್ಲೆ.

32) ರಾಮಾನುಜನ್ ಎ.ಕೆ. : ಗಾದೆಗಳು; ಕ.ವಿ.ವಿ. ಧಾರವಾಡ, 1968.

33)	ಲಕ್ಕಪ್ಪ ಗೌಡ ಎಚ್.ಜೆ	:	ಒಗಟುಗಳು; ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿ.ವಿ. 1973.
34)	ವಿವೇಕ ರೈ ಬಿ. ಎ.	:	ತುಳು ಜನಪದ ಸಾಹಿತ್ಯ; ಕಸಪ, ಬೆಂಗಳೂರು, 1985.
35)	ವಿವೇಕ ರೈ. ಬಿ.ಎ. (ಸಂ) ಯು. ಪಿ. ಉಪಾಧ್ಯಾಯ ಅಮೃತ ಸೋಮೇಶ್ವರ	:	ಪೆರುವಾಯಿ ಸುಬ್ಬಯ್ಯ ಶೆಟ್ಟಿಯವರ ತುಳು ಗಾದೆಗಳು; ಕನ್ನಡ ಅಧ್ಯಯನ ಕೇಂದ್ರ, ಮಂಗಳೂರು ವಿ.ವಿ. 1989.
36)	ವೀರಣ್ಣ ದಂಡೆ	:	ಆಯ್ದ ಗಾದೆಗಳು ಹಾಗೂ ಒಗಟುಗಳು; ಮೂಡಲ ಪ್ರಕಾಶನ, ಕಲ್ಬುರ್ಗಿ, 1985.
37)	ವೆಂಕಟರಾಜ ಪುಣಿಂಚತ್ತಾಯ	:	ಮೊಗವೀರರ ಸಂಸ್ಕೃತಿ; ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1993.
38)	ಶಾಂತಿ ನಾಯಕ	:	ಜಾಣೆ ಕನ್ನಡವ ತಿಳಿದ್ಹೇಳೆ; ಜಾನಪದ ಪ್ರಕಾಶನ, ಹೊನ್ನಾವರ, 1982.
39)	ಶಾಂತಿ ನಾಯಕ	:	ಜಾನಪದ ಸುಧಾ ಸಂಚಯ; ಜಾನಪದ ಪ್ರಕಾಶನ, ಹೊನ್ನಾವರ, 1983.
40)	ಶಿವರಾಮ ಕಾರಂತ. ಕೆ.	:	ಜಾನಪದ ಗೀತೆಗಳು; ಪ್ರಸಾರಾಂಗ, ಮೈಸೂರು ವಿ.ವಿ. 1966.
41)	ಸದಾಶಿವ ಜಿ. ಎಸ್ (ಅನು)	:	ಮೀನುಗಾರ ಮತ್ತು ರಾಜ; ಓರಿಯಂಟ್ ಲಾಂಗ್‌ಮನ್, ಲಿ.. ಹೈದರಾಬಾದ್, 1989.
42)	- " - (ಅನು)	:	ಅಲ್ಲಾವುದೀನ್ ಮತ್ತು ಇತರ ಕಥೆಗಳು; ಓರಿಯಂಟ್ ಲಾಂಗ್‌ಮನ್, ಲಿ. ಮಹಾತ್ಮಾ ಗಾಂಧಿ ರಸ್ತೆ, ಬೆಂಗಳೂರು, 1989.
43)	- " - (ಅನು)	:	ಪ್ರಾಚೀನ ಭಾರತದ ಕಥೆಗಳು; ಓರಿಯಂಟ್ ಲಾಂಗ್‌ಮನ್, ಲಿ. ಬೆಂಗಳೂರು, 1989.
44)	ಸಂಧ್ಯಾರೆಡ್ಡಿ ಕೆ. ಆರ್.	:	ಕನ್ನಡ ಜನಪದ ಕಥೆಗಳು; ಕ.ಸ.ಪ. ಬೆಂಗಳೂರು, 1982.
45)	ಸೋಮಶೇಖರ ಇಮ್ರಾಪುರ	:	ಜನಪದ ಒಗಟುಗಳು; ಕ.ವಿ.ವಿ. ಧಾರವಾಡ, 1989.
46)	ಸೈಯದ್ ಜಮೀರುಲ್ಲಾ ಷರೀಫ್	:	ನವಾಯಿತರು; ಐ.ಬಿ. ಎಚ್. ಪ್ರಕಾಶನ, ಬೆಂಗಳೂರು, 1986.
47)	- " -	:	ಭಟ್ಕಳ ತಾಲ್ಲೂಕು ದರ್ಶನ; ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, 1987.
48)	- " -	:	ಕಾರವಾರ ತಾಲ್ಲೂಕು ದರ್ಶನ; ಐ.ಬಿ.ಎಚ್. ಪ್ರಕಾಶನ, ಬೆಂಗಳೂರು 1987.
49)	ಹೆಗಡೆ ಎಲ್. ಆರ್.	:	ಒಗಟು ಮತ್ತು ಕತೆಗಳು; ಜ್ಞಾನ ಸಾಧನ ಗ್ರಂಥಮಾಲೆ, ಸಿದ್ದಾಪುರ.
50)	- " -	:	ಉತ್ತರ ಕನ್ನಡ ಜನಪದ ಕಥೆಗಳು; ಕ.ವಿ.ವಿ. ಧಾರವಾಡ, 1975.

51) - " - : ಜನಪದ ಭಾರತ ಕಥೆಗಳು; ಜ್ಞಾನಸಾಧನ ಗ್ರಂಥಮಾಲೆ, ಕುಮಟಾ, 1980.

52) - " - : ಮಲೆನಾಡ ಸೆರಗಿನ ಕಥೆಗಳು; ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ. 1983.

53) - " - : ಜನಪದ ಮತ್ತು ಗಿರಿಜನರ ಕಥೆಗಳು; ಕೇಂದ್ರ ಸಾಹಿತ್ಯ ಅಕಾಡೆಮಿ, ನವದೆಹಲಿ, 1990.

54) - " - : ಸಿದ್ಧಿಯರ ಕಥೆಗಳು, ಜ್ಞಾ.ಸಾ.ಗ್ರಂ. ಕುಮಟಾ.

55) - " - : ತಿಮ್ಮಕ್ಕನ ಪದಗಳು; ಕನ್ನಡ ಅಧ್ಯಯನ ಸಂಸ್ಥೆ, ಮೈ.ವಿ.ವಿ. 1969.

56) - " - : ಕುಮರಿ ಮರಾಠಿಗರ ಕಥೆಗಳು; ಜ್ಞಾನ ಸಾಧನ ಗ್ರಂಥಾಮಾಲೆ, ಕುಮಟಾ, 1981.

57) - " - : ಕರಾವಳಿಯ ಕಥೆಗಳು; ಜ್ಞಾ.ಸಾ.ಗ್ರಂ. ಕುಮಟಾ, 1978.

58) - " - : ಹೆಂಗಸರ ಗೀತೆಗಳು, ಜ್ಞಾ.ಸಾ.ಗ್ರಂ. ಕುಮಟಾ, 1982.

59) Negi B.S. : Economic and Commercial Geography;(P) Chand and Company, New Delhi, 1982.

60) Cushing : Science and the Fisheries; OXFORD & IBH Publishing Co., New Delhi, 1977.

61) Bagsiraj M.G. : Role of Technology in the Economic Development of Marine Fisheries in Karnataka, 1991. (ಅಪ್ರಕಟಿತ ಪಿ. ಎಚ್.ಡಿ., ನಿಬಂಧ)

62) Mukhthyar A. R. : Socio - Economic Profile of Fishing Community in Dakshina Kannada District, 1993. (ಅಪ್ರಕಟಿತ ಎಂ. ಫಿಲ್, ಪ್ರಬಂಧ)

63) Mohammed Zafrulla : Fisheries Co-operative Societies in Uttara Kannada District "A case study of Bhatkal Taluk" 1990. (ಅಪ್ರಕಟಿತ ಎಂ. ಫಿಲ್, ಪ್ರಬಂಧ)

64) Suryanath Kamath (Ed) Uttara Kanna District Gazzetier. (P) Government of Karnataka, BANGALORE.

65) Gazetter of Bombay Presidency, Kanara District, volume XIV, Sagardeep Publication, KARWAR.

ಪ್ರಬಂಧಗಳು :

1) ಗೀತಾ ಕೆ. : 'ಮಂಗಳೂರು ಪರಿಸರದ ಅಡುಗೆ' ಕನ್ನಡ ವಿಭಾಗ; ಮಂಗಳಗಂಗೋತ್ರಿ, 1988.

2) ವಿಶ್ವನಾಥ್ ಕೆ. : ಗೌಡ ಕನ್ನಡದ ಜನಪದ ಕಥೆಗಳು; ಕನ್ನಡ ವಿಭಾಗ, ಮಂಗಳಗಂಗೋತ್ರಿ, 1992.

3) ನರಸಿಂಹಮಯ್ಯ ಪಿ. : ಕೋಟ ಪ್ರದೇಶ; ಸಾಂಸ್ಕೃತಿಕ ಅಧ್ಯಯನ (ಪಿ. ಎಚ್.ಡಿ., ಮಹಾಪ್ರಬಂಧ) ಮಂಗಳಗಂಗೋತ್ರಿ, 1991-92.

ನಿಯತಕಾಲಿಕಗಳು :

1) ತುಳುವ: ಸಂಪುಟ - 2 ಸಂಚಿಕೆ - 3

2) :" - ಸಂಪುಟ - 3 ಸಂಚಿಕೆ - 1-2

} ಸಂ.ಕು.ಶಿ. ಹರಿದಾಸ ಭಟ್ಟ

ಗೋವಿಂದ ಪೈ ಸ್ಮಾರಕ ಸಂಶೋಧನಾ ಕೇಂದ್ರ, ಉಡುಪಿ.

3) Statistical Bulletin of Fisheries : 1988 - 89

1989 - 90

1990 - 91

(P) Director of Fisheries, Bangalore.

4) ಕರ್ನಾಟಕ ಭಾರತಿ ಸಂಪುಟ - 9 ಸಂಚಿಕೆ 1 - 2

ಕ.ವಿ.ವಿ. ಧಾರವಾಡ, 1992